ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ-೫೧

ನರಸಿಂಹ ಪುರಾಣಮ್

(ಕನ್ನಡ ಅನುವಾದ ಸಹಿತ)

ಸಂಪುಟ ೩

ಅನುವಾದಕರು :

ಆಸ್ಥಾನ ವಿದ್ವಾನ್

ನಾ. ವಾ. ಪದ್ಮನಾಭಾಚಾರ್ಯರು,

ಸಾಹಿತ್ಯ, ವೇದಾನ್ತ ವಿದ್ವಾಂಸರು ಮತ್ತು ಕನ್ನಡ ಪಂಡಿತರು,

ಅಧ್ಯಾಪಕರು,

ಸರ್ಕಾರದ ಶಿಕ್ಷಣ ಮಹಾ ಪಾಠಶಾಲಾ, ಮೈಸೂರು.

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್.

ಮೈಸೂರು.

೧೯೪೯

ಬಿನ್ನಹ

ಶ್ರೀ ನರಸಿಂಹಪುರಾಣದ ಪ್ರಥಮ ದ್ವಿತೀಯ ಸಂಪುಟಗಳಲ್ಲಿ ಒಂದರಿಂದ ನಲವತ್ತೊಂಬತ್ತು ಅಧ್ಯಾಯಗಳಿಂದ ಜಗತ್ಸೃಷ್ಟಿ ಮೊದಲು ಶ್ರೀ ಹರ್ಯವತಾರಗಳಲ್ಲಿ ಶ್ರೀ ದಾಶರಥಿರಾಮ ಪ್ರಾದುರ್ಭಾವ ಚರಿತ್ರೆಯ ಅರಣ್ಯಕಾಂಡ ಕಥಾಂತವಾದ ವಿಷಯಗಳು ಪ್ರತಿಪಾದಿತಗಳಾಗಿವೆ. ಈ ತೃತೀಯ ಸಂಪುಟದಲ್ಲಿ ಐವತ್ತನೆಯ ಅಧ್ಯಾಯವು ಮೊದಲಾಗಿ ಅರುವತ್ತೆಂಟನೆಯ ಅಧ್ಯಾಯಾಂತವಾದ ಗ್ರಂಥಭಾಗವು ನಿರೂಪಿತವಾಗಿರುವುದು. ಇಲ್ಲಿಗೆ ಶ್ರೀ ನರಸಿಂಹಪುರಾಣ ಗ್ರಂಥವು ಪೂರ್ತೈಸುವುದು.

ಈ ಗ್ರಂಥದ ಮೂವತ್ತುಮೂರನೆಯ ಅಧ್ಯಾಯದಲ್ಲಿ ಪ್ರಾರಂಭವಾದ ಮಾರ್ಕಂಡೇಯ ಸಹಸ್ರಾನೀಕ ಸಂವಾದವು ಅರುವತ್ತುಮೂರನೆಯ ಅಧ್ಯಾಯಾಂತವಾದ ಗ್ರಂಥಭಾಗದಿಂದ ಹೇಳಿರುತ್ತದೆ. ಎರಡನೆಯ ಸಂಪುಟದಿಂದ ಮುಂದೆವರಿದ ಶ್ರೀದಾಶರಥಿರಾಮ ಪ್ರಾದುರ್ಭಾವ ಚರಿತ್ರೆಯು ಐವತ್ತೆರಡನೆಯ ಅಧ್ಯಾಯದಿಂದ ಕಡೆಯಾಗಿ, ಐವತ್ತುಮೂರನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣ ಬಲರಾಮರ ಪ್ರಾದುರ್ಭಾವ ಚರಿತ್ರೆಯು ಸಂಗ್ರಹದಿಂದ ವರ್ಣಿತವಾಗಿದೆ. ತರುವಾಯ ಐವತ್ತುನಾಲ್ಕನೆಯ ಅಧ್ಯಾಯದಲ್ಲಿ ಕಲಿಲಕ್ಷಣವು ಕಥಿತವಾಗಿ, ಶ್ರೀ ಕಲ್ಕ್ಯವತಾರ ಚರಿತ್ರೆಯೂ ಅತಿಸಂಕ್ಷೇಪದಿಂದ ಹೇಳಿರುತ್ತದೆ. ನಲವತ್ತೈದನೆಯ ಅಧ್ಯಾಯದಲ್ಲಿ ಶ್ರೀ ವಾಮನ ಪ್ರಾದುರ್ಭಾವ ಚರಿತ್ರೆಯಲ್ಲಿ ಉಪಕ್ಷಿಪ್ತವಾದ ಶುಕ್ರಾಚಾರ್ಯರ ನೇತ್ರಭಂಗದ ಸಂಗತಿಯನ್ನು ಮತ್ತೂ ತೆಗೆದುಕೊಂಡು, ಶುಕ್ರವರ ಪ್ರಸಾದವೆಂಬ ಹೆಸರಿನಿಂದ ಶ್ರೀ ಹರಿಯ ಸ್ತೋತ್ರದ ಉತ್ಕರ್ಷವನ್ನು ಹೇಳಿ, ಭಗವಂತನು ಶುಕ್ರಾಚಾರ್ಯನಿಗೆ ಆತನ ಸ್ತುತಿಗೆ ಪ್ರಸನ್ನನಾಗಿ, ಮರಳಿ ನೇತ್ರೇಂದ್ರಿಯವನ್ನು ಅನುಗ್ರಹಿಸಿದ ಸಂಗತಿಯು ಪ್ರಸ್ತುತವಾಗಿದೆ. ಐವತ್ತಾರನೆಯ ಅಧ್ಯಾಯದಲ್ಲಿ ಪುನಃ ಶ್ರೀ ಮಹಾವಿಷ್ಣುವಿನ ಪ್ರತಿಮಾ ನಿರ್ಮಾಣಾದಿ ಪ್ರತಿಷ್ಠಾಂತವಾದ ಪ್ರತಿಷ್ಠಾವಿಧಿಯನ್ನು ಪ್ರತಿಪಾದಿಸಿ, ದೇವಾಲಯವನ್ನು ಕಟ್ಟಿಸಿ, ಶ್ರೀ ಭಗವಂತನ ಪ್ರತಿಮಾ ಪ್ರತಿಷ್ಠಾಕಾರ್ಯವನ್ನು ಮಾಡಿಸಿದವರಿಗೆ ಲಭಿಸುವ ಫಲವೂ ವಿಶೇಷವಾಗಿ ಹೇಳಿರುತ್ತದೆ. ಇಲ್ಲಿಗೆ ಶ್ರೀ ಹರ್ಯವತಾರಾದಿ ನಿರೂಪಣವೆಂಬ ಭಾಗವು ಮುಗಿದುದು.

ಮುಂದೆ ಐವತ್ತೇಳನೆಯ ಅಧ್ಯಾಯದಿಂದ ಅರುವತ್ತನೆಯ ಅಧ್ಯಾಯಾಂತವಾದ ಗ್ರಂಥಭಾಗದಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಮತ್ತು ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳ ಧರ್ಮಗಳು ವಿಸ್ತಾರವಾಗಿ ಕಥಿತವಾಗಿರುತ್ತವೆ. ಅರುವತ್ತೊಂದನೆಯ ಅಧ್ಯಾಯದಲ್ಲಿ ಯೋಗಸ್ವರೂಪ, ಪ್ರಾಣಾಯಾಮಾನುಷ್ಠಾನಕ್ರಮ, ಧ್ಯಾನ–ಇವುಗಳನ್ನು ನಿರೂಪಿಸಿ, ತಪಸ್ಸು ಮತ್ತು ವಿದ್ಯೆ–ಇವುಗಳ ಪರಸ್ಪರ ಸಂಬಂಧೋತ್ಕರ್ಷಗಳನ್ನು ಹೇಳಿ, ಆ ವಿದ್ಯಾತಪಗಳಿಂದ ಕೂಡಿದ ಬ್ರಹ್ಮಜ್ಞಾನಿಗೆ ಸಕಲ ದುರಿತಗಳೂ ಕಳೆದು ಮುಕ್ತಿಯು ದೊರಕುವುದೆಂಬುದೂ, ಆ ಜ್ಞಾನಿಯು ಮುಕ್ತಿಗೆ ಹೋಗುವ ಉತ್ಕ್ರಾಂತಿ ಮಾರ್ಗಗಳೂ ವಿವರಿಸಿರುತ್ತವೆ.

ಮುಂದಿನ ಗ್ರಂಥಭಾಗವು ಮಂತ್ರತೀರ್ಥಮಹಿಮಾದಿ ವರ್ಣನವು. ಗುರೂಪದೇಶಾದಿಗಳಿಂದ ತಿಳಿದು, ಜಪಮಾಡುವುದಕ್ಕೆ ಯೋಗ್ಯವಾದ ರಹಸ್ಯವಾದ ಭಗವನ್ಮಾಹಾತ್ಮ್ಯಾದಿಗಳನ್ನು ಪ್ರತಿಪಾದಿಸುವ, ದೇವತಾಪ್ರಕಾಶಕವಾದ ವೇದಭಾಗವು ಮಂತ್ರವು. ಪುಣ್ಯಜನಕವೂ, ಸಂಸಾರಬಂಧನಾದಿಗಳಿಂದ ದಾಟಲು ಉಪಾಯವೂ ಆದುದು ತೀರ್ಥವು. ಇದು ಜಲರೂಪವಾದುದೂ, ತದಿತರ ದಯಾದಿಗಳೂ ಆಗಿರಬಹುದು. ಇವುಗಳ ಮಾಹಾತ್ಮ್ಯವು ವಿಶೇಷವಾಗಿ ಈ ಗ್ರಂಥಭಾಗದಲ್ಲಿ ವಿವರಿಸಿರುತ್ತದೆ. ವೇದಜ್ಞರು ಭಗವಂತನನ್ನು ಸೇವಿಸುವ ಮಂತ್ರಗಳು ಮತ್ತು ವಿಧಿಯು ಉಕ್ತವಾಗಿ, ವೇದಶಾಸ್ತ್ರಜ್ಞರಲ್ಲದ ಸಾಮಾನ್ಯರೂ 'ಓಂ ನಮೋ ನಾರಾಯಣಾಯ' ವೆಂಬೀ ಅಷ್ಟಾಕ್ಷರ ಮಂತ್ರದಿಂದ ಆವಾಹನಾದ್ಯುದ್ವಾಸನಾಂತವಾದ ಭಗವತ್ಪೂಜೆಯನ್ನು ಅನುಷ್ಠಿಸುವುದೆಂಬ ಸುಲಭೋಪಾಯವು ನಿರೂಪಿಸಿರುತ್ತದೆ. ಈ ಭಾಗದಲ್ಲಿಯೇ ಶ್ರೀ ನಾರಾಯಣೋಪನಿಷದರ್ಥವೂ ವರ್ಣಿತವಾಗಿರುತ್ತದೆ. ಈ ಯಷ್ಟಾಕ್ಷರ ಮಂತ್ರದ ಪ್ರಭಾವವನ್ನು ಮತ್ತೂ ವಿಶದವಾಗಿ ತಿಳಿಸಲು, ಪುಂಡರೀಕ ನಾರದ ಸಂವಾದ ರೂಪವಾದ ಗ್ರಂಥಭಾಗವು ಪ್ರಸಕ್ತವಾಗಿ, ಅಲ್ಲಿ ತೃಣಬಿಂದು ಮುನಿಯ ಶಾಪದಿಂದ ಸ್ತ್ರೀತ್ವವನ್ನೈದಿದ್ದ ವೇದೇಂದ್ರನು ಈ ಮಂತ್ರ ಜಪದಿಂದ ಅದರಿಂದ ಮುಕ್ತನಾದನೆಂಬ ಉಪಾಖ್ಯಾನವೂ ಉಪದೇಶರೂಪವಾಗಿ ನಿರೂಪಿತವಾಗಿದೆ. ಅಧಿಕಾರಿಗಳಿಗೆ ಸಕಲ ಪುರುಷಾರ್ಥಗಳನ್ನೂ ಅನುಗ್ರಹಿಸುವ ವಿಷಯದಲ್ಲಿ ಭಗವಂತನೇ ಪ್ರಭುವು. ಆದುದರಿಂದ ಅವನೇ ಪರಮಸೇವ್ಯನು, ಎಂದು ಹೇಳಿರುತ್ತದೆ.

ಮುಂದೆ ಮನಶ್ಶುದ್ಧಿಪ್ರದಗಳಾಗ ಇಂದ್ರಿಯ ಜಯ, ಜಪ, ದಾನ, ದಯಾದಿಗಳು ಮಾನಸತೀರ್ಥಗಳೆನಿಸಿಕೊಳ್ಳುತ್ತವೆ. ಇವುಗಳ ಅನುಷ್ಠಾನವು ಪ್ರತಿಯೊಬ್ಬ ಮುಮುಕ್ಷುವಾದ ಅಧಿಕಾರಿಯಿಂದಲೂ ಕರ್ತವ್ಯವಲ್ಲದೆ, ಪಿತೃಸೇವಾದಿ ವ್ರತಾಚರಣೆಯೂ ಆವಶ್ಯಕವೆಂದು ಪ್ರದಿಪಾದಿಸಿ, ಕೊನೆಗೆ ಶ್ರೀ ನರಸಿಂಹ ಪುರಾಣದ ಶ್ರವಣ ಪಠನಗಳಿಂದುಂಟಾಗುವ ಫಲವು ನಿರೂಪಿಸಿದೆ.

ಈ ಪುರಾಣದಲ್ಲಿ ನಿರೂಪಿಸಿರುವ ಅತ್ಯಾಶ್ಚರ್ಯಕರವಾದ ಸೃಷ್ಟ್ಯಾದಿ ವಿಚಾರಗಳಿಂದ ಭಗವದತಿರಿಕ್ತವಾದ ಪ್ರಕೃತಿನಿರ್ಮಿತವಾದ ಚೇತನಾಚೇತನಾತ್ಮಕವಾದ ಈ ಪ್ರಪಂಚವು ಬಹು ಚಿತ್ರ ವಿಚಿತ್ರವಾದುದು. ಇಂತಹ ಪ್ರಪಂಚದ ಸೃಷ್ಟಿಸ್ಥಿತಿ ಸಂಹಾರ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷಗಳನ್ನು ಸ್ವಾತಂತ್ರ್ಯೇಣ ಉಂಟು ಮಾಡತಕ್ಕವನು ಅಚಿಂತ್ಯಾದ್ಭುತವಾದ ಅಪ್ರಾಕೃತಾನವದ್ಯಾನಂತಕಲ್ಯಾಣಗುಣಪೂರ್ಣನೂ, ಸ್ವಾಭಾವಿಕವಾದ ಅಪ್ರಾಕೃತ ಜ್ಞಾನ ಬಲಕ್ರಿಯಾದಿ ವಿಶಿಷ್ಟನೂ, ಪರಾಶಕ್ತಿಯುಕ್ತನೂ ಆದ ಭಗವಂತನು. ಇವನ ಸ್ವರೂಪಕ್ಕೂ, ಗುಣಕ್ರಿಯಾಶಕ್ತ್ಯಾದಿಗಳಿಗೂ, ಅವತಾರಗಳಿಗೂ ಯಾವ ಭೇದವೂ ಇಲ್ಲವು. ಇವೇ ಮೊದಲಾದ ಪರಮಾತ್ಮನ ಮಹಿಮೆಯನ್ನು ಅಧಿಕಾರಿಯು ಯಥಾಯೋಗ್ಯವಾಗಿ ತಿಳಿದು, ಯಮನಿಯಮಾದ್ಯಷ್ಟಾಂಗ ಯೋಗಗಳಿಂದ ಯುಕ್ತನಾಗಿ, ನಿಷ್ಕಾಮನೆಯಿಂದನುಷ್ಠಿಸುವ ಕರ್ಮಯೋಗಕ್ಕಿಂತಲೂ ಜ್ಞಾನಯೋಗವು ಶ್ರೇಷ್ಠವಾದುದೆಂದು ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢಸ್ನೇಹಾತ್ಮಕವಾದ ಭಕ್ತಿಯಿಂದ ಕೂಡಿ, ಭಗವಂತನನ್ನು ಧ್ಯಾನಮಾಡಿ, ಪರಮಾತ್ಮನ ಅಪರೋಕ್ಷವನ್ನು ಪಡೆದು, ಪ್ರಾರಬ್ಧಾತಿರಿಕ್ತವಾದ ಬಂಧಕಗಳಾದ ಪಾಪಪುಣ್ಯ ಕರ್ಮಗಳನ್ನು ಕಳೆದುಕೊಂಡು, ಪ್ರಾರಬ್ಧ ಕರ್ಮವನ್ನು ಯಥಾಯೋಗ್ಯವಾಗಿ ಅನುಭವಿಸಿ, ಭಗವತ್ಪ್ರಸಾದದಿಂದ ಸ್ವಸ್ವರೂಪಾನಂದಾವಿರ್ಭಾವಾತ್ಮಕವಾದ ಕೈವಲ್ಯವನ್ನು ಹೊಂದುವುದೆಂಬ ಪರಮ ಪ್ರಮೇಯವು ಈ ಗ್ರಂಥದಲ್ಲಿ ನೇರವಾಗಿಯೂ, ಉಪಾಖ್ಯಾನಗಳ ಮೂಲಕವೂ ಉಪದೇಶ ಮಾಡಿರುತ್ತದೆ.

ಇಂತಹ ಉತ್ಕೃಷ್ಟ ಗ್ರಂಥದ ಅಭಿಪ್ರಾಯವನ್ನು ತಮ್ಮ ದೇಶದ ಪ್ರಜೆಗಳು ಗ್ರಹಿಸಿ, ಧರ್ಮಾಚರಣೆಯಲ್ಲಿ ಆಸಕ್ತರಾಗಿ, ಸತ್ಫಲವನ್ನು ಪಡೆಯಲೆಂಬ ಅಭಿಪ್ರಾಯದಿಂದ ನಮ್ಮನ್ನಾಳುವ, ಪ್ರಜಾವತ್ಸಲರೂ, ಆತ್ಮತತ್ತ್ವ ವಿಚಾರಾ

ಸಕ್ತರೂ, ಧರ್ಮಕಾರ್ಯತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,** ಜಿ. ಸಿ- ಬಿ., ಜಿ. ಸಿ. ಎಸ್. ಐ., ಮಹಾಪ್ರಭುಗಳವರು ಕನ್ನಡ ಭಾಷೆಯಲ್ಲಿ ಅನುವಾದಮಾಡಲು ಆಜ್ಞೆಯಿತ್ತುದರಿಂದ, ಮೂಲ ಶ್ಲೋಕದೊಡನೆ ಶ್ಲೋಕಾಭಿಪ್ರಾಯವನ್ನು ತಿಳಿಗನ್ನಡದಲ್ಲಿ ಅನುವಾದ ಮಾಡಲಾಗಿವೆ. ಈ ಮಹಾ ಕಾರ್ಯವನ್ನು ನೆರವೇರಿಸಲು ಸಕಲ ವಿಧದಲ್ಲಿಯೂ ಪ್ರೋತ್ಸಾಹವನ್ನಿತ್ತ ಮಹಾ ಸ್ವಾಮಿಗಳವರಿಗೆ ಪರಮಾತ್ಮನು ಸುಖ ಸಂತೋಷಗಳನ್ನು ಶಾಶ್ವತವಾಗಿ ಕರುಣಿಸ ಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು.
ತಾ|| ೨೭-೬-೧೯೪೯.
ಸದ್ವಿರೋಧಿ ಸಂವತ್ಸರ ಆಷಾಢ ಶುಕ್ಲ
ಪ್ರಥಮಾ ಸೋಮವಾರ.

ನಾ. ವಾ. ಪದ್ಮನಾಭಾಚಾರ್ಯ,
ಆಸ್ಥಾನ ವಿದ್ವಾನ್, ಪಂಡಿತ,
ಸರ್ಕಾರದ ಶಿಕ್ಷಣ ಮಹಾಪಾಠಶಾಲಾ,
ಮೈಸೂರು.

॥ ಶ್ರೀರಸ್ತು ॥

ಶ್ರೀ ನರಸಿಂಹಪುರಾಣ : ಸಂಪುಟ ೩.

ವಿಷಯಾನುಕ್ರಮಣಿಕೆ

೪. ಹರ್ಯವತಾರಾದಿನಿರೂಪಣಮ್. (ಮುಂದುವರಿದುದು)

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೫೦	**ಶ್ರೀರಾಮಾವತಾರ ಚರಿತ್ರೆಯಲ್ಲಿ ಕಿಷ್ಕಿಂಧಾಕಾಂಡ ಕಥಾನಿರೂಪಣೆಯು** :—ವಾಲಿಯಲ್ಲಿ ಹಗೆಗೊಂಡಿದ್ದ, ಕಿಷ್ಕಿಂಧೆಯಿಂದ ದೂರದ ದುರ್ಗದಲ್ಲಿದ್ದ ಸುಗ್ರೀವನು ತಾಪಸವೇಷದ ರಾಮಲಕ್ಷ್ಮಣರನ್ನು ನೋಡಿ, ವಾಲಿಯು ತನ್ನ ಕೊಲೆಗೆ ಕಳುಹಿಸಿದ ಬೇಹಿನವರೆಂದು ಭಾವಿಸಿ, ಹನೂಮಂತನನ್ನು ಅವರಾರೆಂದು ತಿಳಿಯಲು ಮರೆ ರೂಪಿನಿಂದ ಕಳುಹಿಸಿದುದು; ಹನೂಮಂತನು ಸಂನ್ಯಾಸಿ ವೇಷದಿಂದ ಅವರ ಬಳಿಗೆ ಹೋಗಿ, ಅವರ ವೃತ್ತಾಂತವನ್ನು ತಿಳಿದು, ಸುಗ್ರೀವನೊಡನೆ ಪರಸ್ಪರ ಪ್ರತಿಜ್ಞಾಪೂರ್ವಕವಾಗಿ ಸಖ್ಯವನ್ನುಂಟುಮಾಡಿದುದು; ಶ್ರೀರಾಮನು ವಾಲಿವಧ ಸಾಮರ್ಥ್ಯವನ್ನು ತೋರಿದುದು; ವಾಲಿ ಸುಗ್ರೀವ ಯುದ್ಧ; ವಾಲಿಯ ಸಂಹಾರ; ಸುಗ್ರೀವನಿಗೆ ಕಿಷ್ಕಿಂಧಾರಾಜ್ಯ ಪ್ರದಾನ; ಶರತ್ಕಾಲವು ಬರಲು ಸೀತಾನ್ವೇಷಣೆಗಾಗಿ ಕಪಿಗಳನ್ನು ಚತುರ್ದಿಕ್ಕುಗಳಿಗೆ ಕಳುಹಿಸಿದುದು; ದಕ್ಷಿಣಕ್ಕೆ ಹೋದವರು ಹೊರತು ಉಳಿದವರು ಸೀತಾದೇವಿಯನ್ನು ಕಾಣದೆ	೧

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಹಿಂತಿರುಗಿ ಬಂದುದು; ಶ್ರಾಂತರಾದ ಹನೂಮದಾದಿಗಳಿಗೆ ಸುಪ್ರಭೆಯ ಸತ್ಕಾರ ಮತ್ತು ಸಲಹೆ; ಮಹೇಂದ್ರಪರ್ವತದಲ್ಲಿ ಸಂಪಾತಿಯ ದರ್ಶನ; ಅವನು ಸೀತಾದೇವಿಯು ಲಂಕೆಯಲ್ಲಿರುವುದನ್ನು ತನ್ನ ದೂರ ದೃಷ್ಟಿಯಿಂದ ತಿಳಿದು ಹೇಳಿದುದು; ಅವನಿಗೆ ಜಟಾಯು ಮರಣವೃತ್ತಾಂತವನ್ನು ಕಪಿಗಳು ಹೇಳಲು, ಅವನೂ ಸ್ನಾನಾದಿಗಳನ್ನು ಮಾಡಿ, ತರ್ಪಣವಿತ್ತು, ದೇಹವನ್ನು ಬಿಟ್ಟುದು; ಜಾಂಬವಂತನ ಮಾತಿನಿಂದ ಲಂಕೆಗೆ ಸಮುದ್ರವನ್ನು ದಾಟಿಹೋಗಲು ಕಪಿಗಳು ಹನೂಮಂತನನು ಬೇಡಲು, ಅವನು ಅದಕ್ಕೆ ಸಮ್ಮತಿಸಿ, ಸೀತಾನ್ವೇಷಣ ಮಾಡಿಕೊಂಡು ಬರುವುದಾಗಿ ಹೇಳಿ, ಮನಸ್ಸು ಮಾಡಿದುದು.	
೫೧	**ಶ್ರೀ ರಾಮಾವತಾರ ಚರಿತೆಯಲ್ಲಿ ಸುಂದರಕಾಂಡಕಥಾ ನಿರೂಪಣೆಯು** :——ಆಂಜನೇಯನು ಶ್ರೀರಾಮ ಲಕ್ಷ್ಮಣ ಸುಗ್ರೀವರಿಗೆ ಮನದಲ್ಲಿ ವಂದಿಸಿ, ಕಪಿಗಳಿಂದ ಸನ್ಮಾನಿತನಾಗಿ, ಸೀತಾನ್ವೇಷಣಕ್ಕಾಗಿ ಲಂಕೆಗೆ ಆಕಾಶ ಮಾರ್ಗದಿಂದ ಹೋಗಲು ನಿಶ್ಚಯಿಸಿ, ಮಹೇಂದ್ರಪರ್ವತದ ಶಿಖರದಿಂದ ಹಾರಿದುದು; ಮಾರ್ಗ ಮಧ್ಯದಲ್ಲಿ ಮೈನಾಕನ ಉಪಚಾರ; ತರುವಾಯ ಆಂಜನೇಯನು ಹಾದಿಯಲ್ಲಿ ತನ್ನನ್ನು ತಿನ್ನಲು ಬಂದ ಸಿಂಹಿಕೆ ಸುರಸೆಯರನ್ನು ಜಯಿಸಿ, ಸಮುದ್ರವನ್ನು ದಾಟಿ, ತ್ರಿಕೂಟಪರ್ವತದ ಶಿಖರದಲ್ಲಿಳಿದುದು; ರಾತ್ರಿಯವರೆಗೂ ಅಲ್ಲಿದ್ದು, ಲಂಕಾದೇವತೆಯನ್ನು ಜಯಿಸಿ, ಅದ್ವಾರದಿಂದ ಪುರಪ್ರವೇಶ ಮಾಡಿ, ರಾವಣಾಂತಃಪುರಗಲ್ಲೆಲ್ಲಾ ದೇವಿ	೪೧

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಯನ್ನು ಹುಡಿಕಿ ಕಾಣದೆ, ಸಂಪಾತಿಯ ನುಡಿಯನ್ನು ನೆನೆದು, ಅಶೋಕವನಕ್ಕೆ ಹೋಗಿ, ಅಲ್ಲಿ ಶಿಂಶುಪಾ ವೃಕ್ಷನಡಿಯಲ್ಲಿ ದೇವಿಯನ್ನು ನೋಡಿ, ಕಿರಿಯೊಡಲಿಂದ ಆ ಮರದ ಮೇಲೆ ಕುಳಿತುಕೊಂಡುದು; ರಾವಣನು ಅಲ್ಲಿಗೆ ಸ್ತ್ರೀಯರೊಡನೆ ಬಂದು, ದೇವಿಯಿಂದ ತಿರಸ್ಕೃತನಾಗಿ ಮರಳಿ ಅರಮನೆಗೆ ಹೋದುದು; ರಕ್ಕಸಿಯರ ಬಾಧೆ; ತ್ರಿಜಟಾ ಸ್ವಪ್ನ; ರಕ್ಕಸಿಯರು ರಾವಣನಿಗೆ ಆ ವೃತ್ತಾಂತವನ್ನೆಲ್ಲಾ ಹೇಳಲು ಹೋದುದು; ಆಂಜನೇಯನು ಅಮ್ಮನವರಿಗೆ ಕಾಣಿಸಿಕೊಂಡು ವಂದಿಸಿ, ಶ್ರೀ ರಾಮವೃತ್ತಾಂತವನ್ನರುಹಿ, ಮುದ್ರೆಯುಂಗರವನ್ನಿತ್ತು, ದೇವಿಯಿಂದ ಅಭಿಜ್ಞಾನಾರ್ಥವಾಗಿ ಚೂಡಾಮಣಿಯನ್ನು ತೆಗೆದುಕೊಂಡು, ಕಾಕಾಸುರ ವೃತ್ತಾಂತವನ್ನು ಕೇಳಿ, ವಂದಿಸಿ, ಬೀಳ್ಕೊಂಡುದು; ಅಶೋಕವನ ನಾಶ; ಆಂಜನೇಯನು ಅನೇಕ ರಕ್ಕಸರನ್ನು ಸಂಹರಿಸಿ, ರಾವಣನನ್ನು ನೋಡಿ, ಅವನೊಡನೆ ಸಲ್ಲಾಪ ಮಾಡಿ, ಶ್ರೀರಾಮ ಲಕ್ಷ್ಮಣ ಸುಗ್ರೀವಾದಿಗಳ ಪೌರುಷವನ್ನು ಕೊಂಡಾಡಿ, ವಾಲಾಗ್ನಿಯಿಂದ ಲಂಕೆಯನ್ನು ಸುಟ್ಟು, ಮರಳಿ ದೇವಿಯ ದರ್ಶನವನ್ನು ಮಾಡಿ, ಬೀಳ್ಕೊಂಡು, ಸಮುದ್ರವನ್ನು ದಾಟಿ, ಮಹೇಂದ್ರ ಪರ್ವತಕ್ಕೆ ಬಂದು ಕಪಿಗಳಿಗೆ ಆ ವೃತ್ತಾಂತವನ್ನು ಹೇಳಿ, ಸಂತೋಷಗೊಳಿಸಿದುದು; ಮಧುವನದಲ್ಲಿ ಕಪಿಗಳ ಮಧುಪಾನ; ಅನಂತರ ಅಲ್ಲಿಂದ ಶ್ರೀರಾಮನ ಸಮೀಪಕ್ಕೆ ಬಂದು, ನಮಸ್ಕರಿಸಿ, ಅಭಿಜ್ಞಾನವನ್ನು ಕೊಟ್ಟು, ದೇವಿಯ ಸಂದೇಶವಚನವನ್ನು ಹೇಳಲು, ಶ್ರೀರಾಮನೂ ಮರ್ತ್ಯರಂತೆ ದುಃಖಪ್ರದರ್ಶನ ಮಾಡಿ,	

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಆಂಜನೇಯನನ್ನು ಅಭಿನಂದಿಸಿ, ಅಪ್ಪಿದುದು. ಮುಂದಣ ಕಾರ್ಯೋದ್ಯೋಗ	
೫೨	**ಶ್ರೀ ರಾಮಾವತಾರ ಚರಿತೆಯಲ್ಲಿ ಯುದ್ಧಕಾಂಡಕಥಾ ನಿರೂಪಣೆಯು** :—ಶ್ರೀ ರಾಮನು ಕಪಿಸೇನೆಯೊಡನೆ ಸಮುದ್ರದ ತಡಿಗೆ ಹೋದುದು; ಸಮುದ್ರನ ಗರ್ವ ಭಂಗ; ಅವನು ಪ್ರತ್ಯಕ್ಷನಾಗಿ ಶ್ರೀ ರಾಮನಿಗೆರಗಿ ನಲನಿಂದ ಸೇತುವೆಯನ್ನು ಕಟ್ಟಿಸುವಂತೆ ಹೇಳಿದುದು; ವಿಭೀಷಣನ ಶರಣಾಗತಿ; ಅಂತು ನಲನಿಂದ ಕಟ್ಟಿಸಿದ ಸೇತುವೆಯ ಮೂಲಕ ಸಮುದ್ರವನ್ನು ದಾಟಿ, ಸುವೇಲ ಪರ್ವತಕ್ಕೆ ಬಂದು ಸೇರಿದುದು; ಆಂಜನೇಯನು ಲಂಕೆಗೆ ಹೋಗಿ ರಾವಣನ ತಲೆಯ ಮೇಲೆ ಪಾದ ಪ್ರಹಾರಮಾಡಿ ತಿರಸ್ಕರಿಸಿದುದು; ಲಂಕೆಯ ಮುತ್ತಿಗೆ; ಅಂಗದನ ಸ್ವಾಮಿಭಕ್ತಿ ಪರೀಕ್ಷೆ; ಅಂಗದನು ಸಂಧಿಗಾಗಿ ರಾವಣನಲ್ಲಿಗೆ ಹೋಗಿ ತಿರಸ್ಕೃತನಾಗಿ ಬಂದುದು; ರಾವಣನು ಮಾಡಿದ ಯುದ್ಧ ವ್ಯವಸ್ಥೆ; ಪೂರ್ವದ್ವಾರದಲ್ಲಿ ಯುದ್ಧ; ರಕ್ಕಸರ ಸೋಲು; ಉತ್ತರ ಪಶ್ಚಿಮ ದಕ್ಷಿಣ ದಿಗ್ಭಾಗಗಳಲ್ಲಿ ಯುದ್ಧ; ಅಲ್ಲಿಯೂ ರಕ್ಕಸರ ಸೋಲು; ಸ್ತ್ರೀಯರ ಗೋಳು; ರಾವಣನು ಯುದ್ಧಕ್ಕೆ ಬರಲು ಕಪಿಗಳು ಬಾಣದ ಏಟಿಗೆ ಹಿಂತಿರುಗಿ ಬರುತ್ತಿರಲು, ಶ್ರೀ ರಾಮನೇ ಯುದ್ಧಕ್ಕೆ ಬರುವುದು; ಸುಗ್ರೀವಾದಿಗಳೂ ರಾವಣನ ಸೇನೆಯೊಡನೆ ಹೋರಾಡುವುದು; ರಾವಣನು ಪರಾಜಿತನಾಗಿ ಮೂರ್ಛೆಗೆ ಸಂದುದು; ಕುಂಭಕರ್ಣನು ಎಚ್ಚೆತ್ತು ಯುದ್ಧಕ್ಕೆ ಬಂದು, ಶ್ರೀರಾಮನಿಂದ ಸಂಹೃತನಾದುದು; ಮತ್ತೆ ರಾವಣನು ಮಕ್ಕ	೩೮

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಳೊಡನೆ ಯುದ್ಧಕ್ಕೆ ಬಂದುದು; ರಾತ್ರಿ ಯುದ್ಧ; ಕಪಿಗಳು ಮೂರ್ಛೆಗೆ ಸಂದುದು ; ಜಾಂಬವತ್ಪ್ರೇರಿತನಾದ ಹನುಮಂತನು ಸಂಜೀವಿನೀಪರ್ವತವನ್ನು ತಂದು ಓಷಧಿಗಳಿಂದ ಎಲ್ಲರನ್ನೂ ಪುನರುಜ್ಜೀವನಗೊಳಿಸುವುದು; ಮೇಘನಾದ ವಧ; ರಾವಣ ಲಕ್ಷ್ಮಣರ ಯುದ್ಧ; ರಾವಣನು ಪ್ರಯೋಗಿಸಿದ ಶಕ್ತ್ಯಾಯುಧದ ಆಘಾತದಿಂದ ಶಲ್ಯವಿದ್ಧನಾಗಿ ಬಿದ್ದ ಲಕ್ಷ್ಮಣನನ್ನು ರಾಮಾಜ್ಞೆಯಿಂದ ಆಂಜನೇಯನು ದ್ರೋಣಗಿರಿಯನ್ನು ತಂದು, ವಿಶಲ್ಯನನ್ನಾಗಿ ಮಾಡಿ ಬದುಕಿಸಿದುದು ; ಶ್ರೀ ರಾಮನು ಬ್ರಹ್ಮಾಸ್ತ್ರಪ್ರಯೋಗದಿಂದ ರಾವಣನನ್ನು ಸಂಹರಿಸಿದುದು; ದೇವತೆಗಳ ಹರ್ಷ ಮತ್ತು ಪುಷ್ಪವೃಷ್ಟಿ; ಬ್ರಹ್ಮಕೃತ ಶ್ರೀ ರಾಮ ಸ್ತುತಿ; ಶಂಕರನು ಶ್ರೀರಾಮನಿಗೆ ದಶರಥನನ್ನು ಅಲ್ಲಿ ಕಾಣಿಸಿದುದು ಮತ್ತು ಸೀತಾದೇವಿಯು ಪರಮ ಶುದ್ಧಳೆಂದು ಹೇಳಿದುದು; ಶ್ರೀರಾಮನು ಸೀತಾದೇವಿಯನ್ನು ಸ್ವೀಕರಿಸಿ, ಪುಷ್ಪಕದಿಂದ ಸಕಲ ಕಪಿಸೇನೆಯೊಡನೆ ಬಂದು, ರಾಮಸೇತುವಿನ ಬಳಿಯಲ್ಲಿ ರಾಮೇಶ್ವರನನ್ನು ಪ್ರತಿಷ್ಠಿಸಿದುದು; ಪ್ರತಿಜ್ಞೆಯು ಪೂರೈಸಲು ಭರತನನ್ನು ಕಂಡು, ಅಯೋಧ್ಯೆಗೆ ಬಂದು, ಶ್ರೀ ಸೀತಾರಾಮರು ಪಟ್ಟಾಭಿಷಿಕ್ತರಾದುದು ; ಯಜ್ಞಾದ್ಯನುಷ್ಠಾನ; ಪೌರರ ಸುಖದ ಬಾಳು; ಫಲಶ್ರುತಿ.

೫೩ **ಶ್ರೀ ರಾಮ ಕೃಷ್ಣಾವತಾರಗಳ ಚರಿತೆ :**—ಭೂದೇವಿಯು ಚತುರ್ಮುಖನಲ್ಲಿ ಮೊರೆಯಿಟ್ಟುದು ; ಚತುರ್ಮುಖನು ಭೂದೇವಿ ಮತ್ತು ದೇವತೆಗಳ ತಂಡ—ಇವು ೯೩

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಕೊಡನೆ ಕ್ಷೀರಸಮುದ್ರದ ಉತ್ತರದ ತಡಿಗೆ ಹೋಗಿ, ಶ್ರೀ ಮಹಾವಿಷ್ಣುವನ್ನು ಸ್ತುತಿಸಲು, ಶ್ರೀ ವಿಷ್ಣುವು ಪ್ರತ್ಯಕ್ಷನಾಗಿ, ತಾನು ತನ್ನ ಶುಕ್ಲ ಕೃಷ್ಣಕೇಶಗಳೆಂಬ ಸ್ವರೂಪಾಂಶಗಳನ್ನು ಕಳುಹಿಸಿ, ವಸುದೇವ ರೋಹಿಣೀ ದೇವಕಿಯರಲ್ಲಿ ಅವತರಿಸಿ, ಭೂಭಾರ ಪರಿಹರಿಸುವುದಾಗಿ ಆಶ್ವಾಸನವಿತ್ತು ಅವರನ್ನು ಹಿಂದಕ್ಕೆ ಕಳುಹಿಸಿದುದು ; ಶ್ರೀ ಬಲರಾಮ ಕೃಷ್ಣರ ಅವತಾರ ; ಗೋಕುಲದಲ್ಲಿ ಬಾಲಕೇಳಿ ; ಪೂತನಾಕಂಸಾದಿ ದುಷ್ಟವಧೆ ; ಗೋವರ್ಧನೋದ್ಧಾರ ; ಬಲನು ರೇವತಿಯನ್ನೂ, ಕೃಷ್ಣನು ರುಕ್ಮಿಣಿಯನ್ನೂ ವಿವಾಹ ಮಾಡಿಕೊಂಡು ಸಮುದ್ರದ ನಡುವೆ ದ್ವಾರಕೆಯನ್ನು ನಿರ್ಮಿಸಿ, ಸುಖದಿಂದಿದ್ದುದು ; ಪ್ರೌಢರಾದ ರಾಮಕೃಷ್ಣರು ನರಕ ಶಿಶುಪಾಲ ಹಯಗ್ರೀವರನ್ನು ಸಂಹರಿಸಿದುದು ; ಶ್ರೀ ಕೃಷ್ಣನು ಪಾಂಡವರಿಗೆ ಭಾರತಯುದ್ಧದಲ್ಲಿ ಸಹಾಯ ಮಾಡುವ ನೆಪದಿಂದ ಭೂಭಾರ ಭೂತರಾದ ದುಷ್ಟ ಕ್ಷತ್ರಿಯರನ್ನ ನಾಶಮಾಡಿದುದು ; ಬಲರಾಮನು ದೇವ ವಿರೋಧಿ ದ್ವಿವಿದನೆಂಬ ಕೋಡಗನನ್ನು ಸಂಹರಿಸಿ, ಶ್ರೀ ಕೃಷ್ಣ ಕಾರ್ಯಕ್ಕೆ ಸಹಾಯಕನಾಗಿ ತೀರ್ಥಯಾತ್ರೆಯನ್ನೆಸಗಿದುದು ; ಈ ಶುಕ್ಲ ಕೃಷ್ಣಕೇಶಗಳೆಂಬ ಸ್ವರೂಪಾಂಶಗಳು ಇಂತು ಭೂಭಾರವನ್ನು ಇಳುಹಿ, ಮರಳಿ ಶ್ರೀ ಮಹಾವಿಷ್ಣುವನ್ನು ಸೇರಿದುವು ; ಫಲಶ್ರುತಿ.	
೫೪	**ಶ್ರೀ ಕಲ್ಕ್ಯವತಾರ ಚರಿತೆಯು :**—ಕಲಿಗಾಲದಲ್ಲಿ ಸಕಲ ಧರ್ಮ ನಾಶವಾಗುವುದು ; ಜನರು ವ್ಯಾಧಿಪೀಡಿತರಾಗುವರು ; ಪಾಲ್ಗಡಲಲ್ಲಿರುವ ಶ್ರೀಮನ್ನಾರಾಯಣನನ್ನು	೧೧೭

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ದೇವತೆಗಳು ಮರೆಹೊಗುವುದು ; ಆಗ ಶ್ರೀ ಮಹಾವಿಷ್ಣುವು ಸಾಂಭಲವೆಂಬ ಗ್ರಾಮದಲ್ಲಿ ವಿಷ್ಣುಯಶನೆಂಬವನ ಮಗ ಕಲ್ಕಿಯಾಗಿ ಅವತರಿಸುವುದು ; ಮ್ಲೇಚ್ಛವಧೆ ; ಬಹು ಕಾಂಚನಯಾಗಾನುಷ್ಠಾನ ; ಪುನಃ ಧರ್ಮಸಂಸ್ಥಾಪನ ; ಇಂತು ದಶಾವತಾರ ಚರಿತ ನಿರೂಪಣ. ಕಲಿಯ ಸ್ವರೂಪಕಥನ ; ಕಲಿಗಾಲದಲ್ಲಿ ಬ್ರಾಹ್ಮಣಾದಿ ಚತುರ್ವರ್ಣದವರ ಆಚಾರಾಹಾರಕಥನ ; ಕೃತಾದಿಯುಗಗಳಲ್ಲಿ ಅನುಷ್ಠಿಸುವ ಸಾಧನ ನಿರೂಪಣ ; ಕಲಿಯುಗದಲ್ಲಿ ಶ್ರೀ ಹರಿನಾಮವನ್ನು ಕೀರ್ತಿಸುವವರು ಪುಣ್ಯವಂತರೆಂದು ಹೇಳಿರುವುದು.	
೫೫	**ಶುಕ್ರವರ ಪ್ರಸಾದ :**—ಶುಕ್ರಮುನಿಗೆ ಕಣ್ಣು ಕುರುಡಾಗಲು ಕಾರಣ ; ಅವನು ತನ್ನ ಕಣ್ಣನ್ನು ಮರಳಿ ಪಡೆಯಲು ಗಂಗಾತೀರದಲ್ಲಿ ಶ್ರೀ ಮಹಾವಿಷ್ಣುವನ್ನು ಸ್ತುತಿಸಿದುದು ; ಭಗವಂತನು ಪ್ರತ್ಯಕ್ಷನಾಗಿ ನಟನೆಯಿಂದ ಶುಕ್ರನನ್ನು ಸ್ತೋತ್ರ ಕಾರಣವನ್ನು ಪ್ರಶ್ನಿಸಿದುದು ; ಶುಕ್ರನು ಕಾರಣವನ್ನು ನಿರೂಪಿಸಿ, ಕ್ಷಮೆಬೇಡಿ, ಅನುಗ್ರಹವನ್ನು ಪ್ರಾರ್ಥಿಸುವುದು ; ಭಗವಂತನು ಶುಕ್ರಾಚಾರ್ಯನಿಗೆ ಅವನ ಅಭೀಷ್ಟವನ್ನು ಅನುಗ್ರಹಿಸಿದುದು.	೧೩೬
೫೬	**ಶ್ರೀನರಸಿಂಹಮೂರ್ತಿಯ ಪ್ರತಿಷ್ಠಾವಿಧಾನ ನಿರೂಪಣ** ಪ್ರತಿಮೆಯನ್ನು ಮಾಡತಕ್ಕ ಶಿಲ್ಪಿಯ ಸ್ವರೂಪಾದಿಗಳು ; ಪ್ರತಿಮಾ ಪ್ರತಿಷ್ಠಾವಿಧಿ ; ದೇವಾಲಯ ನಿರ್ಮಾಣ ಕ್ರಮನಿರೂಪಣ ; ಪ್ರತಿಷ್ಠಾಕಾರ್ಯದಲ್ಲಿ ಸಹಾಯ ಮಾಡಿದ ಋತ್ವಿಜರಿಗೆ ದಕ್ಷಿಣಾದಿ ಪ್ರದಾನ ನಿರೂಪಣ ; ಪ್ರತಿಷ್ಠಾಕರ್ತೃವಿಗೆ ಲಭಿಸುವ ಫಲವನ್ನು ಹೇಳಿರುವುದು.	೧೪೩

ಅಧ್ಯಾಯ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ

೫ ವರ್ಣಾಶ್ರಮ ಧರ್ಮಾದಿ ನಿರೂಪಣ.

೫೭ **ಬ್ರಾಹ್ಮಣ ಧರ್ಮಕಥನ** :—ಶ್ರೀ ನೃಸಿಂಹಸ್ವಾಮಿಯ ಭಕ್ತರ ಸ್ವರೂಪ ಕಥನ ; ವರ್ಣಾಶ್ರಮಧರ್ಮ ನಿರೂಪಣ ಪ್ರಸಂಗ ; ಹಾರೀತ ಮತ್ತು ಮುನಿಗಳು-ಇವರ ಸಂವಾದ ; ಕಥಾನುವಾದ ಪ್ರಾರಂಭ ; ಬ್ರಾಹ್ಮಣ ಧರ್ಮಕಥನ ; ಮುಂದೆ ಕ್ಷತ್ರಿಯಾದಿ ವರ್ಣಗಳ ಧರ್ಮ ಕಥನಮಾಡುವ ಪ್ರತಿಜ್ಞಾ. ೧೫೮

೫೮ **ಕ್ಷತ್ರಿಯಾದಿ ವರ್ಣಗಳ ಧರ್ಮಕಥನವು** :—ಕ್ಷತ್ರಿಯ ವೈಶ್ಯ ಶೂದ್ರ ಧರ್ಮಗಳನ್ನು ಸಂಗ್ರಹದಿಂದ ಹೇಳಿರುವುದು ; ಬ್ರಹ್ಮಚರ್ಯಾದ್ಯಾಶ್ರಮ ಧರ್ಮನಿರೂಪಣ ಪ್ರತಿಜ್ಞೆ ; ಬ್ರಹ್ಮಚರ್ಯಾಶ್ರಮ ಧರ್ಮನಿರೂಪಣ ; ವಿವಾಹಯೋಗ್ಯ ಕನ್ಯಾಲಕ್ಷಣ ಕಥನ ; ಸಂಕ್ಷೇಪದಿಂದ ಗೃಹಸ್ಥಾಶ್ರಮ ಧರ್ಮನಿರೂಪಣ ; ಅದರಲ್ಲಿ ಸಂಧ್ಯಾಚರಣೆಯ ವಿಶೇಷವಿಧಿಯನ್ನು ಹೇಳಿರುವುದು ; ಗಾರ್ಹಸ್ಥ್ಯದ ಉತ್ಕರ್ಷ ; ಸ್ನಾನವಿಧಿ ಪ್ರತಿಪಾದನ ; ಗಾಯತ್ರೀ ಜಪದ ಅವಶ್ಯಕರ್ತವ್ಯತಾ ನಿರೂಪಣ ; ಸಂಧ್ಯಾನುಷ್ಠಾನವೇ ಬ್ರಾಹ್ಮಣ್ಯ ರಕ್ಷಕವೆಂದು ಪ್ರತಿಪಾದಿಸಿರುವುದು. ೧೬೮

೫೯ **ವಾನಪ್ರಸ್ಥಾಶ್ರಮ ಲಕ್ಷಣ ಕಥನವು** :—ಗೃಹತ್ಯಾಗ ನಿರೂಪಣ ; ವನದಲ್ಲಿ ದೇಹಧಾರಣಾದಿ ಕ್ರಮಪ್ರತಿಪಾದನ ; ವಾನಪ್ರಸ್ಥನು ತಪವನ್ನನುಷ್ಠಿಸುವ ಬಗೆ ೧೯೯

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಯನ್ನು ಹೇಳಿರುವುದು; ಆತ್ಮಶುದ್ಧಿ ಸಂಪಾದನಕ್ರಮ ಮತ್ತು ಶ್ರೌತಾಗ್ನಿ ಸಮಾರೋಪಣ ಕ್ರಮ—ಇವುಗಳ ನಿರೂಪಣ; ದೇಹಾಂತದವರೆಗೂ ಮಾಡತಕ್ಕಧ್ಯಾನ ಸ್ವರೂಪ ಪ್ರತಿಪಾದನ; ದೇಹ ಪತನಾನಂತರಭಾವಿ ಯಾದ ಗತಿ ನಿರೂಪಣ.

೬೦ **ಯತ್ಯಾಶ್ರಮ ಧರ್ಮಕಥನವು** :—ಯತ್ಯಾಶ್ರಮಧರ್ಮ ನಿರೂಪಣ ಪ್ರತಿಜ್ಞೆ; ಯತಿಯಾಗಲು ಇರಬೇಕಾದ ಯೋಗ್ಯತೆ; ಯತ್ಯಾಶ್ರಮ ಸ್ವೀಕಾರ ಕ್ರಮನಿರೂಪಣ; ಯತಿಗೆ ಯೋಗ್ಯವಾದ ದಂಡ, ಭಿಕ್ಷಾಪಾತ್ರ ಮತ್ತು ಕಮಂಡಲು—ಇವುಗಳ ಸ್ವರೂಪ ನಿರೂಪಣ; ಯತಿ ಗಳು ಆಚರಿಸುವ ಸ್ನಾನ ಜಪಗಳು; ಭಿಕ್ಷಾಕ್ರಮ; ಭೋಜನಪಾತ್ರ ಸ್ವರೂಪ ಪ್ರತಿಪಾದನ; ಭೋಜನಾ ನಂತರ ಉಳಿದ ಹಗಲಿನಲ್ಲಿ ಯತಿಯು ನಡೆಯಬೇಕಾದ ನಡೆವಳಿಕೆ; ರಾತ್ರಿಕಾಲಯಾಪನ ಕ್ರಮ ಮತ್ತು ಸ್ಥಳ- ಇವನ್ನು ಹೇಳುವುದು; ಸ್ವಧರ್ಮ ನಿರತನಾದ ಯತಿಗೆ ದೇಹಪತನಾನಂತರದ ಗತಿ ನಿರೂಪಣ. ೨೦೪

೬೧ **ಯೋಗಶಾಸ್ತ್ರಸಾರ ನಿರೂಪಣವು** :—ಯೋಗಾಭ್ಯಾಸದ ಹಿರಿಮೆ; ಯೋಗ ಸ್ವರೂಪ ನಿರೂಪಣ; ಪ್ರಾಣಾಯಾ ಮಾನುಷ್ಠಾನ ಕ್ರಮ ಪ್ರತಿಪಾದನ; ಧ್ಯಾನಸ್ವರೂಪ ಕಥನ; ತಪಸ್ಸು ಮತ್ತು ವಿದ್ಯೆ—ಇವುಗಳ ಪರಸ್ಪರ ಸಂಬಂಧೋತ್ಕರ್ಷ ವಿವರಣ; ವಿದ್ಯಾ ತಪಸ್ಸುಗಳುಳ್ಳ ಬ್ರಹ್ಮಜ್ಞಾನಿಗೆ ದೊರಕುವ ಫಲ; ಜ್ಞಾನಿಗಳು ಮುಕ್ತಿಗೆ ಹೋಗುವ ಮಾರ್ಗಗಳ ವಿವರಣ; ಚಾತುರ್ವರ್ಣ್ಯ ೨೧೧

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಮತ್ತು ಆಶ್ರಮ ಧರ್ಮಗಳು—ಇವುಗಳ ಪ್ರಾಶಸ್ತ್ಯ ಪ್ರತಿಪಾದನ; ನಿಷ್ಕಾಮನೆಯಿಂದನುಷ್ಠಿಸಿದ ಸ್ವಧರ್ಮವು ಭಗವತ್ಪ್ರಸಾದಕರವು; ಅನ್ಯಧರ್ಮಾಚರಣೆ ಹಾನಿಕರವು

೬೨ ಶ್ರೀ ಮಹಾವಿಷ್ಣುವಿನ ಅರ್ಚಾವಿಧಿ:— ಅಜ್ಞರೇ ಮೊದಲಾದ ಅಧಿಕಾರಿಭೇದದಿಂದ ಭಗವತ್ಪೂಜಾತ್ರೈವಿಧ್ಯ ನಿರೂಪಣ; ಅಜ್ಞರು ಅಗ್ನ್ಯಾದಿ ಪ್ರತಿಮೆಗಳಲ್ಲಿ ಪೂಜಿಸುವ ಆವಾಹನಾದ್ಯುದ್ವಾಸನಾಂತವಾದ ಮಂತ್ರಾದಿಕ್ರಮ ನಿರೂಪಣ; ಅಧಿಕಾರಿಗುಂಟಾಗುವ ಸೇವಾಫಲ ಪ್ರತಿಪಾದನ. ೨೧೯

---

೭. ಮಂತ್ರತೀರ್ಥಮಹಿಮಾದಿ ನಿರೂಪಣ

---

೬೩ ಸಹಸ್ರಾನೀಕ ಚರಿತ್ರೆಯಲ್ಲಿ ಅಷ್ಟಾಕ್ಷರಮಂತ್ರ ಮಹಿಮಾ ಕಥನ:—ಸಹಸ್ರಾನೀಕರಾಜನು ಮಾರ್ಕಂಡೇಯಮುನಿಯನ್ನು ವೈದಿಕರೂ, ವೇದಜ್ಞರೂ ಅಲ್ಲದ ಸಾಮಾನ್ಯ ಜನರು ಆಚರಿಸಲು ಶಕ್ಯವಾದ ಭಗವತ್ಪೂಜಾಕ್ರಮವನ್ನು ನಿರೂಪಿಸಬೇಕೆಂದು ಕೇಳುವುದು; ಮಾರ್ಕಂಡೇಯಮುನಿಯು ಅಷ್ಟಾಕ್ಷರಮಂತ್ರವೇ ಸಾಮಾನ್ಯರಿಗೂ ಪರಮ ಶ್ರೇಯಸ್ಸಾಧನವೆಂದು ನಿರೂಪಿಸುವುದು; ಈ ಮಂತ್ರ ಮಹಿಮಾ ಪ್ರತಿಪಾದನಾರ್ಥ ೨೨೭

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ವಾಗಿ ಇಂದ್ರವೃತ್ತ ಕಥಾನಿರೂಪಣ ; ದೇವೇಂದ್ರನು ವಿರಕ್ತನಾಗಿ ಮಾನಸಸರೋವರದ ಬಳಿಗೆ ಬರುವುದು ; ಅಲ್ಲಿ ಕುಬೇರನ ಮಡದಿಯನ್ನು ನೋಡುವುದು ; ಅವನು ಅಮರಾವತಿಗೆ ಹಿಂತಿರುಗಿದ ಮೇಲೆ ಮೋಹಪರವಶ ನಾಗುವುದು ; ಮನ್ಮಥನ ಸಹಾಯದಿಂದ ಅವಳನ್ನು ವಶಪಡಿಸಿಕೊಂಡು ಮಂದರಪರ್ವತದ ಕಂದರಗಳಲ್ಲಿ ವಿಹರಿಸುವುದು ; ಕುಬೇರನು ತನ್ನ ಮಡದಿಯ ಗೆಳತಿಯರಿಂದ ಅವಳ ನಡತೆಯನ್ನು ತಿಳಿದು ಚಿಂತಿಸು ವುದು ; ಕಂಠಕುಬ್ಜನ ಸಲಹೆ ; ಕುಬೇರನು ವಿಭೀಷಣ ನನ್ನು ಈ ವಿಷಯದಲ್ಲಿ ನೆರವು ಬೇಡುವುದು ; ವಿಭೀಷಣನು ಅದಕ್ಕೆ ಒಪ್ಪಿ ತನ್ನ ಸಹೋದರಿ ಮಾಯಾ ಗಾತಿ ನಾಡೀಜಂಘೆಯನ್ನು ಕುಬೇರನ ಮಡದಿಯನ್ನು ಹುಡುಕಲು ಕಳುಹಿಸುವುದು ; ಅವಳು ಸುಂದರಾಕೃತಿ ಯಿಂದ ಅಮರಾವತಿಗೆ ಹೋಗುವುದು ; ಇಂದ್ರನ ಮೋಹ ; ಅಶ್ವಿನಿಗಳಿಂದ ಇಂದ್ರನು ಅವಳನ್ನು ಅಪೇ ಕ್ಷಿಸುವುದು ; ಅವಳೂ ಇಂದ್ರನೊಡನೆ ಒಪ್ಪಂದದಿಂದ ಅವನಿಗೆ ವಶಳಾಗುವುದು ; ಅವಳು ಇಂದ್ರನ ಪೆಂಡ ವಾಸವೇ ಮೊದಲಾದೆಡೆಗಳಲ್ಲಿ ಅವನು ಪರಿಗ್ರಹಿಸಿದ ಸ್ತ್ರೀಯರನ್ನು ಕಾಣುವುದು ; ಇಂದ್ರನು ಮಂದರದ ಕಂದರದಲ್ಲಿರುವ ಕುಬೇರನ ಮಡದಿಯನ್ನು ನಾಡೀ ಜಂಘೆಗೆ ಕಾಣಿಸಲು ಬರುತ್ತಿರುವಾಗ ನಾರದ ದರ್ಶನ ಮತ್ತು ಸಲ್ಲಾಪ ; ಇದರಿಂದ ನಾಡೀಜಂಘೆಯು ರಕ್ಕಸಿ ಯೆಂದು ತಿಳಿದು, ಇಂದ್ರನು ಅವಳನ್ನು ತೃಣಬಿಂದು ಮುನಿಯ ಆಶ್ರಮದಲ್ಲಿ ಆ ಮುನಿಯು ತಡೆದರೂ,

ಅಧ್ಯಾಯ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ

ಕತ್ತರಿಸುವುದು ; ಈ ಪೆಣ್ಗೊಲೆಯಿಂದ ಇಂದ್ರನನ್ನು ಹೆಣ್ಣಾಗುವಂತೆ ಆ ಮುನಿಯು ಶಪಿಸುವುದು ; ಈ ಇಂದ್ರನ ದುಃಸ್ಥಿತಿಯನ್ನು ಕಂಡು ದೇವತೆಗಳು ಚತುರ್ಮುಖನನ್ನು ಪ್ರಾರ್ಥಿಸುವುದು ; ಅವನು ಇಂದ್ರನು ಅಷ್ಟಾಕ್ಷರ ಮಂತ್ರವನ್ನು ಎರಡು ಲಕ್ಷ ಜಪ ಮಾಡಿದಲ್ಲಿ ಶಾಪದಿಂದ ಬಿಡುಗಡೆಯಾಗುವುದಾಗಿ ಹೇಳಿ, ಈ ದುಃಖದಿಂದ ಪಾರಾಗಲು ಶಚೀದೇವಿಯು ಕುಬೇರನ ಮಡದಿಯನ್ನು ಹಿಂದಕ್ಕೆ ಒಪ್ಪಿಸುವಂತೆ ಹೇಳಿದುದು ; ಅವರೂ ಅಂತೆಸಗಿದುದು ; ಈ ಕಥೆಯ ಉಪದೇಶದಿಂದ ಸಹಸ್ರಾನೀಕರಾಯನೂ ಅಷ್ಟಾಕ್ಷರಮಂತ್ರವನ್ನು ಜಪಿಸಿ, ಭಗವಂತನನ್ನರ್ಚಿಸಿ, ಸಕಲ ದುರಿತಗಳನ್ನೀಡಾಡಿ, ಅಪರೋಕ್ಷಜ್ಞಾನ ಪಡೆದು ಭಗವದತ್ಯರ್ಥ ಪ್ರಸಾದದಿಂದ ಮುಕ್ತನಾದುದು ; ಇಂತು ಅಷ್ಟಾಕ್ಷರ ಮಂತ್ರಪ್ರಭಾವವನ್ನು ಸೂತರು ಭರದ್ವಾಜಾದಿಗಳಿಗೆ ಪ್ರತಿಪಾದಿಸಿದುದು.

೭೪ **ಪುಂಡರೀಕ ನಾರದ ಸಂವಾದವು** :—ಭರದ್ವಾಜನು ಶ್ರೀಸೂತಾಚಾರ್ಯರಿಗೆ ಪುರುಷಾರ್ಥಸಾಧನಗಳ ವಿಷಯದಲ್ಲಿ ಭಿನ್ನ ಭಿನ್ನಗಳಾದ ಅನೇಕ ಮತಗಳಿರುವುದರಿಂದ ತನಗೆ ಸಂಶಯವುಂಟಾಗಿದೆಯೆಂದು ಹೇಳಿ, ನಿಶ್ಚಿತವಾದ ಸಾಧನವನ್ನು ಹೇಳಬೇಕೆಂದು ಬೇಡುವುದು ; ಅವರು ನಾರದ ಪುಂಡರೀಕ ಸಂವಾದವನ್ನು ಹೇಳಲು ಉಪಕ್ರಮಿಸುವುದು ; ಪುಂಡರೀಕನ ವೈರಾಗ್ಯ ; ಅವನು ಮಾತಾಪಿತೃಗಳೇ ಮುಂತಾದವರನ್ನೆಲ್ಲಾ ಪರಿತ್ಯಜಿಸಿ, ಶಾಲಗ್ರಾಮಕ್ಷೇತ್ರಕ್ಕೆ ಬಂದು ತಪೋನುಷ್ಠಾನದಲ್ಲಿ ನಿಂತುದು ; ಆ ಭಗವದ್ಭಕ್ತನಲ್ಲಿಗೆ ನಾರದ ಮುನಿಯು ೨೬೬

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಬರುವುದು; ಆ ಪರಮತೇಜಸ್ವಿಯಾದ ಮುನಿಯನ್ನು ಕಂಡು, ಅಚ್ಚರಿವಟ್ಟು, ಅವರಾರೆಂದರಿತುದು; ಪುಂಡರೀಕನು ಅವರನ್ನು ಪರಮಾರ್ಥಸಾಧನವಾವುದೆಂದು ಕೇಳಿದುದು; ಅವರು ಸರ್ವಶಾಸ್ತ್ರಾಲೋಡನ ವಿಚಾರಗಳಿಂದ ಶ್ರೀಮನ್ನಾರಾಯಣನು ಮುಖ್ಯವಾಗಿ ಧ್ಯೇಯನೆಂದು ನಿರೂಪಿಸಿ, ಅವನಿಗೆ ಹಾಗೆ ಅನುಷ್ಠಿಸುವಂತುಪದೇಶಿಸಿ, ಅಂತರ್ಹಿತರಾದುದು; ಅವನೂ ಅಂತು ಅನುಷ್ಠಿಸಲು ಅವನ ತಪಸ್ಸಿಗೆ ಮೆಚ್ಚಿ, ಶ್ರೀಮನ್ನಾರಾಯಣನು ದರ್ಶನ ಕೊಟ್ಟು, ವರವನ್ನು ಬೇಡೆನಲು, ಅವನು ತನಗೆ ಯಾವುದೂ ತಿಳಿಯದುದರಿಂದ ಸರ್ವಜ್ಞನಾದ ಭಗವಂತನೇ ಅನುಗ್ರಹಿಸಬೇಕೆನ್ನುವುದು; ಪರಮಾತ್ಮನು ಅವನಿಗೆ ತನ್ನ ಸಾರೂಪ್ಯವನ್ನಿತ್ತು, ತನ್ನ ಪರಮಪದದಲ್ಲಿ ಪಾರಿಷದನನ್ನಾಗಿ ಮಾಡಿದುದು; ಇದರಿಂದ ಸೂತರು ಭರದ್ವಾಜಾದಿಗಳಿಗೂ ಶ್ರೀಮನ್ನಾರಾಯಣನ ಆರಾಧನಾದಿಗಳೇ ಪುರುಷಾರ್ಥಸಾಧನವೆಂದು ಹೇಳಿ, ಉಪಸಂಹಾರ ಮಾಡಿದುದು.	
೬೫	**ವೈಷ್ಣವಕ್ಷೇತ್ರ ನಿರೂಪಣೆಯು** :—ಭರದ್ವಾಜನು ಶ್ರೀ ಸೂತರನ್ನು ಶ್ರೀ ಮಹಾವಿಷ್ಣುವಿನ ಗೂಢಗಳಾದ ಕ್ಷೇತ್ರಗಳು ಮತ್ತು ನಾಮಗಳು ಯಾವುದೆಂದು ಕೇಳುವುದು; ಅದಕ್ಕೆ ಅವರು ಚತುರ್ಮುಖನು ಮಂದರಪರ್ವತದಲ್ಲಿದ್ದು, ಶ್ರೀ ಹರಿಯನ್ನು ತಾನು ಕೇಳಿ, ಸಾಕ್ಷಾತ್ಪರಮಾತ್ಮನೇ ತನ್ನ ಗೂಢಕ್ಷೇತ್ರನಾಮಗಳನ್ನುಪದೇಶಿಸಿದುದನ್ನು ಅನುವಾದ ಮಾಡಿ, ತಾವು ಉಪದೇಶಿಸುವುದು; ಹರಿದಿನದಲ್ಲಿ ಈ ಕ್ಷೇತ್ರನಾಮಗಳಿಂದ ಶ್ರೀ ಹರಿಯನ್ನು	೩೦೧

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅರ್ಚಿಸಿದಲ್ಲಿ ಉಂಟಾಗುವ ವಿಶೇಷಫಲ ಕಥನ; 'ಶ್ರೀ ವಿಷ್ಣುವೇ ಧರ್ಮಾರ್ಥಮೋಕ್ಷಗಳನ್ನು ಕೊಡುವ ಪ್ರಭುವು,' ಎಂದು ಪ್ರತಿಪಾದಿಸಿದುದು.

೨೧ **ತೀರ್ಥಪ್ರಶಂಸೆಯು** :—ಭರದ್ವಾಜನು ಶ್ರೀ ಸೂತರನ್ನು ಸಹ್ಯಾಮಲಕ ಕ್ಷೇತ್ರದಲ್ಲಿ ಶ್ರೀಮನ್ನಾರಾಯಣನು ಚತುರ್ಮುಖನಿಂದ ಸೇವೆಗೊಂಡ ಬಗೆಯ ಪ್ರಶ್ನೆ; ಶ್ರೀ ಸೂತರು ಈ ವಿಷಯವನ್ನು ಹೇಳಲುಪಕ್ರಮಿಸಿ, ಸಹ್ಯ ಪರ್ವತದಲ್ಲಿರುವ ಆಮಲಕ ವೃಕ್ಷದಲ್ಲಿ ಚತುರ್ಮುಖನಿಗೆ ಶ್ರೀಮನ್ನಾರಾಯಣನು ಕಾಣಿಸಿದುದು; ತರುವಾಯ ವೃಕ್ಷಮೂಲದಲ್ಲಿ ಭಗವಂತನು ಪ್ರವೇಶಿಸಿ, ಅಲ್ಲಿಂದ ಹನ್ನೆರಡು ತೀರ್ಥಗಳು ಜನಿಸುವಂತೆ ಮಾಡಿದುದು; ಅವುಗಳಲ್ಲಿ ಮುಖ್ಯವಾದುವು ಶಂಖ ಚಕ್ರ ತೀರ್ಥಗಳು; ಇವುಗಳಲ್ಲಿ ಮಿಂದವರಿಗುಂಟಾಗುವ ಫಲಶ್ರುತಿ; ಲೋಕದಲ್ಲಿರುವ ಗಂಗಾದಿತೀರ್ಥಗಳು ತಮ್ಮನ್ನು ಸೇವಿಸುವವರಿಗೆ ಫಲಕೊಡುವ ಬಗೆ; ಶ್ರೀ ವಿಷ್ಣು ಪಾದೋದಕವು ಸದ್ಯಃ ಫಲಪ್ರದವೆಂದು ಅದರ ಉತ್ಕರ್ಷವನ್ನು ಪ್ರತಿಪಾದಿಸುವುದು. ಇಂತು ಸಹ್ಯಾಮಲಕ ತೀರ್ಥದ ಪ್ರಭಾವವೆಂದು ಸಮಾಪನವು ಮಾಡಿರುವುದು. ೩೧೧

೨೨ **ಮಾನಸ ತೀರ್ಥ ವ್ರತವು** :—ಭರದ್ವಾಜನು ಮನೋನೈರ್ಮಲ್ಯ ಸಂಪಾದಕ ತೀರ್ಥಗಳಾವುದೆಂದು ಕೇಳಲು, ಶ್ರೀಸೂತರು ಸತ್ಯ, ದಯಾ, ಇಂದ್ರಿಯನಿಗ್ರಹ ಮೊದಲಾದುವು ಮಾನಸ ತೀರ್ಥಗಳು; ಇವುಗಳ ಪ್ರಭಾವ; ಗುರುಮಾತಾಪಿತೃಗಳ ಸೇವೆ; ಏಕಾದಶ್ಯಾದಿ ವ್ರತಾ ೩೪೪

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಚರಣ; ಇವುಗಳ ಫಲನಿರೂಪಣ–ಇವನ್ನು ಪ್ರತಿಪಾದಿಸುವುದು; ಶ್ರೀ ನರಸಿಂಹಪುರಾಣವನ್ನು ಭರದ್ವಾಜಾದಿಗಳ ಪ್ರಾರ್ಥನೆಯಂತೆ ಹೇಳಿ ಮುಗಿಸಿದುದಾಗಿ ಹೇಳುವುದು; ಶ್ರೀ ಸೂತರು ಮುನಿಗಳ ತಂಡಕ್ಕೆ ಶುಭಾಶಂಸನ ಮಾಡುವುದು; ಶ್ರೀ ನರಸಿಂಹಪುರಾಣದ ಶ್ರವಣ ಪಠನಗಳ ಫಲಶ್ರುತಿ; ಭರದ್ವಾಜನು ಇತರ ಮುನಿಗಳೊಡನೆ ಶ್ರೀ ಸೂತರಿಗೆಸಗಿದ ಪೂಜಾದಿ ಸನ್ಮಾನ; ಭರದ್ವಾಜನು ಆ ಪ್ರದೇಶದಲ್ಲಿ ನಿಂತುದು; ಮುನಿಗಳು ತಂತಮ್ಮಾಶ್ರಮಗಳಿಗೆ ತೆರಳುವುದು.	
೬೮	**ಸರ್ವದುಃಖೋಪಶಮನವೆಂಬ ಉಪಸಂಹಾರವು :–** ಶ್ರೀ ಸೂತರು ಮುನಿಗಳ ತಂಡಕ್ಕೆ ಮತ್ತೊಮ್ಮೆ ಶ್ರೀ ನರಸಿಂಹಪುರಾಣ ಶ್ರವಣ ಪಠನ ಕರ್ತೃಗಳಿಗೆ ಲಭಿಸುವ ಫಲವನ್ನು ಹೇಳುವುದು; ಈ ಪುರಾಣದಲ್ಲಿ ಕೊನೆಗೆ ಎಷ್ಟು ಭಾಗವನ್ನು ಶ್ರವಣ ಪಠನವು ಮಾಡುವುದು ಎಂದು ಹೇಳುವುದು; ಇತರ ಯಜ್ಞದಾನಾದಿಗಳಿಂದುಂಟಾಗುವ ಫಲವು ಈ ಪುರಾಣ ಪಠನ ಶ್ರಪಣದಿಂದಾಗುವುದೆಂದು ನಿರೂಪಿಸುವುದು; ಇದನ್ನು ಕೇಳಿದ ಭರದ್ವಾಜಾದಿ ಮುನಿಗಳ ಆನಂದ ನಿರೂಪಣ; ಪುನಃ ಆ ಮುನಿವೃಂದ ವೆಸಗಿದ ಶ್ರೀ ಸೂತರ ಪೂಜೆ; ಅ ಮುನಿಗಳು ತಂತಮ್ಮಾಶ್ರಮಗಳಿಗೆ ಹಿಂದಿರುಗಿದುದು.	೩೩೪

ಇಂತು ಶ್ರೀ ನರಸಿಂಹ ಪುರಾಣದಲ್ಲಿ ವಿಷಯಾನುಕ್ರಮಣಿಕೆಯು ಮುಗಿದುದು

॥ ಶುಭವಾಗಲಿ ॥

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಅಥ ಪಂಚಾಶತ್ತಮೋಽಧ್ಯಾಯಃ

ಅಥ ಶ್ರೀ ರಾಮಚರಿತೇ ಕಿಷ್ಕಿಂಧಾ ಕಾಣ್ಡಕಥಾನಿರೂಪಣಮ್.

॥ ಶ್ರೀ ಮಾರ್ಕಂಡೇಯ ಉವಾಚ ॥

ವಾಲಿನಾ ಕೃತವೈರೋಽಥ ದುರ್ಗವರ್ತೀ ಹರೀಶ್ವರಃ ।
ಸುಗ್ರೀವೋ ದೃಷ್ಟವಾನ್ದೂರಾದ್ಧ್ವಷ್ಟಾತ್ತ ಪವನಾತ್ಮಜಮ್ ॥ ೧ ॥

ಕಸ್ಯೇಮೌ ಸುಧನುಃಪಾಣೀ ಚೀರವಲ್ಕಲಧಾರಿಣೌ ।
ಪಶ್ಯಂತೌ ಸರಸೀಂ ದಿವ್ಯಾಂ ಪದ್ಮೋತ್ಪಲಸಮಾವೃತಾಮ್ ॥ ೨ ॥

ಐವತ್ತನೆಯ ಅಧ್ಯಾಯವು.

ಇನ್ನು ಕಿಷ್ಕಿಂಧಾಕಾಣ್ಡದ ಕಥಾನಿರೂಪಣವು

೧. ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ :—'ಎಲೈ ಮಹಾರಾಯನೇ! ಕೇಳು; ಅನಂತರದಲ್ಲಿ ವಾಲಿಯಿಂದ ಹಗೆ ತನಗೊಂಡು, ಋಷ್ಯಮೂಕದುರ್ಗದಲ್ಲಿದ್ದ, ಕಪಿಗಳೊಡೆಯನಾದ, ಸುಗ್ರೀವನು ಶ್ರೀ ರಾಮ ಲಕ್ಷ್ಮಣರು ದೂರದಲ್ಲಿ ಬರುತ್ತಿರುವುದನ್ನು ಕಂಡು, ವಾಯುತನಯನಾದ ಶ್ರೀ ಹನುಮಂತನಿಗೆ ಇಂತು ಹೇಳಿದನು.

೨. 'ಎಲೈ ಆಂಜನೇಯನೇ! ಕೆಂದಾವರೆ ಕನ್ನೈದಿಲೆಗಳಿಂದ ತುಂಬಿದ, ಉತ್ತಮವಾದ ಕೊಳವನ್ನು ನೋಡುತ್ತಿರುವ, ಬಿಲ್ಲನ್ನು ಆಂತ, ನಾರುಬಟ್ಟೆಗಳನ್ನು ಉಟ್ಟು ಹೊದೆದು ಕೊಂಡಿರುವ ಇವರು ಯಾರ ಕಡೆಯವರು ?

ನಾನಾರೂಪಧರಾವೇತೌ ತಾಪಸಂ ವೇಷಮಾಸ್ಥಿತೌ ।
ವಾಲಿದೂತಾವಿಹ ಪ್ರಾಪ್ತೌ ವಿನಿಶ್ಚಿತ್ಯ ಚ ಸೂರ್ಯಜಃ ॥ ೩ ॥

ಉತ್ಪಪಾತ ಭಯಾತ್ತ್ರಸ್ತೋ ಋಷ್ಯಮೂಕಾದ್ವನಾಂತರಮ್ ।
ವಾನರೈಃ ಸಹ ತೈಃ ಸರ್ವೈರಗಸ್ತ್ಯಾಶ್ರಮಮುತ್ತಮಮ್ ॥ ೪ ॥

ತತ್ರ ಸ್ಥಿತ್ವಾ ಸ ಸುಗ್ರೀವಃ ಪ್ರಾಹ ವಾಯುಸುತಂ ಪುನಃ ।
ಹನೂಮನ್ ಪೃಚ್ಛ ಶೀಘ್ರಂ ತ್ವಂ ಗಚ್ಛ ತಾಪಸವೇಷಧೃಕ್ ॥ ೫ ॥

ಕೌ ಹಿ ಕಸ್ಯ ಸುತೌ ಜಾತೌ ಕಿಮರ್ಥಂ ತತ್ರ ಸಂಸ್ಥಿತೌ ।
ಜ್ಞಾತ್ವಾ ಸತ್ಯಂ ಮಮ ಬ್ರೂಹಿ ವಾಯುಪುತ್ರ ಮಹಾಮತೇ ॥ ೬ ॥

ಇತ್ಯುಕ್ತೋ ಹನುಮಾನ್ಗತ್ವಾ ಪಂಪಾತಟಮನುತ್ತಮಮ್ ।
ಭಿಕ್ಷುರೂಪೀ ಸ ತಂ ಪ್ರಾಹ ರಾಮಂ ಭ್ರಾತ್ರಾ ಸಮನ್ವಿತಮ್ ॥ ೭ ॥

೩–೪. ನಾನಾವಿಧವಾದ ರೂಪವನ್ನು ತಾಳತಕ್ಕವರಾದ ಇವರು ಪ್ರಕೃತದಲ್ಲಿ ತಾಪಸವೇಷವನ್ನು ತಾಳಿ, ಇಲ್ಲಿಗೆ ಬಂದಿರುವ ವಾಲಿಯ ದೂತರೇ ಸರಿ;' ಎಂದು, ಸೂರ್ಯನ ಮಗನಾದ ಸುಗ್ರೀವನು ಭಯದಿಂದ ನಡುಗುತ್ತಿರುವವನಾಗಿ, ಎಲ್ಲ ಕಪಿಗಳಿಂದಲೂ ಕೂಡಿ, ಋಷ್ಯಮೂಕದಿಂದ, ಬೇರೆ ವನವಾದ ಉತ್ತಮವಾದ ಅಗಸ್ತ್ಯಾಶ್ರಮಕ್ಕೆ ಹಾರಿಹೋದನು.

೫–೭. ಅಲ್ಲಿ ಆ ಸುಗ್ರೀವನಿದ್ದು, ಮತ್ತೂ ಆ ವಾಯುಸುತನಿಗೆ ಇಂತು ಹೇಳಿದನು :—' ಎಲೈ ಹನುಮಂತನೇ ! ನೀನು ತಾಪಸರ ವೇಷವನ್ನೇ ಧರಿಸಿ, ಬೇಗನೇ ಅಲ್ಲಿಗೆ ಹೋಗು ; ಕೇಳು ; ಅವರು ಯಾರು ? ಯಾರ ಮಕ್ಕಳು ? ಅಲ್ಲಿ ಏಕೆ ಇರುತ್ತಾರೆ ? ಎಲೈ ಮಹಾಮತಿಯಾದ ವಾಯುಪುತ್ರನೆ ! ಇವನ್ನು ತಿಳಿದು, ಬಂದು, ಸತ್ಯವಾಗಿ ನನಗೆ ಹೇಳು ; ' ಎಂದು ಸುಗ್ರೀವನು ಹೇಳಲು, ಹನೂಮಂತನು ಸಂನ್ಯಾಸಿಯ ರೂಪವನ್ನು ತಾಳಿ, ಅತ್ಯುತ್ತಮವಾದ ಪಂಪಾಸರೋವರದ ದಡಕ್ಕೆ ಹೋಗಿ, ತಮ್ಮನೊಡಗೂಡಿದ ಶ್ರೀರಾಮಚಂದ್ರನಿಗೆ ಇಂತು ಹೇಳಿದನು.

ಕೋ ಭವಾನಿಹ ಸಂಪ್ರಾಪ್ತಸ್ತಥ್ಯಂ ಬ್ರೂಹಿ ಮಹಾಮತೇ ।
ಅರಣ್ಯೇ ನಿರ್ಜನೇ ಘೋರೇ ಕುತಸ್ತ್ವಂ ಕಿಂ ಪ್ರಯೋಜನಮ್ ॥ ೮ ॥

ಏವಂ ವದಂತಂ ತಂ ಪ್ರಾಹ ಲಕ್ಷ್ಮಣೋ ಭ್ರಾತುರಾಜ್ಞಯಾ ।
ಪ್ರವಕ್ಷ್ಯಾಮಿ ನಿಬೋಧ ತ್ವಂ ರಾಮವೃತ್ತಾಂತಮಾದಿತಃ ॥ ೯ ॥

ರಾಜಾ ದಶರಥೋ ನಾಮ ಬಭೂವ ಭುವಿ ವಿಶ್ರುತಃ ।
ತಸ್ಯ ಪುತ್ರೋ ಮಹಾಬುದ್ಧೇ ರಾಮೋ ಜ್ಯೇಷ್ಠೋ ಮಮಾಗ್ರಜಃ ॥ ೧೦ ॥

ಅಸ್ಯಾಭಿಷೇಕೆ ಆರಬ್ಧಃ ಕೈಕೇಯ್ಯಾ ತನ್ನಿವಾರಿತಮ್ ।
ಪಿತುರಾಜ್ಞಾಮಯಂ ಕುರ್ವನ್ರಾಮೋ ಭ್ರಾತಾ ಮಮಾಗ್ರಜಃ ॥ ೧೧ ॥

ಮಯಾ ಸಹ ವಿನಿಷ್ಕ್ರಮ್ಯ ಸೀತಯಾ ಸಹ ಭಾರ್ಯಯಾ ।
ಪ್ರವಿಷ್ಟೋ ದಂಡಕಾರಣ್ಯಂ ನಾನಾಮುನಿಸಮಾಕುಲಮ್ ॥ ೧೨ ॥

---

೮. 'ಎಲೈ ಮಹಾಮತಿಯೇ! ಇಲ್ಲಿ ಬಂದಿರುವ ನೀನು ಯಾರು! ಸತ್ಯವನ್ನು ನುಡಿ; ಎಲ್ಲಿಂದ ಈ ನಿರ್ಜನವಾದ, ಭಯಂಕರವಾದ, ಕಾಡಿಗೆ ಬಂದೆ? ಫಲವೇನು?'

೯. ಇಂತು ನುಡಿಯುತ್ತಲಿದ್ದ ಆಂಜನೇಯನನ್ನು ಕುರಿತು, ಅಣ್ಣನ ಅಪ್ಪಣೆಯಿಂದ ಲಕ್ಷ್ಮಣನು ಹೇಳಿದನು:—'ಅಯ್ಯಾ! ಶ್ರೀರಾಮ ವೃತ್ತಾಂತವನು ಮೊದಲಿನಿಂದಲೂ ಹೇಳುವೆನು; ಕೇಳು;

೧೦. ಎಲೈ ಮಹಾಬುದ್ಧಿಯೇ! ಭುವಿಯಲ್ಲಿ ದಶರಥನೆಂಬ ರಾಜನು ಪ್ರಖ್ಯಾತನಾಗಿದ್ದನು. ಆತನ ಹಿರಿಯ ಮಗನು ಈತನು; ನನ್ನ ಅಣ್ಣನು. (ಅಗ್ರಜನು)

೧೧–೧೨. ಈತನಿಗೆ ಪಟ್ಟಾಭಿಷೇಕವು ನೆರವೇರಲು ಸಿದ್ಧವಾಯಿತು. ಕಿರಿಯಮ್ಮನಾದ ಕೈಕೇಯಿಯು ಅದಕ್ಕೆ ಅಡ್ಡಿಪಡಿಸಿದಳು. ಆಗ ನನ್ನ ಅಗ್ರಜನಾದ ಶ್ರೀರಾಮನು ತಂದೆಯ ಈ ಆಣತಿಯನ್ನು ನಡೆಸುತ್ತಾ, ತಮ್ಮನಾದ ನನ್ನಿಂದಲೂ, ಮಡದಿಯಾದ ಸೀತಾದೇವಿಯಿಂದಲೂ ಕೂಡಿಕೊಂಡು ಅಯೋಧ್ಯೆಯಿಂದ ಹೊರಟು, ಅನೇಕ ಮುನಿಗಳಿಂದ ಕೂಡಿರುವ ದಂಡಕಾರಣ್ಯವನ್ನು ಪ್ರವೇಶಿಸಿದನು.

ಜನಸ್ಥಾನೇ ನಿವಸತೋ ರಾಮಸ್ಯಾಸ್ಯ ಮಹಾತ್ಮನಃ ।
ಭಾರ್ಯಾ ಸೀತಾ ತತ್ರ ವನೇ ಹೃತಾ ಕೇನಾಪಿ ಪಾಪ್ಮನಾ ॥ ೧೩ ॥

ಸೀತಾಮನ್ವೇಷಯನ್ವೀರೋ ರಾಮಃ ಕಮಲಲೋಚನಃ ।
ಇಹಾಯಾತಸ್ತ್ವಯಾ ದೃಷ್ಟ ಇತಿ ವೃತ್ತಾಂತಮೀರಿತಮ್ ॥ ೧೪ ॥

ಶ್ರುತ್ವಾ ವಚಸ್ತತಸ್ತಸ್ಯ ಲಕ್ಷ್ಮಣಸ್ಯ ಮಹಾತ್ಮನಃ ।
ಅವ್ಯಂಜಿತಾತ್ಮಾ ವಿಶ್ವಾಸಾತ್ ಹನೂಮಾನ್ಮಾರುತಾತ್ಮಜಃ ॥ ೧೫ ॥

ತ್ವಂ ಮೇ ಸ್ವಾಮೀತಿ ವದನ್ರಾಮಂ ರಘುಪತಿಂ ತದಾ ।
ಆಶ್ವಾಸ್ಯಾನೀಯ ಸುಗ್ರೀವಂ ತಯೋಃ ಸಖ್ಯಮಕಾರಯತ್ ॥ ೧೬ ॥

---

೧೩. ಆ ಮೇಲೆ ಜನಸ್ಥಾನದಲ್ಲಿ ವಾಸಮಾಡುತ್ತಲಿದ್ದ, ಈ ಮಹಾತ್ಮನಾದ ಶ್ರೀರಾಮನ ಮಡದಿಯಾದ ಸೀತಾದೇವಿಯು ಆ ವನದಲ್ಲಿ ಯಾವನೋ ಒಬ್ಬ ಪಾಪಾತ್ಮನಿಂದ ಅಪಹರಿಸಲ್ಪಟ್ಟಳು.

೧೪. ಆ ಪುಂಡರೀಕಾಕ್ಷನಾದ, ವೀರನಾದ, ಶ್ರೀರಾಮನು ಮಡದಿಯಾದ ಸೀತಾದೇವಿಯನ್ನು ಹುಡುಕುತ್ತಾ, ಇಲ್ಲಿಗೆ ಬಂದವನು ನಿನ್ನಿಂದ ನೋಡಲ್ಪಟ್ಟನು,' ಎಂದು ಲಕ್ಷ್ಮಣನು ಶ್ರೀರಾಮ ವೃತ್ತಾಂತವನ್ನರುಹಿದನು.

೧೫–೧೬. ಅನಂತರದಲ್ಲಿ ಮಾರುತನ ಸುತನಾದ ಹನೂಮಂತನು ಮಹಾತ್ಮನಾದ ಆ ಲಕ್ಷ್ಮಣನ ನುಡಿಯನ್ನು ಕೇಳಿ, ಸ್ವರೂಪವನ್ನು ಪ್ರಕಾಶಪಡಿಸದೆ, ವಿಶ್ವಾಸದಿಂದ ಆಗ ರಘುಪತಿಯಾದ ಶ್ರೀ ರಾಮಚಂದ್ರನಿಗೆ 'ನೀನು ನನಗೆ ಒಡೆಯನು;' ಎಂದು ಹೇಳುತ್ತಾ ಸಂತೋಷಗೊಳಿಸಿ, ಸುಗ್ರೀವನ ಬಳಿಗೆ ಕರೆತಂದು, ಅವರೀರ್ವರಿಗೆ ಕೆಳೆತನವನ್ನು ಮಾಡಿಸಿದನು.

ಶಿರಸ್ಯಾರೋಪ್ಯ ಪಾದಾಬ್ಜಂ ರಾಮಸ್ಯ ವಿದಿತಾತ್ಮನಃ ।
ಸುಗ್ರೀವೋ ವಾನರೇಂದ್ರಸ್ತು ಉವಾಚ ಮಧುರಾಕ್ಷರಮ್ ॥ ೧೭ ॥

ಅದ್ಯ ಪ್ರಭೃತಿ ರಾಜೇಂದ್ರ ತ್ವಂ ಮೇ ಸ್ವಾಮೀ ನ ಸಂಶಯಃ ।
ಅಹಂ ತು ತವಭೃತ್ಯಶ್ಚ ವಾನರೈಃ ಸಹಿತಃ ಪ್ರಭೋ ॥ ೧೮ ॥

ತ್ವಚ್ಛತ್ರುರ್ಮಮ ಶತ್ರುಃ ಸ್ಯಾದದ್ಯ ಪ್ರಭೃತಿ ರಾಘವ ।
ಮಿತ್ರಂ ತೇ ಮಮ ಸನ್ಮಿತ್ರಂ ತ್ವದ್ದುಃಖಂ ತನ್ಮಮಾಪಿ ಚ ॥ ೧೯ ॥

ತ್ವತ್ಪ್ರೀತಿರೇವ ಮತ್ಪ್ರೀತಿರಿತ್ಯುಕ್ತ್ವಾ ಪುನರಾಹ ತಮ್ ।
ವಾಲೀ ನಾಮ ಮಮ ಜ್ಯೇಷ್ಠೋ ಮಹಾಬಲಪರಾಕ್ರಮಃ ॥ ೨೦ ॥

---

೧೭. ಸರ್ವಜ್ಞನಾದ ಶ್ರೀರಾಮನ ಸ್ವಭಾವವನ್ನರಿತ, ವಾನರೇಂದ್ರನಾದ ಸುಗ್ರೀವನು ಶ್ರೀರಾಮನ ಅಡಿದಾವರೆಯನ್ನು ತನ್ನ ತಲೆಯ ಮೇಲಿಟ್ಟುಕೊಂಡು, ಸವಿನುಡಿಯನ್ನಿಂತು ಹೇಳಿದನು.

೧೮. 'ಎಲೈ ರಾಜೇಂದ್ರನೇ ! ಇಂದು ಮೊದಲು ನೀನು ನನ್ನ ಒಡೆಯನು. ಈ ವಿಷಯದಲ್ಲಿ ಸಂದೇಹವಿಲ್ಲವು. ಎಲೈ ಪ್ರಭುವೇ ! ಎಲ್ಲ ವಾನರರೊಡಗೂಡಿದ ನಾನು ನಿನ್ನ ಸೇವಕನು.

೧೯–೨೦. ಎಲೈ ರಾಘವನೇ ! ಇಂದು ಮೊದಲು ನಿನ್ನ ಹಗೆಯೇ ನನ್ನ ಹಗೆಯು ; ನಿನ್ನ ಸನ್ಮಿತ್ರನೇ ನನ್ನ ಸನ್ಮಿತ್ರನು; ನಿನ್ನ ದುಃಖವೇ ನನ್ನ ದುಃಖವು; ನಿನ್ನ ಪ್ರೀತಿಯೇ ನನ್ನ ಪ್ರೀತಿಯು;' ಎಂದು ಹೇಳಿ, ಮತ್ತೂ ಅವನಿಗೆ ಹೇಳಿದನು ; 'ಮಹಾಬಲಪರಾಕ್ರಮನಾದ ವಾಲಿಯೆಂದು ಖ್ಯಾತನಾದವನು ನನ್ನ ಹಿರಿಯ ಅಣ್ಣನು.

ಭಾರ್ಯಾಪಹಾರೀ ದುಷ್ಟಾತ್ಮಾ ಮದನಾಸಕ್ತಮಾನಸಃ ।
ತ್ವಾಮೃತೇ ಪುರುಷವ್ಯಾಘ್ರ ನಾಸ್ತಿ ಹಂತಾಽದ್ಯ ವಾಲಿನಃ ॥ ೨೧ ॥

ತಂ ಜಹಿ ತ್ವಂ ಮಹಾಬಾಹೋ ರಾಮದೇವ ರಘೂತ್ತಮ ।
ಇತ್ಯುಕ್ತಸ್ತಂ ವಧಿಷ್ಯಾಮಿ ರಾಮ ಆಹ ಕಪೀಶ್ವರಮ್ ।
ತಂ ಹತ್ವಾ ತವ ದಾಸ್ಯಾಮಿ ಪತ್ನೀಂ ರಾಜ್ಯಂ ಚ ವಾಲಿನಃ ।
ಸುಗ್ರೀವಸ್ತಮುವಾಚಾಥ ಪ್ರತ್ಯಯಾರ್ಥಮಥಾತ್ಮನಃ ॥
ಕ್ಷಮಾಪಯನ್ರಘುಪತಿಂ ವಾಲೀ ಬಲವಿದವ್ಯಯಮ್ ।
ಯುಗಪತ್ಸಪ್ತತಾಲಾಂಸ್ತು ತರೂನ್ಯೋ ವೈ ವಧಿಷ್ಯತಿ ॥
ಸ ತಂ ವಧಿಷ್ಯತೀತ್ಯುಕ್ತಂ ಪುರಾಣಜ್ಞೈರ್ನೃಪೋತ್ತಮ ॥ ೨೨ ॥

---

೨೧. ಮದನನಿಂದ ಆಸಕ್ತವಾದ ಮನವುಳ್ಳವನಾಗಿ, ಆ ದುಷ್ಟಾತ್ಮನು ನನ್ನ ಮಡದಿಯನ್ನಪಹರಿಸಿರುತ್ತಾನೆ; ಎಲೈ ಪುರುಷಶ್ರೇಷ್ಠನೇ! ಇಂದು ನಿನ್ನ ಹೊರತು ಆ ವಾಲಿಯನ್ನು ಕೊಲ್ಲುವವನು ಬೇರೆ ಇಲ್ಲವು.

೨೨. ಎಲೈ ಮಹಾಬಾಹುವೇ! ರಘೂತ್ತಮನೇ! ರಾಮದೇವನೇ! ಅವನನ್ನು ಸಂಹರಿಸು;' ಎಂದು ಸುಗ್ರೀವನು ಬಿನ್ನವಿಸಿದನು. ಆಗ ಶ್ರೀರಾಮನು ತಾನು ಅವನನ್ನು ಸಂಹರಿಸುವುದಾಗಿ ಸುಗ್ರೀವನಿಗೆ ಹೇಳಿದನು. 'ಎಲೈ ಸುಗ್ರೀವನೆ! ಆ ಹೆಂಗಳ್ಳನಾದ ವಾಲಿಯನ್ನು ಸಂಹರಿಸಿ, ನಿನ್ನ ಮಡದಿಯನ್ನೂ, ರಾಜ್ಯವನ್ನೂ ಕೊಡುವೆನು.' ಬಳಿಕ ಸುಗ್ರೀವನು ತನ್ನ ನಂಬುಗೆಗೋಸ್ಕರ ವಾಲಿಯ ಬಲವನ್ನರಿತವನು ಅವ್ಯಯನಾದ ಶ್ರೀರಾಮಚಂದ್ರನನ್ನು ಕ್ಷಮೆಯನ್ನು ಬೇಡುತ್ತಾ, ಹೇಳಿದನು; 'ಎಲೈ ಸ್ವಾಮಿಯೇ! ರಾಜಕುಮಾರನೇ! ಯಾವನು ಒಂದೇ ಬಾರಿ ಏಳು ತಾಳೆಯ ಮರಗಳನ್ನು ಬಾಣ ಹೊಡೆದು ಕೆಡಹುವನೋ, ಅವನು ಆವನನ್ನು ಕೊಲ್ಲುವನೆಂದು ಪುರಾಣವನ್ನರಿತವರು ಹೇಳುತ್ತಾರೆ,' ಎಂದು ಸುಗ್ರೀವನು ಬಿನ್ನವಿಸಿದನು.

ತತ್ಪ್ರಿಯಾರ್ಥಂ ಹಿ ರಾಮೋಽಪಿ ಶ್ರೀಮಾಞ್ಛಿತ್ವಾ ಮಹಾತರೂನ್ ।
ಅರ್ಧಾಕೃಷ್ಟೇನ ಬಾಣೇನ ಯುಗಪದ್ರಘುನಂದನಃ ॥ ೨೩ ॥

ವಿದ್ಧ್ವಾ ಮಹಾತರೂನ್ರಾಮಃ ಸುಗ್ರೀವಂ ಪ್ರಾಹ ಪಾರ್ಥಿವಮ್ ।
ವಾಲಿನಾ ಗಚ್ಛ ಯುಧ್ಯಸ್ವ ಕೃತಚಿಹ್ನೋ ರವೇಃ ಸುತ ॥ ೨೪ ॥

ಇತ್ಯುಕ್ತಃ ಕೃತಚಿಹ್ನೋಽಯಂ ಯುದ್ಧಂ ಚಕ್ರೇಽಥ ವಾಲಿನಾ ।
ರಾಮೋಽಪಿ ತತ್ರ ಗತ್ವಾಽಥ ಶರೇಣೈಕೇನ ವಾಲಿನಮ್ ॥ ೨೫ ॥

ವಿವ್ಯಾಧ ವೀರ್ಯವಾನ್ವಾಲೀ ಪಪಾತ ಚ ಮಮಾರ ಚ ।
ವಿತ್ರಸ್ತಂ ವಾಲಿಪುತ್ರಂ ತು ಅಂಗದಂ ವಿನಯಾನ್ವಿತಮ್ ॥ ೨೬ ॥

೨೩–೨೪. ಆಗ ಶ್ರೀಮಂತನಾದ, ರಘುನಂದನನಾದ ರಾಮನೂ ಒಂದೇ ಬಾರಿ ಆ ಏಳು ತಾಳೇಮರಗಳನ್ನೂ ಅರ್ಧಸೆಳೆದು ಬಿಟ್ಟ ಬಾಣದಿಂದ ಕತ್ತರಿಸಿ, ಕಪಿರಾಜನಾದ ಸುಗ್ರೀವನಿಗೆ ನಂಬುಗೆಗೊಟ್ಟು, ' ಎಲೈ ರವಿಸುತನೇ ! ನೀನು ಗುರುತಿಗೇನಾದರೂ ಮಾಲೆಯನ್ನು ಧರಿಸಿ, ವಾಲಿಯೊಡನೆ ಯುದ್ಧ ಮಾಡು ; ಹೋಗು ; ' ಎಂದು ಹೇಳಿದನು.

೨೫. ಶ್ರೀರಾಮನಿಂದ ಇಂತು ಹೇಳಿಸಿಕೊಂಡ ಸುಗ್ರೀವನೂ ಕುತ್ತಿಗೆಯಲ್ಲಿ ಗುರುತಿಗೆ ಮಾಲೆಯನ್ನು ಧರಿಸಿ, ವಾಲಿಯೊಡನೆ ಯುದ್ಧಮಾಡಿದನು. ಶ್ರೀರಾಮನೂ ಅಲ್ಲಿಗೆ ಹೋಗಿ, ಒಂದೇ ಬಾಣದಿಂದ ಬಳಿಕ ವಾಲಿಯನ್ನು ಹೊಡೆದನು. ಪರಾಕ್ರಮಶಾಲಿಯಾದ ವಾಲಿಯು ಕೆಳಗೆ ಬಿದ್ದನು ಮತ್ತು ಮೃತನಾದನು.

೨೬–೨೯. ಆ ಮೇಲೆ ವಿಶೇಷವಾಗಿ ಅಂಜಿದವನೂ, ವಿನಯದಿಂದ ಕೂಡಿದವನೂ ಆದ, ವಾಲಿಯ ಮಗನಾದ , ಯುದ್ಧಗಲ್ಲಿ ಅತ್ಯಂತ ವೀರನೂ ಆದ ಅಂಗದನನ್ನು ಶ್ರೀರಾಮನು ಆಗ ಯೌವರಾಜ್ಯಪದವಿಯಲ್ಲಿ ನಿಯೋಗಿಸಿ, ಸೂರ್ಯತನಯನಿಗೆ ಆ ತಾರೆಯನ್ನು ಅಂತೆಯೇ ಒಪ್ಪಿಸಿ, ಧರ್ಮಸ್ವರೂಪನಾದ (' ಧ್ರಿಯತೇ

ರಣಶೌಂಡಂ ಯೌವರಾಜ್ಯೇ ನಿಯುಕ್ತ್ವಾ ರಾಘವಸ್ತದಾ ।
ತಾಂ ಚ ತಾರಾಂ ತಥಾ ದತ್ವಾ ರಾಮಶ್ಚ ರವಿಸೂನವೇ ॥ ೨೭ ॥

ಸುಗ್ರೀವಂ ಪ್ರಾಹ ಧರ್ಮಾತ್ಮಾ ರಾಮಃ ಕಮಲಲೋಚನಃ ।
ರಾಜ್ಯಮನ್ವೇಷಯಂತಂ ಸ್ವಂ ಕಪೀನಾಂ ಪುನರಾವ್ರಜ ॥ ೨೮ ॥

ತ್ವಂ ಸೀತಾನ್ವೇಷಣೇ ಯತ್ನಂ ಕುರು ಶೀಘ್ರಂ ಹರೀಶ್ವರ ।
ಇತ್ಯುಕ್ತಃ ಪ್ರಾಹ ಸುಗ್ರೀವೋ ರಾಮಂ ಲಕ್ಷ್ಮಣಸಂಯುತಮ್ ॥ ೨೯ ॥

ಪ್ರಾವೃಟ್ಕಾಲೋ ಮಹಾನ್ಪ್ರಾಪ್ತಃ ಸಾಂಪ್ರತಂ ರಘುನಂದನ ।
ವಾನರಾಣಾಂ ಗತಿರ್ನಾಸ್ತಿ ವನೇ ವರ್ಷತಿ ವಾಸವೇ ॥ ೩೦ ॥

ಗತೇ ತಸ್ಮಿಂಸ್ತು ರಾಜೇಂದ್ರ ಪ್ರಾಪ್ತೇ ಶರದಿ ನಿರ್ಮಲೇ ।
ಚಾರಾನ್ಸಂಪ್ರೇಷಯಿಷ್ಯಾಮಿ ವಾನರಾನ್ದಿಕ್ಷು ರಾಘವ ॥ ೩೧ ॥

ಲೋಕಃ ಅನೇನೇತಿ ಧರ್ಮಃ ‘ಭಗವಾನ್ನಾರಾಯಣಃ’) ಪುಂಡರಿಕಾಕ್ಷನಾದ ಶ್ರೀರಾಮನು ತನ್ನ ಕಪಿರಾಜ್ಯವನ್ನು ಹುಡುಕುತ್ತಲಿದ್ದ ಸುಗ್ರೀವನಿಗೆ ಇಂತು ಹೇಳಿದನು :—‘ಎಲೈ ಕಪಿರಾಜನಾದ ಸುಗ್ರೀವನೇ! ನೀನು ಮತ್ತು ಹೊರಡು; ಸೀತಾದೇವಿಯನ್ನು ಹುಡುಕುವ ಪ್ರಯತ್ನವನ್ನು ಬೇಗನೆ ಕೈಕೊಳ್ಳುವವನಾಗು;’ ಎಂದು ಹೇಳಿಸಿಕೊಂಡ ಸುಗ್ರೀವನು, ಲಕ್ಷ್ಮಣಯುಕ್ತನಾದ ಶ್ರೀರಾಮನಿಗೆ ಹೀಗೆ ಹೇಳಿದನು.

೩೦. ‘ಎಲೈ ರಘುನಂದನನೇ! ಈಗ ವರ್ಷಾಕಾಲವುಂಟಾಗಿದೆ. ದೇವೇಂದ್ರನು ಕಾಡಿನಲ್ಲಿ ಮಳೆಗರೆಯುತ್ತಿರುವಾಗ, ವಾನರರು ಸಂಚರಿಸಲಾಗುವುದಿಲ್ಲ.

೩೧. ಎಲೈ ರಾಜೇಂದ್ರನಾದ ರಾಘವನೇ! ಆ ವರ್ಷಾಕಾಲವು ತೀರಿ, ಮೇಘಾದಿಗಳಿಲ್ಲದ, ಶುಭ್ರವಾದ ಶರತ್ಕಾಲವುಂಟಾಗಲು, ಚಾರರಾದ ಕಪಿಗಳನ್ನು ಎಲ್ಲ ದಿಕ್ಕುಗಳಲ್ಲಿಯೂ ಸೀತಾದೇವಿಯನ್ನು ಹುಡುಕಲು ಕಳುಹಿಸುವೆನು;’

ಇತ್ಯುಕ್ತ್ವಾ ರಾಮಚಂದ್ರಂ ಸ ತಂ ಪ್ರಣಮ್ಯ ಕಪೀಶ್ವರಃ ।
ಪಂಪಾಪುರಂ ಪ್ರವಿಶ್ಯಾಥ ರೇಮೇ ತಾರಾಸಮನ್ವಿತಃ ॥ ೩೨ ॥

ರಾಮೋಽಪಿ ವಿಧಿವದ್ಭ್ರಾತ್ರಾ ಶೈಲಸಾನೌ ಮಹಾವನೇ ।
ನಿವಾಸಂ ಕೃತವಾನ್ಶೈಲೇ ನೀಲಕಂಠೇ ಮಹಾಮತಿಃ ॥ ೩೩ ॥

ಪ್ರಾವೃಟ್ಕಾಲೇ ಗತೇ ಕೃಚ್ಛ್ರಾತ್ಪ್ರಾಪ್ತೇ ಶರದಿ ರಾಘವಃ ।
ಸೀತಾವಿಯೋಗಾದ್ವ್ಯಥಿತಃ ಸೌಮಿತ್ರಿಂ ಪ್ರಾಹ ಲಕ್ಷ್ಮಣಮ್ ॥ ೩೪ ॥

ಉಲ್ಲಂಘಿತಸ್ತು ಸಮಯಃ ಸುಗ್ರೀವೇಣ ತತೋ ರುಷಾ ।
ಲಕ್ಷ್ಮಣಂ ಪ್ರಾಹ ಕಾಕುತ್ಸ್ಥೋ ಭ್ರಾತರಂ ಭ್ರಾತೃವತ್ಸಲಃ ॥ ೩೫ ॥

ಗಚ್ಛ ಲಕ್ಷ್ಮಣ ದುಷ್ಟೋಽಸೌ ನಾಗತಃ ಕಪಿನಾಯಕಃ ।
ಗತೇ ತು ವರ್ಷಾಕಾಲೇಽಹಮಾಗಮಿಷ್ಯಾಮಿ ತೇಽಂತಿಕಮ್ ॥ ೩೬ ॥

---

೩೨. ಇಂತು ಹೇಳಿ, ಕಪೀಶ್ವರನು ಆ ಶ್ರೀರಾಮಚಂದ್ರನಿಗೆ ಪೊಡಮಟ್ಟು, ಬಳಿಕ ತಾರೆಯೊಡಗೂಡಿ, ಪಂಪಾಪುರವನ್ನು ಪ್ರವೇಶಿಸಿ, ವಿಲಾಸಗೊಂಡಿದ್ದನು.

೩೩. ಮಹಾಮತಿಯಾದ ಶ್ರೀ ರಾಮಚಂದ್ರನೂ ದೈವಾನುಸಾರವಾಗಿ ನಿಯಮಗಳೊಡಗೂಡಿ, ತಮ್ಮನೊಡನೆ ನೀಲವಾದ ಕಂಠಪ್ರದೇಶವುಳ್ಳ (ಮೇಘಾವೃತವಾದ), ಬೆಟ್ಟದ ಗೊಂಡಾರಣ್ಯವುಳ್ಳ ತಪ್ಪಲುಗಳೆಡೆಯಲ್ಲಿ ವಾಸಮಾಡಿದನು.

೩೪. ಕ್ಲೇಶದಿಂದ ವರ್ಷಾಕಾಲವು ಕಳೆದುಹೋಗಿ, ಶರತ್ಕಾಲವು ಬರಲು, ಶ್ರೀರಾಮನು ಸೀತಾದೇವಿಯ ವಿರಹದಿಂದ ನೊಂದವನಾಗಿ, ಸುಮಿತ್ರಾ ಪುತ್ರನಾದ ಲಕ್ಷ್ಮಣನಿಗೆ ಇಂತು ಹೇಳಿದನು.

೩೫–೩೬. ‘ ಎಲೈ ಲಕ್ಷ್ಮಣನೇ ! ಸುಗ್ರೀವನು ಹೊತ್ತನ್ನು ಮೀರಿದನು,’ ಎಂದು, ಬಳಿಕ ಪುನಃ ಭ್ರಾತೃವತ್ಸಲನಾದ ಕಾಕುಸ್ಥರಾಮನು ಲಕ್ಷ್ಮಣನಿಗೆ ಸಿಟ್ಟಿನಿಂದ ಹೇಳಿದನು :—

ಅನೇಕೈರ್ವಾನರೈಃ ಸಾರ್ಧಮಿತ್ಯುಕ್ತ್ವಾಽಸೌ ತದಾ ಗತಃ ।
ತತ್ರ ಗಚ್ಛ ತ್ವರಾಯುಕ್ತೋ ಯತ್ರಾಸ್ತೇ ಕಪಿನಾಯಕಃ ॥ ೩೭ ॥

ತಂ ದುಷ್ಟಮಗ್ರತಃ ಕೃತ್ವಾ ಹರಿಸೇನಾಸಮನ್ವಿತಮ್ ।
ರಮಂತಂ ತಾರಯಾ ಸಾರ್ಧಂ ಶೀಘ್ರಮಾನಯನಂ ಕುರು ॥ ೩೮ ॥

ನಾತ್ರಾಗಚ್ಛತಿ ಸುಗ್ರೀವೋ ಯದ್ಯಸೌ ಪ್ರಾಪ್ತಭೂತಿಕಃ ।
ತದಾ ತ್ವಯೈವಂ ವಕ್ತವ್ಯಃ ಸುಗ್ರೀವೋಽನೃತಭಾಷಕಃ ॥ ೩೯ ॥

ವಾಲಿಹಂತಾ ಶರೋ ದುಷ್ಟ ಕರೇ ಮೇಽದ್ಯಾಪಿ ತಿಷ್ಠತಿ ।
ಸ್ಮೃತ್ವೈತದಾಚರ ಕಪೇ ರಾಮವಾಕ್ಯಂ ಶ್ರುತಂ ತವ ।
ಇತ್ಯುಕ್ತಸ್ತು ತಥೇತ್ಯುಕ್ತ್ವಾ ರಾಮಂ ನತ್ವಾ ಚ ಲಕ್ಷ್ಮಣಃ ॥ ೪೦ ॥

'ಎಲೈ ಲಕ್ಷ್ಮಣನೇ ! ಹೋಗು ; ದುಷ್ಟನಾದ ಈ ಕಪಿರಾಜನು ಇನ್ನೂ ಬರಲಿಲ್ಲವು. ಅವನು ಕಾರ್ಗಾಲವು ಕಳೆಯಲು ನಿನ್ನ ಸಮೀಪಕ್ಕೆ ಅನೇಕ ಸೇನೆ ಯೊಡಗೂಡಿ, ಬರುವೆನೆಂದು ಹೇಳಿ, ಆಗ ಹೋದನು. ಆ ಕಪಿನಾಯಕನೆಲ್ಲಿರುವನೋ, ಅಲ್ಲಿಗೆ ನೀನು ಬೇಗನೆ ಹೋಗು.

೩೮. ತಾರೆಯೊಡನೆ ವಿಲಾಸದಿಂದಿರುವ ಆ ದುಷ್ಟನನ್ನು ಕಪಿಸೇನೆಯೊಡನೆ ಮುಂದೆ ಮಾಡಿಕೊಂಡು ಬೇಗನೆ ಕರೆದುಕೊಂಡು ಬಾ.

೩೯–೪೦. ರಾಜ್ಯಾದ್ಯೈಶ್ವರ್ಯವನ್ನು ಪಡೆನುಕೊಂಡ ಈ ಸುಗ್ರೀವನು ಇಲ್ಲಿಗೆ ಬಾರದಿದ್ದಲ್ಲಿ, ಆಗ ಈ ಹುಸಿಯೊರೆವ ಸುಗ್ರೀವನಿಗೆ ನೀನು ಇಂತು ಹೇಳ ತಕ್ಕದ್ದು ; 'ಎಲೈ ದುಷ್ಟನಾದ ಕಪಿಯೆ ! ನಿಮ್ಮಣ್ಣನಾದ ವಾಲಿಯನ್ನು ಕೊಂದ ಬಾಣವು ಇನ್ನೂ ನನ್ನ ಕೈಯಲ್ಲಿ ಇರುತ್ತದೆ; ಇವನ್ನು ನೆನೆದು ನಡೆದುಕೊ ! ಈ ರಾಮ ವಾಕ್ಯವು ನಿನಗೆ ಕೇಳಿಸಿತೊ ?' ಎಂದು ಶ್ರೀರಾಮನು ಹೇಳಲು, ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ, ಶ್ರೀರಾಮನಿಗೆರಗಿದನು.

ಪಂಪಾಪುರಂ ಜಗಾಮಾಥ ಸುಗ್ರೀವೋ ಯತ್ರ ತಿಷ್ಠತಿ ।
ದೃಷ್ಟ್ವಾ ಸ ತತ್ರ ಸುಗ್ರೀವಂ ಕಪಿರಾಜಂ ಬಭಾಷ ವೈ ॥ ೪೧ ॥

ತಾರಾಭೋಗವಿಷಕ್ತಸ್ತ್ವಂ ರಾಮಕಾರ್ಯ ಪರಾಙ್ಮುಖ ।
ಕಿಂ ತ್ವಯಾ ವಿಸ್ಮೃತಂ ಸರ್ವಂ ರಾಮಾಗ್ರೇ ಸಮಯಂ ಕೃತಮ್ ॥ ೪೨ ॥

ಸೀತಾಮನ್ವಿಷ್ಯ ದಾಸ್ಯಾಮಿ ಯತ್ರ ಕ್ವಾಪೀತಿ ದುರ್ಮತೇ ।
ಹತ್ವಾ ತು ವಾಲಿನಂ ರಾಜ್ಯಂ ಯೇನ ದತ್ತಂ ಪುರಾ ತವ ॥ ೪೩ ॥

ತ್ವಾಮೃತೇ ಕೋಽವಮನ್ಯೇತ ಕಪೀಂದ್ರಂ ಪಾಪಚೇತಸಮ್ ।
ಪ್ರತಿಶ್ರುತ್ಯ ಚ ರಾಮಸ್ಯ ಭಾರ್ಯಾಹೀನಸ್ಯ ಭೂಪತೇ ॥ ೪೪ ॥

---

೪೧. ಬಳಿಕ ಲಕ್ಷ್ಮಣನು ಎಲ್ಲಿ ಸುಗ್ರೀವನಿರುತ್ತಾನೆಯೋ, ಆ ಪಂಪಾಪುರಕ್ಕೆ ಹೋದನು. ಅಲ್ಲಿ ಕಪಿಗಳೊಡೆಯನಾದ ಸುಗ್ರೀವನನ್ನು ನೋಡಿ, ಇಂತು ನುಡಿದನು.

೪೨. ' ಎಲೈ ರಾಮಕಾರ್ಯದಿಂದ ಮೊಗತಿರುಗಿಸಿದವನೇ ! ನೀನು ತಾರಾದೇವಿಯ ಸೊಗದಲ್ಲಿ ವಿಶೇಷವಾಗಿ ಆಸಕ್ತನಾಗಿರುವೆ ; ಶ್ರೀರಾಮನೆದುರಿನಲ್ಲಿ ಮಾಡಿದ ಪ್ರತಿಜ್ಞೆಯನ್ನೆಲ್ಲಾ ಮರೆತೆಯಾ ?

೪೩. ಹಿಂದೆ ಯಾವನು (ನಿಮ್ಮಣ್ಣನಾದ) ವಾಲಿಯನ್ನು ಸಂಹರಿಸಿ, ಈ ಕಿಷ್ಕಿಂಧಾರಾಜ್ಯವನ್ನಿತ್ತನೋ, ಆ ಶ್ರೀರಾಮಚಂದ್ರನಿಗೆ ಎಲೈ ದುರ್ಮತಿಯೇ ! ಎಲ್ಲಿಯೇ ಆಗಲಿ, ಸೀತಾದೇವಿಯನ್ನು ಹುಡುಕಿಸಿ ತಂದೊಪ್ಪಿಸುವೆನು, ಎನ್ನಲಿಲ್ಲವೆ ?

೪೪. ಎಲೈ ಭೂಪತಿಯೇ ! ಮಡದಿಯನ್ನು ಕಳೆದುಕೊಂಡಿರುವ ಶ್ರೀರಾಮನಿಗೆ ಇಂತು ಮಾತುಗೊಟ್ಟು, ದುರ್ಹೃದಯನಾದ, ಪಾಪಾತ್ಮನಾದ, ಕಪಿರಾಜನಾದ ನಿನ್ನನ್ನು ಹೊರತು ಯಾವನು ತಾನೇ ತಿರಸ್ಕರಿಸುವನು ?

ಸಾಹಾಯ್ಯಂ ತೇ ಕರೋಮೀತಿ ದೇವಾಗ್ನಿಜಲಸಂನಿಧೌ ।
ಯೇ ಯೇ ಚ ಶತ್ರವೋ ರಾಜಂಸ್ತೇ ತೇ ಚ ಮಮ ಶತ್ರವಃ ॥ ೪೫ ॥

ಮಿತ್ರಾಣಿ ಯಾನಿ ತೇ ದೇವ ತಾನಿ ಮಿತ್ರಾಣಿ ಮೇ ಸದಾ ।
ಸೀತಾಮನ್ವೇಷಿತುಂ ರಾಜನ್ವಾನರೈರ್ಬಹುಭಿರ್ವೃತಃ ॥ ೪೬ ॥

ಸತ್ಯಂ ಯಾಸ್ಯಾಮಿ ತೇ ಪಾರ್ಶ್ವಮಿತ್ಯುಕ್ತ್ವಾ ಕೋಽನ್ಯಥಾಽಕರೋತ್ ।
ತ್ವಾಮೃತೇ ಪಾಪಿನಂ ದುಷ್ಟಂ ರಾಮದೇವಸ್ಯ ಸನ್ನಿಧೌ ॥ ೪೭ ॥

ಕಾರಯಿತ್ವಾ ತು ತೇನೈವಂ ಸ್ವಕಾರ್ಯಂ ದುಷ್ಟವಾನರ ।
ಋಷೀಣಾಂ ಸತ್ಯವದ್ವಾಕ್ಯಂ ತ್ವಯಿ ದೃಷ್ಟಂ ಮಯಾಧುನಾ ॥ ೪೮ ॥

---

೪೫. ನೀನು ದೇವತೆಗಳು, ಯಜ್ಞೇಶ್ವರ, ಜಲ - ಇವುಗಳೆದುರಿನಲ್ಲಿ ‘ನಿನಗೆ ಸಹಾಯವನ್ನೆಸಗುವೆನು; ಎಲೈ ರಾಜನೇ! ನಿನಗೆ ಯಾರುಯಾರು ಹಗೆಗಳೋ, ಅವರೆಲ್ಲರೂ ನನ್ನ ಹಗೆಗಳು;

೪೬-೪೭. ಎಲೈ ಸ್ವಾಮಿಯೇ! ನಿನಗೆ ಯಾರು ಕೆಳೆಯರೋ, ಅವರೆಲ್ಲರೂ ನನಗೂ ಯಾವಾಗಲೂ ಕೆಳೆಯರು; ಎಲೈ ರಾಜನೇ! ಅನೇಕ ವಾನರರಿಂದ ಕೂಡಿಕೊಂಡು, ಸೀತಾದೇವಿಯನ್ನು ಹುಡುಕುವ ಸಲುವಾಗಿ (ವರ್ಷಾಕಾಲ ಮುಗಿದ ಕೂಡಲೇ) ದಿಟವಾಗಿ ನಿನ್ನ ಬಳಿಗೆ ಬರುವೆನು;’ ಎಂದು ಶ್ರೀರಾಮನ ಸಂನಿಧಿಯಲ್ಲಿ ಹೇಳಿ, ಪಾಪಿಯೂ, ದುಷ್ಟನೂ, ಆದ ನಿನ್ನನ್ನುಳಿದು, ಯಾವನು ತಾನೆ ಬೇರೆ ತೆರನಾಗಿ ನಡೆದುಕೊಳ್ಳುವನು?

೪೮.೪೯ ಎಲೈ ದುಷ್ಟ ವಾನರನೇ! ಆ ಶ್ರೀರಾಮನಿಂದ ಇಂತು ನಿನ್ನ ಕಾರ್ಯವನ್ನು ಮಾಡಿಸಿಕೊಂಡು, ಇಂದು ನಾನು ಲೋಕದಲ್ಲಿ ಜನಗಳ ನಡತೆಯನ್ನು ತಿಳಿದಿರುವ ಸರ್ವಜ್ಞರಾದ, ಮಹಾತ್ಮರಾದ ಋಷಿಗಳ ಯಥಾರ್ಥವಚನ

ಜನವೃತ್ತವಿದಾಂ ಲೋಕೇ ಸರ್ವಜ್ಞಾನಾಂ ಮಹಾತ್ಮನಾಮ್ ।
ನ ತಂ ಪಶ್ಯಾಮಿ ಲೋಕೇಽಸ್ಮಿನ್ಕೃತಂ ಪ್ರತಿಕರೋತಿ ಯಃ ॥ ೪೯ ॥

ಸರ್ವಸ್ಯ ಹಿ ಕೃತಾರ್ಥಸ್ಯ ಮತಿರನ್ಯಾ ಪ್ರವರ್ತತೇ ।
ವತ್ಸಃ ಕ್ಷೀರಕ್ಷಯಂ ದೃಷ್ಟ್ವಾ ಪರಿತ್ಯಜತಿ ಮಾತರಮ್ ॥ ೫೦ ॥

ಶಾಸ್ತ್ರೇಷು ನಿಷ್ಕೃತಿರ್ದೃಷ್ಟಾ ಮಹಾಪಾತಕಿನಾಮಪಿ ।
ಕೃತಘ್ನಸ್ಯ ಕಪೇ ದುಷ್ಟ ನ ದೃಷ್ಟಾ ನಿಃಕೃತಿಃ ಪುರಾ ॥ ೫೧ ॥

ಕೃತಘ್ನತಾ ನ ಕಾರ್ಯಾ ತೇ ತ್ವತ್ಕೃತಂ ಸಮಯಂ ಸ್ಮರ ।
ಏಹ್ಯೇಹಿ ಶರಣಂ ಗಚ್ಛ ಕಾಕುತ್ಸ್ಥಂ ಹಿತಪಾಲಕಮ್ ॥ ೫೨ ॥

ವನ್ನು ನಿನ್ನಲ್ಲಿ ಕಂಡೆನು. ಈ ಪ್ರಪಂಚದಲ್ಲಿ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಯಾವನು ಎಸಗುತ್ತಾನೆಯೋ, ಅವನನ್ನು ನಾವು ನೋಡುತ್ತಿಲ್ಲವು.

೫೦. ಕೃತಕೃತ್ಯರಾದವರೆಲ್ಲರ ಬುದ್ಧಿ ಬೇರೆತೆರನಾಗಿ ತೊಡಗುತ್ತಿದೆ. ಕರುವು ತಾಯಿಯಾದ ಗೋವಿನಲ್ಲಿ ಹಾಲು ಇಲ್ಲದಿರುವುದನ್ನು ಕಂಡು ತಾಯಿಯನ್ನು ಬಿಡುತ್ತದೆ.

೫೧. ಶಾಸ್ತ್ರಗಳಲ್ಲಿ ಮಹಾಪಾತಕಿಗಳಿಗೂ ಪ್ರಾಯಶ್ಚಿತ್ತವು ಕಂಡು ಬಂದಿರುತ್ತದೆ. ಆದರೆ, ಪೂರ್ವದಲ್ಲಿಯೂ ಎಲೈ ದುಷ್ಟ ಕಪಿಯೇ ! ಕೃತಘ್ನನಾದವನಿಗೆ ಪ್ರಾಯಶ್ಚಿತ್ತವೇ ಕಂಡು ಬಂದುದಿಲ್ಲವು.

೫೨. ನೀನು ಕೃತಘ್ನತೆಯನ್ನೆಸಗಬಾರದು. ನೀನು ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿಕೋ; ಬಾಬಾ; ಹಿತವಾಗಿ ರಕ್ಷಿಸುವನಾದ, ಕಾಕುತ್ಸ್ಥನಾದ ಶ್ರೀರಾಮನನ್ನು ಮರೆಹೊಗು.

ಯದಿ ನಾಯಾಸಿ ಚ ಕಪೇ ರಾಮವಾಕ್ಯಮಿದಂ ಶೃಣು ।
ನಯಿಷ್ಯೇ ಮೃತ್ಯುಸದನಂ ಸುಗ್ರೀವಂ ವಾಲಿನಂ ಯಥಾ ॥ ೫೩ ॥

ಸ ಶರೋ ವಿದ್ಯತೇಽಸ್ಮಾಕಂ ಯೇನ ವಾಲೀ ಹತಃ ಕಪಿಃ ।
ಲಕ್ಷ್ಮಣೇನೈವಮುಕ್ತೋಽಸೌ ಸುಗ್ರೀವಃ ಕಪಿನಾಯಕಃ ॥ ೫೪ ॥

ನಿರ್ಗತ್ಯ ತು ನಮಶ್ಚಕ್ರೇ ಲಕ್ಷ್ಮಣಂ ಮಂತ್ರಿಣೋದಿತಃ ।
ಉವಾಚ ಚ ಮಹಾತ್ಮಾನಂ ಲಕ್ಷ್ಮಣಂ ವಾನರಾಧಿಪಃ ॥ ೫೫ ॥

ಅಜ್ಞಾನಕೃತಪಾಪಾನಾಮಸ್ಮಾಕಂ ಕ್ಷಂತುಮರ್ಹಸಿ ।
ಸಮಯಃ ಕೃತೋ ಮಯಾ ರಾಜ್ಞಾ ರಾಮೇಣಾಮಿತತೇಜಸಾ ॥ ೫೬ ॥

ಯಸ್ತದಾನೀಂ ಮಹಾಭಾಗ ತಮದ್ಯಾಪಿ ನ ಲಂಘಯೇ ।
ಯಾಸ್ಯಾಮಿ ನಿಖಿಲೈರದ್ಯ ಕಪಿಭಿರ್ನೃಪನಂದನ ॥ ೫೭ ॥

೫೩-೫೪. ಎಲೈ ಕಪಿಯೇ! ನೀನು ಬಾರದಿದ್ದಲ್ಲಿ ಶ್ರೀರಾಮನ ಈ ಮಾತನ್ನು ಕೇಳು;—“ವಾಲಿಯಂತೆ ಸುಗ್ರೀವನನ್ನೂ (ಯಮನ ಗೃಹವನ್ನು) ಮೃತ್ಯು ಗೃಹವನ್ನೈದಿಸುವೆನು. ಯಾವುದರಿಂದ ಕಪಿಯಾದ ವಾಲಿಯು ಸಂಹೃತನಾದನೋ, ನಮ್ಮ ಆ ಬಾಣವು ಇನ್ನೂ ಕೈಯಲ್ಲಿ ಇರುತ್ತದೆ;” ಎಂದು ಲಕ್ಷ್ಮಣನ ಕಪಿಗಳಿಗೊಡೆಯನಾದ ಸುಗ್ರೀವನಿಗೆ ಹೇಳಿದನು.

೫೫. ಮಂತ್ರಿಯಿಂದ ಬುದ್ಧಿವಾದವನ್ನು ಹೇಳಿಸಿಕೊಂಡ, ಕಪಿರಾಜನಾದ ಸುಗ್ರೀವನು ಹೊರಕ್ಕೆ ಬಂದು, ಲಕ್ಷ್ಮಣನಿಗೆರಗಿದನು ಮತ್ತು ಮಹಾತ್ಮನಾದ ಲಕ್ಷ್ಮಣನಿಗೆ ಇಂತು ಹೇಳಿದನು.

೫೬-೫೭ “ತಿಳುವಳಿಕೆಯಿಲ್ಲದೇ ಮಾಡಿದ ನಮ್ಮ ತಪ್ಪನ್ನು ಕ್ಷಮಿಸುವುದು, ನಾನು ಅಪಾರವಾದ ತೇಜಸ್ಸುಳ್ಳ, ರಾಜನಾದ ಶ್ರೀ ರಾಮನೊಡನೆ ಯಾವ ಒಪ್ಪಂದವನ್ನು ಆಗ ಮಾಡಿಕೊಂಡೆನೋ, ಎಲೈ ಪುಣ್ಯಾತ್ಮನೇ! ಅದನ್ನು ಈಗಲೂ ಮೀರುವುದಿಲ್ಲ. ಎಲೈ ರಾಜಕುಮಾರನೇ! ಮಹಾವೀರನೇ! ನಿನ್ನೊಡನೆ ಇಂದ

ತ್ವಯಾ ಸಹ ಮಹಾವೀರ ರಾಮಪಾರ್ಶ್ವಂ ನ ಸಂಶಯಃ ।
ಮಾಂ ದೃಷ್ಟ್ವಾ ತತ್ರ ಕಾಕುತ್ಸ್ಥೋ ಯದ್ವಕ್ಷ್ಯತಿ ಚ ಮಾಂ ಪ್ರತಿ ॥ ೫೮ ॥

ತತ್ಸರ್ವಂ ಶಿರಸಾ ಗೃಹ್ಯ ಕರಿಷ್ಯಾಮಿ ನ ಸಂಶಯಃ ।
ಸಂತಿ ಮೇ ಹರಯಃ ಶೂರಾಃ ಸೀತಾನ್ವೇಷಣಕರ್ಮಣಿ ॥ ೫೯ ॥

ತಾನ್ಯಹಂ ಪ್ರೇಷಯಿಷ್ಯಾಮಿ ದಿಕ್ಷು ಸರ್ವಾಸು ಪಾರ್ಥಿವ ।
ಇತ್ಯುಕ್ತಃ ಕಪಿರಾಜೇನ ಸುಗ್ರೀವೇಣ ಸ ಲಕ್ಷ್ಮಣಃ ॥ ೬೦ ॥

ಯಾಹಿ ಶೀಘ್ರಂ ಗಮಿಷ್ಯಾಮೋ ರಾಮಪಾರ್ಶ್ವಮಿತೋಽಧುನಾ ।
ಸೇನಾ ಚಾಹೂಯತಾಂ ವೀರ ಋಕ್ಷಾಣಾಂ ಹರಿಣಾಮಪಿ ॥ ೬೧ ॥

ಯಾನ್ದೃಷ್ಟ್ವಾ ಪ್ರೀತಿರಭ್ಯೇತಿ ರಾಘವಸ್ತೇ ಮಹಾಮತೇ ।
ಇತ್ಯುಕ್ತೋ ಲಕ್ಷ್ಮಣೇನಾಥ ಸುಗ್ರೀವಃ ಸ ತು ವೀರ್ಯವಾನ್ ॥ ೬೨ ॥

ಎಲ್ಲ ಕಪಿಗಳಿಂದಲೂ ಕೂಡಿಕೊಂಡು, ಶ್ರೀರಾಮನ ಹತ್ತಿರಕ್ಕೆ ಹೋಗುವೆನು. ಈ ವಿಷಯದಲ್ಲಿ ಸಂಶಯವಿಲ್ಲವು. ಅಲ್ಲಿ ಕಾಕುತ್ಸ್ಥನು ನನ್ನನ್ನು ಕಂಡು, ನನಗೆ ಯಾವುದನ್ನು ಅಪ್ಪಣೆಮಾಡುವನೋ, ಅವೆಲ್ಲವನ್ನೂ ತಲೆಯಮೇಲೆ ಹೊತ್ತು ಕೊಂಡು ನಡೆಸುವೆನು. ಈ ವಿಷಯದಲ್ಲಿ ಸಂದೇಹವಿಲ್ಲವು. ಸೀತಾದೇವಿಯನ್ನು ಹುಡುಕುವ ವಿಷಯದಲ್ಲಿ ನನ್ನ ಭೃತ್ಯರಾದ, ಶೂರರಾದ ಕಪಿಗಳಿರುತ್ತಾರೆ.

೬೦. ಎಲೈ ಪಾರ್ಥಿವನೇ ! ನಾನು ಅವರನ್ನು ಎಲ್ಲ ದಿಕ್ಕುಗಳಲ್ಲಿಯೂ ಕಳುಹಿಸಿ ಕೊಡುವೆನು, ” ಎಂದು ಕಪಿರಾಜನಾದ ಸುಗ್ರೀವನು ಆ ಲಕ್ಷ್ಮಣನಿಗೆ ಹೇಳಿದನು.

೬೧–೬೨. “ ಎಲೈ ವೀರನೆ ! ಹೊರಡು; ಈಗಲೇ ಇಲ್ಲಿಂದ ಬೇಗನೇ ಶ್ರೀರಾಮನ ಸಮೀಪಕ್ಕೆ ಹೋಗುವ; ಕರಡಿಗಳ ಮತ್ತು ಕಪಿಗಳ ಸೇನೆಯನ್ನು ಕರೆಯಿಸು.

ಪಾರ್ಶ್ವಸ್ಥಂ ಯುವರಾಜಾನಮಂಗದಂ ಸಂಜ್ಞಯಾಽಬ್ರವೀತ್ ।
ಸೋಽಪಿ ನಿರ್ಗತ್ಯ ಸೇನಾನೀಮಾಹ ಸೇನಾಪತಿಂ ತದಾ ॥ ೬೩ ॥

ತೈರಾಹೂತಾಃ ಸಮಾಕೃಷ್ಯ ಋಕ್ಷವಾನರಕೋಟಯಃ ।
ಗುಹಾಸ್ಥಾಶ್ಚ ಗಿರಿಸ್ಥಾಶ್ಚ ವೃಕ್ಷಸ್ಥಾಶ್ಚೈವ ವಾನರಾಃ ॥ ೬೪ ॥

ತೈಃ ಸಾರ್ಧಂ ಪರ್ವತಾಕಾರೈರ್ವಾನರೈರ್ಭೀಮವಿಕ್ರಮೈಃ ।
ಸುಗ್ರೀವಃ ಶೀಘ್ರಮಾಗತ್ಯ ವವಂದೇ ರಾಘವಂ ತದಾ ॥ ೬೫ ॥

ಲಕ್ಷ್ಮಣೋಽಪಿ ನಮಸ್ಕೃತ್ಯ ರಾಮಂ ಭ್ರಾತರಮಬ್ರವೀತ್ ।
ಪ್ರಸಾದಂ ಕುರು ಸುಗ್ರೀವೇ ವಿನೀತೇ ಚಾಧುನಾ ನೃಪ ॥ ೬೬ ॥

ಎಲೈ ಮಹಾಮತಿಯೇ ! ನಿನ್ನವರಾರನ್ನು ನೋಡಿ ಶ್ರೀರಾಮನು ಸಂತೋಷ ಗೊಳ್ಳುವನೋ, ಅವರನ್ನು ಬರಮಾಡು ;" ಎಂದು ಸುಗ್ರೀವನಿಗೆ ಲಕ್ಷ್ಮಣನು ಹೇಳಲು, ಶೂರನಾದ ಆ ಸುಗ್ರೀವನು ಬಳಿಕ ಪಕ್ಕದಲ್ಲಿದ್ದ ಅಂಗದನಿಗೆ ಸಂಕೇತ ದಿಂದ ಹೇಳಿದನು- ಅವನೂ ಆಗ ಹೋಗಿ ಸೇನಾನಿಗೂ, ಸೇನಾಪತಿಗೂ ಹೇಳಿದನು.

೬೪. ಅವರಿಂದ ಕರೆಯಲ್ಪಟ್ಟ, ಅನೇಕ ಕೋಟಿ ಸಂಖ್ಯಾಕರಾದ ಕರಡಿಗಳು, ಕಪಿಗಳು ಗುಹೆಗಳಲ್ಲಿದ್ದವರು, ಬೆಟ್ಟಗಳಲ್ಲಿದ್ದವರು, ಮರಗಳಲ್ಲಿದ್ದವರು–ಈ ಎಲ್ಲ ವಾನರರೂ ಒಟ್ಟು ಸೇರಿದರು.

೬೫. ಅತ್ಯಂತ ಪರಾಕ್ರಮಿಗಳಾದ, ಪರ್ವತದ ಆಕಾರದಂತೆ ಆಕಾರವುಳ್ಳ ವಾನರರಿಂದ ಕೂಡಿ ಕೊಂಡು ಸುಗ್ರೀವನು ಶ್ರೀರಾಮಚಂದ್ರನ ಸಮೀಪಕ್ಕೆ ಬಂದು, ಶ್ರೀರಾಘವನಿಗೆ ಪೊಡಮಟ್ಟನು.

೬೬. ಆಗ ಲಕ್ಷ್ಮಣನು ಅಣ್ಣನಾದ ಶ್ರೀರಾಮನಿಗೆರಗಿ, ಇಂತು ಬಿನ್ನವಿಸಿದನು. "ಎಲೈ ನೃಪನೆ ! ಈಗ ವಿನೀತನಾದ ಸುಗ್ರೀವನಲ್ಲಿ (ಪ್ರಸನ್ನನಾಗು) ಅನುಗ್ರಹವನ್ನು ತೋರು."

ಇತ್ಯುಕ್ತೋ ರಾಘವಸ್ತೇನ ಭ್ರಾತ್ರಾ ಸುಗ್ರೀವಮಬ್ರವೀತ್ ।
ಆಗಚ್ಛಾತ್ರ ಮಹಾವೀರ ಸುಗ್ರೀವ ಕುಶಲಂ ತವ ॥ ೬೭ ॥

ಶ್ರುತ್ವೇತ್ಥಂ ರಾಮವಚನಂ ಪ್ರಸನ್ನಂ ಚ ನರಾಧಿಪಮ್ ।
ಶಿರಸ್ಯಂಜಲಿಮಾದಾಯ ಸುಗ್ರೀವೋ ರಾಮಮಬ್ರವೀತ್ ॥ ೬೮ ॥

ತದಾ ಮೇ ಕುಶಲಂ ರಾಜನ್ಸೀತಾದೇವೀ ತವ ಪ್ರಭೋ ।
ಅನ್ವಿಷ್ಯ ತು ಯದಾ ದತ್ತಾ ಮಯಾ ಭವತಿ ನಾನ್ಯಥಾ ॥ ೬೯ ॥

ಇತ್ಯುಕ್ತೇ ವಚನೇ ತೇನ ಹನೂಮಾನ್ಮಾರುತಾತ್ಮಜಃ ।
ನತ್ವಾ ರಾಮಂ ಬಭಾಷ್ಯೈನಂ ಸುಗ್ರೀವಂ ಕಪಿನಾಯಕಮ್ ॥ ೭೦ ॥

ಶೃಣು ಸುಗ್ರೀವ ಮೇ ವಾಕ್ಯಂ ರಾಜಾಯಂ ದುಃಖಿತೋ ಭೃಶಮ್ ।
ಸೀತಾವಿಯೋಗೇನ ಸದಾ ನಾಶ್ನಾತಿ ಚ ಫಲಾದಿಕಮ್ ॥ ೭೧ ॥

೬೭–೬೮. ಇಂತು ತಮ್ಮನು ಬಿನ್ನವಿಸಲು, ಶ್ರೀರಾಮನು ಸುಗ್ರೀವನಿಗೆ ಇಂತು ಹೇಳಿದನು. "ಎಲೈ ಮಹಾವೀರನಾದ ಸುಗ್ರೀವನೆ! ಇಲ್ಲಿ ಬಾ; ನಿನಗೆ ಕುಶಲವೇ?" ಎಂಬ ಶ್ರೀರಾಮ ವಚನವನ್ನು ಸುಗ್ರೀವನು ಕೇಳಿ, ಶ್ರೀರಾಮನು ಪ್ರಸನ್ನನಾಗಿರುವುದನ್ನರಿತು, ತಲೆಯಲ್ಲಿ ಕೈಜೋಡಿಸಿ, ಶ್ರೀರಾಮನಿಗೆ ಇಂತೆಂದನು.

೬೯. "ಎಲೈ ಪ್ರಭುವೇ! ಎಲೈ ರಾಯನೇ! ನಾನು ಯಾವಾಗ ನಿನ್ನ ಮಡದಿಯಾದ ಸೀತಾದೇವಿಯನ್ನು ಹುಡುಕಿ ನಿನಗೆ ಒಪ್ಪಿಸುವೆನೋ, ಆಗ ನನಗೆ ಕುಶಲವು. ಬೇರೆ ಇಲ್ಲವು".

೭೦. ಇಂತು ಆ ಸುಗ್ರೀವನು ಬಿನ್ನವಿಸಲು, ವಾಯುಸುತನಾದ ಹನೂಮಂತನು ಶ್ರೀರಾಮನ ಚರಣಗಳಿಗೆರಗಿ, ಕಪಿಗಳಿಗೊಡೆಯನಾದ ಸುಗ್ರೀವನಿಗೆ ಹೇಳಿದನು.

೭೧. "ಎಲೈ ಪ್ರಭುವಾದ ಸುಗ್ರೀವನೇ! ನನ್ನ ಮಾತನ್ನು ಕೇಳು, ಈ ಪ್ರಭುವಾದ ಶ್ರೀರಾಮನು ಸೀತಾದೇವಿಯ ವಿರಹದಿಂದ ಬಹುವಾಗಿ ದುಃಖಗೊಂಡಿರುತ್ತಾನೆ ಹಣ್ಣೇ ಮೊದಲಾದ ಆಹಾರವನ್ನು ತಿನ್ನುತ್ತಿಲ್ಲವು.

ಅಸ್ಯ ದುಃಖೇನ ಸತತಂ ಲಕ್ಷ್ಮಣೋಽಯಂ ಸುದುಃಖಿತಃ ।
ಏತಯೋರತ್ರ ಯಾವಸ್ಥಾ ತಾಂ ಶ್ರುತ್ವಾ ಭರತೋಽನುಜಃ ॥ ೭೨

ದುಃಖೀ ಭವತಿ ತದ್ದುಃಖಾದ್ದುಃಖಂ ಪ್ರಾಪ್ನೋತಿ ತಜ್ಜನಃ ।
ಯತ ಏವಮತೋ ರಾಜನ್ಸೀತಾನ್ವೇಷಣಮಾಚರ ॥ ೭೩ ॥

ಇತ್ಯುಕ್ತೇ ವಚನೇ ತತ್ರ ವಾಯುಪುತ್ರೇ ಹನೂಮತಿ ।
ಜಾಂಬವಾನತಿತೇಜಸ್ವೀ ನತ್ವಾ ರಾಮಂ ಪುರಃ ಸ್ಥಿತಃ ॥ ೭೪ ॥

ಸ ಪ್ರಾಹ ಕಪಿರಾಜಾನಂ ನೀತಿಮಾನ್ನೀತಿಮದ್ವಚಃ ।
ಯದುಕ್ತಂ ವಾಯುಪುತ್ರೇಣ ತತ್ತಥೇತ್ಯವಗಚ್ಛ ಭೋಃ ॥ ೭೫ ॥

೭೨-೭೩. ಇವನ ದುಃಖದಿಂದ ಈ ಲಕ್ಷ್ಮಣನೂ ಯಾವಾಗಲೂ ಬಹು ವ್ಯಸನಗೊಂಡಿರುತ್ತಾನೆ. ಇಲ್ಲಿ ಇವರೀರ್ವರ ಅವಸ್ಥೆ ಯಾವುದೋ, ಅದನ್ನು ಕೇಳಿ, ತಮ್ಮನಾದ ಭರತನು ದುಃಖವುಳ್ಳವನಾಗುತ್ತಾನೆ. ಅವನ ದುಃಖದಿಂದ ಅವನ ನಂಟರೂ, ದೇಶದ ಪ್ರಜೆಗಳೆಲ್ಲರೂ ದುಃಖವನ್ನೆಯ್ದುವರು ಯಾವ ಕಾರಣದಿಂದಿಂತು ಇರುವುದೋ, ಅದರಿಂದ ಎಲೈ ಸ್ವಾಮಿಯೇ ! ಸೀತಾನ್ವೇಷಣ ಕಾರ್ಯವನ್ನು ನಡೆಸು."

೭೪. ಅಲ್ಲಿ ವಾಯು ತನಯನಾದ ಹನುಮಂತನು ಈ ರೀತಿ ಹೇಳಲು, ಅತ್ಯಂತ ತೇಜಸ್ವಿಯಾದ ಜಾಂಬವಂತನು ಶ್ರೀರಾಮನಿಗೆ ನಮಸ್ಕರಿಸಿ, ಎದುರಲ್ಲಿ ನಿಂತು ಕೊಂಡನು.

೭೫. ನೀತಿವಂತನಾದ ಅವನೂ ಕಪಿರಾಜನಿಗೆ ನೀತಿಯುಕ್ತವಾದ ಮಾತನ್ನು ಹೇಳಿದನು:–" ಅಯ್ಯಾ ! ವಾಯುಪುತ್ರನೇನನ್ನು ಹೇಳಿದನೋ, ಅದು ಹಾಗೆಯೇ ಸರಿಯೆಂದು ತಿಳಿ.

ಯತ್ರ ಕ್ವಾಪಿ ಸ್ಥಿತಾ ಸೀತಾ ರಾಮಭಾರ್ಯಾ ಯಶಸ್ವಿನೀ ।
ಪತಿವ್ರತಾ ಮಹಾಭಾಗಾ ವೈದೇಹೀ ಜನಕಾತ್ಮಜಾ ॥ ೭೬ ॥

ಅದ್ಯಾಪಿ ವೃತ್ತಸಂಪನ್ನಾ ಇತಿ ಮೇ ಮನಸಿ ಸ್ಥಿತಮ್ ।
ನ ಹಿ ಕಲ್ಯಾಣಚಿತ್ತಾಯಾಃ ಸೀತಾಯಾಃ ಕೇನ ಚಿದ್ಭುವಿ ॥೭೭ ॥

ಪರಾಭವೋಽಸ್ತಿ ಸುಗ್ರೀವ ಪ್ರೇಷಯಾದ್ಯೈವ ವಾನರಾನ್ ।
ಇತ್ಯುಕ್ತಸ್ತೇನ ಸುಗ್ರೀವಃ ಪ್ರೀತಾತ್ಮಾ ಕಪಿನಾಯಕಃ ॥ ೭೮ ॥

ಪಶ್ಚಿಮಾಯಾಂ ದಿಶಿ ತದಾ ಪ್ರೇಷಯಾಮಾಸ ತಾನ್ಕಪೀನ್ ।
ಅನ್ವೇಷ್ಟುಂ ರಾಮಭಾರ್ಯಾಂ ತಾಂ ಮಹಾಬಲಪರಾಕ್ರಮಃ ॥ ೭೯ ॥

ಉತ್ತರಸ್ಯಾಂ ದಿಶಿ ತದಾ ನಿಯುತಾನ್ವಾನರಾನಸೌ ।
ಪ್ರೇಷಯಾಮಾಸ ಧರ್ಮಾತ್ಮಾ ಸೀತಾನ್ವೇಷಣಕರ್ಮಣಿ ॥೮೦ ॥

೭೬–೭೮. "ಯಶೋವತಿಯೂ, ಪತಿವ್ರತೆಯೂ, ಪುಣ್ಯವಂತಳೂ, ವೈದೇಹಿಯೂ, ಜನಕರಾಜನ ಕುವರಿಯೂ, ಶ್ರೀರಾಮನ ಮಡದಿಯೂ ಆದ ಸೀತಾದೇವಿಯು ಯಾವುದೋ ಒಂದೆಡೆಯಲ್ಲಿರುತ್ತಾಳೆ; ಈಗಲೂ ಸಚ್ಚರಿತೆಯಿಂದ ಕೂಡಿಯೇ ಇದ್ದಾಳೆ," ಎಂದು ನನ್ನ ಮನಸ್ಸಿನಲ್ಲಿದೆ. ಮಂಗಳಚಿತ್ತೆಯಾದ ಸೀತಾದೇವಿಗೆ ಯಾವನಿಂದಲೂ ಭೂಲೋಕದಲ್ಲಿ ತಿರಸ್ಕಾರವುಂಟಾಗುವುದಿಲ್ಲವು. ಎಲೈ ಸುಗ್ರೀವನೇ ! ಇಂದೇ ವಾನರರನ್ನು ಕಳುಹಿಸು ;" ಎಂದು ಜಾಂಬವಂತನು ಹೇಳಲು, ಕಪಿನಾಯಕನಾದ ಸುಗ್ರೀವನು ಮನದಲ್ಲಿ ಹಿಗ್ಗಿದನು.

೭೯. ಮಹಾಬಲಪರಾಕ್ರಮನಾದ ಸುಗ್ರೀವನು ಆಗ ಶ್ರೀರಾಮಪತ್ನಿಯನ್ನು ಪಶ್ಚಿಮದಿಕ್ಕಿನಲ್ಲಿ ಹುಡುಕಲು, ಆ ಕಪಿಗಳನ್ನು ಕಳುಹಿಸಿದನು.

೮೦. ಧರ್ಮಾತ್ಮನಾದ ಸುಗ್ರೀವನು ಆ ಸೀತಾದೇವಿಯನ್ನು ಹುಡುಕುವ ಕೆಲಸದಲ್ಲಿ ಉತ್ತರದಿಕ್ಕಿಗೆ ಆಗ ಲಕ್ಷಾಂತರ ಕಪಿಗಳನ್ನು ಕಳುಹಿಸಿದನು.

ಪೂರ್ವಸ್ಯಾಂ ದಿಶಿ ಕಪೀಂಶ್ಚ ಕಪಿರಾಜಃ ಪ್ರತಾಪವಾನ್ ।
ಪ್ರೇಷಯಾಮಾಸ ರಾಮಸ್ಯ ಭಾರ್ಯಾನ್ವೇಷಣಾಯ ವೈ ॥ ೮೧ ॥

ಇತಿ ತಾನ್ಪ್ರೇಷಯಾಮಾಸ ವಾನರಾನ್ವಾನರಾಧಿಪಃ ।
ಸುಗ್ರೀವೋ ವಾಲಿಪುತ್ರಂ ತಮಂಗದಂ ಪ್ರಾಹ ಬುದ್ಧಿಮಾನ್ ॥ ೮೨ ॥

ತ್ವಂ ಗಚ್ಛ ದಕ್ಷಿಣಂ ದೇಶಂ ಸೀತಾನ್ವೇಷಣಕರ್ಮಣಿ ।
ಜಾಂಬವಾಂಶ್ಚ ಹನೂಮಾಂಶ್ಚ ಮೈಂದೋ ದ್ವಿವಿದ ಏವ ಚ ॥ ೮೩ ॥

ನೀಲಾದ್ಯಾಶ್ಚೈವ ಹರಯೋ ಮಹಾಬಲಪರಾಕ್ರಮಾಃ ।
ಅನುಯಾಸ್ಯಂತಿ ಗಚ್ಛಂತಂ ತ್ವಾಮದ್ಯ ಮಮ ಶಾಸನಾತ್ ॥ ೮೪ ॥

ಅಚಿರಾದೇವ ಯೂಯಂ ತಾಂ ದೃಷ್ಟ್ವಾ ಸೀತಾಂ ಯಶಸ್ವಿನೀಮ್ ।
ಸ್ಥಾನತೋ ರೂಪತಶ್ಚೈವ ಶೀಲತಶ್ಚ ವಿಶೇಷತಃ ॥ ೮೫ ॥

---

೮೧. ಪೂರ್ವದಿಕ್ಕಿನಲ್ಲಿ ಶ್ರೀರಾಮನ ಮಡದಿಯನ್ನು ಹುಡುಕುವ ಸಲುವಾಗಿ, ಪ್ರತಾಪಶಾಲಿಯಾದ ಕಪಿರಾಜನು ಅನೇಕ ಕಪಿಗಳನ್ನು ಕಳುಹಿಸಿದನು.

೮೨. ಇಂತು ವಾನರರೊಡೆಯನಾದ, ಬುದ್ಧಿವಂತನಾದ ಸುಗ್ರೀವನು ಆ ವಾನರರನ್ನು ಕಳುಹಿಸಿ, ವಾಲಿಪುತ್ರನಾದ ಆ ಅಂಗದನಿಗೆ ಹೇಳಿದನು.

೮೩–೮೪. ‘ಎಲೈ ಅಂಗದನೇ ! ನೀನು ಸೀತಾದೇವಿಯನ್ನು ಹುಡುಕುವ ಕೆಲಸದಲ್ಲಿ ದಕ್ಷಿಣದಿಕ್ಕಿಗೆ ಹೋಗು; ಅತ್ಯಂತ ಬಲಪರಾಕ್ರಮವಂತರಾದ ಜಾಂಬವಂತ, ಹನೂಮಂತ, ಮೈಂದ, ದ್ವಿವಿದ, ನೀಲನೇ ಮೊದಲಾದ ಕಪಿಗಳು ಇವರೆಲ್ಲರೂ ನನ್ನ ಅಪ್ಪಣೆಯಿಂದ ಇಂತು ಹೋಗುವ ನಿನ್ನನ್ನು ಹಿಂಬಾಲಿಸುವರು.

೮೫–೮೬. ಎಲೈ ಪುತ್ರಕನೇ ! ನೀವುಗಳು ಬೇಗನೆ ವಿಶೇಷವಾಗಿ ಸ್ಥಾನದಿಂದಲೂ, ರೂಪದಿಂದಲೂ, ಶೀಲದಿಂದಲೂ, ಯಶೋವತಿಯಾದ ಆ ಸೀತಾ

ಕೇನ ನೀತಾ ಚ ಕುತ್ರಾಸ್ತೇ ಜ್ಞಾತ್ವಾತ್ರಾಗಚ್ಛ ಪುತ್ರಕ ।
ಇತ್ಯುಕ್ತಃ ಕಪಿರಾಜೇನ ಪಿತೃವ್ಯೇನ ಮಹಾತ್ಮನಾ ॥ ೮೬ ॥

ಅಂಗದಸ್ತೂರ್ಣಮುತ್ಥಾಯ ತಸ್ಯಾಜ್ಞಾಂ ಶಿರಸಾ ದಧೇ ।
ಇತ್ಯುಕ್ತೋ ದೂರತಃ ಸ್ಥಾಪ್ಯ ವಾನರಾನಥ ಜಾಂಬವಾನ್ ॥ ೮೭ ॥

ರಾಮಂ ಚ ಲಕ್ಷ್ಮಣಂ ಚೈವ ಸುಗ್ರೀವಂ ಮರುತಾತ್ಮಜಮ್ ।
ಏಕತಃ ಸ್ಥಾಪ್ಯ ತಾನಾಹ ನೀತಿಮಾನ್ನೀತಿಮದ್ವಚಃ ॥ ೮೮ ॥

ಶ್ರೂಯತಾಂ ವಚನಂ ಮಹ್ಯಂ ಸೀತಾನ್ವೇಷಣಕರ್ಮಣಿ
ಶ್ರುತ್ವಾ ಚ ತದ್ಗೃಹಾಣ ತ್ವಂ ರೋಚತೇ ಯನ್ನೃಪಾತ್ಮಜ ॥ ೮೯ ॥

ರಾವಣೇನ ಜನಸ್ಥಾನಾನ್ನೀಯಮಾನಾ ತಪಸ್ವಿನೀ ।
ಜಟಾಯುಸಾ ತು ಸಾ ದೃಷ್ಟಾ ಶಕ್ತ್ಯಾ ಯುದ್ಧಂ ಪ್ರಕುರ್ವತಾ ॥ ೯೦ ॥

ದೇವಿಯನ್ನು ಕಂಡು, ಯಾವನಿಂದೊಯ್ಯಲ್ಪಟ್ಟಳು ? ಎಲ್ಲಿರುತ್ತಾಳೆ ? ಎಂಬುದನ್ನು ತಿಳಿದು ಇಲ್ಲಿಗೆ ಬಾ;' ಎಂದು ಮಹಾತ್ಮನೂ, ಚಿಕ್ಕಪ್ಪನೂ ಆದ ಕಪಿರಾಜನು ಅಂಗದನಿಗೆ ಹೇಳಿದನು.

೮೭–೮೮. ಆಗ ಅಂಗದನು ಬೇಗನೆ ಎದ್ದು ನಿಂತು, ಅವನ ಅಪ್ಪಣೆಯನ್ನು ತಲೆಯಿಂದ ಧರಿಸಿದನು. ಇಂತು ಹೇಳಲ್ಪಡುತ್ತಿರಲು, ಬಳಿಕ ಜಾಂಬವಂತನು ಇತರ ಕಪಿಗಳನ್ನು ದೂರದಲ್ಲಿ ನಿಲ್ಲಿಸಿ, ನೀತಿವಂತನಾದ ಅವನು, ರಾಮ, ಲಕ್ಷ್ಮಣ, ಸುಗ್ರೀವ, ಹನುಮಂತರನ್ನು ಒಂದೆಡೆಯಲ್ಲಿ ನಿಲ್ಲಿಸಿ, ನೀತಿಯುಕ್ತವಾದ ಮಾತನ್ನು ಹೇಳಿದನು.

೮೯. ' ಅಯ್ಯಗಳಿರಾ ! ಸೀತಾದೇವಿಯನ್ನು ಹುಡುಕುವ ಕಾರ್ಯದಲ್ಲಿ ನನ್ನ ಮಾತನ್ನು ಕೇಳಿರಿ ; ಎಲೈ ನೃಪಾತ್ಮಜನೇ ! ನೀನು ಕೇಳಿ, ಯಾವುದು ನಿನಗೆ ಸರಿಯೆಂದು ರುಚಿಸುತ್ತದೆಯೋ, ಅದನ್ನು ಆದರಿಸು.

೯೦. ರಾವಣನು ಜನಸ್ಥಾನದಿಂದ ಸೀತಾದೇವಿಯನ್ನು ಅಪಹರಿಸಿಕೊಂಡು ಒಯ್ಯುವಾಗ ಜಟಾಯುವು ಆ (ತಪಸ್ವಿನಿ) ಶೋಚ್ಯೆಯನ್ನು ಕಂಡನು ; ತನಗೆ ಶಕ್ತಿಯಿದ್ದಷ್ಟು ಹೋರಾಡಿದನು

ಭೂಷಣಾನಿ ಚ ದೃಷ್ಟಾನಿ ತಯಾ ಕ್ಷಿಪ್ತಾನಿ ತೇನ ವೈ ।
ತಾನ್ಯಸ್ಮಾಭಿಃ ಪ್ರದೃಷ್ಟಾನಿ ಸುಗ್ರೀವಾಯಾರ್ಪಿತಾನಿ ಚ ॥ ೯೧ ॥

ಜಟಾಯುವಾಕ್ಯಾದ್ರಾಜೇಂದ್ರ ಸತ್ಯಮಿತ್ಯವಧಾರಯ ।
ಏತಸ್ಮಾತ್ಕಾರಣಾತ್ಸೀತಾ ನೀತಾ ತೇನೈವ ರಕ್ಷಸಾ ॥ ೯೨ ॥

ರಾವಣೇನ ಮಹಾಬಾಹೋ ಲಂಕಾಯಾಂ ವರ್ತತೇ ತು ಸಾ ।
ತ್ವಾಂ ಸ್ಮರಂತೀ ತು ತತ್ರಸ್ಥಾ ತ್ವದ್ದುಃಖೇನ ಸುದುಃಖಿತಾ ॥ ೯೩ ॥

ರಕ್ಷಂತೀ ಯತ್ನತೋ ವೃತ್ತಂ ತತ್ರಾಪಿ ಜನಕಾತ್ಮಜಾ ।
ತ್ವದ್ಧ್ಯಾನೇನೈವ ಸ್ವಾನ್ಪ್ರಾಣಾನ್ಧಾರಯಂತೀ ಶುಭಾನನಾ ॥ ೯೪ ॥

---

೯೧. ಆ ಸೀತಾದೇವಿಯು ಕಟ್ಟಿ ಕೆಳಗೆ ಹಾಕಿದ ಒಡವೆಗಳನ್ನೂ ಅವನು ಕಂಡನು. ನಾವು ಅವನ್ನು ಕಂಡು, ತೆಗೆದು ಕೊಂಡು ಬಂದು, ಸುಗ್ರೀವನಿಗೆ ಒಪ್ಪಿಸಿದೆವು.

೯೨. ಎಲೈ ರಾಜೇಂದ್ರನೆ ! ಜಟಾಯುವಿನ ಮಾತಿನಿಂದ ಇದು ಸತ್ಯವೆಂದು ತಿಳಿ; ಈ ಕಾರಣಗಳಿಂದ ಸೀತಾದೇವಿಯನ್ನು ರಕ್ಕಸನಾದ ಆ ರಾವಣನೇ ಅಪಹರಿಸಿಕೊಂಡು ಹೋಗಿರುತ್ತಾನೆ.

೯೩. ಎಲೈ ಮಹಾಬಾಹುವೇ ! ಆ ದೇವಿಯು ಲಂಕೆಯಲ್ಲಿರುತ್ತಾಳೆ. ಅಲ್ಲಿದ್ದವಳು ಯಾವಾಗಲೂ ನಿನ್ನನ್ನೇ ನೆನೆಯುತ್ತಾ ನಿನ್ನ ದುಃಖದಿಂದ ದುಃಖಗೊಂಡಿರುತ್ತಾಳೆ.

೯೪. ಅಲ್ಲಿಯೂ ಜನಕ ಕುವರಿಯು ಬಹು ಕ್ಲೇಶದಿಂದ ತನ್ನ ವೃತ್ತವನ್ನು ಕಾಪಿಟ್ಟುಕೊಂಡಿರುತ್ತಾಳೆ. ಆ ಮಂಗಳ ಮುಖಿಯು ನಿನ್ನನ್ನು ಚಿಂತಿಸುತ್ತಲೇ ಹರಣಗಳನ್ನು ತಾಳಿಕೊಂಡಿರುತ್ತಾಳೆ.

ಸ್ಥಿತಾ ಪ್ರಾಯೇಣ ತೇ ದೇವೀ ಸೀತಾ ದುಃಖಪರಾಯಣಾ ।
ಹಿತಮೇವ ಚ ತೇ ರಾಜನ್ನುದಧೇರ್ಲಂಘನೇ ಕ್ಷಮಮ್ ॥ ೯೫ ॥

ವಾಯುಪುತ್ರಂ ಹನೂಮಂತಂ ತ್ವಮತ್ರಾದೇಷ್ಟುಮರ್ಹಸಿ ।
ತ್ವಂ ಚಾಪ್ಯರ್ಹಸಿ ಸುಗ್ರೀವ ಪ್ರೇಷಿತುಂ ಮರುತಾತ್ಮಜಮ್ ॥ ೯೬ ॥

ತವ್ಯತೇ ಸಾಗರಂ ಗಂತುಂ ವಾನರಾಣಾಂ ನ ವಿದ್ಯತೇ ।
ಬಲಂ ಕಸ್ಯಾಪಿ ವಾ ವೀರ ಇತಿ ಮೇ ಮನಸಿ ಸ್ಥಿತಮ್ ॥ ೯೭ ॥

ಕ್ರಿಯತಾಂ ಮದ್ವಚಃ ಕ್ಷಿಪ್ರಂ ಹಿತಂ ಪಥ್ಯಂ ಚ ನಃ ಸದಾ ।
ಇತ್ಯುಕ್ತೇ ಜಾಂಬವತ್ಯೇವಂ ನೀತಿಮಲ್ಪಾಕ್ಷರಾನ್ವಿತೇ ॥ ೯೮ ॥

ವಾಕ್ಯೇ ವಾನರರಾಜೋಽಸೌ ಶೀಘ್ರಮುತ್ಥಾಯ ಚಾಸನಾತ್ ।
ವಾಯುಪುತ್ರ ಸಮೀಪಂ ತು ತಂ ಗತ್ವಾ ವಾಕ್ಯಮಬ್ರವೀತ್ ॥ ೯೯ ॥

೯೫–೯೬. ನಿನ್ನ ದೇವಿಯಾದ ಸೀತೆಯು ದುಃಖದಲ್ಲಿ ತೊಡಗಿ, ಪ್ರಾಯಶಃ ಜೀವಿಸಿರುತ್ತಾಳೆ. ಎಲೈ ರಾಜನೆ ! ನಿನಗೆ ಹಿತನೂ, ಸಮುದ್ರವನ್ನು ದಾಟುವುದರಲ್ಲಿ ಶಕ್ತನೂ, ವಾಯುಸುತನೂ ಆದ ಹನೂಮಂತನನ್ನು ಈ ವಿಷಯದಲ್ಲಿ ಅಪ್ಪಣೆ ಮಾಡುವುದು. ಎಲೈ ಸುಗ್ರೀವನೇ ! ನೀನೂ ಪವನತನಯನನ್ನೇ ಕಳುಹಿಸುವುದು ಯೋಗ್ಯವಾದುದು.

೯೭. ಎಲೈ ವೀರನೇ ! ಅವನನ್ನುಳಿದು ಸಮುದ್ರವನ್ನು ದಾಟಲು ಈ ಕಪಿಗಳಲ್ಲಿ ಸಾಮರ್ಥ್ಯವು ಯಾರಿಗೂ ಇಲ್ಲವೆಂದು ನನ್ನ ಮನಸ್ಸಿನಲ್ಲಿರುವುದು.

೯೮–೯೯. ನಮಗೆ ಯಾವಾಗಲೂ ಹಿತವೂ, ಪಥ್ಯವೂ, ಆದ ನನ್ನ ನುಡಿಯನ್ನು ಅನುಷ್ಠಿಸು ;' ಇಂತು ಜಾಂಬವಂತನು ಅಲ್ಪಾಕ್ಷರಗಳುಳ್ಳ ಈ ನೀತಿ ವಾಕ್ಯವನ್ನು ಹೇಳಲು, ಈ ಕಪಿರಾಜನಾದ ಸುಗ್ರೀವನು ಪೀಠದಿಂದ ಬೇಗನೆದ್ದು, ಆ ವಾಯುತನಯನ ಹತ್ತಿರಕ್ಕೆ ಹೋಗಿ, ಈ ಮಾತನ್ನು ಹೇಳಿದನು.

ಶೃಣು ಮದ್ವಚನಂ ವೀರ ಹನೂಮಾನ್ಮಾರುತಾತ್ಮಜ ।
ಅಯಮಿಕ್ಷ್ವಾಕುತಿಲಕೋ ರಾಜಾ ರಾಮಃ ಪ್ರತಾಪವಾನ್ ॥ ೧೦೦ ॥

ಪಿತುರಾದೇಶಮಾದಾಯ ಭ್ರಾತೃಭಾರ್ಯಾಸಮನ್ವಿತಃ ।
ಪ್ರವಿಷ್ಟೋ ದಂಡಕಾರಣ್ಯಂ ಸಾಕ್ಷಾದ್ಧರ್ಮಪರಾಯಣಃ ॥ ೧೦೧ ॥

ಸರ್ವಾತ್ಮಾ ಸರ್ವಲೋಕೇಶೋ ವಿಷ್ಣುರ್ಮಾನುಷರೂಪವಾನ್ ।
ಅಸ್ಯ ಭಾರ್ಯಾ ಹೃತಾ ತೇನ ದುಷ್ಟೇನಾಪಿ ದುರಾತ್ಮನಾ ॥ ೧೦೨ ॥

ತದ್ವಿಯೋಗಜ ದುಃಖಾರ್ತೋ ವಿಚಿನ್ವಂಸ್ತಾಂ ವನೇ ವನೇ ।
ತ್ವಯಾ ದೃಷ್ಟೋ ನೃಪಃ ಪೂರ್ವಮಯಂ ವೀರ ಪ್ರತಾಪವಾನ್ ॥ ೧೦೩ ॥

ಏತೇನ ಸಹ ಸಂಗಮ್ಯ ಸಮಯಂ ಚಾಪಿ ಕಾರಿತಮ್ ।
ಅನೇನ ನಿಹತಃ ಶತ್ರುಃ ಮಮ ವಾಲೀ ಮಹಾಬಲಃ ॥ ೧೦೪ ॥

---

೧೦೦. 'ಎಲೈ ವೀರನಾದ ವಾಯುತನಯನಾದ ಹನುಮಂತನೇ ! ನನ್ನ ನುಡಿಯನ್ನಾಲಿಸು; ಇವನು ಇಕ್ಷ್ವಾಕುಗಳಲ್ಲಿ ಅಗ್ಗಳಿಯನಾದ, ಪ್ರತಾಪಶಾಲಿಯಾದ, ದೊರೆಯಾದ ರಾಮನು.

೧೦೧-೦೦೨. ಸಾಕ್ಷಾದ್ಧರ್ಮಸಕ್ತನಾಗಿ ತಂದೆಯ ಅಪ್ಪಣೆಯನ್ನು ಸ್ವೀಕರಿಸಿ, ತಮ್ಮ ಮಡದಿಯರೊಡಗೂಡಿ, ದಂಡಕಾರಣ್ಯವನ್ನು ಹೊಕ್ಕನು. ಸರ್ವ ವಸ್ತುಗಳ ನಿಯಾಮಕನೂ, ಸಕಲವಸ್ತ್ವಂತರ್ಯಾಮಿಯೂ, ಸಕಲಲೋಕ ನಿಯಾಮಕನೂ, ಮನುಷ್ಯರೂಪವನ್ನು ತಾಳಿದ ಸಾಕ್ಷಾದ್ವಿಷ್ಣುರೂಪನಾಗಿರುವವನಿವನು. ಆ ದುರಾತ್ಮನಾದ ದುಷ್ಟನಿಂದ ಇವನ ಮಡದಿಯು ಅಪಹರಿಸಲ್ಪಟ್ಟಳು.

೧೦೩. ಅವಳ ವಿರಹದಿಂದುಂಟಾದ ದುಃಖದಿಂದ ಪೀಡಿತನಾಗಿ, ಅವಳನ್ನು ಪ್ರತಿಯೊಂದು ಕಾಡಿನಲ್ಲಿಯೂ ಹುಡುಕುತ್ತಾ ಬರುತ್ತಲಿದ್ದ, ಪ್ರತಾಪಶಾಲಿಯಾದ ಈ ರಾಜನನ್ನ ಮೊದಲು ನೀನು ನೋಡಿದೆ.

೧೦೪. ಇವನೊಡನೆ ಕೂಡಿ, ನಾವು ಒಪ್ಪಂದವನ್ನೂ, ಪ್ರತಿಜ್ಞೆಯನ್ನೂ ಮಾಡಿದೆವು. ಇವನು ಮಹಾಬಲಶಾಲಿಯಾದ, ನನ್ನ ಹಗೆಯಾದ ವಾಲಿಯನ್ನು ಸಂಹರಿಸಿದವನು.

ಅಸ್ಯ ಪ್ರಸಾದೇನ ಕಪೇ ರಾಜ್ಯಂ ಪ್ರಾಪ್ತಂ ಮಯಾಽಧುನಾ ।
ಮಯಾ ಚ ತತ್ಪ್ರತಿಜ್ಞಾತಂ ಅಸ್ಯ ಸಾಹಾಯ್ಯ ಕರ್ಮಣಿ ॥ ೧೦೫ ॥

ತತ್ಸತ್ಯಂ ಕರ್ತುಮಿಚ್ಛಾಮಿ ತ್ವದ್ಬಲಾನ್ಮಾರುತಾತ್ಮಜ ।
ಉತ್ತೀರ್ಯ ಸಾಗರಂ ವೀರ ದೃಷ್ಟ್ವಾ ಸೀತಾಮನಿಂದಿತಾಮ್ ॥ ೧೦೬ ॥

ಭೂಯಸ್ತರ್ತುಂ ಬಲಂ ನಾಸ್ತಿ ವಾನರಾಣಾಂ ತ್ವಯಾ ವಿನಾ ।
ಅತಸ್ತ್ವಮೇವ ಜಾನಾಸಿ ಸ್ವಾಮಿಕಾರ್ಯಂ ಮಹಾಮತೇ ॥ ೧೦೭ ॥

ಬಲವಾನ್ನೀತಿಮಾಂಶ್ಚೈವ ದಕ್ಷಸ್ತ್ವಂ ದೌತ್ಯಕರ್ಮಣಿ ।
ತೇನೈವಮುಕ್ತೋ ಹನುಮಾನ್ಸುಗ್ರೀವೇಣ ಮಹಾತ್ಮನಾ ॥ ೧೦೮ ॥

ಸ್ವಾಮಿನೋಽರ್ಥೇ ನ ಕಿಂ ಕುರ್ಯಾಮೀದೃಶಂ ಕಿಂ ತು ಭಾಷಸೇ ।
ಇತ್ಯುಕ್ತೋ ವಾಯುಪುತ್ರೇಣ ರಾಮಸ್ತಂ ಪುರತಃ ಸ್ಥಿತಮ್ ॥ ೧೦೯ ॥

---

೧೦೫. ಎಲೈ ಕಪಿಯೇ ! ಈಗ ಇವನ ಅನುಗ್ರಹದಿಂದ, ನನಗೆ ರಾಜ್ಯವು ದೊರಕಿತು. ನಾನೂ ಇವನಿಗೆ ಸಹಾಯಮಾಡುವ ಕೆಲಸದಲ್ಲಿ ಪ್ರತಿಜ್ಞೆ ಮಾಡಿರುತ್ತೇನೆ.

೧೧೬–೧೦೭. ಎಲೈ ವಾಯುಪುತ್ರನೇ ! ಆ ಸಹಾಯವನ್ನು ನಿನ್ನ ಬಲದಿಂದ ಸತ್ಯವಾಗಿ ಮಾಡಲಪೇಕ್ಷಿಸುತ್ತೇನೆ. ಎಲೈ ವೀರನೇ ! ನಿನ್ನಿಂದ ಹೊರತು ಮತ್ತಾವ ವಾನರರಿಗೂ ಸಾಗರವನ್ನು ದಾಟಿ, ಪರಮಪವಿತ್ರಳಾದ ಸೀತಾದೇವಿಯನ್ನು ಕಂಡು, ಹಿಂದಿರುಗಿ ದಾಟಲು ಸಾಮರ್ಥ್ಯವಿಲ್ಲವು. ಎಲೈ ಮಹಾಮತಿಯೇ ! ಆದುದರಿಂದ ಒಡೆಯನ ಕೆಲಸವನ್ನರಿತವನು ನೀನೇ ಆಗಿರುತ್ತೀಯೆ.

೧೦೮–೧೧೦. ಅಯ್ಯಾ ! ನೀನು ಬಲವಂತನೂ, ನೀತಿವಂತನೂ ಆಗಿರುತ್ತೀಯಲ್ಲದೆ, ದೌತ್ಯಕಾರ್ಯದಲ್ಲಿ ಸಮರ್ಥನು;' ಇಂತು ಆ ಮಹಾತ್ಮನಾದ ಸುಗ್ರೀವನಿಂದ ಹೇಳಿಸಿಕೊಳ್ಳಲ್ಪಟ್ಟ ಹನುಮಂತನು, 'ಒಡೆಯನ ವಿಷಯದಲ್ಲಿ ಏನನ್ನು ತಾನೆ ಮಾಡುವುದಿಲ್ಲ; (ಎಲ್ಲವನ್ನೂ ಮಾಡುವೆನು.) ಇಂತು ಏಕೆ ಮಾತನಾಡುವೆ?' ಎಂದು ವಾಯುಪುತ್ರನು ನುಡಿಯಲು, ಎದುರಿನಲ್ಲಿದ್ದ ಅವನಿಗೆ ರಘು

ಪ್ರಾಹ ವಾಕ್ಯಂ ಮಹಾಬಾಹುರ್ಬಾಷ್ಪಸಂಪೂರ್ಣಲೋಚನಃ ।
ಸೀತಾಂ ಸ್ಮೃತ್ವಾ ಸುದುಃಖಾರ್ತಃ ಕಾಲಯುಕ್ತಮಮಿತ್ರಜಿತ್ ॥ ೧೧೦ ॥

ತ್ವಯಿ ಭಾರಂ ಸಮಾರೋಪ್ಯ ಸಮುದ್ರತರಣಾದಿಕಮ್ ।
ಸುಗ್ರೀವಃ ಸ್ಥಾಪ್ಯತೇ ಹ್ಯತ್ರ ಮಯಾ ಸಾರ್ಧಂ ಮಹಾಮತೇ ॥ ೧೧೧ ॥

ಹನೂಮಂಸ್ತತ್ರ ಗಚ್ಛ ತ್ವಂ ಮತ್ಪ್ರೀತ್ಯಾ ಕೃತನಿಶ್ಚಯಃ ।
ಜ್ಞಾತೀನಾಂ ಚ ತಥಾ ಪ್ರೀತ್ಯೈ ಸುಗ್ರೀವಸ್ಯ ವಿಶೇಷತಃ ॥ ೧೧೨ ॥

ಪ್ರಾಯೇಣ ರಕ್ಷಸಾ ನೀತಾ ಭಾರ್ಯಾ ಮೇ ಜನಕಾತ್ಮಜಾ ।
ತತ್ರ ಗಚ್ಛ ಮಹಾವೀರ ಯತ್ರ ಸೀತಾ ವ್ಯವಸ್ಥಿತಾ ॥ ೧೧೩ ॥

ಗಳನ್ನು ಗೆಲ್ಲುವ, ಮಹಾಬಾಹುವಾದ ಶ್ರೀರಾಮಚಂದ್ರನು ಸೀತಾದೇವಿಯನ್ನು ಸ್ಮರಿಸಿಕೊಂಡು, ಬಹುಶೋಕದಿಂದ ಬಾಧೆಗೊಂಡು, ಕಂಬನಿದುಂಬಿದ ಕಣ್ಣುಗಳುಳ್ಳವನಾಗಿ, ಕಾಲೋಚಿತವಾದ ವಾಕ್ಯವನ್ನು ಹೇಳಿದನು.

೧೧೧. ‘ ಎಲೈ ಮಹಾಮತಿಯಾದ ಆಂಜನೇಯನೇ ! ಸಮುದ್ರವನ್ನು ದಾಟುವುದೇ ಮೊದಲಾದ ಹೊರೆಯನ್ನು ನಿನ್ನಲ್ಲಿರಿಸಿ, ಸುಗ್ರೀವನು ನನ್ನೊಡನೆ ಇಲ್ಲಿಯೇ ಇರುವನು.

೧೧೨. ಎಲೈ ಹನುಮಂತನೇ ! ನನ್ನಲ್ಲಿ ಪ್ರೀತಿಯಿಂದ ಹೊರಡುವುದನ್ನು ನಿಶ್ಚಯಿಸಿದವನಾಗಿ, ನಿನ್ನ ಜ್ಞಾತಿಗಳ, ವಿಶೇಷದಿಂದ ಸುಗ್ರೀವನ ಪ್ರೀತಿಗೋಸ್ಕರವಾಗಿ ಅಲ್ಲಿಗೆ ಹೋಗು.

೧೧೩. ನನ್ನ ಮಡದಿ, ಜನಕ ಕುಮಾರಿ ಸೀತೆಯನ್ನು ರಾಕ್ಷಸನೇ ಅಪಹರಿಸಿಕೊಂಡು ಹೋಗಿರಬೇಕು. ಎಲೈ ಮಹಾವೀರನೇ ! ಸೀತೆಯೆಲ್ಲಿರುವಳೋ, ಅಲ್ಲಿಗೆ ಹೋಗು.

ಯದಿ ಪೃಚ್ಛತಿ ಸಾದೃಶ್ಯಂ ಮದಾಕಾರಮಶೇಷತಃ ।
ಅತೋ ನಿರೀಕ್ಷ್ಯ ಮಾಂ ಭೂಯೋ ಲಕ್ಷ್ಮಣಂ ಚ ಮಮಾನುಜಂ ॥೧೧೪॥

ಜ್ಞಾತ್ವಾ ಸರ್ವಾಂಗಗಂ ಲಕ್ಷ್ಮ ಸಕಲಂ ಚಾವಯೋರಿಹ ।
ನಾನ್ಯಥಾ ವಿಶ್ವಸೇತ್ಸೀತಾ ಇತಿ ಮೇ ಮನಸಿ ಸ್ಥಿತಮ್ ॥ ೧೧೫ ॥

ಇತ್ಯುಕ್ತೋ ರಾಮದೇವೇನ ಪ್ರಭಂಜನಸುತೋ ಬಲೀ ।
ಉತ್ಥಾಯ ತತ್ಪುರಃ ಸ್ಥಿತ್ವಾ ಕೃತಾಂಜಲಿರುವಾಚ ತಮ್ ॥ ೧೧೬ ॥

ಜಾನಾಮಿ ಲಕ್ಷಣಂ ಸರ್ವಂ ಯುವಯೋಸ್ತು ವಿಶೇಷತಃ ।
ಗಚ್ಛಾಮಿ ಕಪಿಭಿಃ ಸಾರ್ಧಂ ತ್ವಂ ಶೋಕಂ ಮಾ ಕುರುಷ್ವ ವೈ ॥ ೧೧೭ ॥

ಅನ್ಯಚ್ಚ ದೇಹ್ಯಭಿಜ್ಞಾನಂ ವಿಶ್ವಾಸೋ ಯೇನ ಮೇ ಭವೇತ್ ।
ಸೀತಾಯಾಸ್ತವ ದೇವ್ಯಾಸ್ತು ರಾಜನ್ರಾಜೀವಲೋಚನ ॥ ೧೧೮ ॥

೧೧೪-೧೧೫. ಅವಳು ನನ್ನ ಸಾದೃಶ್ಯವನ್ನೂ, ವಿಶೇಷದಿಂದ ನನ್ನ ಆಕಾರವನ್ನೂ ಕೇಳಿದ ಪಕ್ಷದಲ್ಲಿ, ಹೇಳಬೇಕಾಗುವುದರಿಂದ ನನ್ನನ್ನೂ, ನನ್ನ ತಮ್ಮನಾದ ಲಕ್ಷ್ಮಣನನ್ನೂ ಮತ್ತೊಮ್ಮೆ ಚೆನ್ನಾಗಿ ನೋಡಿ, ಇಲ್ಲಿ ನಮ್ಮಿರ್ವರ ಎಲ್ಲಾ ಅವಯವಗಳಲ್ಲಿಯೂ ಇರುವ ಚಿಹ್ನೆಗಳೆಲ್ಲವನ್ನೂ ತಿಳಿದು, ನಿರೂಪಿಸುವವನಾಗು; ಹಾಗಿಲ್ಲದಿದ್ದಲ್ಲಿ ಸೀತೆಯು ನಂಬುವುದಿಲ್ಲವೆಂದು ನನ್ನ ಮನಸ್ಸಿನಲ್ಲಿರವುದು.;"

೧೧೬. ಇಂತು ಶ್ರೀ ರಾಮದೇವನು ಹೇಳಲು, ಸಮರ್ಥನಾದ ಮರುತನ ತನಯನು ಎದ್ದು, ಅವನೆದುರಿನಲ್ಲಿ ನಿಂತು ಕೈಜೋಡಿಸಿ, ಅವನಿಗೆ ಇಂತು ಹೇಳಿದನು.

೧೧೭. "ಎಲೈ ಪ್ರಭುವೇ ! ನಿಮ್ಮಿರ್ವರ ಲಕ್ಷಣವನ್ನೆಲ್ಲಾ ತಿಳಿದಿದ್ದೇನೆ: ಕಪಿಗಳಿಂದ ಕೂಡಿ ಹೊಗುತ್ತೇನೆ.

೧೧೮. ಇನ್ನೊಂದು ಯಾವುದಾದರೂ ಆಕೆಗೆ ಗೊತ್ತಿರುವ ವಸ್ತುವನ್ನು ಕೊಡು; ಯಾವುದರಿಂದ ಎಲೈ ತಾವರೆಗಣ್ಣನಾದ ಪ್ರಭುವೇ ! ನಿನ್ನ ದೇವಿಯಾದ ಸೀತೆಗೆ ನನ್ನ ವಿಷಯದಲ್ಲಿ ವಿಶ್ವಾಸವುಂಟಾಗುವುದು;'

ಇತ್ಯುಕ್ತೋ ವಾಯುಪುತ್ರೇಣ ರಾಮಃ ಕಮಲಲೋಚನಃ ।
ಅಂಗುಲೀಯಕಮುನ್ಮುಚ್ಯ ದತ್ತವಾನ್ರಾಮಚಿಹ್ನಿತಮ್ ॥ ೧೧೯ ॥

ತದ್ಗೃಹೀತ್ವಾ ತದಾ ಸೋಽಪಿ ಹನೂಮಾನ್ಮಾರುತಾತ್ಮಜಃ ।
ರಾಮಂ ಪ್ರದಕ್ಷಿಣೀಕೃತ್ಯ ಲಕ್ಷ್ಮಣಂ ಚ ಕಪೀಶ್ವರಮ್ ॥ ೧೨೦ ॥

ಉತ್ಪಪಾತ ತತೋ ಧೀಮಾನ್ಹನೂಮಾನಂಜನಾಸುತಃ ।
ಸುಗ್ರೀವೋಽಪಿ ಚ ತಾಞ್ಜ್ಞಾತ್ವಾ ವಾನರಾನ್ಗಂತುಮುದ್ಯತಾನ್ ॥
" ಆಜ್ಞೇಯಾನಾಜ್ಞಾಪಯತಿ ವಾನರಾನ್ಬಲದರ್ಪಿತಾನ್ ।
ಶೃಣ್ವಂತು ವಾನರಾಃ ಸರ್ವೇ ಶಾಸನಂ ಮಮ ಭಾಷಿತಮ್ ।
ವಿಲಂಬನಂ ನ ಕರ್ತವ್ಯಂ ಯುಷ್ಮಾಭಿಃ ಪರ್ವತಾದಿಷು ।
ದ್ರುತಂ ಗತ್ವಾ ತು ತಾಂ ವೀಕ್ಷ್ಯ ಆಗಂತವ್ಯಮನಿಂದಿತಾಮ್ ।
ರಾಮಪತ್ನೀಂ ಮಹಾಭಾಗಾಂ ಸ್ಥಾಸ್ಯೇಽಹಂ ರಾಮಸನ್ನಿಧೌ ।
ಕರ್ತನಂ ವಾ ಕರಿಷ್ಯಾಮಿ ಅನ್ಯಥಾ ಕರ್ಣನಾಸಯೋಃ ॥

---

೧೧೯. ಇಂತು ವಾಯುಪುತ್ರನು ಬಿನ್ನವಿಸಲು, ಕಮಲನಯನನಾದ ಶ್ರೀ ರಾಮನು, ಶ್ರೀರಾಮ ನಾಮಾಕ್ಷರಗಳನ್ನು ಕೆತ್ತಿರುವ ಉಂಗುರವನ್ನು ಬೆರಲಿಂದ ತೆಗೆದು ಕೊಟ್ಟನು.

೧೨೦. ಆಗ ಮಾರುತಾತ್ಮಜನಾದ, ಧೀಮಂತನಾದ ಆ ಹನೂಮಂತನು ಅದನ್ನು ತೆಗೆದುಕೊಂಡು, ರಾಮಲಕ್ಷ್ಮಣರನ್ನೂ ಕಪಿರಾಜನಾದ ಸುಗ್ರೀವನನ್ನೂ ಬಲವಂದನು.

೧೨೧. ಆ ಬಳಿಕ ಪ್ರಭಂಜನಾಸುತನಾದ, ಧೀಮಂತನಾದ ಆಂಜನೇಯನು ಹಾರಿದನು. ಸುಗ್ರೀವನೂ ಹೊರಡಲು ಕಪಿಗಳು ಅನುವಾಗಿರುವುದನ್ನು ಕೇಳಿ, ಬಲದಿಂದ ಸೊಕ್ಕಿದ, ಆಜ್ಞೇಯರಾದ ಆ ಕಪಿಗಳಿಗೆ ಇಂತು ಅಪ್ಪಣೆ ಮಾಡುತ್ತಾನೆ :- " ಎಲೈ ಸಕಲ ವಾನರರಿರಾ ! ನೀವೆಲ್ಲರೂ ನನ್ನ ಈ ಶಾಸನ ಭಾಷಿತವನ್ನು ಕೇಳಿರಿ ; ನೀವು ಪರ್ವತವೇ ಮೊದಲಾದ ಪ್ರದೇಶಗಳಲ್ಲಿ ನಿಂತು, ವಿಲಂಬನವನ್ನು ಮಾಡ ಕೂಡದು ; ಅನಿಂದಿತೆಯೂ, ಅತ್ಯಂತ ಪುಣ್ಯಶಾಲಿನಿಯೂ ಆದ ಶ್ರೀ ರಾಮ ಪತ್ನಿ

ಏವಂ ತಾನ್ಸ್ಪ್ರೇಷಯಿತ್ವಾ ತು ಆಜ್ಞಾಪೂರ್ವಂ ಕಪೀಶ್ವರಃ ।
ಅಥ ತೇ ವಾನರಾ ಯಾತಾಃ ಪಶ್ಚಿಮಾದಿಷು ದಿಕ್ಷು ವೈ ॥
ತೇ ಸಾನುಷು ಸಮಸ್ತೇಷು ಗಿರೀಣಾಮಪಿ ಮೂರ್ಧಸು ।
ನದೀತೀರೇಷು ಸರ್ವೇಷು ಮುನೀನಾಮಾಶ್ರಮೇಷು ಚ ॥
ಕಂದರೇಷು ಚ ಸರ್ವೇಷು ವನೇಷೂಪವನೇಷು ಚ ।
ವೃಕ್ಷೇಷು ವೃಕ್ಷಗುಲ್ಮೇಷು ಗುಹಾಸು ಚ ಶಿಲಾಸು ಚ ॥
ಸಹ್ಯಪರ್ವತಪಾರ್ಶ್ವೇಷು ವಿಂಧ್ಯಸಾಗರಪಾರ್ಶ್ವಯೋಃ ।
ಹಿಮವತ್ಯಪಿ ಶೈಲೇ ಚ ತಥಾ ಕಿಂಪುರುಷಾದಿಷು ॥
ಮನುದೇಶೇಷು ಸರ್ವೇಷು ಸಪ್ತಪಾತಾಲಕೇಷು ಚ ।
ಮಧ್ಯದೇಶೇಷು ಸರ್ವೇಷು ಕಾಶ್ಮೀರೇಷು ಮಹಾಬಲಾಃ ॥
ಪೂರ್ವದೇಶೇಷು ಸರ್ವೇಷು ಕಾಮರೂಪೇಷು ಕೋಸಲೇ ।
ತೀರ್ಥಸ್ಥಾನೇಷು ಸರ್ವೇಷು ಸಪ್ತಕೊಂಕನಕೇಷು ಚ ॥

ಯನ್ನು ಬೇಗನೆ ಹೋಗಿ ಕಂಡು, ಹಿಂದಕ್ಕೆ ಬರುವುದು. ನಾನು ಶ್ರೀ ರಾಮಚಂದ್ರನ ಹತ್ತಿರದಲ್ಲಿರುತ್ತೇನೆ. ಹಾಗಿಲ್ಲದ ಪಕ್ಷದಲ್ಲಿ ನಿಮ್ಮ ಕಿವಿ ಮೂಗುಗಳನ್ನು ಕತ್ತರಿಸುವೆನು. ’

ಕಪೀಶ್ವರನಾದ ಸುಗ್ರೀವನು ಇಂತು ಆಜ್ಞಾಪುರಸ್ಸರವಾಗಿ ಅವರನ್ನು ಕಳುಹಿಸಿಕೊಡಲು, ಬಳಿಕ ಆ ವಾನರರು ಪಶ್ಚಿಮವೇ ಮೊದಲಾದ ದೆಸೆಗಳಲ್ಲಿ ಹೊರಟರು. ಮಹಾಬಲರಾದ ಅವರು ಬೆಟ್ಟಗಳ ತಪ್ಪಲು ಪ್ರದೇಶಗಳಲ್ಲಿಯೂ, ಕೋಡುಗಳಲ್ಲಿಯೂ, ನದಿಗಳ ದಡಗಳಲ್ಲಿಯೂ, ಎಲ್ಲಾ ಮುನಿಗಳ ಆಶ್ರಮಗಳಲ್ಲಿಯೂ, ಸಕಲವಾದ ಗವಿಗಳಲ್ಲಿಯೂ, ಅರಣ್ಯಗಳಲ್ಲಿಯೂ, ಉದ್ಯಾನವನಗಳಲ್ಲಿಯೂ, ಮರಗಳಲ್ಲಿಯೂ, ಗಿಡಪೂದೆಗಳಲ್ಲಿಯೂ, ಗುಹೆಗಳಲ್ಲಿಯೂ, ಬಂಡೆಗಳಲ್ಲಿಯೂ, ಸಹ್ಯಪರ್ವತದ ಪಕ್ಕಗಳಲ್ಲಿಯೂ, ವಿಂಧ್ಯಪರ್ವತ ಮತ್ತು ಸಾಗರ ಇವುಗಳ ಪಕ್ಕಗಳಲ್ಲಿಯೂ, ಹಿಮವತ್ಪರ್ವತದೆಡೆಗಳಲ್ಲಿಯೂ, ಹಾಗೆಯೇ ಕಿಂಪುರುಷಾದಿ ಖಂಡಗಳಲ್ಲಿಯೂ, ಎಲ್ಲಾ ಮನುಪುತ್ರರಾಳುವ ದೇಶಗಳಲ್ಲಿಯೂ, ಏಳು ಪಾತಾಳಲೋಕ

ಯತ್ರ ತತ್ರೈವ ತೇ ಸೀತಾಮದೃಷ್ಟ್ವಾ ಪುನರಾಗತಾಃ ।
ಆಗತ್ಯ ತೇ ನಮಸ್ಕೃತ್ಯ ರಾಮಲಕ್ಷ್ಮಣಪಾದಯೋಃ ॥

ಸುಗ್ರೀವಂ ಚ ವಿಶೇಷೇಣ ನಾಸ್ಮಾಭಿಃ ಕಮಲೇಕ್ಷಣಾ ।
ದೃಷ್ಟಾ ಸೀತಾ ಮಹಾಭಾಗೇತ್ಯುಕ್ತ್ವಾ ತೇ ತತ್ರ ತಸ್ಥಿರೇ ॥

ತತಸ್ತಂ ದುಃಖಿತಂ ಪ್ರಾಹ ರಾಮದೇವಂ ಕಪೀಶ್ವರಃ ।
ಸೀತಾಂ ದಕ್ಷಿಣ ದಿಗ್ಭಾಗೇ ಸ್ಥಿತಾಂ ದ್ರಷ್ಟುಂ ವನೇ ನೃಪ ॥

ಶಕ್ಯಂ ವಾನರಸಿಂಹೇನ ವಾಯುಪುತ್ರೇಣ ಧೀಮತಾ ।
ದೃಷ್ಟ್ವಾತ್ರ ಸೀತಾಮಿಹಾಯಾತಿ ಹನೂಮಾನ್ನಾತ್ರ ಸಂಶಯಃ ॥

ಗಳಲ್ಲಿಯೂ, ಎಲ್ಲಾ ನಡುವಣ ನಾಡುಗಳಲ್ಲಿಯೂ, ಕಾಶ್ಮೀರದೇಶದೆಡೆಗಳಲ್ಲಿಯೂ, ಸರ್ವಪೂರ್ವದೇಶಗಳಲ್ಲಿಯೂ, ಕಾಮರೂಪದೇಶದೆಡೆಗಳಲ್ಲಿಯೂ, ಕೋಸಲದೇಶದಲ್ಲಿಯೂ, ಎಲ್ಲಾ ತೀರ್ಥಗಳೆಡೆಗಳಲ್ಲಿಯೂ, ಏಳಾದ, ಕೊಂಕಣದ ದೇಶಗಳಲ್ಲಿಯೂ, ಎಲ್ಲೆಲ್ಲಿಯೂ ಸೀತಾದೇವಿಯನ್ನು ಕಾಣದೆ, ಹಿಂದಿರುಗಿ ಬಂದ ಆವರು ಶ್ರೀ ರಾಮಲಕ್ಷ್ಮಣರ ಚರಣಗಳಲ್ಲಿ ಎರಗಿದವರಾದರು.

ಸುಗ್ರೀವನಿಗೂ ವಿಶೇಷವಾಗಿ ಪೊಡಮಟ್ಟು, 'ಎಲೈ ಪ್ರಭುವೇ! ನಾವು ತಾವರೆಯಂತೆ ಕಣ್ಗಳುಳ್ಳ, ಪುಣ್ಯವತಿಯಾದ ಸೀತಾದೇವಿಯನ್ನು ಎಲ್ಲಿಯೂ ಕಾಣಲಿಲ್ಲವು,' ಎಂದು ಹೇಳಿ, ಅವರು ಅಲ್ಲಿ ನಿಂತರು. ಬಳಿಕ ಅದನ್ನು ಕೇಳಿ ದುಃಖಗೊಂಡ ಶ್ರೀ ರಾಮನಿಗೆ ಕಪೀಶ್ವರನಾದ ಸುಗ್ರೀವನು ಇಂತು ಬಿನ್ನವಿಸಿದನು :— 'ಎಲೈ ನೃಪನೇ! ವಾನರಶ್ರೇಷ್ಠನೂ, ಅನಿಲಸುತನೂ, ಧೀಮಂತನೂ ಆದ ಆಂಜನೇಯನು, ತೆಂಕಣದೆಸೆಯ ಹಳುವದೆಡೆಯಲ್ಲಿರುವ ಸೀತಾದೇವಿಯನ್ನು ಕಾಣಲು ಸಮರ್ಥನಾಗಿರುವನು. ಹನೂಮಂತನು ಸೀತಾದೇವಿಯನ್ನು ಕಂಡೇ ಇಲ್ಲಿಗೆ ಬರುವನು. ಈ ವಿಷಯದಲ್ಲಿ ಸಂದೇಹವಿಲ್ಲವು. ಎಲೈ ಮಹಾಬಾಹುವಾದ

ಸ್ಥಿರೋ ಭವ ಮಹಾಬಾಹೋ ರಾಮ ಸತ್ಯಮಿದಂ ವಚಃ ।
ಲಕ್ಷ್ಮಣೋಽಪ್ಯಾಹ ಶಕುನಂ ತತ್ರ ವಾಕ್ಯಮಿದಂ ತದಾ ॥
ಸರ್ವಥಾ ದೃಷ್ಟಸೀತಸ್ತು ಹನೂಮಾನಾಗಮಿಷ್ಯತಿ ॥ ೧೨೧ ॥

ಯಸ್ಮಾದನ್ವೇಷಣಾರ್ಥಾಯ ರಾಮಪತ್ನೀಂ ಯಶಸ್ವಿನೀಮ್ ।
ಅಥಾಂಗದಂ ಪುರಸ್ಕೃತ್ಯ ಯೇ ಗತಾ ವಾನರೋತ್ತಮಾಃ ॥ ೧೨೨ ॥

ಯಸ್ಮಾದನ್ವೇಷಣಾರ್ಥಾಯ ರಾಮಪತ್ನೀಂ ಯಶಸ್ವಿನೀಮ್ ।
ಅದೃಷ್ಟ್ವಾ ಶ್ರಮಮಾಪನ್ನಾಃ ಕೃಚ್ಛ್ರಭೂತಾಸ್ತದಾ ವನೇ ॥ ೧೨೩ ॥

ಭಕ್ಷಣೇನ ವಿಹೀನಾಸ್ತೇ ಕ್ಷುಧಯಾ ಚ ಪ್ರಪೀಡಿತಾಃ ।
ಭ್ರಮಂತೋ ಗಹನೇಽರಣ್ಯೇ ಕ್ವಾಪಿ ದೃಷ್ಟ್ವಾ ಚ ಸುಪ್ರಭಾ ॥ ೧೨೪ ॥

ಶ್ರೀರಾಮನೇ ! ಧೀರನಾಗಿರು ; ಈ ಮಾತು ದಿಟವು ;' ಎಂದು ಸುಗ್ರೀವನು ಹೇಳಿದನು. ಅಲ್ಲಿ ಆಗ ಲಕ್ಷ್ಮಣನೂ ಶಕುನವಾದ ಈ ವಾಕ್ಯವನ್ನು ಹೇಳಿದನು; 'ಎಲೈ ಪ್ರಭುವೇ ! ಹನೂಮಂತನು ಸೀತಾದೇವಿಯನ್ನು ಕಂಡೇ ಬರುವನು.'

೧೨೨-೧೨೩. ಇಂತು ಸುಗ್ರೀವ ಲಕ್ಷ್ಮಣರು ಶ್ರೀರಾಮನನ್ನು ಸಮಾಧಾನಗೊಳಿಸಿ, ಅಲ್ಲಿದ್ದರು. ಅನಂತರದಲ್ಲಿ ಅಂಗದನನ್ನು ಮುಂದೆ ಮಾಡಿಕೊಂಡು, ಯಾವ ವಾನರೋತ್ತಮರು ಯಶಸ್ವಿನಿಯಾದ ರಾಮಪತ್ನಿಯನ್ನು ಪ್ರಯತ್ನದಿಂದ ಹುಡುಕಲು ಹೋದರೋ, ಅವರು ಆಗ ಆ ವನದಲ್ಲಿ ಅವಳನ್ನು ಕಾಣದೆ, ಶ್ರಮವನ್ನು ಹೊಂದಿ, ಕಷ್ಟಕ್ಕೊಳಗಾದರು.

೧೨೪. ಆ ವಾನರರು ತಿನ್ನುವುದಕ್ಕೆ ಏನೂ ಇಲ್ಲದೆ, ಹಸಿವಿನಿಂದ ಬಾಧೆಗೊಂಡವರಾಗಿ, ದಟ್ಟವಾದ ಕಾಡಿನಲ್ಲಿ ಸುತ್ತುತ್ತಾ, ಎಲ್ಲಿಯೋ ಸುಪ್ರಭೆಯೆಂಬವಳನ್ನು ಕಂಡರು.

ಗುಹಾನಿವಾಸಿನೀ ಸಿದ್ಧಾ ಋಷಿಪತ್ನೀ ಹ್ಯನಿಂದಿತಾ ।
ಸಾ ಚ ತಾನಾಗತಾನ್ದೃಷ್ಟ್ವಾ ಸ್ವಾಶ್ರಮಂ ಪ್ರತಿ ವಾನರಾನ್ ॥ ೧೨೫ ॥

ಆಗತಾಃ ಕಸ್ಯ ಯೂಯಂ ವು ಕುತಃ ಕಿಂ ತು ಪ್ರಯೋಜನಮ್ ।
ಇತ್ಯುಕ್ತೇ ಜಾಂಬವಾನಾಹ ತಾಂ ಸಿದ್ಧಾಂ ಸುಮಹಾಮತಿಃ ॥ ೧೨೬ ॥

ಸುಗ್ರೀವಸ್ಯ ವಯಂ ಭೃತ್ಯಾ ಆಗತಾ ಹ್ಯತ್ರ ಶೋಭನೇ ।
ರಾಮಭಾರ್ಯಾರ್ಥಮನಘೇ ಸೀತಾನ್ವೇಷಣಕರ್ಮಣಿ ॥ ೧೨೭ ॥

ಕಾಂದಿಶೀಕಾ ನಿರಾಹಾರಾ ಅದೃಷ್ಟ್ವಾ ಜನಕಾತ್ಮಜಾಮ್ ।
ಇತ್ಯುಕ್ತೇ ಜಾಂಬವತ್ಯತ್ರ ಪುನಸ್ತಾನಾಹ ಸಾ ಶುಭಾ ॥ ೧೨೮ ॥

ಜಾನಾಮಿ ರಾಮಂ ಸೀತಾಂ ಚ ಲಕ್ಷ್ಮಣಂ ಚ ಕಪೀಶ್ವರಮ್ ।
ಭುಂಜಧ್ವಮತ್ರ ವೋ ದತ್ತಮಾಹಾರಂ ಚ ಕಪೀಶ್ವರಾಃ ॥ ೧೨೯ ॥

೧೨೫-೧೨೬. ಗುಹೆಯಲ್ಲಿ ವಾಸ ಮಾಡುವವಳೂ, ಅಣಿಮಾದಿ ಸಿದ್ಧಿ ಪಡೆದವಳೂ, ಋಷಿಪತ್ನಿಯೂ, (ಅನಿಂದಿತೆಯೂ) ಸ್ತುತ್ಯೆಯೂ ಆದ ಅವಳು ತನ್ನ ಆಶ್ರಮವನ್ನು ಕಂಡು ಬಂದ ಆ ವಾನರರನ್ನು ಕುರಿತು, 'ಎಲೈ ವಾನರಿರಾ! ನೀವು ಯಾರು? ಯಾರ ಕಡೆಯವರು? ಎಲ್ಲಿಂದ ಬಂದಿರಿ ಪ್ರಯೋಜನವೇನು?' ಎಂದು ಕೇಳಲು, ಮಹಾಮತಿಯಾದ ಜಾಂಬವಂತನು ಆ ಸಿದ್ಧಳಿಗೆ ಇಂತು ಹೇಳಿದನು.

೧೨೭-೧೨೮. 'ಎಲೌ ಪುಣ್ಯವತಿಯಾದ ಮಂಗಳ ಸ್ವರೂಪಳೇ! ನಾವು ಸುಗ್ರೀವನೆಂಬ ಕಪಿರಾಜನಾಳುಗಳು; ಶ್ರೀ ರಾಮನ ಮಡದಿಗೋಸ್ಕರವಾಗಿ ಇಲ್ಲಿಗೆ ಬಂದೆವು; ಸೀತಾದೇವಿಯನ್ನು ಹುಡುಕುವ ಕೆಲಸನಲ್ಲಿ ತೊಡಗಿ, ಆ ಜನಕ ಕುಮಾರಿಯನ್ನು ಕಾಣದೆ, ಆಹಾರಾದಿಗಳಿಲ್ಲದೆ, ಹೆದರಿದವರಾಗಿದ್ದೇವೆ;' ಎಂದು ಜಾಂಬವಂತನು ನುಡಿಯಲು, ಇಲ್ಲಿ ಮತ್ತೂ ಆ ಕಲ್ಯಾಣಿಯು ಅವರಿಗೆ ಇಂತು ಹೇಳಿದಳು.

೧೨೯. 'ಅಯ್ಯಾ ಕಪೀಶಭೃತ್ಯರೇ! ನಾನು ಶ್ರೀರಾಮನನ್ನೂ, ಸೀತಾದೇವಿಯನ್ನೂ, ಲಕ್ಷ್ಮಣನನ್ನೂ, ಕಪೀಶ್ವರನಾದ ಸುಗ್ರೀವನನ್ನೂ ಬಲ್ಲೆನು. ಎಲೈ ಕಪೀಶ್ವರರೇ! ಇಲ್ಲಿ ನಾನು ಈವ ಆಹಾರವನ್ನು ತಿನ್ನಿರಿ.

ರಾಮಕಾರ್ಯಾಗತಾಸ್ತ್ವತ್ರ ಯೂಯಂ ರಾಮಸಮಾ ಮಮ ।
ಇತ್ಯುಕ್ತ್ವಾ ಚಾಮೃತಂ ತೇಷಾಂ ಯೋಗಾದ್ದತ್ತ್ವಾ ತಪಸ್ವಿನೀ ॥ ೧೩೦ ॥

ಭೋಜಯಿತ್ವಾ ಯಥಾಕಾಮಂ ಭೂಯಸ್ತಾನಾಹ ತಾಪಸೀ ।
ಸೀತಾಸ್ಥಾನಂ ತು ಜಾನಾತಿ ಸಂಪಾತಿರ್ನಾಮ ಪಕ್ಷಿರಾಟ್ ॥ ೧೩೧ ॥

ಆಸ್ಥಿತೋ ವೈ ವನೇ ಸೋಽಪಿ ಮಹೇಂದ್ರೇ ಪರ್ವತೇ ದ್ವಿಜಃ ।
ಮಾರ್ಗೇಣಾನೇನ ಹರಯಸ್ತತ್ರ ಯೂಯಂ ಗಮಿಷ್ಯಥ ॥ ೧೩೨ ॥

ಸ ವಕ್ತಿ ಸೀತಾಂ ಸಂಪಾತಿರ್ದೂರದರ್ಶೀ ತು ಯಃ ಖಗಃ ।
ತೇನಾದಿಷ್ಟಂ ತು ಪಂಥಾನಂ ಪುನರಾಸಾದ್ಯ ಗಚ್ಛಥ ॥ ೧೩೩ ॥

೧೩೦–೧೩೧. ಶ್ರೀ ರಾಮನ ಕೆಲಸಕ್ಕಾಗಿ ಇಲ್ಲಿಗೆ ಬಂದಿರುವ ನೀವು ನನಗೆ ಶ್ರೀರಾಮ ಸಮಾನರು ;' ಎಂದು ಹೇಳಿ ಆ ತಪಸ್ವಿನಿಯು ತನ್ನ ಯೋಗಶಕ್ತಿಯಿಂದ ಅವರಿಗೆ ಅಮೃತವನ್ನು ಕೊಟ್ಟು, ಬೇಕಾದಷ್ಟು ಊಡಿಸಿ, ಮತ್ತು ಆ ತಾಪಸಿಯು ಅವರಿಗೆ ಇಂತು ಹೇಳಿದಳು. 'ಎಲೈ ಕಪೀಶ್ವರರೇ ! ಕೇಳಿರಿ; ಸಂಪಾತಿಯೆಂಬ ಹದ್ದುಗಳೊಡೆಯನು ಸೀತಾದೇವಿಯಿರುವೆಡೆಯನ್ನು ತಿಳಿದಿರುತ್ತಾನೆ.

೧೩೨. ಆ ಪಕ್ಷಿಯು ಮಹೇಂದ್ರಪರ್ವತದ ವನದಲ್ಲಿರುತ್ತಾನೆ. ಎಲೈ ಕಪಿಗಳೇ ! ಈ ಹಾದಿಯಿಂದಲ್ಲಿಗೆ ಹೋಗಿರಿ.

೧೩೩. ದೂರದರ್ಶಿಯಾದ ಸಂಪಾತಿಯೆಂಬ ಯಾವ ಪಕ್ಷಿಯೋ, ಅವನು ಸೀತಾದೇವಿಯ ವಿಷಯವನ್ನು ನಿಮಗೆ ಹೇಳುತ್ತಾನೆ. ಆತನು ಹೇಳಿದ ಮಾರ್ಗವನ್ನಾಶ್ರಯಿಸಿ ಮತ್ತು ಹೋಗಿರಿ.

ಅವಶ್ಯಂ ಜಾನಕೀಂ ಸೀತಾಂ ದ್ರಕ್ಷ್ಯತೇ ಪವನಾತ್ಮಜಃ ।
ತಯೈವಮುಕ್ತಾಃ ಕಪಯಃ ಪರಾಂ ಪ್ರೀತಿಮುಪಾಗತಾಃ ॥ ೧೩೪ ॥

ದೃಷ್ಟ್ವಾಸ್ತೇಜಸಮಾಪನ್ನಾಸ್ತಾಂ ಪ್ರಣಮ್ಯ ಪ್ರತಸ್ಥಿರೇ ।
ಮಹೇಂದ್ರೇಽಸುಗತಾ ವೀರಾ ವಾನರಾಸ್ತದ್ದಿದೃಕ್ಷಯಾ ॥ ೧೩೫ ॥

ತತ್ರ ಸಂಪಾತಿಮಾಸೀನಂ ದೃಷ್ಟವಂತಃ ಕಪೀಶ್ವರಾಃ ।
ತಾನುವಾಚಾಥ ಸಂಪಾತಿರ್ವಾನರಾನಾಗತಾನ್ದ್ವಿಜಃ ॥ ೧೩೬ ॥

ಕೇ ಯೂಯಮಿತಿ ಸಂಪ್ರಾಪ್ತಾಃ ಕಸ್ಯ ವಾ ಬ್ರೂತ ಮಾ ಚಿರಮ್ ।
ಇತ್ಯುಕ್ತೇ ವಾನರಾ ಊಚುರ್ಯಥಾವೃತ್ತಮನುಕ್ರಮಾತ್ ॥ ೧೩೭ ॥

---

೧೩೪. ವಾಯುತನಯನು ಅವಶ್ಯವಾಗಿ ಜನಕನ ಕುಮಾರಿಯಾದ ಸೀತಾದೇವಿಯನ್ನು ಕಾಣುವನು" ಇಂತು ಆ ಸುಪ್ರಭೆಯಿಂದ ಹೇಳಿಸಿಕೊಂಡ ವಾನರರು ಕಡುಸಂತಸಗೊಂಡವರಾದರು.

೧೩೫. ಆ ವಾನರರು ಇಂತು ಸಂತಸಗೊಂಡವರು, ವಿಶೇಷವಾಗಿ ತೇಜಸ್ಸನ್ನು ಹೊಂದಿದವರಾದರು. ಅನಂತರ ಅವಳಿಗೆ ನಮಸ್ಕರಿಸಿ ಹೊರಟರು. ವೀರರಾದ ವಾನರರು ಆ ಸಂಪಾತಿಯನ್ನು ನೋಡಲೆಳಸಿದವರಾಗಿ ಮಹೇಂದ್ರ ಪರ್ವತದೆಡೆಗೆ ಹೋದರು.

೧೩೬. ಅಲ್ಲಿ ಕಪೀಶ್ವರರು ಕುಳಿತಿದ್ದ ಸಂಪಾತಿಯನ್ನು ಕಂಡರು. ಬಳಿಕ ಸಂಪಾತಿಯೆಂಬ ಪಕ್ಷಿಯು ಬಂದ ಆ ವಾನರರಿಗೆ ಇಂತು ಹೇಳಿದನು ;

೧೩೭. "ಅಯ್ಯಾ ! ಇಂತು ಬಂದಿರುವ ನೀವು ಯಾರು ? ಆರವರು ತಡಮಾಡದೆ ಹೇಳಿರಿ," ಎಂದು ಸಂಪಾತಿಯು ಕೇಳಲು, ವಾನರರು ನಡೆದ ಸಂಗತಿಯನ್ನು ಕ್ರಮದಿಂದ ಹೇಳಿದರು.

೧೩೮. "ಅಯ್ಯಾ ಪಕ್ಷಿರಾಜನೇ ! ನಾವೆಲ್ಲರೂ ಶ್ರೀರಾಮನ ದೂತರು; ಮಹಾತ್ಮನಾದ, ಕಪಿರಾಜನಾದ, ಸುಗ್ರೀವನಿಂದ ಸೀತಾದೇವಿಯನ್ನು ಹುಡುಕುವ ಕೆಲಸದಲ್ಲಿ ಕಳುಹಿಸಲ್ಪಟ್ಟವರಾಗಿರುತ್ತೇವೆ.

ರಾಮದೂತಾ ವಯಂ ಸರ್ವೇ ಸೀತಾನ್ವೇಷಣಕರ್ಮಣಿ ।
ಪ್ರೇಷಿತಾಃ ಕಪಿರಾಜೇನ ಸುಗ್ರೀವೇಣ ಮಹಾತ್ಮನಾ ॥ ೧೩೮ ॥

ತ್ವಾಂ ದ್ರಷ್ಟುಮಿಹ ಸಂಪ್ರಾಪ್ತಾಃ ಸಿದ್ಧಾಯಾ ವಚನಾದ್ದ್ವಿಜ ।
ಸೀತಾಸ್ಥಾನಂ ಮಹಾಭಾಗ ತ್ವಂ ನೋ ವದ ಮಹಾಮತೇ ॥ ೧೩೯ ॥

ಇತ್ಯುಕ್ತೋ ವಾನರೈಃ ಶ್ಯೇನೋ ವೀಕ್ಷಾಂ ಚಕ್ರೇ ಸುದಕ್ಷಿಣಾಮ್ ।
ಸೀತಾಂ ದೃಷ್ಟ್ವಾ ಸ ಲಂಕಾಯಾಮಶೋಕಾಖ್ಯೇ ಮಹಾವನೇ ॥ ೧೪೦ ॥

ಸ್ಥಿತೇತಿ ಕಥಿತಂ ತೇನ ಜಟಾಯುಸ್ತು ಮೃತಸ್ತವ ।
ಭ್ರಾತೇತಿ ಚೋಚುಃ ಸ ಸ್ನಾತ್ವಾ ದತ್ವಾ ತಸ್ಯೋದಕಾಂಜಲಿಮ್ ॥ ೧೪೧ ॥

ಯೋಗಮಾಸ್ಥಾಯ ಸ್ವಂ ದೇಹಂ ವಿಸಸರ್ಜ ಮಹಾಮತಿಃ ।
ತತಸ್ತಂ ವಾನರಾ ದಗ್ಧ್ವಾ ದತ್ವಾ ತಸ್ಯೋದಕಾಂಜಲಿಮ್ ॥ ೧೪೨ ॥

---

೧೩೯. ಎಲೈ ಪಕ್ಷಿಯೇ ! ಸಿದ್ಧಳಾದ ಸುಪ್ರಭೆಯ ಮಾತಿನಿಂದ ನಿನ್ನನ್ನು ನೋಡಲು ಬಂದೆವು. ಎಲೈ ಮಹಾಮತಿಯೇ ! ಪುಣ್ಯಶಾಲಿಯೇ ! ನೀನು ನಮಗೆ ಸೀತಾದೇವಿಯಿರುವೆಡೆಯನ್ನು ಹೇಳು. ”

೧೪೦–೧೪೨. ಇಂತು ವಾನರರು ಕೇಳಲು, ಗಿಡಗನಾದ ಸಂಪಾತಿಯು ದಕ್ಷಿಣದಿಕ್ಕಿನ ಕಡೆ ನೋಡಿದನು. ಅವನು ಲಂಕೆಯಲ್ಲಿ ಅಶೋಕವನವೆಂಬ ದೊಡ್ಡ ವನದಲ್ಲಿ ಸೀತಾದೇವಿಯನ್ನು ಕಂಡು, ‘ ಅಲ್ಲಿರುವಳೆ ’ ಎಂದು ಹೇಳಿದನು. ಕಪಿಗಳು ಅವನಿಗೆ “ ನಿನ್ನ ತಮ್ಮನಾದ ಜಟಾಯುವು ಮೃತನಾದನೆಂದರು. ” ಆಗ ಸಂಪಾತಿಯು ಸ್ನಾನಮಾಡಿ, ಅವನಿಗೆ ಜಲಾಂಜಲಿಯನ್ನು ಕೊಟ್ಟು, ಮಹಾಮತಿಯಾದ ತಾನು ಯೋಗವನ್ನು ತಾಳಿ, ತನ್ನ ದೇಹವನ್ನು ಬಿಟ್ಟನು. ಅನಂತರದಲ್ಲಿ ವಾನರರು ಅವನನ್ನು ಸುಟ್ಟು, ಅವನಿಗೆ ಉದಕಾಂಜಲಿಯನ್ನು ಕೊಟ್ಟು, ಅನಂತರ ತಾವು

ಗತ್ವಾ ಮಹೇಂದ್ರಶೃಂಗಂ ತೇ ತಮಾರುಹ್ಯ ಕ್ಷಣಂ ಸ್ಥಿತಾಃ ।
ಸಾಗರಂ ವೀಕ್ಷ್ಯ ತೇ ಸರ್ವೇ ಪರಸ್ಪರಮಥಾಬ್ರುವನ್ ॥ ೧೪೩ ॥

ರಾವಣೇನೈವ ಭಾರ್ಯಾ ಸಾ ನೀತಾ ರಾಮಸ್ಯ ನಿಶ್ಚಿತಮ್ ।
ಸಂಪಾತಿವಚನಾದದ್ಯ ಸಂಜ್ಞಾತಂ ಸಕಲಂ ಹಿ ತತ್ ॥ ೧೪೪ ॥

ವಾನರಾಣಾಂ ತು ಕಶ್ಚಾತ್ರ ಉತ್ತೀರ್ಯ ಲವಣೋದಧಿಮ್ ।
ಲಂಕಾಂ ಪ್ರವಿಶ್ಯ ದೃಷ್ಟ್ವಾ ತಾಂ ರಾಮಪತ್ನೀಂ ಯಶಸ್ವಿನೀಮ್ ॥ ೧೪೫ ॥

ಪುನಶ್ಚೋದಧಿತರಣೇ ಶಕ್ತೋ ಬ್ರೂತ ಹಿ ಶೋಭನಾಃ ।
ಇತ್ಯುಕ್ತೋ ಜಾಂಬವಾನ್ಪ್ರಾಹ ಸರ್ವೇ ಶಕ್ತಾಸ್ತು ವಾನರಾಃ ॥ ೧೪೬ ॥

ಸಾಗರೋತ್ತರಣೇ ಕಿಂ ತು ಕಾರ್ಯಮನ್ಯಚ್ಚ ಸಂಭವೇತ್ ।
ತತ್ರ ದಕ್ಷೋಽಯಮೇವಾತ್ರ ಹನೂಮಾನಿತಿ ಮೇ ಮತಿಃ ॥ ೧೪೭ ॥

ಮಹೇಂದ್ರಪರ್ವತದ ಶಿಖರಕ್ಕೆ, ಹೋಗಿ ಅದನ್ನು ಹತ್ತಿ, ಚಣಕಾಲವಿದ್ದರು. ಬಳಿಕ ಅವರೆಲ್ಲರೂ ಸಾಗರವನ್ನು ನೋಡಿ, ಒಬ್ಬರಿಗೊಬ್ಬರು ಹೇಳಿಕೊಂಡರು.

೧೪೪. ಶ್ರೀರಾಮನ ಮಡದಿಯಾದ ಆ ಸೀತಾದೇವಿಯನ್ನು ರಾವಣನೇ ಅಪಹರಿಸಿಕೊಂಡು ಹೋಗಿರುತ್ತಾನೆಂಬುದು ನಿಶ್ಚಯವು. ಅದೆಲ್ಲವೂ ಇಂದು ಸಂಪಾತಿಯ ಮಾತಿನಿಂದ ತಿಳಿಯಿತು.

೧೪೫–೧೪೬. "ಎಲೈ ಶೋಭನರೆ! ವಾನರರಲ್ಲಿ ಯಾವನು ಇಲ್ಲಿ ಲವಣಸಮುದ್ರವನ್ನು ದಾಟಿ, ಲಂಕೆಯನ್ನು ಹೊಕ್ಕು, ಯಶಸ್ವಿನಿಯಾದ ಆ ಶ್ರೀರಾಮನ ಮಡದಿಯನ್ನು ಕಂಡು, ಮತ್ತು ಸಮುದ್ರವನ್ನು ದಾಟಲು ಸಮರ್ಥನಾಗಿರುತ್ತಾನೆ? ಹೇಳಿರಿ," ಎಂದು ಕೇಳಲು, ಜಾಂಬವಂತನು "ಎಲ್ಲಾ ಕಪಿಗಳೂ ಸಾಗರವನ್ನು ದಾಟುವುದರಲ್ಲಿ ಶಕ್ತರಾಗಿರುವರು.

೧೪೭. ಆದರೆ, ಬೇರೆಕೆಲಸವೂ ಒದಗಬಹುದು; ಅದರಲ್ಲಿಯೂ, ಇದರಲ್ಲಿಯೂ, ಹನೂಮಂತನೇ ದಕ್ಷನು" ಎಂದು ನನ್ನ ಅಭಿಪ್ರಾಯವು ಎಂದು ಜಾಂಬವನು ಹೇಳಿದನು.

ಕಾಲಕ್ಷೇಪೋ ನ ಕರ್ತವ್ಯೋ ಮಾಸಾರ್ಧಮಧಿಕಂ ಗತಮ್ ।
ಯದ್ಯದೃಷ್ಟ್ವಾ ತು ಗಚ್ಛಾಮೋ ವೈದೇಹೀಂ ವಾನರರ್ಷಭಾಃ ॥ ೧೪೮ ॥

ಕರ್ಣನಾಸಾದಿ ನಃ ಸ್ವಾಂಗಂ ನಿಕೃಂತತಿ ಕಪೀಶ್ವರಃ ।
ತಸ್ಮಾತ್ಪ್ರಾರ್ಥ್ಯಃ ಸ ಚಾಸ್ಮಾಭಿರ್ವಾಯುಪುತ್ರಸ್ತು ಮೇ ಮತಿಃ ॥
ಇತ್ಯುಕ್ತಾಸ್ತೇ ತಥೇತ್ಯೂಚುರ್ವಾನರಾ ವೃದ್ಧವಾನರಮ್ ।
ತತಸ್ತೇ ಪ್ರಾರ್ಥಯಾಮಾಸುರ್ವಾನರಾಃ ಪವನಾತ್ಮಜಮ್ ॥ ೧೪೯ ॥

ಹನೂಮಂತಂ ಮಹಾಪ್ರಾಜ್ಞಂ ದಕ್ಷಂ ಕಾರ್ಯೇಷು ಚಾಧಿಕಮ್ ।
ಗಚ್ಛ ತ್ವಂ ರಾಮಭೃತ್ಯತ್ವೇ ರಾವಣಸ್ಯ ಭಯಾಯ ಚ ॥ ೧೫೦ ॥

ರಕ್ಷಸ್ವ ವಾನರಕುಲಮಸ್ಮಾಕಮಂಜನಾಸುತ ।
ಇತ್ಯುಕ್ತಸ್ತಾಂಸ್ತಥೇತ್ಯಾಹ ವಾನರಾನ್ಪವನಾತ್ಮಜಃ ॥ ೧೫೧ ॥

೧೪೮–೧೫೧. ಎಲೈ ವಾನರರೇ ! ಇನ್ನು ಕಾಲಹರಣವು ಮಾಡತಕ್ಕದ್ದಲ್ಲವು. ಆರೆ ತಿಂಗಳು ಹೆಚ್ಚಾಗಿ ಕಳೆದು ಹೋಯಿತು.

ಎಲೈ ವಾನರಶ್ರೇಷ್ಠನೇ ! ನಾವು ಸೀತಾದೇವಿಯನ್ನು ನೋಡದೇ ಹೋದ ಪಕ್ಷದಲ್ಲಿ, ಕಪೀಶ್ವರನಾದ ಸುಗ್ರೀವನು ನಮ್ಮ ಕಿವಿ ಮೂಗುಗಳನ್ನು ಕತ್ತರಿಸುವನು. ಆದುದರಿಂದ ನಾವು ವಾಯುಪುತ್ರನಾದ ಹನೂಮಂತನನ್ನು ಅವಶ್ಯವಾಗಿ ಬೇಡಿಕೊಳ್ಳತಕ್ಕದುಚಿತವು;' ಎಂಬುದು ನನ್ನ ಅಭಿಪ್ರಾಯವು,' ಎಂದು ಹೇಳಿದನು. ಇಂತು ಜಾಂಬವಂತನು ಹೇಳಲು, ಆ ವಾನರರೂ ಆ ವೃದ್ಧವಾನರನಾದ ಜಾಂಬವಂತನಿಗೆ 'ಹಾಗೆಯೇ ಸರಿ'ಯೆಂದು ಹೇಳಿದರು. ಅನಂತರದಲ್ಲಿ ಆ ವಾನರರೆಲ್ಲರೂ ವಾಯುತನಯನೂ, ಮಹಾಜ್ಞಾನಿಯೂ, ಕೆಲಸಗಳಲ್ಲಿ ಬಹುಸಮರ್ಥನೂ, ಆದ ಹನೂಮಂತನನ್ನು ಬೇಡಿಕೊಂಡರು. 'ಎಲೈ ಅಂಜನಾಸುತನೇ ! ನೀನು ಶ್ರೀ ರಾಮನ ಬೇಹಿನಲ್ಲಿ ರಾವಣನಿಗೆ ಭಯಪಡಿಸುವುದಕ್ಕೂ ಹೋಗು; ನಮ್ಮ ವಾನರರ ತಂಡವನ್ನು ರಕ್ಷಿಸು;' ಎಂದು ಪ್ರಾರ್ಥಿಸಲು, ಪವನತನಯನಾದ ಹನೂಮಂತನು ಅವರಿಗೆ 'ಹಾಗೆಯೇ ಆಗಲಿ;' ಎಂದು ಹೇಳಿದನು.

ರಾಮಪ್ರಯುಕ್ತಶ್ಚ ಪುನಃ ಸ್ವಭರ್ತೃಣಾ
ಪುನರ್ಮಹೇಂದ್ರೇ ಕಪಿಭಿಶ್ಚ ನೋದಿತಃ ।
ಗಂತುಂ ಪ್ರಚಕ್ರೇ ಮತಿಮಂಜನಾಸುತಃ
ಸಮುದ್ರ ಮುತ್ತೀರ್ಯ ನಿಶಾಚರಾಲಯಮ್ ॥ ೧೫೩ ॥

ಇತಿ ಶ್ರೀನರಸಿಂಹಪುರಾಣೇ ಶ್ರೀರಾಮಪ್ರಾದುರ್ಭಾವೇ ಕಿಷ್ಕಿಂಧಾಕಾಣ್ಡ
ಕಥಾನಿರೂಪಣಂ ನಾಮ ಪಂಚಾಶತ್ತಮೋಽಧ್ಯಾಯಃ

---

೧೫೩. ಶ್ರೀ ರಾಮನಿಂದ ಪ್ರೇರಿಸಲ್ಪಟ್ಟವನೂ, ತರುವಾಯ ತಮ್ಮ ಒಡೆಯನಾದ ಸುಗ್ರೀವನಿಂದಲೂ, ಪುನಃ ಮಹೇಂದ್ರಪರ್ವತದಲ್ಲಿ ಕಪಿಗಳಿಂದಲೂ ಪ್ರೇರಿತನಾಗ, ಅಂಜನಾದೇವಿಯ ಕುಮಾರನಾದ ಹನೂಮಂತನು ಸಮುದ್ರವನ್ನು ದಾಟಿ, ನಿಶಾಚರರಾದ ರಕ್ಕಸರ ಬೀಡಾದ ಲಂಕೆಗೆ ಹೋಗಲು, ಮನಸ್ಸು ಮಾಡಿದನು;' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಜನಿಗೆ ಹೇಳಿದುದನ್ನು ಶ್ರೀ ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ರಾಮಾವತಾರಚರಿತ್ರೆಯಲ್ಲಿ

ಕಿಷ್ಕಿಂಧಾಕಾಣ್ಡ ಕಥಾನಿರೂಪಣೆಯೆಂಬ ಐವತ್ತನೆಯ ಅಧ್ಯಾಯವು ಮುಗಿದುದು.

ಐವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಶ್ರೀಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ' ವಾಲಿಯ ದ್ವೇಷವನ್ನು ಹೊಂದಿದ, ಅವನ ತಮ್ಮನಾದ ಸುಗ್ರೀವನು ಹನೂಮಂತನೇ ಮೊದಲಾದವರಿಂದ ಕೂಡಿ, ದುರ್ಗದಲ್ಲಿದ್ದವನು ದೂರದಲ್ಲಿ ಬರುತ್ತಿದ್ದ ತಾಪಸ ವೇಷದ ರಾಮಲಕ್ಷ್ಮಣರನ್ನು ವಾಲಿಯು ತನ್ನ ಸಂಹಾರಕ್ಕಾಗಿ ಕಳುಹಿಸಿದ ಬೇಹಿನವರೆಂದು ಭಾವಿಸಿ, ಹನೂಮಂತನನ್ನು ಅವರಾರೆಂದು ತಿಳಿಯಲು ಕಳುಹಿಸಲು, ಹನೂಮಂತನು ಸಂನ್ಯಾಸಿಯವೇಷದಿಂದ ಅವರ ಬಳಿಗೆ ಹೋಗಿ, ಅವರ ವೃತ್ತಾಂತ ವನ್ನರಿತು, ಅವರ ಸಹಾಯದಿಂದ ಸುಗ್ರೀವನು ವಾಲಿವಧೆಮಾಡಲನುಕೂಲ ವಾಗುವುದೆಂದು ಯೋಚಿಸಿ, ಶ್ರೀರಾಮನು ಸಾಕ್ಷಾನ್ನಾರಯಣನೆಂದು ಅರಿತು, ತಾನು ಅವನ ಭೃತ್ಯನೆಂದು ಹೇಳಿ, ಅವರೀರ್ವರನ್ನೂ ಸುಗ್ರೀವನ ಬಳಿಗೆ ಕರೆತು ಕೊಂಡು ಬಂದು ಪರಸ್ಪರ ಸಹಾಯಮಾಡುವುವೆಂಬ ಪತ್ರಿಜ್ಞೆಯಿಂದ ಅಗ್ನಿ ಸಾಕ್ಷಿಕವಾಗಿ ಸಖ್ಯವುಂಟಾಗಿ, ತರುವಾಯ ಶ್ರೀರಾಮನು ವಾಲಿ ವಧಸಾಮರ್ಥ್ಯವನ್ನು ಪ್ರಕಾಶಿಸಿ, ದ್ವಂದ್ವಯುದ್ಧವನ್ನು ವಾಲಿಸುಗ್ರೀವರೆಸಗುವಂತೆ ಮಾಡಿ, ಆಗ ವಾಲಿಯನ್ನು ಸಂಹರಿಸಿ, ಕಿಷ್ಕಿಂಧಾರಾಜ್ಯವನ್ನೂ, ತಾರೆಯನ್ನೂ, ಸುಗ್ರೀವನಿಗೆ ಕೊಡಿಸುವನು.

ವರ್ಷಾಕಾಲವು ಕಳೆದ ಬಳಿಕ ಶರತ್ಕಾಲವು ಬರಲು, ಸುಗ್ರೀವನು ಕಪಿಗಳನ್ನು ಸೀತಾನ್ವೇಷಣಕಾರ್ಯಕ್ಕೆ ಕಳುಹಲು, ಪೂರ್ವ ಪಶ್ಚಿಮೋತ್ತರ ದಿಕ್ಕುಗಳಿಗೆ ಹೋದವರು ಎಲ್ಲಿಯೂ ಸೀತಾದೇವಿಯನ್ನು ಕಾಣದೆ, ಹಿಂದಕ್ಕೆ ಬಂದು, ಶ್ರೀರಾಮ ಸುಗ್ರೀವರಿಗೆ ಬಿನ್ನವಿಸುವರು.

ಆದರೆ, ದಕ್ಷಿಣಕ್ಕೆ ಹೋಗಿದ್ದ ಹನೂಮಂತನೇ ಮೊದಲಾದವರು ದಕ್ಷಿಣದ ಕಾಡುಗಳಲ್ಲೆಲ್ಲಾ ಹುಡುಕಿ, ಸೀತಾದೇವಿಯನ್ನು ಕಾಣದೆ ಆಹಾರವಿಲ್ಲದೆ ಬೆಂಡಾಗಿ, ಮಾರ್ಗದಲ್ಲಿ ದೈವಯೋಗದಿಂದ ಸುಪ್ರಭೆಯೆಂಬ ಸಿದ್ಧಳನ್ನು ಕಂಡು, ಅಮೃತದಿಂದ ಸತ್ತೃಪ್ತರಾಗಿ, ಅವಳ ಮಾತಿನಿಂದ ಮಹೇಂದ್ರ ಪರ್ವತಕ್ಕೆ ಬಂದು, ದೂರದರ್ಶಿಯಾದ

ಸಂಪಾತಿಯನ್ನೇ ಕಂಡರು. ಸಂಪಾತಿಯು ಲಂಕೆಗೆ ತನ್ನ ದೃಷ್ಟಿಯಿಟ್ಟು, ಅಲ್ಲಿ ಅಶೋಕ ವನದಲ್ಲಿ ಸೀತಾದೇವಿಯಿರುವುದನ್ನು ಕಂಡು, ಆ ಕಪಿಗಳಿಗೆ ಹೇಳಲು, ಅವರೂ ಅವನಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿ, ಆತನ ತಮ್ಮನ ಮರಣ ವಾರ್ತೆಯನ್ನು ಹೇಳಿ, ಯೋಗದಿಂದ ದೇಹಬಿಟ್ಟ ಅವನಿಗೆ ಸಂಸ್ಕಾರ ಮಾಡಿ, ಲಂಕೆಗೆ ಹೋಗಲು, ಜಾಂಬವಂತನ ನಾತಿನಿಂಗ ಶ್ರೀ ಆಂಜನೇಯನನ್ನು ಬೇಡುವರು. ತರುವಾಯ ಆಂಜನೇಯನೂ, ಶ್ರೀರಾಮನಿಂದಲೂ, ಸುಗ್ರೀವನಿಂದಲೂ, ಕಪಿಗಳಿಂದಲೂ ಪ್ರೇರಿತನಾಗಿ, ಲಂಕೆಗೆ ಸಮುದ್ರವನ್ನು ದಾಟಿ ಹೋಗಿ, ಸೀತಾನ್ವೇಷಣಮಾಡಿ ಕೊಂಡು ಬರಲು ಸಮ್ಮತಿಸಿ, ಮನಸ್ಸು ಮಾಡಿದನು;" ಎಂದು ಹೇಳಿರುವುದನ್ನು ಶ್ರೀ ಸೂತರು ಭಾರದ್ವಾಜಾದಿಗಳಗೆ ನಿರೂಪಿಸಿರುತ್ತಾರೆ.

ಇಂತು ಐವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಏಕಪಂಚಾಶತ್ತಮೋಽಧ್ಯಾಯಃ

ಅಥ ಶ್ರೀ ರಾಮಚರಿತೇ ಸುಂದರಕಾಣ್ಡ ಕಥಾನಿರೂಪಣಮ್.

॥ ಶ್ರೀ ಮಾರ್ಕಂಡೇಯ ಉವಾಚ ॥

ಸ ತು ರಾವಣನೀತಾಯಾಃ ಸೀತಾಯಾಃ ಪರಿಮಾರ್ಗಣಮ್ ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥ ೧ ॥

ಅಂಜಲಿಂ ಪ್ರಾಙ್ಮುಖಂ ಕೃತ್ವಾ ಸ ಚ ನತ್ವಾತ್ಮಜಂ ರವೇಃ ।
ಮನಸಾ ವಂದ್ಯ ರಾಮಂ ಚ ಲಕ್ಷ್ಮಣಂ ಚ ಮಹಾರಥಮ್ ॥ ೨ ॥

ಐವತ್ತೊಂದನೆಯ ಅಧ್ಯಾಯವು.

ಇನ್ನು ಶ್ರೀರಾಮಚರಿತೆಯಲ್ಲಿ ಸುಂದರಕಾಣ್ಡಕಥಾ ನಿರೂಪಣೆಯು.

೧. ಶ್ರೀ ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಇಂತು ಹೇಳುತ್ತಾನೆ:—

'ಎಲೈ ಸಹಸ್ರಾನೀಕರಾಯನೇ! ಕೇಳು; ಹನೂಮಂತನು ರಾವಣನು ಅಪಹರಿಸಿಕೊಂಡು ಹೋದ ಸೀತಾದೇವಿಯು ಇರುವ ಸ್ಥಾನವನ್ನು ಹುಡುಕಲು, ಚಾರಣರೆಂಬ ದೇವಜಾತಿ ವಿಶೇಷರು ಸಂಚರಿಸುವ ಆಕಾಶ ಮಾರ್ಗದಲ್ಲಿ ಹೋಗಲು ಬಯಸಿದನು.

೨. ಅವನು ಪೂರ್ವದಿಕ್ಕಿಗೆ ಎದುರಾಗಿ ಕೈಜೋಡಿಸಿ, ಸೂರ್ಯತನಯನಾದ ಸುಗ್ರೀವನಿಗೆರಗಿ, ಮಹಾರಥರಾದ ರಾಮ ಲಕ್ಷ್ಮಣರಿಗೆ ಮನದಲ್ಲಿ ನಮಸ್ಕರಿಸಿದನು.

ಸಾಗರಂ ಸರಿತಶ್ಚೈವ ಪ್ರಣಮ್ಯ ಶಿರಸಾ ಕಪಿಃ ।
ಜ್ಞಾತೀಂಶ್ಚೈವ ಪರಿತ್ಯಜ್ಯ ಕೃತ್ವಾ ಚೈವ ಪ್ರದಕ್ಷಿಣಾಮ್ ॥ ೩ ॥

ಅರಿಷ್ಟಂ ಗಚ್ಛ ಪಂಥಾನಂ ಪುಣ್ಯಂ ವಾಯುನಿಷೇವಿತಮ್ ।
ಪುನರಾಗಮನಾಯೇತಿ ವಾನರೈರಭಿಪೂಜಿತಃ ॥ ೪ ॥

ತೇಜಸ್ಸತ್ವಂ ತಥಾ ವೀರ್ಯಮಾವಿವೇಶಾಥ ವೀರ್ಯವಾನ್ ।
ಮಾರ್ಗಮಾಲೋಕಯನ್ದೂರಾದೂರ್ಧ್ವಂ ಪ್ರಣಿಹಿತೇಕ್ಷಣಃ ॥ ೫ ॥

ಸಂಪೂರ್ಣಮಿವ ಚಾತ್ಮಾನಂ ಭಾವಯಿತ್ವಾ ಮಹಾಬಲಃ ।
ಉತ್ಪಪಾತ ಗಿರೇಃ ಶೃಂಗಾನ್ನಿಷ್ಪೀಡ್ಯ ಗಿರಿಮಂಬರಮ್ ॥ ೬ ॥

---

೩. ಬಳಿಕ ಕಪಿಯು ತಲೆಬಾಗಿ ಸಾಗರ ನದಿಗಳಿಗೆ ಪೊಡಮಟ್ಟು, ಜ್ಞಾತಿಗಳಾದ ಕಪಿಗಳನ್ನು ಬಿಟ್ಟು, ಬಲವಂದನು.

೪-೫. 'ಎಲೈ ವಾಯುನಂದನನೇ! ನೀನು ಮಲಯಮಾರುತದಿಂದ ಕೂಡಿದ ಪುಣ್ಯ ಮಾರ್ಗದಲ್ಲಿ ಸಂಚರಿಸಿ, ಮತ್ತೂ ಹಿಂದಿರುಗಿ ಬರುವುದಕ್ಕೆ ಸುಖವಾಗಿ ಯಾವ ಅಡ್ಡಿಯೂ ಇಲ್ಲದೆ ಇರುವ ಹಾಗೆ ಹೋಗಿ ಬಾ;' ಎಂದು ಹೇಳಿ, ವಾನರರಿಂದ ಪೂಜಿತನಾದ, ವೀರ್ಯವಂತನಾದ ಹನೂಮಂತನು ಬಳಿಕ ಪರಾಭಿಭವಸಮರ್ಥವಾದ ತೇಜವನ್ನೂ, ಶಾರೀರಿಕಬಲರೂಪವಾದ ಸತ್ವವನ್ನೂ, ಆಂತರಬಲವಾದ ವೀರ್ಯವನ್ನೂ ತಾಳಿದನು; ದೂರದಿಂದ ಹಾದಿಯನ್ನು ನೋಡುತ್ತಿರುವವನಾದುದರಿಂದಲೇ, ಮೇಲೆ ದೃಷ್ಟಿಯನ್ನು ಇಟ್ಟವನಾದನು.

೬. ಮಹಾಬಲನಾದ ಹನೂಮಂತನು, ತಾನು ಸಮುದ್ರವನ್ನು ದಾಟಿ ಹೋಗಿ, ಹಿಂದಿರುಗಿ ಬರುವಷ್ಟು ಸಂಪೂರ್ಣವಾದ ಶಕ್ತಿಯುಳ್ಳವನನ್ನಾಗಿ, ತನ್ನನ್ನು (ಆತ್ಮಪ್ರತ್ಯಯವನ್ನು) ಭಾವಿಸಿದವನಾಗಿ, ಆ ಮಹೇಂದ್ರಪರ್ವತದ ಶಿಖರದಿಂದ ಆ ಬೆಟ್ಟವನ್ನು ತುಳಿದು, ಆಗಸಕ್ಕೆ ಹಾರಿದನು.

ಪಿತುರ್ಮಾರ್ಗೇಣ ಯಾತಸ್ಯ ವಾಯುಪುತ್ರಸ್ಯ ಧೀಮತಃ ।
ರಾಮಕಾರ್ಯಪರಸ್ಯಾಸ್ಯ ಸಾಗರೇಣ ಪ್ರಚೋದಿತಃ ॥ ೭ ॥

ವಿಶ್ರಾಮಾರ್ಥಂ ಸಮುತ್ತಸ್ಥೌ ಮೈನಾಕೋ ಲವಣೋದಧೇಃ ।
ತಂ ನಿರೀಕ್ಷ್ಯ ನಿಪೀಡ್ಯಾಥ ರಯಾತ್ಸಂಭಾಷ್ಯ ಸಾದರಮ್ ॥ ೮ ॥

ಉತ್ಪತನ್ಗಗನೇ ವೀರಃ ಸಿಂಹಿಕಾಸ್ಯಂ ಮಹಾಕಪಿಃ ।
ಆಸ್ಯಪ್ರಾಪ್ತಂ ಪ್ರವಿಶ್ಯಾಥ ವೇಗೇನಾಂತರ್ವಿನಿಃಸೃತಃ ॥ ೯ ॥

ಪ್ರವಿಶ್ಯ ಗತವಾನ್ಶೀಘ್ರಂ ವಾಯುಪುತ್ರಃ ಪ್ರತಾಪವಾನ್ ।
ಲಂಘಯಿತ್ವಾ ತು ತಂ ದೇಶಂ ಸಾಗರಂ ಪವನಾತ್ಮಜಃ ॥ ೧೦ ॥

ತ್ರಿಕೂಟಶಿಖರೇ ರಮ್ಯೇ ವೃಕ್ಷಾಗ್ರೇ ನಿಪಪಾತ ಹ ।
ತಸ್ಮಿನ್ಸ ಪರ್ವತಶ್ರೇಷ್ಠೇ ದಿನಂ ನೀತ್ವಾ ದಿನಕ್ಷಯೇ ॥ ೧೧ ॥

೭–೮. ತಂದೆಯಾದ ವಾಯುವು ಸಂಚರಿಸುವ ಹಾದಿಯಾದ ಆಕಾಶದಿಂದ ಹೋದ, ವಾಯುಕುಮಾರನಾದ, ಜ್ಞಾನಿಯಾದ, ಶ್ರೀ ರಾಮಚಂದ್ರನ ಕಾರ್ಯದಲ್ಲಿ ಅತ್ಯಂತಾಸಕ್ತನಾದ, ಈ ಹನೂಮಂತನಿಗೆ, ಮಾರ್ಗಮಧ್ಯದಲ್ಲಿ ವಿಶ್ರಾಂತಿಯ ಸಲುವಾಗಿ, ಸಮುದ್ರರಾಜನಿಂದ ಪ್ರೇರಿತನಾದ ಮೈನಾಕನು (ಹಿಮವಂತನ ಮಗನು) ಲವಣ ಸಮುದ್ರದಿಂದ ಮೇಲಕ್ಕೆ ಬಂದನು. ಹನೂಮಂತನು ಅವನನ್ನು ಕಂಡು ಬಳಿಕ ವೇಗವನ್ನು ಕಡಿಮೆಮಾಡಿಕೊಂಡು, ಆದರದೊಡನೆ ಮಾತನಾಡಿದನು.

೯–೧೩. ಬಳಿಕ ವೀರನೂ, ಮಹಾಕಪಿಯೂ ಆದ ಆಂಜನೇಯನು ಆಗಸದಲ್ಲಿ ಹಾರುತ್ತಿರಲು, (ಛಾಯೆಯನ್ನು ಹಿಡಿಯುವ) ಸಿಂಹಿಕೆಯೆಂಬವಳು ಬಾಯ್ದೆರೆದು ಬರಲು, ಅವಳ ಬಾಯೊಳಗೆ ಹೊಕ್ಕು, (ತನ್ನ ಉಗುರುಗಳಿಂದ ಅವಳ ಹೊಟ್ಟೆಯನ್ನು ಬಗೆದು ಸಂಹರಿಸಿ,) ವೇಗದಿಂದ ಮತ್ತೆ ಹೊರಗೆ ಬಂದನು. ಪ್ರತಾಪಶಾಲಿಯಾದ ವಾಯುಪುತ್ರನು ಬೇಗನೆ ಹೊರಟುಹೋದನು. ಆ ಮೇಲೆ ವಾಯುತನಯನು, ಆ ಸಾಗರಪ್ರದೇಶವನ್ನು ಹಾರಿ, ಮನೋಹರವಾದ ತ್ರಿಕೂಟಪರ್ವತದ

ಸಂಧ್ಯಾಮುಪಾಸ್ಯ ಹನುಮಾನ್ತತೋ ಲಂಕಾಂ ಶನೈರ್ನಿಶಿ ।
ಲಂಕಾಭಿಧಾನಾಂ ನಿರ್ಜಿತ್ಯ ದೇವತಾಂ ಪ್ರವಿವೇಶ ಹ ॥ ೧೨ ॥

ಲಂಕಾಮನೇಕರತ್ನಾಢ್ಯಾಂ ಬಹ್ವಾಶ್ಚರ್ಯ ಸಮನ್ವಿತಾಮ್ ।
ರಾಕ್ಷಸೇಷು ಪ್ರಸುಪ್ತೇಷು ನೀತಿಮಾನ್ಪವನಾತ್ಮಜಃ ॥ ೧೩ ॥

ರಾವಣಸ್ಯ ತತೋ ವೇಶ್ಮ ಪ್ರವಿವೇಶಾಥ ಸಿದ್ಧಿಮಾನ್ ।
ಶಯಾನಂ ರಾವಣಂ ದೃಷ್ಟ್ವಾ ತಲ್ಪೇ ಮಹತಿ ವಾನರಃ ॥ ೧೪ ॥

ನಾಸಾಪುಟೈರ್ಘೋರರೂಪೈರ್ನಿಶ್ವಾಸಾಯಮೋಚಕೈಃ ।
ತಥೈವ ದಶಭಿರ್ವಕ್ತ್ರೈರ್ದಂಷ್ಟ್ರೋಪೇತೈಸ್ತು ಸಂಯುತಮ್ ।
ಸ್ತ್ರೀಸಹಸ್ರೈಸ್ತು ದೃಷ್ಟ್ವಾ ತಂ ನಾನಾಭರಣಭೂಷಿತಮ್ ।
ತಸ್ಮಿನ್ಸೀತಾಮದೃಷ್ಟ್ವಾ ತು ರಾವಣಸ್ಯ ಗೃಹೇ ಶುಭೇ ॥ ೧೫ ॥

ಶಿಖರವಲ್ಲಿ, ಮರದ ಮೇಲೆ, ಕಳೆಗಿಳಿದನು. ಅವನು ಆ ಶ್ರೇಷ್ಠವಾದ ಪರ್ವತದಲ್ಲಿ ಹಗಲನ್ನು ಕಳೆದು, ಹಗಲು ಮುಗಿಯುತ್ತಿರಲು, ಸಂಧ್ಯಾವಂದನೆಯನ್ನನುಷ್ಠಿಸಿ, ಬಳಿಕ ರಾತ್ರಿಯಲ್ಲಿ ಲಂಕೆಯೆಂಬ ಪುರರಕ್ಷಿಕೆಯಾದ ದೇವತೆಯನ್ನು ಜಯಿಸಿ, ಮೆಲ್ಲನೆ ಅನೇಕ ರತ್ನಗಳಿಂದ ತುಂಬಿದ, ಅನೇಕ ಆಶ್ಚರ್ಯಗಳಿಂದ ಯುಕ್ತವಾದ, ಲಂಕಾಪುರಿಯನ್ನು ನೀತಿವಂತನಾದ ವಾಯುಪುತ್ರನು ರಕ್ಕಸರೆಲ್ಲರೂ ಮಲಗಿರುವಾಗ ಒಳಹೊಕ್ಕನು.

೧೪. ಅಣಿಮಾದಿ ಸಿದ್ಧಿವಂತನಾದ ಹನೂಮಂತನು, ಬಳಿಕ ರಾವಣನ ಅರಮನೆಯನ್ನು ಹೊಕ್ಕನು. ಅನಂತರದಲ್ಲಿ ಆ ವಾನರನು ದೊಡ್ಡದಾದ ಮಂಚದಲ್ಲಿ ಹಾಸಿಗೆಯ ಮೇಲೆ ಮಲಗಿರುವ ರಾವಣನನ್ನು ಕಂಡನು.

೧೫–೧೬ ನಿಃಶ್ವಾಸೋಚ್ಛ್ವಾಸ ವಾಯುವನ್ನು ಬಿಡುತ್ತಲಿರುವ, ಭಯಂಕರವಾದ ಆಕಾರದ, ಮೂಗಿನ ಹೊಳ್ಳೆಗಳಿಂದಲೂ, ಹಾಗೆಯೇ ಕೋರೆಯ ಹಲ್ಲುಗಳಿಂದಲೂ ಕೂಡಿರುವ, ಹತ್ತು ಮೊಗದ ಅನೇಕ ತೆರನಾದ ತೊಡವುಗಳಿಂದಲಂಕೃತನಾದ,

ತಥಾ ಸ್ವನುಗೃಹೇ ಶೇತೇ ರಾಕ್ಷಸಾನಾಂ ಚ ನಾಯಕಮ್ ।
ದುಃಖಿತೋ ವಾಯುಪುತ್ರಸ್ತು ಸಂಪಾತೇರ್ವಚನಂ ಸ್ಮರನ್ ॥ ೧೬ ॥

ಅಶೋಕವನಿಕಾಂ ಪ್ರಾಪ್ತೋ ನಾನಾಪುಷ್ಪಸಮನ್ವಿತಾಮ್ ।
ವಾಸಿತಾಂ ಮಲಯವಾತೇನ ಚಂದನೇನ ಸುಗಂಧಿನಾ ॥ ೧೭ ॥

ಪ್ರವಿಶ್ಯ ಶಿಂಶಪಾವೃಕ್ಷಮಾಶ್ರಿತಾಂ ಜನಕಾತ್ಮಜಾಮ್ ।
ರಾಮಪತ್ನೀಂ ಸಮದ್ರಾಕ್ಷೀದ್ರಾಕ್ಷಸೀಭಿಃ ಸುರಕ್ಷಿತಾಮ್ ॥ ೧೮ ॥

ಅಶೋಕವೃಕ್ಷಮಾರುಹ್ಯ ಪುಷ್ಪಿತಂ ಮಧುಪವಲ್ಲಮ್ ।
ಆಸಾಂ ಚಕ್ರೇ ಹರಿಸ್ತತ್ರ ಸೇಯಂ ಸೀತೇತಿ ಸಂಸ್ಮರನ್ ॥ ೧೯ ॥

ಸಾವಿರಾರು ಹೆಣ್ಣುಗಳಿಂದ ಕೂಡಿರುವ, ಆ ರಾವಣನನ್ನು ನೋಡಿ, ರಾವಣನ ಆ ಶುಭ ಗೃಹದಲ್ಲಿ ಸೀತಾದೇವಿಯನ್ನು ಕಾಣಲಿಲ್ಲ. ಹಾಗೆಯೇ ಒಂದು ಮನೋಹರವಾದ ಕೊಠಡಿಯಲ್ಲಿ ರಾಕ್ಷಸರೊಡೆಯನಾದ ರಾವಣನು ಮಲಗಿದ್ದನು. ಆಗ ದುಮ್ಮಾನಗೊಂಡ ವಾಯುಸುತನು ಸಂಪಾತಿಯೆಂಬ ಹದ್ದಿನ ನುಡಿಯನ್ನು ಸ್ಮರಿಸುತ್ತಾ, ಅನೇಕತೆರನಾದ ಹೂಗಳಿಂದ ಕೂಡಿರುವ, ಸುಗಂಧಿಯಾದ ಚಂದನವುಳ್ಳ, ಮಲಯ ಮಾರುತನಿಂದ ಸುವಾಸನೆಗೊಂಡ, ಆ ಅಶೋಕ ವನಕ್ಕೆ ಬಂದನು.

೧೮. ಆ ವನವನ್ನು ಆಂಜನೇಯನು ಹೊಕ್ಕು, ಶಿಂಶಪಾ ವೃಕ್ಷವನ್ನು ಆಶ್ರಯಿಸಿದ್ದ, ಜನಕರಾಯನ ಕುವರಿಯಾದ, ರಕ್ಕಸಿಯರಿಂದ ಜೋಕೆಯಿಂದ ನೋಡಿಕೊಳ್ಳುತ್ತಲಿದ್ದ, ಶ್ರೀರಾಮನ ಮಡದಿಯನ್ನು ಕಂಡನು.

೧೯. ಆ ವಾನರನು ಹೂಬಿಟ್ಟ, ಮನೋಹರವಾದ, ತಳಿರುಗೊಂಡ, ಆ ಹುಗೆಯ ಮರವನ್ನೇರಿ, ಆ ಇವಳೇ ಸೀತಾದೇವಿಯೆಂದು ನೆನೆಯುತ್ತಾ, ಕುಳಿತುಕೊಂಡನು.

ಸೀತಾಂ ನಿರೀಕ್ಷ್ಯ ವೃಕ್ಷಾಗ್ರೇ ಯಾವದಾಸ್ತೇಽನಿಲಾತ್ಮಜಃ ।
ಸ್ತ್ರೀಭಿಃ ಪರಿವೃತಸ್ತತ್ರ ರಾವಣಸ್ತಾವದಾಗತಃ ॥ ೨೦ ॥

ಆಗತ್ಯ ಸೀತಾಂ ಪ್ರಾಹಾಥ ಪ್ರಿಯೇ ಮಾಂ ಭಜ ಕಾಮುಕಮ್ ।
ಭೂಷಿತಾ ಭವ ವೈದೇಹಿ ತ್ಯಜ ರಾಮಗತಂ ಮನಃ ॥ ೨೧ ॥

ಇತ್ಯೇವಂ ಭಾಷಮಾಣಂ ತಮಂತರ್ಧಾಯ ತೃಣಂ ತತಃ ।
ಪ್ರಾಹ ವಾಕ್ಯಂ ಶನೈಃ ಸೀತಾ ಕಂಪಮಾನಾಥ ರಾವಣಮ್ ॥ ೨೨ ॥

ಗಚ್ಛ ರಾವಣ ದುಷ್ಟ ತ್ವಂ ಪರದಾರಪರಾಯಣ ।
ಅಚಿರಾದ್ರಾಮಬಾಣಾಸ್ತೇ ಪಿಬಂತು ರುಧಿರಂ ರಣೇ ॥ ೨೩ ॥

---

೨೦. ಸೀತಾದೇವಿಯನ್ನು ನಿರೀಕ್ಷಿಸಿ, ಮರದ ತುದಿಯಲ್ಲಿ ವಾಯುಸುತನು ಕುಳಿತಿರುವ ಹೊತ್ತಿಗೆ, ರಾವಣನು ಹೆಂಗಳಿಂದ ಬಳಸಿಸವನಾಗಿ, ಅಲ್ಲಿಗೆ ಬಂದನು.

೨೧. ರಾವಣನು ಬಂದು,ಬಳಿಕ ಸೀತೆಯನ್ನು ಕುರಿತು, ಇಂತು ಹೇಳಿದನು. "ಎಲೌ ಪ್ರಿಯೆ ! ಕಾಮುಕನಾದ ನನ್ನನ್ನು ಸೇವಿಸು; ಅಲಂಕರಿಸಿಕೊ; ಎಲೌ ವಿದೇಹ ರಾಯಕುವರಿ ! ರಾಮನಲ್ಲಿರುವ ಮನವನ್ನು ಬಿಡು."

೨೨. ಈ ತೆರನಾಗಿ ಮಾತನಾಡುತ್ತಲಿರುವ ಆ ರಾವಣನಿಗೆ ಬಳಿಕ ನಡುಗುತ್ತಲಿರುವ ಸೀತಾದೇವಿಯು ನಡುವೆ ತೃಣವನ್ನುಇಟ್ಟುಕೊಂಡು ಇಂತು ಈ ನುಡಿಯನ್ನು ಮೆಲ್ಲಗೆ ಹೇಳಿದಳು.

೨೩. "ಎಲೈ ಹೆರರ ಮಡದಿಯಲ್ಲಿ ಮನವಿಟ್ಟ, ದುಷ್ಟನಾದ ರಾವಣನೇ ! ನೀನು ಹೋಗು; ಯುದ್ಧದಲ್ಲಿ ಶ್ರೀರಾಮನ ಬಾಣಗಳು ಶೀಘ್ರದಿಂದಲೇ ನಿನ್ನ ಕೆನ್ನೀರನ್ನು ಉಂಟಲಿ;"

ತಥೇತ್ಯುಕ್ತೋ ಭರ್ತ್ಸಿತಶ್ಚ ರಾಕ್ಷಸೀರಾಹ ರಾಕ್ಷಸಃ ।
ದ್ವಿಮಾಸಾಭ್ಯಂತರೇ ಚೈನಾಂ ವಶೀಕುರುತ ಮಾನುಷೀಮ್ ॥ ೨೪ ॥

ಯದಿ ನೇಚ್ಛತಿ ಮಾಂ ಸೀತಾ ತತಃ ಖಾದತ ಮಾನುಷೀಮ್ ।
ಇತ್ಯುಕ್ತ್ವಾ ಗತವಾನ್ದುಷ್ಟೋ ರಾವಣಃ ಸ್ವಂ ನಿಕೇತನಮ್ ॥ ೨೫ ॥

ತತೋ ಭಯೇನ ತಾಂ ಪ್ರಾಹೂ ರಾಕ್ಷಸ್ಯೋ ಜನಕಾತ್ಮಜಾಮ್ ।
ರಾವಣಂ ಭಜ ಕಲ್ಯಾಣಿ ಸಧನಂ ಸುಖಿನೀ ಭವ ॥ ೨೬ ।

ಇತ್ಯುಕ್ತ್ವಾ ಪ್ರಾಹ ತಾಃ ಸೀತಾ ರಾಘವೋಽಲಘುವಿಕ್ರಮಃ ।
ನಿಹತ್ಯ ರಾವಣಂ ಯುದ್ಧೇ ಸಗಣಂ ಮಾಂ ನಯಿಷ್ಯತಿ ॥ ೨೭ ॥

ನಾಹಮನ್ಯಸ್ಯ ಭಾರ್ಯಾ ಸ್ಯಾಮೃತೇ ರಾಮಂ ರಘೂತ್ತಮಮ್ ।
ಸ ಹ್ಯಾಗತ್ಯ ದಶಗ್ರೀವಂ ಹತ್ವಾ ಮಾಂ ಪಾಲಯಿಷ್ಯತಿ ॥ ೨೮ ॥

೨೪-೨೫. ಈ ಸೀತಾದೇವಿಯ ನುಡಿಗೆ ಹಾಗೆಯೇ ಆಗಲೆಂದು ಹೇಳಿದವನಾಗಿ, ತಿರಸ್ಕೃತನಾದ ರಕ್ಕಸನು ರಕ್ಕಸಿಯರಿಗೆ ಇಂತು ನುಡಿದನು :– " ಎಲೌ ರಕ್ಕಸಿಯರಿರಾ ! ಈ ಮಾನುಷಿಯನ್ನು ಎರಡು ತಿಂಗಳೊಳಗೆ ಸ್ವಾಧೀನ ಮಾಡಿರಿ; ಸೀತೆಯು ನನ್ನನ್ನು ಬಯಸದಿದ್ದಲ್ಲಿ ಬಳಿಕ, ಈ ಮಾನುಷಿಯನ್ನು ತಿನ್ನಿರಿ; " ಎಂದು ಹೇಳಿ, ದುಷ್ಟನಾದ ರಾವಣನು ತನ್ನ ಮನೆಗೆ ಹೋದನು-

೨೬-೨೮. ಬಳಿಕ ರಕ್ಕಸಿಯರು ಆ ಜನಕಾತ್ಮಜೆಗೆ ಇಂತು ಹೇಳಿದರು; — ' ಎಲೌ ಕಲ್ಯಾಣಿ ! ಶ್ರೀಮಂತನಾದ ರಾವಣನನ್ನು ಹೊಂದು ; ಸುಖಿನಿಯಾಗಿರು ;' ಎಂದು ರಕ್ಕಸಿಯರು ಹೇಳಲು, ಸೀತಾದೇವಿಯೂ ಅವರಿಗಿಂತೆಂದಳು :—' ಎಲೌ ! ಅಪಾರ ಪರಾಕ್ರಮಿಯಾದ ಶ್ರೀ ರಾಘವನು ಸಪರಿವಾರನಾದ ರಾವಣನನ್ನು ಕೊಂದು, ನನ್ನನ್ನು ಕರೆದುಕೊಂಡು ಹೋಗುವನು ; ನಾನು ರಘೂತ್ತಮನಾದ ಶ್ರೀ ರಾಮನನ್ನುಳಿದು, ಹೆರರ ಮಡದಿಯಾಗಲಾರೆನು ; ನನ್ನ ಇನಿಯನು ಇಲ್ಲಿಗೆ ಬಂದು, ದಶಕಂಠನನ್ನು ಕೊಂದು, ನನ್ನನ್ನು ರಕ್ಷಿಸುವನು."

ಇತ್ಯಾಕರ್ಣ್ಯ ವಚಸ್ತಸ್ಯಾ ರಾಕ್ಷಸ್ಯೋ ದದೃಶುರ್ಭಯಮ್ ।
ಹನ್ಯತಾಂ ಹನ್ಯತಾಮೇಷಾ ಭಕ್ಷ್ಯತಾಂ ಭಕ್ಷ್ಯತಾಮಿಯಮ್ ॥ ೨೯ ॥

ತತಸ್ತಾಸ್ತ್ರಿಜಟಾ ಪ್ರಾಹ ಸ್ವಪ್ನೇ ದೃಷ್ಟಮನಿಂದಿತಮ್ ।
ಶೃಣುಧ್ವಂ ದುಷ್ಟರಾಕ್ಷಸ್ಯೋ ರಾವಣಸ್ಯ ವಿನಾಶನಮ್ ॥ ೩೦ ॥

ರಕ್ಷೋಭಿಃ ಸಹ ಸರ್ವೈಸ್ತು ರಾವಣಸ್ಯ ಮೃತಿಪ್ರದಃ ।
ಲಕ್ಷ್ಮಣೇನ ಸಹ ಭ್ರಾತ್ರಾ ರಾಮಸ್ಯ ವಿಜಯಪ್ರದಃ ॥ ೩೧ ॥

ಸ್ವಪ್ನಃ ಶುಭೋ ಮಯಾ ದೃಷ್ಟಃ ಸೀತಾಯಾಶ್ಚ ಪತಿಪ್ರದಃ ।
ತ್ರಿಜಟಾ ವಾಕ್ಯಮಾಕರ್ಣ್ಯ ಸೀತಾಪಾರ್ಶ್ವಂ ವಿಸೃಜ್ಯ ತಾಃ ॥ ೩೨ ॥

ರಾಕ್ಷಸ್ಯಸ್ತಾ ಯಯುಃ ಸರ್ವಾಃ ಸೀತಾಮಾಹಾಂಜನಾಸುತಃ ।
ಕೀರ್ತಯನ್ರಾಮವೃತ್ತಾಂತಂ ಸಕಲಂ ಪವನಾತ್ಮಜಃ ॥ ೩೩ ॥

ಇಂತು ಸೀತಾದೇವಿಯು ನುಡಿದ ನುಡಿಯನ್ನು ಕೇಳಿ, ರಾಕ್ಷಸಿಯರು ಅವಳಿಗೆ ಭಯಪಡಿಸಿದರು; 'ಇವಳನ್ನು ಕೊಲ್ಲಿರಿ ಕೊಲ್ಲಿರಿ; ಇವಳನ್ನು ತಿನ್ನಿರಿ ತಿನ್ನಿರಿ;' ಎಂದು ಉಗ್ಗಡಿಸಿದರು.

೩೦–೩೩. ಅನಂತರ ತ್ರಿಜಟೆಯು ತಾನು ಸ್ವಪ್ನದಲ್ಲಿ ಕಂಡ, ಸ್ತುತ್ಯವಾದ ಸಂಗತಿಯನ್ನು ಅವರಿಗೆ ಇಂತು ಅರುಹಿದಳು :—' ಎಲೌ ದುಷ್ಟರಾಕ್ಷಸಿಯರಿರಾ! ಕೇಳಿರಿ; ಸಕಲ ರಾಕ್ಷಸರೊಡಗೂಡಿ, ರಾವಣನು ಹಾಳಾಗುವನು. ರಾವಣನಿಗೆ ಮರಣವನ್ನುಂಟುಮಾಡುವ, ತಮ್ಮನಾದ ಲಕ್ಷ್ಮಣನೊಡಗೂಡಿದ ಶ್ರೀ ರಾಮನಿಗೆ ಜಯವನ್ನುಂಟುಮಾಡುವ, ಸೀತಾದೇವಿಗೆ ಪತಿಯನ್ನು ಸೇರಿಸುವ, ಶುಭ ಸ್ವಪ್ನವನ್ನು ನಾನು ಕಂಡೆನು;' ಎಂಬೀ ತ್ರಿಜಟೆಯ ವಾಕ್ಯವನ್ನು ಕೇಳಿ, ಆ ರಕ್ಕಸಿಯರೆಲ್ಲರೂ, ಸೀತಾದೇವಿಯ ಪಾರ್ಶ್ವವನ್ನು ಬಿಟ್ಟು, ಹೊರಟುಹೋದರು. ಆಗ ವಾಯುವಿನ ಮತ್ತು ಅಂಜನೆಯ ಮಗನಾದ ಹನುಮಂತನು ಶ್ರೀರಾಮ ವೃತ್ತಾಂತವೆಲ್ಲವನ್ನೂ ಕೀರ್ತಿಸುತ್ತಾ, ಸೀತಾದೇವಿಗೆ ಇಂತು ಹೇಳಿದನು.

ತಸ್ಯಾಂ ವಿಶ್ವಾಸಮಾನೀಯ ದತ್ವಾ ರಾಮಾಂಗುಲೀಯಕಮ್ ।
ಸಂಭಾಷ್ಯ ಲಕ್ಷ್ಮಣಂ ಸರ್ವಂ ರಾಮಲಕ್ಷ್ಮಣಯೋಸ್ತತಃ ॥ ೩೪ ॥

ಮಹತ್ಯಾ ಸೇನಯಾ ಯುಕ್ತಃ ಸುಗ್ರೀವಃ ಕಪಿನಾಯಕಃ ।
ತೇನ ಸಾರ್ಧಮಿಹಾಗತ್ಯ ರಾಮಸ್ತವ ಪತಿಃ ಪ್ರಭುಃ ॥ ೩೫ ॥

ಲಕ್ಷ್ಮಣಶ್ಚ ಮಹಾವೀರೋ ದೇವರಸ್ತೇ ಶುಭಾನನೇ ।
ರಾವಣಂ ಸಗಣಂ ಹತ್ವಾ ತ್ವಾಮಿತ್ರಾದಾಯ ಗಚ್ಛತಿ ॥ ೩೬ ॥

ಇತ್ಯುಕ್ತಾ ಸಾ ತು ವಿಶ್ವಸ್ತಾ ವಾಯುಪುತ್ರಮಥಾಬ್ರವೀತ್ ।
ಕಥಮತ್ರಾಗತೋ ವೀರ ತ್ವಮುತ್ತೀರ್ಯ ಮಹೋದಧಿಮ್ ॥ ೩೭ ॥

ಇತ್ಯಾಕರ್ಣ್ಯ ವಚಸ್ತಸ್ಯಾಃ ಪುನಸ್ತಾಮಾಹ ವಾನರಃ ।
ಮಯೋತ್ತೀರ್ಣಂ ಗೋಷ್ಪದವತ್ಸಮುದ್ರೋಽಯಂ ವರಾನನೇ ॥ ೩೮ ॥

---

೩೪. ಆ ದೇವಿಯಲ್ಲಿ ನಂಬುಗೆಯನ್ನುಂಟುಮಾಡಿ, ಶ್ರೀರಾಮನ ಮುದ್ರೆಯುಂಗುರವನ್ನು ಕೊಟ್ಟು, ಲಕ್ಷ್ಮಣನ ವಿಷಯವನ್ನೂ, ಬಳಿಕ ಶ್ರೀ ರಾಮಲಕ್ಷ್ಮಣರೀರ್ವರ ಸಂಗತಿಯನ್ನೂ ಹೇಳಿದನು.

೩೫. 'ಸುಗ್ರೀವನೆಂಬ ಕಪಿರಾಜನು ದೊಡ್ಡ ಸೇನೆಯೊಡಗೂಡಿರುವನು. ಎಲೌ ತಾಯೇ! ನಿಮ್ಮ ಪತಿಯೂ, ಪ್ರಭುವೂ ಆದ ಶ್ರೀರಾಮನು ಆ ಸುಗ್ರೀವನೆಂಬ ಕಪಿನಾಯಕನೊಡಗೂಡಿ ಇಲ್ಲಿಗೆ ಬರುವನು.

೩೬. ಎಲೌ ಶುಭಾನನೆಯೇ! ನಿಮ್ಮ ಮೈದುನನಾದ, ಮಹಾಪರಾಕ್ರಮಿಯಾದ ಲಕ್ಷ್ಮಣನೂ, ಪರಿವಾರದೊಡಗೂಡಿದ ರಾವಣನನ್ನು ಸಂಹರಿಸಿ, ಇಲ್ಲಿ ನಿಮ್ಮನ್ನು ಕರೆದುಕೊಂಡು ಹೋಗುತ್ತಾನೆ.'

೩೭–೩೮. ಇಂತು ಆಂಜನೇಯನು ಹೇಳಲು, ಆ ದೇವಿಯು ಆತನಲ್ಲಿ ವಿಶ್ವಾಸಗೊಂಡು, (ನಂಬುಗೆಗೊಂಡು) ಬಳಿಕ ವಾಯುಪುತ್ರನಿಗೆ ಹೇಳಿದಳು:— 'ಎಲೈ ವೀರನೇ! ನೀನು ಮಹಾಸಮುದ್ರವನ್ನು ದಾಟಿ, ಇಲ್ಲಿಗೆ ಹೇಗೆ ಬಂದೆ?' ಎಂದು ದೇವಿಯು ಕೇಳಲು, ಆ ಮಾತನ್ನು ಕೇಳಿ, ವಾನರನಾದ ಹನೂಮಂತನು

ಜಪತಾ ರಾಮರಾಮೇತಿ ಸಾಗರೋ ಗೋಷ್ಪದಾಯತೇ ।
ದುಃಖಮಗ್ನಾಸಿ ವೈದೇಹಿ ಸ್ಥಿರಾ ಭವ ಶುಭಾನನೇ ॥ ೩೯ ॥

ಕ್ಷಿಪ್ರಂ ಪಶ್ಯಸಿ ರಾಮಂ ತ್ವಂ ಸತ್ಯಮೇತದ್ಬ್ರವೀಮಿ ತೇ ।
ಇತ್ಯಾಶ್ವಾಸ್ಯ ಸತೀಂ ಸೀತಾಂ ದುಃಖಿತಾಂ ಜನಕಾತ್ಮಜಾಮ್ ॥ ೪೦ ॥

ತಂ ಮುದ್ರಾಮಣಿಮಾಣಿಕ್ಯಂ ಶ್ರುತ್ವಾ ಕಾಕಪರಾಭವಮ್ ।
ನತ್ವಾ ತಾಂ ಪ್ರಸ್ಥಿತೋ ವೀರೋ ಗಂತುಂ ಕೃತಮತಿಃ ಕಪಿಃ ॥ ೪೧ ॥

ತೋರಣಸ್ಥೋ ನಿನಾದೋಚ್ಚೈಃ ರಾಮೋ ಜಯತಿ ವೀರ್ಯವಾನ್ ।
ಅನೇಕಾನ್ರಾಕ್ಷಸಾನ್ಸತ್ವಾನ್ಸೇನಾಃ ಸೇನಾಪತೀಂಶ್ಚ ಸಃ ॥ ೪೨ ॥

ಮತ್ತೂ ಆ ದೇವಿಗೆ ಹೇಳಿದನು :—'ಎಲೌ ವರಾನನೆಯೇ ! ನಾನು ಗೋಷ್ಪದದಂತೆ ಈ ಸಮುದ್ರವನ್ನು ದಾಟಿದೆನು. 'ಶ್ರೀ ರಾಮ ರಾಮ,' ಎಂದು ಜಪಿಸುತ್ತಿರುವ ನನಗೆ ಈ ಸಮುದ್ರವು ಗೋಷ್ಪದಂತಾಗುತ್ತದೆ. ಎಲೌ ವೈದೇಹಿಯೇ ! ನೀವು ದುಃಖದಲ್ಲಿ ಮುಳುಗಿರುವಿರಿ ; ಸ್ಥಿರಚಿತ್ತರಾಗಿರಿ ; ನೀವು ಬೇಗನೆ ಶ್ರೀ ರಾಮನನ್ನು ಕಾಣುವಿರಿ; ನಿಮಗೆ ಸತ್ಯವಾದುದನ್ನು ಅರಿಕೆಮಾಡುತ್ತಿರುವೆನು,' ಇಂತು ಸತಿಯೂ, ದುಃಖಿತೆಯೂ ಆದ, ಜನಕಾತ್ಮಜೆಯಾದ, ಸೀತಾದೇವಿಯನ್ನು ಸಮಾಧಾನಗೊಳಿಸಿ, ದೇವಿಯಿಂದ ಶ್ರೀರಾಮಾಭಿಜ್ಞಾನಾರ್ಥವಾಗಿ ಮುದ್ರಾಮಣಿಮಾಣಿಕ್ಯವಾದ ಚೂಡಾ ಮಣಿಯನ್ನು ತೆಗೆದುಕೊಂಡು, ಶ್ರೀ ರಾಮನು ಕಾಕಾಸುರನನ್ನು ದಂಡಿಸಿದ, ವೃತ್ತಾಂತವನ್ನು ಕೇಳಿ, ಲಂಕೆಯಿಂದ ಹಿಂದಿರುಗಲು ನಿಶ್ಚಯಿಸಿದ, ವೀರನಾದ ಆಂಜನೇಯನು ಹೊರಟನು.

೪೨–೪೫. ಬಳಿಕ ಪುರದ್ವಾರದಲ್ಲಿದ್ದು, ಗಟ್ಟಿಯಾಗಿ, 'ವೀರ್ಯವಂತನಾದ ಶ್ರೀ ರಾಮನು ಸರ್ವೋತ್ಕೃಷ್ಟನಾಗಿರುತ್ತಾನೆ;' ಎಂದು ಅಬ್ಬರಿಸಿದನು. ತರು ವಾಯು ಮೇಲೆ ಬೀಳಲು ಬಂದ, ಅನೇಕ ಪರಾಕ್ರಮಿಗಳಾದ ರಕ್ಷಸರನ್ನೂ, ಸೇನೆ

ತದಾ ತ್ವಕ್ಷಕುಮಾರಂ ತು ಹತ್ವಾ ರಾವಣಸೈನಿಕಮ್ ।
ಸಾಶ್ವಂ ಸಸಾರಥಿಂ ಹತ್ವಾ ಇಂದ್ರಜಿತ್ತಂ ಸಮಾಗತಃ ।
ರಾವಣಸ್ಯ ಪುರಃ ಸ್ಥಿತ್ವಾ ರಾಮಂ ಸಂಕೀರ್ತ್ಯ ಲಕ್ಷ್ಮಣಮ್ ॥ ೪೩ ॥

ಸುಗ್ರೀವಂ ಚ ಮಹಾವೀರ್ಯಂ ದಗ್ಧ್ವಾ ಲಂಕಾಮಶೇಷತಃ ।
ನಿರ್ಭರ್ತ್ಸ್ಯ ರಾವಣಂ ದುಷ್ಟಂ ಪುನಃ ಸಂಭಾಷ್ಯ ಜಾನಕೀಮ್ ॥ ೪೪ ॥

ಭೂಯಸ್ಸಾಗರಮುತ್ತೀರ್ಯ ಜ್ಞಾತೀನಾಸಾದ್ಯ ವೀರ್ಯವಾನ್ ।
ಸೀತಾದರ್ಶನಮಾವೇದ್ಯ ಹನೂಮಾಂಶ್ಚೈವ ಪೂಜಿತಃ ॥ ೪೫ ॥

ವಾನರೈಃ ಸಾರ್ಧಮಾಗತ್ಯ ಹನೂಮಾನ್ಮಧುವನಂ ಮಹತ್ ।
ನಿಹತ್ಯ ರಕ್ಷಪಾಲಾಂಸ್ತು ಪಾಯಯಿತ್ವಾ ಚ ತನ್ಮಧು ॥ ೪೬ ॥

ಗಳನ್ನೂ, ಸೇನಾಪತಿಗಳನ್ನೂ ಆ ಆಂಜನೇಯನು ಸಂಹರಿಸಿ, ಆಗ ಪ್ರತಿಭಟಿಸಿ ಬಂದ ಅಕ್ಷಕುಮಾರನೆಂಬ ರಾವಣ ಸೈನಿಕನನ್ನು ಸಾರಥಿ ಕುದುರೆಗಳೊಡನೆ ಸಂಹರಿಸಿದನು. ಬಳಿಕ ಇಂದ್ರಜಿತುವು ಬಂದು ಬ್ರಹ್ಮಾಸ್ತ್ರದಿಂದ ಕಟ್ಟಿ ರಾವಣನ ಎದುರಿಗೆ ಕರೆದುಕೊಂಡು ಹೋಗಲು, ರಾವಣನ ಇದಿರಿನಲ್ಲಿ ನಿಂತು, ಪರಾಕ್ರಮಿಗಳಾದ ಶ್ರೀ ರಾಮ ಲಕ್ಷ್ಮಣ ಸುಗ್ರೀವರನ್ನು ಕೊಂಡಾಡಿ, ಲಂಕೆಯನ್ನು ಸಮಗ್ರವಾಗಿ ಸುಟ್ಟು, ದುಷ್ಟನಾದ ರಾವಣನನ್ನು ಧಿಕ್ಕರಿಸಿ, ಮತ್ತೂ ಸೀತಾದೇವಿಯನ್ನು ಮಾತನಾಡಿಸಿ, ಪುನಃ ಸಮುದ್ರವನ್ನು ದಾಟಿ ಬಂದು, ಜ್ಞಾತಿಗಳಾದ ಕಪಿಗಳನ್ನು ಹೊಂದಿ, ಪರಾಕ್ರಮಶಾಲಿಯಾದ ಹನುಮಂತನು ತಾನು ಸೀತಾದೇವಿಯನ್ನು ಕಂಡ ಸಂಗತಿಯನ್ನರುಹಿ ಅವರಿಂದ ಪೂಜಿತನಾದನು.

೪೬—೪೯. ಅನಂತರದಲ್ಲಿ ಹನುಮಂತನು ವಾನರರೊಡನೆ ಹಿರಿದಾದ ಮಧುವನಕ್ಕೆ ಬಂದನು. ಅಲ್ಲಿ ಕಾವಲುಗಾರರನ್ನು ಬಾಧಿಸಿ, ಎಲ್ಲರಿಗೂ ಮಧುವನ್ನು ಪಾನ

ಸರ್ವೇ ದಧಿಮುಖಂ ಪ್ರಾಪ್ಯ ಹರ್ಷಿತಂ ಹರಿಭಿಃ ಸಹ ।
ಖಮುತ್ಪತ್ಯ ಚ ಸಂಪ್ರಾಪ್ಯ ರಾಮಲಕ್ಷ್ಮಣಪಾದಯೋಃ ॥ ೪೭ ॥

ನತ್ವಾ ತು ಹನುಮಾಂಸ್ತತ್ರ ಸುಗ್ರೀವಂ ಚ ವಿಶೇಷತಃ ।
ಆದಿತಃ ಸರ್ವಮಾವೇದ್ಯ ಸಮುದ್ರತರಣಾದಿಕಮ್ ॥ ೪೮ ॥

ಕಥಯಾಮಾಸ ರಾಮಾಯ ಸೀತಾ ದೃಷ್ಟಾ ಮಯೇತಿ ವೈ ।
ಅಶೋಕವನಿಕಾಮಧ್ಯೇ ಸೀತಾದೇವೀ ಸುದುಃಖಿತಾ ॥ ೪೯ ॥

ರಾಕ್ಷಸೀಭಿಃ ಪರಿವೃತಾ ತ್ವಾಂ ಸ್ಮರಂತೀ ಚ ಸರ್ವದಾ ।
ಅಶ್ರುಪೂರ್ಣಮುಖೀ ದೀನಾ ತವ ಪತ್ನೀ ವರಾನನಾ ॥ ೫೦ ॥

ಶೀಲವೃತ್ತಸಮಾಯುಕ್ತಾ ತತ್ರಾಪಿ ಜನಕಾತ್ಮಜಾ ।
ಸರ್ವತ್ರಾನ್ವೇಷ್ಯಮಾಣೇನ ಮಯಾ ದೃಷ್ಟಾ ಪತಿವ್ರತಾ ॥ ೫೧ ॥

ಮಾಡಿಸಿ, ಆ ವನಾಧಿಪತಿಯಾದ, ತುಷ್ಟನಾದನಧಿಮುಖನೆಂಬ ಕಪಿಯನ್ನು ಹೊಂದಿದನು. ಬಳಿಕ ಆಂಜನೇಯನು ಕಪಿಗಳೊಡನೆ ಆಗಸದಲ್ಲಿ ಹಾರಿಕೊಂಡು ಬಂದು, ಶ್ರೀ ರಾಮಲಕ್ಷ್ಮಣರ, ಮತ್ತು ಸುಗ್ರೀವನ ಚರಣಾರವಿಂದಗಳಿಗೆರಗಿದನು. ವಿಶೇಷವಾಗಿ ಮೊದಲಿನಿಂದ ಸಮುದ್ರ ಲಂಘನವೇ ಮೊದಲಾದ ವೃತ್ತಾಂತವನ್ನೆಲ್ಲಾ ಕಪಿರಾಜನಾದ ಸುಗ್ರೀವನೊಡನಿದ್ದ ಶ್ರೀರಾಮ ಲಕ್ಷ್ಮಣರ ಸನ್ನಿಧಾನದಲ್ಲಿ ಅರಿಕೆಮಾಡಿ, ಅಶೋಕವನದ ನಡುವೆ, ಅತ್ಯಂತ ದುಃಖಿತೆಯಾದ ಸೀತಾದೇವಿಯನ್ನು ತಾನು ಕಂಡೆನೆಂದು ಆಂಜನೇಯನು ಶ್ರೀ ರಾಮನಿಗೆ ವಿಜ್ಞಾಪಿಸಿದನು.

೫೦. ‘ಎಲೈ ಸ್ವಾಮಿಯೇ! ರಕ್ಕಸಿಯರಿಂದ ಪರಿವೃತಳಾಗಿ, ಯಾವಾಗಲೂ ನಿನ್ನನ್ನೇ ಸ್ಮರಿಸುತ್ತಾ, ಕಂಬನಿಯಿಂದ ತುಂಬಿದ ಮುಖವುಳ್ಳವಳೂ, ದೀನೆಯೂ ಆಗಿ, ನಿನ್ನ ಮಡದಿಯಾದ ವರಾನನೆಯಿರುವಳು.

೫೧. ಅಲ್ಲಿಯೂ ಜನಕಾತ್ಮಜೆಯಾದ ದೇವಿಯು, ಶೀಲದಿಂದಲೂ, ವೃತ್ತದಿಂದಲೂ ಕೂಡಿರುವಳು. ನಾನು ಎಲ್ಲೆಡೆಗಳಲ್ಲಿಯೂ ಹುಡುಕುತ್ತಾ ಇದ್ದವನು ಆ ಪತಿವ್ರತೆಯನ್ನು ಕಂಡೆನು.

ಮಯಾ ಸಂಭಾಷಿತಾ ಸೀತಾ ವಿಶ್ವಸ್ತಾ ರಘುನಂದನ ।
ಅಲಂಕಾರಃ ಸುಮಣಿಮಾಂಸ್ತಯಾ ತೇ ಪ್ರೇಷಿತಃ ಪ್ರಭೋ ॥ ೫೨ ॥

'ಇತ್ಯುಕ್ತ್ವಾ ದತ್ತವಾಂಸ್ತಸ್ಮೈ ಚೂಡಾಮಣಿಮನುತ್ತಮಮ್'
ಇದಂ ಚ ವಚನಂ ತುಭ್ಯಂ ಪತ್ನ್ಯಾ ಸಂಪ್ರೇಷಿತಂ ಶೃಣು ।
ಚಿತ್ರಕೂಟೇ ಮದಂಗೇ ತು ಸುಪ್ತೇ ತ್ವಯಿ ಮಹಾವ್ರತ ॥ ೫೩ ॥

ವಾಯಸಾಭಿಭವಂ ರಾಜಂಸ್ತತ್ಕಿಲ ಸ್ಮರ್ತುಮರ್ಹಸಿ ।
ಅಲ್ಪಾಪರಾಧೇ ರಾಜೇಂದ್ರ ತ್ವಯಾ ಬಲಿಭುಜಿ ಪ್ರಭೋ ॥ ೫೪ ॥

ಯತ್ಕೃತಂ ತನ್ನ ಕರ್ತುಂ ಚ ಶಕ್ಯಂ ದೇವಾಸುರೈರಪಿ ।
ಬ್ರಹ್ಮಾಸ್ತ್ರಂ ತು ತದೋತ್ಸೃಷ್ಟಂ ರಾವಣಂ ಕಿಂ ನ ಜೇಷ್ಯಸಿ ।
ಇತ್ಯೇವಮಾದಿ ಬಹುಶಃ ಪ್ರೋಕ್ತಾ ಸೀತಾ ರುರೋದ ಹ ॥ ೫೫ ॥

---

೫೨. ಎಲೈ ರಘುನಂದನನೇ! ನನ್ನಲ್ಲಿ ನಂಬುಗೆಗೊಂಡ ಸೀತಾದೇವಿಯನ್ನು ನಾನು ಮಾತನಾಡಿಸಿದೆನು. ಎಲೈ ಪ್ರಭುವೇ! ಅವರು ನಿನಗೆ ಅನರ್ಘರತ್ನಯುಕ್ತವಾದ ಚೂಡಾಮಣಿಯನ್ನು ಅಭಿಜ್ಞಾನಾರ್ಥವಾಗಿ ಕಳುಹಿಸಿರುತ್ತಾರೆ.'

೫೩–೫೫. ಇಂತು ನುಡಿದು ಹನುಮಂತನು ಶ್ರೀರಾಮನಿಗೆ ಅತ್ಯುತ್ತಮವಾದ ಚೂಡಾಮಣಿಯನ್ನಿತ್ತನು. "ಎಲೈ ಸ್ವಾಮಿಯೇ! ನಿನಗೆ ನಿನ್ನ ಪತ್ನಿಯು ಹೇಳಿರುವ ಸಂದೇಶವನ್ನು ಕೇಳು; 'ಎಲೈ ಮಹಾವ್ರತನೇ! ಚಿತ್ರಕೂಟದಲ್ಲಿ ನನ್ನೊಡಲನ್ನು ನಿನ್ನಲ್ಲಿಟ್ಟು ಮಲಗಿರಲು, ಕಾಕಾಸುರನು ಮಾಡಿದ ತಿರಸ್ಕಾರವನ್ನು ಎಲೈ ರಾಯನೇ! ನೀನು ಸ್ಮರಿಸಿಕೊಳ್ಳಲು ಅರ್ಹನಾಗಿರುತ್ತೀಯೆ; ಎಲೈ ಪ್ರಭುವೇ ರಾಜೇಂದ್ರನೇ! ಸ್ವಲ್ಪವಾದ ತಪ್ಪನ್ನೆಸಗಿದ ಆ ಬಲಿಯನ್ನು ತಿನ್ನತಕ್ಕ ಕಾಕಾಸುರನಲ್ಲಿ ನೀನು ಯಾವ ಪ್ರತೀಕಾರವನ್ನು ಮಾಡಿದೆಯೋ, ಅದನ್ನು ದೇವಾಸುರರೂ ಮಾಡಲ್ಲಾರರು. ಆಗ ಅವನ ಮೇಲೆ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಿದೆ; ಲೋಕಹಿಂಸಕನಾದ ರಾವಣನನ್ನು ಜಯಿಸುವುದಿಲ್ಲವೆ?' ಇವೇ ಮೊದಲಾದ ಅನೇಕ ವಿಷಯಗಳನ್ನು ಸೀತಾದೇವಿಯರು ಹೇಳಿ ಅತ್ತರು.

ಏವಂ ತು ದುಃಖಿತಾ ಸೀತಾ ತಾಂ ಮೋಕ್ತುಂ ಯತ್ನಮಾಚರ ।
ಇತ್ಯೇವಮುಕ್ತೇ ಪವನಾತ್ಮಜೇನ
ಸೀತಾವಚಸ್ತಚ್ಛುಭಭೂಷಣಂ ಚ ।
ಶ್ರುತ್ವಾ ಚ ದೃಷ್ಟ್ವಾ ಚ ರುರೋದ ರಾಮಃ ।
ಕಪಿಂ ಸಮಾಲಿಂಗ್ಯ ಶನೈಃ ಪ್ರತಸ್ಥೇ ॥ ೫೬ ॥

ಇತಿ ಶ್ರೀ ನರಸಿಂಹಪುರಾಣೇ ರಾಮಪ್ರಾದುರ್ಭಾವೇ ಸುಂದರಕಾಣ್ಡ

ಕಥಾನಿರೂಪಣಂ ನಾಮ ಏಕಪಂಚಾಶತ್ತಮೋಽಧ್ಯಾಯಃ

---

೫೬. ಇಂತು ದೇವಿಯರು ದುಃಖಗೊಂಡಿರುವರು. ಎಲೈ ಪ್ರಭುವೇ ! ಅವರನ್ನು ಬಂಧನದಿಂದ ಬಿಡಿಸಲು ಉದ್ಯಮವನ್ನು ನಡೆಸು;" ಇಂತು ವಾಯುಸುತನು ಹೇಳಲು, ಶ್ರೀ ರಾಮಚಂದ್ರನು ಸೀತಾದೇವಿಯ ಸಂದೇಶ ವಚನವನ್ನು ಕೇಳಿಯೂ, ಆ ಚೂಡಾಮಣಿಯೆಂಬ ತೊಡಿಗೆಯನ್ನು ನೋಡಿಯೂ, ಅತ್ತನು. ಆ ವಾನರನಾದ ಆಂಜನೇಯನನ್ನು ಅಪ್ಪಿಕೊಂಡು, ಮೆಲ್ಲಗೆ ಹೊರಟನು;" ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಶ್ರೀರಾಮಪ್ರಾದುರ್ಭಾವದಲ್ಲಿ
ಸುಂದರ ಕಾಂಡ ಕಥಾನಿರೂಪಣವೆಂಬ ಐವತ್ತೊಂದನೆಯ ಅಧ್ಯಾಯವು ಮುಗಿದುದು.

ಐವತ್ತೊಂದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಮಾರ್ಕಂಡೇಯ ಮುನಿಯು ಶ್ರೀರಾಮಾವತಾರ ಚರಿತೆಯನ್ನು ಸಹಸ್ರಾನೀಕರಾಯನಿಗೆ ನಿರೂಪಿಸುತ್ತಾ, ‘ ಶ್ರೀ ಆಂಜನೇಯನು ಕಪಿಗಳಿಂದ ಸನ್ಮಾನಿತನಾಗಿ, ಶ್ರೀ ರಾಮಲಕ್ಷ್ಮಣ ಸುಗ್ರೀವರಿಗೆ ಮನಸ್ಸಿನಲ್ಲಿ ಎರಗಿದವನಾಗಿ, ರಾವಣನು ಕದ್ದೊಯ್ದ ಸೀತಾದೇವಿಯನ್ನು ಹುಡುಕಲು ಅಂತರಿಕ್ಷ ಮಾರ್ಗದಿಂದ ಹಾರಿಹೋಗಲು ಬಯಸಿ, ತನ್ನಲ್ಲಿ ತಾನು ನಂಬುಗೆಗೊಂಡವನಾಗಿ, ಮಹೇಂದ್ರ ಪರ್ವತದ ಶಿಖರದಿಂದ ಆಗಸಕ್ಕೆಗರಿದನು. ಅಂತು ವಾಯುತನಯನು ವಾಯುಮಾರ್ಗದಿಂದ್ಯೆತರುತ್ತಿರಲು, ಸಮುದ್ರರಾಯನ ಅಪ್ಪಣೆಯಂತೆ ಹಿಮವಂತನ ಮಗನಾದ ಮೈನಾಕಪರ್ವತನು ಮೇಲಕ್ಕೆ ಬಂದು, ವೇಗದಿಂದ ಹೋಗುತ್ತಲಿದ್ದ ಆಂಜನೇಯನನ್ನು ತಡೆದು, ವಿಶ್ರಮಿಸಿಕೊಂಡು ಹೋಗ ಬೇಕೆಂದು ಬೇಡಿದನು. ಆಂಜನೇಯನು ಕಾರ್ಯದ ತ್ವರೆಯಲ್ಲಿ ಆತನ ನುಡಿಯಿಂದಲೇ ಸತ್ಕೃತನಾಗಿ ಮುಂದೆ ಹೋಗುತ್ತಾ, ಮಾರ್ಗದಲ್ಲಿ ತನ್ನನ್ನು ತಿನ್ನಲು ಬಾಯ್ದೆರೆದು ಬಂದ, ಸಿಂಹಿಕೆಯ ಬಾಯಲ್ಲಿ ಅಣುವಾಗಿ ಹೊಕ್ಕು, ಈಚೆಗೆ ಬಂದು ಮುಂದಕ್ಕೆ ಹೋಗಿ ದಕ್ಷಿಣದಿಕ್ಕಿನಲ್ಲಿ ಸಾಗರವನ್ನು ದಾಟಿ, ತ್ರಿಕೂಟಶಿಖರವನ್ನು ಹೊಂದಿ, ಅಲ್ಲಿ ಗಿಡದಮೇಲೆ ಹಗಲನ್ನು ಕಳೆದು, ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನೆಸಗಿ, ಆ ರಾತ್ರಿಯಲ್ಲಿ ಲಂಕಾ ದೇವತೆಯನ್ನು ಜಯಿಸಿ, ಅತ್ಯಂತ ಸುಂದರವಾದ, ಅನೇಕ ರತ್ನಾದ್ಯಲಂಕೃತವಾದ ಲಂಕಾಪಟ್ಟಣವನ್ನು ಹೊಕ್ಕನು. ಅಲ್ಲಿ ರಾವಣನ ಅರಮನೆಯನ್ನು ಹೊಕ್ಕು, ಅನೇಕ ಸಾಸಿರ ಹೆಣ್ಗಳಿಂದ ಕೂಡಿದ, ಅಂತಃಪುರದಲ್ಲಿ ಮಲಗಿದ್ದ ರಾವಣನನ್ನು ಕಂಡನು. ಅಲ್ಲಿ ಎಲ್ಲೆಲ್ಲಿ ಹುಡುಕಿದರೂ ಶ್ರೀರಾಮನ ಪತ್ನಿಯಾದ ಸೀತಾದೇವಿಯನ್ನು ಕಾಣದೆ, ಕಡೆಗೆ ಸಂಪಾತಿಯ ಮಾತನ್ನು ಸ್ಮರಿಸಿಕೊಂಡು, ಆಂಜನೇಯನು ಅಶೋಕ ವನಕ್ಕೆ ಬಂದು, ಒಳ ಹೊಕ್ಕು, ಅಶೋಕ ಮರದ ಕೆಳಗೆ ರಕ್ಕಸಿಯರಿಂದ ರಕ್ಷಿತಳಾದ ಜನಕಜೆಯನ್ನು ಕಂಡು, ಮರವನ್ನೇರಿ ಕುಳಿತನು.

ಆ ಸಮಯಕ್ಕೆ ಸರಿಯಾಗಿ ರಾವಣನೂ ಸ್ತ್ರೀಯರಿಂದ ಪರಿವೃತನಾಗಿ ಬಂದು, ದೇವಿಯನ್ನು ತನ್ನನ್ನು ವರಿಸೆಂದು ಅನೇಕ ವಿಧವಾಗಿ ಕೇಳಿದನು. ಆಗ ದೇವಿಯು ಹುಲ್ಲನ್ನು ನಡುವೆಯಿಟ್ಟು ಕೊಂಡು, ಅಂತು ದುರ್ವೃತ್ತನಾದ ರಾವಣನನ್ನು ಶ್ರೀರಾಮನು ಬೇಗನೆ ಬಂದು ಸಂಹರಿಸುವನೆಂದು ಹೇಳಲು, ರಾವಣನು ಆ ರಕ್ಕಸಿಯರಿಗೆ 'ದೇವಿಯನ್ನು ಎರಡು ತಿಂಗಳೊಳಗೆ ತನಗೆ ಅನುಕೂಲೆಯನ್ನಾಗಿಸಿರಿ; ಇಲ್ಲವಾದರೆ ಅವಳನ್ನು ತಿಂದುಬಿಡಿರಿ,' ಎಂದು ಅಣತಿಯಿತ್ತು ಹೋಗಲು, ಆ ರಕ್ಕಸಿಯರೂ ಅಂತೆಯೇ ಬೆದರಿಸತೊಡಗಿದರು. ಆಗ ದೇವಿಯು ಶ್ರೀರಾಮನು ಬಂದು ಪರಿವಾರ ಸಹಿತನಾದ ರಾವಣನನ್ನು ಸಂಹರಿಸುವನು; ತಾನು ಹೆರರ ಮಡದಿಯಾಗುವುದಿಲ್ಲವೆನಲು, ತ್ರಿಜಟೆಯೆಂಬ ರಕ್ಕಸಿಯೂ ಅಂತೆಯೇ ತಾನೂ ಶುಭ ಸ್ವಪ್ನ ಕಂಡೆನೆಂದು ಹೇಳುವಳು. ಆಗ ರಕ್ಕಸಿಯರು ಆ ವೃತ್ತಾಂತವನ್ನು ರಾವಣನಿಗರುಹಲು ತೆರಳುವರು.

ಆಗ ಆಂಜನೇಯನು ಅಮ್ಮನವರಿಗೆ ಕಾಣಿಸಿಕೊಂಡು ಶ್ರೀರಾಮನನ್ನು ವರ್ಣಿಸಿ, ಮುದ್ರೆಯುಂಗುರವನ್ನು ಕೊಟ್ಟು, ಶುಭ ಸಂದೇಶವನ್ನರುಹಿ, ಅವರಿಂದಲೂ ಚೂಡಾ ಮಣಿಯನ್ನು ಕೊಂಡು, ಕಾಕಾಸುರ ವೃತ್ತಾಂತವನ್ನೂ ಅಭಿಜ್ಞಾನಾರ್ಥವಾಗಿ ಕೇಳಿ, ಅಶೋಕವನವನ್ನು ಧ್ವಂಸಮಾಡಿ, ಅನೇಕ ಸೈನ್ಯ ಪರಿವೃತನಾಗಿ ಯುದ್ಧಕ್ಕೆ ಬಂದ ಅಕ್ಷಯಕುಮಾರನನ್ನು ಕೊಂದು, ಇಂದ್ರಜಿತುವಿನಿಂದ ಬ್ರಹ್ಮಾಸ್ತ್ರ ಬದ್ಧನಾಗಿ, ರಾವಣನನ್ನು ಕಂಡು, ಶ್ರೀ ರಾಮಾದಿಗಳ ಪರಾಕ್ರಮವನ್ನು ಕೊಂಡಾಡಿ ತನ್ನ ಬಾಲದ ಅಗ್ನಿಯಿಂದ ಲಂಕೆಯನ್ನು ಸುಟ್ಟು, ಮತ್ತು ದೇವಿಯನ್ನು ದರ್ಶನಮಾಡಿ, ಬೀಳ್ಕೊಂಡು, ಸಮುದ್ರವನ್ನು ದಾಟಿಬಂದು, ತನ್ನ ದಾಯಿಗ ವಾನರರಿಗೆ ಆ ವೃತ್ತಾಂತವನ್ನರುಹಿ, ಅವರೊಡನೆ ಬರುತ್ತಾ, ಮಧ್ಯೇ ಮಧುವನದಲ್ಲಿ ವಾನರರಿಗೂ ಮಧುವನ್ನು ಪಾನಮಾಡಿಸಿ, ಸಂತಸದಿಂದ ಶ್ರೀ ರಾಮಲಕ್ಷ್ಮಣ ಸುಗ್ರೀವರ ಸನ್ನಿಧಿಗೆ ಬಂದೆರಗಿದನು. ಆಗ ಆಂಜನೇಯನು ಶ್ರೀ ರಾಮನಿಗೆರಗಿ, ಸೀತಾದರ್ಶನ ವೃತ್ತಾಂತವನ್ನು ಹೇಳಿ, ಚೂಡಾಮಣಿಯನ್ನಿತ್ತು, ಅಭಿಜ್ಞಾನಾರ್ಥವಾಗಿ ಅತಿ ರಹಸ್ಯವಾದ ಕಾಕಾಸುರ ವೃತ್ತಾಂತರೂಪಸಂದೇಶವನ್ನೂ ಹೇಳಲು, ಶ್ರೀರಾಮನು

ಮರ್ತ್ಯನಂತೆ ದುಃಖವನ್ನು ಹೊಂದಿ ಆಂಜನೇಯನನ್ನು ಅಪ್ಪಿ, ಮುಂದಿನ ಕೆಲಸಕ್ಕೆ ಹೊರಟನು" ಎಂದು ಹೇಳಿದುದನ್ನು ಶ್ರೀ ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇಂತು ಐವತ್ತೊಂದನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ದ್ವಿಪಂಚಾಶತ್ತಮೋಽಧ್ಯಾಯಃ

ಅಥ ಶ್ರೀ ರಾಮಚರಿತೇ ಯುದ್ಧಕಾಣ್ಡಕಥಾ ನಿರೂಪಣಮ್.

॥ ಶ್ರೀ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ಪ್ರಿಯಾವಾರ್ತಾಂ ವಾಯುಪುತ್ರೇಣ ಕೀರ್ತಿತಾಮ್ ।
ರಾಮೋ ಗತ್ವಾ ಸಮುದ್ರಾಂತಂ ವಾನರೈಃ ಸಹ ವಿಸ್ತೃತೈಃ ॥ ೧ ॥

ಸಾಗರಸ್ಯ ತಟೇ ರಮ್ಯೇ ತಾಲೀವನವಿರಾಜಿತೇ ।
ಸುಗ್ರೀವೋ ಜಾಂಬವಾಂಶ್ಚಾಥ ವಾನರೈರತಿಹರ್ಷಿತೈಃ ॥ ೨ ॥

ಐವತ್ತೆರಡನೆಯ ಅಧ್ಯಾಯವು.

ಇನ್ನು ಶ್ರೀರಾಮಚರಿತೆಯಲ್ಲಿ ಯುದ್ಧಕಾಣ್ಡ ಕಥಾನಿರೂಪಣೆಯು.

೧. ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಜನಿಗೆ ಇಂತು ನಿರೂಪಿಸುತ್ತಾನೆ :—

'ಎಲೈ ರಾಜನೇ! ಕೇಳು; ವಾಯುಸುತನಾದ ಆಂಜನೇಯನು ಹೇಳಿದ ಇನಿಯಳ ಸುದ್ದಿಯನ್ನು ಇಂತು ಕೇಳಿದ ಶ್ರೀರಾಮನು ವಿಸ್ತಾರವಾದ ವಾನರರ ತಂಡದಿಂದ ಕೂಡಿ, ಸಮುದ್ರದ ಸಮೀಪಕ್ಕೆ ಹೋದನು.

೨–೩. ತಾಲೀವನದಿಂದ ಸೊಬಗುವಡೆದ, ಮನೋಹರವಾದ, ಸಾಗರದ ದಡದಲ್ಲಿ ಸುಗ್ರೀವನೂ ಜಾಂಬವಂತನೂ ಬಂದಿರಲು, ಕಡುಸಂತಸಗೊಂಡ, ಲೆಕ್ಕಮಾಡ

ಸಂಖ್ಯಾತೀತೈರ್ವೃತಃ ಶ್ರೀಮಾನ್ನಕ್ಷತ್ರೈರಿವ ಚಂದ್ರಮಾಃ ।
ಅನುಜೇನ ಚ ಧೀರೇಣ ವೀಕ್ಷ್ಯ ತಸ್ಥೌ ಸರಿತ್ಪತಿಮ್ ॥ ೩ ॥

ರಾವಣೇನಾಥ ಲಂಕಾಯಾಂ ಸ ಸೂಕ್ತೋ ಭರ್ತ್ಸಿತೋಽನುಜಃ ।
ವಿಭೀಷಣೋ ಮಹಾಬುದ್ಧಿಃ ಶಾಸ್ತ್ರಜ್ಞೈರ್ಮಂತ್ರಿಭಿಃ ಸಹ ॥ ೪ ॥

ನರಸಿಂಹೇ ಮಹಾದೇವೇ ಶ್ರೀಧರೇ ಭಕ್ತವತ್ಸಲೇ ।
ಏವಂ ರಾಮೇಽಚಲಾಂ ಭಕ್ತಿಮಾಗತ್ಯ ವಿನತೋ ತದಾ ॥ ೫ ॥

ಕೃತಾಂಜಲಿರುವಾಚೇದಂ ರಾಮಮಕ್ಲಿಷ್ಟಕಾರಿಣಮ್ ।
ರಾಮ ರಾಮ ಮಹಾಬಾಹೋ ದೇವ ದೇವ ಜನಾರ್ದನ ॥ ೬ ॥

ವಿಭೀಷಣೋಽಸ್ಮಿ ಮಾಂ ರಕ್ಷ ಅಹಂ ತೇ ಶರಣಂ ಗತಃ ।
ಇತ್ಯುಕ್ತ್ವಾ ನಿಪಪಾತಾಥ ಪ್ರಾಂಜಲೀ ರಾಮಪಾದಯೋಃ ॥ ೭ ॥

ಲಾಗದಷ್ಟು ಹೆಚ್ಚಾದ ಕಪಿಗಳಿಂದ ಪರಿವೃತನಾಗಿ, ನಕ್ಷತ್ರಗಳಿಂದ ಪರಿವೃತನಾದ, ಕಾಂತಿವಂತನಾದ ಚಂದ್ರನಂತೆ, ಧೀರನಾದ ಲಕ್ಷ್ಮಣನೊಡಗೂಡಿ, ಶ್ರೀರಾಮನು ಸಮುದ್ರರಾಜನನ್ನು ನೋಡಿ, ನಿಂತನು.

೪-೭. ಅನಂತರದಲ್ಲಿ ಅತ್ತ ಲಂಕೆಯಲ್ಲಿ (ಶ್ರೀರಾಮರಿಗೆ ಅವರ ಮಡದಿಯನ್ನು ಒಪ್ಪಿಸೆಂದು) ರಾವಣನಿಗೆ ಬುದ್ಧಿಯನ್ನು ಹೇಳಿದ, ಅವನ ತಮ್ಮನಾದ, ಮಹಾಮತಿಯಾದ ವಿಭೀಷಣನು, ಅಣ್ಣನಿಂದ ತಿರಸ್ಕೃತನಾಗಿ, ಶಾಸ್ತ್ರಗಳನ್ನರಿತ ಮಂತ್ರಿಗಳೊಡಗೂಡಿ, ಶ್ರೀನರಸಿಂಹ ಸ್ವರೂಪನೂ, ಹೆದ್ದೈವವೂ, ಲಕ್ಷ್ಮೀಧರನೂ, ಭಕ್ತರಲ್ಲಿ ವಾತ್ಸಲ್ಯವುಳ್ಳವನೂ ಆದ ಶ್ರೀ ರಾಮಚಂದ್ರನಲ್ಲಿ ದೃಢವಾದ ಭಕ್ತಿಯನ್ನು ತಾಳಿ. ಆಗ ಬಂದು ಬಾಗಿದವನಾಗಿ, ಭಕ್ತರಿಗೆ ಸೊಗವನ್ನೆಸಗುವ ಶ್ರೀ ರಾಮನಿಗೆ ಕೈಜೋಡಿಸಿ, ಇದನ್ನು ಹೇಳಿದನು :—'ಎಲೈ ಮಹಾಬಾಹುವೂ, ದೇವೋತ್ತಮನೂ. ದುಷ್ಟಜನ ಸಂಹಾರಕನೂ ಆದ ಶ್ರೀರಾಮನೇ ! ನಾನು ವಿಭೀಷಣನು ; ನಿನ್ನ ಮರೆಯನ್ನು ಹೊಕ್ಕಿರುತ್ತೇನೆ. ನನ್ನನ್ನು ರಕ್ಷಿಸು ;' ಎಂದು ಬಿನ್ನವಿಸಿ, ಬಳಿಕ ಕೈಜೋಡಿಸಿಕೊಂಡವನಾಗಿ ಶ್ರೀ ರಾಮನ ಅಡಿದಾವರೆಗಳಲ್ಲಿ ದಿಂಡುಗೆಡವಿದನು.

ನಿವೇದಿತಾರ್ಥೋಽಥ ರಾಮಸ್ತು ತಮುತ್ಥಾಪ್ಯ ಮಹಾಮತಿಮ್ ।
ಸಮುದ್ರತೋಯೈಸ್ತಂ ವೀರಮಭಿಷಿಚ್ಯ ವಿಭೀಷಣಮ್ ॥ ೮ ॥

ಲಂಕಾರಾಜ್ಯಂ ತವೈವೇತಿ ಪ್ರೋಕ್ತ್ವಾ ಸಂಭಾಷ್ಯ ತಸ್ಥಿವಾನ್ ।
ತತೋ ವಿಭೀಷಣೇನೋಕ್ತಂ ತ್ವಂ ವಿಷ್ಣುರ್ಭುವನೇಶ್ವರಃ ॥ ೯ ॥

ಅಬ್ಧಿರ್ದದಾತು ಮಾರ್ಗಂ ತೇ ದೈವತಂ ಯಾಚಯಾಮಹೇ ।
ಇತ್ಯುಕ್ತ್ವಾ ವಾನರೈಃ ಸಾರ್ಧಂ ಶಿಷ್ಯೈಸ್ತತ್ರ ಸ ರಾಘವಃ ॥ ೧೦ ॥

ಸೇತುಬಂಧನಮಾತ್ರಾಂ ತು ಮಹೀಂ ವ್ಯಾಪ್ಯ ಜನಾರ್ದನಃ ।
ಸುಪ್ತೇ ರಾಮೇ ಗತಂ ತತ್ರ ತ್ರಿರಾತ್ರಮಮಿತದ್ಯುತಿಃ ॥ ೧೧ ॥

ತತಃ ಕ್ರುದ್ಧೋ ಜಗನ್ನಾಥೋ ರಾಮೋ ರಾಜೀವಲೋಚನಃ ।
ಸಂಕ್ಷೋಭನಮಪಃ ಕರ್ತುಮಸ್ತ್ರಮಾಗ್ನೇಯಮಾದದೇ ।
ತತೋತ್ಥಾಯ ವಚಃ ಪ್ರಾಹ ಲಕ್ಷ್ಮಣಶ್ಚ ರುಷಾನ್ವಿತಮ್ ॥ ೧೨ ॥

೮–೧೨. ಅನಂತರವಲ್ಲಿ ಶ್ರೀ ರಾಮನು ಅವನು ಬಿನ್ನವಿಸಿದ ಸಂಗತಿಯನ್ನರಿತು, ಮಹಾಮತಿಯಾದ ಆ ವಿಭೀಷಣನನ್ನು ಮೇಲಕ್ಕೆಬ್ಬಿಸಿ, ಆ ವೀರನಿಗೆ ಸಮುದ್ರಜಲದಿಂದ ಅಭಿಷೇಕಮಾಡಿ, ' ಲಂಕಾರಾಜ್ಯವನ್ನು ನಿನಗೇ ಕೊಡುವೆನು ;' ಎಂದು ಹೇಳಿ, ಅವನ ಕುಶಲ ಪ್ರಶ್ನೆಗಳನ್ನು ಮಾಡಿ, ಇದ್ದನು. ಬಳಿಕ ವಿಭೀಷಣನು ಹೇಳಿದನು :—' ನೀನು ಹದಿನಾಲ್ಕು ಲೋಕಗಳೊಡೆಯನಾದ ಶ್ರೀ ಮಹಾವಿಷ್ಣುವು ; 'ಸಮುದ್ರಾಧಿದೈವತವು ನಿನಗೆ ಮಾರ್ಗವನ್ನೀಯಲಿ ;' ಎಂದು ನಾವು ಬೇಡುತ್ತೇವೆ ;' ಎಂದು ವಿಭೀಷಣನು ಹೇಳಲು, ಅಲ್ಲಿ ಶ್ರೀರಾಮನು ಶಿಷ್ಯರಾದ ಕಪಿಗಳಿಂದ ಕೂಡಿ, ಸೇತುವೆಯನ್ನು ಕಟ್ಟಲು ಬೇಕಾದಷ್ಟು ಭೂಮಿಯನ್ನು ವ್ಯಾಪಿಸಿ ಮಲಗಿಕೊಳ್ಳಲು, ಮೂರು ರಾತ್ರಿಗಳು ಕಳೆದುಹೋದುವು. ಆಗಲೂ ಸಮುದ್ರನು ಎಡೆಬಿಡದಿರಲು ಬಳಿಕ ಅಪಾರವಾದ ಕಾಂತಿಸಂಪನ್ನನಾದ, ಪುಂಡರೀಕಾಕ್ಷನಾದ, ಜಗದೊಡೆಯನಾದ ಶ್ರೀರಾಮನು ಕ್ರುದ್ಧನಾಗಿ ಸಾಗರದ ನೀರನ್ನು ಒಣಗಿಸಲು ಆಗ್ನೇಯಾಸ್ತ್ರವನ್ನು ತೆಗೆದುಕೊಂಡನು. ತರುವಾಯವಲ್ಲಿ ಲಕ್ಷ್ಮಣನು ಮೇಲಕ್ಕೆದ್ದು, ಮುನಿವರನಿಗೆ ಇಂತು ನುಡಿದನು.

ಕ್ರೋಧಸ್ತೇ ಲಯಕರ್ತಾ ಹಿ ಏವಂ ಜಹಿ ಮಹಾಮತೇ ।
ಭೂತಾನಾಂ ರಕ್ಷಣಾರ್ಥಾಯ ಅವತಾರಸ್ತ್ವಯಾ ಕೃತಃ ॥ ೧೬ ॥

ಕ್ಷಂತವ್ಯಂ ದೇವದೇವೇಶ ಇತ್ಯುಕ್ತ್ವಾ ಧೃತವಾನ್ಶರಮ್ ।
ತತೋ ರಾತ್ರಿತ್ರಯೇ ಯಾತೇ ಕ್ರುದ್ಧಂ ರಾಮಮವೇಕ್ಷ್ಯ ಸಃ ॥ ೧೪ ॥

ಆಗ್ನೇಯಾಸ್ತ್ರಾಚ್ಚ ಸಂತ್ರಸ್ತಃ ಸಾಗರೋऽಭ್ಯೇತ್ಯ ಮೂರ್ತಿಮಾನ್ ।
ಆಹ ರಾಮಂ ಮಹಾದೇವಂ ರಕ್ಷಮಾಮಪಕಾರಿಣಮ್ ॥ ೧೫ ॥

ಮಾರ್ಗೋ ದತ್ತೋ ಮಯಾ ತೇऽದ್ಯ ಕುಶಲಃ ಸೇತುಕರ್ಮಣಿ ।
ನಲಶ್ಚ ಕಥಿತೋ ವೀರಸ್ತೇನ ಕಾರಯ ರಾಘವ ॥ ೧೭ ॥

---

೧೩. 'ಎಲೈ ಮಹಾಮತಿಯೇ! ನಿನ್ನ ಕ್ರೋಧವು ಜಗತ್ತಿಗೆ ಅಳಿವನ್ನೆಸಗುವುದಷ್ಟೇ ಇದನ್ನು ಬಿಡು; ನೀನು ಪ್ರಾಣಿಗಳನ್ನು ರಕ್ಷಿಸಲು ಅವತಾರವನ್ನೆಸಗಿರುವೆ.

೧೪–೧೮. ದೇವಶ್ರೇಷ್ಠರಾದ ಬ್ರಹ್ಮರುದ್ರಾದಿಗಳಿಗೂ ನಿಯಾಮಕನೇ! ಕ್ಷಮಿಸುವುದು;' ಎಂದು ಹೇಳಿ, ಬಾಣವನ್ನು ಹಿಡಿದುಕೊಂಡನು. ಬಳಿಕ ಮೂರು ರಾತ್ರಿಗಳು ಕಳೆಯುತ್ತಿರಲು, ಆ ಸಾಗರನು ಕ್ರುದ್ಧನಾದ ಶ್ರೀರಾಮನನ್ನು ನೋಡಿ, ಆಗ್ನೇಯಾಸ್ತ್ರದಿಂದಂಜಿದವನಾಗಿ, ಮೂರ್ತಿವಂತನಾಗಿ ಬಂದು, ಹೆದ್ದೈವನಾದ ಶ್ರೀರಾಮನಿಗೆ ಬಿನ್ನವಿಸಿದನು. 'ಎಲೈ ಸ್ವಾಮಿಯೇ! ಅಪಕಾರಿಯಾದ ನನ್ನನ್ನು ಕಾಪಿಡು; ಎಲೈ ರಾಘವನೇ! ನಾನು ನಿನಗೆ ಮಾರ್ಗವನ್ನು ಕೊಟ್ಟಿರುತ್ತೇನೆ. ಈಗ ಸಂಕಟದ ಕಜ್ಜದಲ್ಲಿ ವೀರನಾದ ನಲನು ಕುಶಲನೆಂದು ಹೇಳಿಸಿಕೊಂಡಿರುತ್ತಾನೆ. ಅವನಿಂದ ನಿನಗೆ ಎಷ್ಟು ವಿಸ್ತೀರ್ಣವು ಇಷ್ಟವೋ, ಅಷ್ಟು ಅಗಲದ ಉತ್ತಮವಾದ ಸೇತುಬಂಧನವನ್ನು ಮಾಡಿಸು;' ಎಂದು ಸಮುದ್ರರಾಜನು ವಿಜ್ಞಾಪಿಸಿದನು. ತರು

ರಾಮಾವದಿಷ್ಟಂ ತು ವಿಸ್ತೀರ್ಣಂ ಸೇತುಬಂಧನಮುತ್ತಮಮ್ ।
ತತೋ ನಲಮುಖೈರನ್ಯೈರ್ವಾನರೈರಮಿತೌಜಸೈಃ ॥ ೧೭ ॥

ಬಂಧಯಿತ್ವಾ ಮಹಾಸೇತುಂ ತೇನ ಗತ್ವಾ ಸ ರಾಘವಃ ।
ಸುವೇಲಾಖ್ಯಂ ಗಿರಿಂ ಪ್ರಾಪ್ತಃ ಸ್ಥಿತೋಽಸೌ ವಾನರೈರ್ವೃತಃ ॥ ೧೮ ॥

ಹರ್ಮ್ಯಸ್ಥಲಂ ಸ್ಥಿತಂ ದುಷ್ಟಂ ರಾವಣಂ ವೀಕ್ಷ್ಯ ತಿಷ್ಠತಿ ।
ರಾಮಾದೇಶಾದಥೋತ್ಪ್ಲುತ್ಯ ದೂತಕರ್ಮಸು ತತ್ಪರಃ ॥ ೧೯ ॥

ಪ್ರಾದಾತ್ಪಾದಪ್ರಹಾರಂ ತು ರೋಷಾದ್ರಾವಣಮೂರ್ಧನಿ ।
ವಿಸ್ಮಿತಂ ತೈಃ ಸುರಗಣೈರ್ವೀಕ್ಷಿತಃ ಸೋಽಥ ವೀರ್ಯವಾನ್ ॥ ೨೦ ॥

ಸಾಧಯಿತ್ವಾ ಪ್ರತಿಜ್ಞಾಂ ತಾಂ ಸುವೇಲಂ ಪುನರಾಗತಃ ।
ತತೋ ವಾನರಸೇನಾಭಿಃ ಸಂಖ್ಯಾತೀತಾಭಿರಚ್ಯುತಃ ॥ ೨೧ ॥

ವಾಯದಲ್ಲಿ ನಲನೇ ಮುಂದಾಳಾದ, ಇತರ ಅತುಲಪರಾಕ್ರಮಿಗಳಾದ ಕಪಿಗಳಿಂದ ಮಹಾಸೇತುವೆಯನ್ನು ದಕ್ಷಿಣಸಮುದ್ರದಲ್ಲಿ ಕಟ್ಟಿಸಿ, ಈ ಶ್ರೀ ರಾಮಚಂದ್ರನು ಆ ಸೇತುವೆಯಿಂದ ಹೋಗಿ, ಸುವೇಲವೆಂಬ ಪರ್ವತವನ್ನು ಹೊಂದಿ, ವಾನರರಿಂದ ಪರಿವೃತನಾಗಿದ್ದನು.

೧೯–೨೦. ಅನಂತರದಲ್ಲಿ ಬೇಹಿನವರ ಕಜ್ಜದಲ್ಲಿ ಆಸಕ್ತನಾದ ಶ್ರೀ ಹನೂಮಂತನು ಹಾರಿಹೋಗಿ, ಅರಮನೆಯಲ್ಲಿದ್ದ ದುಷ್ಟ ರಾವಣನನ್ನು ಕಂಡು, ರೋಷದಿಂದ ರಾವಣನ ನೆತ್ತಿಯಲ್ಲಿ ಕಾಲಿನಿಂದ ಒದ್ದನು. ದೇವತೆಗಳು ಈ ಪರಾಕ್ರಮಿಯನ್ನು ಕಟ್ಟಚ್ಚರಿಯಿಂದ ನೋಡಿದರು.

೨೧–೨೨. ಆ ರಾಮದೂತನು ಆ ತನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಂಡು, ಮತ್ತೂ ಸುವೇಲಾಚಲಕ್ಕೆ ಹಿಂದಿರುಗಿ ಬಂದನು. ಬಳಿಕ ಅಲ್ಲಿ ಪ್ರತಾಪಶಾಲಿಯಾದ, ಅಚ್ಯುತನಾದ ಶ್ರೀರಾಮನು ಎಣಿಸಲಾಗದ ವಾನರರ ದಳದಿಂದ

ರುರೋಧ ರಾವಣಪುರೀಂ ಲಂಕಾಂ ತತ್ರ ಪ್ರತಾಪವಾನ್ ।
ರಾಮಃ ಸಮಂತಾದಾಲೋಕ್ಯ ಪ್ರಾಹ ಲಕ್ಷ್ಮಣಮಂತಿಕೇ ॥ ೨೨ ॥

ತೀರ್ಣೋರ್ಣವಃ ಕವಲಿತೇವ ಕಪೀಶ್ವರಸ್ಯ
ಸೇನಾಭಟೈರ್ಝಟಿತಿ ರಾಕ್ಷಸರಾಜಧಾನೀ ।
ಯತ್ಪೌರುಷೋಚಿತಮಿಹಾಂಕುರಿತಂ ಮಯಾ
ತದ್ದೈವಸ್ಯ ವಶ್ಯಮಪರಂ ಧನುಷೋಽಥವಾಽಸ್ಯ ॥ ೨೩ ॥

ಗ॥ ಲಕ್ಷ್ಮಣಃ ಪ್ರಾಹ ಕಾತರಜನಮನೋವಲಂಬಿನಾ ಕಿಂ ದೇವೇನ ।
ಯಾವಲ್ಲಲಾಟಶಿಖರಂ ಭ್ರುಕುಟಿರ್ನ ಯಾತಿ
ಯಾವನ್ನ ಕಾರ್ಮುಕಶಿಖಾಮಧಿರೋಹತಿ ಜ್ಯಾ ।
ತಾವನ್ನಿಶಾಚರಪತೇಃ ಪಟಿಮಾನಮೇತು
ತ್ರೈಲೋಕ್ಯಮೂಲವಿಭುಜೇಷು ಭುಜೇಷು ದರ್ಪಃ ॥ ೨೪ ॥

ರಾವಣನ ಪೊಳಲಾದ ಲಂಕೆಯನ್ನು ಮುತ್ತಿದನು. ಆಗ ರಾಮನು ಸುತ್ತಲೂ ಕಣ್ಣಿಟ್ಟು ನೋಡಿ, ಹತ್ತಿರದಲ್ಲಿದ್ದ ಲಕ್ಷ್ಮಣನಿಗೆ ಇಂತು ಹೇಳಿದನು,

೨೩. 'ಎಲೈ ಲಕ್ಷ್ಮಣನೇ ! ಸಮುದ್ರವು ದಾಟಲಾಯಿತು. ಕಪಿಗಳೊಡೆಯನಾದ ಸುಗ್ರೀವನ ದಳದ ಯೋಧರಿಂದ ರಕ್ಕಸರ ರಾಜಧಾನಿಯು ಒಮ್ಮೆಯೇ ತುತ್ತರಿಸಿದಂತಿದೆ. ಪೌರುಷಕ್ಕೆ ಯೋಗ್ಯವಾದುದಾವುದೋ, ಅದನ್ನು ನಾನು ಮೊಳಕೆಮಾಡಿದೆನು. ಇನ್ನುಳಿದುದು ದೈವಕ್ಕಾಗಲೀ ಅಥವಾ ಈ ಬಿಲ್ಲಿಗಾಗಲೀ ಅಧೀನವಾಗಿರುವುದು.'

೨೪. ಎಂದು ಶ್ರೀ ರಾಮನು ಹೇಳಲು, ಲಕ್ಷ್ಮಣನು 'ಎಲೈ ಸ್ವಾಮಿಯೇ ! ಇಂತು ಮನದಲ್ಲಿ ತಳ್ಳಂಕಗೊಳ್ಳುವುದೇಕೆ? ಸ್ವಾಮಿಯಾದ ನಿನ್ನ ಹುಬ್ಬುಗಳು, ಎಲ್ಲಿಯವರೆಗೆ ಹಣೆಯ ತುದಿಯನ್ನೆಯ್ದುವುದಿಲ್ಲವೋ, ಅಲ್ಲಿಯವರೆವಿಗೂ ರಾತ್ರಿಂಚರರಾದ ರಕ್ಕಸರೊಡೆಯನ ತ್ರೈಲೋಕ್ಯಕ್ಕೂ ಆಧಾರವಾಗಿರುವ ತೋಳುಗಳಲ್ಲಿ ದರ್ಪವು ಹೊಗರೇರಲಿ ;'

ಗ॥ ತದಾ ಲಕ್ಷ್ಮಣಃ ರಾಮಸ್ಯ ಕರ್ಣೇ ಲಗಿತ್ವಾ ಪಿತೃವಧವೈರಸ್ಮರಣೇ ಅಥ ಭಕ್ತಿತಾವೀರ್ಯಪರೀಕ್ಷಣಾಯಾಂ ಲಕ್ಷಣವಿಜ್ಞಾನಾಯಾದಿಶ್ಯತಾಮಂಗದಾಯ ದೂತ್ಯಂ । ಸಾಧು ಇತಿ ಭಣಿತ್ವಾ ಅಂಗದಂ ಸಬಹುಮಾನಮಾಲೋಕ್ಯ ಆದಿಶತಿ ॥ ೨೫ ॥

ಅಂಗದ !
ಪಿತಾ ಯದ್ವಾಲೀ ಬಲಿನಿ ದಶಕಂಠೇ ಕಲಿತವಾನ್
ನ ಶಕ್ತಾಸ್ತದ್ವಕ್ತುಂ ವಯಮಪಿ ಮುದಾಸ್ತೇ ಸಪುಲಕಾಃ ।
ಸ ಏವ ತ್ವಂ ವ್ಯಾವರ್ತಯಸಿ ತನುಜತ್ವೇನ ಪಿತೃತಾಂ
ತತಃ ಕಿಂ ವಕ್ತವ್ಯಂ ತಿಲಕಯಸಿ ಸೃಷ್ಟಾರ್ಥಪದವೀಮ್ ॥ ೨೬ ॥

---

೨೫. ಆಗ ಲಕ್ಷ್ಮಣನು ಶ್ರೀರಾಮಚಂದ್ರನ ಕಿವಿಯಲ್ಲಿ ಸಂಬಂಧಿಸಿ, (ಮೆಲ್ಲನೆ) 'ತಂದೆಯಾದ ವಾಲಿಯನ್ನು ಕೊಂದ ಹಗೆಯನ್ನು ನೆನೆಯುವ ವಿಷಯದಲ್ಲಿ, ಬಳಿಕ ಸ್ವಾಮಿಭಕ್ತಿ ಪರಾಕ್ರಮ ಪರೀಕ್ಷೆಯಲ್ಲಿ, ಅಸಾಧಾರಣಧರ್ಮವನ್ನರಿಯಲು, ಅಂಗದನಿಗೆ ಬೇಹನ್ನು ಅಪ್ಪಣೆ ಮಾಡು;' ಎನಲು, ರಾಮನು 'ಒಳ್ಳಿತು' ಎಂದು ಹೇಳಿ, ಅಂಗದನನ್ನು ಬಹುಮಾನಪುರಸ್ಸರವಾಗಿ ನೋಡಿ ಅಪ್ಪಣೆ ಮಾಡುತ್ತಾನೆ.'

೨೬. 'ಎಲೈ ಅಂಗದನೇ! ನಿನ್ನ ತಂದೆಯಾದ ವಾಲಿಯು ಬಲಶಾಲಿಯಾದ, ದಶಕಂಠನಾದ ರಾವಣನಲ್ಲಿ ಯಾವುದನ್ನು ಭಾವಿಸಿದ್ದನೋ, (ದುರ್ಬಲನಾದ ವಿರೋಧಿಯೆಂದು) ನಾವೂ ರೋಮಾಂಚಿತಗಾತ್ರರಾಗಿ ಅದನ್ನು ನಿನಗೂ ಹೇಳಲು ಸಮರ್ಥರಾಗಿದ್ದೇವೆ; ಸಂತಸವಿದೆ; ವಾಲಿಯ ಅಂಶದಿಂದ ಜನಿಸಿದ ನೀನು ಪುತ್ರತ್ವದಿಂದ ಪಿತೃತ್ವವನ್ನು ಅತಿಕ್ರಮಿಸಿರುತ್ತೀಯೆ. (ತಿರಸ್ಕರಿಸಿರುತ್ತೀಯೆ.) ಅದರಿಂದ ಇನ್ನು ಹೇಳುವುದಾವದಿದೆ ? ನೀನು ಹಿರಿಯರು ಬಿಟ್ಟುಹೋದ ಮಾರ್ಗವನ್ನು ಅಲಂಕರಿಸಿರುತ್ತೀಯೆ.'

ಅಂಗದಃ ಮೌಲಿಮಂಡಲಮಿಲತ್ಕರಯುಗಲೇನ ಪ್ರಣಮ್ಯ
ಯದಾಜ್ಞಾಪಯತಿ ದೇವಃ ; ಅವಧಾರ್ಯತಾಮ್ ॥ ೨೭ ॥

ಕಿಂ ಪ್ರಾಕಾರವಿಹಾತೋರಣವತೀಂ ಲಂಕಾಮಿಹೈವಾನಯೇ
ಕಿಂ ವಾ ಸೈನ್ಯಮಹಂ ದ್ರುತಂ ರಘುಪತೇ ತತ್ರೈವ ಸಂಪಾದಯೇ ।
ಅತ್ಯಲ್ಪಂ ಕುಲಪರ್ವತೈರವಿರಲೈರ್ಬಧ್ನಾಮಿ ವಾ ಸಾಗರಂ
ದೇವಾದೇಶಯ ಕಿಂ ಕರೋಮಿ ಸಕಲಂ ದೋರ್ದಂಡಸಾಧ್ಯಂ ಮಮ
ಶ್ರೀರಾಮಸ್ತದ್ವಚನಮಾತ್ರೇಣೈವ ತದ್ಭಕ್ತಿಂ ಸಾಮರ್ಥ್ಯಂ
ಚಾವೇಕ್ಷ್ಯ ವದತಿ ॥ ೨೯ ॥

---

೨೭. ಎಂದು ಹೇಳಲು, ಅಂಗದನು ತಲೆಯೆಡೆಯಲ್ಲಿ (ಸೇರಿಸ) ಜೋಡಿಸಿದ ಎರಡು ಕೈಗಳಿಂದೆರಗಿ, 'ಒಡೆಯನಾದ ನೀನು ಯಾವ ಅಪ್ಪಣೆಯನ್ನೀಸಗುವೆಯೋ, ಅದನ್ನು ನೆರವೇರಿಸುವೆನು ; ಕೇಳೋಣವಾಗಲಿ ;

೨೮. ಎಲೈ ರಘುಪತಿಯೇ ! ಪೌಳೀಗೋಡೆ, ಅರಮನೆ, ತೋರಣ–ಇವುಗಳುಳ್ಳ ಲಂಕಾಪುರಿಯನ್ನು ಇಲ್ಲಿಗೇ ತೆಗೆದುಕೊಂಡು ಬರಲೇ ? ಅಥವಾ ಈ ಕಪಿಸೈನ್ಯವನ್ನೆಲ್ಲಾ ಅಲ್ಲಿಗೇ ಕರೆದುಕೊಂಡು ಹೋಗಿ ಬಿಡಲೇ ? ಅಥವಾ ಈ ಕಿರಿಯ ಸಾಗರವನ್ನು ಕುಲಪರ್ವತಗಳನ್ನೇ ತಂದಿಕ್ಕಿ ಮುಚ್ಚಿಬಿಡಲೇ ? ಪ್ರಭುವೇ ! ಏನೇನೆಸಗಲಿ ? ಆಣತಿಗುಡು ; ಎಲ್ಲವೂ ನನ್ನ ಬಾಹುದಂಡಗಳಿಗೆ ಶಕ್ಯವಾಗಿರುವುವು;' ಎಂದು ಹೇಳಿದನು.

೨೯–೩೦. ಶ್ರೀರಾಮನು ಅಂಗದನ ಆ ಮಾತಿನಿಂದಲೇ ಅವನ ಸ್ವಾಮಿಭಕ್ತಿಯನ್ನೂ, ಸಾಮರ್ಥ್ಯವನ್ನೂ ಅರಿತು ಹೇಳುತ್ತಾನೆ ;—'ಎಲೈ ಅಂಗದನೇ ! ನೀನು ಇಲ್ಲಿಂದ ರಾವಣನಲ್ಲಿಗೆ ಹೋಗಿ, 'ಎಲೈ ರಾವಣನೇ ! ನೀನು ಅವಿವೇಕದಿಂದಲೋ, ಅಥವಾ ಪ್ರಭುತ್ವದ ದರ್ಪದಿಂದಲೋ, ಶ್ರೀ ರಾಮಚಂದ್ರನಿಲ್ಲದಿರುವಾಗ, ಈ ಸೀತಾದೇವಿಯನ್ನು ಅಪಹರಿಸಿಕೊಂಡು ಬಂದೆ; ಈಗ ಹಿಂದಿರುಗಿ

ಅಜ್ಞಾನಾದಥವಾಧಿಪತ್ಯರಭಸಾದ್ವಾಸ್ಮತ್ಪರೋಕ್ಷೇ ಹೃತಾ
ಸೀತೇಯಂ ಪ್ರವಿಮುಚ್ಯತಾಂ ಇತಿ ವಚೋ ಗತ್ವಾ ದಶಾಸ್ಯಂ ವದ ।
ನೋಚೇಲ್ಲಕ್ಷ್ಮಣಮುಕ್ತಮಾರ್ಗಣಗಣಚ್ಛೇದೋಚ್ಛಲಚ್ಛೋಣಿತ
ಛತ್ರಛನ್ನದಿಗಂತಮಂತಕಪುರೀಂ ಪುತ್ರೈರ್ವೃತೋ ಯಾಸ್ಯಸಿ ॥ ೩೦ ॥

ಅಂಗದಃ ॥ ೩೧ ॥
ದೇವ ।
ಸಂಧೌ ವಾ ವಿಗ್ರಹೇ ವಾಪಿ ಮಯಿ ದೂತೇ ದಶಾನನೇ ।
ಅಕ್ಷತೋ ವಾ ಕ್ಷತೋ ವಾಪಿ ಕ್ಷಿತಿಪೀಠೇ ಲುಠಿಷ್ಯತಿ ॥ ೩೨ ॥

ತದಾ ಶ್ರೀರಾಮಚಂದ್ರೇಣ ಪ್ರಶಸ್ಯ ಪ್ರಹಿತೋಽಂಗದಃ ।
ಉಕ್ತಿಪ್ರತ್ಯುಕ್ತಿಚಾತುರ್ಯೈಃ ಪರಾಜಿತ್ಯಾಗತೋ ರಿಪುನ್ ॥ ೩೩ ॥

ತೆಗೆದುಕೊಂಡು ಹೋಗಿ ಒಪ್ಪಿಸು ; ಹಾಗಿಲ್ಲವಾದರೆ, ಲಕ್ಷ್ಮಣನು ಹೊಡೆದ ಬಾಣಗಳ ತಂಡಗಳು ಕತ್ತರಿಸುವುದರಿಂದ ಮೇಲಕ್ಕೆ ಎಗರುತ್ತಲಿರುವ ನೆತ್ತರ ಕೊಡೆಯಿಂದ ಕವಿದ ದಿಗಂತವುಳ್ಳ, ಜೈಮಿನಿಗೆ ಮಕ್ಕಳೊಡಗೂಡಿ ಹೋಗುವೆ ;' ಎಂದು ಹೇಳು ;' ಎಂದು ಶ್ರೀ ರಾಮನು ಅಂಗದನಿಗೆ ಹೇಳಿದನು.

೩೧. ಅದಕ್ಕೆ ಅಂಗದನು ಹೇಳುತ್ತಾನೆ.

೩೨. 'ಎಲೈ ಪ್ರಭುವೇ ! ಸಂಧಿಯಲ್ಲಾಗಲೀ, ವಿಗ್ರಹದಲ್ಲಿಯಾಗಲಿ (ಅಂಗದನಾದ) ನಾನು, ದೂತನಾಗಿ ಹೋಗಲು, ಹತ್ತುಮೊಗಸಮುದಾಯದ ರಾವಣನು ಗಾಯಗೊಳ್ಳುವುದಾಗಲೀ, ಗಾಯಗೊಂಡಾಗಲೀ, ಈ ತಿರೆಗದ್ದುಗೆಯಲ್ಲಿ ಹೊರಳುವನು ;' ಎಂದು ಅಂಗದನು ತನ್ನ ಶೌರ್ಯವನ್ನು ಕೊಚ್ಚಿಕೊಂಡನು.

೩೩. ಆಗ ಶ್ರೀ ರಾಮನು ಅಂಗದನನ್ನು ಹೊಗಳಿ ಕಳುಹಿಸಿಕೊಟ್ಟನು. ಅಂಗದನೂ ಅಲ್ಲಿಗೆ ಹೋಗಿ, ತನ್ನ ಉಕ್ತಿಪ್ರತ್ಯುಕ್ತಿ ಚಾತುರ್ಯದಿಂದ ಹಗೆಯನ್ನು ಗೆದ್ದು, ಹಿಂದಿರುಗಿ ಬಂದನು.

॥ ರಾವಣೋಕ್ತಿ ॥

ರಾಘವಸ್ಯ ಬಲಂ ಜ್ಞಾತ್ವಾ ಚಾರೈಸ್ತದನುಜಸ್ಯ ಚ ।
ವಾನರಾಣಾಂ ಚ ಭೀತೋಽಪಿ ನಿರ್ಭೀರಿವ ದಶಾನನಃ ॥ ೩೪ ॥

ಲಂಕಾಪುರಸ್ಯ ರಕ್ಷಾರ್ಥಮಾದಿದೇಶ ಸ ರಾಕ್ಷಸಾನ್ ।
ಆದಿಶ್ಯ ಸರ್ವತೋ ದಿಕ್ಷು ಪುತ್ರಾನಾಹ ದಶಾನನಃ ॥ ೩೫ ॥

ಧೂಮ್ರಾಕ್ಷಂ ಧೂಮ್ರಪಾನಂ ಚ ರಾಕ್ಷಸಾ ಯಾತ ಮೇ ಪುರೀಮ್ ।
ಪಾಶೈರ್ಬಧ್ನೀತ ತೌ ಮರ್ತ್ಯೌ ಅಮಿತ್ರಾಂತಕವೀರ್ಯವಾನ್ ।
ಕುಂಭಕರ್ಣೋಽಪಿ ಮದ್ಭ್ರಾತಾ ತೂರ್ಯನಾದ್ಯೈಃ ಪ್ರಬೋಧಿತಃ ॥ ೩೬ ॥

ರಾಕ್ಷಸಾಶ್ಚೈವ ಸಂದಿಷ್ಟಾ ರಾವಣೇನ ಮಹಾಬಲಾಃ ॥ ೩೭ ॥

---

೩೪. ಆಗ ದಶಾಸ್ಯನಾದ ರಾವಣನೂ ಕೂಡ ಚಾರರ ಮುಖದಿಂದ ಶ್ರೀ ರಾಮಚಂದ್ರನು, ಲಕ್ಷ್ಮಣನು, ಮತ್ತು ಕಪಿಗಳು—ಇವರ ಬಲಪರಾಕ್ರಮಗಳನ್ನು ತಿಳಿದು, ಹೆದರಿದರೂ, ಹೆದರದವನಂತೆ ಇದ್ದನು.

೩೫. ಅವನು ಲಂಕಾಪಟ್ಟಣದ ರಕ್ಷಣೆಗಾಗಿ ರಕ್ಕಸರಿಗೆ ಅಪ್ಪಣೆಮಾಡಿದನು. ಎಲ್ಲಾ ದಿಕ್ಕುಗಳಲ್ಲಿಯೂ ಅಪ್ಪಣೆ ಮಾಡಿ, ಮಕ್ಕಳಿಗಿಂತು ಹೇಳಿದನು.

೩೬. ಧೂಮ್ರಾಕ್ಷನನ್ನೂ, ಧೂಮ್ರಪಾನನನ್ನೂ ಕುರಿತು ಇಂತು ಹೇಳಿದನು:- ' ಎಲೈ ರಾಕ್ಷಸರೇ ! ನನ್ನ ಪುರಿಯನ್ನುಳಿದು ಹೋಗಿರಿ ; ಆ ಮಾನವರೀರ್ವರನ್ನೂ ಹಗ್ಗಗಳಿಂದ ಕಟ್ಟಿ ತನ್ನಿರಿ ; ಹಗೆಗಳಿಗೆ ಯಮನಾದ, ಪರಾಕ್ರಮಿಯಾದ, ನನ್ನ ತಮ್ಮನಾದ ಕುಂಭಕರ್ಣನನ್ನು ತೂರ್ಯವೆಂಬ ವಾದ್ಯದ ಮೊಳಗುಗಳಿಂದ ಎಚ್ಚರಗೊಳಿಸಿರಿ.'

೩೭-೩೯. ಇಂತು ರಾವಣನಿಂದ ಆಣತಿಗೊಂಡ, ಮಹಾಶೂರರಾದ ರಕ್ಕಸರು ಅವನ ಅಪ್ಪಣೆಯನ್ನು ತಲೆಯಿಂದಾಂತು, ಕಪಿಗಳೊಡನೆ ಹೋರಾಡಿದರು.

ತಸ್ಯಾಜ್ಞಾಂ ಶಿರಸಾದಾಯ ಯುಯುಧುರ್ವಾನರೈಃ ಸಹ ।
ಯುಧ್ಯಮಾನಾ ಯಥಾಶಕ್ತ್ಯಾ ಕೋಟಿಸಂಖ್ಯಾಸ್ತು ರಾಕ್ಷಸಾಃ ॥ ೩೮ ॥

ವಾನರೈರ್ನಿಧನಂ ಪ್ರಾಪ್ತಾ ಪುನರನ್ಯಾಸ್ತಥಾದಿಶತ್ ।
ಪೂರ್ವದ್ವಾರೇ ದಶಗ್ರೀವೋ ರಾಕ್ಷಸಾನಮಿತೌಜಸಃ ॥ ೩೯ ॥

ತೇ ಚಾಪಿ ಯುದ್ಧ್ವಾ ಹರಿಭಿರ್ನೀಲಾದ್ಯೈರ್ನಿಧನಂ ಗತಾಃ ।
ಅಥ ದಕ್ಷಿಣ ದಿಗ್ಭಾಗೇ ರಾವಣೇನ ನಿಯೋಜಿತಾಃ ॥ ೪೦ ॥

ತೇ ಸರ್ವೇ ವಾನರವರೈರ್ಧಾರಿತಾಸ್ತು ಯಮಂ ಗತಾಃ ।
ಪಶ್ಚಿಮೇ ಗದಮುಖ್ಯೈಶ್ಚ ವಾನರೈರತಿಗರ್ವಿತೈಃ ॥ ೪೧ ॥

ರಾಕ್ಷಸಾಃ ಪರ್ವತಾಕಾರಾಃ ಪ್ರಾಪಿತಾ ಯಮಸಾದನಮ್ ।
ತದುತ್ತರೇ ತು ದಿಗ್ಭಾಗೇ ರಾವಣೇನ ನಿವೇಶಿತಾಃ ॥ ೪೨ ॥

ತಂತಮ್ಮ ಅಳವಿನ್ನನಿತರಿಂದ ಹೋರಾಡುತ್ತಲಿದ್ದ, ಕೋಟಿಲೆಕ್ಕದ ರಕ್ಕಸರು ಕಪಿಗಳಿಂದ ಅವಸಾನವನ್ನೈದಿದರು. ಬಳಿಕ ದಶಕಂಠನು ಅತುಲಪರಾಕ್ರಮಿಗಳಾದ ಇತರ ರಕ್ಕಸರಿಗೆ ಪುನಃ ಮೂಡಣ ಬಾಗಿಲಲ್ಲಿ ಅಪ್ಪಣೆ ಮಾಡಿದನು.

೪೦-೪೪. ಅವರೂ ಹೋರಾಡಿ, ನೀಲನೇ ಮೊದಲಾದ ಕಪಿಗಳಿಂದ ನಿಧನವನ್ನೈದಿದರು. ಅನಂತರದಲ್ಲಿ ದಕ್ಷಿಣದಿಗ್ಭಾಗದಲ್ಲಿ ರಾವಣನಿಂದ ನಿಯುಕ್ತರಾದವರೆಲ್ಲರೂ ವಾನರಶ್ರೇಷ್ಠರಿಂದ ಸೀಳಲ್ಪಟ್ಟವರಾಗಿ, ಯಮನನ್ನು ಕುರಿತು ಹೋದರು. ಪಶ್ಚಿಮದಿಕ್ಕಿನಲ್ಲಿ ಗದನೇ ಮೊದಲಾದ ಸೊಕ್ಕಿದ ಕಪಿಗಳಿಂದ ಪರ್ವತಾಕಾರದ ರಕ್ಕಸರು ಯಮನ ಮನೆಯನ್ನು ಹುಗಿಸಲ್ಪಟ್ಟರು. ಉತ್ತರ ದಿಗ್ಭಾಗದಲ್ಲಿ ರಾವಣನಿಂದ ನಿಯುಕ್ತರಾದ ಆ ಕ್ರೂರ ರಕ್ಕಸರೂ ಮೈಂದನೇ ಮೊದಲಾದ ವಾನರರಿಂದ ಸಂಹೃತರಾಗಿ ಬಿದ್ದರು. ಬಳಿಕ ವಾನರರ ತಂಡವು ಎತ್ತರ

ಹೇತುಸ್ತೇ ರಾಕ್ಷಸಾಃ ಕ್ರೂರಾಃ ಮೈಂದಾದ್ಯೈರ್ವಾನರೈರ್ಹತಾಃ ।
ತತೋ ವಾನರಸಂಘಸ್ತು ಲಂಕಾಪ್ರಾಕಾರಮುಚ್ಛ್ರಿತಾನ್ ॥ ೪೩ ॥

ಉತ್ಪ್ಲುತ್ಯಾಭ್ಯಂತರಸ್ಥಾಂಶ್ಚ ರಾಕ್ಷಸಾನ್ಬಲದರ್ಪಿತಾನ್ ।
ಹತ್ವಾ ಶೀಘ್ರಂ ಪುನಃ ಪ್ರಾಪ್ತಾಃ ಸ್ವಸೇನಾಮೇವ ವಾನರಾಃ ॥ ೪೪ ॥

ಏವಂ ಹತೇಷು ಸರ್ವೇಷು ರಾಕ್ಷಸೇಷು ದಶಾನನಃ ।
ರೋದಮಾನಾಸು ತತ್ಸ್ತ್ರೀಷು ನಿರ್ಗತಃ ಕ್ರೋಧಮೂರ್ಛಿತಃ ॥ ೪೫ ॥

ದ್ವಾರೇ ಸ ಪಶ್ಚಿಮೇ ವೀರೋ ರಾಕ್ಷಸೈರ್ಬಹುಭಿರ್ವೃತಃ ।
ಕ್ವಾಸೌ ರಾಮೇತಿ ಚ ವದನ್ಧನುಃಪಾಣಿಃ ಪ್ರತಾಪವಾನ್ ॥ ೪೬ ॥

ರಥಸ್ಥಃ ಶರವರ್ಷಂ ಚ ವಿಸೃಜನ್ವಾನರೇಷು ಸಃ ।
ತತಸ್ತದ್ಬಾಣಭಿನ್ನಾಂಗಾಃ ವಾನರಾ ದುದ್ರುವುಸ್ತದಾ ॥ ೪೭ ॥

ವಾದ ಲಂಕೆಯ ಪ್ರಾಕಾರವನ್ನು ಹಾರಿ, ಒಳಭಾಗದಲ್ಲಿದ್ದ, ಬಲದಿಂದ ಗರ್ವಿತ ರಾಗಿದ್ದ ರಕ್ಕಸರ ತಂಡವನ್ನು ಬೇಗನೆ ಸಂಹಾರಮಾಡಿ, ಆ ಕಪಿಗಳು ಹಿಂದಿರುಗಿ ತಮ್ಮ ಸೇನೆಯನ್ನು ಸೇರಿದರು.

೪೫. ಇಂತು ರಕ್ಕಸರೆಲ್ಲರೂ ಸತ್ತುಹೋಗಲು, ಅವರ ಮಡದಿಯರೆಲ್ಲ ಅಳುತ್ತಿರಲು, ಹತ್ತುಮೊಗದ ರಾವಣನು ಕ್ರೋಧದಿಂದ ವಿವೇಕರಹಿತನಾಗಿ ಹೊರಟನು

೪೬–೪೭. ಆ ಪ್ರತಾಪಶಾಲಿಯಾದ ವೀರ ರಾವಣನು ಪಶ್ಚಿಮ ಬಾಗಿಲಲ್ಲಿ ಅನೇಕ ರಕ್ಕಸರಿಂದ ಸುತ್ತುಗೊಂಡವನಾಗಿ, 'ಈ ರಾಮನೆಲ್ಲಿರುವನು?' ಎಂದು ಹೇಳುತ್ತಾ, ಬಿಲ್ಲನ್ನು ಕೈಯಲ್ಲಿ ಹಿಡಿದು, ತೇರಿನಲ್ಲಿ ಕುಳಿತವನಾಗಿ, ವಾನರರಲ್ಲಿ ಬಾಣಗಳ ಮಳೆಯನ್ನು ಕರೆಯುತ್ತಾ, ಇರಲು, ಆಗ ಅವನ ಬಾಣಗಳಿಂದ ಕತ್ತರಿಸಿದ ಅವಯವಗಳುಳ್ಳ ವಾನರರು ಓಡಿಹೋದರು.

ಪಲಾಯಮಾನಾಂಸ್ತಾನ್ದೃಷ್ಟ್ವಾ ವಾನರಾನ್ರಾಘವಸ್ತದಾ ।
ಕಸ್ಮಾತ್ತು ವಾನರಾ ಮಗ್ನಾ ಕಿಮೇಷಾಂಭಯಮಾಗತಮ್ ॥ ೪೮ ॥

ಇತಿ ರಾಮವಚಃ ಶ್ರುತ್ವಾ ಪ್ರಾಹ ವಾಕ್ಯಂ ವಿಭೀಷಣಃ ।
ಶೃಣು ರಾಜನ್ಮಹಾಬಾಹೋ ರಾವಣೋ ನಿರ್ಗತೋಽಧುನಾ ॥ ೪೯ ॥

ತದ್ಬಾಣಭಿನ್ನಾ ಹರಯಃ ಪಲಾಯಂತೇ ಮಹಾಮತೇ ।
ಇತ್ಯುಕ್ತೋ ರಾಘವಸ್ತೇನ ಧನುರುದ್ಯಮ್ಯ ರೋಷಿತಃ ॥ ೫೦ ॥

ಜ್ಯಾಘೋಷತಲಘೋಷಾಭ್ಯಾಂ ಪೂರಯಾಮಾಸ ಖಂ ದಿಶಃ ।
ಯುಯುಧೇ ರಾವಣೇನಾಥ ರಾಮಃ ಕಮಲಲೋಚನಃ ॥ ೫೧ ॥

---

೪೮ ಆಗ ಓಡಿಹೋಗುತ್ತಲಿದ್ದ ಆ ವಾನರರನ್ನು ಶ್ರೀರಾಘವನು ಕಂಡು, ' ಈ ವಾನರರು ! ಏತರಿಂದ ಮುಳಿಗಿದರು ? ಇವರಿಗೆ ಭಯವುಂಟಾಯಿತೇನು ? ' ಎಂದು ಹೇಳಿದನು.

೪೯. ಶ್ರೀರಾಮನ ನುಡಿಯನ್ನು ಕೇಳಿ, ವಿಭೀಷಣನು ಹೇಳಿದನು :–' ಎಲೈ ಮಹಾಬಾಹುವಾದ ಪ್ರಭುವೇ ! ಕೇಳು ; ಈಗ ರಾವಣನು ಹೊರಗೆ ಹೊರಟನು.

೫೦–೫೧. ' ಎಲೈ ಮಹಾಮತಿಯೇ ! ಅವನ ಬಾಣಗಳಿಂದ (ಕತ್ತರಿಸಿದ) ಚದುರಿದ ಕಪಿಗಳು ಓಡುತ್ತಲಿದ್ದಾರೆ ,' ಎಂದು ವಿಭೀಷಣನು ಹೇಳಲು, ಶ್ರೀರಾಮಚಂದ್ರನು ಧನುವನ್ನು ಮೇಲಕ್ಕೆತ್ತಿ ರೋಷಗೊಂಡು, ಧನುಷ್ಟಂಕಾರದ ಮತ್ತು ಕೈಯ ಮೊಳಗಿನಿಂದ ಮುಗಿಲನ್ನೂ, ದೆಸೆಗಳನ್ನೂ ತುಂಬಿಸಿದನು. ಪುಂಡರೀಕಾಕ್ಷನಾದ ಶ್ರೀ ರಾಮನು ಬಳಿಕ ರಾವಣನೊಡನೆ ಹೋರಾಡಿದನು.

ಸುಗ್ರೀವೋ ಜಾಂಬವಾಂಶ್ಚೈವ ಹನೂಮಾನಂಗದಸ್ತಥಾ ।
ವಿಭೀಷಣೋ ವಾನರಾಶ್ಚ ಲಕ್ಷ್ಮಣಶ್ಚಾಪಿ ವೀರ್ಯವಾನ್ ॥ ೫೨ ॥

ಉಪೇತ್ಯ ರಾವಣೀಂ ಸೇನಾಂ ವರ್ಷಂತೀಂ ಸರ್ವಸಾಯಕಾನ್ ।
ಹಸ್ತ್ಯಶ್ವರಥಸಂಯುಕ್ತಾಸ್ತೇ ನಿಜಘ್ನುರ್ಮಹಾಬಲಾಃ ॥ ೫೩ ॥

ರಾಮರಾವಣಯೋರ್ಯುದ್ಧಮಭೂತ್ತತ್ರಾಪಿ ಭೀಷಣಮ್ ।
ರಾವಣೇನ ವಿಸೃಷ್ಟಾನಿ ಶಸ್ತ್ರಾಸ್ತ್ರಾಣಿ ಚ ಯಾನಿ ವೈ ।
ತಾನಿ ಛಿತ್ವಾ ತು ಶಸ್ತ್ರೈಸ್ತು ರಾಘವಶ್ಚ ಮಹಾಬಲಃ ॥ ೫೪ ॥

ಶರೇಣ ಸಾರಥಿಂ ಹತ್ವಾ ದಶಭಿಶ್ಚ ಮಹಾಹಯಾನ್ ।
ರಾವಣಸ್ಯ ಧನುಶ್ಛಿತ್ವಾ ಭಲ್ಲೇನೈಕೇನ ರಾಘವಃ ॥ ೫೫ ॥

೫೨-೫೩. ಸುಗ್ರೀವನೂ, ಜಾಂಬವಂತನೂ, ಹನೂಮಂತನೂ, ಅಂಗದನೂ ಹಾಗೆಯೇ ವಿಭೀಷಣನೂ, ವಾನರರೂ, ವೀರ್ಯವಂತನಾದ ಲಕ್ಷ್ಮಣನೂ ಬಂದು, ಆನೆ, ಕುದುರೆ, ತೇರುಗಳುಳ್ಳ, ಎಲ್ಲತೆರನಾದ ಬಾಣಗಳ ಮಳೆಗರೆಯುತ್ತಾ ಇರುವ, ರಾವಣನ ಸೇನೆಯನ್ನು ಆ ಮಹಾ ಪರಾಕ್ರಮಿಗಳೆಲ್ಲರೂ ಸಂಹರಿಸಿದರು.

೫೪-೫೫. ರಾಮ ರಾವಣರ ಯುದ್ಧವು ಬಹಳ ಭಯಂಕರವಾಗಿದ್ದಿತು. ರಾವಣನು ಯಾವ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದನೋ, ಅವುಗಳನ್ನೆಲ್ಲಾ ಅತ್ಯಂತ ಬಲಶಾಲಿಯಾದ ಶ್ರೀರಾಮನು ಶಸ್ತ್ರಗಳಿಂದ ಕತ್ತರಿಸಿ, ಬಳಿಕ ಒಂದು ಬಾಣದಿಂದ ಸಾರಥಿಯನ್ನೂ, ಹತ್ತು ಸರಲುಗಳಿಂದ ಪೆರ್ಗುದುರೆಗಳನ್ನೂ ಸಂಹರಿಸಿ, ಒಂದು ಭಲ್ಲಾಯುಧದಿಂದ ರಾವಣನ ಬಿಲ್ಲನ್ನೂ ಕತ್ತರಿಸಿದನು.

ಮುಕುಟಂ ಪಞ್ಚದಶಭಿಶ್ಛಿತ್ವಾ (ಕೃತ್ವಾ) ತನ್ಮಸ್ತಕಂ ಪುನಃ ।
ಸುವರ್ಣಪುಂಖೈರ್ದಶಭಿಃ ಶರೈರ್ವಿವ್ಯಾಧ ವೀರ್ಯವಾನ್ ।
ತದಾ ದಶಾಸ್ಯೋ ವ್ಯಥಿತೋ ರಾಮಬಾಣೈರ್ಭೃಶಂ ತದಾ ॥ ೫೬ ॥

ವಿವೇಶ ಮಂತ್ರಿಭಿರ್ನೀತಃ ಸ್ವಪುರೀಂ ದೇವಮರ್ದಕಃ ।
ಬೋಧಿತಸ್ತೂರ್ಯನಾದೈಸ್ತು ಅಜಾಯೂಥಕ್ರಮೈಃ ಶನೈಃ ॥ ೫೭ ॥

ಪುನಃ ಪ್ರಾಕಾರಮುಲ್ಲಂಘ್ಯ ಕುಂಭಕರ್ಣೋ ವಿನಿರ್ಗತಃ ।
ಉತ್ತುಂಗಸ್ಥೂಲದೇಹೋಽಸೌ ಭೀಮದೃಷ್ಟಿರ್ಮಹಾಬಲಃ ॥ ೫೮ ॥

ವಾನರಾನ್ಭಕ್ಷಯನ್ದುಷ್ಟೋ ವಿಚಚಾರ ಕ್ಷುಧಾನ್ವಿತಃ ।
ತಂ ದೃಷ್ಟ್ವೋತ್ಪತ್ಯ ಸುಗ್ರೀವಃ ಶೂಲೇನೋರಸ್ಯತಾಡಯತ್ ॥ ೫೯ ॥

---

೫೬. ವೀರನಾದ ಶ್ರೀರಾಘವನು ಹದಿನೈದು ಬಾಣಗಳಿಂದ ರಾವಣನ ಕಿರೀಟವನ್ನು ಕತ್ತರಿಸಿ, ಮತ್ತು ಹೊನ್ನ ಹಿಳುಕಿನ ಬಾಣಗಳಿಂದ ತಲೆಗೆ ಬಲವಾಗಿ ಹೊಡೆದನು. ಆಗ ಹತ್ತು ಮೊಗಗಳ ರಾವಣನು ಶ್ರೀರಾಮನ ಬಾಣಗಳಿಂದ ಕಡು ನೊಂದನು.

೫೭-೫೮. ಇಂತು ನೊಂದ, ದೇವಮರ್ದಕನಾದ ರಾವಣನು ಮಂತ್ರಿಗಳಿಂದ ಒಯ್ಯಲ್ಪಟ್ಟು, ಪುರವನ್ನು ಪ್ರವೇಶಿಸಿದನು. ಕುರಿಯ ಮಂದೆಯ ಬಗೆಯಿಂದ ತೂರ್ಯವಾದ್ಯಗಳ ಮೊಳಗುಗಳಿಂದ ಮೆಲ್ಲನೆ ಎಚ್ಚರಗೊಳಿಸಲ್ಪಟ್ಟ ಕುಂಭಕರ್ಣನು ಮತ್ತು ಪ್ರಾಕಾರವನ್ನು ದಾಟಿಕೊಂಡು ಹೊರಟನು. ಇವನು ತೋರವಾದ ಒಡಲಿನವನು, ಬಿಗುರಿನ ನೋಟದವನು ಮತ್ತು ಕಡುಸಾಹಸಿಗನು.

೫೯. ಈ ದುಷ್ಟನು ಹಸಿವಿನಿಂದ ಕೂಡಿದವನು ಕಳದಲ್ಲಿ ಕಪಿಗಳನ್ನು ತಿನ್ನುತ್ತಾ ಓಡಾಡಿದನು. ಅವನನ್ನು ನೋಡಿ, ಸುಗ್ರೀವನು ಮೇಲಕ್ಕೆ ಹಾರಿ ಶೂಲಾಯುಧದಿಂದ ಎದೆಯಲ್ಲಿರಿದನು.

ಕರ್ಣದ್ವಯಂ ಕರಾಭ್ಯಾಂ ತು ಛಿತ್ವಾ ವಕ್ತ್ರೇಣ ನಾಸಿಕಾಮ್ ।
ಸರ್ವತೋ ಯುಧ್ಯಮಾನಾಂಶ್ಚ ರಕ್ಷೋನಾಥಾನ್ರಣೇಽಧಿಕಾನ್ ॥ ೬೦ ॥

ರಾಘವೋ ಘಾತಯಿತ್ವಾ ತು ವಾನರೇಂದ್ರೈಃ ಸಮಂತತಃ ।
ಚಕರ್ತ ವಿಶಿಖೈಸ್ತೀಕ್ಷ್ಣೈಃ ಕುಂಭಕರ್ಣಸ್ಯ ಕಂಧರಾಮ್ ।
ವಿಜಿತ್ಯೇಂದ್ರಜಿತುಂ ಸಾಕ್ಷಾದ್ಗರುಡೇನಾಗತೇನ ಸಃ ॥ ೬೧ ॥

ರಾಮೋ ಲಕ್ಷ್ಮಣಸಂಯುಕ್ತಃ ಶುಶುಭೇ ವಾನರೈರ್ಯುತಃ ।
ವ್ಯರ್ಥಂ ಗತೇ ಚೇಂದ್ರಜಿತಿ ಕುಂಭಕರ್ಣೇ ನಿಪಾತಿತೇ ॥ ೬೨ ॥

ಲಂಕಾನಾಥಸ್ತತಃ ಕ್ರುದ್ಧಃ ಪುತ್ರಂ ತ್ರಿಶಿರಸಂ ಪುನಃ ।
ಅತಿಕಾಯಮಹಾಕಾಯೌ ದೇವಾಂತಕನರಾಂತಕೌ ॥ ೬೩ ॥

ಯೂಯಂ ಹತ್ವಾ ತು ಪುತ್ರಾದ್ಯ ತೌ ನರೌ ಯುಧಿ ನಿಘ್ನತಃ ।
ತಾನ್ನಿಯುಜ್ಯ ದಶಗ್ರೀವಃ ಪುತ್ರಾನೇವಂ ಪುನರಬ್ರವೀತ್ ॥ ೬೪ ॥

೬೦-೬೪. ಎರಡು ಕಿವಿಗಳನ್ನು ಕೈಗಳಿಂದಲೂ, ಮೂಗನ್ನು ಬಾಯಿಂದಲೂ ಕತ್ತರಿಸಿದನು. ಎಲ್ಲೆಡೆಗಳಲ್ಲಿಯೂ ವಾನರ ಶ್ರೇಷ್ಠರೊಡನೆ ಹೋರಾಡುತ್ತಿದ್ದ ಹೆಚ್ಚಾದ ರಕ್ಕಸರ ಪಡೆವಳರನ್ನು ಯುದ್ಧದಲ್ಲಿ ಶ್ರೀರಾಘವನು ಸಂಹರಿಸಿ, ಹರಿತವಾದ ಬಾಣಗಳಿಂದ ಕುಂಭಕರ್ಣನ ಕುತ್ತಿಗೆಯನ್ನು ಕತ್ತರಿಸಿದನು. ಸಾಕ್ಷಾತ್ತಾಗಿ ಬಂದ ಗರುಡದೇವನ ಮೇಲೆ ಕುಳಿತು, ಶ್ರೀರಾಮನು ರಾವಣನ ಮಗನಾದ ಇಂದ್ರಜಿತುವನ್ನು ಗೆದ್ದು, ವಾನರರಿಂದ ಪರಿವೃತನಾಗಿ ಲಕ್ಷ್ಮಣನೊಡಗೂಡಿ ಪ್ರಕಾಶಿಸಿದನು. ಇಂತು ಇಂದ್ರಜಿತುವು (ವ್ಯರ್ಥವಾಗಿ) ಫಲಶೂನ್ಯನಾಗಲು, ಕುಂಭಕರ್ಣನು ಕೆಳಕ್ಕೆ ಬೀಳಿಸಲ್ಪಡಲು, ಬಳಿಕ ಲಂಕಾಧಿಪತಿಯಾದ ರಾವಣನು ಮುಳಿದು, ಪುನಃ ತ್ರಿಶಿರಸನೆಂಬ ಮಗನನ್ನೂ, ಅತಿಕಾಯ ಮಹಾಕಾಯರನ್ನೂ, ದೇವಾಂತಕ, ನರಾಂತಕರನ್ನೂ ಕುರಿತು, ‘ ಎಲೈ ಮಕ್ಕಳಿರಾ ! ಇಂದು ನೀವು ಯುದ್ಧದಲ್ಲಿ (ಹೊಡೆಯುತ್ತಲಿರುವ) ನಮ್ಮವರನ್ನು ಸಂಹರಿಸುತ್ತಲಿರುವ ಈ ಮಾನವರಿಬ್ಬರನ್ನೂ ಕೊಲ್ಲಿರಿ; ’ ಎಂದು ನಿಯೋಗಿಸಿ, ರಾವಣನು ಮತ್ತೂ ಆ ಮಕ್ಕಳಿಗೆ ಇಂತು ನುಡಿದನು.

ಮಹೋದರ ಮಹಾಪಾರ್ಶ್ವ ಸಾರ್ಧಮೇಭಿರ್ಮಹಾಬಲೈಃ ।
ಸಂಗ್ರಾಮೇಽಸ್ಮಿನ್ರಿಪೂನ್ಹಂತುಂ ಯುವಾಂ ವ್ರಜತಮುದ್ಯತೌ ॥ ೬೫ ॥

ದೃಷ್ಟ್ವಾ ತಾನಾಗತಾಂಶ್ಚೈವ ಯುದ್ಧ್ಯಮಾನಾನ್ರಣೇ ರಿಪೂನ್ ।
ಅನಯಲ್ಲಕ್ಷ್ಮಣಃ ಷಡ್ಭಿಃ ಶರೈಸ್ತೀಕ್ಷ್ಣೈರ್ಯಮಾಲಯಮ್ ॥ ೬೬ ॥

ವಾನರಾಣಾಂ ಸಮೂಹಶ್ಚ ಶಿಷ್ಟಾಂಶ್ಚ ರಜನೀಚರಾನ್ ।
ಸುಗ್ರೀವೇಣ ಹತಃ ಕುಂಭೋ ರಾಕ್ಷಸೋ ಬಲದರ್ಪಿತಃ ॥ ೬೭ ॥

ನಿಕುಂಭೋ ವಾಯುಪುತ್ರೇಣ ನಿಹತೋ ದೇವಕಂಟಕಃ ।
ವಿರೂಪಾಕ್ಷಂ ಯುಧ್ಯಮಾನಂ ಗದಯಾ ತು ವಿಭೀಷಣಃ ॥ ೬೮ ॥

ಭೀಮಮೈಂದೌ ಚ ಶ್ವಪತಿಂ ವಾನರೇಂದ್ರೌ ನಿಜಘ್ನತುಃ ।
ಅಂಗದೋ ಜಾಂಬವಾಂಶ್ಚಾಥ ಹರಯೋಽನ್ಯಾನ್ನಿಶಾಚರಾನ್ ॥ ೬೯ ॥

---

೬೫. 'ಎಲೈ ಮಹೋದರ ಮಹಾಪಾರ್ಶ್ವರೇ! ಈ ಮಹಾ ಬಲವುಳ್ಳವರಿಂದೊಡಗೂಡಿ, ನೀವಿಬ್ಬರೂ ಶಸ್ತ್ರಾಸ್ತ್ರಸಜ್ಜಿತರಾಗಿ, ಈ ಕೋಳಾಗುಳದಲ್ಲಿ ಹಗೆಗಳನ್ನು ಸಂಹರಿಸಲು ಹೋಗಿರಿ;' ಎಂದು ದಶಕಂಠನು ಹೇಳಿದನು.

೬೬. ಆಗ ಲಕ್ಷ್ಮಣನು ಯುದ್ಧದಲ್ಲಿ ಹೋರಾಡುತ್ತಾ ಬಂದ ಆ ಹಗೆಗಳನ್ನು ಮೊನೆಚಾದ ಆರು ಬಾಣಗಳಿಂದ ಜವನ ಮನೆಗೆ ಒಯ್ದನು.

೬೭-೬೮ ವಾನರಗಳ ತಂಡವು ಉಳಿದ ರಕ್ಕಸರನ್ನು ಯಮನ ಗೃಹವನ್ನು ಮುಟ್ಟಿಸಿತು. ಬಲದಿಂದ ಸೊಕ್ಕಿದ ಕುಂಭನೆಂಬ ರಕ್ಕಸನನ್ನು ಸುಗ್ರೀವನು ಕೊಂದನು. ದೇವತೆಗಳಿಗೆ ಮುಳ್ಳಿನಂತೆ ಬಾಧಕನಾಗಿದ್ದ ನಿಕುಂಭನನ್ನು ವಾಯುಸುತನಾದ ಹನೂಮಂತನು ಸಂಹರಿಸಿದನು. ವಿಭೀಷಣನು ಹೋರಾಡುತ್ತಲಿದ್ದ ವಿರೂಪಾಕ್ಷನೆಂಬವನನ್ನು ಗದೆಯಿಂದಪ್ಪಳಿಸಿದನು.

೬೯. ಕಪಿಗಳಲ್ಲಿ ಶ್ರೇಷ್ಠರಾದ ಭೀಮಮೈಂದರು ಶ್ವಪತಿಯೆಂಬ ರಕ್ಕಸನನ್ನೂ ಬಳಿಕ ಅಂಗದ ಜಾಂಬವಂತರು ಇತರರಾದ ಇರುಳ ನಡೆವವರನ್ನೂ ಸಂಹಾರ ಮಾಡಿದರು.

ಯುಧ್ಯಮಾನಸ್ತು ಸಮರೇ ಮಹಾಲಕ್ಷಂ ಮಹಾಚಲಮ್ ।
ಜಘಾನ ರಾಮೋಽಥ ರಣೇ ಬಾಣವೃಷ್ಟಿಕರಂ ನೃಪ ॥ ೭೦ ॥

ಇಂದ್ರಜಿನ್ಮಂತ್ರಲಬ್ಧಂತು ರಥಮಾರುಹ್ಯ ವೈ ಪುನಃ ।
ವಾನರೇಷು ಚ ಸರ್ವೇಷು ಶರವರ್ಷಂ ವವರ್ಷ ಸಃ ॥ ೭೧ ॥

ರಾತ್ರೌ ತದ್ಬಾಣಭಿನ್ನಂ ತು ಬಲಂ ಸರ್ವಂ ಚ ರಾಘವಮ್ ।
ನಿಶ್ಚೇಷ್ಟಮಖಿಲಂ ದೃಷ್ಟ್ವಾ ಜಾಂಬವತ್ಪ್ರೇರಿತಸ್ತದಾ ॥ ೭೨ ॥

ವೀರ್ಯಾದೌಷಧೀಃ ಸಮಾದಾಯ ಹನೂಮಾನ್ಮಾರುತಾತ್ಮಜಃ ।
ಭೂಮ್ಯಾಂ ಶಯಾನಮುತ್ಥಾಪ್ಯ ರಾಮಂ ಹರಿಗಣಾಂಸ್ತಥಾ ॥ ೭೩ ॥

ತೈರೇವ ವಾನರೈಸ್ಸಾರ್ಧಂ ಜ್ವಲಿತೋಲ್ಕಾಕರೈರ್ನಿಶಿ ।
ದಾಹಯಾಮಾಸ ಲಂಕಾಂ ತಾಂ ಹಸ್ತ್ಯಶ್ವರಥರಕ್ಷಸಾಮ್ ॥ ೭೪ ॥

---

೭೦. ಎಲೈ ನೃಪನೇ ! ಕೇಳು; ಬಳಿಕ ಕಳನಲ್ಲಿ ಹೋರಾಡುತ್ತಲಿದ್ದ ಶ್ರೀರಾಮನು ಕೋಲ ಮಳೆಗರೆಯುತ್ತಲಿದ್ದ ಮಹಾಲಕ್ಷ ಮಹಾಚಲರನ್ನು ಸಂಹರಿಸಿದನು.

೭೧. ಆ ಇಂದ್ರಜಿತುವು ಪುನಹ ಮಂತ್ರಶಕ್ತಿಯಿಂದ ಪಡೆದ ತೇರನ್ನು ಹತ್ತಿ, ಎಲ್ಲ ಕಪಿಗಳ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

೭೨–೭೪. ಇರುಳಿನಲ್ಲಿ ಆ ರಾವಣನ ಬಾಣದಿಂದ ಹೊಡೆಯಲ್ಪಟ್ಟ ಸೈನ್ಯವೆಲ್ಲವನ್ನೂ, ಶ್ರೀರಾಮನನ್ನೂ, ಎಲ್ಲರನ್ನೂ ವ್ಯಾಪಾರರಹಿತರಾಗಿ ಮೂರ್ಛೆಗೆ ಸಂದುದನ್ನು ಕಂಡು, ಆಗ ಜಾಂಬವಂತನಿಂದ ಪ್ರೇರಿತನಾದ ವಾಯುತನಯನಾದ ಹನೂಮಂತನು ತನ್ನ ಸಾಮರ್ಥ್ಯದಿಂದ ಸಂಜೀವಿನಿಯ ಔಷಧಗಳನ್ನು ತಂದು, ನೆಲದ ಮೇಲೆ ಎಚ್ಚರತಪ್ಪಿ ಮಲಗಿದ್ದ ಶ್ರೀರಾಮನನ್ನೂ, ಅಂತೆಯೇ ಕಪಿಗಳ ತಂಡವನ್ನೂ ಎಚ್ಚರಗೊಳಿಸಿ, ಆ ರಾತ್ರಿಯಲ್ಲಿಯೇ ಉರಿಯುತ್ತಿರುವ ಕೊಳ್ಳಿಗಳನ್ನು ಕೈಗಳಲ್ಲಿ ಹಿಡಿದಿರುವ ಆ ವಾನರಗಳಿಂದ ಕೂಡಿ, ಆನೆ, ಕುದುರೆ, ತೇರು, ರಕ್ಕಸರು ಇವರುಗಳುಳ್ಳ ಆ ಲಂಕೆಯನ್ನು ಸುಟ್ಟನು.

ವರ್ಷಂತಂ ಶರಜಾಲಾನಿ ಸರ್ವದಿಕ್ಷು ಘನೋ ಯಥಾ ।
ಸಭ್ರಾತ್ರಾ ಮೇಘನಾದಂ ತಂ ಘಾತಯಾಮಾಸ ರಾಘವಃ ॥ ೭೫ ॥

ಘಾತಿತೇಷ್ವಥ ರಕ್ಷಸ್ಸು ಪುತ್ರಮಿತ್ರಾದಿಬಂಧುಷು ।
ಕಾರಿತೇಷ್ವಥ ವಿಘ್ನೇಷು ಹೋಮ ಜಪ್ಯಾದಿಕರ್ಮಣಾಮ್ ॥ ೭೬ ॥

ತತಃ ಕ್ರುದ್ಧೋ ದಶಗ್ರೀವೋ ಲಂಕಾದ್ವಾರೇ ವಿನಿರ್ಗತಃ ।
ಕ್ವಾಸೌ ರಾಮ ಇತಿ ಬ್ರೂತೇ ಮಾನುಷಸ್ತಾಪಸಾಕೃತಿಃ ॥ ೭೭ ॥

ಯೋದ್ಧಾ ಕಪಿಬಲೇಽತ್ಯುಚ್ಚೈರ್ವ್ಯಾಹರದ್ರಾಕ್ಷಸಾಧಿಪಃ ।
ವೇಗವದ್ಭಿರ್ವಿನೀತೈಶ್ಚ ಅಶ್ವೈಶ್ಚಿತ್ರರಥೇ ಸ್ಥಿತಃ ॥ ೭೮ ॥

---

೭೫. ಆಗ ರಾಘವನು ಮೇಘದಂತೆ ಎಲ್ಲ ದಿಕ್ಕುಗಳಲ್ಲಿಯೂ ಬಾಣಗಳ ಸಮುದಾಯವನ್ನು ಮಳೆಗರೆಯುತ್ತಲಿದ್ದ ಆ ಮೇಘನಾದನನ್ನು ಸಹೋದರರೊಡನೆ ಸಂಹರಿಸಿದನು.

೭೬-೭೭. ಅನಂತರದಲ್ಲಿ ಮಕ್ಕಳು, ಕೆಳೆಯರು-ಇವರೇ ಮೊದಲಾದ ನಂಟರಾದ ರಕ್ಕಸರು ಕೊಲ್ಲಲ್ಪಡುತ್ತಿರಲು, ಹೋಮ ಜಪಗಳೇ ಮೊದಲಾದ ಕಾರ್ಯಗಳಿಗೆ ವಿಘ್ನಗಳು ಉಂಟುಮಾಡುತ್ತಿರಲು, ಆ ಬಳಿಕ ಕ್ರುದ್ಧನಾದ ದಶಕಂಠನು ಲಂಕಾ ಪಟ್ಟಣದ ಬಾಗಿಲಿನಲ್ಲಿ ಹೊರಟವನು, 'ತಪಸ್ವಿಯ ಆಕಾರದ ಮನುಷ್ಯನಾದ ಈ ರಾಮನೆಲ್ಲಿರುವನು ? ಎಂದು ಹೇಳುತ್ತಾನೆ.

೭೮. ಕಡುವೇಗದ, ಪಳಗಿದ ಕುದುರೆಗಳಿಂದ ಕೂಡಿರುವ ಚಿತ್ರರಥದಲ್ಲಿ ಕುಳಿತಿದ್ದ, ರಕ್ಕಸರೊಡೆಯನಾದ ರಾವಣನು ಕಪಿಗಳ ಸೇನೆಯಲ್ಲಿ ಹೋರಾಡುತ್ತಾ, ಗಟ್ಟಿಯಾಗಿ ಅಬ್ಬರಿಸಿದನು.

ಅಥಾಯಾಂತಂ ತು ತಂ ದೃಷ್ಟ್ವಾ ರಾಮಃ ಪ್ರಾಹ ದಶಾನನಮ್ ।
ರಾಮೋಽಹಮತ್ರ ದುಷ್ಟಾತ್ಮನ್ನೇಹಿ ರಾವಣ ಮಾಂ ಪ್ರತಿ ॥ ೭೯ ॥

ಇತ್ಯುಕ್ತೇ ಲಕ್ಷ್ಮಣಃ ಪ್ರಾಹ ರಾಮಂ ರಾಜೀವಲೋಚನಮ್ ।
ಅನೇನ ರಕ್ಷಸಾ ಯೋತ್ಸ್ಯೇ ತ್ವಂ ತಿಷ್ಠೇತಿ ಮಹಾಬಲಃ ॥ ೮೦ ॥

ತತಸ್ತು ಲಕ್ಷ್ಮಣೋ ಗತ್ವಾ ರುರೋಧ ಶರವೃಷ್ಟಿಭಿಃ ।
ವಿಂಶದ್ಬಾಹುವಿಸೃಷ್ಟೈಸ್ತು ಶಸ್ತ್ರಾಸ್ತ್ರೈರ್ಲಕ್ಷ್ಮಣಂ ಯುಧಿ ॥ ೮೧ ॥

ರುರೋಧ ಸ ದಶಗ್ರೀವಸ್ತಯೋರ್ಯುದ್ಧಮಭೂನ್ಮಹತ್ ।
ದೇವಾ ವ್ಯೋಮ್ನಿ ವಿಮಾನಸ್ಥಾ ವೀಕ್ಷ್ಯ ತಸ್ಥುರ್ಮಹಾಬಲಮ್ ॥ ೮೨ ॥

೭೯–೮೦. ಅನಂತರದಲ್ಲಿ ಶ್ರೀ ರಾಮನು ಅಂತು ಬರುತ್ತಲಿದ್ದ, ಹತ್ತು ಮೊಗದ ರಾವಣನನ್ನು ನೋಡಿ, ಇಂತು ನುಡಿದನು :—'ಎಲೈ ದುಷ್ಟ ಸ್ವಭಾವದ ರಾವಣನೇ ! ನಾನು ರಾಮನು; ಇಲ್ಲಿರುತ್ತೇನೆ; ನನ್ನನ್ನು ಕುರಿತು ಬಾ;' ಎಂದು ಹೇಳಲು, ಲಕ್ಷ್ಮಣನು ಪುಂಡರೀಕಾಕ್ಷನಾದ ಶ್ರೀರಾಮನಿಗೆ ಇಂತು ಹೇಳಿದನು

೮೧–೮೨. ಬಳಿಕ ಲಕ್ಷ್ಮಣನು ಹೋಗಿ, ಬಾಣಗಳ ಮಳೆಗಳಿಂದ ಅವನನ್ನು ಕವಿಸಿದನು. ಆ ರಾವಣನೂ ಇಪ್ಪತ್ತು ಕೈಗಳಿಂದ ಹೊಡೆದ ಶಸ್ತ್ರಾಸ್ತ್ರಗಳಿಂದ ಕಾಳಗದಲ್ಲಿ ಲಕ್ಷ್ಮಣನನ್ನು ಕವಿಸಿದನು. ಅವರೀರ್ವರಿಗೂ ಬಹು ಭಯಂಕರವಾದ ಯುದ್ಧವು ಜರುಗಿತು. ದೇವತೆಗಳು ಮುಗಿಲಲ್ಲಿ, ಗಾಳಿದೇರಿನಲ್ಲಿ ಕುಳಿತು, ಇವರೀರ್ವರ ಪೌರುಷವನ್ನು ನೋಡಿ ನಿಂತರು.

೮೩–೮೪. ತರುವಾಯದಲ್ಲಿ ಲಕ್ಷ್ಮಣನು ಮೊನಚಾದ ಬಾಣಗಳಿಂದ ರಾವಣನ ಶಸ್ತ್ರಗಳನ್ನು ಕತ್ತರಿಸಿದನು. ಆ ಮೇಲೆ ಭಲ್ಲಕಗಳೆಂಬ ಆಯುಧಗಳಿಂದ

ತತೋ ರಾವಣಶಸ್ತ್ರಾಣಿ ಛಿತ್ವಾಸ್ತ್ರೇ ತೀಕ್ಷ್ಣಸಾಯಕೈಃ ।
ಲಕ್ಷ್ಮಣಃ ಸಾರಥಿಂ ಹತ್ವಾ ತಸ್ಯಾಶ್ವಾನಪಿ ಭಲ್ಲಕೈಃ ॥ ೮೩ ॥

ರಾವಣಸ್ಯ ಧನುಶ್ಛಿತ್ವಾ ಧ್ವಜಂ ಚ ನಿಶಿತೈಶ್ಶರೈಃ ।
ವಕ್ಷಃಸ್ಥಲಂ ಮಹಾವೀರ್ಯೋ ವಿವ್ಯಾಧ ಪರವೀರಹಾ ॥ ೮೪ ॥

ತತೋ ರಥಾನ್ನಿಪತ್ಯಾಧಃ ಕ್ಷಿಪ್ರಂ ರಾಕ್ಷಸನಾಯಕಃ ।
ಶಕ್ತಿಂ ಜಗ್ರಾಹ ಕುಪಿತೋ ಘಂಟಾನಾದನಿನಾದಿನೀಮ್ ॥ ೮೫ ॥

ಅಗ್ನಿಜ್ವಾಲಾಜ್ವಲಜ್ಜಿಹ್ವಾಂ ಮಹೋಲ್ಕಾಸದೃಶದ್ಯುತಿಮ್ ।
ದೃಢಮುಷ್ಟ್ಯಾ ತು ನಿಕ್ಷಿಪ್ತಾ ಶಕ್ತಿಃ ಸಾ ಲಕ್ಷ್ಮಣೋರಸಿ ॥ ೮೬ ॥

ವಿದಾರ್ಯಾಂತಃ ಪ್ರವಿಷ್ಟಾಥ ದೇವಾಸ್ತ್ರಸ್ತಾಸ್ತತೋಽಂಬರೇ ।
ಲಕ್ಷ್ಮಣಂ ಪತಿತಂ ದೃಷ್ಟ್ವಾ ರುದದ್ಭಿರ್ವಾನರೇಶ್ವರೈಃ ॥ ೮೭ ॥

ಸಾರಥಿಯನ್ನೂ, ಅವನ ತೇರು ಕುದುರೆಗಳನ್ನೂ ಕೊಂದು, ನಿಶಿತವಾದ ಬಾಣಗಳಿಂದ ರಾವಣನ ಬಿಲ್ಲನ್ನೂ ಕತ್ತರಿಸಿ, ಶತ್ರುವೀರರನ್ನು ಕೊಲ್ಲುವವನಾದ, ಅತ್ಯಂತ ಪರಾಕ್ರಮಿಯಾದ ಲಕ್ಷ್ಮಣನು ರಾವಣನ ಎದೆಗೆ ಹೊಡೆದನು.

೮೫. ಬಳಿಕ ರಕ್ಕಸರ ನಾಯಕನಾದ ರಾವಣನು, ತೇರಿನಿಂದ ಕೆಳಕ್ಕೆ ಬಿದ್ದು, ಕೋಪಗೊಂಡವನಾಗಿ ಘಂಟೆಗಳ ದನಿಯಿಂದ ಹೆಚ್ಚಾಗಿ ಮೊಳಗುತ್ತಲಿರುವ, ಶಕ್ತ್ಯಾಯುಧವನ್ನು ಕೈಕೊಂಡನು.

೮೬–೮೭. ಕಡುಬೆಳಗುತ್ತಲಿರುವ ನಾಲಿಗೆಯುಳ್ಳ, ಕಟ್ಟುಳ್ಕಿಗೆಣೆಯಾದ ಬೆಳಕುಳ್ಳ, ಆ ಶಕ್ತ್ಯಾಯುಧವು ಲಕ್ಷ್ಮಣನ ಎದೆಯಲ್ಲಿ ಬಲವಾದ ಮುಷ್ಟಿಯಿಂದ ಹೊಡೆಯಲ್ಪಟ್ಟು, ಎದೆಯನ್ನು ಸಿೀಳಿ, ಒಳಹೊಕ್ಕಿತು. ಬಳಿಕ ಆಗಸದಲ್ಲಿ ದೇವತೆಗಳು ಭಯಪಟ್ಟರು. ಕೆಳಗೆ ಬಿದ್ದ ಲಕ್ಷ್ಮಣನನ್ನು ಕಂಡು, ಅಳುತ್ತಲಿದ್ದ ಕಪಿಶ್ರೇಷ್ಠರಿಂದ ತಿಳಿಸಿದ ದುಃಖವಾರ್ತೆಯುಳ್ಳ ಶ್ರೀರಾಮಚಂದ್ರನು ಬೇಗನೆ ಅವನ

ದುಃಖಿತಃ ಶೀಘ್ರಮಾಗತ್ಯ ತತ್ಪಾರ್ಶ್ವಂ ಪ್ರಾಹ ರಾಘವಃ ।
ಕ್ವ ಗತೋ ಹನುಮಾನ್ವೀರೋ ಮಿತ್ರೋ ಮೇ ಪವನಾತ್ಮಜಃ ॥ ೮೮ ॥

ಯದಿ ಜೀವತಿ ಮೇ ಭ್ರಾತಾ ಕಥಂ ಚಿತ್ಪತಿತೋ ಭುವಿ ।
ಇತ್ಯುಕ್ತೇ ಹನೂಮಾನ್ರಾಜನ್ವೀರೋ ವಿಖ್ಯಾತಪೌರುಷಃ ॥ ೮೯ ॥

ಬದ್ಧ್ವಾಂಜಲಿಂ ಬಭಾಷೇದಂ ದೇಹ್ಯನುಜ್ಞಾಂ ಸ್ಥಿತೋಽಸ್ಮಿ ಭೋಃ ।
ರಾಮಃ ಪ್ರಾಹ ಮಹಾವೀರ ವಿಶಲ್ಯಃ ಕರಣೀ ಮಮ ॥ ೯೦ ॥

ಅನುಜಂ ವಿರುಜಂ ಶೀಘ್ರಂ ಕುರು ಮಿತ್ರ ಮಹಾಬಲ ।
ತತೋ ವೇಗಾತ್ಸಮುತ್ಪತ್ಯ ಗತ್ವಾ ದ್ರೋಣಗಿರಿಂ ಕಪಿಃ ॥ ೯೧ ॥

ಬದ್ಧ್ವಾ ಚ ಶೀಘ್ರಮಾನೀಯ ಲಕ್ಷ್ಮಣಂ ನೀರುಜಂ ಕ್ಷಣಾತ್ ।
ಚಕಾರ ದೇವದೇವೇಶೈಃ ಪಶ್ಯತಾಂ ರಾಘವಸ್ಯ ಚ ॥ ೯೨ ॥

ಸಮೀಪಕ್ಕೆ ಬಂದು, ಇಂತು ನುಡಿದನು :—' ನನ್ನ ಕೆಳೆಯನಾದ, ವೀರನಾದ, ವಾಯುತನಯನಾದ ಹನೂಮಂತನೆಲ್ಲಿ ಹೋದನು ? ಬದುಕಿರುವನೇ ? ನನ್ನ ತಮ್ಮನು ನೆಲದಲ್ಲಿ ಹೇಗೆ ಬಿದ್ದನು ?' ಎಂದು ಶ್ರೀರಾಮನು ನುಡಿಯಲು, ಎಲೈ ಸಹಸ್ರಾನೀಕರಾಯನೇ ! ಕೇಳು ; ಲೋಕಪ್ರಸಿದ್ಧವಾದ ಪೌರುಷಶಾಲಿಯಾದ ಹನೂಮಂತನು ಕೈಜೋಡಿಸಿ, ಹೀಗೆ ಹೇಳಿದನು :—' ಎಲೈ ಸ್ವಾಮಿಯೇ ! ಅಪ್ಪಣೆಯಾಗಬೇಕು ; ಇಲ್ಲಿರುವೆನು ;' ಎಂದನು. ಆಗ ಶ್ರೀರಾಮನು ಹೇಳುತ್ತಾನೆ :—' ಎಲೈ ಮಹಾವೀರನೇ ! ನನ್ನ ತಮ್ಮನ ಎದೆಯಲ್ಲಿ ಹೊಕ್ಕಿರುವ ಶಲ್ಯವನ್ನು ಕಿತ್ತು, ಎಲೈ ಮಹಾಬಲನಾದ ಮಿತ್ರನೇ ! ತಮ್ಮನನ್ನು ಬೇಗನೆ ಬೇನೆಯಿಲ್ಲದವನನ್ನಾಗಿ ಮಾಡು ;' ಎಂದನು. ಅನಂತರದಲ್ಲಿ ಕಪಿಯಾದ ಆಂಜನೇಯನು ವೇಗದಿಂದ ಹಾರಿ, ದ್ರೋಣಾಚಲಕ್ಕೆ ಹೋಗಿ, ಅದನ್ನು ಕಟ್ಟಿ, ಬೇಗನೆ ತಂದು, ದೇವದೇವೇಶರಿಂದ ನೋಡುತ್ತಿರುವಾಗಲೇ, ಶ್ರೀ ರಾಮನ ಸಮಕ್ಷಮದಲ್ಲಿಯೇ ಒಂದು ಚಣದಿಂದಲೇ ಲಕ್ಷ್ಮಣನನ್ನು ಬೇನೆಯಿಲ್ಲದವನನ್ನಾಗಿ, ಮಾಡಿದನು.

ತತಃ ಕ್ರುದ್ಧೋ ಜಗನ್ನಾಥೋ ರಾಮಃ ಕಮಲಲೋಚನಃ ।
ರಾವಣಸ್ಯ ಬಲಂ ಶಿಷ್ಟಂ ಹಸ್ತ್ಯಶ್ವರಥರಾಕ್ಷಸಮ್ ॥ ೯೩ ॥

ಹತ್ವಾ ಕ್ಷಣೇನ ರಾಮಸ್ತು ತಚ್ಛರೀರಂ ತು ಸಾಯಕೈಃ ।
ತೀಕ್ಷ್ಣೈರ್ಜರ್ಜರಿತಾಂ ಕೃತ್ವಾ ತಸ್ಥಿವಾನ್ವಾನರೈರ್ವೃತಃ ॥ ೯೪ ॥

ಅಸ್ತಚೇಷ್ಟೋ ದಶಗ್ರೀವಃ ಸಂಜ್ಞಾಂ ಪ್ರಾಪ್ಯ ಶನೈಃ ಪುನಃ ।
ಉತ್ಥಾಯ ರಾವಣಃ ಕ್ರುದ್ಧಃ ಸಿಂಹನಾದಂ ನನಾದ ಚ ॥ ೯೫ ॥

ತನ್ನಾದಶ್ರವಣೈರ್ವ್ಯೋಮ್ನಿ ವಿತ್ರಸ್ತಾ ದೇವತಾಗಣಾಃ ।
ಏತಸ್ಮಿನ್ನೇವ ಕಾಲೇ ತು ರಾಮಂ ಪ್ರಾಪ್ಯ ಮಹಾಮುನಿಃ ॥ ೯೬ ॥

೯೩-೯೪. ತರುವಾಯದಲ್ಲಿ ಚತುರ್ದಶಭುವನಗಳ ಸ್ವಾಮಿಯಾದ, ಪುಂಡರೀಕಾಕ್ಷನಾದ ಶ್ರೀರಾಮನು, ಕೋಪಗೊಂಡು, ಒಂದು ಕ್ಷಣದಿಂದಲೇ ಆನೆ, ಕುದುರೆ, ತೇರು, ಮತ್ತು ರಕ್ಕಸರು ಇವರ ಉಳಿದ ಸೈನ್ಯವನ್ನು ಸಂಹರಿಸಿ, ಅವನೊಡಲನ್ನು ತೀಕ್ಷ್ಣಗಳಾದ ಬಾಗಣಳಿಂದ ಹೊಡೆದು, ನುಚ್ಚುನೂರು ಮಾಡಿ, ಕಪಿಗಳಿಂದ ಪರಿವೃತನಾಗಿದ್ದನು.

೯೫. ಮೂರ್ಛೆಗೆ ಸಂದ, ದಶಗ್ರೀವನಾದ ರಾವಣನು ಮೆಲ್ಲನೆ ಮತ್ತು ಎಚ್ಚರಗೊಂಡವನಾಗಿ ಎದ್ದು, ಮುಳಿಸುಗೊಂಡು, ಬೊಬ್ಬಿರಿದನು.

೯೬-೧೦೦. ರಾವಣನ ಆ ಸಿಂಹನಾದವನ್ನು ಕೇಳಿ, ಆಗಸದಲ್ಲಿದ್ದ ದೇವತೆಗಳ ತಂಡಗಳು ಬಹುವಾಗಿ ಅಂಜಿದುವು. ಇದೇ ಸಮಯದಲ್ಲಿ ರಾವಣನಲ್ಲಿ ಹಗೆ ಗೊಂಡಿದ್ದ ಅಗಸ್ತ್ಯಮಹಾಮುನಿಯು ಯುದ್ಧರಂಗಕ್ಕೆ ಶ್ರೀರಾಮನ ಸಮೀಪಕ್ಕೆ ಬಂದು ಜಯಪ್ರದವಾದ ‘ ಆದಿತ್ಯ ಹೃದಯ ’ ವೆಂಬ ಮಂತ್ರವನ್ನು ಉಪದೇಶ ರೂಪವಾಗಿ

ರಾವಣೇ ಬದ್ಧವೈರಸ್ತು ಅಗಸ್ತ್ಯೋಕ್ತಂ ಜಯಪ್ರದಮ್ ।
ಆದಿತ್ಯಹೃದಯಂ ನಾಮ ಮಂತ್ರಂ ಪ್ರಾಪ್ಯಾಜ್ಞಯಪ್ರದಮ್ ॥ ೯೭ ॥

ರಾಮೋಽಪಿ ಜಪ್ತ್ವಾ ತನ್ಮಂತ್ರಮಗಸ್ತ್ಯೋಕ್ತಂ ಜಯಪ್ರದಮ್ ।
ತದ್ದತ್ತಂ ವೈಷ್ಣವಂ ಚಾಪಮತುಲಂ ಸದ್ಗುಣಂ ದೃಢಮ್ ॥ ೯೮ ॥

ಪೂಜಯಿತ್ವಾ ತದಾದಾಯ ಸಜ್ಜಂ ಕೃತ್ವಾ ಮಹಾಬಲಃ ।
ಸೌವರ್ಣಪುಂಖೈಸ್ತೀಕ್ಷ್ಣೈಸ್ತು ಶರೈರ್ಮರ್ಮವಿದಾರಣೈಃ ॥ ೯೯ ॥

ಯುಯುಧೇ ರಾಕ್ಷಸೇಂದ್ರೇಣ ರಘುನಾಥಃ ಪ್ರತಾಪವಾನ್ ।
ತಯೋಸ್ತು ಯುಧ್ಯತೋಸ್ತತ್ರ ಭೀಮಶಕ್ತ್ಯೋರ್ಮಹಾಮತೇ ॥ ೧೦೦ ॥

ಪರಸ್ಪರ ವಿಸೃಷ್ಟಸ್ತು ವ್ಯೋಮ್ನಿ ಸಂವರ್ಧಿತಾನಲಃ ।
ಸಮುತ್ಥಿತೋ ನೃಪಶ್ರೇಷ್ಠ ರಾಮರಾವಣಯೋರ್ಯುಧಿ ॥ ೧೦೧ ॥

ಕೊಟ್ಟನು. ಶ್ರೀರಾಮನೂ ಅಗಸ್ತ್ಯಮಹಾಮುನಿಯು ಉಪದೇಶಿಸಿದ ಆ ಆದಿತ್ಯ ಹೃದಯವೆಂಬ ಜಯಪ್ರದವಾದ ಮಹಾಮಂತ್ರವನ್ನು ಜಪಿಸಿ, ಅವರು ಕೊಟ್ಟಿದ್ದ, ದೃಢವೂ, ಉತ್ತಮವಾದ ಹದೆಯುಳ್ಳನೂ, ಆದ ವೈಷ್ಣವ ಧನುವನ್ನು ಪೂಜಿಸಿ, ಮಹಾಬಲನಾದ ರಾಘವನು, ಅದನ್ನು ತೆಗೆದು ಕೊಂಡು ಹದೆಯೇರಿಸಿ, ಹೊನ್ನ ಹಿಳುಕಿನ, ಮೊನೆಚಾದ, ಮರ್ಮವನ್ನು ಭೇದಿಸುವ ಬಾಣಗಳಿಂದ ಪ್ರತಾಪ ಶಾಲಿಯಾದ ರಘುನಾಥನು, ರಕ್ಕಸರಲ್ಲಿ ಹಿರಿಯನಾದ ರಾವಣನೊಡನೆ ಯುದ್ಧಮಾಡುತ್ತಲಿದ್ದನು. ಭಯಂಕರವಾದ ಸಾಮರ್ಥ್ಯವುಳ್ಳ ಆ ರಾಮರಾವಣ ರೀರ್ವರೂ ಒಬ್ಬೊರಿಗೊಬ್ಬರು ಹೊಡೆದ ಬಾಣಗಳು, ಪರಸ್ಪರವಾಗಿ ಆಗಸದಲ್ಲಿ ತಗುಲಿ ಬಳಿದ ಬೆಂಕಿಯು ಎದ್ದಿತು.

ಸಂಗರೇ ವರ್ತಮಾನೇ ತು ರಾಮೋ ದಾಶರಥಿಸ್ತದಾ ।
ಪದಾತಿರ್ಯುಯುಧೇ ವೀರೋ ರಾಮೋಽಸುಕ್ತಪರಾಕ್ರಮಃ ॥ ೧೦೨ ॥

ಸಹಸ್ರಾಶ್ವಯುತಂ ದಿವ್ಯಂ ರಥಂ ಮಾತಲಿಮೇವ ಚ ।
ಪ್ರೇಷಯಾಮಾಸ ದೇವೇಂದ್ರೋ ಮಹಾಂತಂ ಲೋಕವಿಶ್ರುತಮ್ ॥ ೧೦೩ ॥

ರಾಮಸ್ತಂ ರಥಮಾರುಹ್ಯ ಪೂಜ್ಯಮಾನಃ ಸುರೋತ್ತಮೈಃ ।
ಮಾತಲ್ಯುಕ್ತೋಪದೇಶಸ್ತು ರಾಮಚಂದ್ರಃ ಪ್ರತಾಪವಾನ್ ॥ ೧೦೪ ॥

ಬ್ರಹ್ಮದತ್ತವರಂ ದುಷ್ಟಂ ಬ್ರಹ್ಮಾಸ್ತ್ರೇಣ ದಶಾನನಮ್ ।
ಜಘಾನ ವೈರಿಣಂ ಕ್ರೂರಂ ರಾಮದೇವಃ ಪ್ರತಾಪವಾನ್ ॥ ೧೦೫ ॥

---

೧೦೨. ಇಂತು ಯುದ್ಧವು ನಡೆಯುತ್ತಿರಲು, ವೀರನೂ, ಹಿಂದೆ ಎಲ್ಲಿಯೂ ಬಣ್ಣಿಸಿಲ್ಲದಷ್ಟು ಅತುಲ ಪರಾಕ್ರಮಿಯಾದವನೂ, ದಶರಥ ತನಯನೂ ಆದ ಶ್ರೀರಾಮನು ಕಾಲುನಡೆಯಿಂದಲೇ ಹೋರಾಡಿದನು.

೧೦೩. ದೇವೇಂದ್ರನು ಜಗತ್ಪ್ರಖ್ಯಾತವೂ, ಸಾಸಿರ ಕುದುರೆಗಳು ಕಟ್ಟಿರುವುದೂ, ಅಮಾನುಷವೂ, ಹಿರಿದೂ ಆದ ತೇರನ್ನೂ, ಬೋವನಾದ ಮಾತಲಿಯನ್ನೂ ಕಳುಹಿಸಿದನು.

೧೦೪. ಶ್ರೀರಾಮನು ಆ ತೇರನ್ನು ಹತ್ತಿದನು. ಆಗ ದೇವೋತ್ತಮರು ಈತನನ್ನು ಪೂಜಿಸಿದರು. ಮಾತಲಿಯು ಕೆಲವು ಸಲಹೆಗಳನ್ನು ಕೊಟ್ಟನು. ಆಗ ಶ್ರೀರಾಮನು ವಿಶೇಷ ಪ್ರತಾಪವುಳ್ಳವನಾದನು.

೧೦೫. ಅಂತು ಪ್ರತಾಪಶಾಲಿಯಾದ ಶ್ರೀರಾಮಚಂದ್ರನು, ಚತುರ್ಮುಖ ನಿತ್ತವರಗಳ ಸಾಮರ್ಥ್ಯವುಳ್ಳವನೂ, ಹಗೆಯೂ, ಕ್ರೂರನೂ, ದುಷ್ಟನೂ ಆದ ಹತ್ತುಮೊಗದ ರಾವಣನನ್ನು ಬ್ರಹ್ಮಾಸ್ತ್ರಪ್ರಯೋಗದಿಂದ ಸಂಹರಿಸಿದನು.

ರಾಮೇಣ ನಿಹತೇ ತತ್ರ ರಾವಣೇ ಸಗಣೇ ರಿಪೌ ।
ಇಂದ್ರಾದ್ಯಾ ದೇವತಾಃ ಸರ್ವಾಃ ಪರಸ್ಪರಮಥಾಬ್ರುವನ್ ॥ ೧೦೬ ॥

ರಾಮೋ ಭೂತ್ವಾ ಹರಿರ್ಯಸ್ಮಾದಸ್ಮಾಕಂ ವೈರಿಣಂ ರಣೇ ।
ಅನ್ಯೈರವಧ್ಯಮಪ್ಯೇನಂ ಜಘಾನ ಯುಧಿ ರಾವಣಮ್ ॥ ೧೦೭ ॥

ತಸ್ಮಾತ್ತಂ ರಾಮನಾಮಾನಮನಂತಮಪರಾಜಿತಮ್ ।
ಪೂಜಯಾಮೋಽವತೀರ್ಯೈನಮಿತ್ಯುಕ್ತ್ವಾ ತೇ ದಿವೌಕಸಃ ॥ ೧೦೮ ॥

ನಾನಾವಿಮಾನೈಃ ಶ್ರೀಮದ್ಭಿರವತೀರ್ಯ ಮಹೀತಲೇ ।
ರುದ್ರೇಂದ್ರವಸುಚಂದ್ರಾದ್ಯಾ ವಿಧಾತಾರಂ ಸನಾತನಮ್ ॥ ೧೦೯ ॥

---

೧೦೬. ಆ ಕೊಳುಗುಳದಲ್ಲಿ ಹಗೆಯಾದ, ಪರಿವಾರ ದೊಡಗೂಡಿದ ರಾವಣನನ್ನು ಶ್ರೀರಾಮನು ಸಂಹರಿಸಲು, ಬಳಿಕ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಒಬ್ಬರೊಡನೊಬ್ಬರು ಇಂತು ಮಾತನಾಡಿಕೊಂಡರು.

೧೦೭–೧೦೮. 'ಶ್ರೀಹರಿಯು ಯಾವ ಕಾರಣದಿಂದ ಶ್ರೀ ರಾಮನಾಗಿ ಅವತರಿಸಿ, ಯುದ್ಧದಲ್ಲಿ ನಮ್ಮ ಹಗೆಯೂ, ಮತ್ತಾರಿಂದಲೂ ಯುದ್ಧದಲ್ಲಿ ಸಂಹರಿಸಲಾಗದವನೂ, ಆದ ಈ ರಾವಣನನ್ನು ಸಂಹರಿಸಿದನೋ, ಅದರಿಂದ, ನಾಶವಿಲ್ಲದವನಾದುದರಿಂದ ಅನಂತನೂ, ಇತರರಿಂದ ಅಜೇಯನೂ, ಆದ ಈ ಶ್ರೀ ರಾಮನನ್ನು ಬುವಿಗಿಳಿದು ಪೂಜಿಸುವ;' ಎಂದು ಆ ದೇವತೆಗಳು ಹೇಳಿ, ಪರಸ್ಪರವಾಗಿ ಮಾತನಾಡಿಕೊಂಡರು.

೧೦೯–೧೧೦. ರುದ್ರರು, ವಸುಗಳು, ಚಂದ್ರ–ಇವರೇ ಮೊದಲಾದ ದೇವತೆಗಳು ಸಕಲಸಂಪತ್ಸಮೃದ್ಧಗಳಾದ ಅನೇಕ ವಿಮಾನಗಳಿಂದ ಬುವಿಗಿಳಿದು, ಸಕಲ ಲೋಕವನ್ನೂ ತನ್ನ ಉದರದಲ್ಲಿ ಧರಿಸಿರುವವನೂ, ರಕ್ಷಿಸುವವನೂ, ನಿತ್ಯನಾದವನೂ, ವೇದಪ್ರತಿಪಾದ್ಯನೂ, ಎಲ್ಲೆಡೆಗಳಲ್ಲಿಯೂ ವ್ಯಾಪ್ತನಾದ ವಿಷ್ಣುವೂ, ಸರ್ವೋತ್ತಮನಾದ, ಸರ್ವೋತ್ಕರ್ಷವುಳ್ಳ ಜಿಷ್ಣುವೂ, ಜಗತ್ತು ಆಶ್ರಯವಾಗಿರುವವನೂ,

ವಿಷ್ಣುಂ ಜಿಷ್ಣುಂ ಜಗನ್ಮೂರ್ತಿಂ ಸಾನುಜಂ ರಾಮಮವ್ಯಯಮ್ ।
ತಂ ಪೂಜಯಿತ್ವಾ ವಿಧಿವತ್ಪರಿವಾರ್ಯೋಪತಸ್ಥಿರೇ ॥ ೧೧೦ ॥

ರಾಮೋಽಯಂ ಪಶ್ಯತಾಂ ದೇವಾ ಲಕ್ಷ್ಮಣೋಽಯಂ ವ್ಯವಸ್ಥಿತಃ ।
ಸುಗ್ರೀವೋ ರವಿಪುತ್ರೋಽಯಂ ವಾಯುಪುತ್ರೋಽಯಮಾಸ್ಥಿತಃ ॥೧೧೧॥

ಅಂಗದಾದ್ಯಾ ಇಮೇ ಸರ್ವೇ ಇತ್ಯೂಚುಸ್ತೇ ದಿವೌಕಸಃ ।
ಗಂಧಾಮೋದಿತದಿಕ್ಚಕ್ರಾ ಭ್ರಮರಾಲಿಪದಾನುಗಾಃ ॥ ೧೧೨ ॥

ದೇವಸ್ತ್ರೀಕರನಿರ್ಮುಕ್ತಾ ರಾಮಮೂರ್ಧನಿ ಶೋಭಿತಾ ।
ಪಪಾತ ಪುಷ್ಪವೃಷ್ಟಿಸ್ತು ಲಕ್ಷ್ಮಣಸ್ಯ ಚ ಮೂರ್ಧನಿ ॥ ೧೧೩ ॥

ತತೋ ಬ್ರಹ್ಮಾ ಸಮಾಗತ್ಯ ಹಂಸಯಾನೇನ ರಾಘವಮ್ ।
ಅಮೋಘಾಖ್ಯೇನ ಸ್ತೋತ್ರೇಣ ಸ್ತುತ್ವಾ ರಾಮಮುವಾಚ ಹ ॥ ೧೧೪ ॥

ಜಗತ್ತಿಗೆ ಆಶ್ರಯನಾದವನೂ, ಆದುದರಿಂದ ಜಗನ್ಮೂರ್ತಿಯೂ, ಅಪಕ್ಷಯಾದಿ ಭಾವವಿಕಾರಾದಿಗಳಿಲ್ಲದಿರುವುದರಿಂದ ಅವ್ಯಯನೂ ಆದ, ತಮ್ಮನೊಡಗೂಡಿದ, ಶ್ರೀ ರಾಮಚಂದ್ರನನ್ನು ಶಾಸ್ತ್ರೋಕ್ತವಿಧಿಯಿಂದ ಪೂಜಿಸಿ, ಸುತ್ತುಗೊಂಡು ನಿಂತರು.

೧೧೧–೧೧೩. ಆ ದೇವತೆಗಳೆಲ್ಲರೂ, 'ಎಲೈ ದೇವತೆಗಳೇ! ಈತನು ರಾಮನು ನೋಡಿರಿ; ಇವನು ಲಕ್ಷ್ಮಣನು; ಇವನು ಸೂರ್ಯತನಯನಾದ ಸುಗ್ರೀವನು; ಇಲ್ಲಿರುವ ಇವನು ವಾಯುತನಯನು; ಇವರೆಲ್ಲರೂ ಅಂಗದನೇ ಮೊದಲಾದ ವಾನರರು;' ಎಂದು ಒಬ್ಬರೊಡನೊಬ್ಬರು ಮಾತನಾಡಿಕೊಂಡರು. ಸುಗಂಧದಿಂದ ಸುವಾಸಿತವಾದ ದಿಙ್ಮಂಡಲವುಳ್ಳುದೂ, ತುಂಬಿಗಳ ತಂಡದ ಝೇಂಕಾರಗಳಿಂದ ಕೂಡಿದುದೂ, ದೇವತಾಸ್ತ್ರೀಯರ ಕೈಗಳಿಂದ ಬಿಡಲ್ಪಟ್ಟುದೂ, ಅಂದವಾದುದೂ, ಮಂಗಳವಾದುದೂ, ಆದ ಪೂಮಳೆಯು ಶ್ರೀ ರಾಮನ ತಲೆಯ ಮೇಲೆಯೂ, ಲಕ್ಷ್ಮಣನ ತಲೆಯ ಮೇಲೆಯೂ ಬಿದ್ದಿತು.

೧೧೪. ಅನಂತರದಲ್ಲಿ ಹಂಸವಾಹನದಿಂದ ಚತುರ್ಮುಖನು ಬಂದು, ಅಮೋಘವೆಂಬ ಸ್ತೋತ್ರದಿಂದ ನುತಿಸಿ, ಶ್ರೀರಾಮನಿಗೆ ಇಂತು ಹೇಳಿದನು.

॥ ಬ್ರಹ್ಮೋವಾಚ ॥

ತ್ವಂ ವಿಷ್ಣುರಾದಿರ್ಭೂತಾನಾಮನಂತೋ ಜ್ಞಾನದೃಗ್ವ್ಯಯಃ ।
ತ್ವಮೇವ ಶಾಶ್ವತಂ ಬ್ರಹ್ಮ ವೇದಾಂತೇ ವಿದಿತಂ ಪರಮ್ ॥ ೧೧೫ ॥

ತ್ವಯಾ ಯದದ್ಯ ನಿಹತೋ ರಾವಣೋ ಲೋಕರಾವಣಃ ।
ತದಾಶು ಸರ್ವಲೋಕಾನಾಂ ದೇವಾನಾಂ ಕರ್ಮ ಸಾಧಿತಮ್ ॥ ೧೧೬ ॥

ಇತ್ಯುಕ್ತೇ ಪದ್ಮಯೋನೌ ತು ಶಂಕರಃ ಪ್ರೀತಿಮಾಸ್ಥಿತಃ !
ಪ್ರಣಮ್ಯ ರಾಮಂ ತಸ್ಮೈ ತಂ ಭೂಯೋ ದಶರಥಂ ನೃಪಮ್ ॥ ೧೧೭ ॥

ದರ್ಶಯಿತ್ವಾ ಗತೋ ದೇವಃ ಸೀತಾ ಶುದ್ಧೇತಿ ಕೀರ್ತಯನ್ ।
ತತೋ ಬಾಹುಬಲಪ್ರಾಪ್ತಂ ವಿಮಾನಂ ಪುಷ್ಪಕಂ ಶುಭಮ್ ॥ ೧೧೮ ॥

---

೧೧೫. ಬ್ರಹ್ಮನು ಇಂತು ಹೇಳುತ್ತಾನೆ:—

‘ ಎಲೈ ರಾಮಚಂದ್ರನೇ ! ನೀನೇ ಸರ್ವತ್ರ ವ್ಯಾಪ್ತನಾದ ಶ್ರೀ ಮಹಾ ವಿಷ್ಣುವು ; ಸಕಲ ಪ್ರಾಣಿಗಳಿಗೂ ಕಾರಣನು ; ಜ್ಞಾನವನ್ನು ತೋರಗುಡವವನು ; ಸರ್ವಲೋಕವನ್ನೂ ಲಯ ಮಾಡುವವನು ; ನೀನೇ ವೇದಾಂತಗಳಾದ ಉಪನಿಷತ್ತುಗಳಲ್ಲಿ ತಿಳಿದು ಬರುವ ನಿತ್ಯವಾದ, ಸರ್ವೋತ್ತಮನಾದ, ಅಪ್ರಾಕೃತಾನಂತಕಲ್ಯಾಣ ಗುಣಪೂರ್ಣನಾದ ಪರಬ್ರಹ್ಮನು.

೧೧೬. ನೀನು ಇಂದು ಯಾವ ಕಾರಣದಿಂದ ಸಕಲ ಲೋಕಗಳಿಗೂ ದುಃಖವನ್ನು ಕೊಡುತ್ತಲಿದ್ದ ರಾವಣನನ್ನು ಸಂಹರಿಸಿದೆಯೋ, ಅದರಿಂದ ಸಕಲ ಪ್ರಪಂಚದ ಮತ್ತು ದೇವತೆಗಳ ಕಾರ್ಯವನ್ನು ಬೇಗನೆ ಸಾಧಿಸಿದೆ.’

೧೧೭-೧೨೦. ತಾವರೆಯಲ್ಲಿ ಹುಟ್ಟಿದ ಚತುರ್ಮುಖನು ಇಂತು ಹೇಳಲು, ಶಂಕರನು ಪ್ರೀತಿಯನ್ನು ಹೊಂದಿ, ಶ್ರೀ ರಾಮನಿಗೆ ಪೊಡಮಟ್ಟು, ಅವನಿಗೆ ಪುನಃ

ಪ್ರೋತಾವಪ್ಯಾರೋಪ್ಯ ಸೀತಾಂ ತಾವಮಾದಿಷ್ಟಪವನಾತ್ಮಜಃ ।
ತತಸ್ತು ಜಾನಕೀಂ ದೇವೀಂ ವಿಶೋಕಾಂ ಭೂಷಣಾನ್ವಿತಾಮ್ ॥ ೧೧೯ ॥

ವಂದಿತಾಂ ವಾನರೇಂದ್ರೈಸ್ತು ಸಾರ್ಧಂ ಭ್ರಾತ್ರಾ ಮಹಾಬಲಃ ।
ಪ್ರತಿಷ್ಠಾಪ್ಯ ಮಹಾದೇವಂ ಸೇತುಮಧ್ಯೇ ಸ ರಾಘವಃ ॥ ೧೨೦ ॥

ಲಬ್ಧವಾನ್ಪರಮಾಂ ಭಕ್ತಿಂ ಶಿವೇ ಶಂಭೋರನುಗ್ರಹಾತ್ ।
ರಾಮೇಶ್ವರ ಇತಿ ಖ್ಯಾತೋ ಮಹಾದೇವಃ ಪಿನಾಕಧೃಕ್ ॥ ೧೨೧ ॥

ತಸ್ಯ ದರ್ಶನಮಾತ್ರೇಣ ಸರ್ವಹತ್ಯಾಂ ವ್ಯಪೋಹತಿ ।
ರಾಮಸ್ತೀರ್ಣಪ್ರತಿಜ್ಞೋಽಸೌ ಭರತಾಸಕ್ತಮಾನಸಃ ॥ ೧೨೨ ॥

ಅವನ ತಂದೆಯಾದ ದಶರಥರಾಜನನ್ನು ತೋರಿಸಿ, ಸೀತಾದೇವಿಯು ಶುದ್ಧಳು, (ಮಹಾಪತಿವ್ರತೆಯು ಮತ್ತು ಶುದ್ಧಳು;) ಎಂದು ಹೇಳುತ್ತಾ, ಹೊರಟು ಹೋದನು. ಅನಂತರದಲ್ಲಿ ಶ್ರೀರಾಮನು ಅಗ್ನಿಶುದ್ಧಳಾದ ಆ ಸೀತಾದೇವಿಯನ್ನು ತನ್ನ ತೋಳಬಲದಿಂದ ಹೊಂದಿದ, ಮಂಗಳಮಯವಾದ ಪುಷ್ಪಕವಿಮಾನಕ್ಕೆ ಹತ್ತಿಸಿ, ಆಂಜನೇಯನಿಗೆ ಆಣತಿಯಿತ್ತನು. ಆಗ ಕಪಿಶ್ರೇಷ್ಠರು ಶೋಕರಹಿತಳೂ, ಒಡವೆಗಳಿಂದ ಸಿಂಗರಿಸಿದವಳೂ ಆದ ಜಾನಕೀದೇವಿಗೆರಗಿದರು. ಆಗ ಆ ಮಹಾಪರಾಕ್ರಮಿಯಾದ ಶ್ರೀರಾಮನು ತಮ್ಮನೊಡಗೂಡಿ, ಸೇತುವಿನ ನಡುವೆ ಮಹಾದೇವನನ್ನು ಪ್ರತಿಷ್ಠಾಪಿಸಿದನು.

೧೨೧. ಶಿವನಲ್ಲಿ ಶಂಭುವಿನ ಕರುಣೆಯಿಂದ ಅತಿಶಯವಾದ ಭಕ್ತಿಯನ್ನು ಹೊಂದಿದನು. ಪಿನಾಕವೆಂಬ ಬಿಲ್ಲನ್ನು ತಾಳಿದ ಮಹಾದೇವನು ರಾಮೇಶ್ವರನೆಂದು ಪ್ರಸಿದ್ಧಿಪಡೆದನು.

೧೨೨. ಆ ಶ್ರೀ ರಾಮೇಶ್ವರನು ತನ್ನ ದರ್ಶನ ಮಾತ್ರದಿಂದ ಸಕಲ ಹತ್ಯಾಪಾಪವನ್ನೂ ಕಳೆಯುತ್ತಾನೆ.' ಇಂತು ದುಷ್ಟ ಸಂಹಾರ ಕಾರ್ಯವನ್ನೆಸಗುವ ಪ್ರತಿಜ್ಞೆಯನ್ನು (ದಾಟಿದ) ನೆರವೇರಿಸಿದ, ಈ ಶ್ರೀ ರಾಮಚಂದ್ರನು ಭರತನ ವಿಷಯದಲ್ಲಿ ತೊಡಗಿದ ಮನವುಳ್ಳವನಾಗಿ ಹಿಂದಿರುಗಿ ಬಂದನು.

ತತೋಽಯೋಧ್ಯಾಂ ಪುರೀಂ ದಿವ್ಯಾಂ ಗತ್ವಾ ತಸ್ಯಾಂ ದ್ವಿಜೋತ್ತಮೈಃ ।
ಅಭಿಷಿಕ್ತೋ ವಸಿಷ್ಠಾದ್ಯೈರ್ಭರತೇನ ಪ್ರಸಾದಿತಃ ॥ ೧೨೩ ॥

ಅಕರೋದ್ಧರ್ಮತೋ ರಾಜ್ಯಂ ಚಿರಂ ರಾಮಃ ಪ್ರತಾಪವಾನ್ ।
ಯಜ್ಞಾದಿಕಂ ಕರ್ಮ ನಿಜಂ ಚ ಕೃತ್ವಾ
ಪೌರೈಸ್ತು ರಾಮೋ ದಿವಮಾರುರೋಹ ॥ ೧೨೪ ॥

ರಾಜನ್ಮಯಾ ತೇ ಕಥಿತಂ ಸಮಾಸತೋ
ರಾಮಸ್ಯ ಭೂಮ್ಯಾಂ ಚರಿತಂ ಮಹಾತ್ಮನಃ ।
ಇದಂ ಸುಭಕ್ತ್ಯಾ ಪಠತಾಂ ಚ ಶೃಣ್ವತಾಂ
ದದಾತಿ ರಾಮಃ ಸ್ವಪದಂ ಜಗತ್ಪತಿಃ ॥ ೧೨೫ ॥

---

೧೨೩. ಅನಂತರದಲ್ಲಿ ಶ್ರೀರಾಮಚಂದ್ರನು ಮನೋಹರವಾದ ಅಯೋಧ್ಯಾ ಪಟ್ಟಣಕ್ಕೆ ಹೋಗಿ, ಬ್ರಾಹ್ಮಣಶ್ರೇಷ್ಠರಾದ ವಸಿಷ್ಠರೇ ಮೊದಲಾದವರಿಂದ ಪಟ್ಟಾಭಿಷೇಕಗೊಂಡು, ಭರತನಿಂದ ಪ್ರೀತಿಸಿದವನಾದನು.

೧೨೪. ಪ್ರತಾಪಶಾಲಿಯಾದ ಶ್ರೀರಾಮಚಂದ್ರನು ಧರ್ಮದಿಂದ ಬಹು ಕಾಲ ರಾಜ್ಯವಾಳಿದನು. ಯಜ್ಞವೇ ಮೊದಲಾದ ತನ್ನ ಸತ್ಕರ್ಮಗಳನ್ನನುಷ್ಠಿಸಿ, ಅನೇಕ ಭಕ್ತರಾದ ಪೌರರಿಂದ ಕೂಡಿ, ಪರಂಧಾಮಕ್ಕೆ ಹೋದನು.

೧೨೫. ಎಲೈ ಸಹಸ್ರಾನೀಕರಾಯನೇ ! ಭೂಮಿಯಲ್ಲಿ ಮಹಾತ್ಮನಾದ ಶ್ರೀರಾಮನ ಚರಿತೆಯನ್ನು ನಿನಗೆ ಸಂಕ್ಷೇಪದಿಂದರುಹಿದೆನು. ಈ ಚರಿತೆಯನ್ನು ಬಕುತಿಯಿಂದ ಪಠಿಸುವವರಿಗೂ, ಕೇಳುವವರಿಗೂ ಜಗತ್ಪತಿಯಾದ ಶ್ರೀರಾಮನು ತನ್ನ ವೈಕುಂಠಾದಿಲೋಕಗಳನ್ನು ಈಯುವನು' ಎಂದು ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನೇ ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇತಿ ಶ್ರೀ ನರಸಿಂಹಪುರಾಣೇ ರಾಮಪ್ರಾದುರ್ಭಾವೇ ಯುದ್ಧಕಾಣ್ಡಕಥಾ ನಿರೂಪಣಂ ನಾಮ ದ್ವಿಪಂಚಾಶೋಽಧ್ಯಾಯಃ

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ರಾಮಪ್ರಾದುರ್ಭಾವದಲ್ಲಿ ಯುದ್ಧಕಾಣ್ಡ ಕಥಾನಿರೂಪಣವೆಂಬ ಐವತ್ತೆರಡನೆಯ ಅಧ್ಯಾಯವು ಮುಗಿದುದು.

ಐವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ' ಮಾರ್ಕಂಡೇಯಮುನಿಯು ಸಹಸ್ರಾನೀಕರಾಜನಿಗೆ ಶ್ರೀ ರಾಮಾವತಾರ ಚರಿತೆಯನ್ನು ನಿರೂಪಿಸುತ್ತಾ, ಆಂಜನೇಯನು ಶ್ರೀರಾಮನಿಗೆ ಚೂಡಾಮಣಿಯನ್ನಿತ್ತು, ದೇವಿಯು ಹೇಳಿದ ಸಂದೇಶವನ್ನರುಹಿದ ಮೇಲೆ ಕಪಿ ಸೇನೆಯೊಡಗೂಡಿ, ಸಮುದ್ರದ ತಡಿಗೆ ಹೋಗಿ, ಸಮುದ್ರನು ದಾರಿದೆಗೆಯದಿರಲು, ಧನುಸ್ಸಿನಲ್ಲಿ ಬಾಣಸಂಧಾನ ಮಾಡುವ ಹೊತ್ತಿಗೆ, ಸಮುದ್ರರಾಜನು ಕಪ್ಪ ಕಾಣಿಕೆ ಗಳೊಡನೆ ಕಾಣಿಸಿಕೊಂಡು, ಅಚ್ಯುತನಾದ ಶ್ರೀರಾಮಂಗೆರಗಿ, ನಲನಿಂದ ಸೇತುವೆ ಯನ್ನು ಕಟ್ಟಿಸುವಂತೆ ಹೇಳಲು, ಅಂತೆಯೇ ಶ್ರೀ ರಾಮನು ಸೇತುವೆಯನ್ನು ಕಟ್ಟಿಸಿದನು.

ಇದಕ್ಕೆ ಮುಂಚೆಯೇ ವಿಭೀಷಣನೂ ನೀತಿಬಾಹಿರನಾದ ಅಣ್ಣನನ್ನುಳಿದು ಬಂದು, ಶ್ರೀರಾಮನಿಗೆ ಶರಣಾಗತನಾಗಲು, ರಾಮನು ಅವನಿಗೆ ಲಂಕಾಧಿಪತ್ಯ ವನ್ನು ಕೊಡುವುದಾಗಿ ಹೇಳಿದನು. ತರುವಾಯ ವಿಭೀಷಣ, ಸುಗ್ರೀವ, ಲಕ್ಷ್ಮಣ ರೊಡಗೂಡಿ, ಸಕಲ ಕಪಿಸೈನ್ಯ ಸಮೇತನಾಗಿ, ಶ್ರೀರಾಮನು ಸೇತುವೆಯ ಮೂಲಕ ಸಮುದ್ರವನ್ನು ದಾಟಿ, ಸುವೇಲವೆಂಬ ಪರ್ವತಕ್ಕೆ ಬಂದು ಸೇರಿದನು.

ಆಗ ಶ್ರೀ ರಾಮದೂತನು ಲಂಕೆಗೆ ಹೋಗಿ, ರಾವಣನ ತಲೆಯ ಮೇಲೆ ಪಾದಪ್ರಹಾರವನ್ನು ಮಾಡಿ, ಹಿಂದಿರುಗಿ ಬಂದನು. ತರುವಾಯ ಕಪಿಸೈನ್ಯದಿಂದ ಲಂಕೆಯನ್ನು ಶ್ರೀ ರಾಮನು ಮುತ್ತಿದನು. ಆಗ ಅಂಗದನ ಸ್ವಾಮಿಭಕ್ತಿಯನ್ನು ಪರೀಕ್ಷಿಸಿ, ರಾವಣನಲ್ಲಿ ಸಂಧಾನಕ್ಕಾಗಿ ಅಂಗದನನ್ನು ಕಳುಹಿಸಲು, ರಾವಣನು ಒಪ್ಪದೆ, ತನ್ನ ಮಕ್ಕಳಾದ ಧೂಮ್ರಾಕ್ಷನೇ ಮೊದಲಾದವರಿಗೆ ಲಂಕೆಯನ್ನು ರಕ್ಷಿಸುವಂತೆ ಆಜ್ಞಾಪಿಸಿ, ಮಾನವರಾದ ರಾಮ ಲಕ್ಷ್ಮಣರನ್ನು ಕಟ್ಟಿ ತರುವಂತೆ ನಿಯಮಿಸಿದನು. ತರುವಾಯ ಅನೇಕ ಕೋಟಿ ಸಂಖ್ಯಾಕರಾದ ರಕ್ಕಸರು ಪೂರ್ವ ದ್ವಾರದಲ್ಲಿ ಕಪಿಸೈನ್ಯದೊಡನೆ ಹೋರಾಡಿ ಮಡಿದರು. ಅದೇ ತೆರನಾಗಿ ಉತ್ತರ,

ಪಶ್ಚಿಮ, ದಕ್ಷಿಣ ದಿಗ್ಭಾಗಗಳಲ್ಲಿ ಯುದ್ಧವಾಗಿ ರಕ್ಕಸರಿಗೇ ಸೋಲಾಯಿತು. ಬಳಿಕ ಪತಿಗಳಾದ ರಕ್ಕಸಯೋಧರಳಿವಿನಿಂದ ಸ್ತ್ರೀಯರಳುತ್ತಿರಲು, ಅವರ ಸೋಲನ್ನರಿತ ರಾವಣನು, ಅನೇಕ ಸೈನ್ಯಪರಿವೃತನಾಗಿ, ಪಶ್ಚಿಮದ್ವಾರದಲ್ಲಿ ಹೋಗಿ, 'ರಾಮನೆಲ್ಲಿ' ಎಂದು ಅಬ್ಬರಿಸುತ್ತಾ, ಧನುಃಪಾಣಿಯಾಗಿ, ಬಾಣಗಳ ಮಳೆಯನ್ನು ಕರೆದನು. ಆಗ ರಾವಣನ ಬಾಣದ ಏಟನ್ನು ತಡೆಯಲಾರದೆ ಕಪಿಗಳು ಹಿಂದಕ್ಕೆ ಓಡಲು, ರಾವಣನು ಯುದ್ಧಕ್ಕೆ ಬಂದುದನ್ನದರಿಂಪರಿತು, ಶ್ರೀರಾಮನು ಧನುಸ್ಸನ್ನು ಹಿಡಿದು, ರಾವಣನೊಡನೆ ಯುದ್ಧಮಾಡಿದನು. ಸುಗ್ರೀವಾದಿಗಳು ರಾವಣನ ಸೇನೆಯೊಡನೆ ಹೋರಾಡಿದರು. ಆ ಯುದ್ಧದಲ್ಲಿ ರಾವಣನು ತನ್ನ ವಾಹನ, ಸಾರಥ್ಯಾದಿಗಳನ್ನು ಕಳೆದುಕೊಂಡು, ಪರಾಜಿತನಾಗಲು, ಮಂತ್ರಿಗಳು ಮೂರ್ಛೆಗೆ ಸಂದ ಅವನನ್ನು ಹಿಂದಕ್ಕೆ ಪುರಕ್ಕೆ ಒಯ್ದರು.

ಇಂತು ರಾಮರಾವಣರ ಯುದ್ಧವು ಭಯಂಕರವಾಯಿತು. ಬಳಿಕ ತೂರ್ಯಾದಿಗಳಿಂದ ಎಚ್ಚರಗೊಳಿಸಿದ ಕುಂಭಕರ್ಣನು ಪ್ರಾಕಾರನನ್ನು ದಾಟಿಕೊಂಡು, ಯುದ್ಧರಂಗಕ್ಕೆ ಬಂದನು. ತರುವಾಯ ಶ್ರೀ ರಾಮನು ಭಯಂಕರವಾಗಿ ಯುದ್ಧಮಾಡುತ್ತಾ ಬಂದ ಅವನ ಕುತ್ತಿಗೆಯನ್ನು ಕತ್ತರಿಸಿದನು; ಇಂದ್ರಜಿತುವನ್ನು ಸೋಲಿಸಿದನು. ಮತ್ತೂ ರಾವಣನು ಮಕ್ಕಳೊಡನೆ ಯುದ್ಧಕ್ಕೆ ಬಂದನು. ತರುವಾಯ ಅನೇಕ ಲಕ್ಷ ರಕ್ಕಸರನ್ನು ಶ್ರೀರಾಮನು ಸಂಹರಿಸಿದನು. ಆ ರಾತ್ರಿಯಲ್ಲಿ ಇಂದ್ರಜಿತ್ತು ವಿಶೇಷವಾಗಿ ಬಾಣಗಳಿಂದ ಹೊಡೆದು, ಕಪಿಗಳನ್ನು ಮೂರ್ಛೆಗೊಳಿಸಿದನು.

ಆಗ ಹನುಮಂತನು ಜಾಂಬವಂತನಿಂದ ಪ್ರೇರಿತನಾಗಿ, ಸಂಜೀವಿನೀಪರ್ವತದ ಔಷಧಿಗಳನ್ನು ತಂದು, ಎಲ್ಲರನ್ನೂ ಪುನರುಜ್ಜೀವಿಸುವಂತೆಸಗಿದನು ತರುವಾಯ ರಾವಣನು ಕ್ರುದ್ಧನಾಗಿ ಯುದ್ಧಕ್ಕೆ ಬಂದನು. ಶ್ರೀರಾಮನು ಸಹೋದರರೊಡಗೂಡಿದ ಮೇಘನಾದನನ್ನು ಸಂಹರಿಸಿದನು. ರಾವಣನಿಗೂ ಲಕ್ಷ್ಮಣನಿಗೂ ಭಯಂಕರವಾದ ಯುದ್ಧವು ಜರುಗಿತು. ಆಗ ರಾವಣನು ಶಕ್ತ್ಯಾಯುಧದಿಂದ ಲಕ್ಷ್ಮಣನ

ಎದೆಗೆ ಹೊಡೆದನು. ಆದರಿಂದ ಮೂರ್ಛೆಗೆ ಸಂದ, ಲಕ್ಷ್ಮಣನನ್ನು ಬದುಕಿಸಲು, ಶ್ರೀ ರಾಮಾಜ್ಞೆಯಿಂದ ಆಂಜನೇಯನು ದ್ರೋಣಗಿರಿಯನ್ನು ತಂದು, ಅವನನ್ನು ವಿಶಲ್ಯನನ್ನಾಗಿ ಮಾಡಿ ಬದುಕಿಸಿದನು.

ಬಳಿಕ ಶ್ರೀರಾಮನು ಅತ್ಯಂತ ಕ್ರುದ್ಧನಾಗಿ ಹೋರಾಡುತ್ತಾ, ಅಗಸ್ತ್ಯ ಮುನಿಗಳಿತ್ತ ಆದಿತ್ಯಹೃದಯವನ್ನು ಜಪಿಸಿ, ಅವರು ಕೊಟ್ಟ ವೈಷ್ಣವ ಧನುಸ್ಸನ್ನು ಸಿದ್ಧಗೊಳಿಸಿ, ಪ್ರತಾಪದಿಂದ ತೀಕ್ಷ್ಣಗಳಾದ ಬಾಣಗಳಿಂದ ಹೊಡೆದು, ಬ್ರಹ್ಮನು ಕೊಟ್ಟ ವರದಿಂದ ದೃಪ್ತನಾದ ರಾವಣನನ್ನು ಬ್ರಹ್ಮಾಸ್ತ್ರದಿಂದ ಸಂಹರಿಸಿದನು.

ಆಗ ಈ ದುಷ್ಟನ ನಿಧನದಿಂದ ತುಷ್ಟರಾದ ಇಂದ್ರಾದಿದೇವತೆಗಳು ಬಂದು ಶ್ರೀರಾಮನನ್ನು ಪುಷ್ಪವೃಷ್ಟಿ ಮೊದಲಾದುವುಗಳಿಂದ ಪೂಜಿಸಿದರು. ದೇವತಾಸ್ತ್ರೀಯರೂ ಶ್ರೀ ರಾಮನನ್ನು ಹೂಮಳೆಗಳಿಂದ ಸೇವಿಸಿದರು. ಆಗ ಚತುರ್ಮುಖನು ಬಂದು, ಶ್ರೀ ರಾಮನನ್ನು ಸ್ತುತಿಸಿದನು.

ದಶರಥನೂ ಅಲ್ಲಿಗೆ ಬಂದಿರಲು, ಶಂಕರನು ಅವನನ್ನು ಶ್ರೀರಾಮನಿಗೆ ಕಾಣಿಸಿ, ಸೀತಾದೇವಿಯು ಪರಮಶುದ್ಧಳಾಗಿರುವಳೆಂಬುದನ್ನು ಹೇಳಿ, ತರುವಾಯ ಶ್ರೀ ರಾಮನು ಅಂತು ವಿಶೋಕಳೂ, ಶುದ್ಧಳೂ ಆದ, ಸಕಲ ವಾನರರಿಂದಲೂ ವಂದಿತಳಾದ, ದೇವಿಯನ್ನು ದಿವ್ಯಪುಷ್ಪಕವಿಮಾನದಲ್ಲಿ ಕೂಡಿಸಿಕೊಂಡು, ಬಂದು, ಸೇತುಮಧ್ಯದಲ್ಲಿ ಮಹಾದೇವನನ್ನು ಪ್ರತಿಷ್ಠಿಸಿದನು. ಈ ರಾಮೇಶ್ವರ ದರ್ಶನದಿಂದ ಬ್ರಹ್ಮಹತ್ಯಾದಿ ಮಹಾಪಾತಕಗಳೂ ಅಳಿಯುವುವು.

ಬಳಿಕ ತನ್ನ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿದ ಶ್ರೀರಾಮನು ಭರತನನ್ನು ಕಾಣಬೇಕೆಂದು, ತೀವ್ರವಾಗಿ ಚಿತ್ರಕೂಟಕ್ಕೆ ಬಂದು ಅವನನ್ನು ಕಂಡು, ತರುವಾಯ ಅಯೋಧ್ಯೆಗೆ ಬಂದು, ಅಲ್ಲಿ ವಸಿಷ್ಠಾದಿಗಳಿಂದ ಶುಭದಿವಸದಲ್ಲಿ ಪಟ್ಟಾಭಿಷಿಕ್ತನಾಗಿ, ಧರ್ಮದಿಂದ ಬಹುಕಾಲ ರಾಜ್ಯವಾಳಿ, ಯಜ್ಞಾದಿಗಳನ್ನು ಬೇಳ್ದು, ಮುಮುಕ್ಷುಗಳಾದ ಅನೇಕ ಪೌರರೊಡನೆ ದಿವವನ್ನಡರಿದನು.

ಈ ಶ್ರೀ ರಾಮನ ದಿವ್ಯಚರಿತ್ರೆಯನ್ನು ಕೇಳುವವರಿಗೂ, ಪಠಿಸುವವರಿಗೂ ಶ್ರೀ ರಾಮನು ಉತ್ತಮವಾದ ತನ್ನ ಲೋಕವನ್ನೇ ಅನುಗ್ರಹಿಸುವನು;' ಎಂದು ನಿರೂಪಿಸಿದುದನ್ನು ಶ್ರೀ ಸೂತರು ಭರದ್ವಾಜಾದಿಗಳಿಗೆ ಹೇಳಿರುತ್ತಾರೆ.

ಇಂತು ಐವತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ತ್ರಯಃಪಂಚಾಶೋಽಧ್ಯಾಯಃ

ಅಥ ಶ್ರೀ ರಾಮಕೃಷ್ಣಾವತಾರಕಥಾ ನಿರೂಪಣಮ್.

॥ ಮಾರ್ಕಂಡೇಯ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಪ್ರಾದುರ್ಭಾವದ್ವಯಂ ಶುಭಮ್ ।
ತೃತೀಯಸ್ಯ ತು ರಾಮಸ್ಯ ಕೃಷ್ಣಸ್ಯ ತು ಸಮಾಸತಃ ॥ ೧ ॥

ಐವತ್ತುಮೂರನೆಯ ಅಧ್ಯಾಯವು.

ಇನ್ನು ಶ್ರೀ ರಾಮ ಕೃಷ್ಣಾವತಾರ ಕಥಾನಿರೂಪಣವು.

ಶ್ರೀ ಮಾರ್ಕಂಡೇಯಮುನಿಯು ಸಹಸ್ರಾನೀಕರಾಜನಿಗೆ ಇಂತು ಹೇಳುತ್ತಾನೆ:—

೧. "ಎಲೈ ರಾಜನೇ! ಕೇಳು; ಇನ್ನು ಮುಂದೆ ಮೂರನೆಯ ರಾಮ (ಬಲರಾಮ) ಮತ್ತು ಕೃಷ್ಣ—ಇವೆರಡು ಮಂಗಳಗಳಾದ ಅವತಾರಗಳನ್ನು ಸಂಗ್ರಹವಾಗಿ ನಿರೂಪಿಸುವೆನು.

ಪುರಾಹ್ಯಸುರಭಾರಾರ್ತಾ ಮಹೀ ಪ್ರಾಹ ನೃಪೋತ್ತಮ ।
ಆಸೀನಂ ದೇವಮಧ್ಯೇ ತು ಬ್ರಹ್ಮಾಣಂ ಕಮಲಾಸನಮ್ ॥ ೨ ॥

ದೇವಾಸುರೇ ಮೃತಾ ಯೇ ತು ವಿಷ್ಣುನಾ ದೈತ್ಯದಾನವಾಃ ।
ತೇ ಸರ್ವೇ ಕ್ಷತ್ರಿಯಾ ಜಾತಾಃ ಕಂಸಾದ್ಯಾಃ ಕಮಲೋದ್ಭವ ॥ ೩ ॥

ತದ್ಭೂರಿಭಾರಸಂಪ್ರಾಪ್ತಾ ಸೀದಂತೀ ಚತುರಾನನ ।
ಮಮ ತದ್ಭಾರಹಾನಿಃ ಸ್ಯಾದ್ಯಥಾ ದೇವ ತಥಾ ಕುರು ॥ ೪ ॥

ತಯೈವಮುಕ್ತೋ ಬ್ರಹ್ಮಾಥ ದೇವೈಸ್ಸಹ ಜಗಾಮ ಹ ।
ಕ್ಷೀರೋದಸ್ಯೋತ್ತರಂ ಕೂಲಂ ವಿಷ್ಣುಭಕ್ತಿವಿಬೋಧಿತಮ್ ॥ ೫ ॥

---

೨. ಎಲೈ ರಾಜಶ್ರೇಷ್ಠನೇ! ಪೂರ್ವದಲ್ಲಿ ರಕ್ಕಸರ ಹೊರೆಯಿಂದ ಪೀಡಿತಳಾದ ಭೂದೇವಿಯು ದೇವತೆಗಳ ನಡುವೆ ಕುಳಿತಿದ್ದ ಕಮಲಾಸನನಾದ ಚತುರ್ಮುಖ ಬ್ರಹ್ಮನಿಗೆ ಇಂತು ಬಿನ್ನವಿಸಿದಳು.

೩. "ಎಲೈ ಕಮಲದಲ್ಲಿ ಹುಟ್ಟಿದ ಬ್ರಹ್ಮನೇ! ದೇವಾಸುರ ಯುದ್ಧದಲ್ಲಿ ಶ್ರೀಮಹಾವಿಷ್ಣುವಿನಿಂದ ಯಾವ ದೈತ್ಯರು ಮತ್ತು ದಾನವರು ಸಂಹರಿಸಲ್ಪಟ್ಟರೋ, ಅವರೆಲ್ಲರೂ ಕಂಸನೇ ಮೊದಲಾದ ಕ್ಷತ್ರಿಯರಾಗಿ ಹುಟ್ಟಿರುತ್ತಾರೆ.

೪-೫. ಎಲೈ ಚತುರ್ಮುಖನೇ! ಅವರ ಹೆಚ್ಚಾದ ಹೊರೆಯನ್ನು ಹೊಂದಿ, ಶಕ್ತಿಗುಂದಿರುವೆನು. ಎಲೈ ಸ್ವಾಮಿಯೇ! ನನಗೆ ಆ ಭಾರವು ಹೇಗೆ ಕಡಿಮೆಯಾಗುವುದೋ, ಹಾಗೆ ದಯಮಾಡಿ ನೆರವೇರಿಸು;' ಎಂದು ಭೂದೇವಿಯಿಂದ ಬಿನ್ನವಿಸಲ್ಪಟ್ಟ ಚತುರ್ಮುಖನು ಶ್ರೀ ಮಹಾವಿಷ್ಣುವಿನ ಭಕ್ತಿಯನ್ನು ಎಚ್ಚರಗೊಳಿಸುವ ಪಾಲ್ಗಡಲ ಬಡಗಣ ತಡಿಗೆ ದೇವತೆಗಳೊಡಗೂಡಿ ಹೋದನು.

ತತ್ರ ಗತ್ವಾ ಜಗತ್ಸ್ರಷ್ಟಾ ದೇವೈಃ ಸಾರ್ಧಂ ಜನಾರ್ದನಮ್ ।
ನರಸಿಂಹಂ ಮಹಾದೇವಂ ಗಂಧಪುಷ್ಪಾದಿಭಿಃ ಕ್ರಮಾತ್ ॥ ೬ ॥

ಅಭ್ಯರ್ಚ್ಯ ಭಕ್ತ್ಯಾ ಗೋವಿಂದಂ ವಾಕ್ಪುಷ್ಪೇಣ ಚ ಕೇಶವಮ್ ।
ಪೂಜಯಾಮಾಸ ರಾಜೇಂದ್ರ ತೇನ ತುಷ್ಟೋ ಜಗತ್ಪತಿಃ ॥ ೭ ॥

॥ ರಾಜೋವಾಚ ॥

ವಾಕ್ಪುಷ್ಪೇಣ ಕಥಂ ಬ್ರಹ್ಮಾ ಬ್ರಹ್ಮಾಸ್ಯರ್ಚಿತವಾನ್ ಹರಿಮ್ ।
ತನ್ಮೇ ಕಥಯ ವಿಪ್ರೇಂದ್ರ ಬ್ರಹ್ಮೋಕ್ತಂ ಸ್ತೋತ್ರಮುತ್ತಮಮ್ ॥ ೮ ॥

೬–೭. ಅಲ್ಲಿಗೆ ಜಗತ್ಸ್ರಷ್ಟ್ರುವಾದ ಚತುರ್ಮುಖನು ದೇವತೆಗಳೊಡಗೂಡಿ ಹೋಗಿ, ದುಷ್ಟಜನ ಸಂಹಾರಕನೂ, ನರಸಿಂಹರೂಪನೂ ಆದ, ಹೆದ್ದೈವನಾದ ಶ್ರೀ ಮನ್ನಾರಾಯಣನನ್ನು ಕ್ರಮದಿಂದ ಗಂಧಪುಷ್ಪಾದಿಗಳಿಂದ ಭಕ್ತಿಯಿಂದ ಪೂಜಿಸಿ, ಸಕಲ ವೇದ ಪ್ರತಿಪಾದ್ಯನಾದ, ಬಹ್ಮರುದ್ರ ಪ್ರವರ್ತಕನಾದ ಶ್ರೀಮಹಾ ವಿಷ್ಣುವನ್ನು (ವಾಕ್ಪುಷ್ಪ) ನುಡಿ ಹೂಗಳಿಂದ ಪೂಜಿಸಿದನು. (ಸ್ತುತಿಸಿದನು.) ಎಲೈ ರಾಜೇಂದ್ರನೇ ! ಸಕಲ ಚರಾಚರಜಗತ್ತಿಗೆ ಒಡೆಯನಾದ ಶ್ರೀ ಹರಿಯು ಅದರಿಂದ ಸಂತಸಗೊಂಡನು.

ಸಹಸ್ರಾನೀಕರಾಜನು ಹೇಳುತ್ತಾನೆ.

೮–೯. " ಎಲೈ ಬ್ರಹ್ಮಜ್ಞಾನಿಯಾದ ಬ್ರಾಹ್ಮಣಶ್ರೇಷ್ಠನೇ ! ಚತುರ್ಮುಖ ಬ್ರಹ್ಮನು ನುಡಿಹೂಗಳಿಂದ ಶ್ರೀಹರಿಯನ್ನು ಎಂತು ಪೂಜಿಸಿದನು ? ಆ ಬ್ರಹ್ಮನು ಹೇಳಿದ ಉತ್ತಮವಾದ ಸ್ತೋತ್ರವನ್ನು ನನಗೆ ದಯಮಾಡಿ ಹೇಳು ;"

॥ ಮಾರ್ಕಂಡೇಯ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ಸ್ತೋತ್ರಂ ಬ್ರಹ್ಮಮುಖೇರಿತಮ್ ।
ಸರ್ವಪಾಪಹರಂ ಪುಣ್ಯಂ ವಿಷ್ಣುತುಷ್ಟಿಕರಂ ಪರಮ್ ॥ ೯ ॥

ತಮಾರಾಧ್ಯ ಜಗನ್ನಾಥಂ ಊರ್ಧ್ವಬಾಹುಂ ಪಿತಾಮಹಃ ।
ಭೂತ್ವೈಕಾಗ್ರಮನಾ ರಾಜನ್ನಿದಂ ಸ್ತೋತ್ರಮುದೀರಯನ್ ॥ ೧೦ ॥

॥ ಬ್ರಹ್ಮೋವಾಚ ॥

ನಮಾಮಿ ದೇವಂ ನರನಾಥ ಮಚ್ಯುತಂ
ನಾರಾಯಣಂ ಲೋಕಗುರುಂ ಸನಾತನಮ್ ।

ಎಂದು ರಾಯನು ಕೇಳಲು, ಮಾರ್ಕಂಡೇಯಮುನಿಯು ಹೇಳುತ್ತಾನೆ.

" ಎಲೈ ರಾಯನೇ ! ಸಕಲ ಪಾಪಗಳನ್ನೂ ಕಳೆಯುವ ಪುಣ್ಯಸಂಪಾದಕವಾದ, ಶ್ರೀಮಹಾವಿಷ್ಣುವಿಗೆ ಅತ್ಯಂತ ಸಂತಸವನ್ನೆಸಗುವ, ಚತುರ್ಮುಖಬ್ರಹ್ಮನ ಮುಖದಿಂದ ಉಚ್ಚರಿಸಿದ ಸ್ತೋತ್ರವನ್ನು ಹೇಳುವೆನು.

೧೦. ಪಿತಾಮಹನಾದ ಬ್ರಹ್ಮನು ಮೇಲಕ್ಕೆತ್ತಿರುವ ತೋಳ್ಗಳುಳ್ಳವನಾಗಿ ಆ ಜಗಮೊಡೆಯನನ್ನು ಪೂಜಿಸಿ, ಒಂದೇ ಮೊನೆಯಾದ ಮನವುಳ್ಳವನಾಗಿ, ಎಲೈ ರಾಯನೇ ! ಈ ಸ್ತೋತ್ರವನ್ನು ಹೇಳಿದನು.

ಬ್ರಹ್ಮನು ಹೇಳುತ್ತಾನೆ :—

೧೧. " ಕ್ರೀಡಾದಿಗುಣವಿಶಿಷ್ಟನಾದುದರಿಂದ ದೇವನೂ, ಜನರೊಡೆಯನೂ, ನಾಶರಹಿತನಾದುದರಿಂದ ಅಚ್ಯುತನೂ, ಉತ್ಪತ್ತಿರಹಿತನೂ, ಸಂಪೂರ್ಣವಾಗಿ ಯಾರಿಗೂ ಗೋಚರಿಸದುದರಿಂದ ಅವ್ಯಕ್ತನೂ, ಲೋಕಕ್ಕೆ ಆದಿ ಗುರುವೂ, ಯಾವಾಗಲೂ ಏಕರೂಪವಾಗಿರುವವನೂ, ಸಾಕಲ್ಯವಾಗಿ ಯಾರಿಂದಲೂ ಚಿಂತಿಸಲಾಗದವನೂ, ದೇಹಕ್ಷಯಾದಿರಹಿತನೂ, ವೇದಾಂತಗಳಾದ ಉಪನಿಷತ್ತುಗಳಿಂದ

ಅನಾದಿಮವ್ಯಕ್ತಮಚಿಂತ್ಯಮವ್ಯಯಂ
ವೇದಾಂತವೇದ್ಯಂ ಪುರುಷೋತ್ತಮಂ ಹರಿಮ್ ॥ ೧೧ ॥

ಆನಂದರೂಪಂ ಪರಮಂ ಪರಾತ್ಪರಂ
ಚಿದಾತ್ಮಕಂ ಜ್ಞಾನವತಾಂ ಪರಾಂ ಗತಿಮ್ ।
ಸರ್ವಾತ್ಮಕಂ ಸರ್ವಗತೈಕರೂಪಂ
ಧ್ಯೇಯಸ್ವರೂಪಂ ಪ್ರಣಮಾಮಿ ಮಾಧವಮ್ ॥ ೧೨ ॥

ಭಕ್ತಪ್ರಿಯಂ ಕಾಂತಮತೀವ ನಿರ್ಮಲಂ
ಸುರಾಧಿಪಂ ಸೂರಿಜನೈರಭಿಷ್ಟುತಮ್ ।
ಚತುರ್ಭುಜಂ ನೀರಜವರ್ಣಮೀಶ್ವರಂ
ರಥಾಂಗಪಾಣಿಂ ಪ್ರಣತೋಽಸ್ಮಿ ಕೇಶವಮ್ ॥ ೧೩ ॥

ತಿಳಿಯತಕ್ಕ ಸ್ವರೂಪನೂ, ಕ್ಷರಾಕ್ಷರಪುರುಷರುಗಳಿಂದ ಶ್ರೇಷ್ಠನಾದುದರಿಂದ ಪುರುಷೋತ್ತಮನೂ, ಭಜಕರ ಪಾಪಗಳನ್ನು ನಾಶಮಾಡುವವನಾದುದರಿಂದ ಶ್ರೀಹರಿಯೂ, ಅಪ್ರಾಕೃತಾನಂತ ಕಲ್ಯಾಣಗುಣಪರಿಪೂರ್ಣನೂ, ಆದ ಶ್ರೀಮನ್ನಾರಾಯಣನಿಗೆ ನಮಸ್ಕರಿಸುತ್ತೇನೆ.

೧೨. ಪೂರ್ಣಾನಂದಸ್ವರೂಪನೂ, ಸರ್ವೋತ್ತಮನೂ, ಸರ್ವೋತ್ತಮಳಾದ ರಮಾದೇವಿಗಿಂತಲೂ ಶ್ರೇಷ್ಠನೂ, ಪೂರ್ಣಜ್ಞಾನಸ್ವರೂಪನೂ, ಜ್ಞಾನಿಗಳಿಂದ ಪರಮ ಪ್ರಾಪ್ಯನೂ, ಸರ್ವವಸ್ತುಗಳ, ಸರ್ವಚೇತನರ–ನಿಯಾಮಕನೂ, ಅಂತರ್ಯಾಮಿಯೂ, ಎಲ್ಲ ವಸ್ತುಗಳಲ್ಲಿರುವ ಒಂದೇ ರೂಪನೂ, ತನ್ನಿಂದ ಧ್ಯಾನ ಮಾಡುವ ಸ್ವರೂಪನೂ ಆದ, ಲಕ್ಷ್ಮೀರಮಣನಾದ ಶ್ರೀಹರಿಗೆ ನಮಸ್ಕರಿಸುತ್ತೇನೆ. (ಪ್ರಣಾಮವನ್ನು ಮಾಡುತ್ತೇನೆ.)

೧೩. ಭಕ್ತರಲ್ಲಿ ಪ್ರೀತಿಮಾಡುವವನೂ, ಸುಂದರನೂ, ಸ್ವಲ್ಪವೂ ದೋಷ ಸಂಪರ್ಕವಿಲ್ಲದವನಾದುದರಿಂದ ಅತ್ಯಂತ ಪರಿಶುದ್ಧನೂ, ದೇವತೆಗಳಿಗೆ ಒಡೆಯನೂ, ಜ್ಞಾನಿಜನಗಳಿಂದ ಕೊಂಡಾಡಲ್ಪಡುವವನೂ, ನಾಲ್ಕು ತೋಳುಗಳುಳ್ಳವನೂ, ಕನ್ನೈದಿಲೆಯ ಬಣ್ಣವುಳ್ಳವನೂ, ಸರ್ವನಿಯಾಮಕನೂ, ಸರ್ವೋತ್ತಮನೂ ಆದ ಈಶ್ವರನೂ, ಸುದರ್ಶನವೆಂಬ ಚಕ್ರವನ್ನು ಕೈಯಲ್ಲಿ ಹಿಡಿದಿರುವವನೂ, ಆದ ಕೇಶವನಿಗೆರಗಿದವನಾಗಿದ್ದೇನೆ.

ಗದಾಸಿಶಂಖಾಬ್ಜಕರಂ ಶ್ರಿಯಃ ಪತಿಂ
ಸದಾಶಿವಂ ಶಾರ್ಙ್ಗಧರಂ ರವಿಪ್ರಭಮ್ ।
ಪೀತಾಂಬರಂ ಹಾರವಿರಾಜಿತೋದರಂ
ನಮಾಮಿ ವಿಷ್ಣುಂ ಸತತಂ ಕಿರೀಟಿನಮ್ ॥ ೧೪ ॥

ಗಂಡಸ್ಥಲಾಸಕ್ತ ಸುರಕ್ತ ಕುಂಡಲಂ
ಸುದೀಪಿತಾಶೇಷದಿವಂ ನಿಜತ್ವಿಷಾ ।
ಗಂಧರ್ವಸಿದ್ಧೈರುಪಗೀತಸುಧ್ವನಿಂ
ಜನಾರ್ದನಂ ಭೂತಪತಿಂ ನಮಾಮಿ ತಮ್ ॥ ೧೫ ॥

ಹತ್ವಾಸುರಾನ್ ಯಾತಿ ಯುಗೇ ಯುಗೇ ಸುರಾನ್
ಸ್ವಧರ್ಮಸಂಸ್ಥಾನ್ ಭುವಿ ಸಂಸ್ಥಿತೋ ಹರಿಃ ।

---

೧೪. ಕೈಗಳಲ್ಲಿ ಶಂಖ, ಗದ ಮತ್ತು ಕಮಲಗಳನ್ನು ಧರಿಸಿರುವವನಾದ, ಲಕ್ಷ್ಮೀಪತಿಯಾದ, ಯಾವಾಗಲೂ ಮಂಗಳಸ್ವರೂಪನಾದ, ಶಾರ್ಙ್ಗವೆಂಬ ಬಿಲ್ಲನ್ನು ತಾಳಿರುವ, ಸೂರ್ಯನಂತೆ ತೇಜಸ್ಸುಳ್ಳ, ಪೀತಾಂಬರವನ್ನುಟ್ಟುಕೊಂಡಿರುವ, ವಸ ಮಾಲದಿಂದ ಹೊಳೆಯುವ ಹೊಟ್ಟೆಯ, ಮಕುಟವನ್ನು ಹಾಕಿಕೊಂಡಿರುವ, ಸರ್ವತ್ರ ವ್ಯಾಪ್ತನಾದ ಶ್ರೀ ಮಹಾವಿಷ್ಣುವಿಗೆ ಯಾವಾಗಲೂ ಪೊಡಮಡುತ್ತೇನೆ.

೧೫. ಕಗಪುಗಳಲ್ಲಿ ಸಂಬಂಧಿಸಿದ ಪ್ರಕಾಶವುಳ್ಳ ಕೆಂಪಿನ ಕರ್ಣಾಭರಣದ, ತನ್ನ ವೈಯ್ಯೊಗರಿಂದ ಬೆಳಗಿದ, ಪೂರ್ಣವಾದ ದ್ಯುಲೋಕವುಳ್ಳ, ಗಂಧರ್ವ ಸಿದ್ಧರುಗಳಿಂದ ಹತ್ತಿರದಲ್ಲಿ ಹಾಡಿದ ಇಂಚರದ, ಸಮಸ್ತ ಚೇತನರಿಗೆ ಒಡೆಯನಾದ ಆ ಜನಾರ್ದನನಿಗೆರಗುತ್ತೇನೆ.

೧೬. ಯಾವ ಶ್ರೀಹರಿಯು ಪ್ರತಿಯೊಂದು ಯುಗದಲ್ಲಿ ಬುವಿಯಲ್ಲಿ ಅವತಾರವನ್ನು ಮಾಡಿದವನಾಗಿ, ದುಷ್ಟರಕ್ಕಸರನ್ನು ಕೊಂದು, ಸ್ವಧರ್ಮನಿರತರಾದ ದೇವತೆಗಳನ್ನು ರಕ್ಷಿಸಿ, ಮೂಲರೂಪದೊಡನೆ ಸೇರಿಸಿಕೊಳ್ಳುತ್ತಾನೆಯೋ, ಯಾವನು

ಯಃ ಸೃಷ್ಟಿಕರ್ತಾ ಜಗತಃ ಕ್ಷಯಶ್ಚ
ತಂ ವಾಸುದೇವಂ ಪ್ರಣತೋಽಸ್ಮಿ ಕೇಶವಮ್ ॥ ೧೬ ॥

ಯೋ ಮತ್ಸ್ಯರೂಪೇಣ ರಸಾತಲಸ್ಥಿತಾನ್
ವೇದಾನ್ ಸಮಾಹೃತ್ಯ ಮಮ ಪ್ರದತ್ತವಾನ್ ।
ನಿಹತ್ಯ ಯುದ್ಧೇ ಮಧು ಕೈಟಭಾವುಭೌ
ತಂ ವೇದವೇದ್ಯಂ ಪ್ರಣತೋಽಸ್ಮ್ಯಹಂ ಸದಾ ॥ ೧೭ ॥

ದೇವಾಸುರೈಃ ಕ್ಷೀರಸಮುದ್ರಮಧ್ಯತೋ
ನ್ಯಸ್ತೋ ಗಿರಿರ್ಯೇನ ಧೃತಃ ಪುರಾ ಮಹಾನ್ ।
ಹಿತಾಯ ಕೌರ್ಮಂ ಪುನರಾಸ್ಥಿತೋ ಯ-
ಸ್ತಂ ವಿಷ್ಣುಮಾದ್ಯಂ ಪ್ರಣತೋಽಸ್ಮಿ ಭಾಸ್ಕರಮ್ ॥ ೧೮ ॥

ಜಗತ್ತಿನ ಸೃಷ್ಟಿಕರ್ತೃವೋ, ಲಯವನ್ನೂ ಎಸಗುವವನೋ, ಆ ಸರ್ವವಸ್ತುಗಳಲ್ಲಿ ನಿಯಾಮಕರೂಪದಿಂದಿರುವ, ವಾಸುದೇವನಾದ ಕೇಶವನಿಗೆ ಪೊಡಮಟ್ಟವನಾಗಿ ರುತ್ತೇನೆ.

೧೭. ಯಾವನು ಮತ್ಸ್ಯಾಕೃತಿಯಿಂದ ಮಧು ಕೈಟಭರು ಹೊತ್ತುಕೊಂಡು ರಸಾತಲಕ್ಕೆ ಒಯ್ದಿದ್ದ ವೇದಗಳನ್ನು ಅವರೀರ್ವರನ್ನೂ ಯುದ್ಧದಲ್ಲಿ ಕೊಂದು, ನನಗೆ ತಂದಿತ್ತನೋ, ಆ ವೇದವೇದ್ಯನಾದ ಶ್ರೀ ಹ ರಿ ಗೆ ಯಾವಾಗಲೂ ಪ್ರಣತ ನಾಗಿರುತ್ತೇನೆ.

೧೮. ಯಾವನು ಲೋಕ ಹಿತಾರ್ಥವಾಗಿ, ಆಮೆಯ ಆಕೃತಿಯನ್ನು ತಾಳಿ ದನೋ, ಯಾವ ಈ ಕೂರ್ಮಾವತಾರನಿಂದ ದೇವಾಸುರರಿಂದ ಕ್ಷೀರಸಮುದ್ರದ ನಡುವೆಯಿಟ್ಟ, ಮಹಾಪರ್ವತವಾದ ಮಂದರವು ಹೊರಲ್ಪಟ್ಟಿತೋ, ಆ ಜಗತ್ತಿಗೂ ಮೊದಲಿಗನಾದ, ತೇಜೋರೂಪನಾದ, ಶ್ರೀಮಹಾವಿಷ್ಣುವಿಗೆ ಪ್ರಣತನಾಗಿರುತ್ತೇನೆ.

ಹತ್ವಾ ಹಿರಣ್ಯಾಕ್ಷಮತೀವ ದರ್ಪಿತಂ
ವರಾಹರೂಪೀ ಭಗವಾನ್ ಸನಾತನಃ ।
ಯೋ ಭೂಮಿಮೇತಾಂ ಸಕಲಾಂ ಸಮುದ್ಧರ-
ಸ್ತಂ ವೇದಮೂರ್ತಿಂ ಪ್ರಣಮಾಮಿ ಸೂಕರಮ್ ॥ ೧೯ ॥

ಕೃತ್ವಾ ನೃಸಿಂಹಂ ವಪುರಾತ್ಮನಃ ಪರಂ
ಹಿತಾಯ ಲೋಕಸ್ಯ ಸನಾತನೋ ಹರಿಃ ।
ಜಘಾನ ಯಸ್ತೀಕ್ಷ್ಣನಖೈರ್ದಿತೇಃ ಸುತಂ
ತಂ ನಾರಸಿಂಹಂ ಪುರುಷಂ ನಮಾಮಿ ॥ ೨೦ ॥

ಯೋ ವಾಮನೋಽಸೌ ಭಗವಾನ್ ಜನಾರ್ದನೋ
ಬಲಿಂ ಬಬಂಧ ತ್ರಿಭಿರೂರ್ಜಿತೈಃ ಪದೈಃ ।

---

೧೯. ಯಾವ ಸನಾತನನಾದ, ಭಗವಂತನಾದ, ವರಾಹ ರೂಪನಾದ, ಶ್ರೀ ಹರಿಯಾದ ನೀನು ಅತ್ಯಂತ ದರ್ಪದಿಂದ ಕೂಡಿರುವ ಹಿರಣ್ಯಾಕ್ಷನನ್ನು ಕೊಂದು ಈ ಭೂಮಿಯೆಲ್ಲವನ್ನೂ ಉದ್ಧರಿಸಿದೆಯೋ, ಆ ವೇದಸ್ವರೂಪನಾದ ವರಾಹ ಮೂರ್ತಿಗೆರಗುತ್ತೇನೆ.

೨೦. ನಿತ್ಯನಾದ ಶ್ರೀ ಹರಿಯು ಜಗತ್ತಿಗೆ ಅತ್ಯಂತ ಸುಖವನ್ನೀಸಗಲು, ತನ್ನ ನಿತ್ಯವಾದ ನೃಸಿಂಹತನುವನ್ನು ಅಭಿವ್ಯಕ್ತ ಮಾಡಿ, ಯಾವ ನೃಸಿಂಹನು ತನ್ನ ಮೊನಚಾದ ಉಗುರುಗಳಿಂದ ದಿತಿಯ ಸುತನಾದ ಹಿರಣ್ಯಕಶಿಪುವನ್ನು ಎದೆಯನ್ನು ಬಗೆದು ಸಂಹರಿಸಿದನೊ, ಆ ಶ್ರೀನರಸಿಂಹಮೂರ್ತಿಗೆ ನಮಸ್ಕರಿಸುತ್ತೇನೆ.

೨೧. ಅವ್ಯಾಹತ ಷಡ್ಗುಣೈಶ್ವರ್ಯ ಪರಿಪೂರ್ಣನಾದ ಈ ಜನಾರ್ದನನು ವಾಮನಾವತಾರವನ್ನು ಅಭಿವ್ಯಕ್ತಮಾಡಿ, ಏಳ್ಗೆವೆತ್ತ ಮೂರು ಪಾದನ್ಯಾಸಗಳಿಂದ

ಜಗತ್ತ್ರಯಂ ಕ್ರಮ್ಯ ದದೌ ಪುರಂದರೇ
ತಂ ದೇವಮಾದ್ಯಂ ಪ್ರಣತೋಽಸ್ಮಿ ವಾಮನಮ್ ॥ ೨೧ ॥

ಯಃ ಕಾರ್ತವೀರ್ಯಂ ನಿಜಘಾನ ರೋಷಾತ್
ತ್ರಿಃಸಪ್ತಕೃತ್ವಃ ಕ್ಷಿತಿಪಾತ್ಮಜಾನಪಿ ।
ತಂ ಜಾಮದಗ್ನ್ಯಂ ದಿತಿಭಾರನಾಶಕಂ
ನತೋಽಸ್ಮಿ ವಿಷ್ಣುಂ ಪುರುಷೋತ್ತಮಂ ಸದಾ ॥ ೨೨ ॥

ಸೇತುಂ ಮಹಾಂತಂ ಜಲಧೌ ಬಬಂಧ ಯಃ
ಸಂಪ್ರಾಪ್ಯ ಲಂಕಾಂ ಸಗಣಂ ದಶಾನನಮ್ ।
ಜಘಾನ ಭೂತ್ಯೈ ಜಗತಾಂ ಸನಾತನಂ
ತಂ ರಾಮದೇವಂ ಸತತಂ ನತೋಽಸ್ಮಿ ॥ ೨೩ ॥

ಯಥಾ ತು ವಾರಾಹನೃಸಿಂಹರೂಪೈಃ
ಕೃತಂ ತ್ವಯಾ ದೇವಹಿತಂ ಸುರಾಣಾಮ್ ।

ಮೂರು ಲೋಕಗಳನ್ನೂ ಆಕ್ರಮಿಸಿ, ಬಲಿಯನ್ನು ಪಾತಾಳದಲ್ಲಿ ಬಂಧಿಸಿ, ಇಂದ್ರನಿಗೆ ತ್ರಿದಿವವನ್ನಿತ್ತನೋ, ಆ ಈ ಆದ್ಯನಾದ ವಾಮನನಿಗೆ ಪ್ರಣತನಾಗಿರುತ್ತೇನೆ.

೨೨. ಯಾವನು ರೋಷದಿಂದ ಕಾರ್ತವೀರ್ಯಾರ್ಜುನನನ್ನು ಕೊಂದು, ದುಷ್ಟರಾದ ಕ್ಷತ್ರಿಯ ಕುಮಾರರನ್ನೂ ಇಪ್ಪತ್ತೊಂದು ಬಾರಿ ಸಂಹರಿಸಿದನೋ, ದಿತಿಪುತ್ರರ ಹೊರೆಯನ್ನು ಕಳೆದ, ಪರಶುರಾಮಾವತಾರನಾದ, ಪುರುಷೋತ್ತಮನುನಾದ, ಶ್ರೀ ಮಹಾವಿಷ್ಣುವಿಗೆ ಯಾವಾಗಲೂ ನತನಾಗಿರುತ್ತೇನೆ.

೨೩. ಯಾವನು ದಕ್ಷಿಣ ಸಮುದ್ರದಲ್ಲಿ ಸೇತುವನ್ನು ಕಟ್ಟಿ, ಲಂಕೆಗೆ ಹೋಗಿ, ಪರಿವಾರದೊಡಗೂಡಿದ, ಹತ್ತು ಮೊಗದ ರಾವಣನನ್ನು ಜಗತ್ತಿನ ಕಲ್ಯಾಣಕ್ಕಾಗಿ ಸಂಹರಿಸಿದನೋ, (ಸನಾತನನಾದ) ವೇದಪ್ರತಿಪಾದ್ಯನಾದ ಆ ಶ್ರೀ ರಾಮಸ್ವಾಮಿಯನ್ನು ಯಾವಾಗಲೂ ನಮಸ್ಕರಿಸುತ್ತೇನೆ.

೨೪. ಎಂತು ನಿನ್ನಿಂದ ಶ್ರೀ ವರಾಹ ನೃಸಿಂಹರೂಪಗಳಿಂದ ದೇವತೆಗಳಿಗೆ ಹಿತವು ಮಾಡಲ್ಪಟ್ಟಿತೋ, ಹಾಗೆಯೇ ಇಂದು ಭೂಮಿಯ ಹೊರೆಯನ್ನು

ತಥಾऽದ್ಯ ಭೂಮೇಃ ಕುರು ಭಾರಹಾನಿಂ
ಪ್ರಸೀದ ವಿಷ್ಣೋ ಭಗವನ್ನಮಸ್ತೇ ॥ ೨೪ ॥

॥ ಶ್ರೀ ಮಾರ್ಕಂಡೇಯ ಉವಾಚ ॥

ಇತಿ ಸ್ತುತೋ ಜಗನ್ನಾಥಃ ಶ್ರೀಧರಃ ಪದ್ಮಯೋನಿನಾ ।
ಆವಿರ್ಬಭೂವ ಭಗವಾನ್ ಶಂಖಚಕ್ರಗದಾಧರಃ ॥ ೨೫ ॥

ಉವಾಚ ಚ ಹೃಷೀಕೇಶಃ ಪದ್ಮಯೋನಿಂ ಸುರಾನಪಿ ।
ಸ್ತುತ್ಯಾऽನಯಾऽಹಂ ಸಂತುಷ್ಟಃ ಪಿತಾಮಹದಿವೌಕಸಃ ॥ ೨೬ ॥

ಪಠತಾಂ ಪಾಪನಾಶಾಯ ನೃಣಾಂ ಭಕ್ತಿಮತಾಮಪಿ ।
ಯತೋऽಸ್ಮಿ ಪ್ರಕಟೀಭೂತೋ ದುರ್ಲಭೋऽಪಿ ಹರಿಃ ಸುರಾಃ ॥ ೨೭ ॥

ಅಳಿಯಿಸು ; ಎಲೈ ಭಗವಂತನಾದ ಶ್ರೀ ಮಹಾವಿಷ್ಣುವೇ ! ಪ್ರಸನ್ನನಾಗು ; ನಿನಗೆ ನಮಸ್ಕಾರವು" ಎಂದು ಚತುರ್ಮುಖನು ಶ್ರೀ ಹರಿಯನ್ನು ಸ್ತುತಿಸಿದನು.

ಶ್ರೀ ಮಾರ್ಕಂಡೇಯನು ಹೇಳುತ್ತಾನೆ :—

೨೫. "ಇಂತು ಪದ್ಮದಲ್ಲಿ ಜನಿಸಿದ ಚತುರ್ಮುಖನಿಂದ ಸ್ತೋತ್ರ ಮಾಡಿಸಿಕೊಂಡ, ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನು ತಾಳಿರುವ, ಶಂಖಚಕ್ರಗದಾಧರನಾದ, ಜಗನ್ನಾಥನಾದ, ಭಗವಂತನು ಪ್ರತ್ಯಕ್ಷನಾದನು.

೨೬. ಸರ್ವೇಂದ್ರಿಯನಿಯಾಮಕನಾದ, ಹೃಷೀಕೇಶನು ಬ್ರಹ್ಮನನ್ನೂ, ದೇವತೆಗಳನ್ನೂ ಕುರಿತು ಇಂತು ಹೇಳಿದನು. 'ಎಲೈ ಪಿತಾಮಹನೇ ! ದೇವತೆಗಳಿರಾ ! ನಾನು ಈ ಸ್ತುತಿಯಿಂದ ಸಂತಸಗೊಂಡಿರುತ್ತೇನೆ.

೨೭–೨೮. ಎಲೈ ದೇವತೆಗಳಿರಾ ! ಭಕ್ತಿಯಿಂದ ಕೂಡಿದವರಾಗಿ ಈ ಸ್ತೋತ್ರವನ್ನು ಪಠಿಸುವ ಮಾನವರ ಪಾಪವನ್ನು ಕಳೆಯುವ ಸಲುವಾಗಿ, ಶ್ರೀ ಹರಿಯಾದ ನಾನು ದುರ್ಲಭನಾದರೂ ಇಂದ್ರರಿಂದೊಡಗೂಡಿದ ದೇವತೆಗಳಿಂದಲೂ,

ದೇವೈಃ ಸೇಂದ್ರೈಃ ಸರುದ್ರೈಃ ಪೃಥ್ವ್ಯಾ ಚ ಪ್ರಾರ್ಥಿತೋಽಹ್ಯಹವಮ್ ।
ಪದ್ಮಯೋನೇ ವದಾದ್ಯ ತ್ವಂ ಶ್ರುತ್ವಾ ತತ್ಕರವಾಣಿ ತೇ ॥ ೨೮ ॥

ಇತ್ಯುಕ್ತೋ ವಿಷ್ಣುನಾ ಪ್ರಾಹ ಬ್ರಹ್ಮಾ ಲೋಕಪಿತಾಮಹಃ ।
ದೈತ್ಯಾನಾಂ ಗುರುಭಾರೇಣ ಪೀಡಿತೇಯಂ ಮಹೀ ಭೃಶಮ್ ।
ಲಘ್ವೀಮಿಮಾಂ ಕಾರಯಿತುಂ ತ್ವಯಾಹಂ ಪುರುಷೋತ್ತಮ ॥ ೨೯ ॥

ತೇನಾಗತಃ ಸುರೈಸ್ಸಾರ್ಧಂ ನಾನ್ಯದಸ್ತೀತಿ ಕಾರಣಮ್ ।
ಇತ್ಯುಕ್ತೋ ಭಗವಾನ್ ಪ್ರಾಹ ಗಚ್ಛಧ್ವಮಮರಾಃ ಸ್ವಯಮ್ ॥ ೩೦ ॥

ಸ್ಥಾನಂ ನಿರಾಮಯಾಃ ಸರ್ವೇ ಪದ್ಮಯೋನಿಸ್ತು ಗಚ್ಛತು ।
ದೇವಕ್ಯಾಂ ವಸುದೇವಾಚ್ಚ ಅವತೀರ್ಯ ಮಹೀತಲೇ ॥ ೩೧ ॥

ಭೂದೇವಿಯಿಂದಲೂ ಪ್ರಾರ್ಥಿತನಾದವನಾಗಿ ನಿಮಗೆ ಪ್ರತ್ಯಕ್ಷನಾಗಿರುತ್ತೇನೆ. ಎಲೈ ಪದ್ಮಭವನೇ! ನಿನಗೇನಾಗಬೇಕಾಗಿದೆಯೋ, ಅದನ್ನೀಗ ಹೇಳು; ಅದನ್ನು ಕೇಳಿ, ನಿನಗೆ ಮಾಡಿಕೊಡುವೆನು.'

೨೯–೩೨. ಎಂದು ಭಗವಂತನಾದ ವಿಷ್ಣುವು ಅನುಗ್ರಹಿಸಲು, ಲೋಕ ಪಿತಾಮಹನಾದ ಚತುರ್ಮುಖನು ಇಂತು ಬಿನ್ನವಿಸಿದನು.

'ಎಲೈ ಭಗವಂತನೇ! ಈ ಭೂದೇವಿಯು ರಕ್ಕಸರ ಕಡು ಹೊರೆಯಿಂದ ಬಹುವಾಗಿ ಹಿಂಸೆಗೊಂಡಿರುತ್ತಾಳೆ. ಎಲೈ ಪುರುಷೋತ್ತಮನೇ! ಇವಳನ್ನು ನಿನ್ನಿಂದ ಭಾರಶೂನ್ಯಳನ್ನಾಗಿ ಮಾಡಿಸಲು ನಾನು, ದೇವತೆಗಳೊಡಗೂಡಿ, ಬಂದೆನು. ಮತ್ತಾವ ಕಾರಣದಿಂದಲೂ ಇರುವುದಿಲ್ಲವು;'

ಎಂದು ಚತುರ್ಮುಖನು ಬಿನ್ನವಿಸಲು, ಭಗವಂತನು ಇಂತು ಹೇಳಿದನು.

ಸಿತಕೃಷ್ಣೇ ಚ ಮಚ್ಛಕ್ತೀ ಕಂಸಾದೀನ್ ಘಾತಯಿಷ್ಯತಃ ।
ಇತ್ಯಾಕರ್ಣ್ಯ ಹರೇರ್ವಾಕ್ಯಂ ಹರಿಂ ನತ್ವಾಯಯುಃ ಸುರಾಃ ॥ ೩೨ ॥

ಗತೇಷು ತ್ರಿದಿವೌಕಸ್ಸು ದೇವದೇವೋ ಜನಾರ್ದನಃ ।
ಶಿಷ್ಟಾನಾಂ ಪಾಲನಾರ್ಥಾಯ ದುಷ್ಟನಿಗ್ರಹಣಾಯ ಚ ॥ ೩೩ ॥

ಪ್ರೇಷಯಾಮಾಸ ತೇ ಶಕ್ತೀ ಸಿತಕೃಷ್ಣೇ ಸ್ವಕೇ ನೃಪ ।
ತಯೋಃ ಸಿತಾ ಚ ರೋಹಿಣ್ಯಾಂ ವಸುದೇವಾದ್ಬಭೂವ ಹ ॥ ೩೪ ॥

ತದ್ವತ್ಕೃಷ್ಣಾ ಚ ದೇವಕ್ಯಾಂ ವಸುದೇವಾದ್ಬಭೂವ ಹ ।
ರೌಹಿಣೇಯೋಽಥ ಪುಣ್ಯಾತ್ಮಾ ರಾಮನಾಮಾಶ್ರಿತೋ ಮಹಾನ್ ॥ ೩೫ ॥

"ಎಲೈ ದೇವತೆಗಳಿರಾ! ನೀವೆಲ್ಲರೂ ನಿಶ್ಚಿಂತರಾಗಿ ನಿಮ್ಮ ಲೋಕಕ್ಕೆ ಹೋಗಿರಿ; ಪದ್ಮಭವನೂ ಹೋಗಲಿ. ಭೂತಲವಲ್ಲಿ ಶುಕ್ಲ ಕೃಷ್ಣಗಳೆಂಬ ನನ್ನ ಪೂರ್ಣಶಕ್ತಿಗಳು ವಸುದೇವನಿಂದ ದೇವಕೀದೇವಿಯಲ್ಲಿ ಅವತರಿಸಿ ಕಂಸನೇ ಮೊದಲಾದ ದುಷ್ಟರಾಕ್ಷಸರನ್ನು ಸಂಹರಿಸುತ್ತವೆ."

ಇಂತು ದೇವತೆಗಳು ಶ್ರೀ ಹರಿಯ ಅನುಗ್ರಹದ ನುಡಿಗಳನ್ನು ಕೇಳಿ, ಅವನಿಗೆ ಎರಗಿ ತಮ್ಮ ಲೋಕಕ್ಕೆ ಹೋದರು.

೩೩-೩೭. ದೇವತೆಗಳು ಹೊರಟು ಹೋಗಲು, ದೇವೋತ್ತಮನಾದ ದುಷ್ಟಸಂಹಾರಕನಾದ ಶ್ರೀ ಹರಿಯು ಶಿಷ್ಟರನ್ನು (ಸಜ್ಜನರನ್ನು) ರಕ್ಷಿಸುವ ಸಲುವಾಗಿಯೂ, ದುಷ್ಟರನ್ನು ಸಂಹರಿಸುವುದಕ್ಕೂ ತನ್ನ ಪೂರ್ಣವಾದ ಶುಕ್ಲ ಕೃಷ್ಣ ಶಕ್ತಿಗಳನ್ನು ಭೂಮಿಗೆ ಕಳುಹಿಸಿದನು. ಅವುಗಳಲ್ಲಿ ಎಲೈ ನೃಪನೇ! ಸಿತಾ ಶಕ್ತಿಯು ರೋಹಿಣೀ ದೇವಿಯಲ್ಲಿ ವಸುದೇವನಿಂದ ಅವತರಿಸಿತು. ಅದರಂತೆಯೇ ಕೃಷ್ಣಾಶಕ್ತಿಯೂ ದೇವಕಿಯಲ್ಲಿ ವಸುದೇವನಿಂದಾವಿರ್ಭವಿಸಿತು. ರೋಹಿಣೀ

ದೇವಕೀನಂದನಃ ಕೃಷ್ಣಃ ತಯೋಃ ಕರ್ಮ ಶೃಣುಷ್ವ ಮೇ ।
ಗೋಕುಲೇ ಬಾಲಕೇಲಿಂ ತು ರಾಕ್ಷಸೀ ಶಕುನೀ ನಿಶಿ ॥ ೩೬ ॥

ರಾಮೇಣ ನಿಹತಾ ರಾಜನ್ ತಥಾ ಕೃಷ್ಣೇನ ಪೂತನಾ ।
ಧೇನುಕಃ ಸಗಣಸ್ತಾಲವನೇ ರಾಮೇಣ ಘಾತಿತಃ ॥ ೩೭ ॥

ಶಕಟಶ್ಚಾರ್ಜುನೌ ವೃಕ್ಷೌ ತದ್ವತ್ಕೃಷ್ಣೇನ ಘಾತಿತೌ ।
ಪ್ರಲಂಬೋ ನಿಧನಂ ನೀತೋ ದೈತ್ಯೋ ರಾಮೇಣ ಮುಷ್ಟಿನಾ ॥ ೩೮ ॥

ಕಾಲಿಯೋ ದಮಿತಸ್ತೋಯೇ ಕಾಲಿಂದ್ಯಾಂ ವಿಷಪನ್ನಗಃ ।
ಗೋವರ್ಧನಶ್ಚ ಕೃಷ್ಣೇನ ಧೃತೋ ವರ್ಷತಿ ವಾಸವೇ ॥ ೩೯ ॥

ತನಯನಾದ ಆ ಹಿರಿಯ ಸುಖಸ್ವರೂಪನು ಬಲ ರಾಮನೆಂದೂ, ದೇವಕೀ ತನಯನಾದವನು ಕೃಷ್ಣನೆಂದೂ ಹೆಸರು ಪಡೆದರು. ಅವರ ಬಾಲ್ಯದ ಆಟಗಳ ಕಾರ್ಯವನ್ನು ಹೇಳುತ್ತೇನೆ; ಕೇಳು; ರಾಕ್ಷಸಿಯಾದ ಶಕುನಿಯೆಂಬವಳನ್ನು ರಾಮನು ರಾತ್ರಿಯ ಹೊತ್ತಿನಲ್ಲಿ ಸಂಹರಿಸಿದನು. ಶ್ರೀ ಕೃಷ್ಣನೂ ಹಾಗೆಯೇ 'ಪೂತನಾ' ಎಂಬವಳನ್ನು ಸಂಹರಿಸಿದನು. ಬಲರಾಮನು ತಾಲವನದಲ್ಲಿ ಪರಿವಾರದೊಡಗೂಡಿದ ಧೇನುಕನೆಂಬ ರಕ್ಕಸನನ್ನು ಸಂಹರಿಸಿದನು.

೩೮. ಅಂತೆಯೇ ಶ್ರೀಕೃಷ್ಣನು ಶಕಟನೆಂಬ ಅಸುರನನ್ನೂ, ವೃಕ್ಷರೂಪರಾದ ಯಮಲಾರ್ಜುನರೆಂಬ ಈರ್ವರನ್ನೂ ಸಂಹರಿಸಿದನು. ಬಲರಾಮನು ಪ್ರಲಂಬನೆಂಬ ರಕ್ಕಸನನ್ನು ತನ್ನ ಮುಷ್ಟಿಯಿಂದ ಹೊಡೆದು ಸಂಹರಿಸಿದನು.

೩೯. ಬಳಿಕ ಶ್ರೀ ಕೃಷ್ಣನು ಜಗುನೆಯಲ್ಲಿದ್ದ, ಕ್ರೂರವಿಷದಿಂದ ಭಯಂಕರನಾಗಿದ್ದ, ಕಾಲಿಯನೆಂಬ ಸರ್ಪನನ್ನು ತುಳಿದು ಸಮುದ್ರಕ್ಕೆ ಓಡಿಸಿದನು. ಇಂದ್ರನು ಸಂತತವಾಗಿ ಮಳೆಗರೆಯಲು ಗೋವರ್ಧನಗಿರಿಯನ್ನು ಕೊಡೆವಿಡಿದು, ಗೋಕುಲವನ್ನು ರಕ್ಷಿಸಿದನು.

ಗೋಕುಲಂ ರಕ್ಷತಾ ತೇನ ಅರಿಷ್ಟಶ್ಚ ನಿಪಾತಿತಃ ।
ಕೇಶೀ ಚ ನಿಧನಂ ನೀತೋ ದುಷ್ಟವಾಜೀ ಮಹಾಸುರಃ ॥ ೪೦ ॥

ಅಕ್ರೂರೇಣ ಚ ತೌ ನೀತೌ ಮಧುರಾಯಾಂ ಮಹಾತ್ಮನಾ ।
ದದರ್ಶ ತುರ್ನಿಮಗ್ನಶ್ಚ ರಾಮಕೃಷ್ಣೌ ಮಹಾಮತೇ ॥ ೪೧ ॥

ಸ್ವಂ ಸ್ವಂ ರೂಪಂ ಜಲೇ ತಸ್ಯ ಅಕ್ರೂರಸ್ಯ ವಿಭೂತಿದವತ್ ।
ಅನಯೋರ್ಥಾವಮತುಲಂ ಜ್ಞಾತ್ವಾ ದೃಷ್ಟ್ವಾ ಚ ಯಾದವಾಃ ॥ ೪೨ ॥

ಬಭೂವುಃ ಪ್ರೀತಮನಸೋ ಅಕ್ರೂರಶ್ಚ ನೃಪಾತ್ಮಜಃ ।
ದುರ್ವಚಶ್ಚ ಪ್ರಜಲ್ಪಂತಂ ಕಂಸಸ್ಯ ರಜಕಂ ತತಃ ॥ ೪೩ ॥

ಕೃಷ್ಣೋ ಜಘಾನ ರಾಮಶ್ಚ ತದ್ವಸ್ತ್ರಂ ಬ್ರಹ್ಮಣೇ ದದೌ ।
ಮಾಲಾಕಾರೇಣ ಭಕ್ತ್ಯಾ ತು ಸುಮನೋಭಿಃ ಪ್ರಪೂಜಿತೌ ॥ ೪೪ ॥

---

೪೦. ಗೋಕುಲವನ್ನು ರಕ್ಷಿಸುತ್ತಲಿದ್ದ ಶ್ರೀ ಕೃಷ್ಣನು ಅರಿಷ್ಟಾಸುರನನ್ನು ಕೆಡಹಿ, ಕುದುರೆಯ ರೂಪನಲ್ಲಿ ಹಿಂಸಿಸುತ್ತಿದ್ದ ಕೇಶಿಯೆಂಬ ದುಷ್ಟ ರಾಕ್ಷಸನನ್ನೂ ಸಂಹರಿಸಿದನು.

೪೧–೪೪. ಎಲೈ ಮಹಾಮತಿಯೇ ! ಕೇಳು ; ಮಹಾತ್ಮನಾದ ಅಕ್ರೂರನು ಆ ರಾಮ ಕೃಷ್ಣರೀರ್ವರನ್ನು ಮಧುರೆಗೆ ಒಯ್ದನು. ಆ ಅಕ್ರೂರನು ಸ್ನಾನ ಮಾಡಲು ಮುಳುಗಿರಲು, ಅವನಿಗೆ ನೀರಿನಲ್ಲಿ ಅವರೀರ್ವರೂ ತಂತಮ್ಮ ಐಶ್ವರ್ಯವನ್ನು ಕೊಡತಕ್ಕ ರೂಪವನ್ನು ಕಾಣಿಸಿದರು. ಯಾದವರು ಇವರೀರ್ವರ ಮಹಿಮೆಯನ್ನು ತಿಳಿದೂ, ಕಂಡೂ, ಸಂತಸಗೊಂಡ ಮನವುಳ್ಳವರಾದರು. ಅಕ್ರೂರನೆಂಬ ಅರಗು ವರನೂ ಹಿಗ್ಗಿದನು. ಅನಂತರದಲ್ಲಿ ಇವರಿಗೆ ಕೆಟ್ಟ ಮಾತುಗಳನ್ನಾಡುತ್ತಲಿದ್ದ, ಕಂಸನ ಅಗಸನನ್ನು ಶ್ರೀ ಕೃಷ್ಣನು ಕೊಂದನು. ಅವನು ಹೊತ್ತು ತರುತ್ತಲಿದ್ದ ವಸ್ತ್ರಗಳನ್ನು ಬ್ರಾಹ್ಮಣರಿಗೆ ರಾಮನಿತ್ತನು ; ಮಾಲಾಕಾರನು ಇವರೀರ್ವರನ್ನೂ ಚೆನ್ನಾದ ಮೊಗ್ಗಳಿಂದ ಪೂಜಿಸಿದನು.

ತತಸ್ತಸ್ಮೈ ವರಾನ್ ದತ್ವಾ ದುರ್ಲಭಾನ್ ರಾಮಕೇಶವೌ ।
ಗಚ್ಛಂತೌ ರಾಜಮಾರ್ಗೇಣ ತು ಕುಬ್ಜಯಾ ಪೂಜಿತೌ ತತಃ ॥ ೪೫ ॥

ತದ್ವತ್ಕೋಟ್ಯಮುಪಾನೀಯ ವಿರೂಪಂ ಕಾರ್ಮುಕಂ ತತಃ ।
ಬಭಂಜ ಕೃಷ್ಣೋ ಬಲವಾನ್ ಕಂಸಸ್ಯಾಕೃಷ್ಯ ತತ್ಕ್ಷಣಾತ್ ॥ ೪೬ ॥

ರಕ್ಷಪಾಲಾನ್ ಜಘಾನಾಥ ರಾಮಸ್ತತ್ರ ಬಲಾನ್ ಬಹೂನ್ ।
ಹತ್ವಾ ಕುವಲಯಾಖ್ಯಂ ಚ ಗಜಂ ರಾಮಜನಾರ್ದನೌ ॥ ೪೭ ॥

ಪ್ರವಿಶ್ಯ ರಂಗಂ ಗಜದಂತಪಾಣೀ
ಮದಾನುಲಿಪ್ತೌ ವಸುದೇವಪುತ್ರೌ ।
ಯುದ್ಧೇ ತು ರಾಮೋ ನಿಜಘಾನ ಮಲ್ಲಂ
ಶೈಲೋಪಮಂ ಮುಷ್ಟಿಕಮವ್ಯಯಾತ್ಮಾ ॥ ೪೮ ॥

---

೪೫. ಅನಂತರದಲ್ಲಿ ರಾಮ ಕೇಶವರು ಆ ಮಾಲಾಕಾರನಿಗೆ ಸಾಮಾನ್ಯರಿಂದ ಪಡೆಯಲಾಗದ ವರಗಳನ್ನು ಇತ್ತು, ರಾಜಮಾರ್ಗದಲ್ಲಿ ಹೋಗುತ್ತಾ, ಕುಬ್ಜೆಯೆಂಬ ಗಟ್ಟಿವಕ್ತ್ರೆಯಿಂದ ಪೂಜಿಸಿಕೊಂಡರು.

೪೬. ಅಂತೆಯೇ ಬಳಿಕ ಆಯುಧಾಗಾರಕ್ಕೆ ಬಂದು, ಶೂರನಾದ ಶ್ರೀ ಕೃಷ್ಣನು ವಿರೂಪವಾದ ಕಂಸನ ಬಿಲ್ಲನ್ನು ತೆಗೆದುಕೊಂಡು, ಆ ಕ್ಷಣದಿಂದಲೇ ಹೆದೆ ಯೇರಿಸತೊಡಗಿ, ಅದನ್ನು ಮುರಿದನು.

೪೭–೪೮. ಬಳಿಕ ಬಲರಾಮನು ಅದರ ರಕ್ಷಣೆಯಲ್ಲಿದ್ದ ಶೂರರನೇಕರನ್ನು ಅಲ್ಲಿ ಸಂಹರಿಸಿದನು. ರಾಮ ಜನಾರ್ದನರೀರ್ವರೂ ಕುವಲಯಾಪೀಡವೆಂಬ ದುಷ್ಟ ಗಜವನ್ನು ಸಂಹರಿಸಿ, ಈ ವಸುದೇವ ಕುವರರು ಸೊಕ್ಕಿದವರಾಗಿ, ಕೈಗಳಲ್ಲಿ ಆನೆಯ ದಂತವನ್ನು ಹಿಡಿದು, ಮಲ್ಲರಂಗಕ್ಕೆ ಪ್ರವೇಶಿಸಿ, ಅಲ್ಲಿ ಶುಕ್ಲನೆಂಬ ಅಚ್ಯುತಸಿಂಹ ಆವಿಷ್ಟನಾದ ಬಲರಾಮನು ಬೆಟ್ಟಕ್ಕೆಣೆಯಾದ ಮುಷ್ಟಿಕನೆಂಬ ಮಲ್ಲನನ್ನು ದ್ವಂದ್ವ ಯುದ್ಧದಲ್ಲಿ ಸಂಹರಿಸಿದನು.

ಕೃಷ್ಣೋಽಪಿ ಚಾಣೂರಮತಿಪ್ರಸಿದ್ಧಂ
ಬಲೇನ ವೀರ್ಯೇಣ ಚ ಕಂಸಮಲ್ಲಕಮ್ ।
ಮಲ್ಲಂ ತು ತೇನಾಥ ಚಿರಂ ಜಘಾನ
ತಂ ದೈತ್ಯಮಲ್ಲಂ ಜನಸಂಸದೀಶಃ ॥ ೪೯ ॥

ಮೃತಸ್ಯ ಮಲ್ಲಸ್ಯ ಚ ಮುಷ್ಟಿಕಸ್ಯ
ಮಿತ್ರಂ ಪುನಃ ಪುಷ್ಕರಕಂ ಸ ರಾಮಃ ।
ಯುದ್ಧಾರ್ಥಮುತ್ಥಾಯ ಕೃತಕ್ಷಣಂ ತಂ
ಮುಷ್ಟಿ ಪ್ರಹಾರೇಣ ಜಘಾನ ವೀರಃ ॥ ೫೦ ॥

ಕೃಷ್ಣಃ ಪುನಸ್ತಾನ್ ಸಕಲಾನ್ನಿಹತ್ಯ
ನಿಗೃಹ್ಯ ಕಂಸಂ ವಿನಿಪಾತ್ಯ ತಸ್ಯ ।
ಸ್ವಯಂ ಚ ದೇಹೇ ವಿನಿಪಾತ್ಯ ಭೂಮೌ
ಹತ್ವಾ ತತೋಽನ್ಯಾನ್ ನಿಚಕರ್ಷ ಕೃಷ್ಣಃ ॥ ೫೧ ॥

---

೪೯. ಅನೇಕ ಪ್ರೇಕ್ಷಕರಾದ ಜನಗಳಿರತಕ್ಕ ಆ ಮಲ್ಲರಂಗದಲ್ಲಿ ಸರ್ವೇಶ್ವರನಾದ ಶ್ರೀ ಕೃಷ್ಣನು ಬಲದಿಂದಲೂ, ವೀರ್ಯದಿಂದಲೂ ಕಂಸನ ಮಲ್ಲನೆಂದು ಖ್ಯಾತನಾದ, ಮಹಾದೈತ್ಯಮಲ್ಲನಾದ ಚಾಣೂರನೆಂಬಮಲ್ಲನೊಡನೆ ಬಹು ಹೊತ್ತು ಕಾದಾಡಿ, ಬಳಿಕ ಅವನನ್ನು ಹೊಡೆದು ಸಂಹರಿಸಿದನು.

೫೦. ಮೃತನಾದ ಮುಷ್ಟಿಕನೆಂಬ ಮಲ್ಲನ ಕೆಳೆಯನಾದ ಪುಷ್ಕರಕನೆಂಬ ಮಲ್ಲನನ್ನು ಆ ವೀರನಾದ ರಾಮನು ಯುದ್ಧದ ಸಲುವಾಗಿ ಎದ್ದು, ಮಲ್ಲಯುದ್ಧೋತ್ಸವವನ್ನೆಸಗಿದವನನ್ನು ಹಿಡಿಯ ಹೊಡೆತದಿಂದ ಸಂಹರಿಸಿದನು.

೫೧. ಶ್ರೀ ಕೃಷ್ಣನು ಪುನಃ ಮೇಲೆ ಬೀಳಲು ಬಂದಂತಹ, ಇತರರಾದ ಆ ಮಲ್ಲರೆಲ್ಲರನ್ನೂ ಕೊಂದು, ಬಳಿಕ ಮಂಚದಲ್ಲಿ ಕುಳಿತಿದ್ದ ಕಂಸನನ್ನು ಹಿಡಿದು, ನೆಲದ ಮೇಲೆ ಕೆಡುಹಿ, ತಾನೂ ಅವನ ಶರೀರದ ಮೇಲೆ ಬಿದ್ದು, ಕೊಂದು, ಬಳಿಕ ನೆಲದಲ್ಲಿ ಎಳೆದಾಡಿದನು.

ಹತೇ ತು ತು ಕಂಸೇ ಹರಿಣಾತಿಕ್ರುದ್ಧೋ
ಭ್ರಾತಾಪಿ ತಸ್ಯಾತಿರುಷೇಣ ಚೋತ್ಥಿತಃ ।
ಸುನಾಭಸಂಜ್ಞೋ ಬಲವೀರ್ಯಯುಕ್ತೋ
ರಾಮೇಣ ನೀತೋ ಯಮಸಾದನಂ ಕ್ಷಣಾತ್ ॥ ೫೨ ॥

ತೌ ವಂದ್ಯ ಮಾತಾಪಿತರೌ ಸುಹೃಷ್ಟೌ
ಜನೈಃ ಸಮಸ್ತೈರ್ಯದುಭಿಃ ಸುಸಂವೃತೌ ।
ಕೃತ್ವಾ ನೃಪಂ ಚೋಗ್ರಸೇನಂ ಗುರೂಣಾಂ
ಸಭಾಂ ಸುಧರ್ಮಾಂ ದದತುರ್ಮಹೇಂದ್ರೀಮ್ ॥ ೫೩ ॥

ಸರ್ವಜ್ಞಭಾವಾವಪಿ ರಾಮಕೃಷ್ಣೌ
ಸಂಪ್ರಾಪ್ಯ ಸಾಂದೀಪಿನಿತೋಽಸ್ತ್ರವಿದ್ಯಾಮ್ ।
ಗುರೋಃ ಕೃತೇ ಪಂಚಜನಂ ನಿಹತ್ಯ
ಯಮಂ ಚ ಜಿತ್ವಾ ಗುರವೇ ಸುತಂ ದದೌ ॥ ೫೪ ॥

---

೫೨. ಶ್ರೀ ಹರಿಯು ಕಂಸನನ್ನು ಇಂತು ಸಂಹರಿಸಲು, ಅವನ ತಮ್ಮನೂ ಕಡುಮುಳಿಸಿನಿಂದೆದ್ದನು. ಅವನ ಹೆಸರು ಸುನಾಭನೆಂದು ಇವನೂ ಬಲವೀರ್ಯಗಳಿಂದ ಕೂಡಿದವನು. ಇವನನ್ನು ಬಲರಾಮನು ಚಣದಿಂದ ಜವನ ಮನೆಗೆ ಒಯ್ದನು.

೫೩. ಆ ಬಲರಾಮಕೃಷ್ಣರು ಕಡುಸಂತಸಗೊಂಡು ತಾಯಿ ತಂದೆಗಳಾದ ದೇವಕೀ ವಸುದೇವರಿಗೆ ನಮಸ್ಕರಿಸಿ, ಸಕಲ ಯಾದವ ಜನಗಡಣದಿಂದ ಪರಿವೃತರಾಗಿ, ಉಗ್ರಸೇನನನ್ನು ದೊರೆಯನ್ನಾಗಿ ಪಟ್ಟಾಭಿಷೇಕಮಾಡಿ, ದೇವೇಂದ್ರನ 'ಸುಧರ್ಮಾ' ಎಂಬ ಉತ್ತಮವಾದ ಸಭೆಯನ್ನು ಹಿರಿಯರಿಗೆ ತಂದಿತ್ತರು.

೫೪. ರಾಮಕೃಷ್ಣರು ಸಾಕ್ಷಾತ್ಸರ್ವಜ್ಞ ಸ್ವರೂಪರಾದವರೂ, (ಲೋಕಶಿಕ್ಷಾರ್ಥವಾಗಿ) ಸಾಂದೀಪನಿಯೆಂಬ ಗುರುವಿನಿಂದ ಅಸ್ತ್ರವಿದ್ಯೆಯನ್ನು ಕಲಿತವರಾಗಿ, ಗುರುವಿಗೆ ದಕ್ಷಿಣೆಯ ಸಲುವಾಗಿ, ಪಂಚಜನನೆಂಬ ರಕ್ಕಸನನ್ನು ಕೊಂದು, ಯಮನನ್ನು ಜಯಿಸಿ, ಆ ಗುರುವಿಗೆ ಆತನ ಮಗನನ್ನು ತಂದಿತ್ತರು.

ನಿಹತ್ಯ ರಾಮೋ ಮಗಧೇಶ್ವರಸ್ಯ
ಬಲಂ ಸಮಸ್ತಂ ಬಹುಶಃ ಸಮಾಗತಮ್ ।
ದಿವಾಸ್ತ್ರಪೂರ್ವೈರಮರಾವಿಮಾವುಭೌ
ಶುಭಾಂ ಪುರೀಂ ಚಕ್ರತುಃ ಸಾಗರಾಂತರೇ ॥ ೫೫ ॥

ತಸ್ಯಾಂ ವಿಧಾಯಾಥ ಜನಸ್ಯ ವಾಸಂ
ಹತ್ವಾ ಸೃಗಾಲಂ ಹರಿರವ್ಯಯಾತ್ಮಾ ।
ದಗ್ಧ್ವಾ ಮಹಾಂತಂ ಯವನಂ ಹ್ಯುಪಾಯಾ-
ದ್ವರಂ ಚ ದತ್ವಾ ನೃಪತೇರ್ಜಗಾಮ ॥ ೫೬ ॥

ರಾಮೋಽಥ ಸಂಶಾಂತಸಮಸ್ತವಿಗ್ರಹಃ
ಸಂಪ್ರಾಪ್ಯ ನಂದಸ್ಯ ಪುನಃ ಸ ಗೋಕುಲಮ್ ।
ವೃಂದಾವನೇ ಗೋಪಜನೈಃ ಸುಭಾಷಿತಃ
ಸೀರೇಣ ರಾಮೋ ಯಮುನಾಂ ಚಕರ್ಷ ॥ ೫೭ ॥

---

೫೫. ಬಲರಾಮನು ಅನೇಕವೇಳೆ ತಮ್ಮ ಮೇಲೆ ದಂಡೆತ್ತಿ ಬಂದ, ಮಗಧ ರಾಜನಾದ ಜರಾಸಂಧನ ಸೈನ್ಯವನ್ನು ಉತ್ತಮಗಳಾದ ಬಾಣಗಳ ಪ್ರವಾಹಗಳಿಂದ ಸಂಹರಿಸಿ, ಅಮರರಾದ ಈ ರಾಮಕೃಷ್ಣರೀರ್ವರೂ ಸಮುದ್ರದ ನಡುವೆ ದ್ವಾರಕೆಯೆಂಬ ಉತ್ತಮವಾದ ಪಟ್ಟಣವನ್ನು ಕಟ್ಟಿದರು.

೫೬. ಅಚ್ಯುತನಾದ ಶ್ರೀ ಹರಿಯಾದ ಕೃಷ್ಣನು ಆ ಪುರಿಯಲ್ಲಿ ಜನರಿಗೆ ವಾಸವನ್ನೇರ್ಪಡಿಸಿ, ಸೃಗಾಲವಾಸುದೇವನೆಂಬ ರಕ್ಕಸನನ್ನು ಸಂಹರಿಸಿ, ದೊಡ್ಡ ಕಾಲಯವನನೆಂಬವನನ್ನು ಉಪಾಯದಿಂದ ಸುಟ್ಟು, ರಾಜನಿಗೆ ವರವನ್ನಿತ್ತು ಹೊರಟುಹೋದನು.

೫೭. ಬಳಿಕ ಆ ಬಲರಾಮನು ಯುದ್ಧವೆಲ್ಲಾ ಮುಗಿದುಹೋಗಿ ಶಾಂತವಾಗಲು, ಪುನಃ ನಂದಗೋಪನ ಗೋಕುಲಕ್ಕೆ ಬಂದು, ವೃಂದಾವನದಲ್ಲಿ ಗೋವಳರಿಂದ ವ್ಯವಹರಿಸುತ್ತಿದ್ದವನಾಗಿ, ತನ್ನ ಹಲಾಯುಧದಿಂದ ಜಗುನೆಯನ್ನು ಸೆಳೆದನು.

ಸಂಪ್ರಾಪ್ಯ ಭಾರ್ಯಾಮಥ ರೇವತೀಂ ಚ
ರೇಮೇ ತಯಾ ದ್ವಾರವತೀಂ ಸ ಲಾಂಗಲೀ ।
ಕ್ಷಾತ್ರೇಣ ಸಂಪ್ರಾಪ್ಯ ತದಾ ಸ ರುಕ್ಮಿಣೀಂ
ಕೃಷ್ಣೋಽಪಿ ರೇಮೇ ಪುರುಷಃ ಪುರಾಣಃ ॥ ೫೮ ॥

ದ್ಯೂತೇ ಕಲಿಂಗ ರಾಜಸ್ಯ ದಂತಾನುತ್ಪಾಟ್ಯ ಲಾಂಗಲೀ ।
ಜಘಾನಾಷ್ಟಪದೇನೈವ ರುಕ್ಮಿಣಂ ಚಾನೃತಾನ್ವಿತಮ್ ॥ ೫೯ ॥

ಕೃಷ್ಣಃ ಪ್ರಾಗ್ಜ್ಯೋತಿಷೋ ದೈತ್ಯಾನ್ಹಯಗ್ರೀವಾದಿಕಾನ್ ಬಹೂನ್ ।
ಹತ್ವಾ ತು ನರಕಂ ಚಾಪಿ ಜಗ್ರಾಹ ಚ ಮಹದ್ಧನಮ್ ॥ ೬೦ ॥

ದತ್ವಾ ತು ಕುಂಡಲೇ ದಿತ್ಯೈ ಜಿತ್ವೇಂದ್ರಂ ದೈವತೈಸ್ಸಹ ।
ಗೃಹೀತ್ವಾ ಪಾರಿಜಾತಂ ತು ತತೋ ದ್ವಾರಾವತೀಂ ಪುರೀಮ್ ॥ ೬೧ ॥

---

೫೮. ತರುವಾಯ ಹಲಧರನಾದ ಬಲರಾಮನು ರೇವತಿಯೆಂಬ ಮಡದಿಯನ್ನು ಪಡೆದು, ದ್ವಾರಾವತಿಯನ್ನು ಹೊಂದಿ, ವಿಹರಿಸುತ್ತಿದ್ದನು. ಪುರಾಣ ಪುರುಷನಾದ ಶ್ರೀ ಕೃಷ್ಣನೂ ಆಗ ರುಕ್ಮಿಣಿಯೆಂಬವಳನ್ನು ಕ್ಷಾತ್ರವಿಧಿಯಿಂದ ಪಡೆದು, ಮದುವೆ ಮಾಡಿಕೊಂಡು, ಅವಳೊಡನೆ ಕ್ರೀಡಿಸಿದನು.

೫೯. ಸೀರಪಾಣಿಯಾದ ಬಲರಾಮನು ಪಗಡೆಯಾಟದಲ್ಲಿ ಕಳಿಂಗ ರಾಜನ ಹಲ್ಲುಗಳನ್ನು ಮುರಿದು, ಅಸತ್ಯವನ್ನು (ಸಟೆಯನ್ನು) ನುಡಿದ ರುಕ್ಮಿಯನ್ನು ಪಗಡೆಯಯಾಟದ ಹಲಗೆಯಿಂದಲೇ ಹೊಡೆದು ಸಂಹರಿಸಿದನು.

೬೦-೬೧. ಶ್ರೀ ಕೃಷ್ಣನು ಪ್ರಾಗ್ಜ್ಯೋತಿಷ ಪುರವಾಸಿಗಳಾದ, ಹಯಗ್ರೀವನೇ ಮೊದಲಾದ ಅನೇಕ ದೈತ್ಯರನ್ನು ಸಂಹರಿಸಿ, ದೊಡ್ಡ ಗೊಂಡಾರಣ್ಯದಂತಿದ್ದ ನರಕಾಸುರನನ್ನೂ ಹಿಡಿದನು. ಅವನಿಂದ (ಕರ್ಣಾಭರಣಗಳನ್ನು) ತಾಟಂಕಗಳನ್ನು ತೆಗೆದುಕೊಂಡು, ದಿತಿದೇವಿಗೆ ಕೊಟ್ಟನು. ದೇವತೆಗಳೊಡನೆ ದೇವೇಂದ್ರನನ್ನು ಗೆದ್ದು, ಪಾರಿಜಾತವೃಕ್ಷವನ್ನು ತೆಗೆದುಕೊಂಡು ದ್ವಾರಾವತಿಯೆಂಬ ಪಟ್ಟಣಕ್ಕೆ ಬಂದನು.

ಕುರುಭಿಶ್ಚ ಧೃತಂ ಸಾಂಬಂ ರಾಮ ಏಕೋ ಮಹಾಬಲಃ ।
ಕುರೂಣಾಂ ಭಯಮುತ್ಪಾದ್ಯ ಮೋಚಯಾಮಾಸ ವೀರ್ಯವಾನ್ ॥ ೬೨ ॥

ಬಾಣಬಾಹುಬಲಂ ಛಿನ್ನಂ ಕೃಷ್ಣೇನ ಯುಧಿ ಧೀಮತಾ ।
ರಾಮೇಣ ತದ್ಬಲಂ ನೀತಂ ಕ್ಷಯಂ ಕೋಟಿಗುಣಂ ಕ್ಷಣಾತ್ ॥ ೬೩ ॥

ದೇವಾಪಕಾರೀ ರಾಮೇಣ ನಿಹತೋ ವಾನರೋ ಮಹಾನ್ ।
ತತೋಽರ್ಜುನಸ್ಯ ಸಾಹಾಯ್ಯಂ ಕುರ್ವತಾ ಕಂಸಶತ್ರುಣಾ ॥
ಸರ್ವಭೂತವಧಾದ್ರಾಜನ್ ಭುವೋ ಭಾರೋಽವರೋಪಿತಃ ।
ತೀರ್ಥಯಾತ್ರಾ ಕೃತಾ ತದ್ವದ್ರಾಮೇಣ ಜಗತಃ ಕೃತೇ ॥ ೬೪ ॥

---

೬೨ ಮಹಾಪರಾಕ್ರಮಶಾಲಿಯಾದ ಬಲರಾಮನೊಬ್ಬನೇ ಕೌರವರು ಸೆರೆಗೆಯ್ದಿದ್ದ ಸಾಂಬನನ್ನು ಕೌರವರಿಗೆ ಭಯವನ್ನುಂಟುಮಾಡಿ, ಶೂರನು ಬಿಡಿಸಿಕೊಂಡು ಬಂದನು.

೬೩. ಧೀಮಂತನಾದ ಶ್ರೀ ಕೃಷ್ಣನು ಯುದ್ಧದಲ್ಲಿ ಬಾಣಾಸುರನ ತೋಳ್ಬಲವನ್ನು ಕತ್ತರಿಸಿದನು, ರಾಮನು ಕೋಟಿಸಂಖ್ಯಾಕಗಳಾದ ಅವನ ಸೈನ್ಯವನ್ನು ಒಂದು ಚಣದಿಂದ ನಾಶಮಾಡಿದನು.

೬೪. ಬಲರಾಮನು ದೇವತೆಗಳಿಗೆ ಅಪಕಾರವನ್ನೆಸಗುತ್ತಲಿದ್ದ ದ್ವಿವಿದನೆಂಬ ಪೆರ್ಗೋಡನನ್ನು ಸಂಹರಿಸಿದನು. ಬಳಿಕ ಕಸಾಂತಕನಾದ ಶ್ರೀ ಕೃಷ್ಣನು ಅರ್ಜುನನಿಗೆ ಭಾರತ ಯುದ್ಧದಲ್ಲಿ ಸಹಾಯವನ್ನೆಸಗುತ್ತಾ, ಎಲೈ ರಾಜನೇ ! ಕೇಳು ; ದುಷ್ಟಜನರ ಸಂಹಾರದಿಂದ ಭೂಮಿಯ ಭಾರವನ್ನಿಳುಹಿದನು. ಅದೇ ತೆರನಾಗಿ ಬಲರಾಮನೂ ಲೋಕಕಲ್ಯಾಣಕ್ಕಾಗಿ ತೀರ್ಥಯಾತ್ರೆಯನ್ನು ಮಾಡಿದನು.

ರಾಮೇಣ ನಿಹತಾ ಯೇ ತು ತಾನ್ನ ಸಂಖ್ಯಾತುಮುತ್ಸಹೇ ।
ಏವಂ ತೌ ರಾಮಕೃಷ್ಣೌ ತು ಕೃತ್ವಾ ದುಷ್ಟವಧಂ ನೃಪ ॥ ೬೫ ॥

ಅವತಾರ್ಯ ಭುವೋ ಭಾರಂ ಜಗ್ಮತುಃ ಸ್ವೇಚ್ಛಯಾ ದಿವಮ್ ।
ಇತ್ಯೇತೌ ಕಥಿತೌ ಪ್ರಾದುರ್ಭಾವೌ ಮಯಾ ತವ ।
ಸಂಕ್ಷೇಪಾದ್ರಾಮಕೃಷ್ಣಸ್ಯ ಕಾಲ್ಕ್ಯಂ ಶೃಣು ಮಮಾಧುನಾ ॥ ೬೬ ॥

ಇತ್ಥಂ ಹಿ ಶಕ್ತೀ ಸಿತಕೃಷ್ಣರೂಪೇ
ಹರೇರನಂತಸ್ಯ ಮಹಾಬಲಾಢ್ಯೇ ।
ಕೃತ್ವಾ ತು ಭೂಮೇರ್ನೃಪ ಭಾರಹಾನಿಂ
ಪುನಶ್ಚ ವಿಷ್ಣುಂ ಪ್ರತಿ ಜಗ್ಮತುಸ್ತೇ ॥ ೬೭ ॥

೬೫–೬೬. ಎಲೈ ರಾಯನೇ ! ಕೇಳು ; ಬಲರಾಮನು ಎನಿತು ಅಸುರರನ್ನು ಸಂಹರಿಸಿದನೆಂದು ಎಣಿಸಲು ಉತ್ಸಾಹಗೊಳ್ಳಲಾರೆ ;(ಅನೇಕರನ್ನು ಸಂಹರಿಸಿದರು.) ಇಂತು ಆ ರಾಮಕೃಷ್ಣರು ದುಷ್ಟರನ್ನು ಸಂಹರಿಸಿ, ಭೂಮಿಯ ಹೊರೆಯನ್ನಿಳಿಸಿ, ತಮ್ಮ ಇಚ್ಛೆಯಿಂದ ತಮ್ಮ ಪರಂಧಾಮಕ್ಕೆ ತೆರಳಿದರು. ಇಂತು ಶ್ರೀರಾಮಕೃಷ್ಣರ ದಿವ್ಯವಾದ ಅವತಾರಗಳ ಚರಿತ್ರೆಯನ್ನು ನಿನಗೆ ಸಂಗ್ರಹದಿಂದ ಹೇಳಿದೆನು. ಇನ್ನು ಕಲ್ಕ್ಯವತಾರವನ್ನು ಹೇಳುವೆನು ; ಕೇಳು.

೬೭. ಎಲೈ ನೃಪನೇ ! ಇಂತು ಅನಂತನಾದ ಶ್ರೀಹರಿಯ ಪೂರ್ಣಸ್ವರೂಪಾಂಶಗಳಾದ, ಅತ್ಯಂತ ಬಲಪೂರ್ಣಗಳಾದ, ಶುಕ್ಲಕೃಷ್ಣಕೇಶ ರೂಪಗಳಾದ, ಶಕ್ತಿಗಳು ಪೊಡವಿಯ ಹೊರೆಯ ಹಾನಿಯನ್ನೆಸಗಿ, ಅವು ಪುನಃ ಶ್ರೀ ಮಹಾವಿಷ್ಣುವಿನ ಮೂಲರೂಪವನ್ನೇ ಸೇರಿದುವು. ”

ಇತಿ ಶ್ರೀ ನರಸಿಂಹಪುರಾಣೇ ರಾಮಕೃಷ್ಣಪ್ರಾದುರ್ಭಾವೋ ನಾಮ ತ್ರಿಪಂಚಾಶೋಽಧ್ಯಾಯಃ

ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭರದ್ವಾಜಾದಿಮುನಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ರಾಮ ಕೃಷ್ಣಾವತಾರ ಕಥಾ ನಿರೂಪಣವೆಂಬ ಐವತ್ತುಮೂರನೆಯ ಅಧ್ಯಾಯವು ಮುಗಿದುದು.

ಐವತ್ತುಮೂರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ 'ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ದ್ವಾಪರಯುಗದಲ್ಲಿ ದುರ್ಜನರ ಹೊರೆಯನ್ನು ಸಹಿಸಲಾರದೆ ಭೂದೇವಿಯು ಚತುರ್ಮುಖನಿಗೆ ಮರೆಹೊಗಲು, ಲೋಕಪಿತಾಮಹನು ಭೂದೇವಿಯಿಂದಲೂ, ರುದ್ರಾದಿ ದೇವಗಣದಿಂದಲೂ ಕೂಡಿಕೊಂಡು, ಕ್ಷೀರಸಮುದ್ರದ ಉತ್ತರದ ತಡಿಗೆ ಹೋಗಿ, ಶ್ರೀ ಮಹಾವಿಷ್ಣುವನ್ನು ಸ್ತುತಿಸಲು, ಅವನ ಸ್ತುತಿಗೆ ಭಗವಂತನಾದ ವಿಷ್ಣುವು ಪ್ರತ್ಯಕ್ಷನಾಗಿ, ಅವನ ಬಿನ್ನಪವನ್ನು ಕೇಳಿ, ತಾನು ಭೂಲೋಕದಲ್ಲಿ ತನ್ನ ಶುಕ್ಲ ಕೃಷ್ಣ ಕೇಶಗಳೆಂಬ ಸ್ವರೂಪಾಂಶ ಶಕ್ತಿಗಳನ್ನು ಕಳುಹಿಸಿ, ವಸುದೇವನಿಂದ ರೋಹಿಣೀ ದೇವಕಿಯರಲ್ಲಿ ಅವತರಿಸಿ, ಭೂಭಾರವನ್ನು ನೀಗುವುದಾಗಿ ಅಭಯ ವೀಯಲು, ಬ್ರಹ್ಮಾದಿದೇವತೆಗಳು ನಿಶ್ಚಿಂತರಾಗಿ, ತಂತಮ್ಮ ಧಾಮಂಗಳಿಗೆ ಹೋದರು.

ಬಳಿಕ ಭಗವಂತನು ಅಂತೆಯೇ ಭೂಮಿಯಲ್ಲಿ ವಸುದೇವನಿಂದ ರೋಹಿಣಿ ಯಲ್ಲಿ ಶುಕ್ಲಶಕ್ತಿಯು ಬಲರಾಮನಾಗಿಯೂ, ದೇವಕಿಯಲ್ಲಿ ಕೃಷ್ಣಶಕ್ತಿಯು ಶ್ರೀ ಕೃಷ್ಣನಾಗಿಯೂ ಅವತರಿಸಿ, ಬಾಲಕೇಳಿಯಲ್ಲಿಯೇ ದುಷ್ಟರಾದ ಪೂತನಾ, ಧೇನುಕ, ಅರ್ಜುನ, ಕೇಶಿ, ಕಾಳಿಯನಾಗ ಮೊದಲಾದ ರಕ್ಕಸರನ್ನೂ, ಚಾಣೂರ, ಮುಷ್ಟಿಕ, ಕಂಸಾದಿಗಳನ್ನೂ ಕೊಂದು, ಬಳಿಕ ಗೋಕುಲವನ್ನು ಗೋವರ್ಧನವ ನ್ನೆತ್ತಿ ಹಿಡಿದು, ಇಂದ್ರನ ಮಳೆಯಿಂದ ರಕ್ಷಿಸಿದರು.

ಬಲರಾಮನು ರೇವತಿಯನ್ನೂ, ಕೃಷ್ಣನು ರುಕ್ಮಿಣಿಯನ್ನೂ ಮದುವೆ ಮಾಡಿಕೊಂಡು, ಸಮುದ್ರದಲ್ಲಿ ದ್ವಾರಕೆಯೆಂಬ ಪುರಿಯನ್ನು ನಿರ್ಮಿಸಿ ಸುಖದಿಂದಿ ದ್ದರು.

ಬಳಿಕ ಪ್ರಾಗ್ಜ್ಯೋತಿಷದೊಡೆಯನಾದ ನರಕ ಬಾಣಾಸುರರೆಂಬುವರನ್ನು ಸಂಹರಿಸಿದು ದಲ್ಲದೆ, ಶಿಶುಪಾಲಾದಿಗಳನ್ನೂ, ಹಯಗ್ರೀವಾದಿಗಳನ್ನೂ ಸಂಹರಿಸಿದರು. ಅನಂತರ ಶ್ರೀ ಕೃಷ್ಣನು ಪಾಂಡವನಾದ ಅರ್ಜುನನಿಗೆ ಯುದ್ಧದಲ್ಲಿ ಸಹಾಯವೆಸಗುವ ನೆಪದಿಂದ ಭೂಭಾರಭೂತರಾದ ರಕ್ಕಸರನ್ನು ಸಂಹರಿಸಿ, ಕ್ಷಿತಿಯ ಹೊರೆಯನ್ನು ಕಡಿಮೆ ಮಾಡಿದನು.

ಬಲರಾಮನೂ, ಹಾಗೆಯೇ ದ್ವಿವಿದನೆಂಬ ದೇವ ವಿರೋಧಿ ಕೋಡಗನನ್ನು ಸಂಹರಿಸಿದನಲ್ಲದೆ, ಈ ಶ್ರೀ ಕೃಷ್ಣ ಕಾರ್ಯಕ್ಕೆ ನೆರವಾಗಲು ತೀರ್ಥಯಾತ್ರೆಯನ್ನು ಮಾಡಿದನು. ಇಂತು ಭಗವಂತನ ಶುಕ್ಲ ಕೃಷ್ಣಶಕ್ತಿಗಳವತರಿಸಿ ಭೂಭಾರವನ್ನಿಳುಹಿ, ಮರಳಿ ಶ್ರೀ ಮಹಾವಿಷ್ಣುವನ್ನು ಸೇರಿದುವು ; ' ಎಂದು ನಿರೂಪಿಸಿರುವುದನ್ನು ಶ್ರೀ ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇಂತು ಐವತ್ತುಮೂರನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಚತುಃಪಂಚಾಶೋಽಧ್ಯಾಯಃ

ಅಥ ಶ್ರೀ ಕಲ್ಕ್ಯವತಾರಕಥಾ ನಿರೂಪಣಮ್, ಕಿಂಚ ಕಲಿಲಕ್ಷಣ ಕೀರ್ತನಮ್.

॥ ಶ್ರೀ ಮಾರ್ಕಂಡೇಯ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಶೃಣು ರಾಜನ್ ಸಮಾಹಿತಃ ।
ಪ್ರಾದುರ್ಭಾವಂ ಹರೇಃ ಪುಣ್ಯಂ ಕಲ್ಕ್ಯಾಖ್ಯಂ ಪಾಪನಾಶನಮ್ ॥ ೧ ॥

ಐವತ್ತನಾಲ್ಕನೆಯ ಅಧ್ಯಾಯವು.

ಇನ್ನು ಕಲ್ಕ್ಯವತಾರ ಕಥಾನಿರೂಪಣೆಯು ಮತ್ತು ಕಲಿ ಲಕ್ಷಣ ಕೀರ್ತನೆಯು.

ಶ್ರೀ ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಇಂತು ನಿರೂಪಿಸುತ್ತಾನೆ :—

೧. "ಎಲೈ ರಾಯನೇ ! ಇನ್ನು ಮುಂದೆ ಪಾಪಗಳನ್ನು ಕಳೆಯುವ, ಪುಣ್ಯಪ್ರದವಾದ, ಶ್ರೀಹರಿಯ ಸ್ವರೂಪಾವತಾರವಾದ ಕಲ್ಕಿಯೆಂಬ ಅವತಾರದ ಚರಿತೆಯನ್ನು ಸಂಗ್ರಹದಿಂದ ಹೇಳುವೆನು ; ಸಮಾಧಾನವಾಗಿ ಕೇಳು.

ಕಲಿಕಾಲೇನ ರಾಜೇಂದ್ರ ನಷ್ಟೇ ಧರ್ಮೇ ಮಹೀತಲೇ ।
ವೃದ್ಧಿಂ ಗತೇ ತಥಾ ಪಾಪೇ ವ್ಯಾಧಿಸಂಪೀಡಿತೇ ಜನೇ ॥ ೨ ॥

ದೇವೈಃ ಸಂಪ್ರಾರ್ಥಿತೋ ವಿಷ್ಣುಃ ಕ್ಷೀರಾಬ್ಧೌ ಸ್ತುತಿಪೂರ್ವಕಮ್ ।
ಸಾಂಭಲಾಖ್ಯೇ ಮಹಾಗ್ರಾಮೇ ನಾನಾಜನಸಮಾಕುಲೇ ॥ ೩ ॥

ನಾಮ್ನಾ ವಿಷ್ಣುಯಶಃ ಪುತ್ರಃ ಕಲ್ಕೀ ರಾಜಾ ಭವಿಷ್ಯತಿ ।
ಅಶ್ವಮಾರುಹ್ಯ ಖಡ್ಗೇನ ಮ್ಲೇಚ್ಛಾನುತ್ಸಾದಯಿಷ್ಯತಿ ॥ ೪ ॥

ಮ್ಲೇಚ್ಛಾನ್ ಸಮಸ್ತಾನ್ ಕ್ಷಿತಿನಾಶಭೂತಾನ್
ಹತ್ವಾ ಸ ಕಲ್ಕೀ ಪುರುಷೋತ್ತಮಾಂಶಃ ।
ಕೃತ್ವಾ ಚ ಯಾಗಂ ಬಹುಕಾಂಚನಾಖ್ಯಂ
ಸಂಸ್ಥಾಪ್ಯ ಧರ್ಮಂ ದಿವಮಾರುರೋಹ ॥ ೫ ॥

೨-೪. 'ಎಲೈ ರಾಜೇಂದ್ರನೇ! ಭೂತಲದಲ್ಲಿ ಕಲಿಕಾಲದಿಂದ ಧರ್ಮವು ನಾಶವಾಗಿ, ಹಾಗೆಯೇ ಪಾಪವು ವೃದ್ಧಿಯನ್ನೈದಲು, ಜನರೆಲ್ಲರೂ ರೋಗಗ್ರಸ್ತರಾಗಿ ಬಾಧೆಗೊಂಡಿರಲು, ದೇವತೆಗಳು ಪಾಲ್ಗಡಲ ತಡಿಗೆ ಹೋಗಿ, ಶ್ರೀಮಹಾವಿಷ್ಣುವನ್ನು ಸ್ತುತಿಸಿ, ಪ್ರಾರ್ಥಿಸಿಕೊಳ್ಳಲು, ಶ್ರೀಮಹಾವಿಷ್ಣುವು ಅನೇಕ ಜನರಿಂದ ಕೂಡಿದ ಸಾಂಭಲವೆಂದು ಪ್ರಸಿದ್ಧವಾದ ಮಹಾಗ್ರಾಮದಲ್ಲಿ ವಿಷ್ಣುಯಶನೆಂಬವನ ಮಗನಾಗಿ, ಹೆಸರಿನಿಂದ ಕಲ್ಕಿಯೆಂದು ಅವತರಿಸಿ, ದೊರೆಯಾಗುವನು. ಅವನು ಕುದುರೆಯನ್ನೇರಿ, ಕಡುಗದಿಂದ ಮ್ಲೇಚ್ಛರನ್ನು ಸಂಹರಿಸುವನು.

೫. ಶ್ರೀ ಪುರುಷೋತ್ತಮ ಸ್ವರೂಪಾಂಶವು ಕಲ್ಕಿಯಾಗಿ (ಅವತರಿಸಿ) ಅಭಿವ್ಯಕ್ತನಾಗಿ, ಭೂಮಿಯ ನಾಶಕ್ಕೆ ಕಾರಣರಾಗಿದ್ದ, ಮ್ಲೇಚ್ಛರೆಲ್ಲರನ್ನೂ ನಾಶಮಾಡಿ, ಬಹುಕಾಂಚನವೆಂಬ ಹೆಸರಿನ ಯಾಗವನ್ನು ಬೇಳ್ದು, ಧರ್ಮವನ್ನು ಮತ್ತೆ ಸಂಸ್ಥಾಪನಮಾಡಿ, ಪರಂಧಾಮಕ್ಕೆ ಹೋದನು.

ದಶಾವತಾರಾಃ ಕಥಿತಾಸ್ತವೈವ
ಹರೇರ್ಮಯಾ ಪಾರ್ಥಿವ ಪಾಪಹಂತುಃ ।
ಇಮಂ ಸದಾ ಯಸ್ತು ನೃಸಿಂಹಭಕ್ತಃ
ಶೃಣೋತಿ ನಿತ್ಯಂ ಸ ತು ಯಾತಿ ವಿಷ್ಣುಮ್ ॥ ೧ ॥

॥ ರಾಜೋವಾಚ ॥

ತವ ಪ್ರಸಾದಾದ್ವಿಪ್ರೇಂದ್ರ ಪ್ರಾದುರ್ಭಾವಾಃ ಶ್ರುತಾ ಮಯಾ ।
ನಾರಾಯಣಸ್ಯ ದೇವಸ್ಯ ಶೃಣ್ವತಾಂ ಕಲ್ಮಷಾಪಹಃ ॥ ೨ ॥

ಕಲಿಂ ವಿಸ್ತರತೋ ಬ್ರೂಹಿ ತ್ವಂ ಹಿ ಸರ್ವವಿದಾಂ ವರ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ಮುನಿಸತ್ತಮ ॥ ೩ ॥

ಕಿಮಾಹಾರಾಃ ಕಿಮಾಚಾರಾ ಭವಿಷ್ಯಂತಿ ಕಲೌ ಯುಗೇ ।

॥ ಸೂತ ಉವಾಚ ॥

ಶೃಣುಧ್ವಮೃಷಯಃ ಸರ್ವೇ ಭಾರದ್ವಾಜೇನ ಸಂಯುತಾಃ ॥ ೪ ॥

---

೧. ಎಲೈ ಪೊಡವಿಯೊಡೆಯನೇ ! ನಾನು ನಿನಗೆ ಪಾಪನಾಶವನ್ನು ಮಾಡ ತಕ್ಕ ಶ್ರೀಹರಿಯ ಹತ್ತು ಅವತಾರ ಚರಿತ್ರೆಗಳನ್ನೂ ಹೇಳಿದೆನು. ಶ್ರೀ ನರಸಿಂಹ ಭಕ್ತನಾದವನು ಯಾವನು ಯಾವಾಗಲೂ ಈ ದಶಾವತಾರ ಚರಿತ್ರೆಯನ್ನು ನಿತ್ಯ ದಲ್ಲಿಯೂ ಕೇಳುತ್ತಾನೆಯೋ, ಅವನು ಶ್ರೀ ಮಹಾವಿಷ್ಣುವನ್ನು ಹೊಂದುತ್ತಾನೆ.

ರಾಯನು ಹೇಳುತ್ತಾನೆ :—

೨ ಎಲೈ ಬ್ರಾಹ್ಮಣೋತ್ತಮನಾದ ಮಾರ್ಕಂಡೇಯನೇ ! ಕೇಳುವವರ ಪಾಪಗಳನ್ನು ಕಳೆಯುವ, ದೇವನಾದ ಶ್ರೀಮನ್ನಾರಾಯಣನ ಅವತಾರಗಳನ್ನು ನಾನು ಕೇಳಿದೆನು.

೩–೧೦ ಎಲೈ ಎಲ್ಲವನ್ನೂ ತಿಳಿದವರಲ್ಲಿ ಉತ್ತಮನಾದವನೇ ! ನೀನು ಕಲಿಯುಗದ ಪರಿಸ್ಥಿತಿಯನ್ನು ವಿಸ್ತಾರದಿಂದರುಹು, ಎಲೈ ಮುನಿಶ್ರೇಷ್ಠನೇ ! ಕಲಿ

ಸರ್ವೇ ಧರ್ಮಾ ವಿನಶ್ಯಂತಿ ಕೃಷ್ಣೇ ಕೃಷ್ಣತ್ವಮಾಗತೇ ।
ತಸ್ಮಾತ್ಕಲಿರ್ಮಹಾಘೋರಃ ಸರ್ವಪಾಪಸ್ಯ ಸಾಧಕಃ ॥ ೧೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಶೂದ್ರಾ ಧರ್ಮಪರಾಙ್ಮುಖಾಃ ।
ಘೋರೇ ಕಲಿಯುಗೇ ಪ್ರಾಪ್ತೇ ದ್ವಿಜಾ ದೇವಪರಾಙ್ಮುಖಾಃ ॥ ೧೧ ॥

ವ್ಯಾಜಧರ್ಮರತಾಸ್ಸರ್ವೇ ದಂಭಾಚಾರಪರಾಯಣಾಃ ।
ಅಸೂಯಾನಿರತಾಶ್ಚೈವ ವೃಥಾಹಂಕಾರದೂಷಿತಾಃ ॥ ೧೨ ॥

ಯುಗದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರುಗಳು ಆವ ಆಹಾರವನ್ನು ತೆಗೆದು ಕೊಳ್ಳುವರು? ಆವ ಆಚಾರವುಳ್ಳವರಾಗುವರು?"

ಎಂದು ಸಹಸ್ರಾನೀಕ ರಾಯನು ಮಾರ್ಕಂಡೇಯ ಮುನಿಯನ್ನು ಕೇಳಿದನು.

ಸೂತರು ಇಂತು ಭರದ್ವಾಜಾದಿಗಳಿಗೆ ಹೇಳುತ್ತಾರೆ :—

"ಎಲೈ ಭರದ್ವಾಜನೊಡಗೂಡಿದ ಮುನಿಗಳೇ! ಕೇಳಿರಿ; ಶ್ರೀ ಕೃಷ್ಣನು ಪರಂಧಾಮಕ್ಕೆ ಹೋಗಿ, ಮೂಲಾವತಾರವಾದ ವಿಷ್ಣುತ್ವವನ್ನು ಹೊಂದಲು, ಧರ್ಮಗಳೆಲ್ಲವೂ ಅಳಿಯುವುವು; ಅಲ್ಲಿಂದಾಚೆಗೆ ಸಕಲ ಪಾಪಸಾಧಕವಾದ ಅತಿ ಭಯಂಕರವಾದ ಕಲಿಗಾಲವು ಪ್ರಾಪ್ತವಾಗುವುದು.

೧೧. ಭಯಂಕರವಾದ ಕಲಿಗಾಲವು ಇಂತು ಬರಲು, ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು ಸ್ವಸ್ವ ಧರ್ಮವನ್ನು ಹಳಿಯುವವರೂ, ಧರ್ಮವಿರೋಧಿಗಳೂ ಆಗುವರು; ಬ್ರಾಹ್ಮಣರು ದೇವರನ್ನು ಹಳಿಯುವವರೂ, ದೇವ ವಿರೋಧಿಗಳೂ ಆಗುವರು.

೧೨. ಎಲ್ಲರೂ ವ್ಯಾಜದಿಂದ (ಹುಸಿಯಿಂದ) ಧರ್ಮದಲ್ಲಿ ತೊಡಗಿದವರೂ, ತೋರಿಕೆಯಿಂದ ಆಚಾರದಲ್ಲಿ ಆಸಕ್ತರಾದವರೂ, ಅಸೂಯೆಯಲ್ಲಿ ನಿರತರೂ, ನಿಷ್ಫಲವಾದ ಅಹಂಕಾರದಿಂದ ದೂಷಿತರೂ ಆಗುವರು.

ಸರ್ವೈಃ ಸಂಕ್ಷಿಪ್ಯತೇ ಸತ್ಯಂ ನರೈಃ ಪಂಡಿತಗರ್ವಿತೈಃ ।
ಅಹಮೇವಾಧಿಕ ಇತಿ ಸರ್ವ ಏವ ವದಂತಿ ವೈ ॥ ೧೩ ॥

ಅಧರ್ಮಲೋಲುಪಾಃ ಸರ್ವೇ ತಥಾಽನ್ಯೇಷಾಂ ಚ ನಿಂದಕಾಃ ।
ಅತಃ ಸ್ವಲ್ಪಾಯುಷಃ ಸರ್ವೇ ಭವಿಷ್ಯಂತಿ ಕಲೌ ಯುಗೇ ॥ ೧೪ ॥

ಅಲ್ಪಾಯುಷ್ಟ್ವಾನ್ಮನುಷ್ಯಾಣಾಂ ನ ವಿದ್ಯಾಗ್ರಹಣಂ ದ್ವಿಜಾಃ ।
ವಿದ್ಯಾಗ್ರಹಣಶೂನ್ಯತ್ವಾದಧರ್ಮೋ ವರ್ತತೇ ಪುನಃ ॥ ೧೫ ॥

ಬ್ರಾಹ್ಮಣಾದ್ಯಾಸ್ತಥಾ ವರ್ಣಾಃ ಸಂಕೀರ್ಯಂತೇ ಪರಸ್ಪರಮ್ ।
ಕಾಮಕ್ರೋಧಪರಾ ಮೂಢಾ ವೃಥಾ ಸಂತಾಪಪೀಡಿತಾಃ ॥ ೧೬ ॥

---

೧೩. ವಿಶೇಷವಾದ ಪಾಂಡಿತ್ಯವಿದೆಯೆಂದು ದುರಹಂಕಾರಗೊಂಡು, ಎಲ್ಲ ಮಾನವರೂ ಸತ್ಯವನ್ನು ಬಿಡುತ್ತಾರೆ. ನಾನೇ ದೊಡ್ಡವನೆಂದು ಎಲ್ಲರೂ ಹೇಳುತ್ತಾರೆ.

೧೪. ಕಲಿಯುಗದಲ್ಲಿ ಎಲ್ಲರೂ ಅಧರ್ಮದಲ್ಲಿ ರತಿಯುಳ್ಳವರು; ಹಾಗೆಯೇ ಇತರರನ್ನು ನಿಂದಿಸತಕ್ಕವರು; ಆದುದರಿಂದ ಎಲ್ಲರೂ ಅಲ್ಪಾಯುವುಳ್ಳವರಾಗುವರು. (ಬಹುಕಾಲ ಬದುಕದೇ ಕಿರಿಯಪ್ರಾಯದಲ್ಲಿಯೇ ಸಾಯುವರು.)

೧೫. ಎಲೈ ಬ್ರಾಹ್ಮಣರೇ ! ಕೇಳಿರಿ; ಮಾನವರು ಸ್ವಲ್ಪವೇ ಆಯುಸ್ಸುಳ್ಳವರಾದುದರಿಂದ ವಿದ್ಯೆಯನ್ನು ಕಲಿಯಲಾರರು. (ಜ್ಞಾನವನ್ನು ಸಂಪಾದಿಸಲಾರರು.) ವಿದ್ಯೆಯನ್ನು ಗ್ರಹಿಸದೆ ಇರುವುದರಿಂದ ಪುನಃ ಅಧರ್ಮಾಚರಣೆಯುಂಟಾಗುತ್ತದೆ.

೧೬. ಹಾಗೆಯೇ ಬ್ರಾಹ್ಮಣಾದಿ ವರ್ಣಗಳು ಒಂದರೊಡನೊಂದು (ಅನ್ಯೋನ್ಯವಾಗಿ) ಬೆರತು ಹೋಗುತ್ತವೆ. (ಮಿಶ್ರವಾಗುತ್ತವೆ.) ವಿಷಯಾಭಿಲಾಷೆ, ಅದು ದೊರೆಯದೆ ಸಿಟ್ಟು–ಇವುಗಳಲ್ಲಿ ಆಸಕ್ತರಾದ ಅವಿವೇಕಿಗಳು ನಿರರ್ಥಕವಾಗಿ ದುಃಖದಿಂದ ಬಾಧೆಗೊಳ್ಳುವರಾಗುತ್ತಾರೆ.

ಬದ್ಧವೈರಾ ಭವಿಷ್ಯಂತಿ ಪರಸ್ಪರವಧೇಪ್ಸವಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸರ್ವೇ ಧರ್ಮಪರಾಙ್ಮುಖಾಃ ॥ ೧೭ ॥

ಶೂದ್ರತುಲ್ಯಾ ಭವಿಷ್ಯಂತಿ ತಪಃ ಸತ್ಯವಿವರ್ಜಿತಾಃ ।
ಉತ್ತಮಾ ನೀಚತಾಂ ಯಾಂತಿ ನೀಚಾಶ್ಚೋತ್ತಮತಾಂ ತಥಾ ॥ ೧೮ ॥

ರಾಜಾನೋ ದ್ರವ್ಯನಿರತಾಸ್ತಥಾ ಲೋಭಪರಾಯಣಾಃ ।
ಧರ್ಮಕಂಚುಕಸಂವೀತಾ ಧರ್ಮವಿಧ್ವಂಸಕಾರಿಣಃ ॥ ೧೯ ॥

ಘೋರೇ ಕಲಿಯುಗೇ ಪ್ರಾಪ್ತೇ ಸರ್ವಧರ್ಮಸಮನ್ವಿತೇ ।
ಯೋ ಯೋಽಶ್ವರಥನಾಗಾಢ್ಯಃ ಸ ಸ ರಾಜಾ ಭವಿಷ್ಯತಿ ॥ ೨೦ ॥

---

೧೭. ಎಲ್ಲರೂ ಒಬ್ಬರನ್ನೊಬ್ಬರು ಕೊಲ್ಲಲೆಳಸಿ, ದ್ವೇಷವನ್ನು ತಾಳಿದವರಾಗುವರು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು- ಈ ಎಲ್ಲರೂ ಧರ್ಮವಿರೊಧಿಗಳೂ, ಧರ್ಮ ನಿಂದಕರೂ ಆಗುವರು.

೧೮. ತಪಸ್ಸು, ಸತ್ಯ,- ಇವುಗಳಿಲ್ಲದವರಾಗಿ ಶೂದ್ರರಿಗೆಣೆಯಾಗುವರು. ಉತ್ತಮಜಾತಿಯವರು ನೀಚತ್ವವನ್ನೂ, ನೀಚಜಾತಿಯವರು ಉತ್ತಮತ್ವವನ್ನೂ ಹೊಂದುವರು.

೧೯. ದೊರೆಗಳು ಹಣದಲ್ಲಿ ಅತ್ಯಾಸೆಯುಳ್ಳವರೂ, ಹಾಗೆಯೇ ಲೋಭದಲ್ಲಿ ಕಡುರುಚಿಯುಳ್ಳವರೂ, ಧರ್ಮವೆಂಬ ಅಂಗಿಯನ್ನು ತೊಟ್ಟವರೂ, ಧರ್ಮವನ್ನು ನಾಶಗೊಳಿಸುವವರೂ ಆಗುತ್ತಾರೆ.

೨೦. ಸಕಲ ಧರ್ಮಗಳ ಕಲಬೆರಕೆಯಾದ, ಭಯಂಕರವಾದ ಕಲಿಯುಗವು ಬರಲು, ಯಾವಯಾವನು, ಕುದುರೆ, ತೇರು, ಆನೆ- ಇವುಗಳಿಂದ ಸಂಪನ್ನನಾಗಿರುವನೋ, ಅವನವನು ದೊರೆಯಾಗುವನು.

ಪಿತ್ರೄನ್ ಪುತ್ರಾ ನಿಯೋಕ್ಷ್ಯಂತಿ ವಧ್ವಃ ಶ್ವಶ್ರೂಶ್ಚ ಕರ್ಮಸು ।
ಪತೀನ್ ಪುತ್ರಾನ್ ವಂಚಯಿತ್ವಾ ಗಮಿಷ್ಯಂತಿ ಸ್ತ್ರಿಯೋಽನ್ಯತಃ ॥ ೨೧ ॥

ಪುರುಷಾಲ್ಪಂ ಬಹುಸ್ತ್ರೀಕಂ ಶ್ವಬಾಹುಲ್ಯಂ ಗವಾಂ ಕ್ಷಯಃ ।
ಧನಾನಿ ಶ್ಲಾಘನೀಯಾನಿ ಸತಾಂ ವೃತ್ತಮಪೂಜಿತಮ್ ॥ ೨೨ ॥

ಖಂಡವರ್ಷೀ ಚ ಪರ್ಜನ್ಯಃ ಪಂಥಾನಸ್ತಸ್ಕರಾವೃತಾಃ ।
ಸರ್ವಃ ಸರ್ವಂ ಚ ಜಾನಾತಿ ವೃದ್ಧಾನನುಪಸೇವ್ಯ ಚ ॥ ೨೩ ॥

ನ ಕಶ್ಚಿದಕವಿರ್ನಾಮ ಸುರಾಪಾ ಬ್ರಹ್ಮವಾದಿನಃ ।
ಕಿಂಕರಾಶ್ಚ ಭವಿಷ್ಯಂತಿ ಶೂದ್ರಾಣಾಂ ಚ ದ್ವಿಜಾತಯಃ ॥ ೨೪ ॥

---

೨೧. ಗಂಡುಮಕ್ಕಳು ತಂದೆಗಳನ್ನೂ, ಸೊಸೆಯರು ಅತ್ತೆಯಂದಿರನ್ನೂ ಕೆಲಸವಲ್ಲಿ (ನಿಯೋಗಿಸುವರು.)ಅಪ್ಪಣೆಮಾಡುವರು. ಮಡದಿಯರು ಗಂಡಂದಿರನ್ನೂ, ಮಕ್ಕಳನ್ನೂ ಮೋಸಗೊಳಿಸಿ, ಬೇರೆ (ಪುರಷರ) ಎಡಗೆ ಹೋಗುವರು.

೨೨. ಗಂಡುಸರು ಕಡಿಮೆ ಸಂಖ್ಯೆಯಿಂದಿರುವರು; ಹೆಂಗುಸರು ಸಂಖ್ಯೆಯಿಂದ ಹೆಚ್ಚಿರುವರು; ನಾಯಿಗಳು ಹೆಚ್ಚುವುವು; ಹಸುಗಳು ಕ್ಷೀಣವಾಗಿ ಹೋಗುವುವು; ಧನವೇ ಶ್ಲಾಘನೆಗೆ ಕಾರಣವಾಗಿರತಕ್ಕುದು; ಸಜ್ಜನರ ನಡತೆಗೆ ಗೌರವವಿಲ್ಲವು.

೨೩. ಪರ್ಜನ್ಯನು ಖಂಡವೃಷ್ಟಿಯನ್ನು ಕರೆಯುವನು; ಹಾದಿಗಳು ಕಳ್ಳರಿಂದ ತುಂಬಿರುತ್ತವೆ; ದೊಡ್ಡವರನ್ನು ಸೇವಿಸದೆ, ಎಲ್ಲರೂ ಎಲ್ಲವನ್ನೂ (ತಿಳಿದವರಂತೆ ನಟಿಸುತ್ತಾರೆ.) ತಿಳಿಯುತ್ತಾರೆ.

೨೪. ಕವಿಯಲ್ಲದವನಾವನೂ ಇರುವುದಿಲ್ಲ; (ಎಲ್ಲರೂ ಕವಿತೆಯನ್ನು ಮಾಡುವವರೇ-) ಸುರೆಯನ್ನು ಕುಡಿವವರೇ ಬ್ರಹ್ಮತತ್ತ್ವವನ್ನುಪದೇಶಿಸುವವರು: ಬ್ರಾಹ್ಮಣರು ಶೂದ್ರರಿಗೆ ಸೇವಕರಾಗುವರು.

ದ್ವಿಷಂತಿ ಪಿತರಂ ಪುತ್ರಾ ಗುರುಂ ಶಿಷ್ಯಾ ದ್ವಿಷಂತಿ ಚ ।
ಪತಿಂ ಚ ವನಿತಾ ದ್ವೇಕ್ಷ್ಟಿ ಕೃಷ್ಣೇ ಕೃಷ್ಣತ್ವಮಾಗತೇ ॥ ೨೫ ॥

ಲೋಭಾಭಿಭೂತಮನಸಃ ಸರ್ವೇ ದುಷ್ಕರ್ಮಶೀಲಿನಃ ।
ಪರಾನ್ನಲೋಲುಪಾ ನಿತ್ಯಂ ಭವಿಷ್ಯಂತಿ ದ್ವಿಜಾತಯಃ ॥ ೨೬ ॥

ಪರಸ್ತ್ರೀನಿರತಾಃ ಸರ್ವೇ ಪರದ್ರವ್ಯಪರಾಯಣಾಃ ।
ಘೋರೇ ಕಲಿಯುಗೇ ಪ್ರಾಪ್ತೇ ನರಂ ಧರ್ಮಪರಾಯಣಮ್ ॥ ೨೭ ॥

ಅಸೂಯಾನಿರತಾಃ ಸರ್ವೇ ಉಪಹಾಸಂ ಪ್ರಕುರ್ವತೇ ।
ನ ವ್ರತಾನಿ ಚರಿಷ್ಯಂತಿ ಬ್ರಾಹ್ಮಣಾ ವೇದನಿಂದಕಾಃ ॥ ೨೮ ॥

---

೨೫. ಪುತ್ರರು ತಂದೆಯವರನ್ನೂ, ಶಿಷ್ಯರು ಗುರುಗಳನ್ನೂ ದ್ವೇಷಿಸುತ್ತಾರೆ; ಶ್ರೀಕೃಷ್ಣಕೇಶನು ಕೃಷ್ಣರೂಪವಾದ ಮೂಲರೂಪವನ್ನು ಹೊಂದಲು (ಕಲಿಗಾಲ ಬರಲು) ಮಡದಿಯು ಗಂಡನನ್ನು ದ್ವೇಷಿಸುವಳು.

೨೬. ಎಲ್ಲರೂ ಲೋಭ (ಹಣದ ಅತ್ಯಾಸೆ) ದಿಂದ ವ್ಯಾಪಿಸಿದ ಮನಸ್ಸುಳ್ಳವರೂ, ಕೆಟ್ಟ ಕೆಲಸವನ್ನು ಮಾಡುವ ಸ್ವಭಾವದವರೂ ಆಗುವರು; ಬ್ರಾಹ್ಮಣರು ನಿತ್ಯದಲ್ಲಿಯೂ ಹೆರರ ಅನ್ನದಲ್ಲಿ ರುಚಿಯುಳ್ಳವರಾಗುವರು.

೨೭. ಘೋರವಾದ ಕಲಿಗಾಲವು ಬರಲು, ಎಲ್ಲರೂ ಹೆರರ ಮಡದಿಯರಲ್ಲಿ ನಿರತರೂ, ಹೆರರ ಹಣದಲ್ಲಿ ಆಸಕ್ತರೂ ಆಗುವರು. ಇಂತಹ ನರನನ್ನೇ ಧರ್ಮಪರಾಯಣನೆಂದು ಹೇಳುವರು.

೨೮. ಎಲ್ಲರೂ ಕರುಬುವುದರಲ್ಲಿ ಮನವುಳ್ಳವರಾಗಿ, ಉಪಹಾಸವನ್ನು ಮಾಡುವರು; ಬ್ರಾಹ್ಮಣರೂ ವೇದವನ್ನು ಹಳಿಯುವವರಾಗಿ, ವ್ರತಗಳನ್ನು ಅನುಷ್ಠಿಸುವುದಿಲ್ಲ.

ನ ಯಕ್ಷ್ಯಂತಿ ನ ಹೋಷ್ಯಂತಿ ಹೇತುವಾದೈರ್ವಿಕುತ್ಸಿತಾಃ ।
ದ್ವಿಜಾಃ ಕುರ್ವಂತಿ ದಂಭಾರ್ಥಂ ಪಿತೃಯಜ್ಞಾದಿಕಾಃ ಕ್ರಿಯಾಃ ॥ ೨೯ ॥

ನ ಪಾತ್ರೇಷ್ವೇವ ದಾನಾನಿ ಕುರ್ವಂತಿ ಚ ನರಾಸ್ತಥಾ ।
ಕ್ಷೀರೋಪಾಧಿನಿಮಿತ್ತೇನ ಗೋಷು ಪ್ರೀತಿಂ ಪ್ರಕುರ್ವತೇ ॥ ೩೦ ॥

ಬಧ್ನಂತಿ ಚ ದ್ವಿಜಾನೇವ ಧನಾರ್ಥಂ ರಾಜಕಿಂಕರಾಃ ।
ದಾನಯಜ್ಞಜಪಾದೀನಾಂ ವಿಕ್ರೀಣಂತೇ ಫಲಂ ದ್ವಿಜಾಃ ॥ ೩೧ ॥

ಪ್ರತಿಗ್ರಹಂ ಪ್ರಕುರ್ವಂತಿ ಚಂಡಾಲಾದ್ಯೈರಪಿ ದ್ವಿಜಾಃ ।
ಕಲೇಃ ಪ್ರಥಮಪಾದೇಽಪಿ ವಿನಿಂದಂತಿ ಹರಿಂ ನರಾಃ ॥ ೩೨ ॥

---

೨೯. ಹೇತುವಾದಗಳಿಂದ (ಎಲ್ಲದಕ್ಕೂ ಕಾರಣವನ್ನು ಕೇಳುವವಾದಗಳಿಂದ) ವಿಶೇಷವಾಗಿ ನೀಚರಾಗಿ ಯಾಗವನ್ನು ಬೇಳುವುದಿಲ್ಲ; ಹೋಮವನ್ನೆಸಗುವುದಿಲ್ಲ. ಬ್ರಾಹ್ಮಣರು ತೋರಿಕೆಗಾಗಿ ಪಿತೃಯಜ್ಞ (ಶ್ರಾದ್ಧ) ವೇ ಮೊದಲಾದ ಕರ್ಮವನ್ನಾಚರಿಸುವರು.

೩೦. ಮಾನವರು ಪಾತ್ರಗಳಲ್ಲಿ ದಾನವನ್ನು ನೀಡುವುದಿಲ್ಲ. ಹಾಲುಕೊಡುವ ನಿಮಿತ್ತದಿಂದ (ಅದು ತಮಗೆ ಬೇಕಾಗಿರುವುದರಿಂದ) ಹಸುಗಳಲ್ಲಿ ಪ್ರೀತಿಯನ್ನು ಮಾಡುತ್ತಾರೆ.

೩೧. ರಾಜಭಟರು ಹಣದ ಸಲುವಾಗಿ, ಬ್ರಾಹ್ಮಣರನ್ನೇ ಕಟ್ಟಿಹಾಕುತ್ತಾರೆ. ದ್ವಿಜರು (ಬ್ರಾಹ್ಮಣರು) ದಾನ ಜಪ ಯಜ್ಞಗಳೇ ಮೊದಲಾದುವುಗಳ ಫಲವನ್ನು ಕ್ರಯಕ್ಕೆ ಮಾರಿಕೊಳ್ಳುತ್ತಾರೆ.

೩೨. ಬ್ರಾಹ್ಮಣರು ಚಂಡಾಲರೇ ಮೊದಲಾದವರಿಂದ ಪ್ರತಿಗ್ರಹವನ್ನು (ದಾನಸ್ವೀಕಾರವನ್ನು) ಮಾಡುತ್ತಾರೆ. ಮಾನವರು ಕಲಿಯುಗದ ಮೊದಲನೆ ಪಾದದಲ್ಲಿಯೇ ಶ್ರೀ ಹರಿಯನ್ನು ಹಳಿಯುತ್ತಾರೆ.

ಯುಗಾಂತೇ ಚ ಹರೇರ್ನಾಮ ನೈವ ಕಶ್ಚಿತ್ಸ್ಮರಿಷ್ಯತಿ ।
ಶೂದ್ರಸ್ತ್ರೀಸಂಗನಿರತಾ ವಿಧವಾಸಂಗಲೋಲುಪಾಃ ॥ ೩೩ ॥

ಶೂದ್ರಾನ್ನಭೋಗನಿರತಾ ಭವಿಷ್ಯಂತಿ ಕಲೌ ದ್ವಿಜಾಃ ।
ನ ಚ ದ್ವಿಜಾತಿಶುಶ್ರೂಷಾಂ ನ ಸ್ವಧರ್ಮಪ್ರವರ್ತನಮ್ ॥ ೩೪ ॥

ಕರಿಷ್ಯಂತಿ ತದಾ ಶೂದ್ರಾ ಪ್ರವ್ರಜ್ಯಾಲಿಂಗಿನೋಽಧಮಾಃ ।
ಸುಖಾಯ ಪರಿವೀತಾಶ್ಚ ಜಟಿಲಾ ಭಸ್ಮಧೂರ್ಧರಾಃ ॥ ೩೫ ॥

ಶೂದ್ರಾ ಧರ್ಮಾನ್ ಪ್ರವಕ್ಷ್ಯಂತಿ ಕೂಟಬುದ್ಧಿವಿಶಾರದಾಃ ।
ಏತೇ ಚಾನ್ಯೇ ಚ ಬಹವಃ ಪಾಷಂಡಾ ವಿಪ್ರಸತ್ತಮಾಃ ॥ ೩೬ ॥

೩೩-೩೪. ಕಲಿಯುಗದ ಕೊನೆಗಾಲದಲ್ಲಿ ಯಾವನೂ ಶ್ರೀ ಹರಿಯನ್ನು ಸ್ಮರಿಸುವುದಿಲ್ಲ. ಕಲಿಯಲ್ಲಿ ದ್ವಿಜರು (ಬ್ರಾಹ್ಮಣರು) ಶೂದ್ರರ ಹೆಣ್ಣುಗಳಲ್ಲಿ ನಿರತರೂ, ರಂಡೆಯರ ಸಂಗದಲ್ಲಿ ಅತ್ಯಾಸೆಯುಳ್ಳವರೂ, ಶೂದ್ರರ ಅನ್ನದ ಸುಖದಲ್ಲಿ ನಿರತರೂ ಆಗುವರು; ಶೂದ್ರರು ಬ್ರಾಹ್ಮಣರ ಸೇವೆಯನ್ನು ಮಾಡುವುದಿಲ್ಲ; ತಮ್ಮ ಧರ್ಮದಲ್ಲಿ ನಡೆದು ಕೊಳ್ಳುವುದೂ ಇಲ್ಲ.

೩೫. ಎಲೈ ಬ್ರಾಹ್ಮಣಶ್ರೇಷ್ಠರೇ ! ಆಗ ನೀಚರಾದ ಶೂದ್ರರು ಸಂನ್ಯಾಸ ಚಿಹ್ನೆಯನ್ನು ತಾಳಿದವರಾಗಿ, ಸುಖದ ಸಲುವಾಗಿ ಜನರಿಂದ ವ್ಯಾಪ್ತರಾಗಿ, ಜಟೆಯುಳ್ಳವರೂ, ಭಸ್ಮದ ಹುಡಿಯನ್ನು ಬಳಿದುಕೊಂಡವರೂ ಆಗುವರು.

೩೬. ಮೋಸ ಬುದ್ಧಿಯಲ್ಲಿ ನಿಪುಣರಾದ ಶೂದ್ರರು ಧರ್ಮವನ್ನು ಬೋಧಿಸುವವರಾಗುತ್ತಾರೆ. ಇವರೂ ಇನ್ನೂ ಹೆರರೂ-ಅನೇಕರು ಪಾಷಂಡರು ಎನಿಸಿಕೊಂಡವರು ಇರುವರು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಭವಿಷ್ಯಂತಿ ಕಲೌ ಯುಗೇ ।
ಗೀತ ವಾದ್ಯರತಾ ವಿಪ್ರಾ ವೇದವಾದಪರಾಙ್ಮುಖಾಃ ॥ ೩೭ ॥

ಭವಿಷ್ಯಂತಿ ಕಲೌ ಪ್ರಾಪ್ತೇ ಶೂದ್ರಮಾರ್ಗಪ್ರವರ್ತಿನಃ ।
ಅಲ್ಪದ್ರವ್ಯಾ ವೃಥಾಲಿಂಗಾ ವೃಥಾಹಂಕಾರದೂಷಿತಾಃ ॥ ೩೮ ॥

ಹರ್ತಾರೋ ನ ಚ ದಾತಾರೋ ಭವಿಷ್ಯಂತಿ ಕಲೌ ಯುಗೇ ।
ಪ್ರತಿಗ್ರಹಪರಾ ನಿತ್ಯಂ ದ್ವಿಜಾ ಸನ್ಮಾರ್ಗಶೀಲಿನಃ ॥ ೩೯ ॥

ಆತ್ಮಸ್ತುತಿಪರಾಃ ಸರ್ವೇ ಪರನಿಂದಾಪರಾಸ್ತಥಾ ।
ವಿಶ್ವಾಸಹೀನಾಃ ಪುರುಷಾಃ ದೇವವೇದದ್ವಿಜಾತಿಷು ॥ ೪೦ ॥

---

೩೭. ಕಲಿಯುಗದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಹಾಡು, ವಾದ್ಯ ಇವುಗಳಲ್ಲಿ ತೊಡಗಿದವರಾಗುವರು. ಬ್ರಾಹ್ಮಣರು ವೇದಾಧ್ಯಯನವನ್ನು ವಿರೋಧಿಸುವರು.

೩೮. ಕಲಿಯುಗ ಬರಲು ಎಲ್ಲರೂ ಶೂದ್ರಜಾತಿಯ ಹಾದಿಯಲ್ಲಿ ನಡೆಯುವವರಾಗುವರು; ಸ್ವಲ್ಪವೇ ದ್ರವ್ಯವುಳ್ಳವರೂ, ನಿಷ್ಪ್ರಯೋಜನವಾದ ಚಿಹ್ನೆಯುಳ್ಳವರೂ, ನಿರರ್ಥಕವಾಗಿ ಗರ್ವಪಡುವವರೂ ಆಗುವರು.

೩೯. ಕಲಿಯುಗದಲ್ಲಿ ಎಲ್ಲರೂ (ದಾನವನ್ನು) ತೆಗೆದುಕೊಳ್ಳುವವರೇ ಹೊರತು ಕೊಡುವವರಾರೂ ಇಲ್ಲವು. ಸನ್ಮಾರ್ಗವರ್ತಿಗಳಾದ ಬ್ರಾಹ್ಮಣರೂ ನಿತ್ಯದಲ್ಲಿಯೂ ದಾನವನ್ನು ತೆಗೆದುಕೊಳ್ಳುವುದರಲ್ಲಿಯೇ ಆಸೆಯುಳ್ಳವರಾಗುವರು.

೪೦. ಎಲ್ಲರೂ ತಮ್ಮನ್ನು ತಾವೇ ಹೊಗಳಿಕೊಳ್ಳುವರು; ಹಾಗೆಯೇ ಇತರರನ್ನು ಹಳಿಯುವುದರಲ್ಲಿ ಆಸಕ್ತಿಯುಳ್ಳವರು. ಮಾನವರು ದೇವರು, ವೇದ ಮತ್ತು ಬ್ರಾಹ್ಮಣರು- ಇವರಲ್ಲಿ ವಿಶ್ವಾಸವಿಲ್ಲದವರಾಗುವರು.

ಅಸಂಶ್ರುತೋಕ್ತಿವಕ್ತಾರೋ ದ್ವಿಜದ್ವೇಷರತಾಸ್ತಥಾ ।
ಸ್ವಧರ್ಮತ್ಯಾಗಿನಃ ಸರ್ವೇ ಕೃತಘ್ನಾ ಭಿನ್ನವೃತ್ತಯಃ ॥ ೪೧ ॥

ಯಾಚಕಾಃ ಪಿಶುನಾಶ್ಚೈವ ಭವಿಷ್ಯಂತಿ ಕಲೌ ಯುಗೇ ।
ಪರಾಪವಾದನಿರತಾ ಆತ್ಮಸ್ತುತಿಪರಾಯಣಾಃ ॥ ೪೨ ॥

ಪರಸ್ವಹರಣೋಪಾಯಚಿಂತಕಾಃ ಸರ್ವದಾ ಜನಾಃ ।
ಅತ್ಯಾಹ್ಲಾದಪರಾಸ್ತತ್ರ ಭುಂಜಾನಾಃ ಪರವೇಶ್ಮನಿ ॥ ೪೩ ॥

ತಸ್ಮಿನ್ನೇವ ದಿನೇ ಪ್ರಾಯೋ ದೇವತಾರ್ಚನತತ್ಪರಾಃ ।
ತತ್ರೈವ ನಿಂದಾ ನಿರತಾ ಭುಕ್ತ್ವಾ ಚೈಕತ್ರ ಸಂಸ್ಥಿತಾಃ ॥ ೪೪ ॥

---

೪೧. ಎಲ್ಲರೂ ವೇದಾದಿ ಶಾಸ್ತ್ರಗಳಿಗೆ ಸಮ್ಮತವಲ್ಲದ ನುಡಿಯನ್ನೇ ಆಡುವರು ; ಹಾಗೆಯೇ ಬ್ರಾಹ್ಮಣದ್ವೇಷದಲ್ಲಿ ಅತ್ಯಂತಾಸಕ್ತಿಯುಳ್ಳವರು ತಮ್ಮ ಧರ್ಮವನ್ನಾಚರಿಸದೆ ಬಿಟ್ಟುಬಿಡುವರು, ಮಾಡಿದ ಉಪಕಾರವನ್ನು ನೆನೆಯದವರು ಮತ್ತು ಬೇರೆ (ಜೀವನ) ನಡೆಯುಳ್ಳವರು ಆಗಿರುತ್ತಾರೆ.

೪೨. ಕಲಿಯುಗದಲ್ಲಿ ಜನರು (ಭಿಕ್ಷೆಬೇಡುವವರೂ) ತಿರಿಯುವವರೂ ಹಿಸುಣರೂ, ಹೆರರಿಗೆ ಕೆಟ್ಟ ಹೆಸರನ್ನು ತರುವುದರಲ್ಲಿ (ಹಳಿಯುವುದರಲ್ಲಿ) ನಿರತರೂ, ತಮ್ಮನ್ನು ಹೊಗಳಿ ಕೊಳ್ಳುವುದರಲ್ಲಿ ಕಟ್ಟಾಸೆಯುಳ್ಳವರೂ ಆಗುವರು.

೪೩. ಯಾವಾಗಲೂ ಜನರು ಇತರರ ದ್ರವ್ಯವನ್ನು ಅಪಹರಿಸುವ ಯುಕುತಿಯನ್ನೇ ಯೋಚಿಸುತ್ತಿರುವರು; ಹೆರರ ಮನೆಯಲ್ಲಿ ಊಟಮಾಡುವವರಾಗಿ, ಅಲ್ಲಿ ಕಡು ಸಂತಸಗೊಂಡವರೂ ಆಗುವರು.

೪೪. ಬಹುಶಃ ಮಾನವರು ಆ ದಿನದಲ್ಲಿ ಮಾತ್ರ ದೇವರಪೂಜೆಯನ್ನೆಸಗುವ ಆಸೆಯುಳ್ಳವರು; ಒಂದೆಡೆಯಲ್ಲಿಯೇ ವಾಸಮಾಡಿಕೊಂಡಿದ್ದು, ಅಲ್ಲಿಯೇ ಉಂಡು, ಹಳಿಯುವುದರಲ್ಲಿಯೂ ನಿರತರೂ ಆಗುವರು.

ದ್ವಿಜಾಶ್ಚ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾನ್ಯೇ ಚ ಜಾತಯಃ ।
ಅತ್ಯಂತ ಕಾಮಿನಶ್ಚೈವ ಸಂಕೀರ್ಯಂತೇ ಪರಸ್ಪರಮ್ ॥ ೪೫ ॥

ನ ಶಿಷ್ಯೋ ನ ಗುರುಃ ಕಶ್ಚಿನ್ನ ಪುತ್ರೋ ನ ಪಿತಾ ತಥಾ ।
ನ ಭಾರ್ಯಾ ನ ಪತಿಶ್ಚೈವ ಭವಿತಾ ತತ್ರ ಸಂಕರೇ ॥ ೪೬ ॥

ಶೂದ್ರವೃತ್ತ್ಯೈವ ಜೀವಂತಿ ದ್ವಿಜಾ ನರಕಭೋಗಿನಃ ।
ಅನಾವೃಷ್ಟಿಭಯಪ್ರಾಯಾ ಗಗನಾಸಕ್ತದೃಷ್ಟಯಃ ॥ ೪೭ ॥

ಭವಿಷ್ಯಂತಿ ಜನಾಃ ಸರ್ವೇ ತೃಷ್ಣಾಕ್ಷುದ್ಭಯಕಾತರಾಃ ।
ಅನ್ನೋಪಾಧಿ ನಿಮಿತ್ತೇನ ಶಿಷ್ಯಾನ್ ಗೃಹ್ಣಂತಿ ಭಿಕ್ಷವಃ ॥ ೪೮ ॥

---

೪೫. ಅತ್ಯಂತ ಕಾಮಿಗಳಾದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಇತರ ಚಂಡಾಲಾದಿಜಾತಿಯವರೂ ಪರಸ್ಪರವಾಗಿ (ಸಾಂಕರ್ಯಗೊಳ್ಳುತ್ತಾರೆ.) ಬೆರತುಹೋಗುವರು.

೪೬. ಆ ಸಂಕರಗಲ್ಲಿ ಯಾವನೂ ಶಿಷ್ಯನೂ ಅಲ್ಲ ; ಗುರುವೂ ಅಲ್ಲ ; ಮಗನೂ ಅಲ್ಲ ; ಹಾಗೆಯೇ ತಂದೆಯೂ ಅಲ್ಲ ; ಮಡದಿಯೂ ಅಲ್ಲ ; ಪತಿಯೂ ಅಲ್ಲವು.

೪೭. ಬ್ರಾಹ್ಮಣರು ದುಃಖವನ್ನನುಭವಿಸುವವರಾಗಿ, ಶೂದ್ರರ ಕಸುಬಿನಿಂದ ಬಾಳುತ್ತಾರೆ ; ಅನಾವೃಷ್ಟಿಯ ಭಯದಿಂದ ತುಂಬಿನವರಾಗಿ, ಆಗಸವನ್ನು ನೋಡುವುದರಲ್ಲಿಯೇ ತೊಡಗಿದ ಕಣ್ಣುಳ್ಳವರಾಗಿರುತ್ತಾರೆ.

೪೮. ಎಲ್ಲ ಜನರೂ ಬಾಯಾರಿಕೆಯ ಮತ್ತು ಹಸಿವಿನ ಭಯದಿಂದ ತಳ್ಳಂಕಗೊಂಡವರಾಗುವರು. ಸಂನ್ಯಾಸಿಗಳು ಅನ್ನದ ಹುಸಿಯ ಕಾರಣದಿಂದ ಶಿಷ್ಯರನ್ನು (ಹಿಡಿಯುತ್ತಾರೆ.) ಮಾಡಿಕೊಳ್ಳುವರು.

ಉಭಾಭ್ಯಾಮಪಿ ಪಾಣಿಭ್ಯಾಂ ಶಿರಃ ಕಂಡೂಯನಂ ಸ್ತ್ರಿಯಃ ।
ಕುರ್ವಂತ್ಯೋ ಗುರು ಭರ್ತೄಣಾಂ ಆಜ್ಞಾಂ ಭೇತ್ಸ್ಯಂತಿ ತೇಽಹಿತಾಃ ॥ ೪೯ ॥

ಯದಾ ಯದಾ ನ ಯಕ್ಷ್ಯಂತಿ ನ ಹೋಷ್ಯಂತಿ ದ್ವಿಜಾತಯಃ ।
ತದಾ ತದಾ ಕಲೇರ್ವೃದ್ಧಿರನುಮೇಯಾ ವಿಚಕ್ಷಣೈಃ ॥ ೫೦ ॥

ಸರ್ವಧರ್ಮೇಷು ನಷ್ಟೇಷು ಏತಿ ನಿಃಶ್ರೀಕತಾಂ ಜಗತ್ ।
ಏವಂ ಕಲೇಃ ಸ್ವರೂಪಂ ತತ್ಕಥಿತಂ ವಿಪ್ರಸತ್ತಮಾಃ ॥ ೫೧ ॥

ಹರಿಭಕ್ತಪರಾನೇವಂ ನ ಕಲಿರ್ಬಾಧತೇ ದ್ವಿಜಾಃ ।
ತತಃ ಪರಂ ಕೃತಯುಗೇ ತ್ರೇತಾಯಾಂ ಧ್ಯಾನಮೇವ ಹಿ ॥ ೫೨ ॥

---

೪೯. ಹೆಂಗುಸರು ತಮ್ಮ ಎರಡೂ ಕೈಗಳಿಂದ ತಲೆಯನ್ನು ಕೆರೆದುಕೊಳ್ಳುತ್ತಾ, ಅಹಿತರಾಗಿ ಹಿರಿಯರ ಮತ್ತು ಗಂಡಂದಿರ ಅಪ್ಪಣೆಗಳನ್ನು ತಿರಸ್ಕರಿಸುವರು.

೫೦. ಅರಿವುಳ್ಳವರು, ಬ್ರಾಹ್ಮಣರು, ಯಾವಾಗ ಯಾವಾಗ ಜನ್ನವನ್ನು ಬೇಳುವುದಿಲ್ಲವೋ, ಹೋಮಗಳನ್ನು ಮಾಡುವುದಿಲ್ಲವೋ, ಆಗಾಗ ಕಲಿಯು ವೃದ್ಧಿಯಾಯಿತೆಂದು ಊಹಿಸುವುದು.

೫೧. ಎಲ್ಲ ಧರ್ಮಗಳೂ ನಷ್ಟವಾಗಲು, ಪ್ರಪಂಚವು ಸಂಪವವಿಲ್ಲದಂತಾಗುವುದು. ಎಲ್ಲೈ ಬ್ರಾಹ್ಮಣೋತ್ತಮರೇ ! ಇಂತು ಕಲಿಯ ಸ್ವರೂಪವನ್ನು ನಿಮಗೆ ಹೇಳಿದೆನು.

೫೨–೫೩. ಎಲ್ಲೈ ದ್ವಿಜರೇ ! ಕಲಿಯು ಅತಿಶಯವಾಗಿ ಹರಿಭಕ್ತಿಯಲ್ಲಿ ಆಸಕ್ತರಾದವರನ್ನು ಇಂತು ಕೃತಯುಗದಲ್ಲಿ ಬಾಧಿಸುವುದಿಲ್ಲ ; ತ್ರೇತಾಯುಗದಲ್ಲಿ ಶ್ರೀ ಹರಿಯ ಧ್ಯಾನವನ್ನು ಮಾಡುವವರನ್ನು ಬಾಧಿಸುವುದಿಲ್ಲ ; ದ್ವಾಪರಯುಗದಲ್ಲಿ ಯಜ್ಞವನ್ನು ಅನುಷ್ಠಿಸುವುದೆಂದೂ, ಕಲಿಯುಗದಲ್ಲಿ ದಾನವೊಂದೇ ಕರ್ತವ್ಯವೆಂದೂ

ದ್ವಾಪರೇ ಯಜ್ಞಮೇವಾಹುರ್ದಾನಮೇಕಂ ಕಲೌ ಯುಗೇ ।
ಯತತೇ ದಶಭಿರ್ವರ್ಷೈಃ ತ್ರೇತಾಯಾಂ ಹಾಯನೇನ ತತ್ ॥ ೫೩ ॥

ದ್ವಾಪರೇ ತಚ್ಚ ಮಾಸೇನ ಅಹೋರಾತ್ರೇಣ ತತ್ಕಲೌ ।
ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ॥ ೫೪ ॥

ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ।
ಸಮಸ್ತ ಜಗದಾಧಾರಂ ಪರಮಾರ್ಥಸ್ವರೂಪಿಣಮ್ ॥ ೫೫ ॥

ಘೋರೇ ಕಲಿಯುಗೇ ಪ್ರಾಪ್ತೇ ವಿಷ್ಣುಂ ಧ್ಯಾಯನ್ನ ಸೀದತಿ ।
ಅಹೋಽತೀವ ಮಹಾಭಾಗ್ಯಾಃ ಸಕೃದ್ಯೇ ಕೇಶವಾರ್ಚಕಾಃ ॥ ೫೬ ॥

ಘೋರೇ ಕಲಿಯುಗೇ ಪ್ರಾಪ್ತೇ ಸರ್ವಕರ್ಮಬಹಿಷ್ಕೃತೇ ।
ನ್ಯೂನಾತಿರಿಕ್ತತಾ ನ ಸ್ಯಾತ್ಕಲೌ ವೇದೋಕ್ತಕರ್ಮಣಾಮ್ ॥ ೫೭ ॥

ಹೇಳುತ್ತಾರೆ. ಕೃತಯುಗದಲ್ಲಿ ಪತ್ತು ವರ್ಷಗಳಿಂದ ಸಾಧಿಸುವ ಧರ್ಮವನ್ನು ತ್ರೇತಾಯುಗದಲ್ಲಿ ಒಂದು ವರ್ಷದಿಂದಲೇ ಸಾಧಿಸುತ್ತಾರೆ. ದ್ವಾಪರಯುಗದಲ್ಲಿ ಅದನ್ನು ಒಂದು ತಿಂಗಳಿಂದಲೂ, ಅದನ್ನೇ ಕಲಿಯುಗದಲ್ಲಿ ಒಂದು ಹಗಲು ರಾತ್ರಿಯಿಂದಲೇ ಸಾಧಿಸಬಹುದು. ಸಮಸ್ತ ಪ್ರಪಂಚಕ್ಕೂ ಆಶ್ರಯನೂ, ಸರ್ವೋತ್ತಮ ವಸ್ತು ಸ್ವರೂಪನೂ ಆದ ಕೇಶವನನ್ನು ಕೃತಯುಗದಲ್ಲಿ ಜಾನಿಸುವುದರಿಂದಲೂ, ತ್ರೇತಾ ಯುಗದಲ್ಲಿ ಜನ್ನಗಳಿಂದ ಬೇಳುವುದರಿಂದಲೂ, ದ್ವಾಪರಯುಗದಲ್ಲಿ ಪೂಜಿಸುವು ದರಿಂದಲೂ, ಮಾನವನು ಯಾವ ಫಲವನ್ನು ಹೊಂದುತ್ತಾನೆಯೋ, ಅದನ್ನು ಕಲಿ ಯುಗದಲ್ಲಿ ನಾಮೋಚ್ಚಾರಣೆ ಮಾಡುವುದರಿಂದಲೇ ಹೊಂದುತ್ತಾನೆ.

೫೬. ಭಯಂಕರವಾದ ಕಲಿಯುಗವು ಬರಲು ಶ್ರೀ ಮಹಾವಿಷ್ಣುವನ್ನು ಜಾನಿಸುವವನು ಕೆಡುವುದಿಲ್ಲವು. ಒಮ್ಮೆ ಯಾರು ಶ್ರೀ ಕೇಶವನನ್ನು ಆರಾಧಿಸು ತ್ತಾರೆಯೋ, ಅವರು ಬಹು ದೊಡ್ಡವರೆಂದು ಹೇಳಿಸಿಕೊಳ್ಳುತ್ತಾರೆ.

೫೭. ಸಕಲ ಕರ್ಮಗಳಿಂದ ಬಹಿಷ್ಕೃತವಾದ, ಭಯಂಕರವಾದ, ಕಲಿಗಾಲವು ಬರಲು, ಆ ಕಲಿಯಲ್ಲಿ ವೇದಗಳಲ್ಲಿ ಹೇಳಿರುವ ಕರ್ಮಗಳಿಗೆ ಕಡಿಮೆ, ಮೀರಿದುವು, ಎಂಬಿವು ಇಲ್ಲವು.

ಹರಿಸ್ಮರಣಮೇವಾತ್ರ ಸಂಪೂರ್ಣಫಲದಾಯಕಮ್ ।
ಹರಿ ಕೇಶವ ಗೋವಿಂದ ವಾಸುದೇವ ಜಗನ್ಮಯ ॥ ೫೮ ॥

ಜನಾರ್ದನ ಜಗದ್ಧಾಮ ಪೀತಾಂಬರಧರಾಚ್ಯುತ ।
ಇತೀರಯಂತಿ ಯೇ ನಿತ್ಯಂ ನ ಹಿ ತಾನ್ ಬಾಧತೇ ಕಲಿಃ ॥ ೫೯ ॥

ಅಹೋ ಹರಿಪರಾ ಯೇ ತು ಕಲೌ ಸರ್ವಭಯಂಕರೇ ।
ತೇ ಸಭಾಗ್ಯಾ ಮಹಾತ್ಮಾನಃ ಸತ್ಸಂಗತಿರತಾ ಅಪಿ ॥ ೬೦ ॥

ಹರಿನಾಮಪರಾ ಯೇ ಚ ಹರಿಕೀರ್ತನತತ್ಪರಾಃ ।
ಹರಿಪೂಜಾರತಾ ಯೇ ಚ ತೇ ಕೃತಾರ್ಥಾ ನ ಸಂಶಯಃ ॥ ೬೧ ॥

೫೮–೫೯. ಈ ಕಲಿಗಾಲದಲ್ಲಿ ಶ್ರೀಹರಿಯ ಸ್ಮರಣವೇ ಸಂಪೂರ್ಣ ಫಲವನ್ನೀಯುವುದು. "ಹರಿ, ಕೇಶವ, ಗೋವಿಂದ, ವಾಸುದೇವ, ಜಗತ್ತಿನಲ್ಲಿ ಅಂತರ್ಯಾಮಿಯಾಗಿಯೂ, ನಿಯಾಮಕನಾಗಿಯೂ ಇರುವುದರಿಂದ ಜಗನ್ಮಯ, ಜನಾರ್ದನ ಜಗತ್ತು ಆವಾಸನಾಗಿರುವನಾದುದರಿಂದ, ಜಗತ್ತಿಗೆ ಆಶ್ರಯನಾದುದರಿಂದ ಜಗದ್ಧಾಮ, ಪಿತಾಂಬರವನ್ನು ಧರಿಸಿದವನೇ, ಅಚ್ಯುತ"—ಎಂದು ಯಾರು ನಿತ್ಯದಲ್ಲಿಯೂ ಉಚ್ಚರಿಸುತ್ತಾರೆಯೋ, ಅವರನ್ನು ಕಲಿಯು ಬಾಧಿಸುವುದಿಲ್ಲ.

೬೦. ಓಹೋ ! ಯಾರು ಎಲ್ಲರಿಗೂ ಭಯವನ್ನೆಸಗುವ, ಈ ಕಲಿಗಾಲದಲ್ಲಿ ಶ್ರೀಹರಿಯಲ್ಲಿ ಆಸಕ್ತರಾಗಿರುತ್ತಾರೆಯೋ, ಅವರೇ ಭಾಗ್ಯವಂತರು ; ಮಹಾತ್ಮರು ಮತ್ತು ಸತ್ಸಂಗತಿರತರು ಆಗಿರುತ್ತಾರೆ.

೬೧. ಯಾರು ಹರಿನಾಮದಲ್ಲಿ ಆಸಕ್ತರೋ, ಯಾರು ಶ್ರೀ ಹರಿಯನ್ನು ಕೊಂಡಾಡುತ್ತಾರೆಯೋ, ಯಾರು ಶ್ರೀಹರಿಯನ್ನು ಪೂಜಿಸುವುದರಲ್ಲಿ ಆಸಕ್ತರೋ ಅವರೆಲ್ಲರೂ ಕೃತಾರ್ಥರು ; ಈ ವಿಷಯದಲ್ಲಿ ಸಂಶಯವಿಲ್ಲವು.

ಇತ್ಯೇತದ್ವಃ ಸಮಾಖ್ಯಾತಂ ಸರ್ವದುಃಖನಿವಾರಣಮ್ ।
ಸಮಸ್ತ ಪುಣ್ಯಫಲದಂ ಕಲೌ ವಿಷ್ಣೋಃ ಪ್ರಕೀರ್ತನಮ್ ॥ ೬೨ ॥

ಇತಿ ಶ್ರೀ ನರಸಿಂಹಪುರಾಣೇ ಕಲ್ಕ್ಯವತಾರ ಕಥಾನಿರೂಪಣಂ
ಕಿಂಚ ಕಲಿಲಕ್ಷಣ ಕೀರ್ತನಂ ನಾಮ ಚತುಃಪಂಚಾಶೋಽಧ್ಯಾಯಃ

---

೬೨. ಕಲಿಯುಗದಲ್ಲಿ ಶ್ರೀಮಹಾವಿಷ್ಣುವಿನ ಪ್ರಕೀರ್ತನವು (ಅತಿಶಯವಾದ ಕೊಂಡಾಟವು) ಸಕಲ ದುಃಖಗಳನ್ನೂ ಕಳೆಯುವುದು ಮತ್ತು ಸಮಸ್ತ ಪುಣ್ಯವನ್ನುಂಟುಮಾಡುವುದು."

ಎಂಬುವುದಿದು ನಿಮಗೆ ಹೇಳಿದುದಾಯಿತು."

ಎಂದು ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಕಲ್ಕ್ಯವತಾರ ಕಥಾನಿರೂಪಣವು
ಮತ್ತು ಕಲಿ ಲಕ್ಷಣ ಕೀರ್ತನವು ಎಂಬ ಐವತ್ತುನಾಲ್ಕನೆಯ
ಅಧ್ಯಾಯವು ಮುಗಿದುದು.

ಐವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ' ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಶ್ರೀ ಕಲ್ಕ್ಯವತಾರ ಚರಿತ್ರೆಯನ್ನು ನಿರೂಪಿಸುವುದಾಗಿ ಹೇಳಿ, ಕಲಿಗಾಲದಲ್ಲಿ ಸಕಲ ಧರ್ಮವೂ ನಷ್ಟವಾಗಲು, ಬುವಿಯಲ್ಲಿ ಜನರೆಲ್ಲರೂ ವ್ಯಾಧಿ ಪೀಡಿತ ರಾಗಲು, ದೇವತೆಗಳು ಪಾಲ್ಗಡಲಲ್ಲಿ ಮಲಗಿರುವ ಶ್ರೀ ಮಹಾವಿಷ್ಣುವನ್ನು ಸ್ತುತಿಸಿ ಬೇಡಲು, ಆಗ ಶ್ರೀಹರಿಯು ಸಾಂಭಲವೆಂಬ ಮಹಾಗ್ರಾಮದಲ್ಲಿ ವಿಷ್ಣುಯಶ ನೆಂಬವನ ಮಗನಾಗಿ ಕಲ್ಕಿಯ ಹೆಸರಿನಿಂದ ಅಭಿವ್ಯಕ್ತನಾಗಿ ದೊರೆಯಾಗುತ್ತಾನೆ. ಭೂ ನಾಶಕ್ಕೆ ಕಾರಣರಾದ ಮ್ಲೇಚ್ಛರೆಲ್ಲರನ್ನೂ ಕುದುರೆಯೇರಿ, ಕಡುಗದಿಂದ ಹೊಡೆದು ಸಂಹರಿಸುತ್ತಾನೆ. ತರುವಾಯ ಬಹು ಕಾಂಚನಯಾಗವನ್ನನುಷ್ಠಿಸಿ, ಲೋಕದಲ್ಲಿ ಧರ್ಮವನ್ನು ಸಂಸ್ಥಾಪಿಸಿ, ಪರಂಧಾಮಕ್ಕೆ ಹೋಗುವನು ;' ಎಂದು ಹೇಳಿದನು. ಇಂತು ದಶಾವತಾರಚರಿತ್ರೆಯು ನಿರೂಪಿತವಾಯಿತು. ಇದನ್ನು ಕೇಳು ವವರು ಶ್ರೀ ವಿಷ್ಣುವಿನ ಸನ್ನಿಧಿಯನ್ನು ಹೊಂದುವರು;' ಎಂದು ಹೇಳಲು, ಆ ರಾಯನು ಕಲಿಯ ಸ್ವರೂಪವನ್ನೂ, ಕಲಿಗಾಲದಲ್ಲಿ ಬ್ರಾಹ್ಮಣಾದಿ ವರ್ಣಗಳವರ ಆಹಾರಾಚಾರಗಳನ್ನೂ ಅರುಹಬೇಕೆನಲು, ಸೂತರು ಭಾರದ್ವಾಜಾದಿಮುನಿಗಳಿಗೆ ಕಲಿಯಲ್ಲಿ ಬ್ರಾಹ್ಮಣ ವೈಶ್ಯ ಶೂದ್ರರು ಧರ್ಮವಿರೋಧಿಗಳೂ, ದೇವ ವಿರೋಧಿ ಗಳೂ ಆಗುವರು. ವ್ಯಾಜದಿಂದ ಧರ್ಮಾಸಕ್ತರಾಗಿಯೂ, ದಂಭಾಚಾರವುಳ್ಳ ವರೂ ಆಗುತ್ತಾರೆ. ಬಹುಮಟ್ಟಿಗೆ ಉತ್ತಮ ವರ್ಣದವರು ನೀಚರನ್ನು ಸೇವಿಸು ವವರಾಗಿಯೂ, ಎಲ್ಲ ವರ್ಣದವರೂ ಸಾಂಕರ್ಯವನ್ನು ಹೊಂದಿ, ಕೇವಲ ಶೂದ್ರವೃತ್ತಿಯುಳ್ಳವರಾಗುವರು. ಹೀನಜಾತಿಯವರು ಸಂನ್ಯಾಸ ವೇಷವನ್ನು ತಾಳಿ, ಭಸ್ಮಾದಿಗಳನ್ನು ಲೇಪನ ಮಾಡಿಕೊಂಡು, ಪಾಷಂಡಿಗಳಾಗಿ, ಲೋಕಕ್ಕೆ ಧರ್ಮೋಪದೇಶಕರಾಗುವರು. ಅಧರ್ಮರತಿಯು ಹೆಚ್ಚಿ, ಸ್ತ್ರೀಯರು ಪತಿಗಳನ್ನೂ, ಮಕ್ಕಳು ತಂದೆಯನ್ನೂ, ಶಿಷ್ಯರು ಗುರುಗಳನ್ನೂ ತಿರಸ್ಕರಿಸುವರು. ಸ್ತ್ರೀಯರು ಪರಪುರುಷರತರಾಗುವರು. ಪುರುಷರೂ ವಿಧವಾದಿಗಳಲ್ಲಿ ರತರಾಗುವರು.

ಕೃತಯುಗದಲ್ಲಿ ಹತ್ತು ವರ್ಷಗಳಿಂದ ಸಾಧಿಸುವ ಧರ್ಮವನ್ನು ತ್ರೇತೆಯಲ್ಲಿ ಒಂದು ವರ್ಷದಲ್ಲಿಯೂ, ದ್ವಾಪರದಲ್ಲಿ ಒಂದು ಮಾಸದಲ್ಲಿಯೂ, ಕಲಿಯಲ್ಲಿ ಒಂದು ಹಗಲುರಾತ್ರಿಯಲ್ಲಿಯೂ ಸಾಧಿಸಬಹುದು. ಕೃತದಲ್ಲಿ ಶ್ರೀಹರಿಯ ಧ್ಯಾನ ದಿಂದಲೂ, ತ್ರೇತಾಯುಗದಲ್ಲಿ ಜನ್ನಗಳಿಂದಲೂ, ದ್ವಾಪರದಲ್ಲಿ ಪೂಜೆಯಿಂದಲೂ ಲಭಿಸುವ ಫಲವು ಕಲಿಯಲ್ಲಿ ಹರಿನಾಮ ಸಂಕೀರ್ತನದಿಂದಲೇ ದೊರೆಯುವುದು.

ಆದುದರಿಂದ ಕೇಶವಾದಿ ನಾಮಗಳನ್ನು ಕೀರ್ತನಮಾಡುವವರು ಕೃತಾರ್ಥರು; ಪುಣ್ಯವಂತರು; ' ಇತ್ಯಾದಿಯಾಗಿ ಕಲಿ ಲಕ್ಷಣವನ್ನು ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇಂತು ಐವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಪಂಚಪಂಚಾಶೋಽಧ್ಯಾಯಃ

ಅಥ ಶುಕ್ರವರ ಪ್ರಸಾದ :

॥ ಶ್ರೀ ರಾಜೋವಾಚ ॥

ಮಾರ್ಕಂಡೇಯ ಕಥಂ ಶುಕ್ರಃ ಪುರಾ ಬಲಿಮುಖೇ ಗುರುಃ ।
ವಾಮನೇನ ಸ ವಿದ್ಧಾಕ್ಷಃ ಸ್ತುತ್ವಾ ತಲ್ಲಬ್ಧವಾನ್ ಕಥಮ್ ॥ ೧ ॥

॥ ಶ್ರೀ ಮಾರ್ಕಂಡೇಯ ಉವಾಚ ॥

ವಾಮನೇನ ಸ ವಿದ್ಧಾಕ್ಷೋ ಬಹುತೀರ್ಥೇಷು ಭಾರ್ಗವಃ ।
ಜಾಹ್ನವೀಸಲಿಲೇ ಸ್ಥಿತ್ವಾ ದೇವಮಭ್ಯರ್ಚ್ಯ ವಾಮನಮ್ ॥ ೨ ॥

ಐವತ್ತೈದನೆಯ ಅಧ್ಯಾಯವು.

ಇನ್ನು ಶುಕ್ರಾಚಾರ್ಯರಿಗೆ ವರವನ್ನು ಅನುಗ್ರಹಿಸಿದುದು.

ಶ್ರೀ ಸಹಸ್ರಾನೀಕರಾಯನು ಶ್ರೀ ಮಾರ್ಕಂಡೇಯ ಮುನಿಗೆ ಇಂತು ಹೇಳುತ್ತಾನೆ.

೧. "ಎಲೈ ಮಾರ್ಕಂಡೇಯಮುನಿಯೇ ! ಪೂರ್ವದಲ್ಲಿ ಬಲಿಯು ಅನುಷ್ಠಿಸಿದ ಯಜ್ಞಶಾಲೆಯಲ್ಲಿ ದೈತ್ಯಗುರುವಾದ ಶುಕ್ರಾಚಾರ್ಯನು ವಾಮನನಿಂದ ಚುಚ್ಚಿದ ಒಂದು ಕಣ್ಣುಳ್ಳವನು ವಾಮನನನ್ನು ಸ್ತುತಿಸಿ, ಅದನ್ನು ಹೇಗೆ ಪಡೆದನು? ಇದನ್ನು ದಯಮಾಡಿ ಹೇಳಿರಿ." ಎಂದು ಕೇಳಿದನು.

ಶ್ರೀ ಮಾರ್ಕಂಡೇಯ ಮುನಿಯು ಹೇಳುತ್ತಾನೆ.

೨-೩. "ಎಲೈ ಸಹಸ್ರಾನೀಕ ರಾಯನೇ ! ಕೇಳು; ವಾಮನನಿಂದ ಚುಚ್ಚಿದ ಕಣ್ಣುಳ್ಳ, ಭೃಗುಸಂತತಿಯಲ್ಲಿ ಹುಟ್ಟಿದ, ಆ ಶುಕ್ರಾಚಾರ್ಯನು ಅನೇಕ

ಊರ್ಧ್ವಬಾಹುಃ ಸ ದೇವೇಶಂ ಶಂಖಚಕ್ರಗದಾಧರಮ್ ।
ಹೃದಿ ಸಂಚಿತ್ಯ ತುಷ್ಟಾವ ನರಸಿಂಹಂ ಸನಾತನಮ್ ॥ ೩ ॥

॥ ಶ್ರೀ ಶುಕ್ರ ಉವಾಚ ॥

ನಮಾಮಿ ದೇವಂ ವಿಶ್ವೇಶಂ ವಾಮನಂ ವಿಷ್ಣುರೂಪಿಣಮ್ ।
ಬಲಿದರ್ಪಹರಂ ಶಾಂತಂ ಶಾಶ್ವತಂ ಪುರುಷೋತ್ತಮಮ್ ॥ ೪ ॥

ಧೀರಂ ಶೂರಂ ಮಹಾದೇವಂ ಶಂಖಚಕ್ರಗದಾಧರಮ್ ।
ವಿಶುದ್ಧಂ ಜ್ಞಾನಸಂಪನ್ನಂ ನಮಾಮಿ ಹರಿಮಚ್ಯುತಮ್ ॥ ೫ ॥

ತೀರ್ಥಗಳಲ್ಲಿಯೂ, ಗಂಗೆಯ ನೀರಿನಲ್ಲಿಯೂ ನಿಂತು ಶ್ರೀ ವಾಮನದೇವನನ್ನು ಪೂಜೆಗೆಯ್ದು, ಆತನು ತೋಳುಗಳನ್ನು ಮೇಲಕ್ಕೆತ್ತಿ, ದೇವತೆಗಳಿಗೆಲ್ಲಾ ಸ್ವಾಮಿಯಾದ, ಶಂಖ ಚಕ್ರ ಗದಾಧಾರಿಯಾದ, ಶ್ರೀ ಹರಿಯನ್ನು ಹೃದಯವಲ್ಲಿ ಧ್ಯಾನಮಾಡಿ, ಸಕಲವೇದ ಪ್ರತಿಪಾದ್ಯನೂ, ಯಾವಾಗಲೂ ಒಂದೇ ತೆರನಾಗಿರುವವನೂ ಆದ, ಶ್ರೀ ವಾಮನಾವತಾರಿಯಾದ ಶ್ರೀ ನರಸಿಂಹನನ್ನು ಕೊಂಡಾಡಿದನು.

ಶ್ರೀ ಶುಕ್ರನು ಇಂತು ಸ್ತುತಿಸುತ್ತಾನೆ.

೪. "ಕ್ರೀಡಾದಿ ಗುಣಗಳಿಂದ ಕೂಡಿದವನೂ, ಸಕಲವಾದ ಪ್ರಪಂಚಕ್ಕೆ ನಿಯಾಮಕನೂ, ವಾಮನನೂ, ಶ್ರೀ ಮಹಾವಿಷ್ಣುರೂಪಿಯೂ, ಬಲಿಚಕ್ರವರ್ತಿಯ ದರ್ಪವನ್ನು ನಾಶಗೆಯ್ದವನೂ, ಶಾಂತಸ್ವರೂಪನೂ, ಶಶ್ವದೇಕಪ್ರಕಾರದಿಂದಿರುವವನೂ, ಕ್ಷರಾಕ್ಷರರಿಂದುತ್ತಮನೂ ಆದ ಶ್ರೀ ಪುರುಷೋತ್ತಮನನ್ನು ನಮಸ್ಕರಿಸುತ್ತೇನೆ.

೫. ನಿರ್ವಿಕಾರನೂ, ಅಂಚಿತ್ಯಾಪ್ರತಿಹತಶಕ್ತನೂ, ಹೆಪ್ಪೈನವೂ, ಶಂಖ ಚಕ್ರ ಗದೆಗಳನ್ನು ತಾಳಿದವನೂ, ದೋಷ ಶೂನ್ಯನೂ, ಶುದ್ಧಜ್ಞಾನ ಸ್ವರೂಪನೂ, ನಾಶರಹಿತನೂ ಆದ ಶ್ರೀ ಹರಿಗೆ ಪೊಡಮಡುವೆನು.

ಸರ್ವಶಕ್ತಿಮಯಂ ದೇವಂ ಸರ್ವಗಂ ಸರ್ವಭಾವನಮ್ ।
ಅನಾದಿಮಜರಂ ನಿತ್ಯಂ ನಮಾಮಿ ಗರುಡಧ್ವಜಮ್ ॥ ೬ ॥

ಸುರಾಸುರೈರ್ಭಕ್ತಿಮದ್ಭಿಃ ಸ್ತುತೋ ನಾರಾಯಣಃ ಸದಾ ।
ಪೂಜಿತಂ ಚ ಹೃಷೀಕೇಶಂ ತಂ ನಮಾಮಿ ಜಗದ್ಗುರುಮ್ ॥ ೭ ॥

ಹೃದಿ ಸಂಕಲ್ಪ್ಯ ಯದ್ರೂಪಂ ಧ್ಯಾಯಂತಿ ಯತಯಃ ಸದಾ ।
ಜ್ಯೋತೀರೂಪಮನೌಪಮ್ಯಂ ನರಸಿಂಹಂ ನಮಾಮ್ಯಹಮ್ ॥ ೮ ॥

ನ ಜಾನಂತಿ ಪರಂ ರೂಪಂ ಬ್ರಹ್ಮಾದ್ಯಾ ದೇವತಾ ಗಣಾಃ ।
ಯಸ್ಯಾವತಾರರೂಪಾಣಿ ಸಮರ್ಚಂತಿ ನಮಾಮಿ ತಮ್ ॥ ೯ ॥

---

೬. ಸರ್ವಶಕ್ತಿಪೂರ್ಣನೂ, ಅಪ್ರಾಕೃತವಾದ ಕಾಂತಿವಂತನೂ, ಎಲ್ಲೆಡೆಗಳಲ್ಲಿರುವವನೂ, ಎಲ್ಲವನ್ನರಿತವನೂ, ಉತ್ಪತ್ತಿಯಿಲ್ಲದವನೂ, ಮುಪ್ಪಿಲ್ಲದವನೂ, ಅಳಿವಿಲ್ಲದವನೂ ಆದ, ಗರುಡಧ್ವಜನಾದ, ಶ್ರೀ ನರಹರಿಗೆರಗುತ್ತೇನೆ.

೭. ಭಕ್ತಿಯುತರಾದ ಯಾವ ಸುರಾಸುರರು ಅಪ್ರಾಕೃತಾನಂತಕಲ್ಯಾಣ ಗುಣ ಪೂರ್ಣನಾದ, ಶ್ರೀ ಮನ್ನಾರಾಯಣನನ್ನು ಯಾವಾಗಲೂ ಸ್ತುತಿಸಿದರೋ, ಅಂತು ಪೂಜಿತನಾದ, ಸರ್ವೇಂದ್ರಿಯ ನಿಯಾಮಕನಾದ, ಲೋಕಗುರುವಾದ ಶ್ರೀ ನರಸಿಂಹನಿಗೆ ನಮಸ್ಕಾರವು

೮. ನಿಗೃಹೀತೇಂದ್ರಿಯರಾದ ಯತಿಗಳು ಯಾವಾಗಲೂ ಯಾವ ರೂಪವನ್ನು ಹೃದಯದಲ್ಲಿ ಕಲ್ಪಿಸಿಕೊಂಡು, ಧ್ಯಾನಮಾಡುತ್ತಾರೆಯೋ, ಅಂತಹ ತೇಜೋರೂಪನೂ, ಹೋಲಿಕೆಯಿಲ್ಲದವನೂ ಆದ, ಶ್ರೀ ನರಸಿಂಹನನ್ನು ನಾನು ನಮಸ್ಕರಿಸುತ್ತೇನೆ.

೯. ಬ್ರಹ್ಮಾದಿ ದೇವತೆಗಳ ತಂಡವು ಯಾವ ಶ್ರೀ ಹರಿಯ ಸರ್ವೋತ್ತಮವಾದ ರೂಪವನ್ನು ಸಾಕಲ್ಯೇನ ಅರಿಯಲಾರರೋ, ತಮಗೆ ತಿಳಿದು ಬಂದ, ಯಾವ ಭಗವಂತನ ರಾಮ ಕೃಷ್ಣಾದ್ಯವತಾರರೂಪಗಳನ್ನು ಪೂಜಿಸತ್ತಾರೆಯೋ, ಆ ಶ್ರೀ ನರಸಿಂಹನನ್ನು ನಮಸ್ಕರಿಸುತ್ತೇನೆ.

ಏತತ್ಸಮಸ್ತಂ ಯೇನಾದೌ ಸೃಷ್ಟಂ ದುಷ್ಟವಧಾತ್ಪುನಃ ।
ತ್ರಾತಂ ಯತ್ರ ಜಗಲ್ಲೀನಂ ತಂ ನಮಾಮಿ ಜನಾರ್ದನಮ್ ॥ ೧೦ ॥

ಭಕ್ತೈರಭ್ಯರ್ಚಿತೋ ಯಸ್ತು ನಿತ್ಯಂ ಭಕ್ತಪ್ರಿಯೋ ಹಿ ಯಃ ।
ತಂ ದೇವಮಮಲಂ ದಿವ್ಯಂ ಪ್ರಣಮಾಮಿ ಜಗತ್ಪತಿಮ್ ॥ ೧೧ ॥

ದುರ್ಲಭಂ ಚಾತಿಭಕ್ತಾನಾಂ ಯಃ ಪ್ರಯಚ್ಛತಿ ತೋಷಿತಃ ।
ತಂ ಸರ್ವಸಾಕ್ಷಿಣಂ ವಿಷ್ಣುಂ ಪ್ರಣಮಾಮಿ ಸನಾತನಮ್ ॥ ೧೨ ॥

---

೧೦. ಯಾವ ಶ್ರೀ ಹರಿಯು ಮೊದಲಲ್ಲಿ ಸೂಕ್ಷ್ಮ ರೂಪದಿಂದ ತನ್ನಲ್ಲಿ ಅಡಗಿದ್ದ ಈ ಸತ್ಯಜಗತ್ತನ್ನು ಉಪಚಯಮಾಡಿ ಸೃಷ್ಟಿಸಿದನೋ, ಅಂತೆಯೇ ಈ ಸೃಷ್ಟವಾದ ಪ್ರಪಂಚವನ್ನು ದುಷ್ಟರನ್ನು ಸಂಹರಿಸಿ, ರಕ್ಷಿಸಿದನೋ, ಯಾವ ಜಗತ್ತು ಮತ್ತೂ ಪ್ರಲಯದಲ್ಲಿ ಯಾವ ಪರಮಾತ್ಮನಲ್ಲಿಯೇ ಅಡಗುತ್ತದೆಯೋ, ಆ ದುಷ್ಟ ಜನ ಸಂಹಾರಕನಾದ, ಶ್ರೀ ನರಸಿಂಹನಿಗೆ ವಂದಿಸುತ್ತೇನೆ.

೧೧. ಯಾವ ಭಗವಂತನು ನಿತ್ಯವಲ್ಲಿಯೂ ಭಕ್ತರಿಂದ ಪೂಜಿತನೋ, ಯಾವ ಶ್ರೀ ಹರಿಯು ನಿತ್ಯದಲ್ಲಿಯೂ ಭಕ್ತಪ್ರಿಯನೋ, ಲೋಕಕ್ಕೆ ಸ್ವಾಮಿಯಾದ, ವೈಕುಂಠಾದ್ಯುತ್ತಮ ಲೋಕ ಸ್ಥಿತನಾದ, ಪರಮಪಾವನನಾದ, ಕ್ರೀಡಾದಿಗುಣ ವಿಶಿಷ್ಟನಾದ, ಆ ಶ್ರೀ ನರಸಿಂಹನಿಗೆರಗುತ್ತೇನೆ.

೧೨. ಯಾವ ಶ್ರೀ ಹರಿಯು ತನ್ನ ಅಂತರಂಗಭಕ್ತರಾದವರಿಗೆ ಪ್ರಸನ್ನನಾಗಿ, ಹೊಂದಲಶಕ್ಯವಾದ ಸ್ವರೂಪಸುಖಾದಿಗಳನ್ನೀಯುತ್ತಾನೆಯೋ, ಜಗತ್ತಿನಲ್ಲಿ ಎಲ್ಲವನ್ನೂ ಆಲೋಚನೆಯಿಲ್ಲದೆ ನೋಡುವ, ತಿಳಿಯುವ, ಸದಾ ಏಕರೂಪನಾದ, ಸಕಲ ವೇದಪ್ರತಿಪಾದ್ಯನಾದ, ಶ್ರೀ ಮಹಾವಿಷ್ಣುವಾದ ಆ ಶ್ರೀ ನರಸಿಂಹನಿಗೆ ಪ್ರಣಾಮವನ್ನು ಮಾಡುತ್ತೇನೆ."

ಎಂದು ಶುಕ್ರನು ನರಸಿಂಹಾಭಿನ್ನನಾದ ವಾಮನನನ್ನು ಸ್ತುತಿಸಿದನು.

|| ಶ್ರೀ ಮಾರ್ಕಂಡೇಯ ಉವಾಚ ||

ದುರ್ಲಭಂ ಚಾತಿಭಕ್ತಾನಾಂ ಯಃ ಪ್ರಯಚ್ಛತಿ ತೋಷಿತಃ ।
ಪ್ರಾದುರ್ಬಭೂವ ತಸ್ಯಾಗ್ರೇ ಶಂಖಚಕ್ರಗದಾಧರಃ || ೧೩ ||

ಉವಾಚ ಶುಕ್ರಮೇಕಾಕ್ಷಂ ದೇವೋ ನಾರಾಯಣಸ್ತದಾ ।
ಕಿಮರ್ಥಂ ಜಾಹ್ನವೀತೀರೇ ಸ್ತುತೋಽಹಂ ತದ್ಬ್ರವೀಹಿ ಮೇ || ೧೪ ||

|| ಶ್ರೀ ಶುಕ್ರ ಉವಾಚ ||

ದೇವ ದೇವ ಮಯಾ ಪೂರ್ವಮಪರಾಧೋ ಮಹತ್ಕೃತಃ ।
ತದ್ದೋಷಸ್ಯಾಪನುತ್ತ್ಯರ್ಥಂ ಶ್ರುತವಾನಸ್ಮಿ ಸಾಂಪ್ರತಮ್ || ೧೫ ||

ಶ್ರೀ ಮಾರ್ಕಂಡೇಯಮುನಿಯು ಹೇಳುತ್ತಾನೆ.

೧೩. "ಎಲೈ ಸಹಸ್ರಾನೀಕರಾಯನೇ ! ಪೂರ್ವದಲ್ಲಿ ಇಂತು ಶುಕ್ರನಿಂದ ಸ್ತುತನಾದ, ಶಂಖ ಚಕ್ರಗದಾಪಾಣಿಯಾದ, ಲೋಕಸ್ವಾಮಿಯಾದ, ಶ್ರೀ ಮಹಾವಿಷ್ಣುವು ಅವನೆದುರಿಗೆ ಪ್ರತ್ಯಕ್ಷನಾದನು.

೧೪. ಆಗ ಕ್ರೀಡಾದಿಗುಣ ವಿಶಿಷ್ಟನಾದ ನಾರಾಯಣನು ಏಕಾಕ್ಷನಾದ ಶುಕ್ರಾಚಾರ್ಯನನ್ನು "ಗಂಗೆಯ ತಡಿಯಲ್ಲಿ ಏತಕ್ಕೆ ನನ್ನನ್ನು ಸ್ತುತಿಸಿದೆ? ನನಗೆ ಅದನ್ನು ಹೇಳು." ಎಂದು ಕೇಳಿದನು.

ಶ್ರೀ ಶುಕ್ರನು ಹೇಳುತ್ತಾನೆ :-

೧೫. "ಎಲೈ ದೇವೋತ್ತಮನೇ ! ಹಿಂದೆ ನಾನು ಬಹುವಾದ ಅಪರಾಧವನ್ನು ಮಾಡಿದ್ದೇನೆ. ಆ ದೋಷವನ್ನು ಕಳೆದು ಕೊಳ್ಳಲು, ಈಗ ನಿನ್ನನ್ನು ಬೇಡಿಕೊಳ್ಳುತ್ತೇನೆ.

॥ ಶ್ರೀ ಭಗವಾನುವಾಚ ॥

ಮಮಾಪರಾಧಾನ್ನಯನಂ ನಷ್ಟಮೇಕಂ ತವಾಧುನಾ ।
ಸಂತುಷ್ಟೋಽಸ್ಮಿ ತತಃ ಶುಕ್ರ ಸ್ತೋತ್ರೇಣಾನೇನ ತೇ ಮುನೇ ॥ ೧೬ ॥

ಇತ್ಯುಕ್ತ್ವಾ ದೇವದೇವೇಶಸ್ತಂ ಮುನಿಂ ಪ್ರಹಸನ್ನಿವ ।
ಪಾಂಚಜನ್ಯೇನ ತಚ್ಚಕ್ಷುಃ ಪಸ್ಪರ್ಶ ಚ ಜನಾರ್ದನಃ ॥ ೧೭ ॥

ಸ್ಪೃಷ್ಟಮಾತ್ರೇ ತು ಶಂಖೇನ ದೇವದೇವೇನ ಶಾರ್ಙ್ಗಿಣಾ ।
ಬಭೂವ ನಿರ್ಮಲಂ ಚಕ್ಷುಃ ಪೂರ್ವವನ್ನೃಪಸತ್ತಮ ॥ ೧೮ ॥

ಏವಂ ದತ್ವಾ ಮುನೇಶ್ಚಕ್ಷುಃ ಪೂಜಿತಸ್ತೇನ ಮಾಧವಃ ।
ಜಗಾಮಾದರ್ಶನಂ ಸದ್ಯಃ ಶುಕ್ರೋಽಪಿ ಸ್ವಾಶ್ರಮಂ ಯಯೌ ॥ ೧೯ ॥

ಶ್ರೀ ಭಗವಂತನು ಹೇಳುತ್ತಾನೆ.

೧೬. "ಎಲೈ ಶುಕ್ರನೇ !(ನೀನು ನನಗೆ ದಾನ ಕೊಡಲು ಕೂಡದೆಂದು ಬಲಿಗೆ ಸನ್ನೆ ಮಾಡಿದುದರಿಂದ) ನನಗೆ ಅಪರಾಧವನ್ನು ಆಚರಿಸುದುದರಿಂದ ಒಂದು ಕಣ್ಣು ಅಳಿಯಿತು. ಈಗ ನಿನ್ನ ಸ್ತೋತ್ರಕ್ಕೆ ನಾನು ಸಂತುಷ್ಟನಾಗಿರುತ್ತೇನೆ."

೧೭. ಎಂದು ನುಡಿದು, ಬ್ರಹ್ಮಾದಿ ದೇವೋತ್ತಮರಿಗೂ ನಿಯಾಮಕನಾದ, ಶ್ರೀ ಹರಿಯು ಆ ಮುನಿಯನ್ನು ಹಾಸ್ಯಮಾಡುವನಂತೆ ತನ್ನ ಪಾಂಚಜನ್ಯವೆಂಬ ಸಂಕುವಿನಿಂದ ಅವನ ಕುರುಡುಗಣ್ಣನ್ನು ಮುಟ್ಟಿದನು.

೧೮. ಎಲೈ ಸಹಸ್ರಾನೀಕರಾಯನೇ !ಕೇಳು ;ದೇವೋತ್ತಮನಾದ, ಶಾರ್ಙ್ಗಿಯಾದ, ಶ್ರೀಮಹಾವಿಷ್ಣುವು ಸಂಕುವಿನಿಂದ ಮುಟ್ಟುವುದರಿಂದಲೇ ಆ ಕುರುಡುಗಣ್ಣು ಮೊದಲಿನಂತೆ ನಿರ್ಮಲವಾಯಿತು. (ಎಂದರೆ ಕಣ್ಣು ಕಾಣುವಂತಾಯಿತು.)

೧೯. ಶ್ರೀ ಪತಿಯಾದ ನರಸಿಂಹನು ಆ ಶುಕ್ರಮುನಿಗೆ ಇಂತು ನಷ್ಟವಾಗಿದ್ದ ಕಣ್ಣನ್ನು ಮರಳಿ ಇತ್ತು (ಅನುಗ್ರಹಿಸಿಕೊಟ್ಟು), ಅವನಿಂದ ಪೂಜೆಗೊಂಡವನಾಗಿ, ತತ್‌ಕ್ಷಣದಲ್ಲಿಯೇ ಮಾಯವಾದನು; ಶುಕ್ರಾಚಾರ್ಯನೂ ತನ್ನ ಆಶ್ರಮಕ್ಕೆ ಹೋದನು.

ಇತ್ಯೇತದುಕ್ತಂ ಮುನಿನಾ ಮಹಾತ್ಮನಾ
ಪ್ರಾಪ್ತಂ ಪುರಾ ದೇವವರಪ್ರಸಾದಾತ್ ।
ಶುಕ್ರೇಣ ಕಿಂ ತೇ ಕಥಯಾಮಿ ರಾಜನ್
ಪುನಶ್ಚ ಮಾಂ ಪೃಚ್ಛ ಮನೋರಥಾಂತಃ ॥ ೨೦ ॥

ಇತಿ ಶ್ರೀ ನರಸಿಂಹಪುರಾಣೇ ಶುಕ್ರವರ ಪ್ರಸಾದೋ
ನಾಮ ಪಂಚ ಪಂಚಾಶೋಽಧ್ಯಾಯಃ

---

೨೦. ಎಲೈ ಸಹಸ್ರಾನೀಕನೇ ! ಪೂರ್ವದಲ್ಲಿ ಮಹಾತ್ಮನಾದ ಶುಕ್ರಾಚಾರ್ಯನು ದೇವೋತ್ತಮನಾದ ಶ್ರೀ ಮಹಾವಿಷ್ಣುವಿನ ಅನುಗ್ರಹದಿಂದ ನಷ್ಟವಾದ ತನ್ನ ಕಣ್ಣನ್ನು ಪಡೆದುಕೊಂಡ ಈ ಸಂಗತಿಯನ್ನರುಹಿದೆನು. ಮತ್ತು ಈಗ ನಿನಗೆ ಏನನ್ನು ಹೇಳಲಿ; ನಿನ್ನ ಮನದ ಬಯಕೆಯನ್ನು ಕೇಳು;" ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಶ್ರೀ ಸೂತರು ಭರದ್ವಾಜಾದಿಮುನಿಗಳಿಗೆ ಹೇಳಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶುಕ್ರಾಚಾರ್ಯನಿಗೆ ವರವನ್ನು ಅನುಗ್ರಹಿಸಿದುದು ಎಂಬ ಐವತ್ತೈದನೆಯ ಅಧ್ಯಾಯವು ಮುಗಿದುದು.

ಐವತ್ತ್ಯೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ 'ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಪೂರ್ವದಲ್ಲಿ ಶುಕ್ರನು ಬಲಿಯು ಯಾಗಮಾಡುವಾಗ ಮೂರು ಹೆಜ್ಜೆ ಭೂಮಿಯನ್ನು ವಾಮನನು ಕೇಳಲು, ಮೋಸವಾಗುವುದು; ಈಯಬಾರದೆಂದು ಸನ್ನೆಮಾಡಿದ ಅಪರಾಧದಿಂದ ತನ್ನ ಒಂದು ಕಣ್ಣನ್ನು ಕಳೆದುಕೊಂಡವನು ಮತ್ತೂ ಗಂಗಾತೀರದಲ್ಲಿ ಶ್ರೀನೃಸಿಂಹನನ್ನು ಅನೇಕ ತೆರನಾಗಿ ಸ್ತುತಿಸಲು, ಆಗ ಭಗವಂತನು ಆತನ ಸ್ತೋತ್ರಕ್ಕೆ ಸಂತಸಗೊಂಡು ಪ್ರತ್ಯಕ್ಷನಾಗಿ, 'ಏತಕ್ಕಾಗಿ ನನ್ನನು ಸ್ತುತಿಸಿರುವುದು' ಎಂದು ಕೇಳಲು, ಶುಕ್ರಚಾರ್ಯನು ತನ್ನ ಅಪರಾಧದಿಂದ ಕಣ್ಣು ನಷ್ಟವಾಯಿತೆಂದೂ, ಅದನ್ನು ಮರಳಿ ಅನುಗ್ರಹಿಸಬೇಕೆಂದೂ ಬೇಡಲು, ಅಂತು ಶ್ರೀ ನರಸಿಂಹ ಮೂರ್ತಿಯಾದ ಶ್ರೀ ಮಹಾವಿಷ್ಣುವು ತನ್ನ ಸಂಕುವಿನಿಂದ ಮುಟ್ಟಿ, ಅವನಿಗೆ ಮುನ್ನಿನಂತೆಯೇ ಕಣ್ಣು ಕಾಣಿಸುವಂತೆ ಕರುಣಿಸಿದನೆಂದು ಹೇಳಿ, ಇನ್ನಾವುದು ಸಹಸ್ರಾನೀಕ ರಾಜನ ಮನದಲ್ಲಿರುವುದೋ, ಅದನ್ನು ಕೇಳು;' ಎಂದು ಹೇಳಿ ದುದನ್ನು ಸೂತರ, ಭರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಐವತ್ತ್ಯೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಹರ್ಯವತಾರಾದಿ ನಿರೂಪಣಮ್.

ಷಟ್ಪಂಚಾಶೋಽಧ್ಯಾಯಃ

ಅಥ ನರಸಿಂಹಸ್ಯ ಪ್ರತಿಷ್ಠಾವಿಧಿಃ

॥ ರಾಜೋವಾಚ ॥

ಸಾಂಪ್ರತಂ ದೇವದೇವಸ್ಯ ನರಸಿಂಹಸ್ಯ ಶಾರ್ಙ್ಗಿಣಃ ।
ಶ್ರೋತುಮಿಚ್ಛಾಮಿ ಸಕಲಂ ಪ್ರತಿಷ್ಠಾಯಾಃ ಪರಂ ವಿಧಿಮ್ ॥ ೧ ॥

ಐವತ್ತಾರನೆಯ ಅಧ್ಯಾಯವು.

ಇನ್ನು ಶ್ರೀ ನರಸಿಂಹಮೂರ್ತಿಯ ಪ್ರತಿಷ್ಠೆಯನ್ನು ಮಾಡುವ ನಿಯಮವು

ಸಹಸ್ರಾನೀಕರಾಯನು ಮಾರ್ಕಂಡೇಯ ಮುನಿಯನ್ನು ಇಂತು ಕೇಳುತ್ತಾನೆ :—

೧. "ಎಲೈ ಮಾರ್ಕಂಡೇಯ ಮುನಿಯೇ ! ದೇವೋತ್ತಮನಾದ, ಶಾರ್ಙ್ಗಧಾರಿಯಾದ ಈ ಶ್ರೀ ನರಸಿಂಹಸ್ವಾಮಿಯನ್ನು ಪ್ರತಿಷ್ಠೆ ಮಾಡುವ, ಶ್ರೇಷ್ಠವಾದ ಕಲ್ಪೋಕ್ತ ವಿಧಿಯನ್ನೆಲ್ಲಾ ಕೇಳಬಯಸುತ್ತೇನೆ." ಎಂದು ಹೇಳಿದನು.

ಆಗ ಶ್ರೀ ಮಾರ್ಕಂಡೇಯಮುನಿಯು ಇಂತು ನಿರೂಪಿಸುತ್ತಾನೆ :—

॥ ಶ್ರೀ ಮಾರ್ಕಂಡೇಯ ಉವಾಚ ॥

ಪ್ರತಿಷ್ಠಾಯಾ ವಿಧಿಂ ವಿಷ್ಣೋರ್ದೇವದೇವಸ್ಯ ಚಕ್ರಿಣಃ ।
ಪ್ರವಕ್ಷ್ಯಾಮಿ ಯಥಾಶಾಸ್ತ್ರಂ ಶೃಣು ಭೂಪಾಲ ಪುಣ್ಯದಮ್ ॥ ೧ ॥

ಕರ್ತುಂ ಪ್ರತಿಷ್ಠಾಂ ಯೇ ಚಾತ್ರ ವಿಷ್ಣೋರಿಚ್ಛಂತಿ ಪಾರ್ಥಿವ ।
ಸ ಪೂರ್ವಂ ಸ್ಥಿರನಕ್ಷತ್ರೇ ಭೂಮಿಶೋಧನಮಾರಭೇತ್ ॥ ೩ ॥

ಖಾತ್ವಾ ಪುರುಷ ಮಾತ್ರಂ ತು ಬಾಹುದ್ವಯಮಥಾಪಿ ವಾ ।
ಪೂರಯೇಚ್ಛುದ್ಧ ಮೃದ್ಭಿಸ್ತು ಜಲಾಕ್ತೈಃ ಶರ್ಕರಾನ್ವಿತೈಃ ॥ ೪ ॥

ಅಧಿಷ್ಠಾನಂ ತತೋ ಬುಧ್ವಾ ಪಾಷಾಣೇಷ್ಟಕಮೃಣ್ಮಯಮ್ ।
ಪ್ರಾಸಾದಂ ಕಾರಯೇತ್ತತ್ರ ವಾಸ್ತುವಿದ್ಯಾವಿದಾ ನೃಣಾ ॥ ೫ ॥

---

೧. " ಎಲೈ ಭೂಪತಿಯಾದ ಸಹಸ್ರಾನೀಕರಾಯನೇ ದೇವೋತ್ತಮನಾದ, ಸುದರ್ಶನಚಕ್ರಧಾರಿಯಾದ, ಶ್ರೀ ಮಹಾವಿಷ್ಣುವಿನ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವುದರ ಪುಣ್ಯಪ್ರದವಾದ ನಿಯಮವನ್ನು ಪಾಂಚರಾತ್ರಾದಿ ಶಾಸ್ತ್ರಗಳಲ್ಲಿ ಹೇಳಿರುವ ತೆರನಾಗಿ ಹೇಳುವೆನು ; ಮನಗೊಟ್ಟು ಕೇಳು.

೩. ಎಲೈ ಪಾರ್ಥಿವನೇ ! ಯಾರು ಈ ಲೋಕದಲ್ಲಿ ಶ್ರೀ ವಿಷ್ಣುವಿನ ಪ್ರತಿಮೆಯ ಪ್ರತಿಷ್ಠೆಯನ್ನು ಮಾಡಲೆಳಸುವರೋ, ಅವರು ಮೊದಲು ಸ್ಥಿರವಾದ ನಕ್ಷತ್ರದಲ್ಲಿ ಭೂಮಿಯನ್ನು ಶೋಧಿಸಲು ತೊಡಗಬೇಕು.

೪. ಭೂಮಿಯನ್ನು ಒಂದು ಪುರುಷಪ್ರಮಾಣವಾಗಲೀ, ಎರಡು ಬಾರಿನಷ್ಟಾಗಲೀ ತೋಡಿ, ಸಣ್ಣ ಕಲ್ಲು ಮರಳುಗಳಿಂದ ಕೂಡಿದ, ನೀರಿನಿಂದ ಕಲಿಸಿನ ಶುದ್ಧವಾದ ಮಣ್ಣಿನಿಂದ ಆ ಹಳ್ಳವನ್ನು ಮುಚ್ಚಿಬಿಡುವುದು.

೫. ಅನಂತರದಲ್ಲಿ ಆ ಸ್ಥಳವು ಭಗವಂತನ ಪ್ರತಿಷ್ಠೆಗೆಡೆಯೆಂದು ತಿಳಿದು, ಆ ಪ್ರದೇಶದಲ್ಲಿ ವಾಸ್ತುವಿದ್ಯೆಯಲ್ಲಿ ನಿಪುಣರಾದ ಮಾನವರಿಂದ ಕಲ್ಲು, ಇಟ್ಟಿಗೆ, ಮಣ್ಣು—ಇವುಗಳೆಲ್ಲಾವುದರಿಂದಾದರೂ ಪ್ರಾಸಾದವನ್ನು ಕಟ್ಟಿಸಬೇಕು.

ಚತುರಸ್ರಂ ಸೂತ್ರಮಾರ್ಗೇ ಚತುಃ ಕೋಣಂ ಸಮಂತತಃ ।
ಶಿಲಾಭಿತ್ತಿಕಮುತ್ಕೃಷ್ಟಂ ತದಲಾಭೇಷ್ಟಕಾಮಯಮ್ ॥ ೬ ॥

ತದಲಾಭೇ ತು ಮೃತ್ಕುಡ್ಯಂ ಪೂರ್ವದ್ವಾರಂ ಸುಶೋಭನಮ್ ।
ಜಾತಿಕಾಷ್ಠಮಯೈಃ ಸ್ತಂಭೈಸ್ತಲ್ಲಗ್ನೈಃ ಫಲದಾನ್ವಿತೈಃ ॥ ೭ ॥

ಉತ್ಪಲೈಃ ಪದ್ಮಪತ್ರೈಶ್ಚ ಪಾತಿತೈಶ್ಚಿತ್ರ ಶಿಲ್ಪಿಭಿಃ ।
ಇತ್ಥಂ ತು ಕಾರಯಿತ್ವಾ ತು ಹರೇರ್ವೇಶ್ಮ ಸುಶೋಭನಮ್ ॥ ೮ ॥

ಪೂರ್ವದ್ವಾರಂ ನೃಪಶ್ರೇಷ್ಠ ಸುಕಪಾಟಂ ಸುಚಿತ್ರಿತಮ್ ।
ಅತಿವೃದ್ಧಾತಿಬಾಲೈಸ್ತು ಕಾರಯೇನ್ನಾಕೃತಿಂ ಹರೇಃ ॥ ೯ ॥

೬–೧೩, ಸುತ್ತಲೂ ಚೌಕವಾಗಿ ದಾರವನ್ನು ಕಟ್ಟಿ, ನಾಲ್ಕು ಮೂಲೆಗಳನ್ನೂ, ಉತ್ತಮವಾದ ಕಲ್ಲಿನ ಗೋಡೆಯನ್ನೂ, ಅದು ಸಿಕ್ಕದಿದ್ದರೆ ಮಣ್ಣಿನ ಗೋಡೆಯನ್ನೂ, ಉತ್ತಮವಾದ ಪೂರ್ವದ ಬಾಗಿಲನ್ನೂ ಮಾಡಿಸಿ, ಉತ್ತಮವಾದ ಜಾತಿಯ (ಸಾಗವಾನಿ ಮುಂತಾದ) ಮರದ ಕಂಬಗಳಿಂದಲೂ, ಆ ಕಂಬಗಳಲ್ಲಿ ಸಂಬಂಧಿಸಿದ ಹಣ್ಣುಗಳ ಗೊಂಚಲುಗಳಿಂದಲೂ ಕೂಡಿರುವ ಹಾಗೆ ಕನ್ನೈದಿಲೆ, ತಾವರೆಯ ರೇಕು—ಇವುಗಳನ್ನು ಚಿತ್ರಶಿಲ್ಪಿಗಳಿಂದ ಬಿಡಿಸುವಂತೆ ಮಾಡಿಸಿ, ಮಂಗಳವೂ, ಸುಂದರವೂ ಆದ ಶ್ರೀ ಹರಿಮಂದಿರವನ್ನು ಕಟ್ಟಿಸಿ, ಎಲೈ ರಾಜಶ್ರೇಷ್ಠನೇ! ಚಿತ್ರಗಳನ್ನು ಕೆತ್ತಿರುವ ಬಾಗಿಲುಳ್ಳ ಪೂರ್ವದ್ವಾರವನ್ನು ಮಾಡಿಸಿ, ಶ್ರೀ ಹರಿಯ ಮೂರ್ತಿಯನ್ನು, ಹಣ್ಣು ಮುದುಕನೂ, ಕೇವಲ ಹುಡುಗನೂ, ಕುಷ್ಠಾದಿರೋಗಗಳಿಂದ ಪೀಡಿತನೂ, ಅಥವಾ ಬಹುಕಾಲದ ರೋಗವುಳ್ಳ ಇತರರೂ ಇವರಿಂದ ಮಾಡಿಸದೆ, ಪುಷ್ಟವಾದ ಶರೀರವುಳ್ಳ, ಮೇಧಾವಿಯಾದ ಶಿಲ್ಪಿಯಿಂದ ಉತ್ತಮವಾದ ಪ್ರತಿಮೆಯನ್ನು ಮಾಡಿಸಬೇಕು. ಸೌಮ್ಯವಾದ ಮುಖವುಳ್ಳದೂ, ಒಳ್ಳೆಯ ಮಾಟವಾದ ಕಿವಿಗಳುಳ್ಳದೂ, ಒಳ್ಳೆಯ ಮೂಗುಳ್ಳದೂ, ಸಮಾ

ಕುಷ್ಠಾದ್ಯುಪಹತೈರ್ವಾಪಿ ಅನ್ಯೈರ್ವಾದೀರ್ಘರೋಗಿಭಿಃ ।
ವಿಶ್ವಕರ್ಮೋಕ್ತಮಾರ್ಗೇಣ ಪುರಾಣೋಕ್ತಾಂ ನೃಪೋತ್ತಮ ॥ ೧೦ ॥

ಕಾರಯೇತ್ಪ್ರತಿಮಾಂ ದಿವ್ಯಾಂ ಪುಷ್ಟಾಂಗೇನ ತು ಧೀಮತಾ ।
ಸೌಮ್ಯಾನನಾಂ ಸುಶ್ರವಣಾಂ ಸುನಾಸಾಂ ಚ ಸುಲೋಚನಾಮ್ ॥ ೧೧ ॥

ನಾಧೋದೃಷ್ಟಿಂ ನೋರ್ಧ್ವದೃಷ್ಟಿಂ ತಿರ್ಯಗ್ದೃಷ್ಟಿಂ ನ ಕಾರಯೇತ್ ।
ಕಾರಯೇತ್ಸಮದೃಷ್ಟಿಂ ತು ಪದ್ಮಪತ್ರಾಯತೇಕ್ಷಣೀಮ್ ॥ ೧೨ ॥

ಸುಭ್ರುವಂ ಸುಲಲಾಟಾಂ ಚ ಸುಕಪೋಲಾಂ ಸಮಾಂ ಶುಭಾಮ್ ।
ಬಿಂಬೋಷ್ಠೀಂ ಸುಷ್ಠು ಚಿಬುಕಾಂ ಸುಗ್ರೀವಾಂ ಕಾರಯೇದ್ಬುಧಃ ॥ ೧೩ ॥

ಉಪಬಾಹು ಕರೇ ದೇಯಂ ದಕ್ಷಿಣೇ ಚಕ್ರಮರ್ಕವತ್ ।
ನಾಭಿಸಂಲಗ್ನದಿವ್ಯಾರಂ ಪರಿತೋ ನೇಮಿಸಂಯುತಮ್ ॥ ೧೪ ॥

ಚೀನವಾದ ಕಣ್ಣುಗಳುಳ್ಳುದೂ, ಕೀಳೂ ಮೇಲೂ, ಅಡ್ಡಲೂ ಆದ ನೋಟವಿಲ್ಲದೆ ಸಮವಾದ ನೋಟವಿರುವ, ತಾವರೆಯ ರೇಕಿನಂತೆ ಹಿರಿದಾದ ಕಂಗಳುಳ್ಳುದೂ, ಒಳ್ಳೆಯ ಹುಬ್ಬುಗಳುಳ್ಳುದೂ, ಅಂದವಾದ ಹಣೆಯುಳ್ಳುದೂ, ಸಮೀಚೀನವಾದ ಕೆನ್ನೆಗಳುಳ್ಳುದೂ, ಎಲ್ಲ ಅವಯವಗಳೂ ಸಮಾನವಾದ ಪ್ರಮಾಣದಲ್ಲಿರುವುದೂ, ಶುಭವಾದುದೂ, ತೊಂಡೆಯ ಹಣ್ಣಿನಂತೆ ತುಟಿಯುಳ್ಳುದೂ, ಸುಂದರವಾದ ಚಿವುಕವುಳ್ಳುದೂ, ಸುಂದರವಾದ ಕತ್ತುಳ್ಳುದೂ ಆದ ಪ್ರತಿಮೆಯನ್ನು ಬುಧನಾದವನು ಮಾಡಿಸಬೇಕು.

೧೪. ತೋಳಿಗೆ ಹತ್ತಿರವಿರುವ ಬಲಗೈಯಲ್ಲಿ ಗುಂಬದಲ್ಲಿ ಚೆನ್ನಾಗಿ ಸೇರಿಸಿದ ಉತ್ತಮವಾದ ಅರೆಕಾಲುಗಳುಳ್ಳ, ಸುತ್ತಲೂ ಪಟ್ಟಿಯಿಂದ ಕೂಡಿರುವ, ಸೂರ್ಯನಂತಿರುವ ಸುದರ್ಶನ ಚಕ್ರವನ್ನು ಕೊಡಬೇಕು.

ವಾಮಪಾರ್ಶ್ವೇಽತ್ಯಸಭುಜೇ ದೇಯಂ ಶಂಖಂ ಶಶಿಪ್ರಭಮ್ ।
ಪಾಂಚಜನ್ಯಮಿತಿ ಖ್ಯಾತಂ ದೈತ್ಯದರ್ಪಹರಂ ಶುಭಮ್ ॥ ೧೫ ॥

ಹಾರಾರ್ಪಿತವರಾಂ ದಿವ್ಯಾಂ ಕಂಠತ್ರಿವಲಿಸಂಯುತಾಮ್ ।
ಸುಸ್ತನೀಂ ಚಾರುಹೃದಯಾಂ ಸುಜಠರಾಂ ಸಮಾಂ ಶುಭಾಮ್ ॥ ೧೬ ॥

ಕಟಿಲಗ್ನವಾಮಕರಾಂ ಪದ್ಮಲಗ್ನಾಂ ಚ ದಕ್ಷಿಣಾಮ್ ।
ಕೇಯೂರಬಾಹುಕಾಂ ದಿವ್ಯಾಂ ಸುನಾಭಿವಲಿಭಂಗಿಕಾಮ್ ॥ ೧೭ ॥

ಸುಕಟೀಂ ಸುಜಘೋರೂಂ ಚ ವಸ್ತ್ರಮೇಖಲಭೂಷಿತಾಮ್ ।
ಏವಂ ತಾಂ ಕಾರಯಿತ್ವಾ ತು ಪ್ರತಿಮಾಂ ರಾಜಸತ್ತಮ ॥ ೧೮ ॥

ಸುವರ್ಣವಸ್ತ್ರದಾನೇನ ತತ್ಕರ್ತಾರಮ್ ಪೂಜ್ಯ ಸತ್ತಮ ।
ಪೂರ್ವಪಕ್ಷೇ ಶುಭೇ ಕಾಲೇ ಪ್ರತಿಮಾಂ ಸ್ಥಾಪಯೇದ್ಬುಧಃ ॥ ೧೯ ॥

---

೧೫. ಭುಜಕ್ಕೆ ಹತ್ತಿರವಿರುವ, ಎಡಭಾಗದ ಕೈಯಲ್ಲಿ ದೈತ್ಯರ ಸೊಕ್ಕನ್ನಳಿಯಿಸುವ, ಮಂಗಳಕರವಾದ ಪಾಂಚಜನ್ಯವೆಂದು ಪ್ರಸಿದ್ಧವಾದ, ಚಂದ್ರನಂತೆ ಪ್ರಕಾಶಮಾನವಾದ ಶಂಖವನ್ನು ಕೊಡಬೇಕು.

೧೬–೧೯. ಮುತ್ತಿನ ಸರಗಳನ್ನು ಹಾಕುವುದರಿಂದ ಉತ್ತಮವಾದ, ಶ್ರೇಷ್ಠವಾದ ಕುತ್ತಿಗೆಯ ಮೂರು ಪದರಗಳಿಂದ ಕೂಡಿರುವ, ಸುಂದರಗಳಾದ ಸ್ತನಗಳುಳ್ಳ, ಮನೋಹರವಾದ ಎದೆಯುಳ್ಳ, ಸುಂದರವಾದ, ಸಮಾನವಾದ ಹೊಟ್ಟೆಯುಳ್ಳ, ಸೊಂಟದಲ್ಲಿಟ್ಟ ಎಡಗೈಯುಳ್ಳ, ತಾವರೆಯಿಂದ ಕೂಡಿದ ಬಲಗೈಯುಳ್ಳ, ಬಾಹುಪೂರದಿಂದ ಕೂಡಿದ ತೋಳುಗಳುಳ್ಳ, ಉತ್ತಮವಾದ ಹೊಕ್ಕಳಿನ ಸುಳಿಗಳುಳ್ಳ, ಒಳ್ಳೆಯ ಸೊಂಟವುಳ್ಳ, ಸಮೀಚೀನವಾದ ಸೊಂಟದ ಹಿಂಭಾಗ ಮತ್ತು ತೊಡೆಗಳು—ಇವುಗಳುಳ್ಳ, ವಸ್ತ್ರ ಮತ್ತು ಸೊಂಟದ ಪಟ್ಟಿ—ಇವುಗಳಿಂದಲಂಕೃತವಾದ ಶ್ರೀ ಹರಿಯ ಪ್ರತಿಮೆಯನ್ನು ಮಾಡಿಸಿ, ಎಲೈ ರಾಜಶ್ರೇಷ್ಠನೇ! ಆ ಪ್ರತಿಮೆಯನ್ನು ಕಟೆದ ಶಿಲ್ಪಿಗೆ ಚಿನ್ನದನಾಣ್ಯ ಮತ್ತು ವಸ್ತ್ರ—ಇವುಗಳನ್ನು ಕೊಡುವುದರಿಂದ (ಪೂಜಿಸಿ) ಸನ್ಮಾನಿಸಿ, ಬುಧನಾದವನು ಶುಕ್ಲಪಕ್ಷದಲ್ಲಿ ಶುಭಸಮಯದಲ್ಲಿ ಪ್ರತಿಮೆಯನ್ನು ಸ್ಥಾಪಿಸಬೇಕು.

ಪ್ರಾಸಾದಸ್ಯಾಗ್ರತಃ ಕೃತ್ವಾ ಯಾಗಮಂಡಪಮುತ್ತಮಮ್ ।
ಚತುರ್ದ್ವಾರಿ ಚತುರ್ದಿಕ್ಷು ಚತುರ್ಭಿಸ್ತೋರಣೈರ್ಯುತಮ್ ॥ ೨೦ ॥
ಸಪ್ತಧಾನ್ಯಾಂಕುರೈರ್ಯುಕ್ತಂ ಶಂಖಭೇರೀನಿನಾದಿತಮ್ ।
ಪ್ರಕ್ಷಾಲ್ಯ ಪ್ರತಿಮಾಂ ವಿದ್ವದ್ಭಿಃ ಷಟ್ತ್ರಿಂಶದ್ಭಿರ್ಘಟೋದಕೈಃ ॥ ೨೧ ॥
ಪ್ರವಿಶ್ಯ ಮಂಡಪೇ ತಸ್ಮಿನ್ ಬ್ರಾಹ್ಮಣೈರ್ವೇದಪಾರಗೈಃ ।
ತತ್ರಾಪಿ ಸ್ನಾಪಯೇತ್ಪಶ್ಚಾತ್ಪಂಚಗವ್ಯೈಃ ಪೃಥಕ್ಪೃಥಕ್ ॥ ೨೨ ॥
ತತೋಷ್ಣವಾರಿಣಾ ಸ್ನಾಪ್ಯ ಪುನಃ ಶೀತೋದಕೇನ ಚ ।
ಹರಿದ್ರಾಕುಂಕುಮಾದ್ಯೈಸ್ತು ಚಂದನೈಶ್ಚೋಪಲೇಪಯೇತ್ ॥ ೨೩ ॥
ಪುಷ್ಪಮಾಲ್ಯೈರಲಂಕೃತ್ಯ ವಸ್ತ್ರೈರಾಚ್ಛಾದ್ಯ ತಾಂ ಪುನಃ ।
ಪುಣ್ಯಾಹಂ ತತ್ರ ಕೃತ್ವಾ ತು ಋಗ್ಭಿಸ್ತಾಂ ಪ್ರೋಕ್ಷ್ಯ ವಾರಿಭಿಃ ॥ ೨೪ ॥

೨೦–೨೨. ಆ ದೇವಪ್ರಾಸಾದದ ಎದುರಿನಲ್ಲಿ ಉತ್ತಮವಾದ ಯಾಗ ಮಂಟಪವನ್ನು ಕಟ್ಟಿಸುವುದು. ಅದರ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಬಾಗಿಲುಗಳಲ್ಲಿ ನಾಲ್ಕು ತೋರಣಗಳನ್ನು ಕಟ್ಟಬೇಕು. ಅಲ್ಲದೆ ಏಳು ಧಾನ್ಯಾಂಕುರಗಳು ಮತ್ತು ಶಂಖ, ಭೇರಿ—ಇವುಗಳ ಧ್ವನಿಗಳು—ಇವುಗಳಿಂದ ಮೊಳಗುವಂತೆಸಗಿ ಆ ಪ್ರತಿಮೆಯನ್ನು ವಿದ್ವಾಂಸರಿಂದ ಮೂವತ್ತಾರು ಕುಂಭಗಳಲ್ಲಿ ಪೂರ್ಣವಾದ ನೀರಿನಿಂದ ತೊಳೆದು, ನಾಲ್ಕು ವೇದಗಳಲ್ಲಿ ಪಾರಂಗತರಾದ ಬ್ರಾಹ್ಮಣರಿಂದ ಆ ಮಂಟಪದಲ್ಲಿ ಪ್ರವೇಶಿಸಿ, ತರುವಾಯ ಅಲ್ಲಿಯೂ ಬೇರೆ ಬೇರೆಯಾಗಿ, ಪಂಚಗವ್ಯಗಳಿಂದ ಸ್ನಾನ ಮಾಡಿಸುವುದು.

೨೩. ಅನಂತರದಲ್ಲಿ ಆ ಪ್ರತಿಮೆಯನ್ನು ಬಿಸುನೀರಿನಿಂದ ಸ್ನಾನ ಮಾಡಿಸಿ, ಪುನಃ ತಣ್ಣೀರಿನಿಂದ ಸ್ನಾನ ಮಾಡಿಸಿ, ಅರಸಿನ ಕುಂಕುಮವೇ ಮೊದಲಾದುವುಗಳಿಂದಲೂ, ಶ್ರೀ ಗಂಧದಿಂದಲೂ ಬಳಿಯಬೇಕು.

೨೪–೨೫. ಆ ಪ್ರತಿಮೆಯನ್ನು ಹೂಮಾಲೆಗಳಿಂದಲಂಕರಿಸಿ, ಮತ್ತೂ ವಸ್ತ್ರಗಳಿಂದ ಆಚ್ಛಾದಿಸಿ, ಅಲ್ಲಿ ಸ್ವಸ್ತಿ ಪುಣ್ಯಾಹವಾಚನವನ್ನು ಮಾಡಿಸಿ, ಆ ನೀರಿನಿಂದ

ಸ್ನಾತ್ವಾ ತಾಂ ಬ್ರಾಹ್ಮಣೈರ್ಭಕ್ತ್ಯೈಃ ಶಂಖಭೇರೀಸ್ವನೈರ್ಯುತಾವ್ ।
ವಾಸಯೇತ್ಸಪ್ತರಾತ್ರಂ ತು ತ್ರಿರಾತ್ರಂ ವಾ ನದೀಜಲೇ. ॥ ೨೫ ॥

ಹ್ರದೇ ತು ವಿಮಲೇ ಶುದ್ಧೇ ತಟಾಕೇ ವಾಪಿ ರಕ್ಷಯೇತ್ ।
ಅಧಿವಾಸ್ಯ ಜಲೇ ದೇವಮೇವಂ ಪಾರ್ಥಿವ ಪುಂಗವ ॥ ೨೬ ॥

ತತ ಉತ್ಥಾಪ್ಯ ವಿಪ್ರೈಸ್ತು ಸ್ಥಾಪ್ಯಾಲಂಕೃತ್ಯ ಪೂರ್ವವತ್ ।
ತತೋ ಭೇರೀನಿನಾದೈಸ್ತು ವೇದಘೋಷೈಶ್ಚ ಕೇಶವಮ್ ॥ ೨೭ ॥

ಆನೀಯ ಮಂಡಪೇ ಶುದ್ಧೇ ಪದ್ಮಾಕಾರವಿನಿರ್ಮಿತೇ ।
ಕೃತ್ವಾ ಪುನಸ್ತತಃ ಸ್ನಾಪ್ಯ ವಿಷ್ಣುಸೂಕ್ತೈರಲಂಕ್ರಿಯಾತ್ ॥ ೨೮ ॥

ಆ ಪ್ರತಿಮೆಯನ್ನು ಪುಷ್ಪಗಳಿಂದ ಪ್ರೋಕ್ಷಿಸಿ, ಭಕ್ತರಾದ ಬ್ರಾಹ್ಮಣರಿಂದ ಶಂಖ, ಭೇರಿಗಳನ್ನು ಮೊಳಗಿಸುತ್ತಾ ಸ್ನಾನ ಮಾಡಿಸಿ, ನದಿಯ ನೀರಿನಲ್ಲಿ ಏಳು ರಾತ್ರಿಯಾಗಲೀ, ಮೂರು ರಾತ್ರಿಯಾಗಲೀ ವಾಸಮಾಡಿಸಬೇಕು.

೨೬. ಎಲೈ ಪಾರ್ಥಿವಶ್ರೇಷ್ಠನೇ ! ಇಂತು ನಿರ್ಮಲವಾದ ಮಡುವಿನಲ್ಲಾಗಲೀ, ಶುದ್ಧವಾದ ಕೆರೆಯಲ್ಲಾಗಲೀ ನೀರಿನಲ್ಲಿರುವ ಹಾಗೆ ಮಾಡಿ, ಆ ದೇವ ಪ್ರತಿಮೆಯನ್ನು ರಕ್ಷಿಸುವುದು.

೨೭–೨೮. ಅನಂತರದಲ್ಲಿ ಆ ಕೇಶವ ಪ್ರತಿಮೆಯನ್ನು ಬ್ರಾಹ್ಮಣರಿಂದ ನೀರಿನಿಂದ ಮೇಲಕ್ಕೆ ತೆಗೆಯಿಸಿ, ಭೂಮಿಯ ಮೇಲಿಟ್ಟು, ಮೊದಲಿನಂತೆ ಅಲಂಕರಿಸಿ, ಬಳಿಕ ಭೇರಿಗಳನ್ನು ಮೊಳಗಿಸಿ, ವೇದಗಳನ್ನು ಪಠಿಸುತ್ತಾ, ತೆಗೆದುಕೊಂಡು ಬಂದು, ಪರಿಶುದ್ಧವಾದ ಪದ್ಮಾಕೃತಿಯಿಂದ ಮೊದಲೇ ರಚಿತವಾಗಿ ಗೊತ್ತಾಗಿದ್ದ, ಮಂಡಪದಲ್ಲಿ ಬಿಜಯ ಮಾಡಿಸಿ, ಮತ್ತೂ ವಿಷ್ಣುಸೂಕ್ತ ಪಠನದಿಂದ ಸ್ನಾನ ಮಾಡಿಸಿ, ಅಲಂಕರಿಸುವುದು.

ಬ್ರಾಹ್ಮಣಾನ್ ಭೋಜಯಿತ್ವಾ ತು ವಿಧಿವತ್ಷೋಡಶರ್ತ್ವಿಜಃ ।
ಚತುರ್ಭಿರಧ್ಯಯನಂ ಕಾರ್ಯಂ ಚತುರ್ಭಿಃ ಪಾಲನಂ ತಥಾ ॥ ೨೯ ॥

ಚತುರ್ಭಿಸ್ತು ಚತುರ್ದಿಕ್ಷು ಹೋಮಃ ಕಾರ್ಯೋ ವಿಚಕ್ಷಣೈಃ ।
ಪುಷ್ಪಾಕ್ಷತಾನ್ನಮಿಶ್ರೇಣ ದದ್ಯಾದ್ದಿಕ್ಷು ಬಲೀನ್ನೃಪ ॥ ೩೦ ॥

ಏಕೇನ ದಾಪಯೇತ್ತೇಷಾಮಿಂದ್ರಾದ್ಯಾಃ ಪ್ರೀಯತಾಮಿತಿ ।
ಪ್ರತ್ಯೇಕಂ ಸಾಯಂ ಸಂಧ್ಯಾಯಾಂ ಮಧ್ಯರಾತ್ರೇ ತಥೋಷಸಿ ॥ ೩೧ ॥

ಉದಿತೇ ಚ ತತೋ ದದ್ಯಾತ್ ಮಾತೃವಿಪ್ರಗಣಾಯ ವಾ ।
ಜಪೇತ್ ಪುರುಷಸೂಕ್ತಂ ತು ಏಕತಸ್ತು ಪುನಃ ಪುನಃ ॥ ೩೨ ॥

---

೨೯. ಶಾಸ್ತ್ರೋಕ್ತ ಕ್ರಮದಿಂದ ಬ್ರಾಹ್ಮಣರನ್ನೂ, ಹದಿನಾರು ಮಂದಿ ಋತ್ವಿಜರನ್ನೂ ಭೋಜನ ಮಾಡಿಸಿ, ನಾಲ್ವರಿಂದ ನಾಲ್ಕು ವೇದಗಳ ಪಾರಾಯಣವನ್ನೂ, ಹಾಗೆಯೇ ನಾಲ್ವರಿಂದ ರಕ್ಷಣೆಯನ್ನೂ ಮಾಡಿಸುವುದು.

೩೦. ಮತ್ತು ನಾಲ್ವರಿಂದ ನಾಲ್ಕು ದಿಕ್ಕುಗಳಲ್ಲಿ ಹೋಮಗಳನ್ನು ಮಾಡಿಸುವುದು; ಇತರ ನಾಲ್ವರಾದ ವಿದ್ವಾಂಸರಿಂದ ಹೂವು, ಅಕ್ಷತ, ಅನ್ನ–ಇವುಗಳನ್ನು ಬೆರಕೆಯಿಂದ ದಿಕ್ಕುಗಳಲ್ಲೆಲ್ಲಾ ಬಲಿಗಳನ್ನು ಕೊಡಿಸತಕ್ಕದ್ದು.

೩೧–೩೨. ಒಬ್ಬ ಋತ್ವಿಜನಿಂದ ಇಂದ್ರನೇ ಮೊದಲಾದವರು ತುಷ್ಟರಾಗಲೆಂದು ಬಲಿಯನ್ನು ಕೊಡಿಸುವುದು. ಅಲ್ಲದೆ ಸಾಯಂಕಾಲದ ಸಂಜೆಯಲ್ಲಿಯೂ, ನಡುವಿರುಳಿನಲ್ಲಿಯೂ, ಉಷಃಕಾಲದಲ್ಲಿಯೂ, ಸೂರ್ಯೋದಯ ಕಾಲದಲ್ಲಿಯೂ ಮಾತೃಗಣಕ್ಕೂ, ವಿಪ್ರಗಣಕ್ಕೂ ಬಲಿಪ್ರದಾನ ಮಾಡಿಸುವುದು. ಒಂದೆಡೆಯಲ್ಲಿ ಯಜಮಾನನಿದ್ದು, ಅಡಿಗಡಿಗೆ ಪುರುಷಸೂಕ್ತವನ್ನು ಜಪಿಸುತ್ತಾ, ಎಲೈ ರಾಯನೇ! ಒಮ್ಮನದಿಂದ ಶ್ರೀ ವಿಷ್ಣುಮಂದಿರದ ನಡುವೆ ಇದ್ದು, [illegible], ಬ್ರಾಹ್ಮ

ಏಕಶೋ ಮನಸಾ ರಾಜನ್ ವಿಷ್ಣೋರ್ಮಂದಿರಮಧ್ಯಗಃ ।
ಅಹೋರಾತ್ರೋಷಿತೋ ಭೂತ್ವಾ ಯಜಮಾನೋ ದ್ವಿಜೈಃ ಸಹ॥ ೩೩ ॥

ಪ್ರವಿಶ್ಯ ಪ್ರತಿಮಾದ್ವಾರಂ ಶುಭಲಗ್ನೇ ವಿಚಕ್ಷಣಃ ।
ದೇವಸೂಕ್ತಂ ದ್ವಿಜೈಸ್ಸಾರ್ಧಮುಪಸ್ಥಾಪ್ಯ ಚ ತಾಂ ದೃಢಾಮ್ ॥ ೩೪ ॥

ಸಂಸ್ಥಾಪ್ಯ ವಿಷ್ಣುಸೂಕ್ತೇನ ಪವಮಾನೇನ ವಾ ಪುನಃ ।
ಪ್ರೋಕ್ಷಯೇದ್ದೇವದೇವೇಶಮಾಚಾರ್ಯಃ ಕುಶವಾರಿಣಾ ॥ ೩೫ ॥

ತದಗ್ರೇ ಚಾಗ್ನಿಮಾಧಾಯ ಸಂಪರಿಸ್ತೀರ್ಯ ಯತ್ನತಃ ।
ಜುಹುಯಾಜ್ಜಾತಕರ್ಮಾದಿ ಗಾಯತ್ರ್ಯಾ ವೈಷ್ಣವೇನ ತು ॥ ೩೬ ॥

ಚತುರ್ಭಿರಾಜ್ಯಾಹುತಿಭಿರೇಕಾಮೇಕಕ್ರಿಯಾಂ ಪ್ರತಿ ।
ಆಚಾರ್ಯಸ್ತು ಸ್ವಯಂ ಕುರ್ಯಾದಸ್ತ್ರೈರ್ಬಂಧಂ ಚ ಕಾರಯೇತ್ ॥ ೩೭ ॥

ರೊಡನೆ ವಾಸಮಾಡುತ್ತಲಿದ್ದು, ವಿವೇಕಿಯಾದ ಆ ಯಜಮಾನನು ಶುಭಲಗ್ನ ವಲ್ಲಿ ಪ್ರತಿಮೆಯನ್ನಿಟ್ಟಿರುವ ಕೋಣೆಯ ಬಾಗಿಲನ್ನು ಪ್ರವೇಶಿಸಿ, ಬ್ರಾಹ್ಮಣ ರೊಡನೆ ಪೂಜಿಸಿ, ಆ ಪ್ರತಿಮೆಯನ್ನು ಚಲಿಸದಂತಿಟ್ಟು, ಶ್ರೀವಿಷ್ಣುಸೂಕ್ತದಿಂದಾ ಗಲೀ, ಪವಮಾನಸೂಕ್ತದಿಂದಾಗಲೀ ಪುನಃ ಆಚಾರ್ಯನು ಕುಶೋದಕದಿಂದ ದೇವೇಶನ ಪ್ರತಿಮೆಯನ್ನು ಪ್ರೋಕ್ಷಿಸಬೇಕು.

೩೬. ಅದರೆದುರಿನಲ್ಲಿ ಅಗ್ನಿಯನ್ನು ಆಧಾನ ಮಾಡಿ, ಯತ್ನದಿಂದ ಪರಿಸ್ತರ ಣಾದಿಗಳನ್ನು ಇಟ್ಟು, ವೈಷ್ಣವಗಾಯತ್ರಿಯಿಂದ ಜಾತಕರ್ಮ ಮೊದಲಾದ ಕರ್ಮಾಂಗಹೋಮಗಳನ್ನು ಮಾಡುವುದು.

೩೭. ಆಚಾರ್ಯನು ಒಂದು ಕರ್ಮಕ್ಕೆ ನಾಲ್ಕು ಆಜ್ಯಾಹುತಿಗಳಿಂದ ತಾನೇ ಹೋಮವನ್ನು ಮಾಡುವುದು. ಆ ಪ್ರತಿಮೆಗೆ ಅಸ್ತ್ರಗಳಿಂದ ಬಂಧವನ್ನು ಮಾಡಿಸುವುದು,

ತ್ರಾತಾರಮಪಿ ವೇದ್ಯಾಂ ತು ಕುರ್ಯಾದಾಜ್ಯಪ್ರಣುನ್ನಕಮ್ ।
ಪರೋಥ್ವರ್ಯಾಸಯಾಭ್ಯಾಂ ಚ ವಾರುಣ್ಯಾಂ ನಿರ್ಮಮೇತಿ ಚ ॥ ೩೮ ॥

ಯಾತೇ ಸೋಮೇತಿ ಸೌಮ್ಯಾಂ ತು ಹುವೇದಾಜ್ಯಾಹುತೀರ್ನೃಪ ।
ಪರೋ ಮಾತ್ರೇತಿ ಸೂಕ್ತಾಭ್ಯಾಂ ಸರ್ವತ್ರಾಜ್ಯಾಹುತೀರ್ನೃಪ ॥ ೩೯ ॥

ಹುತ್ವಾ ಜಪೇಚ್ಚ ವಿಧಿವದ್ಯದಸ್ಯೇತಿ ಚ ಸ್ವಿಷ್ಟಕೃತ್ ।
ತತಃ ಸ ದಕ್ಷಿಣಾಂ ದದ್ಯಾದೃತ್ವಿಗ್ಭ್ಯಶ್ಚ ಯಥಾರ್ಹತಃ ॥ ೪೦ ॥

ವಸ್ತ್ರೇ ದ್ವೇ ಕುಂಡಲೇ ಚೈವ ಗುರವೇ ಸಾಂಗುಲೀಯಕಮ್ ।
ಯಜಮಾನಸ್ತತೋ ದದ್ಯಾದ್ವಿಭವೇ ಸತಿ ಕಾಂಚನಮ್ ॥ ೪೧ ॥

೩೮.-೩೯. ವೇದಿಯಲ್ಲಿ ರಕ್ಷಕನನ್ನು ಹೋಮದ ತುಪ್ಪವನ್ನು ಹತ್ತಿರಕ್ಕೆ ನೂಕುವವನನ್ನಾಗಿ ಮಾಡುವುದು. ಪಶ್ಚಿಮದಿಕ್ಕಿನಲ್ಲಿ ಪರೋಥ್ವರ್ಯಾಸಯುಗಳೆಂಬ ಮಂತ್ರಗಳಿಂದ ಅಹಂಕಾರರಹಿತನಾಗಿಯೂ, ಯಾತೇ ಸೋಮವೆಂಬ ಮಂತ್ರದಿಂದ ಸೌಮ್ಯದಲ್ಲಿ ಆಜ್ಯಾಹುತಿಗಳನ್ನು ಹೋಮಮಾಡುವುದು. ಎಲೈ ರಾಯನೇ! ಪರೋಮಾತ್ರವೆಂಬ ಸೂಕ್ತಗಳಿಂದ ಆಜ್ಯಾಹುತಿಗಳನ್ನು ಹೋಮ ಮಾಡುವುದು.

೪೦. ಶಾಸ್ತ್ರೋಕ್ತವಿಧಿಯಿಂದ ಯದಸ್ಯವೆಂಬ ಮಂತ್ರದಿಂದ ಸ್ವಿಷ್ಟಕೃದ್ಧೋಮವನ್ನು ಮಾಡಿ, ಜಪಮಾಡುವುದು. ಅನಂತರದಲ್ಲಿ ಋತ್ವಿಜರಿಗೆ ಅವರವರ ಯೋಗ್ಯತಾನುಸಾರವಾಗಿ ದಕ್ಷಿಣೆಯನ್ನು ಕೊಡುವುದು.

೪೧. ಅನಂತರದಲ್ಲಿ ಯಜಮಾನನು ಗುರುಗಳಿಗೆ ಎರಡು ವಸ್ತ್ರಗಳನ್ನೂ, ಕರ್ಣಕುಂಡಲವನ್ನೂ, ಉಂಗುರವನ್ನೂ, ಐಶ್ವರ್ಯವು ಹೆಚ್ಚಾಗಿದ್ದರೆ, ಸುವರ್ಣ ನಾಣ್ಯವನ್ನೂ ದಾನವಾಗಿ ಕೊಡುವುದು.

ಕಲಶಾಷ್ಟಸಹಸ್ರೇಣ ಕಲಶಾಷ್ಟಶತೇನ ಚ ।
ಏಕವಿಂಶತಿನಾ ವಾಽಪಿ ಸ್ನಪನಂ ಕಾರಯೇದ್ಬುಧಃ ॥ ೪೨ ॥

ಶಂಖದುಂದುಭಿ ನಿರ್ಘೋಷೈಃ ವೇದಘೋಷೈಶ್ಚ ಮಂಡಲೈಃ ।
ಯವವ್ರೀಹಿಯುತೈಃ ಪಾತ್ರೈರುದ್ಧೃತೈರುಚ್ಛ್ರಿತಾಂಕುರೈಃ ॥ ೪೩ ॥

ದೀಪಯಷ್ಟಿಪತಾಕಾಭಿಃ ಛತ್ರಚಾಮರತೋರಣೈಃ ।
ಸ್ನಪನಂ ಕಾರಯಿತ್ವಾ ತು ಯಥಾವಿಭವವಿಸ್ತರಮ್ ॥ ೪೪ ॥

ತತ್ರಾಪಿ ದದ್ಯಾದ್ವಿಪ್ರೇಭ್ಯೋ ಯಥಾಶಕ್ತ್ಯಾ ತು ದಕ್ಷಿಣಾಮ್ ।
ಏವಂ ಯಃ ಕುರುತೇ ರಾಜನ್ ಪ್ರತಿಷ್ಠಾಂ ದೇವಚಕ್ರಿಣಃ ॥ ೪೫ ॥

ಸರ್ವಪಾಪವಿನಿರ್ಮುಕ್ತಃ ಸರ್ವಭೂಷಣಭೂಷಿತಃ ।
ವಿಮಾನೇನ ವಿಚಿತ್ರೇಣ ತ್ರಿಃಸಪ್ತಕುಲಜೈರ್ವೃತಃ ॥ ೪೬ ॥

---

೪೨. ವಿಧಿಯನ್ನು ತಿಳಿದವನು ಎಂಟುಸಾವಿರ ಕಲಶಗಳಿಂದಲಾಗಲೀ, ಎಂಟುನೂರು ಕಲಶಗಳಿಂದಲಾಗಲೀ, ಕೊನೆಗೆ ಇಪ್ಪತ್ತೊಂದು ಕಲಶಗಳಿಂದ ಲಾಗಲೀ, ಸ್ನಾನವನ್ನು ಮಾಡಿಸುವುದು.

೪೩.–೪೭. ಶಂಖದುಂದುಭಿಗಳ ಮೊಳಗುಗಳಿಂದಲೂ, ವೇದಘೋಷಗಳ ಸಮುದಾಯದಿಂದಲೂ, ಜವೆ, ಬತ್ತ –ಇವುಗಳಿಂದಕೂಡಿದ ಪಾತ್ರೆಗಳಿಂದ ಸೊಕ್ಕೆ ತೆಗೆದ ಬೆಳೆದ ಮೊಳಕೆಗಳಿಂಲೂ, ಪಂಜುಗಳಿಂದಲೂ, ಪಳವಿಗೆಗಳಿಂಲೂ, ಛತ್ರ ಚಾಮರ, ತೋರಣಗಳಿಂದಲೂ ಕೂಡಿ ಐಶ್ವರ್ಯವಿದ್ದಷ್ಟು ಹಿರಿದಾಗಿ ಆ ಮೂರ್ತಿಗೆ ಸ್ನಾನವನ್ನು ಮಾಡಿಸಿ, ಅಲ್ಲಿಯೂ ಬ್ರಾಹ್ಮಣರಿಗೆ ತನ್ನ ಶಕ್ತಿಯಿದ್ದಷ್ಟು ದಕ್ಷಿಣೆಯನ್ನು ಕೊಡುವುದು. ಯಾವಪುರುಷನು ಎಲೈ ರಾಯನೇ! ಇಂತು ಕ್ರೀಡಾದಿ ಗುಣವಿಶಿಷ್ಟನಾದ ಚಕ್ರಧಾರಿಯಾದ, ಶ್ರೀ ಹರಿಯ ಮೂರ್ತಿಯ ಪ್ರತಿಷ್ಠೆಯನ್ನು ಮಾಡುತ್ತಾನೆಯೋ, ಆತನು ಸಕಲ ಪಾಪಗಳಿಂದ ಮುಕ್ತನಾಗಿ, ಎಲ್ಲತೊಡವುಗಳಿಂದಲಂಕೃತನಾಗಿ,

ಪೂಜಾಂ ಸಂಪ್ರಾಪ್ಯ ಮಹತೀಮಿಹಲೋಕಾದಿಷು ಕ್ರಮಾತ್ ।
ಬಾಂಧವಾಂಸ್ತೇಷು ಸಂಸ್ಥಾಪ್ಯ ವಿಷ್ಣುಲೋಕೇ ಮಹೀಯತೇ ॥ ೪೭ ॥

ತತ್ರೈವ ಜ್ಞಾನಮಾಸಾದ್ಯ ವೈಷ್ಣವಂ ಪದಮಾಪ್ನುಯಾತ್ ।
ಪ್ರತಿಷ್ಠಾವಿಧಿರಯಂ ವಿಷ್ಣೋರ್ಮೂರ್ತ್ಯೈವಂ ತೇ ಪ್ರಕೀರ್ತಿತಃ ॥ ೪೮ ॥

ಪಠತಾಂ ಶೃಣ್ವತಾಂ ಚೈವ ಸರ್ವಪಾಪಪ್ರಣಾಶನಃ ॥ ೪೯ ॥

ಯದಾ ನೃಸಿಂಹಂ ನರನಾಥ ಭೂಮೌ
ಸಂಸ್ಥಾಪ್ಯ ವಿಷ್ಣುಂ ವಿಧಿನಾ ಹ್ಯನೇನ ।

ವಿಚಿತ್ರ ವಿಮಾನದಿಂದ ಮುಯ್ಯೇಳು ಕುಲಜರಿಂದ ಕೂಡಿ, ಕ್ರಮದಿಂದ ಇಹ ಲೋಕದಲ್ಲಿ ವಿಶೇಷ ಸನ್ಮಾನಿತನಾಗಿ, ಆ ದೇವಾಲಯಗಳಲ್ಲಿ ತನ್ನ ಬಾಂಧವರನ್ನಿಟ್ಟು, ತಾನು ಶ್ರೀ ವಿಷ್ಣುಲೋಕದಲ್ಲಿ ಮಾನಿತನಾಗುತ್ತಾನೆ.

೪೮.–೪೯. ಅವನು ಆ ಜನ್ಮದಲ್ಲಿಯೇ ಅಪರೋಕ್ಷಜ್ಞಾನವನ್ನು ಪಡೆದು, ವಿಷ್ಣುಲೋಕವನ್ನೈಯ್ದುವನು. ಎಲೈ ಸಹಸ್ರಾನೀಕರಾಯನೇ! ನಿನಗೆ ಈಗ ಶ್ರೀ ವಿಷ್ಣುವಿನ ಪ್ರತಿಮಾ ಪ್ರತಿಷ್ಠಾ (ನಿಯಮವನ್ನು) ಕಲ್ಪವನ್ನು ಹೇಳಿದೆನು. ಇದನ್ನು ಓದುವವರಿಗೂ, ಕೇಳುವವರಿಗೂ, ಪಾಪಗಳೆಲ್ಲವೂ ಕಳೆದು ಹೋಗುವುವು.

೫೦. ಎಲೈ ಜನರೊಡೆಯನಾದ ಸಹಸ್ರಾನೀಕರಾಯನೇ! ಅಧಿಕಾರಿಯಾದ ಮಾನವನು ಯಾವಾಗ ಶ್ರೀ ನರಸಿಂಹ ಮೂರ್ತಿಯನ್ನು ಭೂಮಿಯಲ್ಲಿ ಈ ವಿಧಿಯಿಂದ ಪ್ರತಿಷ್ಠಾಪಿಸುತ್ತಾನೆಯೋ, ಆಗ ಇವನು ಪುನರಾವೃತ್ತಿ ರಹಿತವಾದ ಶ್ರೀ ವಿಷ್ಣು

ತದಾ ಹ್ಯಸೌ ಯಾತಿ ಹರೇಃ ಪದಂ ತು
ಯತ್ರ ಸ್ಥಿತೋಽಯಂ ನ ನಿವರ್ತತೇ ಪುನಃ ॥ ೫೦ ॥

ಇತಿ ಶ್ರೀ ನರಸಿಂಹಪುರಾಣೇ ನರಸಿಂಹಸ್ಯ ಪ್ರತಿಷ್ಠಾವಿಧಿರ್ನಾಮ
ಷಟ್ಪಂಚಾಶೋಽಧ್ಯಾಯಃ

ಲೋಕವನ್ನು ಹೊಂದುತ್ತಾನೆ.' ಎಂದು ಮಾರ್ಕಂಡೇಯನು ಸಹಸ್ರಾನೀಕನಿಗೆ ಹೇಳಿದುದನ್ನು ಸೂತರು ಭರದ್ವಾಜನಿಗೆ ಹೇಳಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಶ್ರೀನರಸಿಂಹಮೂರ್ತಿಯ ಪ್ರತಿಷ್ಠಾ
ನಿಯಮವೆಂಬ ಐವತ್ತಾರನೆಯ ಅಧ್ಯಾಯವು ಮುಗಿದುದು.

ಐವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ 'ಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನ ಇಚ್ಛೆಯಂತೆ ಶ್ರೀ ಮಹಾವಿಷ್ಣುವಿನ ಪ್ರತಿಮಾಪ್ರತಿಷ್ಠಾ ವಿಧಿಯನ್ನು ಹೇಳತೊಡಗಿ, ಯಜಮಾನನು ಪಟುಕರಣನಾದ ಶಿಲ್ಪಿಯಿಂದ ಉತ್ತಮವಾದ ದೇವರ ಪ್ರತಿಮೆಯನ್ನು ಮಾಡಿಸಿ, ಅದನ್ನು ಪಂಚಗವ್ಯಾದಿಗಳಿಂದ ಸ್ನಾನ ಮಾಡಿಸಿ, ಜಲಾಧಿವಾಸ ಮಾಡಿಸಿ, ಚತುರಸ್ರವಾಗಿ ಭೂಶೋಧನಮಾಡಿ, ಅಲ್ಲಿ ಉತ್ತಮವಾದ ಪ್ರಾಸಾದವನ್ನು ಕಲ್ಲಿನಿಂದಾಗಲೀ, ಇಟ್ಟಿಗೆಯಿಂದಾಗಲೀ, ಮಣ್ಣಿನಿಂದಲಾಗಲೀ ಕಟ್ಟಿಸಿ, ಅದರ ಮುಂಭಾಗದಲ್ಲಿ ಯಾಗಮಂಟಪವನ್ನು ಮಾಡಿಸಿ, ಅಲ್ಲಿ ಆಗಮೋಕ್ತ ಕ್ರಮದಿಂದ ಆಜ್ಯಾದಿ ಹೋಮಗಳನ್ನು ಋತ್ವಿಜರಿಂದ ಮಾಡಿಸಿ, ಅನಂತರ ಆ ಮೂರ್ತಿಯನ್ನು ಸ್ಥಿರವಾಗಿ ಪ್ರತಿಷ್ಠಾಪಿಸಿ, ಆ ಋತ್ವಿಜರು, ಗುರುಗಳು ಇವರಿಗೆಲ್ಲಾ ಯಥಾಶಕ್ತಿ ಯಥಾಯೋಗ್ಯವಾಗಿ ದಕ್ಷಿಣಾದಿಗಳನ್ನು ಕೊಡುವುದು. ಈ ಕಾರ್ಯವನ್ನು ಮಾಡಿದವನು ಇಪ್ಪತ್ತೊಂದು ತಲೆ ಸಹಿತವಾಗಿ, ಉತ್ತಮಗತಿಯನ್ನು ಹೊಂದುತ್ತಾನೆ. ಅವನು ಪುನರಾವೃತ್ತಿಯಿಲ್ಲದ ವಿಷ್ಣುಲೋಕದಲ್ಲಿ ಮಾನಿತನಾಗುತ್ತಾನೆ' ಎಂದು ನಿರೂಪಿಸಿದುದನ್ನು ಸೂತರು ಭರದ್ವಾಜಾದಿಗಳಿಗೆ ಹೇಳಿರುತ್ತಾರೆ.

ಇಂತು ಐವತ್ತಾರನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ಸಪ್ತಪಂಚಾಶೋಽಧ್ಯಾಯಃ

ಅಥ ಬ್ರಾಹ್ಮಣ ಧರ್ಮಕಥನಮ್.

॥ ರಾಜೋವಾಚ ॥

ಭಕ್ತಾನಾಂ ಲಕ್ಷಣಂ ಬ್ರೂಹಿ ನರಸಿಂಹಸ್ಯ ಮೇ ದ್ವಿಜ ।
ಯೇಷಾಂ ಸಂಗತಿಮಾತ್ರೇಣ ವಿಷ್ಣುಲೋಕೋ ನ ದೂರತಃ ॥ ೧ ॥

ವರ್ಣಾಶ್ರಮಧರ್ಮಗಳ ನಿರೂಪಣೆಯು.

ಐವತ್ತೇಳನೆಯ ಅಧ್ಯಾಯವು.

ಇನ್ನು ಬ್ರಾಹ್ಮಣ ಧರ್ಮವನ್ನು ಹೇಳುವುದು.

ಶತಾನೀಕರಾಯನು ಮಾರ್ಕಂಡೇಯಮುನಿಗೆ ಇಂತು ಹೇಳುತ್ತಾನೆ:—

೧. ‘ ಎಲೈ ಮಾರ್ಕಂಡೇಯಮುನಿಯೇ ! ಯಾವ ಶ್ರೀನರಸಿಂಹಸ್ವಾಮಿಯ ಭಕ್ತರ ಸಹವಾಸದಿಂದಲೇ ವಿಷ್ಣುಲೋಕವು ಲಭಿಸುವುದೋ, ಅಂತಹ ಶ್ರೀನರಸಿಂಹ ಸ್ವಾಮಿಯ ಭಕ್ತರ ಲಕ್ಷಣವನ್ನು ದಯಮಾಡಿ ಹೇಳು. ’ ಎಂದು ಕೇಳಿದನು.

॥ ಶ್ರೀ ಮಾರ್ಕಂಡೇಯ ಉವಾಚ ॥

ವಿಷ್ಣುಭಕ್ತಾ ಮಹೋತ್ಸಾಹಾ ವಿಷ್ಣ್ವರ್ಚನವಿಧೌ ಸದಾ ।
ಸಂಯುತಾ ಧರ್ಮಸಂಪನ್ನಾ ಸರ್ವಾರ್ಥಾನ್ ಸಾಧಯಂತಿ ತೇ ॥ ೨ ॥

ಪರೋಪಕಾರನಿರತಾ ಗುರುಶುಶ್ರೂಷಣೇ ರತಾಃ ।
ವರ್ಣಾಶ್ರಮಾಚಾರಯುತಾಃ ಸರ್ವೇಷಾಂ ಸುಪ್ರಿಯಂವದಾಃ ॥ ೩ ॥

ವೇದವೇದಾರ್ಥತತ್ತ್ವಜ್ಞಾ ಗತರೋಷಾ ಗತಸ್ಪೃಹಾಃ ।
ಶಾಂತಾಶ್ಚ ಸೌಮ್ಯವದನಾ ನಿತ್ಯಂ ಧರ್ಮಪರಾಯಣಾಃ ॥ ೪ ॥

ಹಿತಂ ಮಿತಂ ಚ ವಕ್ತಾರಃ ಕಾಲೇ ಶಕ್ತ್ಯಾತಿಥಿಪ್ರಿಯಾಃ ।
ದಂಭಮಾಯಾವಿನಿರ್ಮುಕ್ತಾಃ ಕಾಮಕ್ರೋಧವಿವರ್ಜಿತಾಃ ॥ ೫ ॥

ಶ್ರೀ ಮಾರ್ಕಂಡೇಯಮುನಿಯು ಹೇಳುತ್ತಾನೆ :—

೨. ‘ ಎಲೈ ಸಹಸ್ರಾನೀಕರಾಯನೇ ! ಕೇಳು ; ಶ್ರೀ ಮಹಾವಿಷ್ಣುವಿನ ಭಕ್ತರು ಯಾವಾಗಲೂ ಶ್ರೀಮಹಾವಿಷ್ಣುವನ್ನು ಪೂಜಿಸುವುದರಲ್ಲಿ ಅತ್ಯಂತಾಸಕ್ತರಾಗಿರುತ್ತಾರೆ. ಅವರು ಜಿತೇಂದ್ರಿಯರೂ, ಧರ್ಮಸಂಪನ್ನರೂ ಆಗಿ, ಸಕಲ ಪ್ರಯೋಜನಗಳನ್ನೂ ಗಳಿಸುತ್ತಾರೆ.

೩–೫. ಅವರು ಹೆರರಿಗೆ ಸಹಾಯ ಮಾಡುವುದರಲ್ಲಿ ಅತ್ಯಂತಾಸಕ್ತರೂ, ಗುರು ಜನರ ಸೇವೆಯಲ್ಲಿ ತೊಡಗಿದವರೂ, ವರ್ಣ ಮತ್ತು ಆಶ್ರಮ—ಇವುಗಳ ಆಚಾರದಿಂದ ಸಂಪನ್ನರೂ, ಎಲ್ಲರಿಗೂ ಹಿತವಾದುದನ್ನಾಡುವವರೂ, ವೇದಗಳು ಮತ್ತು ವೇದಾರ್ಥಗಳು—ಇವುಗಳ ತತ್ತ್ವವನ್ನರಿತವರೂ, ರೋಷರಹಿತರೂ, ಆಶಾಶೂನ್ಯರೂ, ಶಾಂತರೂ, ಸೌಮ್ಯವಾದ ಮುಖಮುದ್ರೆಯುಳ್ಳವರೂ, ನಿರಂತರದಲ್ಲಿಯೂ ಧರ್ಮವನ್ನನುಷ್ಠಿಸುವುದರಲ್ಲಿ ತೊಡಗಿದವರೂ, ಹಿತಮಿತವಾದುವನ್ನು ಹೇಳುವವರೂ, ಉಚಿತ ಸಮಯದಲ್ಲಿ ಯೋಗ್ಯತೆಯಿದ್ದಷ್ಟು ಅತಿಥಿಗಳಿಗೆ ಪ್ರಿಯವನ್ನೆಸಗುವವರೂ, ಗರ್ವದುರಭಿಮಾನಗಳಿಲ್ಲದವರೂ, ಕಾಮಕ್ರೋಧಗಳಿಲ್ಲದವರೂ ಆಗಿರುತ್ತಾರೆ.

ಈದೃಗ್ವಿಧಾ ನರಾ ಧೀರಾಃ ಕ್ಷಮಾವಂತೋ ಬಹುಶ್ರುತಾಃ ।
ವಿಷ್ಣುಕೀರ್ತನಸಂಜಾತಹರ್ಷರೋಮಾಂಚಿತಾ ಜನಾಃ ॥ ೬

ವಿಷ್ಣ್ವರ್ಚಾಪೂಜನೇ ಯತ್ತಾಸ್ತತ್ಕಥಾಯಾಂ ಕೃತಾದರಾಃ ।
ಈದೃಗ್ವಿಧಾ ಮಹಾತ್ಮಾನೋ ವಿಷ್ಣುಭಕ್ತಾಃ ಪ್ರಕೀರ್ತಿತಾಃ ॥ ೭

ಯೇ ವರ್ಣಾಶ್ರಮಧರ್ಮಸ್ಥಾಃ ತೇ ಭಕ್ತಾಃ ಕೇಶವಂ ಪ್ರತಿ ।
ಇತಿ ಪ್ರೋಕ್ತಂ ತ್ವಯಾ ವಿದ್ವನ್ ಭೃಗುವರ್ಯಗುರೋ ಮಮ ॥ ೮ ।

ವರ್ಣಾನಾಮಾಶ್ರಮಾಣಾಂ ಚ ಧರ್ಮಂ ಮೇ ವಕ್ತುಮರ್ಹಸಿ ।
ಯೈಃ ಕೃತ್ಯೈಸ್ತುಷ್ಯತೇ ದೇವೋ ನರಸಿಂಹಃ ಸನಾತನಃ ॥ ೯ ।

---

೬. ಈ ತೆರನಾದ ಮಾನವರು ನಿರ್ವಿಕಾರರೂ, ಸಹನಶೀಲರೂ, ಬಹುವಾಗಿ ಶಾಸ್ತ್ರತತ್ವವನ್ನರಿತವರೂ, ಶ್ರೀ ಮಹಾವಿಷ್ಣುವಿನ ಗುಣಗಳನ್ನು ಹಾಡುವುರಿಂದುಂಟಾದ ಸಂತಸದಿಂದ ರೋಮಾಂಚಿತಗಾತ್ರರಾದವರೂ ಆಗಿರುತ್ತಾರೆ.

೭. ಮತ್ತು ಅವರು ಶ್ರೀ ಮಹಾವಿಷ್ಣುವಿನ ಅವತಾರ ರೂಪಗಳ ಪೂಜೆಯ್ಕ್ ತೊಡಗಿದವರೂ, ಆ ಮಹಾವಿಷ್ಣುವಿನ ಕಥೆಯಲ್ಲಿ ಆದರವಿರುವವರೂ ಆಗಿರ ತ್ತಾರೆ. ಈ ತೆರನಾದ ಮಹಾತ್ಮರು ವಿಷ್ಣುಭಕ್ತರೆಂದು ಜ್ಞಾನಿಗಳಿಂದ ಹೇಳಿ' ಕೊಳ್ಳುತ್ತಾರೆ."

೮-೯. 'ಎಲೈ ಜ್ಞಾನಿಯಾದ ಮಾರ್ಕಂಡೇಯಮುನಿಯೇ ! ಭೃಗು ಶ್ರೇಷ್ಠನೇ ! ನನ್ನ ಗುರುವೇ ! 'ಯಾರು ವರ್ಣಾಶ್ರಮಗಳ ಧರ್ಮನಿಷ್ಠರೋ, ಅವರು ಶ್ರೀ ಮಹಾವಿಷ್ಣುವಿನ ಭಕ್ತರು ;' ಎಂದು ನಿರೂಪಿಸಿದೆ. ಆ ವರ್ಣಗಳ ಮತ್ತು ಆಶ್ರಮಗಳ ಧರ್ಮಗಳನ್ನು ದಯಮಾಡಿ ಹೇಳುವವನಾಗು. ಯಾವ ಈ ವರ್ಣಾಶ್ರಮಗಳ ಧರ್ಮಾನುಷ್ಠಾನದಿಂದ ಸನಾತನನಾದ ಶ್ರೀ ನರಸಿಂಹ ದೇವನು ಪ್ರಸನ್ನನಾಗುತ್ತಾನೆ.' ಎಂದು ರಾಯನು ಕೇಳಿದನು.

॥ ಶ್ರೀ ಮಾರ್ಕಂಡೇಯ ಉವಾಚ ॥

ಅತ್ರ ತೇ ವರ್ಣಯಿಷ್ಯಾಮಿ ಪುರಾವೃತ್ತಮನುತ್ತಮಮ್ ।
ಮುನಿಭಿಃ ಸಹ ಸಂವಾದಂ ಹಾರೀತಸ್ಯ ಮಹಾತ್ಮನಃ ॥ ೧೦ ॥

ಹಾರೀತಂ ಧರ್ಮತತ್ತ್ವಜ್ಞಮಾಸೀನಂ ಬಹುಪಾಠಕಮ್ ।
ಪ್ರಣಿಪತ್ಯಾಬ್ರುವನ್ ಸರ್ವೇ ಮುನಯೋ ಧರ್ಮಕಾಂಕ್ಷಿಣಃ ॥ ೧೧ ॥

ಭಗವನ್ ಸರ್ವಧರ್ಮಜ್ಞ ಸರ್ವಧರ್ಮ ಪ್ರವರ್ತಕ ।
ವರ್ಣಾನಾಮಾಶ್ರಮಾಣಾಂ ಚ ಧರ್ಮಂ ಪ್ರಬ್ರೂಹಿ ಶಾಶ್ವತಮ್ ॥ ೧೨ ॥

ನಾರಾಯಣಃ ಪುರಾ ದೇವೋ ಜಗತ್ಸ್ರಷ್ಟಾ ಜಲೋಪರಿ ।
ಸುಷ್ವಾಪ ಭೋಗಪರ್ಯಂಕೇ ಶಯನೇ ತು ಶ್ರಿಯಾ ಸಹ ॥ ೧೩ ॥

ಶ್ರೀ ಮಾರ್ಕಂಡೇಯ ಮುನಿಯು ಹೇಳುತ್ತಾರೆ: —

೧೦. ‘ ಎಲೈ ರಾಯನೇ! ಕೇಳು ; ಹಿಂದೆ ನಡೆದ, ಅತ್ಯುತ್ತಮವಾದ, ಮಹಾತ್ಮನಾದ ಹಾರೀತನು ಮುನಿಗಳೊಡನೆ ಮಾಡಿದ ಸಂವಾದವನ್ನು ನಿನಗೆ ಬಣ್ಣಿಸುವೆನು.

೧೧. ಧರ್ಮವನ್ನು ತಿಳಿಯಬೇಕೆಂದು ಬಯಸುವ ಮುನಿಗಳೆಲ್ಲರೂ ಧರ್ಮದ ಗುಟ್ಟನ್ನು ತಿಳಿದ, ಬಹು ಪಾಠಕನಾದ, ಕುಳಿತಿರುವ ಹಾರೀತನಿಗೆ ನಮಸ್ಕರಿಸಿ ಹೇಳಿದರು.

೧೨. ‘ ಎಲೈ ಸರ್ವಧರ್ಮಗಳನ್ನೂ ಅರಿತವನೂ, ಸಕಲ ಧರ್ಮಗಳ ಪ್ರವರ್ತಕನೂ ಆದ, ಭಗವಂತನಾದ, ಹಾರೀತ ಮುನಿಯೇ ! ಬ್ರಾಹ್ಮಣಾದಿ ವರ್ಣಗಳ ಮತ್ತು ಬ್ರಹ್ಮಚರ್ಯಾದ್ಯಾಶ್ರಮಗಳ, ಶಾಶ್ವತವಾದ ಧರ್ಮವನ್ನು ಹೇಳುವವನಾಗು.

೧೩. (ಪೂರ್ವದಲ್ಲಿ) ಜಗದಾದಿಯಲ್ಲಿ ಕ್ರೀಡಾದಿ ಗುಣವಿಶಿಷ್ಟನೂ, ಸಕಲ ಜಗತ್ಸರ್ಜಕನೂ ಆದ, ಶ್ರೀಮನ್ನಾರಾಯಣನು ಕ್ಷೀರಸಮುದ್ರೋದಕದ ಮೇಲೆ, ಆದಿಶೇಷನ ಒಡಲೆಂಬ ಮಂಚದ ಮೇಲೆ, ಶ್ರೀ ಮಹಾಲಕ್ಷ್ಮೀದೇವಿಯೊಡನೆ ಮಲಗಿದ್ದನು.

ತಸ್ಯ ಸುಪ್ತಸ್ಯ ನಾಭೌ ತು ದಿವ್ಯಂ ಪದ್ಮಮಭೂತ್ಕಿಲ ।
ತನ್ಮಧ್ಯೇ ಚಾಭವದ್ಬ್ರಹ್ಮಾ ವೇದವೇದಾಂಗಭೂಷಣಃ ॥ ೧೪ ॥

ಸ ಚೋಕ್ತಸ್ತೇನ ದೇವೇನ ಜಗತ್ಸೃಜ ಪುನಃ ಪುನಃ ।
ಅಸೃಜತ್ ಕ್ಷತ್ರಿಯಾನ್ ಬಾಹೋರ್ವೈಶ್ಯಾಂಸ್ತೂರುತೋಽಸೃಜತ್ ॥ ೧೫ ॥

ಶೂದ್ರಾಂಸ್ತು ಪಾದತಃ ಸೃಷ್ಟ್ವಾ ತೇಷಾಂ ಚೈವಾನುಪೂರ್ವಕಮ್ ।
ಧರ್ಮಶಾಸ್ತ್ರಂ ಚ ಮರ್ಯಾದಾಂ ಪ್ರೋವಾಚ ಕಮಲೋದ್ಭವಃ ॥ ೧೬ ॥

ತದ್ವತ್ಸರ್ವಂ ಪ್ರವಕ್ಷ್ಯಾಮಿ ಶೃಣುತ ದ್ವಿಜಸತ್ತಮಾಃ ।
ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗಮೋಕ್ಷಫಲಪ್ರದಮ್ ॥ ೧೭ ॥

---

೧೪. ಅಂತು ಮಲಗಿದ್ದ ಆ ನಾರಾಯಣನ ಹೊಕ್ಕುಳಲ್ಲಿ ಅತ್ಯುತ್ತಮವಾದ ತಾವರೆಯು ಹುಟ್ಟಿತಷ್ಟೆ! ಆ ತಾವರೆಯ ನಡುವೆ ಋಗಾದಿ ನಾಲ್ಕು ವೇದಗಳು, ಮತ್ತು ಶಿಕ್ಷಾದಿ ಆರು ವೇದಾಂಗಗಳು, ಇವುಗಳನ್ನು ಸಮಗ್ರವಾಗಿ ಅರಿತ ಚತುರ್ಮುಖಬ್ರಹ್ಮನು ಹುಟ್ಟಿದ್ದನು,

೧೫. ಆ ಶ್ರೀ ಹರಿಯು ಆ ಚತುರ್ಮುಖನಿಗೆ ಜಗತ್ತನ್ನು ಸೃಷ್ಟಿಸೆಂದು ಅಡಿಗಡಿಗೆ ಹೇಳಿದನು. ಆ ಚತುರ್ಮುಖಬ್ರಹ್ಮನು ತನ್ನ ತೋಳಿನಿಂದ ಕ್ಷತ್ರಿಯರನ್ನೂ ತೊಡೆಯಿಂದ ವೈಶ್ಯರನ್ನೂ ಸೃಷ್ಟಿಸಿದನು.

೧೬. ಕಾಲಿನಿಂದ ಶೂದ್ರರು ಸೃಷ್ಟಿಸಲ್ಪಟ್ಟರು. ಕಮಲದಲ್ಲಿ ಹುಟ್ಟಿದ ಚತುರ್ಮುಖನು ಆ ವರ್ಣಗಳು ಜನಿಸಿದ ಕ್ರಮವನ್ನನುಸರಿಸಿ, ಧರ್ಮಶಾಸ್ತ್ರವನ್ನೂ, ಎಲ್ಲೆಯನ್ನೂ, ಹೇಳಿದನು.

೧೭. ಎಲೈ ಬ್ರಾಹ್ಮಣಶ್ರೇಷ್ಠರೇ! ಚತುರ್ಮುಖನು ಹೇಳಿದಂತೆಯೇ ಎಲ್ಲವನ್ನೂ ಹೇಳುವೆನು; ಕೇಳಿರಿ. ಆ ಧರ್ಮಾದಿಗಳು ಕೇಳಿ ತಿಳಿದವನನ್ನು ಕೃತಕೃತ್ಯನನ್ನಾಗಿಯೂ, ಕೀರ್ತಿಶಾಲಿಯನ್ನಾಗಿಯೂ, ಪೂರ್ಣಾಯುವುಳ್ಳವನನ್ನಾಗಿಯೂ, ಮಾಡುವುದಲ್ಲದೆ, ಸ್ವರ್ಗ ಮೋಕ್ಷ ರೂಪವಾದ ಫಲವನ್ನು ಕೊಡುವುದು.

ಬ್ರಾಹ್ಮಣ್ಯಾಂ ಬ್ರಾಹ್ಮಣೇನೈವ ಉತ್ಪನ್ನೋ ಬ್ರಾಹ್ಮಣಃ ಸ್ಮೃತಃ ।
ತಸ್ಯ ಧರ್ಮಂ ಪ್ರವಕ್ಷ್ಯಾಮಿ ತದ್ಯೋಗ್ಯಂ ದೇಶಮೇವ ಚ ॥ ೧೮ ॥

ಕೃಷ್ಣಸಾರೋ ಮೃಗೋ ಯತ್ರ ಸ್ವಭಾವಾತ್ತು ಪ್ರವರ್ತತೇ ।
ತಸ್ಮಿನ್ ದೇಶೇ ವಸೇತ್ ಧರ್ಮಂ ಕುರು ಬ್ರಾಹ್ಮಣಪುಂಗವ ॥ ೧೯ ॥

ಷಟ್ಕರ್ಮಾಣಿ ಚ ಯಾನ್ಯಾಹುಃ ಬ್ರಾಹ್ಮಣಸ್ಯ ಮನೀಷಿಣಃ ।
ತೈರೇವ ಸತತಂ ಯಸ್ತು ಪ್ರವೃತ್ತಃ ಸುಖಮೇಧತೇ ॥ ೨೦ ॥

ಅಧ್ಯಯನಾಧ್ಯಾಪನಂ ಚ ಯಜನಂ ಯಾಜನಂ ತಥಾ ।
ದಾನಂ ಪ್ರತಿಗ್ರಹಶ್ಚೈವ ಕರ್ಮಷಟ್ಕಮಿಹೋಚ್ಯತೇ ॥ ೨೧ ॥

---

೧೮. ಬ್ರಾಹ್ಮಣಸ್ತ್ರೀಯಲ್ಲಿ ಬ್ರಾಹ್ಮಣನಿಂದಲೇ ಜನಿಸಿದವನು ಬ್ರಾಹ್ಮಣನೆನಿಸಿಕೊಳ್ಳುತ್ತಾನೆ. ಅವನ ಧರ್ಮವನ್ನೂ, ಅವನು ವಾಸಮಾಡುವುದಕ್ಕೆ ಯೋಗ್ಯವಾದ ಪ್ರದೇಶವನ್ನೂ ಹೇಳುವೆನು.

೧೯. ಎಲೈ ಬ್ರಾಹ್ಮಣ ಶ್ರೇಷ್ಠನೇ ! ಯಾವಪ್ರದೇಶದಲ್ಲಿ ಕರಿಯಚುಕ್ಕೆಯುಳ್ಳ ಜಿಂಕೆಯು ಸಹಜವಾಗಿ ವಾಸಮಾಡುತ್ತದೆಯೋ, ಆ ಪ್ರದೇಶದಲ್ಲಿ ವಾಸಮಾಡುತ್ತಾ ಧರ್ಮವನ್ನಾಚರಿಸು.

೨೦. ವಿವೇಕಿಯಾದ ಬ್ರಾಹ್ಮಣನಿಗೆ ಯಾವ ಯಜನ, ಯಾಜನಾ, ಧ್ಯಯನಾಧ್ಯಾಪನ, ದಾನ, ಪ್ರತಿಗ್ರಹಗಳೆಂಬ ಆರು ಕರ್ಮಗಳು ಕರ್ತವ್ಯಗಳೆಂದು ವಿಹಿತಗಳಾಗಿವೆಯೋ, ಅವುಗಳಿಂದಲೇ ಯಾವಾಗಲೂ ನಡೆನು ಕೊಳ್ಳಲು ತೊಡಗಿದವನು ಸುಖವಾಗಿ ಏಳ್ಗೆವಡೆಯುತ್ತಾನೆ.

೨೧. ಇಲ್ಲಿ ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹ ಇವು ಆರು ಕರ್ಮಗಳೆಂದು ಧರ್ಮಶಾಸ್ತ್ರದಲ್ಲಿ ಹೇಳಿರುತ್ತವೆ.

ಅಧ್ಯಾಪನಂ ಚ ತ್ರಿವಿಧಂ ಧರ್ಮಾರ್ಥಂ ಸ್ವಾರ್ಥಂ ಚ ಕಾರಣಮ್ ।
ಶುಶ್ರೂಷಾಂ ಕಾರಣಂ ಚೈವ ತ್ರಿವಿಧಂ ಪರಿಕೀರ್ತನಮ್ ॥ ೨೨

ಯೋಗ್ಯಾನಧ್ಯಾಪಯೇಚ್ಛಿಷ್ಯಾನ್ ಯಾಜ್ಯಾನಪಿ ಚ ಯಾಜಯೇತ್ ।
ವಿಧಿನಾ ಪ್ರತಿಗೃಹ್ಣಂಶ್ಚ ಗೃಹಧರ್ಮ ಪ್ರಸಿದ್ಧಯೇ ॥ ೨೩

ವೇದಮೇವಾಭ್ಯಸೇನ್ನಿತ್ಯಂ ಶುಭೇ ದೇಶೇ ಸಮಾಹಿತಃ ।
ನಿತ್ಯಂ ನೈಮಿತ್ತಿಕಂ ಕಾಮ್ಯಂ ಕರ್ಮ ಕುರ್ಯಾತ್ಪ್ರಯತ್ನತಃ ॥ ೨೪

ಗುರು ಶುಶ್ರೂಷಣಂ ಚೈವ ಯಥಾನ್ಯಾಯಮತಂದ್ರಿತಃ ।
ಸಾಯಂಪ್ರಾತರುಪಾಸೀತ ವಿಧಿನಾಗ್ನಿಂ ದ್ವಿಜೋತ್ತಮಃ ॥ ೨೫

---

೨೨. ಅಧ್ಯಾಪನವು ಮೊದಲಾದ ಮೂರು ಧರ್ಮಗಳು ಸ್ವಪ್ರಯೋಜನಗಳೆ ಕಾರಣಗಳಾಗಿ ಉಳ್ಳವು. ಇನ್ನುಳಿದ ಮೂರು ತೆರನಾದ ಧರ್ಮಗಳು ಸೇವೆಯೆ ಕಾರಣಗಳಾಗಿ ಉಳ್ಳವೆಂದು ಹೇಳಿರುತ್ತದೆ.

೨೩. ಯೋಗ್ಯರಾದ ಶಿಷ್ಯರನ್ನು ವಿದ್ಯೆಯನ್ನು ಕಲಿಸಬೇಕು. ಯೋಗ್ಯರಾ ಯಾಜ್ಯರನ್ನು ಯಾಗವನ್ನು ಮಾಡಿಸಬೇಕು. ಗೃಹಸ್ಥಧರ್ಮವು ಸಿದ್ಧಿಸುವುದಕ್ಕಾ ಶಾಸ್ತ್ರೋಕ್ತಕ್ರಮದಿಂದ ದಾನವನ್ನು ಸ್ವೀಕರಿಸುವುದು.

೨೪. ಬ್ರಾಹ್ಮಣನು ಉತ್ತಮವಾದ ಪ್ರದೇಶದಲ್ಲಿ ಸಮಾಧಾನವುಳ್ಳವನಾಗಿ ನಿತ್ಯದಲ್ಲಿಯೂ ವೇದವನ್ನೇ ಅಭ್ಯಾಸಮಾಡುವುದು; ಅಲ್ಲದೆ ನಿತ್ಯ, ನೈಮಿತ್ತಿ ಕಾಮ್ಯ–ಈ ಕರ್ಮಗಳನ್ನು ಪ್ರಯತ್ನದಿಂದ ಅನುಷ್ಠಿಸಬೇಕು.

೨೫. ಬ್ರಾಹ್ಮಣಶ್ರೇಷ್ಠನು (ನ್ಯಾಯ) ನೀತಿಯನ್ನು ಅನುಸರಿಸಿ, ಅಲ ನಾಗದೆ, ಗುರುಸೇವೆಯನ್ನು ಮಾಡುವುದಲ್ಲದೆ, ಹೊತ್ತಾರೆ ಬೈಗುಗಳಲ್ಲಿ ವೇದದ ಹೇಳಿರುವ ನಿಯಮದಿಂದ ಅಗ್ನಿಯನ್ನು ಸೇವಿಸುವುದು.

ಕೃತಸ್ನಾನಸ್ತು ಕುರ್ವೀತ ವೈಶ್ವದೇವಂ ದಿನೇ ದಿನೇ ।
ಅತಿಥಿಂ ಚಾಗತಂ ಭಕ್ತ್ಯಾ ಪೂಜಯೇಚ್ಛಕ್ತಿತೋ ಗೃಹೀ ॥ ೨೬ ॥

ಅನ್ಯಾನಭ್ಯಾಗತಾನ್ ದೃಷ್ಟ್ವಾ ಪೂಜಯೇದವಿರೋಧತಃ
ಸ್ವದಾರನಿರತೋ ನಿತ್ಯಂ ಪರದಾರವಿವರ್ಜಿತಃ ॥ ೨೭ ॥

ಸತ್ಯವಾದೀ ಜಿತಕ್ರೋಧಃ ಸ್ವಧರ್ಮನಿರತೋ ಭವೇತ್ ।
ಸ್ವಕರ್ಮಣಿ ಚ ಸಂಪ್ರಾಪ್ತೇ ಪ್ರಮಾದಂ ನೈವ ಕಾರಯೇತ್ ॥ ೨೮ ॥

ಪ್ರಿಯಾಂ ಹಿತಾಂ ವದೇದ್ವಾಚಂ ಪರಲೋಕಾವಿರೋಧಿನೀಮ್ ।
ಏವಂ ಧರ್ಮಃ ಸಮುದ್ದಿಷ್ಟೋ ಬ್ರಾಹ್ಮಣಸ್ಯ ಸಮಾಸತಃ ॥ ೨೯ ॥

---

೨೬. ಗೃಹಸ್ಥಾಶ್ರಮಿಯೂದವನು ಪ್ರತಿನಿತ್ಯದಲ್ಲಿಯೂ ಸ್ನಾನವನ್ನು ಮಾಡಿದವನಾಗಿ, ವೈಶ್ವದೇವವನ್ನು ಮಾಡಬೇಕು; ತನಗೆ ಶಕ್ತಿಯಿದ್ದಷ್ಟು ಮನೆಗೆ ಬಂದ ಅತಿಥಿಯನ್ನು(ಸೇವಿಸಬೇಕು) ಪೂಜಿಸುವುದು.

೨೭. ಗೃಹಿಯು ಹೆರರ ಹೆಂಡಿರಲ್ಲಿ ಮನವಿಡದೆ, ತನ್ನ ಮಡದಿಯಲ್ಲಿ ಆಸಕ್ತನಾಗಿದ್ದು, ನಿರಂತರದಲ್ಲಿಯೂ ತನ್ನ ಮನೆಗೆ ಬಂದ ಇತರರನ್ನೂ ಧರ್ಮವಿರೋಧವಿಲ್ಲದಂತೆ ಪೂಜಿಸುವುದು.

೨೮. ಗೃಹಿಯು ಸತ್ಯವನ್ನು ನುಡಿಯುವವನೂ, ಮುನಿಸನ್ನು ಗೆದ್ದವನೂ, ತನ್ನ ಧರ್ಮದಲ್ಲಿಯೇ ಅತ್ಯಂತಾಸಕ್ತನೂ ಆಗಿರುವುದು; ತನ್ನ ಕರ್ಮವನ್ನು ಅನುಷ್ಠಿಸುವಾಗ ಅಶ್ರದ್ಧೆಯನ್ನು ಮಾಡಬಾರದು.

೨೯. ಗೃಹಿಯಾದವನು ಪರದಲ್ಲಿ ಸದ್ಗತಿಗೆ ಅಡ್ಡಿಯಾಗದ, ಪ್ರಿಯವೂ, ಹಿತವೂ ಆದ ಮಾತನ್ನೇ ಆಡುವುದು. ಇಂತು ಬ್ರಾಹ್ಮಣ ಧರ್ಮವನ್ನು ಒಟ್ಟಾಗಿ ಹೇಳಿದುದಾಯಿತು.

ಧರ್ಮಮೇವಂ ತು ಯಃ ಕುರ್ಯಾತ್ಸ ಯಾತಿ ಬ್ರಹ್ಮಣಃ ಪದಮ್ ।
ಇತ್ಯೇಷ ಧರ್ಮಃ ಕಥಿತೋ ಮಯಾ ತೇ
ವಿಪ್ರಸ್ಯ ರಾಜನ್ನಿಖಿಲಾಘಹಾರೀ ।
ವದಾಮಿ ರಾಜಾದಿಜನಸ್ಯ ಧರ್ಮಂ
ಪೃಥಕ್ಪೃಥಕ್ ಬೋಧತ ವಿಪ್ರವರ್ಯಾಃ ॥ ೩೦

ಇತಿ ಶ್ರೀ ನರಸಿಂಹಪುರಾಣೇ ಬ್ರಾಹ್ಮಣಧರ್ಮಕಥನಂ ನಾಮ
ಸಪ್ತಪಂಚಾಶೋಽಧ್ಯಾಯಃ

---

೩೦. ಯಾವಾತನು ಇಂತು ಧರ್ಮವನ್ನೆಸಗುವನೋ, ಅವನು ಪರಬ್ರಹ್ಮ ಲೋಕಕ್ಕೆ (ಮೋಕ್ಷಕ್ಕೆ) ಹೋಗುವನು. ಎಲೈ ಬ್ರಾಹ್ಮಣ ಶ್ರೇಷ್ಠರೇ ! ದೊರೆಯೆ ನಾನು ಈಗ ಪಾಪಗಳನ್ನೆಲ್ಲಾ ನಾಶಗೊಳಿಸುವ ಬ್ರಾಹ್ಮಣಧರ್ಮವನ್ನು ಇಂತ ಹೇಳಿದೆನು. ರಾಜರೇ ಮೊದಲಾದ ವರ್ಣದವರ ಧರ್ಮವನ್ನು ಬೇರೆ ಬೇ ಹೇಳುವೆನು ; ಅದನ್ನು ತಿಳಿಯಿರಿ ;'

ಎಂದು ಹಾರೀತನ ಮತ್ತು ಮುನಿಗಳ ಸಂವಾದವನ್ನು ಮಾರ್ಕಂಡೇಯನ ಶತಾನೀಕರಾಯನಿಗೆ ಹೇಳಿದುದನ್ನು ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿದರು

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಬ್ರಾಹ್ಮಣ ಧರ್ಮವನ್ನು ಹೇಳಿದುದು
ಎಂಬ ಐವತ್ತೇಳನೆಯ ಅಧ್ಯಾಯವು ಮುಗಿದುದು.

ಐವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ' ಶತಾನೀಕರಾಯನೆಳಸಿದಂತೆ ಮಾರ್ಕಂಡೇಯಮುನಿಯು ಶ್ರೀ ನರಸಿಂಹಸ್ವಾಮಿಯ ಭಕ್ತರ ಲಕ್ಷಣವನ್ನು ವಿಸ್ತಾರವಾಗಿ ರಾಜನ ಬುದ್ಧಿಗೆ ತಿಳಿಯುವಂತೆ ಹೇಳಿ, ಬಳಿಕ ಆತನಿಚ್ಛೆಯಂತೆ ವರ್ಣಾಶ್ರಮಗಳ ಧರ್ಮಗಳನ್ನು ತಿಳಿಸತೊಡಗಿ, ಹಿಂದೆ ಮುನಿಗಳು ಹಾರೀತನೆಂಬ ಧರ್ಮತತ್ತ್ವಜ್ಞನನ್ನು ಅದೇ ವಿಷಯವನ್ನು ಕೇಳಲು, ಆ ಹಾರೀತನು ಆ ಮುನಿಗಳ ತಂಡಕ್ಕೆ ಹೇಳಿದ ವರ್ಣಾಶ್ರಮ ಧರ್ಮಗಳನ್ನು ತಿಳಿಸುವುದಾಗಿ ಮೊದಲು ಮಾಡಿ, ಆದಿಯಲ್ಲಿ ಬ್ರಾಹ್ಮಣ ಧರ್ಮವನ್ನು ಸಂಗ್ರಹವಾಗಿ ನಿರೂಪಿಸಿ, ಮುಂದೆ ಕ್ಷತ್ರಿಯಾದಿಗಳ ಧರ್ಮವನ್ನು ನಿರೂಪಿಸುವುದಾಗಿ ಹೇಳಿದನು ;' ಎಂದು ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸುತ್ತಾರೆ.

ಇಂತು ಐವತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ಅಷ್ಟಪಂಚಾಶೋಽಧ್ಯಾಯಃ

ಅಥ ಕ್ಷತ್ರಿಯಾದಿವರ್ಣಾನಾಂ ಗೃಹಸ್ಥಸ್ಯ ಚ ಧರ್ಮನಿರೂಪಣಮ್

ಹಾರೀತ ಉವಾಚ

ಕ್ಷತ್ರಿಯಾದೀನ್ಪ್ರವಕ್ಷ್ಯಾಮಿ ಯಥಾವದನುಪೂರ್ವಶಃ ।
ಯೇನ ಯೇನ ಪ್ರವರ್ತಂತೇ ವಿಧಿನಾ ಕ್ಷತ್ರಿಯಾದಯಃ ॥ ೧ ॥

ಐವತ್ತೆಂಟನೆಯ ಅಧ್ಯಾಯವು

ಕ್ಷತ್ರಿಯಾದಿವರ್ಣಗಳ ಮತ್ತು ಗೃಹಸ್ಥಧರ್ಮದ ನಿರೂಪಣೆಯು

ಹಾರೀತಮುನಿಯು ಮುನಿಗಳನ್ನು ಕುರಿತು ಇಂತು ಹೇಳುತ್ತಾನೆ :—

೧. 'ಕೇಳಿರಿ ಮುನಿಗಳೇ! ಯಾವ ಯಾವ ನಿಯಮದಿಂದ ಕ್ಷತ್ರಿಯರೆ ಮೊದಲಾದವರು (ವ್ಯವಹರಿಸುತ್ತಾರೆಯೋ) ನಡೆದುಕೊಳ್ಳುತ್ತಾರೆಯೋ, ಕ್ಷತ್ರಿಯಾದಿ ಧರ್ಮಗಳನ್ನು ವೇದಾದಿ ಶಾಸ್ತ್ರಗಳಲ್ಲಿ ಹೇಳಿರುವ ಕ್ರಮವನ್ನನುಸರಿಸಿ ಹೇಳುವೆನು.

ರಾಜ್ಯಸ್ಥಃ ಕ್ಷತ್ರಿಯಶ್ಚೈವ ಪ್ರಜಾಂ ಧರ್ಮೇಣ ಪಾಲಯೇತ್ ।
ಕುರ್ಯಾದಧ್ಯಯನಂ ಸಮ್ಯಗ್ಯಜನ್ಯಜ್ಞಾನ್ಯಥಾವಿಧಿ ॥ ೨ ॥

ದದ್ಯಾದ್ದಾನಂ ದ್ವಿಜಾಗ್ರೇಭ್ಯೋ ಧರ್ಮಬುದ್ಧಿಸಮನ್ವಿತಃ ।
ಸ್ವದಾರನಿರತೋ ನಿತ್ಯಂ ಪರಧರ್ಮವಿವರ್ಜಿತಃ ॥ ೩ ॥

ನೀತಿಶಾಸ್ತ್ರಾರ್ಥಕುಶಲಃ ಸಂಧಿವಿಗ್ರಹತತ್ತ್ವವಿತ್ ।
ದೇವಬ್ರಾಹ್ಮಣಭಕ್ತಶ್ಚ ಪಿತೃಕಾರ್ಯಪರಸ್ತಥಾ ॥ ೪ ॥

ಧರ್ಮೇಣೈವ ಜಯಂ ಕಾಂಕ್ಷೇದಧರ್ಮಂ ಪರಿವರ್ಜಯೇತ್ ।
ಉತ್ತಮಾಂ ಗತಿಮಾಪ್ನೋತಿ ಕ್ಷತ್ರಿಯೋಽಥೈವಮಾಚರನ್ ॥ ೫ ॥

---

೨. ಕ್ಷತ್ರಿಯನು ರಾಜ್ಯದಲ್ಲಿ ಅಧಿಕೃತನಾಗಿ, ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವುದು; ಶಾಸ್ತ್ರೋಕ್ತಕ್ರಮಗಳಿಂದ ಯಜ್ಞಗಳನ್ನನುಷ್ಠಿಸುತ್ತಾ, ವೇದಾಧ್ಯಯನವನ್ನು ಮಾಡುವುದು.

೩. ಕ್ಷತ್ರಿಯನು ಅನ್ಯವರ್ಣದವರ ಧರ್ಮವನ್ನಾಶ್ರಯಿಸದೆ, ನಿತ್ಯದಲ್ಲಿಯೂ ತನ್ನ ಪತ್ನಿಯಲ್ಲಿ ಮಾತ್ರ ಆಸಕ್ತನಾಗಿ, ಧರ್ಮಬುದ್ಧಿಯಿಂದ ಕೂಡಿದವನಾಗಿ, ಬ್ರಾಹ್ಮಣಶ್ರೇಷ್ಠರಿಗೆ ದಾನವನ್ನು ಕೊಡುವುದು.

೪. ಕ್ಷತ್ರಿಯನು ನೀತಿಶಾಸ್ತ್ರಾರ್ಥದಲ್ಲಿ ನಿಪುಣನಾಗಿ, ಸಂಧಿ, ವಿಗ್ರಹ, ಇವುಗಳ ತತ್ತ್ವವನ್ನು ಅರಿತು, ದೇವತೆಗಳು, ಬ್ರಾಹ್ಮಣರು ಇವರಲ್ಲಿ ಭಕ್ತಿಯುಳ್ಳವನಾಗಿಯೂ, ಹಾಗೆಯೇ ಪಿತೃಗಳನ್ನುದ್ದೇಶಿಸಿ ಮಾಡುವ ಶ್ರಾದ್ಧಾದಿಕರ್ಮಗಳನ್ನನುಷ್ಠಿಸುವವನಾಗಿಯೂ ಇರುವುದು.

೫. ಅನಂತರದಲ್ಲಿ ಕ್ಷತ್ರಿಯನು ಧರ್ಮದಿಂದಲೇ ಶತ್ರುಗಳನ್ನು ಗೆಲ್ಲಲು ಬಯಸುವುದು; ಅಧರ್ಮವನ್ನು ಬಿಡುವುದು; ಇಂತು ಆಚರಿಸುತ್ತಾ, ಉತ್ತಮವಾದ ಸ್ವರ್ಗಾದಿಲೋಕಗಳನ್ನು ಹೊಂದುತ್ತಾನೆ.

ಗೋರಕ್ಷಾಕೃಷಿವಾಣಿಜ್ಯಂ ಕುರ್ಯಾದ್ವೈಶ್ಯೋ ಯಥಾವಿಧಿ ।
ದಾನಧರ್ಮಂ ಯಥಾ ಶಕ್ತ್ಯಾ ಗುರುಶುಶ್ರೂಷಣಂ ತಥಾ ॥ ೬ ॥

ಲೋಭದಂಭವಿನಿರ್ಮುಕ್ತಃ ಸತ್ಯವಾಗನಸೂಯಕಃ ।
ಸ್ವದಾರನಿರತೋ ದಾಂತಃ ಪರದಾರವಿವರ್ಜಿತಃ ॥ ೭ ॥

ಧನೈರ್ವಿಪ್ರಾನ್ಸಮರ್ಚೇತ ಯಜ್ಞಕಾಲೇ ತ್ವರಾನ್ವಿತಃ ।
ಯಜ್ಞಾಧ್ಯಯನದಾನಾನಿ ಕುರ್ಯಾನ್ನಿತ್ಯಮತಂದ್ರಿತಃ ॥ ೮ ॥

ಪಿತೃಕಾರ್ಯಂ ಚ ತತ್ಕಾಲೇ ನರಸಿಂಹಾರ್ಚನಂ ತಥಾ ।
ಏತದ್ವೈಶ್ಯಸ್ಯ ಧರ್ಮೋಕ್ತಃ ಸ್ವಧರ್ಮಮನುತಿಷ್ಠತಃ ॥ ೯ ॥

---

೬. ವೈಶ್ಯನು ಶಾಸ್ತ್ರೋಕ್ತಕ್ರಮದಲ್ಲಿ ಹಸುಗಳ ರಕ್ಷಣೆ, ಬೇಸಾಯ ಮತ್ತು ಪರಮು (ವಾಣಿಜ್ಯ) ಇವನ್ನು ಮಾಡುವುದು; ಹಾಗೆಯೇ ಶಕ್ತಿಯಿದ್ದಷ್ಟು ದಾನ ಧರ್ಮಗಳನ್ನೂ, ಗುರುಸೇವೆಯನ್ನೂ ಮಾಡುವುದು.

೭. ಮತ್ತು ವೈಶ್ಯನು ಲೋಭದಂಭಗಳಿಲ್ಲದವನಾಗಿ, ಸತ್ಯವನ್ನು ನುಡಿಯುತ್ತಾ, ಅಸೂಯೆಯಿಲ್ಲದೆ, ತನ್ನ ಪತ್ನೀರತನಾಗಿ, ಇಂದ್ರಿಯಗಳನ್ನು ನಿಗ್ರಹಿಸಿ, ಅನ್ಯಸ್ತ್ರೀಕಾಮುಕನಾಗದೆ, ಇರುವುದು.

೮. ವೈಶ್ಯನು ಯಜ್ಞಕಾಲದಲ್ಲಿ ತ್ವರೆಯಿಂದ ಕೂಡಿದವನಾಗಿ, ಹಣದಿಂದ ಬ್ರಾಹ್ಮಣರನ್ನು ಪೂಜಿಸಬೇಕು; ಆಲಸ್ಯವಿಲ್ಲದವನಾಗಿ, ನಿತ್ಯದಲ್ಲಿಯೂ ಯಜ್ಞವನ್ನೂ, ವೇದಾಧ್ಯಯನವನ್ನೂ, ದಾನಗಳನ್ನೂ ಮಾಡುವುದು;

೯. ಆಯಾ ಕಾಲದಲ್ಲಿ ಪಿತೃಕಾರ್ಯವನ್ನೂ, ಹಾಗೆಯೇ ಶ್ರೀ ನರಸಿಂಹದೇವರ ಪೂಜೆಯನ್ನೂ ಮಾಡುವುದು. ಸ್ವಧರ್ಮಾನುಷ್ಠಾನ ಪರನಾದ ವೈಶ್ಯನ ಈ ಧರ್ಮವನ್ನು ಹೇಳಿದುದಾಯಿತು.

ಏತದಾಸೇವಮಾನಸ್ತು ಸ ಸ್ವರ್ಗೀ ಸ್ಯಾನ್ನ ಸಂಶಯಃ ।
ವರ್ಣತ್ರಯಸ್ಯ ಶುಶ್ರೂಷಾಂ ಕುರ್ಯಾಚ್ಛೂದ್ರಃ ಪ್ರಯತ್ನತಃ ॥ ೧೦ ॥

ದಾಸವದ್ಬ್ರಾಹ್ಮಣಾನಾಂ ತು ವಿಶೇಷೇಣ ಸಮಾಚರೇತ್ ।
ಅಯಾಚಿತಂ ಪ್ರದಾತವ್ಯಂ ಕೃಷಿಂ ವೃತ್ತ್ಯರ್ಥಮಾಚರೇತ್ ॥ ೧೧ ॥

ಗ್ರಹಾಣಾಂ ಮಾಸಿಕಂ ಕಾರ್ಯಂ ಪೂಜನಂ ನ್ಯಾಯಧರ್ಮತಃ ।
ಧಾರಣಂ ಜೀರ್ಣವಸ್ತ್ರಸ್ಯ ವಿಪ್ರಸ್ಯೋಚ್ಛಿಷ್ಟಮಾರ್ಜನಮ್ ॥ ೧೨ ॥

ಸ್ವದಾರೇಷು ರತಿಂ ಕುರ್ಯಾತ್ಪರದಾರ ವಿವರ್ಜಿತಃ ।
ಪುರಾಣಶ್ರವಣಂ ವಿಪ್ರಾ ನರಸಿಂಹಸ್ಯ ಪೂಜನಮ್ ॥ ೧೩ ॥

---

೧೦. ಈ ವೈಶ್ಯಧರ್ಮವನ್ನು ಆಚರಿಸುತ್ತಲಿರುವ ವೈಶ್ಯನು ದೇಹಾವಸಾನ ದಲ್ಲಿ ಸ್ವರ್ಗಲೋಕಸ್ಥನಾಗುವನು. ಈ ವಿಷಯದಲ್ಲಿ ಸಂಶಯವಿಲ್ಲವು. ಶೂದ್ರ ನಾದವನು ತನಗಿಂತ ಉತ್ತಮರಾದ ಬ್ರಾಹ್ಮಣಾದಿ ಮೂರು ವರ್ಣಗಳ (ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯ ಇವರ) ಸೇವೆಯನ್ನು ಪ್ರಯತ್ನದಿಂದ ಆಚರಿಸುವುದು.

೧೧. ಶೂದ್ರನು ಬ್ರಾಹ್ಮಣರಿಗೆ ವಿಶೇಷವಾಗಿ, ಆಳಿನಂತೆ ನಡೆದುಕೊಳ್ಳ ಬೇಕು. ಇತರರಿಂದ ಬೇಡಿಸಿಕೊಳ್ಳದೆ, ದಾನಮಾಡುವುದು; ವ್ಯವಸಾಯವನ್ನು ಜೀವನದ ಕಸುಬಾಗಿ ಆಚರಿಸುವುದು.

೧೨. ಶೂದ್ರನು ತಿಂಗಳಿಗೊಮ್ಮೆ ನ್ಯಾಯಧರ್ಮಗಳಿಗೆ ಅನುಸಾರವಾಗಿ, ಸೂರ್ಯಾದಿ ನವಗ್ರಹಗಳ ಪೂಜೆಯನ್ನು ಮಾಡುವುದು. ಬ್ರಾಹ್ಮಣರ ಜೀರ್ಣವಸ್ತ್ರ ಗಳನ್ನು ಧರಿಸುವುದು; ಮತ್ತು ಉಚ್ಛಿಷ್ಟವನ್ನು ತೆಗೆದು ಶುದ್ಧಿಮಾಡುವುದು.

೧೩. ಎಲೈ ಮುನಿಗಳೇ! ಶೂದ್ರನೂ ಪರಸ್ತ್ರೀಯರಲ್ಲಿ ಆಸಕ್ತನಾಗದೆ, ತನ್ನ ಮಡದಿಯಲ್ಲಿ ಪ್ರೇಮವುಳ್ಳವನಾಗಿರುವುದು; ಪುರಾಣಗಳನ್ನು ಕೇಳುವುದು; ಮತ್ತು ಶ್ರೀ ನರಸಿಂಹಸ್ವಾಮಿಯನ್ನು ಪೂಜಿಸುವುದು;

ತಥಾ ವಿಪ್ರನಮಸ್ಕಾರಂ ಕಾರ್ಯಂ ಶ್ರದ್ಧಾಸಮನ್ವಿತಮ್ ।
ಸತ್ಯಸಂಭಾಷಣಂ ಚೈವ ರಾಗದ್ವೇಷವಿವರ್ಜನಮ್ ॥ ೧೪ ॥

ಇತ್ಥಂ ಕುರ್ವನ್ಸದಾ ಶೂದ್ರೋ ಮನೋವಾಕ್ಕಾಯಕರ್ಮಭಿಃ ।
ಸ್ಥಾನಮೈಂದ್ರಮವಾಪ್ನೋತಿ ನಷ್ಟಪಾಪಸ್ತು ಪುಣ್ಯಭಾಕ್ ॥ ೧೫ ॥

ವರ್ಣೇಷು ಧರ್ಮಾ ವಿವಿಧಾ ಮಯೋಕ್ತಾ
ಯಥಾಕ್ರಮಂ ಬ್ರಾಹ್ಮಣವರ್ಯಸಾಧಿತಾಃ ।
ಶೃಣುಧ್ವಮತ್ರಾಶ್ರಮಧರ್ಮಮಾದ್ಯಂ
ಮಯೋಚ್ಯಮಾನಂ ಕ್ರಮಶೋ ಮುನೀಂದ್ರಾಃ ॥

ಹಾರೀತ ಉವಾಚ —

ಉಪನೀತೋ ಮಾಣವಕೋ ವಸೇದ್ಗುರುಕುಲೇ ಸದಾ ।
ಗುರೋಃ ಪ್ರಿಯಹಿತಂ ಕಾರ್ಯಂ ಕರ್ಮಣಾ ಮನಸಾ ಗಿರಾ ॥ ೧೬ ॥

---

೧೪. ಹಾಗೆಯೇ ಶ್ರದ್ಧೆಯಿಂದ ಕೂಡಿ, ರಾಗ ದ್ವೇಷಗಳಿಲ್ಲದವರಾಗಿ ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡುವುದು; ಮತ್ತು ದಿಟವನ್ನೇ ನುಡಿಯುವುದು.

೧೫. ಯಾವಾಗಲೂ ಮನಸ್ಸು, ವಾಕ್ಕು, ಮತ್ತು ಕಾಯ– ಈ ಮೂರು ಕರಣಗಳಿಂದ ಇಂತು ನಡೆಯುವ ಶೂದ್ರನು, ಪಾಪಗಳನ್ನು ಕಳೆನುಕೊಂಡು ಪುಣ್ಯಭಾಜನನಾಗಿ ಇಂದ್ರಲೋಕವನ್ನು ಹೊಂದುವನು.

೧೬. 'ಎಲೈ ಮುನಿಶ್ರೇಷ್ಠರೇ! ಕ್ರಮವನ್ನು ಅನುಸರಿಸಿ, ಬ್ರಾಹ್ಮಣ ಶ್ರೇಷ್ಠರು ಆಚರಿಸಿದ, ವರ್ಣಗಳಲ್ಲಿ ಅನೇಕತೆರಗಳಾದ, ಧರ್ಮಗಳನ್ನು ನಿಮಗೆ ನಾನು ಅರುಹಿದೆನು. ಕ್ರಮದಿಂದ ನಾನು ಹೇಳುವ ಮೊದಲನೆಯದಾದ ಆಶ್ರಮ ಧರ್ಮವನ್ನು ಇಲ್ಲಿ ನೀವು ಕೇಳಿರಿ.'

ಹಾರೀತಮುನಿಯು ಹೇಳುತ್ತಾನೆ:—

೧೬. 'ಎಲೈ ಮುನಿಗಳೇ! ಕೇಳಿರಿ; ಉಪನಯನವೆಂಬ ಸಂಸ್ಕಾರವನ್ನು ಹೊಂದಿದ ಬಾಲಕನು, ಯಾವಾಗಲೂ ಗುರುಕುಲದಲ್ಲಿಯೇ ವಾಸಮಾಡುವುದು; ಕಾಯವಾಙ್ಮನಗಳಿಂದ ಗುರುಗಳಿಗೆ ಇಷ್ಟವಾದುದನ್ನು ಆಚರಿಸುವುದು;

ಬ್ರಹ್ಮಚರ್ಮಮಧಃಶಯ್ಯಾ ತಥಾ ವಹ್ನೇರುಪಾಸನಮ್ ।
ಉದಕುಂಭಂ ಗುರೋರ್ದದ್ಯಾತ್ತಥಾಚೇಂಧನಮಾಹರೇತ್ ॥ ೧೮ ॥

ಕುರ್ಯಾದಧ್ಯಯನಂ ಪೂರ್ವಂ ಬ್ರಹ್ಮಚಾರೀ ಯಥಾವಿಧಿ ।
ವಿಧಿಂ ಹಿತ್ವಾ ಪ್ರಕುರ್ವಾಣೋ ನ ಸ್ವಾಧ್ಯಾಯಫಲಂ ಲಭೇತ್ ॥ ೧೯ ॥

ಯತ್ಕಿಂಚಿತ್ಕುರುತೇ ಕರ್ಮ ವಿಧಿಂ ಹಿತ್ವಾ ನಿರಾತ್ಮಕಃ ।
ನ ತತ್ಫಲಮವಾಪ್ನೋತಿ ಕುರ್ವಾಣೋ ವಿಧಿವಿಚ್ಯುತಃ ॥ ೨೦ ॥

ತಸ್ಮಾದೇವ ವ್ರತಾನೀಹ ಚರೇತ್ಸ್ವಾಧ್ಯಾಯಸಿದ್ಧಯೇ ।
ಶೌಚಾಚಾರಮಶೇಷಂ ತು ಶಿಕ್ಷಯೇದ್ಗುರುಸಂನಿಧೌ ॥ ೨೧ ॥

---

೧೮. ಬ್ರಹ್ಮಚಾರಿಯು ವೇದವನ್ನು ಅಧ್ಯಯನ ಮಾಡುವುದು; ನೆಲದ ಮೇಲೆ (ಖಟ್ವಾದಿಗಳಿಲ್ಲದೇ) ಮಲಗಿಕೊಳ್ಳುವುದು; ಹಾಗೆಯೇ ಅಗ್ನಿಯನ್ನು ಸೇವಿಸುವುದು; ಗುರುವಿಗೆ ನೀರಿನಿಂದ ತುಂಬಿದ ಕುಂಬವನ್ನು ತಂದುಕೊಡುವುದು; ಹಾಗೆಯೇ ಸಮಿತ್ತುಗಳನ್ನು ತಂದುಕೊಡುವುದು.

೧೯. ಬ್ರಹ್ಮಚಾರಿಯಾದವನು ಶಾಸ್ತ್ರದಲ್ಲಿ ಹೇಳಿದ ವಿಧಿಯನ್ನು ಅನುಸರಿಸಿ, ಮೊದಲು ವೇದಗಳನ್ನಧ್ಯಯನ ಮಾಡುವುದು; ವಿಧಿಯನ್ನು ಮೀರಿ, ಅಧ್ಯಯನ ಮಾಡಿದವನು ವೇದಾಧ್ಯಯನದ ಫಲವನ್ನು ಹೊಂದುವುದಿಲ್ಲ.

೨೦. ನಿಯಮವನ್ನು ಬಿಟ್ಟು ಮನವಿಲ್ಲದೆ, ಯಾವ ಅಲ್ಪ ಸ್ವಲ್ಪ ಕರ್ಮವನ್ನನುಷ್ಠಿಸಿದರೂ, ಅಂತೂ ವಿಧಿರಹಿತನಾಗಿ, ಆಚರಿಸುವವನು ಆ ಕರ್ಮದ ಫಲವನ್ನು ಹೊಂದುವುದಿಲ್ಲ.

೨೧. ಆ ಕಾರಣದಿಂದಲೇ ಬ್ರಹ್ಮಚಾರಿಯು ವೇದಾಧ್ಯಯನದ ಫಲವನ್ನು ಹೊಂದಲು, ಈ ಆಶ್ರಮದಲ್ಲಿ ಹೇಳಿರುವ ವ್ರತವನ್ನು ಅನುಷ್ಠಿಸಬೇಕು; ಗುರುಗಳ ಸಮೀಪದಲ್ಲಿ ಶೌಚಾಚಾರಾದಿಗಳನ್ನೆಲ್ಲಾ ಕಲಿಯುವುದು.

ಅಜಿನಂ ದಂಡಕಾಷ್ಠಂ ಚ ಮೇಖಲಾಂ ಚೋಪವೀತಕಮ್ ।
ಧಾರಯೇದಪ್ರಮತ್ತಸ್ತು ಬ್ರಹ್ಮಚಾರೀ ಸಮಾಹಿತಃ ॥ ೨೨ ॥

ಸಾಯಂ ಪ್ರಾತಶ್ಚರೇದ್ಭೈಕ್ಷ್ಯಂ ಭೋಜನಂ ಸಂಯತೇಂದ್ರಿಯಃ ।
ಗುರೋಃ ಕುಲೇ ನ ಭಿಕ್ಷೇತ ನ ಜ್ಞಾತಿಕುಲಬಂಧುಷು ॥ ೨೩ ॥

ಅಲಾಭೇ ತ್ವನ್ಯಗೇಹಾನಾಂ ಪೂರ್ವಪೂರ್ವಂ ಚ ವರ್ಜಯೇತ್ ।
ಆಚಮ್ಯ ಪ್ರಯತೋ ನಿತ್ಯಮಶ್ನೀಯಾದ್ಗುರ್ವನುಜ್ಞಯಾ ॥ ೨೪ ॥

ಶಯನಾತ್ಪೂರ್ವಮುತ್ಥಾಯ ಧರ್ಮವೃದ್ಧಂತಶೋಧನಮ್ ।
ವಸ್ತ್ರಾದಿಕಮಥಾನ್ಯಚ್ಚ ಗುರವೇ ಪ್ರತಿಪಾದಯೇತ್ ॥ ೨೫ ॥

---

೨೨. ಬ್ರಹ್ಮಚಾರಿಯು ಸಮಾಧಾನಗೊಂಡವನಾಗಿ, ಎಚ್ಚರಿಕೆಯುಳ್ಳವನಾಗಿ, ಕೃಷ್ಣಾಜಿನವನ್ನೂ, ದಂಡಕಾಷ್ಠವನ್ನೂ, ಯಜ್ಞೋಪವೀತವನ್ನೂ ಧರಿಸುವುದು.

೨೩. ಬ್ರಹ್ಮಚಾರಿಯು ಇಂದ್ರಿಯಗಳನ್ನು ನಿಗ್ರಹಿಸಿದವನಾಗಿ ಬೆಳಗ್ಗೆ ಮತ್ತು ಬೈಗು– ಈ ಹೊತ್ತುಗಳಲ್ಲಿ ಭಿಕ್ಷೆಯನ್ನಾಚರಿಸಿ, ತಂದುದನ್ನು ಭೋಜನಮಾಡುವುದು ; ಗುರುವಿನ ಮನೆಯಲ್ಲಿ, ಜ್ಞಾತಿಗಳು ಮತ್ತು ಬಂಧುಗಳು, ಇವರ ಮನೆಗಳಲ್ಲಿಯೂ ಭಿಕ್ಷೆಯನ್ನು ಯಾಚಿಸಬಾರದು ;

೨೪. ಇತರರ ಮನೆಗಳಲ್ಲಿ ಭಿಕ್ಷಾನ್ನವು ಸಿಕ್ಕದಿದ್ದರೆ, ಮೊದಮೊದಲ ಮನೆಗಳನ್ನು ಬಿಡುವುದು ; ನಿತ್ಯದಲ್ಲಿಯೂ ಸಂಯಮವುಳ್ಳವನಾಗಿ, ಶುದ್ಧಾಚಮನವನ್ನು ಮಾಡಿ, ಗುರುವಿನ ಅಣತಿವಡೆದು ಊಟಮಾಡುವುದು.

೨೫. ಬ್ರಹ್ಮಚಾರಿಯು ಗುರುವಿಗಿಂತಲೂ, ಮುಂಚೆ ಹಾಸಿಗೆಯಿಂದೆದ್ದು, ವಿಹಿತವಾದ ಮಣ್ಣು, ಹಲ್ಲುಕಡ್ಡಿ, ಬಟ್ಟೆ ಮುಂತಾದುವು ಮತ್ತು ಇತರ ವಸ್ತುಗಳು- ಇವನ್ನು ತಂದು ಗುರುವಿಗೆ ಸಮರ್ಪಿಸುವುದು.

ಸ್ನಾನೇ ಕೃತೇ ಗುರೌ ಪಶ್ಚಾತ್ಸ್ನಾನಂ ಕುರ್ವೀತ ಯತ್ನವಾನ್ ।
ಬ್ರಹ್ಮಚಾರಿವ್ರತೋ ನಿತ್ಯಂ ನ ಕುರ್ಯಾದ್ದಂತಧಾವನಮ್ ॥ ೨೬ ॥

ಛತ್ರೋಪಾನಹಮಭ್ಯಂಗಂ ಗಂಧಮಾಲ್ಯಾನಿ ವರ್ಜಯೇತ್ ।
ನೃತ್ಯಗೀತಕಥಾಲಾಪಂ ಮೈಥುನಂ ಚ ವಿಶೇಷತಃ ॥ ೨೭ ॥

ವರ್ಜಯನ್ಮಧು ಮಾಂಸಂ ಚ ರಸಾಸ್ವಾದಂ ತಥಾ ಸ್ತ್ರಿಯಃ ।
ಕಾಮಂ ಕ್ರೋಧಂ ಚ ಲೋಭಂ ಚ ಪರಿವಾದಂ ತಥಾ ನೃಣಾಮ್ ॥ ೨೮ ॥

ಸ್ತ್ರೀಣಾಂ ಚ ಪ್ರೇಕ್ಷಣಾಲಂಭಮುಪಘಾತಂ ಪರಸ್ಯ ಚ ।
ಏಕಃ ಶಯೀತ ಸರ್ವತ್ರ ನ ರೇತಃ ಸ್ಕಂದಯೇತ್ಕ್ವಚಿತ್ ॥ ೨೯ ॥

---

೨೬. ನಿಯಮಶಾಲಿಯಾದ ಬ್ರಹ್ಮಚಾರಿಯು ಗುರುವು ಸ್ನಾನಮಾಡಿದ ಮೇಲೆ, ತಾನೂ ಉಜ್ಜಾಗಿಸಿ, ಮೀಯುವುದು, ಹಲ್ಲನ್ನುಜ್ಜಿ ತೊಳೆಯಬಾರದು.

೨೭. ಬ್ರಹ್ಮಚಾರಿಯು ಕೊಡೆ, ಪಾಪಾಸು, ತೈಲಾಭ್ಯಂಗ, ಸುಗಂಧದ್ರವ್ಯ, ಹೂವಿನ ಮಾಲೆ–ಇವುಗಳನ್ನೂ, ವಿಶೇಷವಾಗಿ. ನರ್ತನ, ಸಂಗೀತ, ಇತರ ಕಥೆಗಳನ್ನು ಹೇಳುವುದು, ಮತ್ತು ಸ್ತ್ರೀಸಂಭೋಗ– ಇವನ್ನೂ ತ್ಯಜಿಸುವುದು.

೨೮.–೨೯. ಬ್ರಹ್ಮಚಾರಿಯು ಮದ್ಯಮಾಂಸಗಳನ್ನೂ, ಹಾಗೆಯೇ ಸ್ತ್ರೀಯರ ರಸಾಸ್ವಾದವನ್ನೂ, ವಿಷಯಾಸಕ್ತಿಯನ್ನೂ, ಕ್ರೋಧವನ್ನೂ, ಅತ್ಯಾಸೆಯನ್ನೂ ಹಾಗೆಯೇ ಮಾನವರ ನಿಂದೆಯನ್ನೂ, ಸ್ತ್ರೀಯರ ನೋಟ ಮತ್ತು ಸ್ಪರ್ಶ, ಇವನ್ನೂ ಹೆರರಿಗೆ ಬಾಧೆಮಾಡುವುದನ್ನೂ (ಬಿಡುತ್ತಾ) ತ್ಯಜಿಸುತ್ತಾ, ಎಲ್ಲೆಡೆಗಳಲ್ಲಿಯೂ ಒಬ್ಬನೇ ಮಲಗುವುದು; ಎಲ್ಲಿಯೂ ಇಚ್ಛೆಯಿಂದ ತನ್ನ ರೇತಸ್ಸನ್ನು ಸುರಿಸಬಾರದು.

ಸ್ವಪ್ನೇ ಸಿಕ್ತ್ವಾ ಬ್ರಹ್ಮಚಾರೀ ದ್ವಿಜಃ ಶುಕ್ರಮಕಾಮತಃ ।
ಸ್ನಾತ್ವಾರ್ಕಮರ್ಚಯಿತ್ವಾ ತ್ರಿಃ ಪುನರ್ಮಾಮಿತ್ಯೃಚಂ ಜಪೇತ್ ॥ ೩೦ ॥

ಆಸ್ತಿಕೋಽಹರಹಃ ಸಂಧ್ಯಾಂ ತ್ರಿಕಾಲಂ ಸಂಯತೇಂದ್ರಿಯಃ ।
ಉಪಾಸೀತ ತಥಾ ನ್ಯಾಯಂ ಬ್ರಹ್ಮಚಾರೀ ವ್ರತೇ ಸ್ಥಿತಃ ॥ ೩೧ ॥

ಅಭಿವಾದ್ಯ ಗುರೋಃ ಪಾದೌ ಸಂಧ್ಯಾಕರ್ಮಾವಸಾನತಃ ।
ಯಥಾಯೋಗ್ಯಂ ಪ್ರಕುರ್ವೀತ ಮಾತಾಪಿತ್ರೋಸ್ತು ಭಕ್ತಿತಃ ॥ ೩೨ ॥

ಏತೇಷು ತ್ರಿಷು ತುಷ್ಟೇಷು ತುಷ್ಟಾಃ ಸ್ಯುಃ ಸರ್ವದೇವತಾಃ ।
ತದೇಷಾಂ ಶಾಸನೇ ತಿಷ್ಠೇದ್ಬ್ರಹ್ಮಚಾರೀ ವಿಮತ್ಸರಃ ॥ ೩೩ ॥

---

೩೦. ಬ್ರಾಹ್ಮಣನಾದ ಬ್ರಹ್ಮಚಾರಿಯು ತಾನು ಇಷ್ಟಪಡದೆ, ತನಗೆ ಸ್ವಾಧೀನವಿಲ್ಲದೆ, ಸ್ವಪ್ನಕಾಲದಲ್ಲಿ ರೇತಸ್ಸೇಚನ ಮಾಡಿದಲ್ಲಿ, ಪ್ರಾತಃ ಸ್ನಾನಮಾಡಿ ಸೂರ್ಯನನ್ನು ಸೇವಿಸಿ, ಮೂರು ಸಾರಿ 'ಪುನರ್ಮಾಮೈತ್ವಿಂದ್ರಿಯಂ' ಎಂಬ ಋಕ್ಕನ್ನು ಜಪಿಸುವುದು.

೩೧. ನಿಯಮದಲ್ಲಿರತಕ್ಕ ಬ್ರಹ್ಮಚಾರಿಯು ವೇದಾದಿಶಾಸ್ತ್ರಗಳಲ್ಲಿಯೂ, ಭಗವಂತನಲ್ಲಿಯೂ ನಂಬಿಕೆಯುಳ್ಳವನಾಗಿ, ಇಂದ್ರಿಯ ನಿಗ್ರಹಿಯಾದವನಾಗಿ, ಬೆಳಗ್ಗೆ, ನಡುಹಗಲು, ಬೈಗು ಈ ಮೂರು ಕಾಲಗಳಲ್ಲಿಯೂ ಸಂಧ್ಯೆಯನ್ನು ವಿಧ್ಯನುಸಾರವಾಗಿ ಸೇವಿಸಬೇಕು.

೩೨. ಬ್ರಹ್ಮಚಾರಿಯು ಸಂಧ್ಯಾಕರ್ಮಾನುಷ್ಠಾನವಾದ ಮೇಲೆ, ಗುರುಗಳ ಪಾದಗಳಿಗೆರಗಿ ಪೊಡಮಟ್ಟು, ಭಕ್ತಿಯಿಂದ ಸಾಧ್ಯವಾದಷ್ಟು ತಾಯಿತಂದೆಗಳ ಸೇವೆಯನ್ನು ಮಾಡುವುದು.

೩೩. ಗುರು, ತಾಯಿತಂದೆಗಳು— ಈ ಮೂವರು ಪ್ರೀತರಾದರೆ ದೇವತೆಗಳೆಲ್ಲರೂ ಸಂತೋಷಗೊಳ್ಳುವವರಾಗುತ್ತಾರೆ. ಆದುದರಿಂದ ಬ್ರಹ್ಮಚಾರಿಯು ಮತ್ಸರನಾಗದೆ, ಈ ಮೂವರ ಅಪ್ಪಣೆಯಲ್ಲಿರತಕ್ಕದು.

ಅಧೀತ್ಯ ಚತುರೋ ವೇದಾನ್ವೇದೌ ವೇದಮಥಾಪಿ ವಾ ।
ಗುರವೇ ದಕ್ಷಿಣಾಂ ದತ್ವಾ ತದಾ ತು ಸ್ವೇಚ್ಛಯಾ ವಸೇತ್ ॥ ೩೪ ॥

ವಿರಕ್ತಃ ಪ್ರವ್ರಜೇದ್ವಿದ್ವಾನ್ಸಂರಕ್ತಸ್ತು ಗೃಹೀ ಭವೇತ್ ।
ಸರಾಗೋ ನರಕಂ ಯಾತಿ ಪ್ರವ್ರಜನ್ಹಿ ಧ್ರುವಂ ದ್ವಿಜಃ ॥ ೩೫ ॥

ಯಸ್ಯೈತಾನಿ ಸುಶುದ್ಧಾನಿ ಜಿಹ್ವೋಪಸ್ಥೋದರಂ ಗಿರಃ ।
ಸಂನ್ಯಸೇನ ಕೃತೋದ್ವಾಹೋ ಬ್ರಾಹ್ಮಣೋ ಬ್ರಹ್ಮವರ್ಚಸ್ವಾನ್ ॥ ೩೬ ॥

ಏವಂ ಯೋ ವಿಧಿಮಾಸ್ಥಾಯ ನಯೇತ್ಕಾಲಮತಂದ್ರಿತಃ ।
ತೇನ ಭೂಯಃ ಪ್ರಜಾಯೇತ ಬ್ರಹ್ಮಚಾರೀ ದೃಢವ್ರತಃ ॥ ೩೭ ॥

---

೩೪. ನಾಲ್ಕು ವೇದಗಳನ್ನಾಗಲೀ, ಎರಡು ವೇದಗಳನ್ನಾಗಲೀ, ಕೊನೆಗೆ ಒಂದು ವೇದವನ್ನಾಗಲೀ ಅಧ್ಯಯನಮಾಡಿ, ಗುರುವಿಗೆ ದಕ್ಷಿಣಾದ್ರವ್ಯವನ್ನು ಸಮರ್ಪಿಸಿ, ಆಗ ಬ್ರಹ್ಮಚಾರಿಯು ತನ್ನ ಇಷ್ಟದಿಂದ ವಾಸಮಾಡುವುದು.

೩೫. ಇಂತು ವೇದಾಧ್ಯಯನ ಸಂಪನ್ನನಾದ ಜ್ಞಾನಿಯು ವಿರಕ್ತನಾದರೆ ಸಂನ್ಯಾಸಿಯಾಗುವುದು ; ವಿಷಯೇಚ್ಛೆಯುಳ್ಳವನಾದರೆ ಗೃಹಸ್ಥನಾಗುವುದು. ಬ್ರಾಹ್ಮಣನು ಸಂನ್ಯಾಸವನ್ನು ಹೊಂದಿರುತ್ತಾ, ವಿಷಯಾಸಕ್ತನಾದ ಪಕ್ಷದಲ್ಲಿ ನರಕಕ್ಕೆ ಹೋಗುತ್ತಾನೆ.

೩೬-೩೭. ಯಾವ ಪುರುಷನಿಗೆ, ನಾಲಿಗೆ, ಕಚ್ಚೆ, ಹೊಟ್ಟೆ, ನುಡಿ- ಇವು ಅತ್ಯಂತ ಶುದ್ಧವಾಗಿರುತ್ತವೆಯೋ, ಬ್ರಾಹ್ಮಣ ದೇಹವನ್ನು ಹೊಂದಿದ ಆ ಬ್ರಹ್ಮಜ್ಞಾನಿಯು, ಸಂನ್ಯಾಸದಿಂದ ಮದುವೆಮಾಡಿಕೊಂಡವನಾಗಿ, ಇಂತು ನಿಯಮವುಳ್ಳವನಾಗಿ ಸೋಮಾರಿಯಾಗದೆ, ಕಾಲವನ್ನು ಕಳೆಯುತ್ತಾ ಇರುವನೋ, ಅವನು ದೃಢವ್ರತನಾಗಿ, ಅದರಿಂದ ಮತ್ತೂ ಬ್ರಹ್ಮಚಾರಿಯಾಗಿರಬಹುದು.

ಯೋ ಬ್ರಹ್ಮಚಾರೀ ವಿಧಿನೇತಮಾಸ್ಥಿತಂ
ಚರೇತ್ಪೃಥಿವ್ಯಾಂ ಗುರುಸೇವನೇ ರತಃ ।
ಸಂಪ್ರಾಪ್ಯ ವಿದ್ಯಾಮಪಿ ದುರ್ಲಭಾಂ ತಾಂ
ಫಲಂ ಹಿ ತಸ್ಯಾಃ ಸಕಲಂ ಹಿ ವಿಂದತಿ ॥ ೩೮ ॥

॥ ಹಾರೀತ ಉವಾಚ ॥

ಗೃಹೀತವೇದಾಧ್ಯಯನಃ ಶ್ರುತಿಶಾಸ್ತ್ರಾರ್ಥತತ್ತ್ವವಿತ್ ।
ಗುರೋರ್ದತ್ತವರಃ ಸಮ್ಯಕ್ಸಮಾವರ್ತನಮಾರಭೇತ್ ॥ ೩೯ ॥

ಅಸಮಾನನಾಮಗೋತ್ರಾಂ ಕನ್ಯಾಂ ಭ್ರಾತೃಯುತಾಂ ಶುಭಾಮ್ ।
ಸರ್ವಾವಯವಸಂಯುಕ್ತಾಂ ಸದ್ವೃತ್ತಾಮುದ್ವಹೇತ್ತತಃ ॥ ೪೦ ॥

---

೩೮. ಯಾವ ಬ್ರಹ್ಮಚಾರಿಯು ಈ ನಿಯಮವನ್ನಾಶ್ರಯಿಸಿ, ಭುವಿಯಲ್ಲಿ ಗುರುವಿನ ಸೇವೆಯಲ್ಲಿ ತೊಡಗಿದವನಾಗಿ, ಹೊಂದಲಶಕ್ಯವಾದ ಆ ಬ್ರಹ್ಮವಿದ್ಯೆಯನ್ನೂ ಹೊಂದಿ ಸಂಚರಿಸುವನೋ, ಅವನು ಆ ವಿದ್ಯೆಯ ಪ್ರಯೋಜನವೆಲ್ಲವನ್ನೂ ಹೊಂದುತ್ತಾನೆ.

ಹಾರೀತನು ಹೇಳುತ್ತಾನೆ : –

೩೯. ಬ್ರಹ್ಮಚಾರಿಯು ಗುರುವಿನಿಂದ ವೇದಾಧ್ಯಯನವನ್ನು ಮಾಡಿ ವೇದಶಾಸ್ತ್ರಗಳ ಅರ್ಥ ಮತ್ತು ತತ್ತ್ವ ಇವನ್ನರಿತವನಾಗಿ, ಗುರುವಿಗೆ ದಕ್ಷಿಣಾದ್ರವ್ಯವನ್ನರ್ಪಿಸಿ ಆತನಿಂದ ಅನುಗೃಹೀತನಾಗಿ, ಸರಿಯಾಗಿ ಸಮಾವರ್ತನವ್ರತವನ್ನಾರಂಭಿಸುವುದು.

೪೦. ಬಳಿಕ ಭಿನ್ನಕುಲಗೋತ್ರದವಳಾದ, ಸಹೋದರರಿಂದ ಕೂಡಿದ ಮಂಗಳಸ್ವಭಾವದವಳೂ, ಎಲ್ಲ ಅವಯವಗಳುಳ್ಳವಳೂ, ಒಳ್ಳೆಯ ನಡತೆಯುಳ್ಳವಳ ಆದ ಕನ್ನೆಯನ್ನು ಮದುವೆ ಮಾಡಿಕೊಳ್ಳತಕ್ಕದು.

೪೦.–೪೧. ಕಪಿಲವರ್ಣದ ತಲೆಗೂದಲುಳ್ಳ ಕನ್ಯೆಯನ್ನೂ, ತನಗಿಂತ ಹೇರೆಡಲುಳ್ಳವಳನ್ನೂ, ನಿತ್ಯವ್ಯಾಧಿತೆಯಾದವಳನ್ನೂ, ಬಹು ಪರುಷವಾಗಿ ನುಡಿಯುವವಳನ್ನೂ, ಪ್ರಚುರಲೋಮವುಳ್ಳವಳನ್ನೂ, ಭಯಂಕರವಾಗಿ ಕಾಣುವವಳನ್ನೂ

ನೋದ್ವಹೇತ್ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಹಿಣೀಂ ।
ನಾಚಾಟಾಮತಿಲೋಮಾಂ ಚ ನ ವ್ಯಂಗ್ಯಾಂ ಭೀಮದರ್ಶನಾಮ್ ॥ ೪೧ ॥

ನರ್ಕ್ಷವೃಕ್ಷನದೀನಾಮ್ನೀಂ ನಾಂತ್ಯಪರ್ವತನಾಮಿಕಾಮ್ ।
ನ ಪಕ್ಷ್ಯಹಿಪ್ರೇಷ್ಯನಾಮ್ನೀಂ ನ ಚ ಭೀಷಣನಾಮಿಕಾಮ್ ॥ ೪೨ ॥

ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಹಂಸವಾರಣಗಾಮಿನೀಮ್ ।
ತನ್ವೋಷ್ಠ ಕೇಶ ದಶನಾಂ ಮೃದ್ವಂಗೀಮುದ್ವಹೇತ್ ಸ್ತ್ರಿಯಮ್ ॥ ೪೩ ॥

ಬ್ರಾಹ್ಮೇಣ ವಿಧಿನಾ ಕುರ್ಯಾತ್ಪ್ರಶಸ್ತೇನ ದ್ವಿಜೋತ್ತಮಃ ।
ಯಥಾಯೋಗಂ ತಥಾ ಹ್ಯೇವಂ ವಿವಾಹಂ ವರ್ಣಧರ್ಮತಃ ॥ ೪೪ ॥

ಆರ್ದ್ರೆ, ರೇವತಿ, ಮೊದಲಾದ ನಕ್ಷತ್ರಗಳು, ನದಿಗಳು- ಇವುಗಳ ಹೆಸರುಳ್ಳವಳನ್ನೂ, ಮ್ಲೇಚ್ಛರು, ಪರ್ವತಗಳು-ಇವುಗಳ ಹೆಸರುಳ್ಳವಳನ್ನೂ, ಪಕ್ಷಿ, ಸರ್ಪ, ದಾಸ, ಭಯಾನಕಗಳಾದ ಹೆಸರು- ಇವುಗಳುಳ್ಳವಳನ್ನೂ (ಇಂತಹ ಕನ್ಯೆಯನ್ನು) ಮದುವೆಯಾಗಬಾರದು.

೪೩. ಅವಿಕಲಾಂಗಿಯೂ, ಮಧುರವೂ, ಸುಖಾವಹವೂ ಆದ ಹೆಸರುಳ್ಳವಳೂ ಹಂಸಪಕ್ಷಿ, ಆನೆ- ಇವುಗಳಂತೆ ಮನೋಹರವಾದ ನಡಗೆಯುಳ್ಳವಳೂ, ಅನತಿಸ್ಥೂಲವಾದ ಲೋಮ, ಕೇಶ, ದಂತಗಳುಳ್ಳವಳೂ, ಕೋಮಲಾಂಗಿಯೂ ಆದ ಕನ್ಯೆಯನ್ನು ಮದುವೆಮಾಡಿಕೊಳ್ಳುವುದು.

೪೪. ಬ್ರಾಹ್ಮಣಶ್ರೇಷ್ಠನು ಪ್ರಶಸ್ತವಾದ ಬ್ರಾಹ್ಮನಿಯಮದಿಂದ ವಿವಾಹವನ್ನು ಮಾಡಿಕೊಳ್ಳುವುದು; ವರ್ಣಧರ್ಮದಿಂದ ಯಾವ ನಿಯಮವು ಹೊಂದಿಕೆಯಾಗುತ್ತದೆಯೋ, ಆ ನಿಯಮದಂತೆ ಈ ವಿವಾಹವನ್ನು ಮಾಡಿಕೊಳ್ಳುವುದು.

ಉಷಃಕಾಲೇ ಸಮುತ್ಥಾಯ ಕೃತಶೌಚೋ ದ್ವಿಜೋತ್ತಮಃ ।
ಕುರ್ಯಾತ್ಸ್ನಾನಂ ತಥಾ ವಿದ್ವಾನ್ದಂತಧಾವನ ಪೂರ್ವಕಮ್ ॥ ೪೫ ॥

ಮುಖೇ ಪರ್ಯುಷಿತೇ ನಿತ್ಯಂ ಯತೋಽಪೂತೋ ಭವೇನ್ನರಃ ।
ತಸ್ಮಾಚ್ಛುಷ್ಕಮಥಾದ್ರ್ರಂ ವಾ ಭಕ್ಷಯೇದ್ದಂತಧಾವನಮ್ ॥ ೪೬ ॥

ಖದಿರಂ ಚ ಕದಂಬಂ ಚ ಕರಂಜಂ ಚ ವಟಂ ತಥಾ ।
ಅಪಾಮಾರ್ಗಂ ಚ ಬಿಲ್ವಂ ಚ ಅರ್ಕಶ್ಚೋದುಂಬರಸ್ತಥಾ ॥ ೪೭ ॥

ಏತೇ ಪ್ರಶಸ್ತಾಃ ಕಥಿತಾ ದಂತಧಾವನಕರ್ಮಣಿ ।
ದಂತಧಾವನಕಾಷ್ಠಂ ಚ ವಕ್ಷ್ಯಾಮಿ ತತ್ಪ್ರಶಸ್ತತಾಮ್ ॥ ೪೮ ॥

---

೪೫. ವಿವೇಕಶಾಲಿಯಾದ ಬ್ರಾಹ್ಮಣ ಶ್ರೇಷ್ಠನು ಉಷಃಕಾಲದಲ್ಲೆದ್ದು ದೇಹಶುದ್ಧಿಯನ್ನು ಮಾಡಿಕೊಂಡು, ಅನಂತರದಲ್ಲಿ ಹಲ್ಲುಗಳನ್ನುಜ್ಜಿ ತೊಳೆದು ಕೊಂಡು, ಬಳಿಕ ಸ್ನಾನವನ್ನು ಮಾಡುವುದು.

೪೬. ಯಾವ ಕಾರಣದಿಂದ ಬಾಯಿಯು ರಾತ್ರಿ ಕಳೆದು ಹಳಸಲು ದುರ್ವಾಸನೆಗೊಳ್ಳಲು, ನಿತ್ಯದಲ್ಲಿಯೂ ಮಾನವನು ಅಪವಿತ್ರನಾಗುವನು; ಆ ಕಾರಣದಿಂ ಹಲ್ಲನ್ನು ಉಜ್ಜಿಕೊಳ್ಳಲು ಒಣಗಿನ ಅಥವಾ ಹಸಿದಾದ ಕಡ್ಡಿಯನ್ನು ಅಗಿಯುವುದು.

೪೭-೪೮. ಕಗ್ಗಲಿಮರ, ಕಡಹದಮರ, ಹೊಂಗೆ, ಆಲ, ಉತ್ತರಣೆ, ಬಿಲ್ವ, ಎಕ್ಕೆ, ಅತ್ತೀಮರ—ಇವುಗಳ ಕಡ್ಡಿಗಳು; ಇವುಗಳು ಹಲ್ಲನ್ನು ಉಜ್ಜಿಕೊಳ್ಳು ದರಲ್ಲಿ ಶ್ರೇಷ್ಠವಾದುವುಗಳೆಂದು ಶಾಸ್ತ್ರಗಳಲ್ಲಿ ಹೇಳಿವೆ. ದಂತಧಾವನ ಕಾಷ್ಠವನ್ನೂ ಅದರ ಪ್ರಾಶಸ್ತ್ಯವನ್ನೂ ಹೇಳುವೆನು.

ಸರ್ವೇ ಕಂಟಕಿನಃ ಪುಣ್ಯಾಃ ಕ್ಷೀರಿಣಸ್ತು ಯಶಸ್ವಿನಃ ।
ಅಷ್ಟಾಂಗುಲೇನ ಮಾನೇನ ತತ್ಪ್ರಮಾಣಮಿಹೋಚ್ಯತೇ ॥ ೪೯ ॥

ಪ್ರಾದೇಶಮಾತ್ರಮಥವಾ ತೇನ ದಂತಾನ್ವಿಶೋಧಯೇತ್ ।
ಪ್ರತಿಪದ್ದರ್ಶಷಷ್ಠೀಷು ನವಮ್ಯಾಂ ಚೈವ ಸತ್ತಮಾಃ ॥ ೫೦ ॥

ದಂತಾನಾಂ ಕಾಷ್ಠಸಂಯೋಗಾದ್ದಹತ್ಯಾಸಪ್ತಮಂ ಕುಲಮ್ ।
ಅಲಾಭೇ ದಂತಕಾಷ್ಠಸ್ಯ ಪ್ರತಿಷಿದ್ಧೇ ಚ ತದ್ದಿನೇ ॥ ೫೧ ॥

ಅಪಾಂ ದ್ವಾದಶಗಂಡೂಷೈರ್ಮುಖಶುದ್ಧಿರ್ವಿಧೀಯತೇ ।
ಸ್ನಾತ್ವಾ ಮಂತ್ರವದಾಚಮ್ಯ ಪುನರಾಚಮನಂ ಚರೇತ್ ॥ ೫೨ ॥

---

೪೯. ಮುಳ್ಳಿರತಕ್ಕವೆಲ್ಲವೂ ಪುಣ್ಯವನ್ನುಂಟುಮಾಡತಕ್ಕವು. ಹಾಲುಳ್ಳವು ಕೀರ್ತಿಯನ್ನುಂಟುಮಾಡತಕ್ಕವು. ಆ ಕಾಷ್ಠಗಳ ಅಳತೆಯು ಎಂಟಂಗುಲಗಳಿರಬೇಕು.

೫೦–೫೨. ಅಥವ ಆ ಕಾಷ್ಠವು ಒಂದು ಜೋಟು ಉದ್ದವಿರಬೇಕು. ಆ ಕಾಷ್ಠದಿಂದ ಪಲ್ಲುಗಳನ್ನು ಉಜ್ಜಿ ತೊಳೆಯುವುದು. ಪಾಡ್ಯಮಿ, ಅಮಾವಾಸ್ಯೆ, ಷಷ್ಠೀ, ಮತ್ತು ನವಮೀ—ಈ ತಿಥಿಗಳಲ್ಲಿ ಹಲ್ಲುಗಳಿಗೆ ಈ ಕಡ್ಡಿಗಳ ಸಂಬಂಧವುಂಟಾದರೆ (ಉಜ್ಜಿದರೆ), ಏಳು ತಲೆಯವರೆಗೂ ಕುಲವನ್ನು ಸುಡುತ್ತದೆ. ಈ ದಂತಕಾಷ್ಠವು ಸಿಕ್ಕದಿರುವಾಗ, ಮತ್ತೂ ನಿಷಿದ್ಧವಾದ ಪಾಡ್ಯಮೀ ಮೊದಲಾದ ತಿಥಿಗಳಲ್ಲಿ ನೀರನ್ನು ಹನ್ನೆರಡು ಸಲ ಹಾಕಿಕೊಂಡು ಮುಕ್ಕಳಿಸುವುದರಿಂದ ಬಾಯಿಯ ಶುದ್ಧಿಯುಂಟಾಗುತ್ತದೆ. ಸ್ನಾನಮಾಡಿ, ಮಂತ್ರೋಚ್ಚಾರಣೆಯನ್ನು ಮಾಡಿ, ಆಚಮನ ಮಾಡಿ, ಮತ್ತೂ ಆಚಮನವನ್ನು ಮಾಡುವುದು.

ಮಂತ್ರವಾನ್ಪ್ರೋಕ್ಷ್ಯ ಚಾತ್ಮಾನಂ ಪ್ರಕ್ಷಿಪೇದುದಕಾಂಜಲಿಮ್ ।
ಆದಿತ್ಯೇನ ಸಹ ಪ್ರಾತರ್ಮಂದೇಹಾ ನಾಮ ರಾಕ್ಷಸಾಃ ॥ ೫೩ ॥

ಯುಧ್ಯಂತಿ ವರದಾನೇನ ಬ್ರಹ್ಮಣೋಽವ್ಯಕ್ತಜನ್ಮನಃ ।
ಉದಕಾಂಜಲಿವಿಕ್ಷೇಪೋ ಗಾಯತ್ರ್ಯಾ ಚಾಭಿಮಂತ್ರಿತಃ ॥ ೫೪ ॥

ತಾನ್ಘ್ನಂತಿ ರಾಕ್ಷಸಾನ್ಸರ್ವಾನ್ಮಂದೇಹಾನ್ರವಿವೈರಿಣಃ ।
ತತಃ ಪ್ರಯಾತಿ ಸವಿತಾ ಬ್ರಾಹ್ಮಣೈ ರಕ್ಷಿತೋ ದಿವಿ ॥ ೫೫ ॥

ಮರೀಚ್ಯಾದ್ಯೈರ್ಮಹಾಭಾಗೈಃ ಸನಕಾದ್ಯೈಶ್ಚ ಯೋಗಿಭಿಃ ।
ತಸ್ಮಾನ್ನ ಲಂಘಯೇತ್ಸಂಧ್ಯಾಂ ಸಾಯಂಪ್ರಾತರ್ದ್ವಿಜಃ ಸದಾ ॥ ೫೬ ॥

೫೩-೫೫. ಅಧಿಕಾರಿಯು 'ಆಪೋಹಿಷ್ಠಾ' ಮುಂತಾದ ಮಂತ್ರಗಳಿಂ ತನ್ನನ್ನು ನೀರಿನಿಂದ ಪ್ರೋಕ್ಷಿಸಿಕೊಂಡು, ಉದಕಾಂಜಲಿಯ ಅರ್ಘ್ಯವನ್ನು ಕೊಡುವುದು ; ಮಂದೇಹರೆಂಬ ಪ್ರಸಿದ್ಧರಾದ ರಕ್ಕಸರು ಅವ್ಯಕ್ತಳಾದ ಶ್ರೀ ಮಹಾಲಕ್ಷ್ಮಿಯಿಂದ ಜನಿಸಿದ ಚತುರ್ಮುಖಬ್ರಹ್ಮನು ಕೊಟ್ಟ ವರದ ಬಲದಿಂದ ಸೂರ್ಯನೊಡ ಹೋರಾಡುತ್ತಾರೆ. ಆಗ ಶ್ರೀ ಗಾಯತ್ರೀಮಂತ್ರದಿಂದ ಅಭಿಮಂತ್ರಿತವಾ ಬೊಗಸೆಯ ನೀರನ್ನು ಎಸೆಯುವುದು ; ಈ ಅರ್ಘ್ಯೋದಕವು ಶತ್ರುಗಳಾದ ರಕ್ಕರಾದ, ಮಂದೇಹರನ್ನೆಲ್ಲಾ ಕೊಲ್ಲುತ್ತದೆ. ಅನಂತರದಲ್ಲಿ ಬ್ರಾಹ್ಮಣರಿಂದ ರಕ್ಷಿನಾದ ಸೂರ್ಯನು ಆಕಾಶದಲ್ಲಿ ಮುಂದಕ್ಕೆ ಹೋಗುತ್ತಾನೆ.

೫೬. ಪುಣ್ಯಶಾಲಿಗಳಾದ, ಮರೀಚರೇ ಮೊದಲಾದ ಪ್ರಜಾಪತಿಗಳಿಂದಲ ಸನಕರೇ ಮೊದಲಾದ ಜ್ಞಾನಿಗಳಿಂದಲೂ, ಸಂಧ್ಯೆಯು ಉಪಾಸಿಸತಕ್ಕದ್ದು. ಆದರಿಂದ ಬ್ರಾಹ್ಮಣನು ಸಾಯಂಕಾಲ ಪ್ರಾತಃಕಾಲಗಳಲ್ಲಿ ಸಂಧ್ಯೆಯ ಅನುಷ್ಠಾವನ್ನು ಬಿಡತಕ್ಕುದಲ್ಲವು.

ಉಲ್ಲಂಘಯತಿ ಯೋ ಮೋಹಾತ್ಸ ಯಾತಿ ನರಕಂ ಧ್ರುವಮ್ ।
ಸಾಯಂ ಮಂತ್ರವದಾಚಮ್ಯ ಪ್ರೋಕ್ಷ್ಯ ಸೂರ್ಯಸ್ಯ ಚಾಂಜಲಿಮ್ ॥ ೫೭ ॥

ದತ್ವಾ ಪ್ರದಕ್ಷಿಣಂ ಕೃತ್ವಾ ಜಲಂ ಸ್ಪೃಷ್ಟ್ವಾ ವಿಶುದ್ಧ್ಯತಿ ।
ಪೂರ್ವಾಂ ಸಂಧ್ಯಾಂ ಸನಕ್ಷತ್ರಾಮುಪಕ್ರಮ್ಯ ಯಥಾವಿಧಿ ॥ ೫೮ ॥

ಗಾಯತ್ರೀಮಭ್ಯಸೇತ್ತಾವದ್ಯಾವದ್ಭಕ್ಷಾಣಿ ಪಶ್ಯತಿ ।
ತತಸ್ತ್ವಾವಸಥಂ ಪ್ರಾಪ್ಯ ಹೋಮಂ ಕುರ್ಯಾತ್ಸ್ವಯಂ ಬುಧಃ ॥ ೫೯ ॥

ಸಂಚಿಂತ್ಯ ಭೃತ್ಯವರ್ಗಸ್ಯ ಭರಣಾರ್ಥಂ ವಿಚಕ್ಷಣಃ ।
ತತಃ ಶಿಷ್ಯಹಿತಾರ್ಥಾಯ ಸ್ವಾಧ್ಯಾಯಂ ಕಿಂಚಿದಾಚರೇತ್ ॥ ೬೦ ॥

೫೭–೫೯. ಯಾವ ಪುರುಷನು ಅಜ್ಞಾನದಿಂದ ಸಂಧ್ಯೆಯ ಉಪಾಸನೆಯನ್ನು ಬಿಡುವನೋ, ಅವನು ಖಂಡಿತವಾಗಿಯೂ ನರಕಕ್ಕೆ ಹೋಗುವನು. ಸಾಯಂಕಾಲದಲ್ಲಿ ದ್ವಿಜನು ಮಂತ್ರಪುರಸ್ಸರವಾಗಿ, ಶುದ್ಧಾಚಮನವನ್ನು ಮಾಡಿ, ಮಂತ್ರೋದಕವನ್ನು ಪ್ರೋಕ್ಷಿಸಿಕೊಂಡು, ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು, ಪ್ರದಕ್ಷಿಣನಮಸ್ಕಾರವನ್ನು ಮಾಡಿ, ಉದಕವನ್ನು ಸ್ಪರ್ಶಮಾಡಿ, ಶುದ್ಧನಾಗುತ್ತಾನೆ. ಶಾಸ್ತ್ರದಲ್ಲಿ ಹೇಳಿರುವ ನಿಯಮವನ್ನು ಅನುಸರಿಸಿ, ಬೆಳಗಿನ ಸಂಧ್ಯೋಪಾಸನೆಯನ್ನು ನಕ್ಷತ್ರಗಳು ಕಾಣಿಸುತ್ತಿರುವಾಗಲೇ ಪ್ರಾರಂಭಿಸಿ, ಗಾಯತ್ರಿಯನ್ನು ಜಪಿಸುವುದು. ಬೈಗಿನ ಸಂಧ್ಯೋಪಾಸನೆಯನ್ನು ಸೂರ್ಯನಿರುವಾಗಲೇ ಮೊದಲು ಮಾಡಿ, ನಕ್ಷತ್ರಗಳು ಕಾಣಿಸುವವರೆಗೂ ಗಾಯತ್ರಿಯನ್ನು ಜಪಿಸುವುದು. ಅನಂತರದಲ್ಲಿ ಸ್ವಯಂ ಜ್ಞಾನಿಯಾದವನು ಮನೆಗೆ ಬಂದು ಹೋಮವನ್ನನುಷ್ಠಿಸುವುದು.

೬೦. ಬಳಿಕ ವಿವೇಕಿಯಾದವನು ತನ್ನನ್ನು ಆಶ್ರಯಿಸಿಕೊಂಡಿರುವವರನ್ನು ರಕ್ಷಿಸುವ ಸಲುವಾಗಿ, ಆಹಾರಾದಿಗಳ ವಿಷಯವನ್ನು ಯೋಚಿಸಿ, ಅಣಿಮಾಡಿ, ಶಿಷ್ಯರ ಶ್ರೇಯಸ್ಸಿಗಾಗಿ, ವೇದಗಳ ಅಧ್ಯಾಪನವನ್ನು ಮಾಡುವುದು.

ಈಶ್ವರಂ ಚೈವ ರಕ್ಷಾರ್ಥಮಭಿಗಚ್ಛೇದ್ದ್ವಿಜೋತ್ತಮಮ್ ।
ಕುಶಪುಷ್ಪೇಂಧನಾದೀನಿ ಗತ್ವಾ ದೂರಾತ್ಸಮಾಹರೇತ್ ॥ ೬೧ ॥

ಮಾಧ್ಯಾಹ್ನಿಕೀಂ ಕ್ರಿಯಾಂ ಕುರ್ಯಾಚ್ಛುಚೌ ದೇಶೇ ಸಮಾಹಿತಃ ।
ವಿಧಿಂ ಸ್ನಾನಸ್ಯ ವಕ್ಷ್ಯಾಮಿ ಸಮಾಸಾತ್ಪಾಪನಾಶನಮ್ ॥ ೬೨ ॥

ಸ್ನಾತ್ವಾ ಯೇನ ವಿಧಾನೇನ ಸದ್ಯೋ ಮುಚ್ಯೇತ ಕಿಲ್ಬಿಷಾತ್ ।
ಸುಧೀಃ ಸ್ನಾನಾರ್ಥಮಾದಾಯ ಮೃದಂ ಕುಶತಿಲೈಃ ಸಹ ॥ ೬೩ ॥

ಸುಮನಾಶ್ಚ ತತೋ ಗಚ್ಛೇನ್ನದೀಂ ಶುದ್ಧಾಂ ಮನೋರಮಾಮ್ ।
ನದ್ಯಾಂ ತು ವಿದ್ಯಮಾನಾಯಾಂ ನ ಸ್ನಾಯಾದಲ್ಪವಾರಿಷು ॥ ೬೪ ॥

---

೬೧. ಆ ನಾಡ ಅರಸನನ್ನೂ, ಬ್ರಾಹ್ಮಣಶ್ರೇಷ್ಠರನ್ನೂ ರಕ್ಷಣೆಗಾಗಿ ದರ್ಶನ ಮಾಡುವುದು. ದರ್ಭೆ, ಹೂ, ಕಾಷ್ಠ—ಇವೇ ಮೊದಲಾದುವನ್ನು ಊರ ಹೊರಗೆ ಹೋಗಿ ದೂರದಿಂದ ತರುವುದು.

೬೨. ದ್ವಿಜನು ಸಮಾಧಾನವುಳ್ಳವನಾಗಿ, ಪರಿಶುದ್ಧವಾದೆಡೆಯಲ್ಲಿ ನಡು ಹಗಲಿನ ಕರ್ಮಗಳನ್ನು ಆಚರಿಸುವುದು. ಇನ್ನು ಯಾವ ನಿಯಮದಿಂದ ಸ್ನಾನ ಮಾಡಿ, ತತ್ಕ್ಷಣದಲ್ಲಿಯೇ ಪಾಪದಿಂದ ಮುಕ್ತನಾಗುತ್ತಾನೆಯೋ, ಆ ಪಾಪಗಳನ್ನು ಕಳೆಯುವ ಸ್ನಾನ ವಿಧಿಯನ್ನು ಸಂಗ್ರಹವಾಗಿ ಹೇಳುವೆನು.

೬೩–೬೪. ವಿದ್ವಾಂಸನು ಸ್ನಾನದ ಸಲುವಾಗಿ ದರ್ಭೆಎಳ್ಳುಗಳೊಡನೆ ಶುಭ್ರವಾದ ಮಣ್ಣನ್ನು ತೆಗೆದುಕೊಂಡು ಶುದ್ಧಾಂತಃಕರಣನಾಗಿ ಬಳಿಕ ಶುದ್ಧವೂ, ಮನೋಹರವೂ ಆದ ನದಿಗೆ ಹೋಗುವುದು. ನದಿಯು ಇರುವಾಗ, ಕೊಳ, ಹಳ್ಳ ಮುಂತಾದುವುಗಳ ನೀರಿನಲ್ಲಿ ಸ್ನಾನ ಮಾಡಬಾರದು.

ಶುಚೌ ದೇಶೇ ಸಮಭ್ಯುಕ್ಷ್ಯ ಸ್ಥಾಪಯೇಚ್ಛುಕಮೃತ್ತಿಕಾಮ್ ।
ಮೃತ್ತೋಯೇನ ಸ್ವಕಂ ದೇಹಮಪಿ ಪ್ರಕ್ಷಾಲ್ಯ ಯತ್ನತಃ ॥ ೬೫ ॥

ಸ್ನಾನಾಚ್ಛರೀರಂ ಸಂಶೋಧ್ಯ ಕುರ್ಯಾದಾಚಮನಂ ದ್ವಿಜಃ ।
ಶುಭೈರ್ಜಲಂ ಪ್ರವಿಶ್ಯಾಥ ನಮೇದ್ವರುಣಮಪ್ಪತಿಮ್ ॥ ೬೬ ॥

ಹರಿಮೇವ ಸ್ಮರಂಶ್ಚಿತ್ತೇ ನಿಮಜ್ಜೇಚ್ಚ ಬಹೂದಕೇ ।
ತತಃ ಸ್ನಾನಂ ಸಮಾಸಾದ್ಯ ಅಪ ಆಚಮ್ಯ ಮಂತ್ರತಃ ॥ ೬೭ ॥

ಪ್ರೋಕ್ಷಯೇದರುಣಂ ದೇವಂ ತ್ರೈರ್ಮಂತ್ರೈಃ ಪಾವಮಾನಿಭಿಃ ।
ಕುಶಾಗ್ರಸ್ಥೇನ ತೋಯೇನ ಪ್ರೋಕ್ಷ್ಯಾತ್ಮಾನಂ ಪ್ರಯತ್ನತಃ ॥ ೬೮ ॥

೬೫–೬೬. ನಿರ್ಮಲವಾದೆಡೆಯಲ್ಲಿ ನೀರನ್ನು ಪ್ರೋಕ್ಷಿಸಿ, ಪವಿತ್ರಗೊಳಿಸಿ, ದರ್ಭೆ ಮಣ್ಣುಗಳನ್ನಿಡುವುದು. ಧರ್ಮಜ್ಞನು ಪ್ರಯತ್ನದಿಂದ ತನ್ನೊಡಲನ್ನು ಮಣ್ಣು ನೀರುಗಳಿಂದ ತೊಳೆದುಕೊಂಡು, ಬಳಿಕ ನಿರ್ಮಲವಾದ ನೀರಿನಿಂದ ಸ್ನಾನ ಮಾಡುವುದರಿಂದ ಶರೀರದ ಕೊಳೆಯನ್ನು ಕಳೆದು ಶುದ್ಧಿ ಮಾಡಿಕೊಂಡು ಶುದ್ಧಾಚಮನವನ್ನು ಮಾಡುವುದು. ಅನಂತರದಲ್ಲಿ ಶುಭ ವಸ್ತುಗಳೊಡನೆ ನೀರನ್ನು ಪ್ರವೇಶಿಸಿ, ಜಲಾಧಿಪತಿಯಾದ ವರುಣನಿಗೆ ವಂದಿಸುವುದು.

೬೭–೬೮. ಮನದಲ್ಲಿ ಶ್ರೀ ಹರಿಯನ್ನೇ ಚಿಂತಿಸುತ್ತಾ ಆಳವಾಗಿ ನೀರಿರುವೆಡೆಯಲ್ಲಿ ಮುಣುಗುಹಾಕುವುದು. ಅನಂತರದಲ್ಲಿ ಮಿಂದು ಮಂತ್ರಪೂರ್ವಕವಾಗ ನೀರನ್ನು ಆಚಮನ ಮಾಡಿ, ದರ್ಭೆಯ ಕೊನೆಯಲ್ಲಿರುವ ನೀರಿನಿಂದ ಪ್ರಯತ್ನದಿಂದ ಪ್ರೋಕ್ಷಿಸಿಕೊಂಡು, ಆ ಪವಮಾನ ಮಂತ್ರಗಳಿಂದ ಅರುಣದೇವನಿಗೆ ಪ್ರೋಕ್ಷಿಸುವುದು.

ಆಲಭೇನ್ಮೃತ್ತಿಕಾಂ ಗಾತ್ರೇ ಇದಂ ವಿಷ್ಣುರಿತಿ ತ್ರಿಧಾ ।
ತತೋ ನಾರಾಯಣಂ ದೇವಂ ಸಂಸ್ಮರನ್ಪ್ರವಿಶೇಜ್ಜಲಮ್ ॥ ೬೯ ॥

ನಿಮಜ್ಜ್ಯಾಂತರ್ಜಲೇ ಸಮ್ಯಕ್ತ್ರಿಃ ಪಠೇದಘಮರ್ಷಣಮ್ ।
ಸ್ನಾತ್ವಾ ಕುಶತಿಲೈಸ್ತದ್ವದ್ದೇವರ್ಷೀನ್ಪಿತೃಭಿಃ ಸಹ ॥ ೭೦ ॥

ತರ್ಪಯಿತ್ವಾ ಜಲಾತ್ತಸ್ಮಾನ್ನಿಷ್ಕ್ರಮ್ಯ ಚ ಸಮಾಹಿತಃ ।
ಜಲತೀರಂ ಸಮಾಸಾದ್ಯ ಧೌತೇ ಶುಕ್ಲೇ ಚ ವಾಸಸೀ ॥ ೭೧ ॥

ಪರಿಧಾಯೋತ್ತರೀಯಂ ಚ ನ ಕುರ್ಯಾತ್ಕೇಶಧೂನನಮ್
ನ ರಕ್ತಮುಲ್ಬಣಂ ವಾಸೋ ನ ನೀಲಂ ತತ್ಪ್ರಶಸ್ಯತೇ ॥ ೭೨ ॥

---

೬೯. ಬಳಿಕ 'ಇದಂ ವಿಷ್ಣುಃ' ಇತ್ಯಾದಿ ಮಂತ್ರವನ್ನು ಹೇಳಿ, ಮೂರುಸಲ ಮಣ್ಣನ್ನು ಶರೀರಕ್ಕೆ ಹಚ್ಚಿಕೊಂಡು, ತರುವಾಯ ಸ್ವಾಮಿಯಾದ ಶ್ರೀಮನ್ನಾರಾಯಣನನ್ನು ಸ್ಮರಿಸುತ್ತಾ, ನೀರನ್ನು ಪ್ರವೇಶಿಸುವುದು.

೭೦-೭೨. ನೀರಿನೊಳಗೆ ಮೂರು ಬಾರಿ ಸಂಪೂರ್ಣವಾಗಿ ಮುಣುಗಿ, ಅಘಮರ್ಷಣ ಮಂತ್ರವನ್ನು ಹೇಳುವುದು. ಇಂತು ಮಿಂದು, ದರ್ಭೆ ಎಳ್ಳುಗಳಿಂದ ಪಿತೃಗಳೊಡನೆ ದೇವತೆಗಳು, ಮತ್ತೂ ಋಷಿಗಳು–ಇವರಿಗೆ ತರ್ಪಣವನ್ನು ಕೊಟ್ಟು, ಸಮಾಧಾನದಿಂದ ಆ ಜಲದಿಂದ ಹೊರಕ್ಕೆ ಬಂದು, ಆ ಜಲಾಶಯದ ತಡಿಗೆ ಹೋಗಿ ಒಗೆದ ಬಿಳಿಯವಸ್ತ್ರಗಳನ್ನು ಉಟ್ಟು, ಹೊದೆದು, ತಲೆಯ ಕೂದಲನ್ನು ಕೊಡಹ ಬಾರದು; ಅಚ್ಚಕೆಂಪಿನ ಬಟ್ಟೆಯಾಗಲೀ, ನೀಲಿವರ್ಣದ ಬಟ್ಟೆಯಾಗಲೀ ಪ್ರಶಸ್ತವಾದುದಲ್ಲವು.

ಮಲಾಕ್ತಂ ತು ದಶಾಹೀನಂ ವರ್ಜಯೇದಂಬರಂ ಬುಧಃ ।
ತತಃ ಪ್ರಕ್ಷಾಲಯೇತ್ಪಾದೌ ಮೃತ್ತೋಯೇನ ವಿಚಕ್ಷಣಃ ॥ ೭೩ ॥

ತ್ರಿಃ ಪಿಬೇದ್ವೀಕ್ಷಿತಂ ತೋಯಮಾಸ್ಯಂ ದ್ವಿಃ ಪರಿಮಾರ್ಜಯೇತ್ ।
ಪಾದೌ ಶಿರಸಿ ಚಾಭ್ಯುಕ್ಷ್ಯೇತ್ತ್ರಿರಾಚಮ್ಯ ತು ಸಂಸ್ಪೃಶೇತ್ ॥ ೭೪ ॥

ಅಂಗುಷ್ಠೇನ ಪ್ರದೇಶಿನ್ಯಾ ನಾಸಿಕಾಂ ಸಮುಪಸ್ಪೃಶೇತ್ ।
ಅಂಗುಷ್ಠಕನಿಷ್ಠಕಾಭ್ಯಾಂ ನಾಭೌ ಹೃದಿ ತಲೇನ ಚ ॥ ೭೫ ॥

ಶಿರಶ್ಚಾಂಗುಲಿಭಿಸ್ಸರ್ವೈರ್ಬಾಹುಂ ಚೈವ ತತಃ ಸ್ಪೃಶೇತ್ ।
ಅನೇನ ವಿಧಿನಾಚಮ್ಯ ಬ್ರಾಹ್ಮಣಃ ಶುದ್ಧಮಾನಸಃ ॥ ೭೬ ॥

---

೭೩. ಧರ್ಮಜ್ಞನು ಕೊಳೆಯಾದ, ಹತ್ತುದಿನಗಳ ಕೆಳಗೆ ಒಗೆದಿದ್ದ ಬಟ್ಟೆಯನ್ನು ತೆಗೆದುಹಾಕುವುದು ; ಅನಂತರದಲ್ಲಿ ವಿಚಕ್ಷಣನು ಕಾಲುಗಳನ್ನು ಮಣ್ಣು ಮತ್ತು ನೀರು—ಇವುಗಳಿಂದ ತೊಳೆದುಕೊಳ್ಳುವುದು.

೭೪–೭೫. ಕಣ್ಣಾರೆ ಶುದ್ಧವೆಂದು ಕಂಡ ನೀರನ್ನು ಮೂರು ಸಲ ಬಾಯಿಗೆ ಹಾಕಿಕೊಂಡು ಉಗುಳಿ, ಬಾಯನ್ನು ಎರಡು ಸಲ ನೀರಿನಿಂದ ಒರಸಿಕೊಂಡು ಪಾದಗಳಲ್ಲಿಯೂ, ತಲೆಯಲ್ಲಿಯೂ ಪ್ರೋಕ್ಷಿಸಿ, ಮೂರುಬಾರಿ ಆಚಮನವನ್ನು ಮಾಡುವುದು ; ಬಳಿಕ ಕೈಯ ಹೆಬ್ಬೆರಲು ಮತ್ತು ಗುರುತಿಸತಕ್ಕ ತರ್ಜನಿ–ಇವುಗಳಿಂದ ಮೂಗನ್ನು ಸ್ಪರ್ಶಮಾಡುವುದು ; ಹೆಬ್ಬೆರಲು ಮತ್ತು ಕಿರುಬೆರಲು ಇವುಗಳಿಂದ ಹೊಕ್ಕುಳಲ್ಲಿಯೂ, ಅಂಗೈಯಿಂದ ಎದೆಯಲ್ಲಿಯೂ ಸ್ಪರ್ಶ ಮಾಡುವುದು.

೭೬–೭೭. ಎಲ್ಲ ಬೆರಳುಗಳಿಂದ ತಲೆಯನ್ನೂ, ಭುಜಗಳನ್ನೂ ಬಳಿಕ ಸ್ಪರ್ಶ ಮಾಡುವುದು. ಬ್ರಾಹ್ಮಣನು ಶುದ್ಧವಾದ ಮನವುಳ್ಳವನಾಗಿ, ಈ ತೆರನಾದ ನಿಯಮದಿಂದ ಶುದ್ಧಾಚಮನವನ್ನೆಸಗಿ, ದರ್ಭದ ಆಸನದಲ್ಲಿ ಕುಳಿತು, ಕೈಯಲ್ಲಿ

ದರ್ಭೇಷು ದರ್ಭಪಾಣಿಃ ಸ್ಯಾತ್ಪ್ರಾಙ್ಮುಖಃ ಸುಸಮಾಹಿತಃ ।
ಪ್ರಾಣಾಯಾಮಾಂಸ್ತು ಕುರ್ವೀತ ಯಥಾಶಾಸ್ತ್ರಮತಂದ್ರಿತಃ ॥ ೭೭ ॥

ಜಪಯಜ್ಞಂ ತತಃ ಕುರ್ಯಾದ್ಗಾಯತ್ರೀಂ ವೇದಮಾತರಮ್ ।
ತ್ರಿವಿಧೋ ಜಪಯಜ್ಞಃ ಸ್ಯಾತ್ತಸ್ಯ ಭೇದಂ ನಿಬೋಧಯ ॥ ೭೮ ॥

ವಾಚಿಕಶ್ಚ ಉಪಾಂಶುಶ್ಚ ಮಾನಸಸ್ತ್ರಿವಿಧಃ ಸ್ಮೃತಃ ।
ತ್ರಯಾಣಾಂ ಜಪಯಜ್ಞಾನಾಂ ಶ್ರೇಯಃ ಸ್ಯಾದುತ್ತರೋತ್ತರಮ್ ॥ ೭೯ ॥

ಯದುಚ್ಚನೀಚಸ್ವರಿತೈಃ ಶಬ್ದಸ್ಪಷ್ಟವದಕ್ಷರೈಃ ।
ಶಬ್ದಮುಚ್ಚಾರಯೇದ್ವಾಚಾ ಜಪಯಜ್ಞಃ ಸ ವಾಚಿಕಃ ॥ ೮೦ ॥

ದರ್ಭೆಗೊಂಡು, ಸಮಾಹಿತನಾಗಿ ಪೂರ್ವಾಭಿಮುಖನಾಗಿರತಕ್ಕುದು. ಬಳಿಕ ಅಲಸನಾಗದೆ, ಶಾಸ್ತ್ರದಲ್ಲಿ ಹೇಳಿರುವ ಕ್ರಮವನ್ನು ಮೀರದೆ ಪ್ರಾಣಾಯಾಮಗಳನ್ನು ಮಾಡುವುದು.

೭೮. ಅನಂತರದಲ್ಲಿ ವೇದಗಳಿಗೆ ತಾಯಾದ ಗಾಯತ್ರಿಯ ಜಪಯಜ್ಞವನ್ನೇ ಮಾಡುವುದು. ಆ ಜಪಯಜ್ಞವು ಮೂರುಬಗೆಯಾಗಿರುವುದು. ಅವನ್ನರುಹುವೆನು: ತಿಳಿಯುವವನಾಗು.

೭೯. ವಾಚಿಕ (ಶಬ್ದವನ್ನು ಗಟ್ಟಿಯಾಗಿ ಉಚ್ಚರಿಸುವುದು), ಉಪಾಂಶು (ಮೆಲ್ಲಗೆ ಶಬ್ದವನ್ನುಚ್ಚರಿಸುವುದು), ಮಾನಸ (ಕೇವಲ ಧ್ಯಾನಮಾಡಿ ಆಚರಿಸುವುದು) ಇಂತು ಜಪಯಜ್ಞಗಳಲ್ಲಿ ಮೂರು ಬಗೆ; ಮುಂದು ಮುಂದಣದು ವಿಶೇಷಶ್ರೇಯಸ್ಸಾಧನವಾದುದು.

೮೦. ಉದಾತ್ತಾನುದಾತ್ತಸ್ವರಿತಸ್ವರಗಳಾದ, ವ್ಯಕ್ತಧ್ವನಿಯುಳ್ಳ ಅಕ್ಷರಗಳಿಂದ ವಾಗಿಂದ್ರಿಯದಿಂದ ಮಂತ್ರಗತವಾದ ಶಬ್ದವನ್ನುಚ್ಚರಿಸುವ ಜಪಯಜ್ಞವು ವಾಚಿಕಜಪವು.

ಶನೈರುಚ್ಚಾರಯೇನ್ಮಂತ್ರಂ ಈಷದೋಷ್ಠೌ ಪ್ರಚಾಲಯೇತ್ ।
ಕಿಂಚಿನ್ಮಂತ್ರಂ ಸ್ವಯಂ ವಿಂದ್ಯಾದುಪಾಂಶುಃ ಸ ಜಪಃ ಸ್ಮೃತಃ ॥ ೮೧ ॥

ಧಿಯಾ ಯದಕ್ಷರಶ್ರೇಣ್ಯೋಃ ವರ್ಣಾದ್ವರ್ಣಂ ಪದಾತ್ಪದಮ್ ।
ಶಬ್ದಾರ್ಥಚಿಂತನಂ ಧ್ಯಾನಂ ತದುಕ್ತಂ ಮಾನಸಂ ಜಪಃ ॥ ೮೨ ॥

ಜಪೇನ ದೇವತಾ ನಿತ್ಯಂ ಸ್ತೂಯಮಾನಾ ಪ್ರಸೀದತಿ ।
ಪ್ರಸನ್ನಾ ವಿಪುಲಾನ್ ಭೋಗಾನ್ ದದ್ಯಾನ್ಮುಕ್ತಿಂ ಚ ಶಾಶ್ವತೀಮ್ ॥ ೮೩ ॥

ಯಕ್ಷರಕ್ಷಪಿಶಾಚಾಶ್ಚ ಗ್ರಹಾಃ ಸೂರ್ಯಾದಿದೂಷಣಾಃ ।
ಜಾಪಿನಂ ನೋಪಸರ್ಪಂತಿ ದೂರಾದೇವಾಪಯಾಂತಿ ತೇ ॥ ೮೪ ॥

---

೮೧. ಮಂತ್ರವನ್ನು ಮೆಲ್ಲನೆ ಉಚ್ಚರಿಸುವುದು; ತುಟಿಗಳನ್ನು ಸ್ವಲ್ಪವೇ ಚಲಿಸುವುದು; ಮಂತ್ರದ ಸ್ವಲ್ಪಭಾಗವನ್ನು ತಾನೇ ಅನುಭವಿಸುವುದು; ಇಂತಹ ಜಪಯಜ್ಞವು ಉಪಾಂಶುಜಪವೆನಿಸುವುದು.

೮೨. ಬುದ್ಧಿಯಿಂದ ಯಾವ ಮಂತ್ರದ ಅಕ್ಷರಗಳ ಸಾಲುಗಳು, ವರ್ಣದಿಂದ ವರ್ಣಾಂತರವು, ಪದದಿಂದ ಪದಾಂತರವು, ಶಬ್ದಾರ್ಥಗಳು- ಇವನ್ನು ಚಿಂತಿಸುವ ಯಾವ ಧ್ಯಾನವುಂಟೋ ಅದು ಮಾನಸ ಜಪವೆನಿಸುವುದು.

೮೩. ಈ ತೆರನಾದ ಜಪದಿಂದ ನಿತ್ಯದಲ್ಲಿಯೂ ಸ್ತುತಿಗೊಳ್ಳುತ್ತಲಿರುವ ದೇವತೆಯು ಪ್ರಸನ್ನವಾಗುತ್ತದೆ. ಅಂತು ಪ್ರಸನ್ನವಾದ ದೇವತೆಯು ವಿಶೇಷ ಸುಖವನ್ನೂ, ಶಾಶ್ವತವಾದ ಮುಕ್ತಿಯನ್ನೂ ಕರುಣಿಸಿ ಕೊಡುವುದು.

೮೪. ಯಕ್ಷರು, ರಾಕ್ಷಸರು, ಪಿಶಾಚಗಳು, ಬಾಧಕಗಳಾದ ಸೂರ್ಯಾದಿ ಗ್ರಹಗಳು— ಇವು ಇಂತು ಜಪಮಾಡುವವನ ಹತ್ತಿರಕ್ಕೆ ಬರುವುದಿಲ್ಲವು, ಅವು ದೂರದಿಂದಲೇ ಹೊರಟು ಹೋಗುತ್ತವೆ.

ಯಕ್ಷಾದಿಕಂ ಪರಿಜ್ಞಾಯ ಜಪಯಜ್ಞಮತಂದ್ರಿತಃ ।
ಜಪೇದಹರಹಃ ಸ್ನಾತ್ವಾ ಸಾವಿತ್ರೀಂ ತನ್ಮನಾ ದ್ವಿಜಃ ॥ ೮೫ ॥

ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಮ್ ।
ಗಾಯತ್ರೀಂ ಯೋ ಜಪೇನ್ನಿತ್ಯಂ ನ ಸ ಪಾಪೈರ್ಹಿಲಿಪ್ಯತೇ ॥ ೮೬ ॥

ಅಥ ಪುಷ್ಪಾಂಜಲಿಂ ದತ್ವಾ ಭಾನವೇ ಚೋರ್ಧ್ವಬಾಹುಕಃ ।
ಉದುತ್ಯಂ ಚ ಜಪೇನ್ಮಂತ್ರಂ ಚಿತ್ರಂ ತಚ್ಚಕ್ಷುರಿತ್ಯಪಿ ॥ ೮೭ ॥

ಪ್ರದಕ್ಷಿಣಮುಪಾವೃತ್ಯ ನಮಸ್ಕುರ್ಯಾದ್ದಿವಾಕರಮ್ ।
ಸ್ವೇನ ತೀರ್ಥೇನ ದೇವಾದೀನದ್ಭಿಃ ಸಂತರ್ಪಯೇದ್ಬುಧಃ ॥ ೮೮ ॥

---

೮೫. ಬ್ರಾಹ್ಮಣನು ನಕ್ಷತ್ರಾದಿಗಳನ್ನು ತಿಳಿದು ಸ್ನಾನಮಾಡಿ, ಅಲಸನಾಗದೆ, ಜಪಯಜ್ಞವನ್ನಾಚರಿಸುವವನಾಗಿ, ನಿರಂತರದಲ್ಲಿಯೂ ಸಾವಿತ್ರಿಯನ್ನು ಅದರಲ್ಲಿಯೇ ಮನವಿಟ್ಟವನಾಗಿ ಜಪಿಸುವುದು.

೮೬. ಯಾವ ದ್ವಿಜನು ನಿತ್ಯದಲ್ಲಿಯೂ ಉತ್ತಮವಾದ ಗಾಯತ್ರಿಯನ್ನು ಉತ್ತಮಕಲ್ಪಗಲ್ಲಿ ಸಾವಿರವನ್ನಾಗಲೀ, ಮಧ್ಯಮಕಲ್ಪದಲ್ಲಿ ನೂರನ್ನಾಗಲೀ, ಅಧಮಕಲ್ಪದಲ್ಲಿ ಹತ್ತನ್ನಾಗಲೀ ಜಪಿಸುತ್ತಾನೆಯೋ, ಅವನು ಪಾಪದಿಂದ ಲಿಪ್ತನಾಗುವುದಿಲ್ಲ.

೮೭. ಆನಂತರದಲ್ಲಿ ಸೂರ್ಯನಿಗೆ ಪುಷ್ಪಾಂಜಲಿಯನ್ನು ಇತ್ತು, ತೋಳುಗಳನ್ನು ಮೇಲಕ್ಕೆತ್ತಿಕೊಂಡು 'ಉದುತ್ಯ' 'ಚಿತ್ರಂ' 'ತಚ್ಚಕ್ಷುಃ' ಈ ಮೂರು ಮಂತ್ರಗಳನ್ನು ಜಪಿಸುವುದು.

೮೮. ಸೂರ್ಯದೇವನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡುವುದು; ಧರ್ಮಜ್ಞನು ದೇವಋಷಿ ಪಿತೃಗಳನ್ನು ಆ ದೇವಾದಿ ತೀರ್ಥದಿಂದ ಜಲದಿಂದ ತರ್ಪಣವನ್ನೆಸಗುವುದು.

ದೇವಾನ್ ದೇವಗಣಾಂಶ್ಚೈವ ಋಷೀನ್ಋಷಿಗಣಾಂಸ್ತಥಾ ।
ಪಿತೄನ್ ಪಿತೃಗಣಾಂಶ್ಚೈವ ನಿತ್ಯಂ ಸಂತರ್ಪಯೇದ್ಬುಧಃ ॥ ೮೯ ॥

ಸ್ನಾನವಸ್ತ್ರಂ ತತಃ ಪೀಡ್ಯ ಪುನರಾಚಮನಂ ಚರೇತ್ ।
ದರ್ಭೇಷು ದರ್ಭಪಾಣಿಃ ಸ್ಯಾದ್ಬ್ರಹ್ಮಯಜ್ಞವಿಧಾನತಃ ॥ ೯೦ ॥

ಪ್ರಾಙ್ಮುಖೋ ಬ್ರಹ್ಮಯಜ್ಞಂ ತು ಕುರ್ಯಾದ್ಬುದ್ಧಿಸಮನ್ವಿತಃ ।
ತತೋಽರ್ಘ್ಯಂ ಭಾನವೇ ದದ್ಯಾತ್ತಿಲಪುಷ್ಪ ಜಲಾನ್ವಿತಮ್ ॥ ೯೧ ॥

ಉತ್ಥಾಯ ಮೂರ್ಧ್ನಿಪರ್ಯಂತಂ ಹಂಸಃ ಶುಚಿಷದಿತ್ಯೃಚಾ ।
ಜಲೇ ದೇವಂ ನಮಸ್ಕೃತ್ಯ ತತೋ ಗೃಹಗತಃ ಪುನಃ ॥ ೯೨ ॥

---

೮೯. ಧರ್ಮಜ್ಞನಾದ ಬ್ರಾಹ್ಮಣನು ದೇವತೆಗಳನ್ನೂ, ದೇವಗಣಗಳನ್ನೂ, ಋಷಿಗಳನ್ನೂ, ಋಷಿಗಣಗಳನ್ನೂ, ಹಾಗೆಯೇ ಪಿತೃಗಳನ್ನೂ, ಪಿತೃಗಣಗಳನ್ನೂ, ನಿತ್ಯದಲ್ಲಿಯೂ ತರ್ಪಣಗಳನ್ನಿತ್ತು ತೃಪ್ತಿಪಡಿಸುವುದು.

೯೦. ಅನಂತರದಲ್ಲಿ ಸ್ನಾನಮಾಡಿದ ವಸ್ತ್ರವನ್ನು ಹಿಂಡಿಕೊಂಡು, ಮತ್ತೂ ಶುದ್ಧಾಚಮನವನ್ನು ಮಾಡುವುದು; ಬ್ರಹ್ಮಯಜ್ಞದ ವಿಧಿಯನ್ನನುಸರಿಸಿ, ದರ್ಭಾಸನದಲ್ಲಿ ಕುಳಿತು, ದರ್ಭೆಗಳನ್ನು ಕೈಯಲ್ಲಿ ಹಿಡಿದುಕೊಳ್ಳುವನಾಗುವುದು.

೯೧-೯೨. ಅನಗಕಾಏಂತಕ್ರಮನದಿಂದ ಪೂರ್ವಾಭಿಮುಖವಾಗಿಯಾಗಲೀ, ಉತ್ತರಾಭಿಮುಖವಾಗಿಯಾಗಲೀ ಬ್ರಹ್ಮಯಜ್ಞವನ್ನಾಚರಿಸುವುದು; ಬಳಿಕ ಎಳ್ಳು, ಹೂ, ನೀರು- ಇವುಗಳಿಂದ ಕೂಡಿದ ಅರ್ಘ್ಯವನ್ನು ತಲೆಯವರೆಗೂ ಎತ್ತಿ 'ಹಂಸಃ ಶುಚಿಷತ್' ಈ ಋಕ್ಕನ್ನುಚ್ಚರಿಸುವುದರಿಂದ ಸೂರ್ಯನಿಗೆ ಸಮರ್ಪಿಸುವುದು; ಆ ಜಲದಲ್ಲಿ ದೇವರಿಗೆ ನಮಸ್ಕರಿಸಿ, ತರುವಾಯದಲ್ಲಿ ಮತ್ತೂ ಮನೆಗೆ ಬರುವುದು;

ವಿಧಿನಾ ಪುರುಷಸೂಕ್ತೇನ ತತ್ರವಿಷ್ಣುಂ ಸಮರ್ಚಯೇತ್ ।
ವೈಶ್ವದೇವಂ ತತಃ ಕುರ್ಯಾದ್ಬಲಿಕರ್ಮ ಯಥಾವಿಧಿ ॥ ೯೩ ॥

ಗೋದೋಹಮಾತ್ರಮತಿಥಿಂ ಪ್ರತೀಕ್ಷೇತ ಸ್ವೇ ಗೃಹೇ ।
ಅದೃಷ್ಟಪೂರ್ವಮತಿಥಿಮಾಗತಂ ಪ್ರಾಕ್ಸಮರ್ಚಯೇತ್ ॥ ೯೪ ॥

ಆಗತ್ಯ ಚ ಪುನರ್ದ್ವಾರಂ ಪ್ರತ್ಯುತ್ಥಾನೇನ ಸಾಧುನಾ ।
ಸ್ವಾಗತೇನಾಗ್ನಯಸ್ತುಷ್ಟಾ ಭವಂತಿ ಗೃಹಮೇಧಿನಾಮ್ ॥ ೯೫ ॥

ಆಸನೇನ ತು ದತ್ತೇನ ಪ್ರೀತೋ ಭವತಿ ದೇವರಾಟ್ ।
ಪಾದಶೌಚೇನ ಪಿತರಃ ಪ್ರೀತಿಮಾಯಾಂತಿ ತಸ್ಯ ಚ ॥ ೯೬ ॥

---

೯೩. ಮನೆಯಲ್ಲಿ ನಿಯಮದಿಂದ ಪುರುಷಸೂಕ್ತದಿಂದ ಶ್ರೀ ಮಹಾವಿಷ್ಣುವನ್ನು ಪೂಜಿಸುವುದು; ಅನಂತರದಲ್ಲಿ ಶಾಸ್ತ್ರೋಕ್ತನಿಯಮಾನುಸಾರವಾಗಿ, ವೈಶ್ವದೇವವನ್ನೂ, ಬಲಿಕರ್ಮವನ್ನೂ ಅನುಷ್ಠಿಸುವುದು.

೯೪. ಗೃಹಸ್ಥನಾದವನು ಹಸುಕರೆಯುವಷ್ಟು ಹೊತ್ತಿನವರೆಗೂ ಅತಿಥಿಯನ್ನು ಎದುರು ನೋಡುವುದು; ಮೊದಲು ಎಂದೂ ನೋಡದ, ಆಗ ಬಂದ, ಅತಿಥಿಯನ್ನು ಮೊದಲು ಪೂಜಿಸುವುದು.

೯೫. ಮತ್ತು ಬಾಗಿಲಿಗೆ ಬಂದು, ಯೋಗ್ಯರೀತಿಯ ಪ್ರತ್ಯುತ್ಥಾನದಿಂದಲೂ ಸ್ವಾಗತವನ್ನು ಬಯಸುವುದರಿಂದಲೂ, ಗೃಹಸ್ಥಾಶ್ರಮಿಗಳ ಅಗ್ನಿಗಳು (ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಆವಸಥ) ಸಂತುಷ್ಟರಾಗುತ್ತಾರೆ.

೯೬. ಆ ಅತಿಥಿಗಳಿಗೆ ಆಸನವನ್ನು ಕೊಡುವುದರಿಂದ ದೇವೇಂದ್ರನು ಸಂತುಷ್ಟನಾಗುತ್ತಾನೆ; ಆ ಅತಿಥಿಗಳ ಕಾಲುಗಳನ್ನು ತೊಳೆಯುವುದರಿಂದ ಪಿತೃಗಳು ಸಂತಸದಿಂದ ಪ್ರೀತಿಗೊಳ್ಳುವರು.

ಅನ್ನಾದ್ಯೇನ ಚ ದತ್ತೇನ ತೃಪ್ಯತೀಹ ಪ್ರಜಾಪತಿಃ ।
ತಸ್ಮಾದತಿಥಯೇ ಕಾರ್ಯಂ ಪೂಜನಂ ಗೃಹಮೇಧಿನಾಮ್ ॥ ೯೭ ॥

ಭಕ್ತ್ಯಾ ಚ ಶಕ್ತಿಮಾನ್ನಿತ್ಯಂ ವಿಷ್ಣುಮಭ್ಯರ್ಚ್ಯ ಚಿಂತಯೇತ್ ।
ಭಿಕ್ಷಾಂ ಚ ಭಿಕ್ಷವೇ ದದ್ಯಾತ್ ಪರಿವ್ರಾಟ್ ಬ್ರಹ್ಮಚಾರಿಣೇ ॥ ೯೮ ॥

ಅಕಲ್ಪಿತಾನ್ನಾದುದ್ಧೃತ್ಯ ಸರ್ವಂ ವ್ಯಂಜನಸಂಯುತಮ್ ।
ದದ್ಯಾಚ್ಚ ಮನಸಾ ನಿತ್ಯಂ ಭಿಕ್ಷಾಂ ಭಿಕ್ಷೋಃ ಪ್ರಯತ್ನತಃ ॥ ೯೯ ॥

ಅಕೃತೇ ವೈಶ್ವದೇವೇ ತು ಭಿಕ್ಷೌ ಭಿಕ್ಷಾರ್ಥಮಾಗತೇ ।
ಅವಶ್ಯಮೇವ ದಾತವ್ಯಂ ಸ್ವರ್ಗಸೋಪಾನಕಾರಕಮ್ ॥ ೧೦೦ ॥

---

೯೭. ಆ ಅತಿಥಿಗಳಿಗೆ ಅನ್ನಾದಿಗಳನ್ನು ಕೊಡುವುದರಿಂದ ಪ್ರಜಾಪತಿಯಾದ ಚತುರ್ಮುಖನು ತೃಪ್ತಿಯನ್ನೈಯ್ದುವನು. ಆದುದರಿಂದ ಗೃಹಸ್ಥಾಶ್ರಮಿಯು ಅತಿಥಿಪೂಜೆಯನ್ನು ಅವಶ್ಯವಾಗಿ ಅನುಷ್ಠಿಸಬೇಕು.

೯೮. ಸಾಮರ್ಥ್ಯವುಳ್ಳವನು ನಿತ್ಯದಲ್ಲಿಯೂ, ಶ್ರೀ ಮಹಾವಿಷ್ಣುವನ್ನು ಪೂಜಿಸಿ ಧ್ಯಾನಮಾಡುವುದೂ, ಭಿಕ್ಷೆಯನ್ನು ಕೇಳುವ ಭಿಕ್ಷುವಿಗೂ, (ಯತಿಗೂ,) ಎಲ್ಲವನ್ನೂ ಪರಿತ್ಯಜಿಸಿಹೋಗುವ ಸಂನ್ಯಾಸಿಗೂ, ವೇದಾಧ್ಯಯನಮಾಡುವ ಬ್ರಹ್ಮಚಾರಿಗೂ ಭಿಕ್ಷೆಯನ್ನು ಕೊಡುವುದು.

೯೯. ಗೃಹಿಯು ನಿತ್ಯದಲ್ಲಿಯೂ ಪ್ರಯತ್ನದಿಂದ ಚೆನ್ನಾಗಿ ಪಾಕಮಾಡಿದ ಅಡುಗೆಯಿಂದ ವ್ಯಂಜನದಿಂದ ಕೂಡಿದ ಎಲ್ಲಾ ಪದಾರ್ಥವನ್ನೂ ತೆಗೆದು, ಮನಃಪೂರ್ವಕವಾಗಿ ಭಿಕ್ಷುವಿಗೆ ಭಿಕ್ಷೆಯನ್ನು ಕೊಡುವುದು.

೧೦೦. ಗೃಹಿಯು ಇನ್ನೂ ವೈಶ್ವದೇವವನ್ನನುಷ್ಠಿಸದಿರಲು, ಭಿಕ್ಷುವು ಭಿಕ್ಷೆಯು ಸಲುವಾಗಿ ಬರಲು, ಸ್ವರ್ಗಕ್ಕೆ ಪಾವಟಿಗೆಯನ್ನುಂಟುಮಾಡುವಂತಹ ಭಿಕ್ಷಾನ್ನವನ್ನು ಅವಶ್ಯವಾಗಿ ನೀಡತಕ್ಕದ್ದು.

ಉದ್ಧೃತ್ಯ ವೈಶ್ವದೇವಾನ್ನಂ ಭಿಕ್ಷಾಂ ದತ್ವಾ ವಿಸರ್ಜಯೇತ್ ।
ವೈಶ್ವದೇವಾಕೃತಂ ದೋಷಂ ಶಕ್ತೋ ಭಿಕ್ಷುರ್ವ್ಯಪೋಹಿತುಮ್ ॥ ೧೦೧ ॥

ಸುವಾಸಿನೀಃ ಕುಮಾರೀಂಶ್ಚ ಭೋಜಯಿತ್ವಾತುರಾಣ್ಯಪಿ ।
ಬಾಲವೃದ್ಧಾಂಸ್ತತಃ ಶೇಷಂ ಸ್ವಯಂ ಭುಂಜೀತ ವೈ ಗೃಹೀ ॥ ೧೦೨ ॥

ಪ್ರಾಙ್ಮುಖೋದಙ್ಮುಖೋ ವಾಪಿ ಮೌನೀ ಚ ಮಿತಭಾಷಣಃ ।
ಅನ್ನಂ ಪೂರ್ವಂ ನಮಸ್ಕೃತ್ಯ ಪ್ರಹೃಷ್ಟೇನಾಂತರಾತ್ಮನಾ ॥ ೧೦೩ ॥

ಪಂಚಪ್ರಾಣಾಹುತೀಃ ಕುರ್ಯಾತ್ಸ್ವಮಂತ್ರೇಣ ಪೃಥಕ್ಪೃಥಕ್ ।
ತತಃ ಸ್ವಾದುಕರಂ ಚಾನ್ನಂ ಭುಂಜೀತ ಸುಸಮಾಹಿತಃ ॥ ೧೦೪ ॥

---

೧೦೧. ವೈಶ್ವದೇವನ ಸಲುವಾಗಿರುವ ಅನ್ನವನ್ನೂ ತೆಗೆದು ಎತ್ತಿ, ಭಿಕ್ಷುವಿಗೆ ಭಿಕ್ಷೆಯನ್ನು ನೀಡಿ, ಆತನನ್ನು ಕಳುಹಿಸುವುದು; ಆ ಭಿಕ್ಷುವು ವೈಶ್ವದೇವವನ್ನು ಅನುಷ್ಠಿಸದ ದೋಷವನ್ನು ಕಳೆಯಲು ಸಮರ್ಥನಾಗಿರುವನು.

೧೦೨. ಗೃಹಿಯು ಸುಮಂಗಲಿಯರನ್ನೂ, ಕುವರಿಯರನ್ನೂ, ಎಲ್ಲದರಲ್ಲಿಯೂ ತ್ವರಾಸಂಭ್ರಮಗಳುಳ್ಳ ರೋಗಿಗಳನ್ನೂ, ಹುಡುಗರನ್ನೂ, ವೃದ್ಧರನ್ನೂ ಊಟ ಮಾಡಿಸಿ, ಅನಂತರದಲ್ಲಿ ಉಳಿದುದನ್ನು ತಾನು ಊಟಮಾಡುವುದು.

೧೦೩.–೧೦೪. ಗೃಹಿಯು ಪೂರ್ವದಿಕ್ಕಿಗೆ ಎದುರಾಗಿಯಾಗಿಯಾಗಲೀ, ಉತ್ತರದಿಕ್ಕಿಗೆ ಎದುರಾಗಿಯಾಗಿಯಾಗಲೀ ಕುಳಿತು ಮೌನವುಳ್ಳವನಾಗಿ, ಮಿತ ಭಾಷಿಯಾಗಿ, ಸಂತಸಗೊಂಡ ಮನದಿಂದ ಮೊದಲು ಅನ್ನಕ್ಕೆ ಪೊಡಮೊಟ್ಟು, ಆಯಾ ಮಂತ್ರದಿಂದ ಬೇರೆ ಬೇರೆಯಾಗಿ ಪಂಚಪ್ರಾಣಾಹುತಿಗಳನ್ನು ತೆಗೆಮುಕೊಳ್ಳುವುದು; ಅನಂತರದಲ್ಲಿ ಅತ್ಯಂತ ಸಮಾಧಾನಗೊಂಡವನಾಗಿ, ರುಚಿಕರವಾವ ಅನ್ನವನ್ನು ಊಟಮಾಡುವುದು.

ಆಚಮ್ಯ ದೇವತಾಮಿಷ್ಟಾಂ ಸಂಸ್ಮರೇದುದರಂ ಸ್ಪೃಶನ್ ।
ಇತಿಹಾಸಪುರಾಣಾಭ್ಯಾಂ ಕಂ ಚಿತ್ಕಾಲಂ ನಯೇದ್ಬುಧಃ ॥ ೧೦೫ ॥

ತತಃ ಸಂಧ್ಯಾಮುಪಾಸೀತ ಬಹಿರ್ಗತ್ವಾ ವಿಧಾನತಃ ।
ಕೃತಹೋಮಶ್ಚ ಭುಂಜೀತ ರಾತ್ರಾವತಿಥಿಮರ್ಚಯೇತ್ ॥ ೧೦೬ ॥

ಸಾಯಂ ಪ್ರಾತರ್ದ್ವಿಜಾತೀನಾಮಶನಂ ಶ್ರುತಿಚೋದಿತಮ್ ।
ನಾಂತರಾಭೋಜನಂ ಕುರ್ಯಾದಗ್ನಿಹೋತ್ರಸಮನ್ವಿತಃ ॥ ೧೦೭ ॥

ಶಿಷ್ಯಾನಧ್ಯಾಪಯೇತ್ತದ್ವದನಧ್ಯಾಯಂ ವಿವರ್ಜಯೇತ್ ।
ಸ್ಮೃತ್ಯುಕ್ತಾನ್ ಸಕಲಾನ್ ಪೂರ್ವಪುರಾಣೋಕ್ತಾನಪಿ ದ್ವಿಜಃ ॥ ೧೦೮ ॥

---

೧೦೫. ವಿದ್ವಾಂಸನು ಭೋಜನಾನಂತರದಲ್ಲಿ ಶುದ್ಧಾಚಮನಮಾಡಿ ಇಷ್ಟದೇವತೆಯನ್ನು, ಹೊಟ್ಟೆಯನ್ನು ಮುಟ್ಟುತ್ತಾ ನೆನೆದು, ಸ್ವಲ್ಪ ಹೊತ್ತನ್ನು ಇತಿಹಾಸಪುರಾಣಗಳಿಂದ ಕಳೆಯಬೇಕು.

೧೦೬. ಬಳಿಕ ಮನೆಯಿಂದ ಹೊರಕ್ಕೆ ಹೋಗಿ, ಬಾಹ್ಯಜಲದಲ್ಲಿ ವಿಧ್ಯನುಸಾರವಾಗಿ ಸಾಯಂಸಂಧ್ಯೆಯನ್ನು ಸೇವಿಸುವುದು; ಸಾಯಂಕಾಲದ ಔಪಾಸನವನ್ನು ಅನುಷ್ಠಿಸಿ, ಅತಿಥಿಸತ್ಕಾರವನ್ನೆಸಗಿ, ರಾತ್ರಿಯಲ್ಲಿ ಆರೋಗಿಸುವುದು.

೧೦೭. ಬ್ರಾಹ್ಮಣರಿಗೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಮಾತ್ರ ಭೋಜನವು ವೇದವಿಹಿತವಾಗಿರುವುದು; ಅಗ್ನಿಹೋತ್ರದಿಂದ ಯುಕ್ತನಾದವನು ಈ ಮಧ್ಯಕಾಲದಲ್ಲಿ ಊಟವನ್ನು ಮಾಡಬಾರದು.

೧೦೮. ದ್ವಿಜನು ಶಿಷ್ಯರಿಗೆ ವೇದಾಧ್ಯಯನವನ್ನು ಮಾಡಿಸುವುದು; ಅನಧ್ಯಯನ ಕಾಲದಲ್ಲಿ ಅಧ್ಯಯನವನ್ನು ಬಿಡುವುದು; ಸ್ಮೃತಿಗಳಲ್ಲಿಯೂ, ಪೂರ್ವಪುರಾಣಗಳಲ್ಲಿಯೂ ಹೇಳಿರುವವನ್ನೆಲ್ಲಾ ಆಚರಿಸುವುದು.

ಮಹಾನವಮ್ಯಾಂ ದ್ವಾದಶ್ಯಾಂ ಭರಣ್ಯಾಮಪಿ ಚೈವ ಹಿ ।
ತಥಾಕ್ಷಯ್ಯತೃತೀಯಾಯಾಂ ಶಿಷ್ಯಾನ್ನಾಧ್ಯಾಪಯೇದ್ಬುಧಃ ॥ ೧೦೯ ॥

ಮಾಘಮಾಸೇ ತು ಸಪ್ತಮ್ಯಾಂ ರಥ್ಯಾಮಧ್ಯಯನಂ ತ್ಯಜೇತ್ ।
ಅಧ್ಯಾಪನಮಥಾಭ್ಯಜ್ಯ ಸ್ನಾನಕಾಲೇ ವಿವರ್ಜಯೇತ್ ॥ ೧೧೦ ॥

ದಾನಂ ಚ ವಿಧಿನಾ ದೇಯಂ ಗೃಹಸ್ಥೇನ ಹಿತೈಷಿಣಾ ।
ಹಿರಣ್ಯದಾನಂ ಗೋದಾನಂ ಭೂಮಿದಾನಂ ವಿಶೇಷತಃ ॥ ೧೧೧ ॥

ಏತಾನಿ ಯಃ ಪ್ರಯಚ್ಛೇತ ಶ್ರೋತ್ರಿಯೇಭ್ಯೋ ದ್ವಿಜೋತ್ತಮ ।
ಸರ್ವಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ॥ ೧೧೨ ॥

---

೧೦೯. ವಿದ್ವಾಂಸನು ಮಹಾನವಮೀ, ದ್ವಾದಶೀ, ಮಹಾಭರಣಿ, ಅಕ್ಷಯ್ಯ ತೃತೀಯಾ- ಈ ದಿನಗಳಲ್ಲಿ ಶಿಷ್ಯರಿಗೆ ವೇದಾಧ್ಯಯನವನ್ನು ಮಾಡಿಸಬಾರದು.

೧೧೦.-೧೧೧. ಹಾಗೆಯೇ ಮಾಘಮಾಸದ ಶುಕ್ಲಪಕ್ಷದ ರಥಸಪ್ತಮಿಯ ದಿವಸದಲ್ಲಿಯೂ ಅಧ್ಯಾಪನಮಾಡಬಾರದು. ಅನಂತರದಲ್ಲಿ ತೈಲಾಭ್ಯಂಗಸ್ನಾನ ಮಾಡುವಸಮಯದಲ್ಲಿ ಅಧ್ಯಾಪನವನ್ನು ಬಿಡುವುದು.

೧೧೨. ಸುಖಾಪೇಕ್ಷಿಯಾದ ಗೃಹಸ್ಥನು ಶಾಸ್ತ್ರಗಲ್ಲಿ ಹೇಳಿದ ನಿಯಮಾನು ಸಾರವಾಗಿ ದಾನಗಳನ್ನು ಕೊಡುವುದು. ಹಿರಣ್ಯದಾನ, ಗೋದಾನ, ಭೂದಾನ- ಇವುಗಳನ್ನು ವಿಶೇಷವಾಗಿ ಯಾವನು ಶ್ರೋತ್ರಿಯರಾದವರಿಗೆ ದಾನಗೊಡುವನೋ, ಎಲೈ ಬ್ರಾಹ್ಮಣಶ್ರೇಷ್ಠನೇ! ಆತನು ಸಕಲಪಾಪಗಳಿಂದ ಬಿಡುಗಡೆಯನ್ನು ಹೊಂದಿ ಸ್ವರ್ಗಲೋಕದಲ್ಲಿ ಮಾನ್ಯನಾಗುತ್ತಾನೆ.

ಮಂಗಲಾಚಾರಯುಕ್ತಸ್ಯ ಶುಚಿಃ ಶ್ರದ್ಧಾಪರೋ ಗೃಹೀ ।
ಶ್ರಾದ್ಧಂ ಚ ಶ್ರದ್ಧಯಾ ಕುರ್ಯಾತ್ಸ ಯಾತಿ ಬ್ರಹ್ಮಣಃ ಪದಮ್ ॥ ೧೧೩

ಜಾತಾವುತ್ಕರ್ಷಮಾಯಾತಿ ನರಸಿಂಹಪ್ರಸಾದತಃ ।
ಸ ತಸ್ಮಾನ್ಮುಕ್ತಿಮಾಪ್ನೋತಿ ಬ್ರಾಹ್ಮಣೈಸ್ಸಹ ಸತ್ತಮಃ ॥ ೧೧೪ ॥

ಏವಂ ಹಿ ವಿಪ್ರಾಃ ಕಥಿತೋ ಮಯಾ ವಃ
ಸಮಾಸತಃ ಶಾಶ್ವತಧರ್ಮರಾಶಿಃ ।
ಸಮ್ಯಗ್ಗೃಹಸ್ಥಸ್ಯ ಸತೋ ಹಿ ಧರ್ಮಂ
ಕುರ್ವನ್ ಪ್ರಯತ್ನಾದ್ಧರಿಮೇತಿ ಯುಕ್ತಃ ॥ ೧೧೫ ॥

ಇತಿ ಶ್ರೀ ನರಸಿಂಹಪುರಾಣೇ ಕ್ಷತ್ರಿಯಾದಿವರ್ಣಾನಾಂ ಗೃಹಸ್ಥಸ್ಯ ಚ ಧರ್ಮನಿರೂಪಣಂ ನಾಮ ಪಂಚಾಶೋಽಧ್ಯಾಯಃ

---

೧೧೩. ಶುಚಿಯಾದ, ಶ್ರದ್ಧಾವಂತನಾದ ಗೃಹಸ್ಥನು ಕಲ್ಯಾಣಕರವಾದ ನಡತೆಯುಳ್ಳ ತನ್ನ ಪಿತೃವಿನ ಶ್ರಾದ್ಧ ಕರ್ಮವನ್ನು ಸಡ್ತೆಯಿಂದ ಆಚರಿಸಿ, ಅವನು ಸತ್ಯಲೋಕವನ್ನೈದುತ್ತಾನೆ.

೧೧೪. ಆ ಉತ್ತಮನಾದ ಗೃಹಿಯು, ಶ್ರೀ ನರಸಿಂಹಸ್ವಾಮಿಯ ಅನುಗ್ರಹದಿಂದ ತನ್ನ ಜಾತಿಯಲ್ಲಿ ಮೇಲ್ಮೆಯನ್ನು ಪಡೆಯುತ್ತಾನೆ; ಆದುದರಿಂದ ಬ್ರಹ್ಮಜ್ಞಾನಿಗಳೊಡನೆ ಮುಕ್ತಿಯನ್ನು ಹೊಂದುತ್ತಾನೆ;

೧೧೫. ಎಲೈ ಮುನಿಗಳೇ! ಇಂತು ನಿಮಗೆ ಸಂಗ್ರಹವಾಗಿ ಶಾಶ್ವತವಾದ ಧರ್ಮಸಮುದಾಯವನ್ನು ಹೇಳಿದೆನು. ಅಧಿಕಾರಿಯು ಸತ್ಪುರುಷನಾದ ಗೃಹಸ್ಥನು ಈ ಧರ್ಮವನ್ನು ಜಿತೇಂದ್ರಿಯನಾಗಿ ಪ್ರಯತ್ನದಿಂದ ಅನುಷ್ಠಿಸಿ ಶ್ರೀ ಹರಿಯನ್ನು ಹೊಂದುತ್ತಾನೆ; 'ಎಂದು ಹಾರೀತಮುನಿಯು ಮುನಿಗಳ ಸಮುದಾಯಕ್ಕೆ ಹೇಳಿದ. ದನ್ನು ಶ್ರೀ ಮಾರ್ಕಂಡೇಯ ಮುನಿಯು ಸಹಸ್ರಾನಿಕರಾಜನಿಗೆ ಹೇಳಿದನು ಅದನ್ನು ಶ್ರೀ ಸೂತರು ಭರದ್ವಾಜಾದಿಮುನಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಕ್ಷತ್ರಿಯಾದಿವರ್ಣಗಳ ಮತ್ತು ಗೃಹಸ್ಥರ ಧರ್ಮನಿರೂಪಣವೆಂಬ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

ಐವತ್ತೆಂಟನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ, 'ಹಾರೀತಮುನಿಯು ಮುನಿಗಳ ತಂಡಕ್ಕೆ ಕ್ಷತ್ರಿಯ, ವೈಶ್ಯ, ಶೂದ್ರಧರ್ಮಗಳನ್ನು ಸಂಗ್ರಹವಾಗಿ ತಿಳಿಸಿ, ನಾಲ್ಕುಆಶ್ರಮಗಳ ಧರ್ಮವನ್ನು ನಿರೂಪಿಸುವುದಾಗಿ ಪ್ರತಿಜ್ಞೆಮಾಡಿ, ಬ್ರಾಹ್ಮಚಾರಿಯು ಗುರುಸೇವಾದಿ ನಿಯಮ ವುಳ್ಳವನಾಗಿ, ಚತುರ್ವೇದಗಳನ್ನಾಗಲೀ, ಮೂರು ವೇದಗಳನ್ನಾಗಲೀ, ಅಥವಾ ಎರಡು ವೇದಗಳನ್ನಾಗಲೀ, ಕೊನೆಗೆ ಒಂದು ವೇದವನ್ನಾಗಲೀ ಅಧ್ಯಯನ ಮಾಡಿ ಗುರುದಕ್ಷಿಣಾದಿಗಳನ್ನಿತ್ತು, ಅವರ ಆಜ್ಞಾನುಸಾರ ಎಲ್ಲಿಯಾದರೂ ಇರುವುದು.

ಇಂತಹ ಬ್ರಹ್ಮಚಾರಿಯು ವಿರಕ್ತನಾಗಿ ಸಂನ್ಯಾಸಿಯಾದರೂ ಆಗಬಹುದು. ಹಾಗಿಲ್ಲದೆ ವಿಷಯೇಚ್ಛೆಯುಳ್ಳವನಾದರೆ, ಗಾರ್ಹಸ್ಥ್ಯವನ್ನು ತಾಳಬಹುದು. ಮದುವೆಗೆ ಯೋಗ್ಯವಾದ ಕನ್ಯಾಸ್ವರೂಪವನ್ನು ವಿವರಿಸಿ, ಸಂಕ್ಷೇಪವಾಗಿ ಗೃಹಸ್ಥಧರ್ಮವನ್ನು ನಿರೂಪಿಸುವನು. ಅದರಲ್ಲಿ ಸಂಧ್ಯಾಚರಣೆಯ ವಿಶೇಷವಿಧಿಯನ್ನು ನಿರೂಪಿಸುವನು. ಇತರ ಆಶ್ರಮಿಗಳಿಗೆ ಆಶ್ರಯದಾತೃವಾದುದರಿಂದ ಗೃಹಸ್ಥಾಶ್ರಮವು ಉತ್ತಮ ವಾದುದು. ಸ್ನಾನವಿಧಿಯು ವಿಶೇಷವಾಗಿ ಹೇಳಿದೆ. ಗಾಯತ್ರೀಜಪವು ಅವಶ್ಯವಾಗಿ ಮಾಡತಕ್ಕದ್ದು; ಇನ್ನೊಂದು ಮಾಡಲಿ ಬಿಡಲಿ; ಸಂಧ್ಯಾನುಷ್ಠಾನಮಾಡಿದರೆ, ಬ್ರಾಹ್ಮಣನೆನಿಸಿಕೊಳ್ಳುತ್ತಾನೆ.' ಇತ್ಯಾದಿಯಾಗಿ ಗೃಹಸ್ಥಾಶ್ರಮಧರ್ಮವನ್ನು ವಿಸ್ತಾರವಾಗಿನಿರೂಪಿಸಿರುವುದನ್ನು ಶತಾನೀಕರಾಯನಿಗೆ ಮಾರ್ಕಂಡೇಯ ಮುನಿಯು ಹೇಳಿದುದನ್ನು ಸೂತರು ಭರದ್ವಾಜಾದಿಮುನಿಗಳಿಗೆ ನಿರೂಪಿಸಿದುದು ಹೇಳಿದೆ.

ಇಂತು ಐವತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ಏಕೋನಷಷ್ಠಿತಮೋಽಧ್ಯಾಯಃ

ವಾನಪ್ರಸ್ಥಧರ್ಮ ನಿರೂಪಣಮ್.

॥ ಹಾರೀತ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ವಾನಪ್ರಸ್ಥಸ್ಯ ಲಕ್ಷಣಮ್ ।
ಧರ್ಮಮುಗ್ರ್ಯಂ ಮಹಾಭಾಗಾಃ ಕಥ್ಯಮಾನಂ ನಿಬೋಧತ ॥ ೧ ॥

ಗೃಹಸ್ಥಃ ಪುತ್ರಪೌತ್ರಾದೀನ್ ದೃಷ್ಟ್ವಾ ಪಾಲಿತಮಾತ್ಮನಃ ।
ಸ್ವಭಾರ್ಯಾಂ ತನಯೇ ಸ್ಥಾಪ್ಯ ಸ್ವಶಿಷ್ಯೈಃ ಪ್ರವಿಶೇದ್ವನಮ್ ॥ ೨ ॥

ಐವತ್ತೊಂಬತ್ತನೆಯ ಅಧ್ಯಾಯವು

ವಾನಪ್ರಸ್ಥಧರ್ಮನಿರೂಪಣೆಯು

ಶ್ರೀ ಹಾರೀತಮುನಿಯು ಮುನಿಗಳ ಸಮುದಾಯಕ್ಕೆ ಇಂತು ಹೇಳುತ್ತಾನೆ.

೧. ಎಲೈ ಪುಣ್ಯಾತ್ಮರೇ! ಇನ್ನು ಮುಂದೆ ವಾನಪ್ರಸ್ಥರ ಲಕ್ಷಣವನ್ನು ಹೇಳುವೆನು; ಹೇಳುವ, ಶ್ರೇಷ್ಠವಾದ ಈ ಧರ್ಮವನ್ನು ತಿಳಿಯಿರಿ.

೨. ಗೃಹಸ್ಥನು ತನ್ನ ಮಕ್ಕಳು, ಮೊಮ್ಮಕ್ಕಳು-ಇವರೇ ಮೊದಲಾದವರನ್ನು ರಕ್ಷಿತರಾದವರನ್ನು ತಿಳಿದು, ತನ್ನ ಮಡದಿಯನ್ನು ಮಗನ ರಕ್ಷಣೆಯಲ್ಲಿ ನಿಲಿಸಿ, ತನ್ನ ಶಿಷ್ಯರೊಡನೆ ವನವನ್ನು ಪ್ರವೇಶಿಸುವುದು.

ಜಟಾಕಲಾಪಚೀರಾಣಿ ನಖಗಾತ್ರರುಹಾಣಿ ವಾ ।
ಧಾರಯಞ್ಜುಹುಯಾದಗ್ನೌ ವೈತಾನವಿಧಿನಾ ಸ್ಥಿತಃ ॥ ೩ ॥

ಭೃತಪರ್ಣೈರ್ವನ್ಯೈರ್ನಸಂಭೂತೈರ್ನೀವಾರಾದ್ಯೈರತಂದ್ರಿತಃ ।
ಕಂದಮೂಲಫಲೈರ್ವಾಪಿ ಕುರ್ಯಾನ್ನಿತ್ಯಂ ಕ್ರಿಯಾಂ ಬುಧಃ ॥ ೪ ॥

ತ್ರಿಕಾಲಂ ಸ್ನಾನಯುಕ್ತಸ್ತು ಕುರ್ಯಾತ್ತೀವ್ರತಪಃ ಸದಾ ।
ಪಕ್ಷೇ ಗತೇ ವಾ ಅಶ್ನೀಯಾನ್ಮಾಸಾಂತೇ ವಾ ಪರಾಕಕೃತ್ ॥ ೫ ॥

ಚತುಃಕಾಲೇಽಪಿ ಚಾಶ್ನೀಯಾತ್ಕಾಲೇಽಷ್ಟಮೇ ತಥಾಷ್ಟಮೇ ।
ಷಷ್ಠಾಹ್ನಕಾಲೇಽಪ್ಯಥವಾ ಅಥವಾ ವಾಯುಭಕ್ಷಕಃ ॥ ೬ ॥

---

೩. ಜಟಾಸಮುದಾಯವನ್ನೂ, ನಾರುಬಟ್ಟೆಯನ್ನೂ, ಉಗುರುಗಳನ್ನೂ, ಮೈಗೂದಲನ್ನೂ ಧರಿಸಿದವನಾಗಿಯೇ ಇದ್ದು, ಯಾಗಸಂಬಂಧವಾದ * ಅಗ್ನಿಹೋತ್ರ ನಿಯಮದಿಂದ ಅಗ್ನಿಯಲ್ಲಿ ಹೋಮವನ್ನು ಮಾಡುವುದು.

೪. ವಿವೇಕಿಯಾದ ವಾನಪ್ರಸ್ಥನು ಸಿಕ್ಕಿದಷ್ಟು ಎಲೆಗಳಿಂದಲಾಗಲಿ, ಮಣ್ಣಿನಲ್ಲಿ ನದಿಯ ನೀರಿಲ್ಲದೆ ಬೆಳೆಯಾಗುವ ನವಣೆ ಮುಂತಾದ ತೃಣಧಾನ್ಯಗಳಿಂದಲಾಗಲಿ, ಗೆಡ್ಡೆ, ಗೆಣಸು, ಹಣ್ಣುಗಳಿಂದಲಾಗಲಿ ಸೋಮಾರಿಯಾಗದೆ ನಿತ್ಯದಲ್ಲಿಯೂ ಜೀವನ ಕ್ರಿಯೆಯನ್ನೆಸಗುವುದು.

೫. ವಾನಪ್ರಸ್ಥನು ಮೂರು ಕಾಲಗಳಲ್ಲಿಯೂ ಸ್ನಾನಮಾಡುವವನಾಗಿ, ಯಾವಾಗಲೂ ಕಠಿನವಾದ ತಪವನ್ನೆಸಗುವುದು ; ಪರಾಕವೆಂಬ ವ್ರತವನ್ನಾಚರಿಸುವವನಾಗಿ, ಪಕ್ಷಕಳೆಯುತ್ತಿರಲಾಗಲಿ, ಒಂದು ತಿಂಗಳ ಕೊನೆಯಲ್ಲಾಗಲಿ ಊಟ ಮಾಡುವುದು.

೬. ಹಗಲಿನ ಹದಿನಾರು ಭಾಗಗಳಲ್ಲಿ ನಾಲ್ಕನೆಯ ಭಾಗದಲ್ಲಾಗಲಿ, ಆರನೆಯ ಭಾಗದಲ್ಲಾಗಲಿ, ಎಂಟನೆಯ ಭಾಗದ ಹೊತ್ತಿನಲ್ಲಾಗಲಿ ಊಟಮಾಡುವುದು ಅಥವಾ ವಾಯ್ವಾಹಾರಿಯಾಗಿರುವುದು.

---

* ಗಾರ್ಹಪತ್ಯಕುಂಡಸ್ಥಾನಾದಗ್ನೀನಾಮಾಹವನೀಯದಕ್ಷಿಣಾಗ್ನಿ ಕುಂಡಯೋ-ರ್ವಿಹಾರೋ ವಿತಾನಂ ; ತತ್ರಭವಂ ವೈತಾನಿಕಮಗ್ನಿಹೋತ್ರಮ್ ॥

ಘರ್ಮೇ ಪಂಚಾಗ್ನಿಮಧ್ಯಸ್ಥೋ ಧಾರಾವರ್ಷಾಸು ವೈ ನಯೇತ್ ।
ಹೈಮಂತಿಕೇ ಜಲೇ ಸ್ಥಿತ್ವಾ ನಯೇತ್ಕಾಲಂ ತಪಶ್ಚರನ್ ॥ ೭ ॥

ಏವಂ ಸ್ವಕರ್ಮಭೋಗೇನ ಕೃತ್ವಾ ಶುದ್ಧಿಮಥಾತ್ಮನಃ ।
ಅಗ್ನಿಂ ಚಾತ್ಮನಿ ವೈ ಕೃತ್ವಾ ವ್ರಜೇದ್ವಾ ಚೋತ್ತರಾಂ ದಿಶಮ್ ॥ ೮ ॥

ಆದೇಹಪಾತಾದ್ವನಗೋ ಮೌನಮಾಸ್ಥಾಯ ತಾಪಸಃ ।
ಸ್ಮರನ್ನತೀಂದ್ರಿಯಂ ಬ್ರಹ್ಮ ಬ್ರಹ್ಮಲೋಕೇ ಮಹೀಯತೇ ॥ ೯ ॥

ತಪೋ ಹಿ ಯಃ ಸೇವತಿ ಕಾನನಸ್ಥೋ
ವಸೇನ್ಮಹತ್ಸತ್ವಸಮಾಧಿಯುಕ್ತಃ ।

---

೭. ಕಡುಬೇಸಿಗೆಯಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿದ್ದವನಾಗಿಯೂ, ಸಂತತವಾಗಿ ಮಳೆಗರೆವ ಕಾಲದಲ್ಲಿ ಛತ್ರಾದ್ಯಾವರಣವಿಲ್ಲದವನಾಗಿಯೂ, ಚಳಿಗಾಲದಲ್ಲಿ ನೀರಿನಲ್ಲಿ ನಿಂತಿರುವವನಾಗಿಯೂ ತಪವನ್ನೆಸಗುತ್ತಾ ಕಾಲವನ್ನು ಕಳೆಯುವುದು.

೮. ಇಂತು ತನಗೆ ಯೋಗ್ಯವಾದ ಕರ್ಮಾನುಭವದಿಂದ ಆತ್ಮಶುದ್ಧಿಯನ್ನು ಮಾಡಿಕೊಂಡು, ಬಳಿಕ (ಆರು ತಿಂಗಳಾದ ಮೇಲೆ) ಶ್ರೌತಾಗ್ನಿಗಳನ್ನು ವೈಖಾನಸ ಶಾಸ್ತ್ರವಿಧಾನದಿಂದ (ಭಸ್ಮಪಾನಾದಿಗಳಿಂದ) ಆತ್ಮನಲ್ಲಿ ಸಮಾರೋಪಣ ಮಾಡಿಕೊಂಡು, (ಅಗ್ನಿನಿಕೇತನಗಳಿಲ್ಲದವನಾಗಿ) ಉತ್ತರ ದಿಕ್ಕಿಗೆ ಹೋಗುವುದು.

೯. ವಾನಪ್ರಸ್ಥನಾದ ತಪಸ್ವಿಯು ದೇಹ ಬಿದ್ದುಹೋಗುವವರೆಗೂ ಮೌನವನ್ನು ತಾಳಿ, ಇಂದ್ರಿಯಗಳಿಗೆ ಸಾಕಲ್ಯೇನ ಗೋಚರನಲ್ಲದ, ಸರ್ವಗುಣಪೂರ್ಣನಾದ, ಪರಬ್ರಹ್ಮನಾದ, ಶ್ರೀ ನರಸಿಂಹನನ್ನು ಸ್ಮರಿಸುತ್ತಾ, ಶರೀರಪಾತಾನಂತರದಲ್ಲಿ ಬ್ರಹ್ಮಲೋಕದಲ್ಲಿ ಮಾನ್ಯನಾಗುತ್ತಾನೆ.

೧೦. ಯಾವ ಬ್ರಾಹ್ಮಣ ಶ್ರೇಷ್ಠನು ಕಾಡಿನಲ್ಲಿ ವಾಸಮಾಡುತ್ತಾ, ತಪಸ್ಸನ್ನು ಆಚರಿಸುತ್ತಾನೆಯೋ, ವಿಶೇಷ ಸಾಮರ್ಥ್ಯದಿಂದ ಕೂಡಿದ ಸಮಾಧಿ

ವಿಮುಕ್ತಪಾಪೋ ಹಿ ಮನಃ ಪ್ರಶಾಂತಃ
ಪ್ರಯಾತಿ ವಿಷ್ಣೋಃ ಸದನಂ ದ್ವಿಜೇಂದ್ರಃ ॥ ೧೮ ॥

ಇತಿ ಶ್ರೀ ನರಸಿಂಹಪುರಾಣೇ ವಾನಪ್ರಸ್ಥ ಧರ್ಮನಿರೂಪಣಂ
ನಾಮ ಏಕೋನಷಷ್ಟಿತಮೋಽಧ್ಯಾಯಃ

ಯುಕ್ತನಾಗಿ ವಾಸಮಾಡುವನೋ, ಅವನು ಪಾಪರಹಿತನಾಗಿ ಪ್ರಶಾಂತವಾದ ಮನವುಳ್ಳವನಾಗಿ ಶ್ರೀ ಮಹಾವಿಷ್ಣುವಿನ ವಿಶೇಷ ವಾಸಸ್ಥಾನಕ್ಕೆ ಹೋಗುತ್ತಾನೆ. '

ಎಂದು ಹಾರೀತ ಮುನಿಯು ಮುನಿಗಳ ತಂಡಕ್ಕೆ ಹೇಳಿದುದನ್ನು ಮಾರ್ಕಂಡೇಯನು ಸಹಸ್ರಾನೀಕರಾಜನಿಗೆ ಅರುಹಿದನು. ಅದನ್ನು ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ವಾನಪ್ರಸ್ಥಧರ್ಮನಿರೂಪಣವೆಂಬ
ಐವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

ಐವತ್ತೊಂಬತ್ತನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ, 'ಹಾರೀತನು ಮುನಿಗಳ ತಂಡಕ್ಕೆ ಗೃಹಸ್ಥನು ತನ್ನ ಮಡದಿಯನ್ನು ಅರ್ಹರಾದ ಗಂಡು ಮಕ್ಕಳ ವಶದಲ್ಲಿಟ್ಟು, ಕನ್ನಿಕೆಯರನ್ನೆಲ್ಲಾ ಸತ್ಪಾತ್ರದಲ್ಲಿ ದಾನ ಮಾಡಿ, ಆ ಗಂಡು ಮಕ್ಕಳಿಗೆ ಜೀವನಕ್ಕಾಗುವಷ್ಟು ವೃತ್ತಿಗಳನ್ನು ಕಲ್ಪಿಸಿ, ತಾನು ತನ್ನ ಶಿಷ್ಯರೊಡನೆ ವನಕ್ಕೆ ತೆರಳಿ, ಅಲ್ಲಿ ಯಾವ ಸ್ಥಾವರ ಪ್ರಾಣಿಗೂ ಬಾಧೆಗೊಡದೆ, ತಾನಾಗಿಯೇ ಬಿದ್ದ ಎಲೆ, ಹಣ್ಣು ಮುಂತಾದುವುಗಳಿಂದ ದೇಹಧಾರಣೆಯನ್ನು ಮಾಡಿಕೊಂಡು, ಪಂಚಾಗ್ನಿಮಧ್ಯದಲ್ಲಿ ತಪವನ್ನೆಸಗಿ, ತನಗೆ ಯೋಗ್ಯವಾದ ಕರ್ಮಾನುಭವದಿಂದ ಆತ್ಮಶುದ್ಧಿಯನ್ನು ಮಾಡಿಕೊಂಡು, ಬಳಿಕ ಶ್ರೌತಾಗ್ನಿಗಳನ್ನು ಆತ್ಮನಲ್ಲಿ ಸಮಾರೋಪಣೆ ಮಾಡಿಕೊಂಡು, ಉತ್ತರದಿಕ್ಕಿಗೆ ಮೌನದಿಂದ ತೆರಳಿ, ದೇಹಪಾತವಾಗುವವರೆಗೆ ಸರ್ವಗುಣಪೂರ್ಣನೂ, ಸರ್ವಸ್ವಾಮಿಯೂ, ಸರ್ವೋತ್ತಮನೂ ಆದ ಶ್ರೀನರಹರಿಯನ್ನು ಧ್ಯಾನಮಾಡುತ್ತಿದ್ದವನು ದೇಹಪಾತಾನಂತರ ಬ್ರಹ್ಮಲೋಕದಲ್ಲಿ ಮಾನ್ಯನಾಗುತ್ತಾನೆ,' ಎಂದು ವಾನಪ್ರಸ್ಥ ಧರ್ಮವನ್ನು ನಿರೂಪಿಸಿದುದನ್ನು ಮಾರ್ಕಂಡೇಯನು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜಾದಿಗಳಿಗೆ ಅರುಹಿದುದು ನಿರೂಪಿತವಾಗಿದೆ.

ಇಂತು ಐವತ್ತೊಂಬತ್ತನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ಷಷ್ಟಿತಮೋಽಧ್ಯಾಯಃ

ಯತಿಧರ್ಮ ನಿರೂಪಣಮ್.

॥ ಹಾರೀತ ಉವಾಚ ॥

ಅತ ಊರ್ಧ್ವಂ ಪ್ರವಕ್ಷ್ಯಾಮಿ ಯತಿಧರ್ಮಮನುತ್ತಮಮ್ ।
ಶ್ರದ್ಧಯಾ ಯದನುಷ್ಠೀಯ ಯತಿರ್ಮುಚ್ಯೇತ ಬಂಧನಾತ್ ॥ ೧ ॥

ಏವಂ ವನಾಶ್ರಮೇ ತಿಷ್ಠನ್ ತಪಸಾ ದಗ್ಧಕಿಲ್ಬಿಷಃ ।
ಚತುರ್ಥಮಾಶ್ರಮಂ ಗಚ್ಛೇತ್ ಸಂನ್ಯಸ್ಯ ವಿಧಿನಾ ದ್ವಿಜಃ ॥ ೨ ॥

ಅರುವತ್ತನೆಯ ಅಧ್ಯಾಯವು

ಯತಿಧರ್ಮನಿರೂಪಣೆಯು

ಶ್ರೀ ಹಾರೀತಮುನಿಯು ಮುನಿಗಳ ತಂಡಕ್ಕೆ ಇಂತು ಹೇಳುವನು.

೧. 'ಎಲೈ ಮುನಿಗಳೇ! ಕೇಳಿರಿ; ಯತಿಯು ಯಾವ ಧರ್ಮವನ್ನು ಶ್ರದ್ಧೆಯಿಂದನುಷ್ಠಿಸಿ, ಈ ಪ್ರಕೃತಿಬಂಧದಿಂದ ಮುಕ್ತನಾಗುತ್ತಾನೆಯೋ, ಆ ಅತ್ಯುತ್ತಮವಾದ ಸಂನ್ಯಾಸಧರ್ಮವನ್ನು ಇನ್ನು ಮುಂದೆ ಹೇಳುವೆನು.

೨. ಬ್ರಾಹ್ಮಣನು ಹಿಂದೆ ಹೇಳಿದ ವಾನಪ್ರಸ್ಥಾಶ್ರಮದಲ್ಲಿ ಇರುತ್ತಾ, ತಪದಿಂದ ಸುಟ್ಟ ಪಾಪಗಳುಳ್ಳವನಾಗಿ, ಶಾಸ್ತ್ರೋಕ್ತವಾದ ನಿಯಮದಿಂದ ಸರ್ವಸಂಗವನ್ನೂ ತ್ಯಾಗಮಾಡಿ, ನಾಲ್ಕನೆಯದಾದ ಯತ್ಯಾಶ್ರಮವನ್ನು ಹೊಂದುವುದು.

ದಿವ್ಯಂ ಋಷಿಭ್ಯೋ ದೇವೇಭ್ಯಃ ಸ್ವಪಿತೃಭ್ಯಶ್ಚ ಯತ್ನತಃ ।
ದತ್ವಾ ಶ್ರಾದ್ಧಮೃಷಿಭ್ಯಶ್ಚ ಮನುಜೇಭ್ಯಸ್ತಥಾತ್ಮನೇ ॥ ೩ ॥

ಇಷ್ಟಿಂ ವೈಶ್ವಾನರೀಂ ಕೃತ್ವಾ ಪ್ರಾಜಾಪತ್ಯಮಥಾಪಿ ವಾ ।
ಅಗ್ನಿಂ ಸ್ವಾತ್ಮನಿ ಸಂಸ್ಥಾಪ್ಯ ಮಂತ್ರವತ್ಪ್ರವ್ರಜೇತ್ಪುನಃ ॥ ೪ ॥

ತತಃ ಪ್ರಭೃತಿ ಪುತ್ರಾದೌ ಸುಖಲೋಭಾದಿ ವರ್ಜಯೇತ್ ।
ದದ್ಯಾಚ್ಚ ಭೂಮಾವುದಕಂ ಸರ್ವಭೂತಾಭಯಂಕರಮ್ ॥ ೫ ॥

ತ್ರಿದಂಡಂ ವೈಷ್ಣವಂ ಸೌಮ್ಯಂ ಸತ್ವಚಂ ಸಮಪರ್ವಕಮ್ ।
ವೇಷ್ಟಿತಂ ಕೃಷ್ಣಗೋವಾಲರಜ್ಜ್ವಾ ಚ ಚತುರಂಗುಲಮ್ ॥ ೬ ॥

೩-೪. ತನಗೆ ಬಂದಿರುವ ಋಷಿಋಣ, ದೇವಋಣ, ಪಿತೃಋಣಗಳನ್ನು ಕಳೆದುಕೊಳ್ಳಲು ಋಷಿಗಳಿಗೂ, ದೇವತೆಗಳಿಗೂ, ತನ್ನ ಪಿತೃಗಳಿಗೂ ಪ್ರಯತ್ನ ಪುರಸ್ಸರವಾಗಿ ಉತ್ತಮವಾದ ಶ್ರಾದ್ಧವನ್ನು, ಎಂದರೆ ವೇದಾಧ್ಯಾಪನವನ್ನೂ, ಯಜ್ಞಾದಿಗಳನ್ನೂ, ಕವ್ಯಗಳನ್ನೂ ಅನುಷ್ಠಿಸಿ, ತರುವಾಯ ಋಷಿಗಳಿಗೂ, ಮಾನವರಿಗೂ, ತನಗೂ ವೈಶ್ವಾನರೇಷ್ಟಿಯನ್ನಾಗಲೀ, ಪ್ರಾಜಾಪತ್ಯೇಷ್ಟಿಯನ್ನಾಗಲೀ ಅನುಷ್ಠಿಸಿ, ತನ್ನಲ್ಲಿಯೇ ಅಗ್ನಿಸಮಾರೋಪಣವನ್ನು ಮಾಡಿಕೊಂಡು, ಮತ್ತೂ ಮಂತ್ರೋಕ್ತ ಕ್ರಮವುಳ್ಳವನಾಗಿ ಸರ್ವಸಂಗತ್ಯಾಗವನ್ನೂ ಆಚರಿಸತಕ್ಕುದು. (ಯತ್ಯಾಶ್ರಮವನ್ನು ಸ್ವೀಕರಿಸುವುದು.)

೫. ಅವನು ಅಲ್ಲಿಂದ ಮೊದಲು ಮಕ್ಕಳೇ ಮೊದಲಾದವರಲ್ಲಿ ಸಂತೋಷ, ಅತ್ಯಾಶೆಗಳು— ಇವೇ ಮೊದಲಾದುವನ್ನು ಬಿಡುವುದು; ಭೂಮಿಯಲ್ಲಿ ಸಕಲ ಪ್ರಾಣಿಗಳಿಗೂ ನಿರ್ಭೀತಿಯನ್ನುಂಟುಮಾಡತಕ್ಕ ಜಲಾಂಜಲಿಯನ್ನು ಕೊಡುವುದು.

೬. ಯತಿಯು ವಿಷ್ಣುದೇವತಾಕವಾಗಿಯೂ, ಸೌಮ್ಯವೂ, ಸಿಪ್ಪೆಯಿಂದ ಕೂಡಿದುದೂ, ಸಮಾನಾಂತರವಾಗಿ ಗೆಣ್ಣುಗಳುಳ್ಳುದೂ, ಕಪಿಲೆಯ ಬಾಲದ ಕೂದಲಿನಿಂದ ಮಾಡಿದ ಹುರಿಯಿಂದ ನಾಲ್ಕು ಅಂಗುಲದಷ್ಟು ಸುತ್ತಿರತಕ್ಕ ವೇಣು ದಂಡವನ್ನು ಧರಿಸುವುದು.

ಆಸುರಂ ದಾರುಜಂ ಪ್ರೋಕ್ತಂ ಮಹಾಂತಂ ವರ್ತುಲಂ ತಥಾ ।
ಗ್ರಂಥಿಭಿರ್ವಾ ತ್ರಿಭಿರ್ಯುಕ್ತಂ ವಸ್ತ್ರಪೂತಂ ಜಲಂ ಪಿಬೇತ್ ॥ ೭ ॥

ಗ್ರಂಥಿಭಿರ್ವಾ ತ್ರಿಭಿರ್ಯುಕ್ತಂ ಜಲಪೂತಂ ಚ ಧಾರಯೇತ್ ।
ಗೃಹ್ಣೀಯಾದ್ದಕ್ಷಿಣೇ ಹಸ್ತೇ ಮಂತ್ರೇಣೈವ ತು ಮಂತ್ರವಿತ್ ।
ಶ್ಲಾಮಂ ವಾ ಕುಶಸೂತ್ರಂ ವಾ ಕಾರ್ಪ್ಯಾಸ್ತಿಕೆ (ಕಾರ್ಪಾಸಕೆ) ಮಥಾಪಿ ವಾ ॥

ತೇನೈವ ಗ್ರಂಥಿತಾಂ ಭಿಕ್ಷಾಂ ಪದ್ಮಾಕಾರಸಮನ್ವಿತಾಮ್ ।
ಷಡ್ಭಿರ್ವಾ ಪಂಚಭಿರ್ಯುಕ್ತಾಂ ಮುಷ್ಟಿಮಿತ್ಯಾಷ್ಟಲಕ್ಷಣಾಮ್ ।
ಗೃಹ್ಣೀಯಾನ್ಮಂತ್ರತೋ ವಿದ್ವಾನ್ ಪಾತ್ರಂ ಚಾತ್ರ ಕಮಂಡಲುಮ್ ।
ಆಸನಂ ದಾರುಜಂ ಪ್ರೋಕ್ತಂ ಸುಸಮಂ ವರ್ತುಲಂ ಸಮಮ್ ॥
ಶೌಚಾರ್ಥಮಾಸನಂ ಚಾಥ ಮುನಿಭಿಸ್ತೈರನುಷ್ಠಿತಮ್ ।
ಕೌಪೀನಾಚ್ಛಾದನಂ ವಾಸಃ ಕಂಥಾಂ ಶೀತನಿವಾರಿಣೀಮ್ ।
ಪಾದುಕೇ ಚಾಪಿ ಗೃಹ್ಣೀಯಾತ್ಕುರ್ಯಾನ್ನಾನ್ಯಸ್ಯ ಸಂಗ್ರಹಃ ॥ ೮ ॥

---

೭. ಮರದಿಂದ ಮಾಡಿರುವ, ಹಿರಿದಾದ, ದುಂಡಗಿರುವ, ಮೂರುಕಣ್ಣುಗಳಿಂದ (ಮೂರು ಬೆಸಗೆ ಅಥವಾ ಸಂಧಿಗಳಿಂದ) ಕೂಡಿರುವ, ಪಾತ್ರವು ಆಸುರವೆನಿಸುವುದು. ಅದರಲ್ಲಿಯ, ಬಟ್ಟೆಯಿಂದ ಶೋಧಿಸಿರತಕ್ಕ ನೀರನ್ನು ಕುಡಿಯುವುದು.

೮. ಮಂತ್ರಜ್ಞನಾದ ಯತಿಯು ಮೂರು ಗ್ರಂಥಿಗಳುಳ್ಳ, ನೀರಿನಿಂದ ತೊಳೆದು ಶುದ್ಧವಾದ ಕಮಂಡಲುವನ್ನು ಬಲಗೈಯಲ್ಲಿ ಮಂತ್ರವನ್ನುಚ್ಚರಿಸಿ ತಾಳುವುದು. ರೇಷ್ಮೆಯ ಹುರಿಯಿಂದಾಗಲೀ, ದರ್ಭೆಯ ಹುರಿಯಿಂದಾಗಲೀ, ಹತ್ತಿಯ ನೂಲಿನ ಹುರಿಯಿಂದಾಗಲೀ, ಹಿಡಿಯನ್ನು ಕಟ್ಟಿರುವ, ತಾವರೆಯಂತೆ ಆಕಾರವುಳ್ಳ, ಐದಾರಾದ ಮುಷ್ಟಿಯ ಅಳತೆಯಿಂದ ಕೂಡಿದ, ಅಷ್ಟಲಕ್ಷಣಗಳುಳ್ಳ ಭಿಕ್ಷಾಪಾತ್ರವನ್ನೂ, ಕಮಂಡಲುವನ್ನೂ ಯತಿಧರ್ಮಜ್ಞನಾದವನು ಮಂತ್ರಪುರಸ್ಸರವಾಗಿ ತೆಗೆದುಕೊಳ್ಳುವುದು. ಸ್ವಲ್ಪವೂ ಉಬ್ಬು ತಗ್ಗುಗಳಿಲ್ಲದ ಸಮಾನವಾದ, ಮರದಿಂದ ಮಾಡಿದ ಪೀಠವೇ ಯತಿಗಳಿಗೆ ಶಾಸ್ತ್ರಗಳಲ್ಲಿ ಹೇಳಿದೆ. ಮುನಿಗಳೂ ಶುದ್ಧಿಯ ಸಲುವಾಗಿಯೇ ಆಸನ ಸ್ವೀಕಾರವನ್ನನುಷ್ಠಿಸಿದ್ದಾರೆ. ಯತಿಯು ಗುಹ್ಯವನ್ನು ಮುಚ್ಚುವಷ್ಟು ಬಟ್ಟೆಯನ್ನೂ, ಶೀತವನ್ನು ಹೋಗಲಾಡಿಸುವ ಕಂಬಳಿಯನ್ನೂ, ಪಾದುಗೆಗಳನ್ನೂ ಸ್ವೀಕರಿಸುವುದು; ಮತ್ತಾವ ವಸ್ತುವನ್ನೂ ಸಂಗ್ರಹಿಸಬಾರದು.

ಏತಾನಿ ತಸ್ಯ ಲಿಂಗಾನಿ ಯತೇಃ ಪ್ರೋಕ್ತಾನಿ ಧರ್ಮತಃ ।
ಸಂಗೃಹ್ಯ ಕೃತಸಂನ್ಯಾಸೋ ಗತ್ವಾ ತೀರ್ಥಮನುತ್ತಮಮ್ ॥ ೯ ॥

ಸ್ನಾತ್ವಾ ಹ್ಯಾಚಮ್ಯ ವಿಧಿವಜ್ಜಲಯುಕ್ತಾಂಶುಕೇನ ವೈ ।
ವಾರಿಣಾ ತರ್ಪಯಿತ್ವಾ ತು ಮಂತ್ರವದ್ಭಾಸ್ಕರಂ ನಮೇತ್ ॥ ೧೦ ॥

ಆಸೀನಃ ಪ್ರಾಙ್ಮುಖೋ ಮೌನೀ ಪ್ರಾಣಾಯಾಮತ್ರಯಂ ಚರೇತ್ ।
ಗಾಯತ್ರೀಂ ಚ ಯಥಾಶಕ್ತಿ ಜಪ್ತ್ವಾ ಧ್ಯಾಯೇತ್ಪರಂ ಪದಮ್ ॥ ೧೧ ॥

ಸ್ಥಿತ್ಯರ್ಥಮಾತ್ಮನೋ ನಿತ್ಯಂ ಭಿಕ್ಷಾಟನಮಥಾಚರೇತ್ ।
ಸಾಯಾಹ್ನಕಾಲೇ ವಿಪ್ರಾಣಾಂ ಗೃಹಾಣಿ ವಿಚರೇದ್ಯತಿಃ ॥ ೧೨ ॥

೯-೧೦. ಆ ಯತಿಯು ಹೇಳಿದ ಈ ಚಿಹ್ನೆಗಳನ್ನು ಸಂಗ್ರಹಿಸಿಕೊಂಡು, ಸರ್ವಸಂಗತ್ಯಾಗವನ್ನು ಮಾಡಿ, ಅತ್ಯಂತ ಶ್ರೇಷ್ಠವಾದ ತೀರ್ಥಕ್ಕೆ ಹೋಗಿ, ಸ್ನಾನಮಾಡಿ, ಶುದ್ಧಾಚಮನವನ್ನು ಮಾಡಿ, ಒದ್ದೆಯ ವಸ್ತ್ರವನ್ನೇ ಉಟ್ಟುಕೊಂಡು, ಶಾಸ್ತ್ರೋಕ್ತ ನಿಯಮ ಪುರಸ್ಸರವಾಗಿ, ನೀರಿನಿಂದ ತರ್ಪಣವನ್ನು ಕೊಟ್ಟು ಸೂರ್ಯನಿಗೆ ನಮಸ್ಕರಿಸುವುದು.

೧೧. ಯತಿಯು ಪೂರ್ವಾಭಿಮುಖವಾಗಿ ಕುಳಿತುಕೊಂಡು ಮೌನದಿಂದಿದ್ದು ಮೂರು ಪ್ರಾಣಾಯಮವನ್ನಾಚರಿಸುವುದು ; ಶಕ್ಯವಾದಷ್ಟು ಗಾಯತ್ರಿಯನ್ನು ಜಪಿಸಿ, ಸರ್ವೋತ್ತಮನಾದ, ಪರಮಪ್ರಾಪ್ಯನಾದ, ಶ್ರೀ ಹರಿಯನ್ನು ಧ್ಯಾನ ಮಾಡುವುದು.

೧೨. ಅನಂತರದಲ್ಲಿ ತನ್ನ ಜೀವನಧಾರಣೆಯ ಸಲುವಾಗಿ, ಭಿಕ್ಷೆಗಾಗಿ ಸಂಚರಿಸುವುದು. ಯತಿಯು ಸಂಜೆಯ ಹೊತ್ತಿನಲ್ಲಿ ಬ್ರಾಹ್ಮಣರ ಮನೆಗಳನ್ನು ಕುರಿತು ಸಂಚರಿಸುವುದು.

ಸ್ಯಾದರ್ಥೀ ಯಾವತಾನ್ನೇನ ತಾವದ್ಭೈಕ್ಷ್ಯಂ ಸಮಾಚರೇತ್ ।
ತತೋ ನಿವೇದ್ಯ ತತ್ಪಾತ್ರಮಭ್ಯುಕ್ಷ್ಯಾಚಮ್ಯ ಸಂಯಮೀ ॥ ೧೩ ॥

ಸೂರ್ಯಾದಿದೈವತೇಭ್ಯೋ ಹಿ ದತ್ವಾನ್ನಂ ಪ್ರೋಕ್ಷ್ಯ ವಾರಿಣಾ ।
ಭುಂಜೀತ ಪರ್ಣಪುಟಕೇ ಪಾತ್ರೇ ವಾ ವಾಗ್ಯತೋ ಯತಿಃ ॥ ೧೪ ॥

ವಟಕಾಶ್ವತ್ಥಪತ್ರೇಷು ಕುಂಭೀತಿಂದುಕಪತ್ರಯೋಃ ।
ಕೋವಿದಾರಕರಂಜೇಷು ನ ಭುಂಜೀತ ಕದಾಚನ ॥ ೧೫ ॥

ಭುಕ್ತ್ವಾಚಮ್ಯ ನಿರುದ್ಧಾಸುರುಪತಿಷ್ಠೇತ ಭಾಸ್ಕರಮ್ ।
ಜಪಧ್ಯಾನೇತಿಹಾಸೈಸ್ತು ದಿನಶೇಷಂ ನಯೇದ್ಯತಿಃ ॥ ೧೬ ॥

೧೩-೧೫. ತಾನು ಅನ್ನಾರ್ಥಿಯಾಗಿದ್ದರೆ, ಎನಿತು ಅನ್ನದಿಂದ ತೃಪ್ತಿಯಾಗುವುದೋ, ಅನಿತು ಅನ್ನಕ್ಕಾಗಿ ತಿರಿಯುವುದು. ಬಳಿಕ ಆ ಪಾತ್ರೆಗೆ ನೀರನ್ನು ಪ್ರೋಕ್ಷಿಸಿ, ಅದನ್ನು ದೇವರಿಗೆ ಅರ್ಪಿಸಿ, ಜಿತೇಂದ್ರಿಯನಾದ ಯತಿಯು ಶುದ್ಧಾಚಮನ ಮಾಡಿ, ಆ ಅನ್ನವನ್ನು ಸೂರ್ಯಾದಿ ದೇವತೆಗಳಿಗರ್ಪಿಸಿ, ಅನಂತರದಲ್ಲಿ ನೀರಿನಿಂದ ಅನ್ನವನ್ನು ಪ್ರೋಕ್ಷಿಸಿ, ವಾಕ್ಸಂಯಮವುಳ್ಳವನಾಗಿ, ಎಲೆಗಳಿಂದ ಹೆಚ್ಚಿದ ದೊನ್ನೆಯ ಪಾತ್ರೆಯಲ್ಲಿ ಊಟಮಾಡುವುದು. ಆಲ, ಅರಳಿ, ತ್ಯಾಗ, ತೂಬರೆ, ಕೆಂಪು ಕಂಚಿವಾಣದ ಗಿಡ, ಹುಲಿಯುಗುರಿನ ಗಿಡ- ಇವುಗಳ ಎಲೆಗಳಲ್ಲಿ ಯತಿಯು ಯಾವಾಗಲೂ ಊಟಮಾಡಕೂಡದು.

೧೬. ಯತಿಯು ಊಟಮಾಡಿ, ಶುದ್ಧಾಚಮನವನ್ನೆಸಗಿ, ಪ್ರಾಣ ನಿರೋಧ ಮಾಡಿಕೊಂಡು, ಸೂರ್ಯದೇವನನ್ನು ಸೇವಿಸುವುದು ; ಉಳಿದ ಹಗಲನ್ನು ಜಪ, ಧ್ಯಾನ ಮತ್ತು ಇತಿಹಾಸ- ಇವುಗಳಿಂದ ಕಳೆಯುವುದು.

ಪಲಾಶಾಃ ಸರ್ವ ಉಚ್ಯಂತೇ ಯತಯಃ ಕಾಂಸ್ಯಭೋಜಿನಃ ।
ಕಾಂಸ್ಯಸ್ಯೈವ ತು ಯತ್ಪಾತ್ರಂ ಗೃಹಸ್ಥಸ್ಯ ತಥೈವ ಚ ॥
ಕಾಂಸ್ಯಭೋಜೀ ಯತಿಃ ಸರ್ವಮಾಪ್ನುಯಾತ್ಕಿಲ್ಬಿಷಂ ಪುನಃ ।
ಭುಕ್ತ್ವಾಪಾತ್ರೇ ಯತಿರ್ನಿತ್ಯಂ ಕ್ಷಾಲಯೇನ್ಮಂತ್ರಪೂರ್ವಕಮ್ ॥
ನ ದುಷ್ಯೇತ್ತಸ್ಯ ತತ್ಪಾತ್ರಂ ಯಜ್ಞೇಷು ಚಮಸಾ ಇವ ।
ಕೃತಸಂಧ್ಯಸ್ತತೋ ರಾತ್ರಿಂ ನಯೇದ್ದೇವಗೃಹಾದಿಷು ॥
ಹೃತ್ಪುಂಡರೀಕನಿಲಯೋ ಧ್ಯಾಯನ್ನಾರಾಯಣಂ ಹರಿಮ್ ।
ತತ್ಪದಂ ಸಮವಾಪ್ನೋತಿ ಯತ್ಪ್ರಾಪ್ಯ ನ ನಿವರ್ತತೇ ॥ ೧೭ ॥

ಇತಿ ಶ್ರೀ ನರಸಿಂಹಪುರಾಣೇ ಯತಿಧರ್ಮ ನಿರೂಪಣಂ
ನಾಮ ಷಷ್ಠಿತಮೋಽಧ್ಯಾಯಃ

---

೧೭. ಕಂಚಿನ ತಳಿಗೆಯಲ್ಲಿ ಊಟಮಾಡುವ ಯತಿಗಳೆಲ್ಲರೂ ಮಾಂಸಾಶಿಗಳಾದವರೆನ್ನಿಸಿಕೊಳ್ಳುತ್ತಾರೆ. ಕಂಚಿನ ಭೋಜನಪಾತ್ರೆಯು ಗೃಹಸ್ಥನಿಗೆ ಉಚಿತವಾದುದು. ಕಂಚಿನ ತಳಿಗೆಯಲ್ಲಿ ಊಟಮಾಡುವ ಯತಿಯು ಮತ್ತೂ ಪಾಪಗಳನ್ನೆಲ್ಲ ಹೊಂದುವನು. ಯತಿಯು ನಿತ್ಯದಲ್ಲಿಯೂ ಉಂಡಪಾತ್ರೆಯನ್ನು ನೀರಿನಲ್ಲಿ ತೊಳೆದು ಮಂತ್ರಪುರಸ್ಸರವಾಗಿ ಊಟಮಾಡುವುದು. ಯಜ್ಞನಲ್ಲಿ ಸೋಮರಸವನ್ನು ಕುಡಿಯಲು ಉಪಯೋಗಿಸುವ ಚಮಸಗಳಂತೆ, ಆ ಯತಿಯು ಆ ಪಾತ್ರೆಯನ್ನು ಮೇಲಿಂದ ಮೇಲೆ ತೊಳೆದು ಉಪಯೋಗಿಸಬಹುದು; ಅದು ದುಷ್ಟವಾಗುವುದಿಲ್ಲ. ಆ ಬಳಿಕ ಯತಿಯು ಸಂಧ್ಯಾವಂದನವನ್ನನುಷ್ಠಿಸಿ, ದೇವಾಲಯವೇ ಮೊದಲಾದ ಪುಣ್ಯಸ್ಥಳಗಳಲ್ಲಿ ಹೃದಯಪುಂಡರೀಕದಲ್ಲಿ ಸರ್ವಗುಣಪೂರ್ಣನಾದ ಶ್ರೀ ಹರಿಯನ್ನು ಧ್ಯಾನಮಾಡುತ್ತಾ, ರಾತ್ರಿಯನ್ನು ಕಳೆಯುವುದು. ಇಂತು ಸ್ವಧರ್ಮನಿರತನಾದ ಯತಿಯು ಪುನರಾವೃತ್ತಿರಹಿತವಾದ, ಶ್ರೀ ಹರಿಯ ಧಾಮಗಳಾದ ವೈಕುಂಠಾದಿಸ್ಥಾನಗಳನ್ನು ಹೊಂದುತ್ತಾನೆ.’

ಇಂತು ಶ್ರೀ ನರಸಿಂಹಪುರಾಣದಲ್ಲಿ ಯತಿಧರ್ಮನಿರೂಪಣವೆಂಬ
ಅರುವತ್ತನೆಯ ಅಧ್ಯಾಯವು ಮುಗಿದುದು.

ಅರುವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ‘ ಶ್ರೀ ಹಾರೀತಮುನಿಯು ಮುನಿಗಳ ತಂಡಕ್ಕೆ ಯತ್ಯಾಶ್ರಮಧರ್ಮವನ್ನು ನಿರೂಪಿಸುವುದಾಗಿ ಪ್ರತಿಜ್ಞೆಮಾಡಿ, ವಾನಪ್ರಸ್ಥನಾದವನು ಮತ್ತೂ ವಿಶೇಷವಾದ ವೈರಾಗ್ಯದಿಂದ ಯತ್ಯಾಶ್ರಮವನ್ನು ತಾಳಿದವನಾಗಿ, ಋಣತ್ರಯವನ್ನೂ ಕಳೆದುಕೊಂಡು, ವೈಶ್ವಾನರಪ್ರಾಜಾಪ್ರತ್ಯೇಷ್ಟಿಗಳನ್ನು ಅನುಷ್ಠಿಸಿ, ಅಗ್ನಿಯನ್ನು ಆತ್ಮಸಮಾರೋಪಣೆಯನ್ನು ಮಾಡಿಕೊಂಡು, ಸರ್ವಸಂಗತ್ಯಾಗವನ್ನಾಚರಿಸುವುದು. ಯತಿಗೆ ಯೋಗ್ಯವಾದ ದಂಡ, ಭಿಕ್ಷಾಪಾತ್ರೆ, ಮತ್ತು ಕಮಂಡಲು- ಇವುಗಳ ಸ್ವರೂಪವನ್ನೂ ಅರುಹಿ, ಅವನು ಆಚರಿಸಬೇಕಾದ ಧ್ಯಾನಜಪಗಳನ್ನೂ ತಿಳಿಸಿ, ಭಿಕ್ಷಾಕ್ರಮವನ್ನೂ, ಭೋಜನಪಾತ್ರಸ್ವರೂಪವನ್ನೂ ತಿಳಿಸಿರುತ್ತಾರೆ.

ಯತಿಯು ತನ್ನ ಭೋಜನಾನಂತರ ಶುದ್ಧಾಚಮನಮಾಡಿ, ಪ್ರಾಣನಿರೋಧದಿಂದ ಸೂರ್ಯನನ್ನು ಸೇವಿಸುವುದು ; ಉಳಿದ ಹಗಲನ್ನು ಜಪಧ್ಯಾನೇತಿಹಾಸಗಳಿಂದ ಕಳೆಯುವುದು. ದೇವಾಲಯವೇ ಮೊದಲಾದ ಪುಣ್ಯಸ್ಥಳಗಳಲ್ಲಿ ಕುಳಿತು ಜಪಧ್ಯಾನಾದಿಗಳಿಂದ ರಾತ್ರಿಯನ್ನು ಕಳೆಯುವುದು. ಇಂತು ಸ್ವಧರ್ಮನಿರತನಾದ ಯತಿಯು ಪುನರಾವೃತ್ತಿರಹಿತವಾದ ಶ್ರೀ ಹರಿಧಾಮವನ್ನೈದುವನು; ’ ಎಂದು ಸಹಸ್ರಾನೀಕರಾಯನಿಗೆ ಹೇಳಿದುವನ್ನೇ ಶ್ರೀ ಸೂತರು ಭರದ್ವಾಜನಿಗೆ ಅರುಹಿದುದು ನಿರೂಪಿತವಾಗಿದೆ.

ಇಂತು ಅರುವತ್ತನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ
ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ಏಕಷಷ್ಟಿತಮೋಽಧ್ಯಾಯಃ

ಯೋಗಶಾಸ್ತ್ರಸಾರ ನಿರೂಪಣಮ್.

॥ ಹಾರೀತ ಉವಾಚ ॥

ವರ್ಣಾನಾಮಾಶ್ರಮಾಣಾಂ ಚ ಕಥಿತಂ ಧರ್ಮಲಕ್ಷಣಮ್ ।
ಯತಃ ಸ್ವರ್ಗಾಪವರ್ಗೌ ತು ಪ್ರಾಪ್ನುಯುಸ್ತೇ ದ್ವಿಜಾದಯಃ ॥ ೧ ॥

ಯೋಗಶಾಸ್ತ್ರಸ್ಯ ವಕ್ಷ್ಯಾಮಿ ಸಂಕ್ಷೇಪಾತ್ಸಾರಮುತ್ತಮಮ್ ।
ಯಸ್ಯಾಭ್ಯಾಸಬಲಾದ್ಯಾಂತಿ ಮೋಕ್ಷಂ ಚೇಹ ಮುಮುಕ್ಷವಃ ॥ ೨ ॥

ಅರುವತ್ತೊಂದನೆಯ ಅಧ್ಯಾಯವು

ಯೋಗಶಾಸ್ತ್ರಸಾರನಿರೂಪಣಮ್

ಶ್ರೀ ಹಾರೀತಮುನಿಯು ಮುನಿಗಳ ತಂಡಕ್ಕೆ ಇಂತು ಹೇಳುತ್ತಾನೆ.

೧. 'ಎಲೈ ಮುನಿಗಳಿರಾ! ಕೇಳಿರಿ; ಆ ತ್ರೈವರ್ಣಿಕರು ಯಾವ ಧರ್ಮ ಜ್ಞಾನದಿಂದ ಸ್ವರ್ಗ ಮತ್ತು ಮೋಕ್ಷ- ಇವುಗಳನ್ನೈಯ್ದುವರೋ, ಆಯಾ ಬ್ರಾಹ್ಮಣಾದಿ ಚತುರ್ವರ್ಣಗಳ ಮತ್ತು ಬ್ರಹ್ಮಚರ್ಯಾದ್ಯಾಶ್ರಮಗಳ ಧರ್ಮಸ್ವರೂಪಗಳನ್ನು ಹೇಳಿದುದಾಯಿತು.

೨. ಇನ್ನು ಸಂಕ್ಷೇಪದಿಂದ ಯೋಗಶಾಸ್ತ್ರದ ಹಿರಿಯ ತಿರುಳನ್ನು ಹೇಳುವೆನು. ಯಾವ ಈ ಯೋಗಶಾಸ್ತ್ರಸಾರವನ್ನು ಅಭ್ಯಾಸಮಾಡಿ, ಮುಮುಕ್ಷುಗಳ ವಿಶೇಷ ಸಾಮರ್ಥ್ಯಪಡೆದು, ಅದರಿಂದ ಮುಕ್ತಿಯನ್ನು ಹೊಂದುತ್ತಾರೆ.

ಯೋಗಾಭ್ಯಾಸರತಸ್ಯೇಹ ನಶ್ಯಂತೇ ಪಾತಕಾನಿ ಚ ।
ತಸ್ಮಾದ್ಯೋಗಪರೋ ಭೂತ್ವಾ ಧ್ಯಾಯೇನ್ನಿತ್ಯಂ ಕ್ರಿಯಾಂತರೇ ॥ ೩ ॥

ಪ್ರಾಣಾಯಾಮೇನ ಚ ಯಮಂ ಪ್ರಾಣಾಯಾಮೇನ ಚೇರಿತಮ್ ।
ಧಾರಣಾಭಿರ್ವಶೀಕೃತ್ಯ ಪುನರ್ದುರ್ಧರ್ಷಣಂ ಮನಃ ॥ ೪ ॥

ಏಕಂ ಕಾರಣಮಾನಂದಬೋಧಂ ಚ ಯಮನಾಮಯಮ್ ।
ಸೂಕ್ಷ್ಮಾತ್ಸೂಕ್ಷ್ಮತರಂ ಧ್ಯಾಯೇತ್ಸ ಗದಾಧರಮಚ್ಯುತಮ್ ॥ ೫ ॥

ಆತ್ಮಾನಮರವಿಂದಸ್ಥಂ ತಪ್ತಚಾಮೀಕರಪ್ರಭಮ್ ।
ರಹಸ್ಯೇಕಾಂತಮಾಸೀನೋ ಧ್ಯಾಯೇದಾತ್ಮಹೃದಿ ಸ್ಥಿತಮ್ ॥ ೬ ॥

---

೩. ಯೋಗಾಭ್ಯಾಸದಲ್ಲಿ ತೊಡಗಿದವನ ಪಾತಕಗಳು ಈ ಪ್ರಪಂಚದಲ್ಲಿ ಅಳಿಯುವುವು. ಆದುದರಿಂದ ಮಾನವನು ಚಿತ್ತವೃತ್ತಿನಿರೋಧವೆಂಬ ಯೋಗ ಪರನಾಗಿದ್ದು, ತಾನೆಸಗುವ ಕರ್ಮಗಳ ನಡುವೆ, ನಿತ್ಯದಲ್ಲಿಯೂ ಶ್ರೀ ಹರಿಯ ಧ್ಯಾನವನ್ನು ನಿಷ್ಠೆಯಿಂದಾಚರಿಸುವುದು.

೪-೫. ರೇಚಕ, ಪೂರಕ, ಕುಂಭಕರೂಪವಾದ ಪ್ರಾಣಾಯಾಮದಿಂದ ಅಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಗಳೆಂಬ ಯಮವನ್ನೂ, ಚಕ್ಷುರಾದೀಂದ್ರಿಯಗಳನ್ನೂ, ಖಂಡಸ್ಮೃತಿರೂಪವಾದ ಧಾರಣದಿಂದ ಅತ್ಯಂತ ಚಂಚಲವಾದ ಮನಸ್ಸನ್ನೂ (ಅಂತಃಕರಣವನ್ನೂ) ಸ್ವಾಧೀನಪಡಿಸಿಕೊಂಡು, ಸಕಲ ಪ್ರಪಂಚಕ್ಕೂ ಮುಖ್ಯಕಾರಣನೂ, ಪೂರ್ಣಾನಂದಜ್ಞಾನಸ್ವರೂಪನೂ, ಸಕಲ ಲೋಕಕ್ಕೆ ನಿಯಾಮಕನೂ, ಯಂತೃವೂ, ಸೂಕ್ಷ್ಮವಸ್ತುಗಳಿಗಿಂತ ಅತ್ಯಂತ ಸೂಕ್ಷ್ಮನೂ, ಗದಾಯುಧಧಾರಿಯೂ ಆದ, ನಾಶರಹಿತನಾದ ಶ್ರೀ ನರಸಿಂಹನನ್ನು ಧ್ಯಾನಮಾಡುವುದು.

೬. ಅಧಿಕಾರಿಯು ಏಕಾಂತಸ್ಥಳದಲ್ಲಿ ಕುಳಿತವನಾಗಿ, ತನ್ನ ಹೃತ್ಪುಂಡರೀಕ ಗತನೂ, ಪುಟವಿಕ್ಕಿದ ಮಿಸುನಿಯಂತೆ ಪ್ರಕಾಶಿಸುವವನೂ, ತನ್ನ ಹೃದಯಗತನಾದ ಸರ್ವಸ್ವಾಮಿಯೂ, ವ್ಯಾಪ್ತನೂ ಆದ ಶ್ರೀಹರಿಯನ್ನು ಧ್ಯಾನಮಾಡುವುದು.

ಯಃ ಸರ್ವಪ್ರಾಣಿಚಿತ್ತಜ್ಞೋ ಯಃ ಸರ್ವೇಷಾಂ ಹೃದಿ ಸ್ಥಿತಃ ।
ಯಶ್ಚ ಸರ್ವಾರಣಿಜ್ಞೇಯಃ ಸೋಽಹಮಸ್ಮೀತಿ ಚಿಂತಯೇ ॥ ೭ ॥

ಆತ್ಮನಾಭಿಮುಖಂ ಯಾವತ್ತಾವದ್ಧ್ಯಾನಮುದಾಹೃತಮ್ ।
ಶ್ರುತಿಸ್ಮೃತ್ಯುದಿತಂ ಕರ್ಮ ತತ್ತದೂರ್ಧ್ವಂ ಸಮಾಚರೇತ್ ॥ ೮ ॥

ಯಥಾಶ್ವಾ ರಥಹೀನಾಶ್ಚ ರಥಾಶ್ಚಾಶ್ವೈರ್ವಿನಾ ಯಥಾ ।
ಏವಂ ತಪಶ್ಚ ವಿದ್ಯಾ ಚ ಉಭಾವಪಿ ತಪಸ್ವಿನಃ ॥ ೯ ॥

---

೭. ಯಾವ ಶ್ರೀಹರಿಯು ಸಕಲಪ್ರಾಣಿಗಳ ಚಿತ್ತವನ್ನರಿತವನೋ, ಯಾವನು ಸರ್ವಚೇತನರ ಹೃದಯದಲ್ಲಿರುವವನೋ, ಯಾವನು ಸರ್ವವನ್ನೂ ಸುಡತಕ್ಕ ಎಂದರೆ ನಾಶಮಾಡತಕ್ಕ ಅರಣಿಯೆಂದು ತಿಳಿಯಲ್ಪಡುವವನೋ, ಆ ಭಗವಂತನ ಅಧೀನವಾದ ಸ್ಥಿತಿಯುಳ್ಳವನು ತಾನೆಂದು ಧ್ಯಾನಮಾಡುವುದು.

೮. ಪರಮಾತ್ಮನ ಬಿಂಬಾಪರೋಕ್ಷವಾಗುವವರೆಗೂ ಧ್ಯಾನವನ್ನನುಷ್ಠಿಸುವುದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಇಂತು ಆ ಅಪರೋಕ್ಷಜ್ಞಾನಾನಂತರದಲ್ಲಿಯೂ ಶ್ರುತಿಸ್ಮೃತಿಗಳಲ್ಲಿ ವರ್ಣಾಶ್ರಮಗಳಿಗೆ ಕರ್ತವ್ಯಗಳೆಂದು ಹೇಳಿರುವ ಕರ್ಮಗಳನ್ನು ಅವಶ್ಯವಾಗಿ ಆಚರಿಸುವುದು.

೯. ಕಾಮತ್ಯಾಗರೂಪವಾದ ತಪವುಳ್ಳವನ ಕಾಮತ್ಯಾಗವೂ, ಜೀವಾತ್ಮ ಪರಮಾತ್ಮವಿಷಯಕ ಭೇದಜ್ಞಾನರೂಪವಾದ ವಿದ್ಯೆಯೂ–ಇವೆರಡೂ ಬಂಡಿಯಿಂದ ಬೇರೆಯಾಗಿರುವ ಕುದುರೆಯಂತೆಯೂ, ಕುದುರೆಯಿಲ್ಲದ ಬಂಡಿಯಂತೆಯೂ ಇರುತ್ತವೆ.

ಯಥಾನ್ನಂ ಮಧುಸಂಯುಕ್ತಂ ಮಧುನಾನ್ನೇನ ಸಂಯುತಮ್ ।
ಏವಂ ತಪಶ್ಚ ವಿದ್ಯಾ ಚ ಸಂಯುಕ್ತಂ ಭೇಷಜಂ ಮಹತ್ ॥ ೧೦ ॥

ದ್ವಾಭ್ಯಾಮೇವ ಹಿ ಪಕ್ಷಾಭ್ಯಾಂ ಯಥಾ ವೈ ಪಕ್ಷಿಣಾಂ ಗತಿಃ ।
ತಥೈವ ಜ್ಞಾನಕರ್ಮಭ್ಯಾಂ ಪ್ರಾಪ್ಯತೇ ಬ್ರಹ್ಮ ಶಾಶ್ವತಮ್ ॥ ೧೧ ॥

ವಿದ್ಯಾತಪೋಭ್ಯಾಂ ಸಂಪನ್ನೋ ಬ್ರಾಹ್ಮಣೋ ಯೋಗತತ್ಪರಃ ।
ದೇಹದ್ವಂದ್ವಂ ವಿಹಾಯಾಶು ಮುಕ್ತೋ ಭವತಿ ಬಂಧನಾತ್ ॥ ೧೨ ॥

ನ ದೇವಯಾನಮಾರ್ಗೇಣ ಯಾವತ್ಪ್ರಾಪ್ತಂ ಪರಂ ಪದಮ್ ।
ನ ತಾವದ್ದೇಹಲಿಂಗಸ್ಯ ವಿನಾಶೋ ವಿದ್ಯತೇ ಕ್ವಚಿತ್ ॥ ೧೩ ॥

---

೧೦. ಎಂತು ಅನ್ನವು ಜೇನುತುಪ್ಪದಿಂದಲೂ, ಜೇನುತುಪ್ಪವು ಅನ್ನದಿಂದಲೂ ಕೂಡಿರುವುದು ಹಿತವಾಗಿರುವುದೋ, ಅಂತು ತಪವೂ, ವಿದ್ಯೆಯೂ ಒಂದರೊಡನೊಂದು ಸೇರಿರುವುದು ಸಂಸಾರ ರೋಗಕ್ಕೆ ಹಿರಿದಾದ ಮದ್ದು.

೧೧. ಹೇಗೆ ಹಕ್ಕಿಗಳು ಎರಡು ರೆಕ್ಕೆಗಳಿಂದ ಹಾರಿ ಚಲಿಸುವುವೋ, ಹಾಗೆಯೇ ಅಧಿಕಾರಿಯು ಜ್ಞಾನಕರ್ಮಗಳೆರಡರ ಸಹಾಯದಿಂದ ನಿತ್ಯನಾದ ಪರಮಾತ್ಮನನ್ನೈಯ್ದುವನು.

೧೨. ವಿದ್ಯಾತಪಗಳಿಂದ ಕೂಡಿದ, ಯೋಗನಿಷ್ಠನಾದ, ಬ್ರಹ್ಮಜ್ಞಾನಿಯಾದ ಬ್ರಾಹ್ಮಣನು ಬೇಗನೆ ಸ್ಥೂಲ, ಲಿಂಗದೇಹಗಳನ್ನು ಕಳೆದುಕೊಂಡು ಅನಾದಿಕಾಲದಿಂದ ಬಂದ, ಅವಿದ್ಯಾಕಾಮಕರ್ಮಗಳ ಸಂಬಂಧರೂಪವಾದ, ಪ್ರಕೃತಿಬಂಧದಿಂದ ಬಿಡುಗಡೆಯನ್ನು ಹೊಂದಿ, ಸ್ವಸ್ವರೂಪದಿಂದಿರುವುದೆಂಬ ಮೋಕ್ಷವನ್ನು ಹೊಂದುವನು.

೧೩. ದೇವಾದಿವ್ಯತಿರಿಕ್ತಜ್ಞಾನಿಗಳು ಅರ್ಚಿರಾದಿಮಾರ್ಗದಿಂದ ವಾಯುಲೋಕವನ್ನು ಹೊಂದಿ, ಅಲ್ಲಿಂದ ತಟಿಲ್ಲೋಕವನ್ನೂ, ವಾಯುಲೋಕವನ್ನೂ ಸೇರಿ, ಅಲ್ಲಿಂದ ವಿರಿಂಚನೊಡನೆ ವಿಷ್ಣುಲೋಕವನ್ನೂ ಸೇರುವರು. ದೇವತೆಗಳು, ನೂರುಮಂದಿ ಋಷಿಗಳು, ನೂರುಮಂದಿ ಗಂಧರ್ವರು, ನೂರುಮಂದಿ ಚಕ್ರವರ್ತಿಗಳು, ಸ್ವೋತ್ತಮರ ದೇಹವಲ್ಲಿ ಲಯವನ್ನು ಹೊಂದಿ, ಪರಂಪರೆಯಿಂದ ಉತ್ತಮೋತ್ತಮವಾದ ದ್ವಾರದಿಂದ ಪರಮಾತ್ಮನನ್ನು ಹೊಂದುತ್ತಾರೆ. ಈ ದೇವಯಾನಮಾರ್ಗದಿಂದ ಪರಮಪ್ರಾಪ್ಯನಾದ ಶ್ರೀ ಮಹಾವಿಷ್ಣುವನ್ನು ಹೊಂದುವವರೆಗೂ, ಲಿಂಗದೇಹಕ್ಕೆ ಎಲ್ಲಿಯೂ ವಿನಾಶವಿಲ್ಲವು. (ಅಲ್ಲಿಯವರೆಗೂ ಲಿಂಗದೇಹವಿರುತ್ತದೆ, ಎಂದು ಅಭಿಪ್ರಾಯವು.)

ಮಯಾ ವಃ ಕಥಿತಂ ಸರ್ವವರ್ಣಾಶ್ರಮವಿಭಾಗಶಃ ।
ಸಂಕ್ಷೇಪೇಣ ದ್ವಿಜಶ್ರೇಷ್ಠಾ ಧರ್ಮಸ್ತೇಷಾಂ ಸನಾತನಃ ॥ ೧೪ ॥

॥ ಮಾರ್ಕಂಡೇಯ ಉವಾಚ ॥

ಶ್ರುತ್ವೈವಮೃಷಯೋ ಧರ್ಮಂ ಸ್ವರ್ಗಮೋಕ್ಷಫಲಪ್ರದಮ್ ।
ಪ್ರಣಮ್ಯ ತಮೃಷಿಂ ಜಗ್ಮುರ್ಮುದಿತಾಸ್ತೇ ಸ್ವಮಾಲಯಮ್ ॥ ೧೫ ॥

ಧರ್ಮಶಾಸ್ತ್ರಮಿದಂ ಯಸ್ತು ಹಾರೀತಮುಖನಿಃಸೃತಮ್ ।
ಶ್ರುತ್ವಾ ಚ ಕುರುತೇ ಧರ್ಮಂ ಸ ಯಾತಿ ಪರಮಾಂ ಗತಿಮ್ ॥ ೧೬ ॥

ಮುಖಜಸ್ಯ ತು ಯತ್ಕರ್ಮ ಕರ್ಮ ಯದ್ಬಾಹುಜಸ್ಯ ತು ।
ಊರುಜಸ್ಯ ತು ಯತ್ಕರ್ಮ ಪಾದಜಸ್ಯ ತಥಾ ನೃಪ ॥ ೧೭ ॥

---

೧೪. ಎಲೈ ಬ್ರಾಹ್ಮಣೋತ್ತಮರೇ ! ಎಲ್ಲ ವರ್ಣಾಶ್ರಮಗಳ ಭೇದದಿಂದ ಸಂಗ್ರಹವಾಗಿ ಅವುಗಳ ನಿತ್ಯವಾದ, ವೇದಾದಿ ಶಾಸ್ತ್ರಗಳಲ್ಲಿ ಹೇಳಿದ ಧರ್ಮವು ಹೇಳಿದುದಾಯಿತು.

ಮಾರ್ಕಂಡೇಯ ಮುನಿಯು ಶತಾನೀಕರಾಯನಿಗೆ ಇಂತು ಹೇಳುತ್ತಾನೆ.

೧೫. ಎಲೈ ರಾಯನೇ ! ಕೇಳು ; ಆ ಮುನಿಗಳು ಶ್ರೀ ಹಾರೀತ ಮುನಿಯು ಹೇಳಿದ, ಸ್ವರ್ಗಮೋಕ್ಷರೂಪಗಳಾದ ಫಲವನ್ನು ಕೊಡತಕ್ಕ ಧರ್ಮವನ್ನು ಇಂತು ಕೇಳಿ, ಅವರು ಸಂತಸಗೊಂಡು ಆ ಹಾರಿತಮುನಿಗೆ ನಮಸ್ಕರಿಸಿ, ತಂತಮ್ಮ ವಾಸಸ್ಥಾನಕ್ಕೆ ಹಿಂದಿರುಗಿದರು.

೧೬. ಯಾವಾತನು ಶ್ರೀ ಹಾರೀತರು ಹೇಳಿರುವ ಧರ್ಮಶಾಸ್ತ್ರವನ್ನು ಕೇಳಿ, ತಿಳಿದು ಧರ್ಮವನ್ನನುಷ್ಠಿಸುವನೋ, ಅವನು ಉತ್ತಮವಾದ ಸ್ವರ್ಗಾಪವರ್ಗಗಳನ್ನು ಹೊಂದುವನು.

೧೭.–೧೮. ಎಲೈ ರಾಯನೇ ! ಕೇಳು ; ಚತುರ್ಮುಖನ ಮುಖದಿಂದ ಹುಟ್ಟಿದ ಬ್ರಾಹ್ಮಣರಿಗೆ ವಿಹಿತವಾದ ಯಾವ ಕರ್ಮವೋ, ತೋಳಿನಿಂದ ಜನಿಸಿದ ಕ್ಷತ್ರಿಯರಿಗೆ ವಿಹಿತವಾದ ಯಾವ ಕರ್ಮವೋ, ತೊಡೆಯಿಂದ ಜನಿಸಿದ ವೈಶ್ಯರಿಗೆ

ಸ್ವಂ ಸ್ವಂ ಕರ್ಮ ಪ್ರಕುರ್ವಾಣಾ ವಿಪ್ರಾದ್ಯಾ ಯಾಂತಿ ಸದ್ಗತಿಮ್ ।
ಅನ್ಯಥಾ ವರ್ತಮಾನೋ ಹಿ ಸದ್ಯಃ ಪತತಿ ಯಾತ್ಯಧಃ ॥ ೧೮ ॥

ಯದ್ಯಸ್ಯ ವಿಹಿತಂ ಕರ್ಮ ಸ ತು ತೈಸ್ತ್ಯೈಃ ಪ್ರತಿಷ್ಠಿತಃ ।
ತಸ್ಮಾತ್ಸ್ವಧರ್ಮಂ ಕುರ್ವೀತ ನಿತ್ಯಮೇವಮನಾಪದಿ ॥ ೧೯ ॥

ಚತುರ್ವರ್ಣಾಶ್ಚ ರಾಜೇಂದ್ರ ಚತ್ವಾರಶ್ಚಾಪಿ ಚಾಶ್ರಮಾಃ ।
ಋತೇ ಸ್ವಧರ್ಮಂ ವಿಮಲಂ ನ ತೇ ಯಾಂತಿ ಪರಾಂ ಗತಿಮ್ ॥ ೨೦ ॥

ಸ್ವಧರ್ಮೇಣ ಯಥಾ ನೃಣಾಂ ನರಸಿಂಹಃ ಪ್ರತುಷ್ಯತಿ ।
ವರ್ಣಧರ್ಮಾನುಸಾರೇಣ ನರಸಿಂಹಃ ತಥಾರ್ಚಯೇತ್ ॥ ೨೧ ॥

ವಿಹಿತವಾದ ಯಾವ ಕರ್ಮವೋ, ಕಾಲುಗಳಿಂದ ಜನಿಸಿದ ಶೂದ್ರರಿಗೆ ವಿಹಿತವಾದ ಯಾವ ಕರ್ಮವೋ, ಆ ತಂತಮ್ಮ, ವಿಹಿತವಾದ ಕರ್ಮವನ್ನೆಸಗುವ ಬ್ರಾಹ್ಮಣರೇ ಮೊದಲಾದವರು ಸದ್ಗತಿಯನ್ನು ಪಡೆಯುತ್ತಾರೆ; ವ್ಯತಿರಿಕ್ತವಾಗಿ ಬಾಳುವವನು ತತ್ಕ್ಷಣದಲ್ಲಿಯೇ ಪತಿತನಾಗಿ (ಕೆಳಗೆಬಿದ್ದು) ಅಧೋಗತಿಯನ್ನೆಯ್ದುವನು.

೧೯. ಯಾವನಿಗೆ ಯಾವ ಕರ್ಮವು ವಿಹಿತವಾಗಿರುತ್ತದೆಯೋ, ಆ ಧರ್ಮವು ಆಯಾ ವರ್ಣಾಶ್ರಮಿಗಳಿಂದ ನೆಲೆಗೊಳಿಸಲ್ಪಡುತ್ತದೆ. ಆದುದರಿಂದ ಅಧಿಕಾರಿಯು ವಿಪತ್ತಿಲ್ಲದಿರುವಾಗ, ನಿತ್ಯದಲ್ಲಿಯೂ ಸ್ವವಿಹಿತಧರ್ಮವನ್ನು ಅನುಷ್ಠಿಸಿಯೇ ತೀರಬೇಕು.

೨೦. ಕೇಳು; ರಾಜೇಂದ್ರ ! ಬ್ರಾಹ್ಮಣಾದಿ ಚತುರ್ವರ್ಣದವರೂ, ಬ್ರಹ್ಮಚಾರಿಯಾದಿಯಾಗಿ ಚತುರಾಶ್ರಮಿಗಳೂ, ವಿಹಿತವೂ, ಪವಿತ್ರವೂ ಆದ ಸ್ವಧರ್ಮಾಚರಣೆಯನ್ನು ಹೊರತು ಅವರು ಪವಿತ್ರವಾದ ಉತ್ತಮಗತಿಯನ್ನು ಹೊಂದುವುದಿಲ್ಲ.

೨೧. ವಿಹಿತ ಸ್ವಧರ್ಮಾಚರಣದಿಂದ ಮಾನವರಿಗೆ ಶ್ರೀನರಸಿಂಹಸ್ವಾಮಿಯು ಹೇಗೆ ಪ್ರಸನ್ನನಾಗುವನೋ, ಹಾಗೆ ತಂತಮ್ಮ ವರ್ಣೋಚಿತಧರ್ಮಾನುಷ್ಠಾನದಿಂದ ಶ್ರೀ ನರಸಿಂಹದೇವನನ್ನು ಪೂಜಿಸುವುದು.

ಉತ್ಪನ್ನವೈರಾಗ್ಯಬಲೇನ ಯೋಗಾ-
ದ್ಧ್ಯಾನಾತ್ಪರಬ್ರಹ್ಮ ಸದಾ ಕ್ರಿಯಾವಾನ್ ।
ಸತ್ಯಾತ್ಮಕಂ ಚಿತ್ಸುಖರೂಪಮಾದ್ಯಂ
ವಿಹಾಯ ದೇಹಂ ಪದಮೇತಿ ವಿಷ್ಣೋಃ ॥ ೨೨ ॥

ಇತಿ ಶ್ರೀ ನರಸಿಂಹಪುರಾಣೇ ಯೋಗಶಾಸ್ತ್ರಸಾರ ನಿರೂಪಣಂ ನಾಮ ಏಕಷಷ್ಟಿತಮೋಽಧ್ಯಾಯಃ

---

೨೨. ಕರ್ಮಬದ್ಧವಾದ ಚೇತನವರ್ಗವನ್ನು ನೋಡಿ, ತಾನೂ ಕರ್ಮಜನ್ಯಗಳಾದ ಸುಖದುಃಖಗಳನ್ನನುಭವಿಸುವುದರಿಂದುಂಟಾದ, ವಿಷಯಾಲಂಬುದ್ಧಿರೂಪವಾದ ವೈರಾಗ್ಯಸಾಮರ್ಥ್ಯದಿಂದ ತ್ಯಾಗಪೂರ್ವಕವಾದ, ಸಮತಾ ಬುದ್ಧಿರೂಪವಾದ, ಯೋಗದಿಂದ ಪರಮಸತ್ಯಸ್ವರೂಪನಾದ, ಜ್ಞಾನಾನಂದಾತ್ಮಕನಾದ, ಸಕಲ ಪ್ರಪಂಚಕ್ಕೂ ಜನಕನಾಗಿ ಪ್ರಪಂಚಸೃಷ್ಟಿಗೆ ಮುಂಚೆ ಇರುವವನಾದ, ಸರ್ವೋತ್ಕೃಷ್ಟನಾದ, ಅನಂತ ಕಲ್ಯಾಣಗುಣಪರಿಪೂರ್ಣನಾದ, ಶ್ರೀ ಹರಿಯನ್ನು ಅಖಂಡವಾಗಿ ಸ್ಮರಿಸುವುದರಿಂದ ಯಾವಾಗಲೂ ವಿಹಿತಕರ್ಮಾನುಷ್ಠಾನವುಳ್ಳವನಾಗಿ, ಅಧಿಕಾರಿಯು ಪಾಂಚಭೌತವಾದ, ಸ್ಥೂಲದೇಹವನ್ನೂ, ಷೋಡಶಕಲಾತ್ಮಕವಾದ ಲಿಂಗಶರೀರವನ್ನೂ ತ್ಯಜಿಸಿ, ಶ್ರೀ ಮಹಾವಿಷ್ಣುವಿನ ಲೋಕವಾದ ವೈಕುಂಠಾದಿಸ್ಥಾನವನ್ನೈಯ್ದುವನು ; ' ಎಂದು ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ನಿರೂಪಿಸಿದುದನ್ನು ಶ್ರೀ ಸೂತರು ಭರದ್ವಾಜಾದಿಮುನಿಗಳಿಗೆ ಹೇಳಿದರು.

ಇಂತು ಶ್ರೀನರಸಿಂಹ ಪುರಾಣದಲ್ಲಿ ಯೋಗಶಾಸ್ತ್ರಸಾರವೆಂಬ
ಅರುವತ್ತೊಂದನೆಯ ಅಧ್ಯಾಯವು ಮುಗಿದುದು.

ಅರುವತ್ತೊಂದನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ, ' ಶ್ರೀಹಾರೀತನು ಮುನಿಗಳ ತಂಡಕ್ಕೆ ಯೋಗಾಭ್ಯಾಸದ ಹಿರಿಮೆಯನ್ನು ಹೇಳಲು ತೊಡಗಿ, ಯೋಗಸ್ವರೂಪ, ಪ್ರಾಣಾಯಾಮಾನುಷ್ಠಾನ ಕ್ರಮ, ಧ್ಯಾನ-ಇವುಗಳನ್ನು ನಿರೂಪಿಸಿ, ತಪಸ್ಸು ಮತ್ತು ವಿದ್ಯೆ-ಇವುಗಳ ಪರಸ್ಪರ ಸಂಬಂಧೋತ್ಕರ್ಷಗಳನ್ನು ಹೇಳಿ, ವಿದ್ಯಾತಪಗಳಿಂದ ಕೂಡಿದ ಬ್ರಹ್ಮಜ್ಞಾನಿಗೆ ಸಕಲ ದುರಿತಗಳೂ ಕಳೆದು, ಮುಕ್ತಿ ದೊರಕುವುದು.

ಆ ಜ್ಞಾನಿಯು ಮೋಕ್ಷಕ್ಕೆ ಹೋಗುವ ಉತ್ಕ್ರಾಂತಿಮಾರ್ಗಗಳನ್ನು ನಿರೂಪಿಸಿ, ಚಾತುರ್ವರ್ಣ್ಯ ಮತ್ತು ಆಶ್ರಮಧರ್ಮಗಳು- ಇವುಗಳ ಪ್ರಾಶಸ್ತ್ಯವನ್ನು ಸಂಗ್ರಹವಾಗಿ ಹೇಳಿ, ಪ್ರತಿಯೊಬ್ಬ ಮಾನವನೂ ತಂತಮ್ಮ ವಿಹಿತವಾದ ಧರ್ಮವನ್ನು ಆಚರಿಸಿ, ನಿಷ್ಕಾಮನೆಯಿಂದ ಶ್ರೀ ನರಸಿಂಹಸ್ವಾಮಿಯನ್ನು ಆರಾಧಿಸಿ, ಪೂರ್ವೋಕ್ತಯೋಗ ಮಾರ್ಗಾವಲಂಬಿಯಾಗಿ ಮುಕ್ತಿಯನ್ನು ಹೊಂದುವುದು ; ಅನ್ಯಧರ್ಮಾಚರಣೆಯು ಹಾನಿಕರವು;' ಎಂದು ನಿರೂಪಿಸಿದುದನ್ನು ಮಾರ್ಕಂಡೇಯ ಮುನಿಯು ಸಹಸ್ರಾನೀಕ ರಾಯನಿಗೆ ಅರುಹಿದುದನ್ನು ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿರುತ್ತಾರೆ.

ಇಂತು ಅರುವತ್ತೊಂದನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವರ್ಣಾಶ್ರಮಧರ್ಮಾದಿ ನಿರೂಪಣಮ್.

ದ್ವಿಷಷ್ಟಿತಮೋಽಧ್ಯಾಯಃ

ಅಥ ಶ್ರೀ ವಿಷ್ಣೋರರ್ಚಾವಿಧಿಃ

॥ ಶ್ರೀ ಮಾರ್ಕಂಡೇಯ ಉವಾಚ ॥

ವರ್ಣಾನಾಮಾಶ್ರಮಾಣಾಂ ಚ ಕಥಿತಂ ಲಕ್ಷಣಂ ತವ ।
ಭೂಯಃ ಕಥಯ ರಾಜೇಂದ್ರ ಶುಶ್ರೂಷಾ ತವ ಕಾ ನೃಪ ॥ ೧ ॥

ಅರುವತ್ತೆರಡನೆಯ ಅಧ್ಯಾಯವು

ವಿಷ್ಣುವಿನ ಪೂಜಾವಿಧಿಯು

ಶ್ರೀ ಮಾರ್ಕಂಡೇಯ ಮುನಿಯು ಸಹಸ್ರಾನೀಕ ರಾಜನನ್ನು ಕುರಿತು ಇಂತು ಹೇಳುತ್ತಾನೆ.

೧. ‘ ಎಲೈ ರಾಜೇಂದ್ರನೇ ! ಇದುವರೆಗೆ ನಿನಗೆ ಬ್ರಾಹ್ಮಣಾದಿ ವರ್ಣಗಳ ಮತ್ತು ಬ್ರಹ್ಮಚರ್ಯಾದ್ಯಾಶ್ರಮಗಳ ಸ್ವರೂಪವನ್ನರುಹಿದೆನು. ಮತ್ತೂ ಯಾವ ವಿಷಯವನ್ನು ಕೇಳಲೆಳಸುವೆಯೋ, ಅದನ್ನು ಹೇಳು ; ಅರುಹುವೆನು. ’

॥ ಸಹಸ್ರಾನೀಕ ಉವಾಚ ॥

ಸ್ನಾತ್ವಾ ವೇಶ್ಮನಿ ದೇವೇಶಮರ್ಚಯೇದಚ್ಯುತಂ ಕ್ಷಿತಿ ।
ತ್ವಯೋಕ್ತಂ ಮಮ ವಿಪ್ರೇಂದ್ರ ತತ್ಕಥಂ ಪೂಜನಂ ಭವೇತ್ ॥ ೨ ॥

ಯೈರ್ಮಂತ್ರೈರರ್ಚ್ಯತೇ ವಿಷ್ಣುಃ ಯೇಷು ಸ್ಥಾನೇಷು ವೈ ಮುನೇ ।
ತಾನಿ ಸ್ಥಾನಾನಿ ತನ್ಮಂತ್ರಂ ತ್ವಮಾಚಕ್ಷ್ವ ಮಹಾಮುನೇ ॥ ೩ ॥

॥ ಶ್ರೀ ಮಾರ್ಕಂಡೇಯ ಉವಾಚ ॥

ಅರ್ಚನಂ ಸಂಪ್ರವಕ್ಷ್ಯಾಮಿ ವಿಷ್ಣೋರಮಿತತೇಜಸಃ ।
ಯತ್ಕೃತ್ವಾ ಮುನಯಃ ಸರ್ವೇ ಪರಂ ನಿರ್ವಾಣಮಾಪ್ನುಯುಃ ॥ ೪ ॥

ಎಂದು ಮಾರ್ಕಂಡೇಯ ಮುನಿಯು ಕೇಳಲು, ಸಹಸ್ರಾನೀಕರಾಯನು ಇಂತು ಕೇಳುತ್ತಾನೆ.

೨-೩. 'ಎಲೈ ಬ್ರಾಹ್ಮಣ ಶ್ರೇಷ್ಠನಾದ ಮಾರ್ಕಂಡೇಯ ಮುನಿಯೇ! ಅಧಿಕಾರಿಯು ಸ್ನಾನಮಾಡಿ ನಾಶರಹಿತನಾದ, ಸಕಲ ದೇವತೆಗಳಿಗೆ ನಿಯಾಮಕ ನಾದ, ಶ್ರೀ ಹರಿಯನ್ನು ಪೂಜಿಸುವುದೆಂದು ನೀವು ಹೇಳಿದಿರಿ. ನನಗೆ ಆ ಹರಿಯ ಪೂಜೆಯು ಹೇಗೆ ಪ್ರಾಪ್ತವಾಗುವುದು? ಯಾವ ಸ್ಥಾನಗಳಲ್ಲಿ ಯಾವ ಮಂತ್ರಗಳಿಂದ ಶ್ರೀ ಮಹಾವಿಷ್ಣುವು ಪೂಜಿಸಲ್ಪಡುವನೋ, ಆ ಸ್ಥಾನಗಳನ್ನೂ, ಆ ಮಂತ್ರವನ್ನೂ ಎಲೈ ಮಹಾಮುನಿಯೇ! ದಯಮಾಡಿ ನನಗೆ ಹೇಳಿರಿ.'

ಎಂದು ಸಹಸ್ರಾನೀಕನು ಪ್ರಶ್ನಿಸಲು, ಶ್ರೀ ಮಾರ್ಕಂಡೇಯ ಮುನಿಯು ಇಂತು ಹೇಳುತ್ತಾನೆ.

೪. 'ಎಲೈ ಸಹಸ್ರಾನೀಕರಾಯನೇ! ಕೇಳು; ಅಪ್ರಾಕೃತಾನಂತತೇಜಃ ಪೂರ್ಣನಾದ ಶ್ರೀ ಮಹಾವಿಷ್ಣುವಿನ ಯಾವ ಪೂಜೆಯನ್ನನುಷ್ಠಿಸಿ, ಮುನಿಗಳೆಲ್ಲರೂ ಉತ್ತಮವಾದ ಮುಕ್ತಿಯನ್ನು ಪಡೆದರೋ, ಆ ಅರ್ಚನೆಯ ಬಗೆಯನ್ನರುಹುವೆನು.

ಅಗ್ನೌ ಕ್ರಿಯಾವತಾಂ ದೇವೋ ಯೋಗಿನಾಂ ಹೃದಯೇ ಹರಿಃ ।
ಪ್ರತಿಮಾಸ್ವಲ್ಪಬುದ್ಧೀನಾಂ ಸರ್ವತ್ರ ವಿದಿತಾತ್ಮನಾಮ್ ॥ ೫ ॥

ಯಜ್ಞಾಗ್ನೌ ಹೃದಯೇ ಸೂರ್ಯೇ ಸ್ಥಂಡಿಲೇ ಪ್ರತಿಮಾಸು ಚ ।
ಏತೇಷು ಚ ಹರೇಃ ಸಮ್ಯಗರ್ಚನಂ ಮುನಿಭಿಃ ಸ್ಮೃತಮ್ ॥ ೬ ॥

ತಸ್ಯ ಸರ್ವಮಯತ್ವಾಚ್ಚ ಸ್ಥಂಡಿಲೇ ಭಾವಿತಾತ್ಮನಃ ।
ಅನುಷ್ಟುಭಸ್ಯ ಸೂಕ್ತಸ್ಯ ವಿಷ್ಣುಸ್ತಸ್ಯ ಚ ದೇವತಾ ॥ ೭ ॥

ಪುರುಷೋ ಯೋ ಜಗದ್ಬೀಜಂ ಋಷಿರ್ನಾರಾಯಣಃ ಸ್ಮೃತಃ ।
ದದ್ಯಾತ್ಪುರುಷಸೂಕ್ತೇನ ಯಃ ಪುಷ್ಪಾಣ್ಯಾಪ ಏವ ಚ ॥ ೮ ॥

---

೫. ಅಪ್ರಾಕೃತಕ್ರೀಡಾದಿಗುಣಶಾಲಿಯಾದ ಶ್ರೀ ಹರಿಯ ಸನ್ನಿಧಾನವು ಯಜ್ಞಾದಿಕರ್ಮಾನುಷ್ಠಾನ ಮಾಡುವವರಿಗೆ ಯಜ್ಞೇಶ್ವರನಲ್ಲಿಯೂ, ಜ್ಞಾನೋಪಾಯವರಿತವರಿಗೆ ಅವರ ಹೃತ್ಪುಂಡರೀಕದಲ್ಲಿಯೂ, ಅಲ್ಪಜ್ಞರಿಗೆ ಪ್ರತೀಕದಲ್ಲಿಯೂ, ಇರುವುದು. (ಎಂದರೆ ಭಗವದುಪಾಸನೆಯು ಮೂರು ವಿಧ. ಕ್ರಿಯಾವಂತರೂ, ಅಲ್ಪಜ್ಞರೂ, ಅಗ್ನ್ಯಾದಿಪ್ರತಿಮೆಗಳಲ್ಲಿ, ಜ್ಞಾನೋಪಾಯವಂತರು ತಮ್ಮ ಹೃದಯದಲ್ಲಿ ಅಪರೋಕ್ಷಜ್ಞಾನಿಗಳು ಎಲ್ಲೆಡೆಗಳಲ್ಲಿ ಶ್ರೀ ಭಗವಂತನ ಸನ್ನಿಧಾನವಿರುವುದೆಂದು ತಿಳಿದು ಪೂಜಿಸುವರು ; ಎಂದು ತಿಳಿಯುವುದು.)

೬. ಯಜ್ಞೇಶ್ವರನಲ್ಲಿಯೂ, ಹೃದಯದಲ್ಲಿಯೂ, ಸೂರ್ಯಬಿಂಬದಲ್ಲಿಯೂ, ಪರಿಷ್ಕೃತವಾದ ಯಜ್ಞಭೂಮಿಯಲ್ಲಿಯೂ, ಪ್ರತಿಮೆಗಳಲ್ಲಿಯೂ, ಈ ಅಧಿಷ್ಠಾನಗಳಲ್ಲಿ ಶ್ರೀ ಹರಿಯ ಪೂಜೆಯು ಚೆನ್ನಾದುದೆಂದು ಮುನಿಗಳಿಂದ ಹೇಳಲ್ಪಟ್ಟಿರುತ್ತದೆ.

೭. ಪರಿಷ್ಕೃತವಾದ ಭೂಮಿಯಲ್ಲಿ ಚಿಂತಿತವಾದ ಸ್ವರೂಪವುಳ್ಳ, ಆ ಭಗವಂತನು ಸರ್ವಾತ್ಮಕನಾದುದರಿಂದ ಆ ಅನುಷ್ಟುಭ ಛಂದಸ್ಸಿನ ಪುರುಷಸೂಕ್ತಕ್ಕೆ ಶ್ರೀ ಮಹಾವಿಷ್ಣುವೇ ದೇವತೆಯು.

೮-೯. ಯಾವ ಪೂರ್ಣಸುಖರೂಪನಾದ ಶ್ರೀ ಹರಿಯು ಜಗತ್ತಿಗೆ ಕಾರಣನೋ, ಆ ಶ್ರೀ ನಾರಾಯಣನೇ ಆ ಮಂತ್ರದ್ರಷ್ಟೃವೆಂದು ಹೇಳಿರುತ್ತದೆ. ಯಾವ ಭಕ್ತನು ಶ್ರೀ ಪುರುಷಸೂಕ್ತದ ಋಕ್ಕುಗಳಿಂದ ಶ್ರೀ ಹರಿಗೆ ಹೂಗಳನ್ನೂ,

ಅರ್ಚಿತಂ ಸ್ಯಾಜ್ಜಗತ್ಸರ್ವಂ ತೇನ ವೈ ಸಚರಾಚರಮ್ ।
ಆದ್ಯಯಾವಾಹಯೇದ್ದೇವಮೃಚಾ ತು ಪುರುಷೋತ್ತಮಮ್ ॥ ೯ ॥

ದ್ವಿತೀಯಯಾಸನಂ ದದ್ಯಾತ್ಪಾದ್ಯಂ ದದ್ಯಾತ್ತೃತೀಯಯಾ ।
ಚತುರ್ಥ್ಯಾರ್ಘ್ಯಃ ಪ್ರದಾತವ್ಯಃ ಪಂಚಮ್ಯಾಚಮನೀಯಕಮ್ ॥ ೧೦ ॥

ಷಷ್ಠ್ಯಾ ಸ್ನಾನಂ ಪ್ರಕುರ್ವೀತ ಸಪ್ತಮ್ಯಾ ವಸ್ತ್ರಮೇವ ಚ ।
ಯಜ್ಞೋಪವೀತಮಷ್ಟಮ್ಯಾ ನವಮ್ಯಾ ಗಂಧಮೇವ ಚ ॥ ೧೧ ॥

ಜಲವನ್ನೂ ಅರ್ಪಿಸುವನೋ, ಅವನಿಂದ ಚರಾಚರಾತ್ಮಕವಾದ ಜಗತ್ತಿಗೆಲ್ಲಾ ನಿಯಾಮಕನಾದ ಶ್ರೀ ಹರಿಯು ಪೂಜಿತನಾಗುವನು. ಪುರುಷಸೂಕ್ತದ ಮೊದಲನೆಯ 'ಸಹಸ್ರಶೀರ್ಷಾ' ಇತ್ಯಾದಿ ಋಕ್ಕಿನಿಂದ ಕ್ಷರಾಕ್ಷರಗಳಿಂದ ಮಿಗಿಲಾಗಿ ಪುರುಷೋತ್ತಮನಾದ ಶ್ರೀ ಮಹಾವಿಷ್ಣುವನ್ನು ಆವಾಹನಮಾಡುವುದು.

೧೦. ಎರಡನೆಯದಾದ 'ಪುರುಷ ಏವೇದಂ' ಇತ್ಯಾದಿ ಮಂತ್ರದಿಂದ ಆಸನವನ್ನರ್ಪಿಸುವುದು. ಮೂರನೆಯದಾದ 'ಏತಾವಾನಸ್ಯ' ಇತ್ಯಾದಿ ಮಂತ್ರದಿಂದ ಪಾದ್ಯವನ್ನರ್ಪಿಸುವುದು; ನಾಲ್ಕನೆಯದಾದ 'ತ್ರಿಪಾದೂರ್ಧ್ವಂ' ಇತ್ಯಾದಿ ಮಂತ್ರದಿಂದ ಅರ್ಘ್ಯವನ್ನರ್ಪಿಸುವುದು; ಐದನೆಯದಾದ 'ತಸ್ಮಾದ್ವಿರಾಡಜಾಯತ' ಇತ್ಯಾದಿ ಮಂತ್ರದಿಂದ ಆಚಮನೀಯವನ್ನು ಅರ್ಪಿಸುವುದು.

೧೧. ಆರನೆಯದಾದ 'ಯತ್ಪುರುಷೇಣ' ಇತ್ಯಾದಿ ಮಂತ್ರದಿಂದ ಸ್ನಾನ ಮಾಡಿಸುವುದು; ಏಳನೆಯದಾದ 'ತಂ ಯಜ್ಞಂ' ಇತ್ಯಾದಿ ಮಂತ್ರದಿಂದ ವಸ್ತ್ರವನ್ನರ್ಪಿಸುವುದು; ಎಂಟನೆಯದಾದ, 'ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ' ಇತ್ಯಾದಿ ಮಂತ್ರದಿಂದ ಯಜ್ಞೋಪವೀತವನ್ನೂ ಒಂಬತ್ತನೆಯದಾದ 'ತಸ್ಮಾದ್ಯಜ್ಞಾತ್ಸರ್ವಹುತಃ, ಋಚಃ' ಇತ್ಯಾದಿ ಮಂತ್ರದಿಂದ ಗಂಧವನ್ನೂ ಸಮರ್ಪಿಸುವುದು.

ದಶಮ್ಯಾ ಪುಷ್ಪದಾನಂ ಸ್ಯಾದೇಕಾದಶ್ಯಾ ಚ ಧೂಪಕಮ್ ।
ದ್ವಾದಶ್ಯಾ ಚ ತಥಾ ದೀಪಂ ತ್ರಯೋದಶ್ಯಾರ್ಚನಂ ತಥಾ ॥ ೧೨ ॥

ಚತುರ್ದಶ್ಯಾ ಸ್ತುತಿಂ ಕೃತ್ವಾ ಪಂಚದಶ್ಯಾ ಪ್ರದಕ್ಷಿಣಮ್ ।
ಷೋಡಶ್ಯೋದ್ವಾಸನಂ ಕುರ್ಯಾಚ್ಛೇಷಕರ್ಮಣಿ ಪೂರ್ವವತ್ ॥ ೧೩ ॥

ಸ್ನಾನಂ ವಸ್ತ್ರಂ ಚ ನೈವೇದ್ಯಂ ದದ್ಯಾದಾಚಮನೀಯಕಮ್ ।
ಷಣ್ಮಾಸಾತ್ಸಿದ್ಧಿಮಾಪ್ನೋತಿ ದೇವದೇವಂ ಸಮರ್ಚಯನ್ ॥ ೧೪ ॥

ಸಂವತ್ಸರೇಣ ತೇನೈವ ಸಾಯುಜ್ಯಮಧಿಗಚ್ಛತಿ ।
ಹವಿಷಾಗ್ನೌ ಜಲೇ ಪುಷ್ಪೈಃ ಧ್ಯಾನೇನ ಹೃದಯೇ ಹರಿಮ್ ॥ ೧೫ ॥

೧೨-೧೩. ಹತ್ತನೆಯದಾದ "ತಸ್ಮಾದಶ್ವಾ" ಇತ್ಯಾದಿ ಮಂತ್ರದಿಂದ ಹೂವನ್ನರ್ಪಿಸುವುದು; ಹನ್ನೊಂದನೆಯದಾದ "ಯತ್ಪುರುಷಂ" ಇತ್ಯಾದಿ ಮಂತ್ರದಿಂದ ಧೂಪವನ್ನೂ, ಹನ್ನೆರಡನೆಯದಾದ "ಬ್ರಾಹ್ಮಣೋಸ್ಯ" ಇತ್ಯಾದಿ ಮಂತ್ರದಿಂದ ದೀಪವನ್ನೂ, ಹದಿಮೂರನೆಯದಾದ "ಚಂದ್ರಮಾ" ಇತ್ಯಾದಿ ಮಂತ್ರದಿಂದ ಅರ್ಚನೆಯನ್ನೂ, ಹದಿನಾಲ್ಕನೆಯದಾದ "ನಾಭ್ಯಾ" ಇತ್ಯಾದಿ ಮಂತ್ರದಿಂದ ಸ್ತೋತ್ರವನ್ನೂ, ಹದಿನಯ್ದನೆಯದಾದ "ಸಪ್ತಾಸ್ಯಾಸನ್" ಇತ್ಯಾದಿ ಮಂತ್ರದಿಂದ ಪ್ರದಕ್ಷಿಣೆಯನ್ನೂ, ಹದಿನಾರನೆಯದಾದ "ಯಜ್ಞೇನ" ಇತ್ಯಾದಿ ಮಂತ್ರದಿಂದ ಉದ್ವಾಸನವನ್ನೂ ಮಾಡುವುದು; ಉಳಿದ ಕರ್ಮದಲ್ಲಿಯೂ, ಮೊದಲಿನಂತೆಯೇ ಎಸಗುವುದು.

೧೪. ಸ್ನಾನ ವಸ್ತ್ರ ನೈವೇದ್ಯಾಚಮನೀಯಗಳನ್ನು ಅರ್ಪಿಸಿ, ಸರ್ವ ದೇವೋತ್ತಮನಾದ ಶ್ರೀ ಹರಿಯನ್ನು ಪೂಜಿಸುತ್ತಾ, ಅಧಿಕಾರಿಯು ಆರು ತಿಂಗಳಿಂದಲೇ ಫಲವನ್ನು ಹೊಂದುತ್ತಾನೆ.

೧೫-೧೬. ಒಂದು ವರ್ಷಕಾಲಪರ್ಯಂತ ಅನುಷ್ಠಿಸಿದ ಶ್ರೀ ಹರಿಯ ಅರ್ಚನದಿಂದಲೇ ಸಾಯುಜ್ಯರೂಪವಾದ ಮುಕ್ತಿಯನ್ನೆಯ್ದುವನು. ಅಧಿಕಾರಿಗಳಾದ ಜ್ಞಾನಿಗಳು ಸೂರ್ಯಮಂಡಲದಲ್ಲಿರುವ ಭಗವಂತನನ್ನು ಜಪ ಮಾಡುವುದ

ಅರ್ಚಂತಿ ಸೂರಯೋ ನಿತ್ಯಂ ಜಪೇನ ರವಿಮಂಡಲೇ ।
ಆದಿತ್ಯಮಂಡಲೇ ದಿವ್ಯಂ ದೇವದೇವಮನಾಮಯಮ್ ।
ಶಂಖಚಕ್ರಗದಾಪಾಣಿಂ ಧ್ಯಾತ್ವಾ ವಿಷ್ಣುಮುಪಾಸತೇ ॥ ೧೬ ॥

ಧ್ಯೇಯಸ್ಸದಾ ಸವಿತೃಮಂಡಮಧ್ಯವರ್ತೀ
ನಾರಾಯಣಸ್ಸರಸಿಜಾಸನಸನ್ನಿವಿಷ್ಟಃ ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥ ೧೭ ॥

ಏತತ್ಪಠನ್ ಕೇವಲಮೇವ ಸೂಕ್ತಂ
ದಿನೇ ದಿನೇ ಭಾವಿತವಿಷ್ಣುಬುದ್ಧಿಃ ।
ಸ ಸರ್ವಪಾಪಂ ಪ್ರವಿಹಾಯ ವೈಷ್ಣವಂ
ಪದಂ ಪ್ರಯಾತ್ಯಚ್ಯುತತುಷ್ಟಿಕೃನ್ನರಃ ॥ ೧೮ ॥

ರಿಂದ ಸೇವಿಸುತ್ತಾರೆ; ಸೂರ್ಯಮಂಡಲದ ಅಧಿಷ್ಠಾನದಲ್ಲಿ, ಶ್ರೇಷ್ಠನೂ, ಸಕಲ ದೇವತೆಗಳಿಗೂ ಸ್ವಾಮಿಯೂ, ರೋಗಾದಿ ದೋಷಶೂನ್ಯನೂ, ಶಂಖಚಕ್ರಗದಾಪಾಣಿಯೂ ಆದ, ಸರ್ವತ್ರ ವ್ಯಾಪ್ತನಾದ, ಶ್ರೀ ಮಹಾವಿಷ್ಣುವನ್ನು ಸೇವಿಸುತ್ತಾರೆ.

೧೭. ಅಧಿಕಾರಿಗಳು ಯಾವಾಗಲೂ ಸೂರ್ಯಮಂಡಲದ ಮಧ್ಯದಲ್ಲಿರುವವನೂ, ಪದ್ಮರೂಪವಾದ ಆಸನದಲ್ಲಿ ಕುಳಿತಿರುವವನೂ. ಬಾಹುಪೂರವುಳ್ಳವನೂ, ಮೊಸಳೆಯ ಆಕಾರದ ಕರ್ಣಾಭರಣವುಳ್ಳವನೂ, ಕಿರೀಟವನ್ನು ಧರಿಸಿರುವವನೂ, ವೈಜಯಂತೀ ಮಾಲೆಯನ್ನು ಧರಿಸಿರುವವನೂ, ಸುವರ್ಣಮಯವಾದ, ಅಪ್ರಾಕೃತ ಪೂರ್ಣ ಸುಖಾತ್ಮಕವಾದ ಶರೀರವುಳ್ಳವನೂ ಶಂಖಚಕ್ರಧಾರಿಯೂ ಆದ ಶ್ರೀಮನ್ನಾರಾಯಣನನ್ನು ಧ್ಯಾನಮಾಡುವುದು.

೧೮. ಈ 'ಧ್ಯೇಯಃ ಸದಾ' ಮುಂತಾದ ಶ್ಲೋಕವನ್ನೇ ಅರ್ಥಾನುಸಂಧಾನವುಳ್ಳವನಾಗಿ, ಪ್ರತಿದಿನದಲ್ಲಿಯೂ ಶ್ರೀ ಮಹಾವಿಷ್ಣುವನ್ನೇ ಚಿಂತಿಸುವ ಬುದ್ಧಿಯುಳ್ಳವನಾಗಿ, ಮಾನವನು ಪಠಿಸುತ್ತಾ, ತನ್ನ ಪಾಪಗಳನ್ನೂ ಕಳೆದುಕೊಂಡು, ಶ್ರೀಮದಚ್ಯುತನಿಗೆ ಸಂತೋಷವನ್ನುಂಟುಮಾಡುವವನಾಗಿ, ಶ್ರೀ ಮಹಾವಿಷ್ಣುವಿರುವ ಲೋಕವನ್ನೈದುವನು.

ಪತ್ರೇಷು ಪುಷ್ಪೇಷು ಫಲೇಷು ತೋಯೇ-
ಷ್ವಕ್ರೀತಲಭ್ಯೇಷು ಸದೈವ ಸತ್ಸು ।
ಭಕ್ತ್ಯೈಕಲಭ್ಯೇ ಪುರುಷೇ ಪುರಾಣೇ
ಮುಕ್ತ್ಯೈ ಕಿಮರ್ಥಂ ಕ್ರಿಯತೇ ನ ಯತ್ನಃ ॥ ೧೯ ॥

ಇತ್ಯೇವಮುಕ್ತಃ ಪುರುಷಸ್ಯ ವಿಷ್ಣೋ-
ರರ್ಚಾವಿಧಿಸ್ತೇಽದ್ಯ ಮಯಾ ನೃಪೇಂದ್ರ ।
ಅನೇನ ನಿತ್ಯಂ ಕುರು ವಿಷ್ಣುಪೂಜಾಂ
ಪ್ರಾಪ್ತುಂ ತದಿಷ್ಟಂ ಯದಿ ವೈಷ್ಣವಂ ಪದಮ್ ॥ ೨೦ ॥

ಇತಿ ಶ್ರೀ ನರಸಿಂಹಪುರಾಣೇ ಶ್ರೀ ವಿಷ್ಣೋರರ್ಚಾವಿಧಿರ್ನಾಮ
ದ್ವಿಷಷ್ಟಿತಮೋಽಧ್ಯಾಯಃ

---

೧೯. ಕ್ರಯಕ್ಕೆ ತೆಗೆದುಕೊಳ್ಳದೆ ಸಿಕ್ಕುವ, ತುಲಸಿಯೇ ಮುಂತಾದ ಪತ್ರೆಗಳು, ಮಲ್ಲಿಗೆ ಮುಂತಾದ ಹೂಗಳು, ಕದಳೀ ಮುಂತಾದ ಫಲಗಳು, ಮತ್ತು ಗಂಗಾದಿ ತೀರ್ಥಗಳ ನೀರು–ಇವು ಯಾವಾಗಲೂ ಇರುತ್ತಿರಲು, ಕೇವಲ ಮಾಹಾತ್ಮ್ಯಜ್ಞಾನ ಪೂರ್ವಕ ಸುದೃಢಸ್ನೇಹರೂಪವಾದ ಭಕ್ತಿಯಿಂದಲೇ ಹೊಂದಲು ಶಕ್ಯನೂ, ಪೂರ್ಣಸುಖನೂ, ಅನಾದಿಯೂ ಆದ ಭಗವಂತನಸೇವೆಯಲ್ಲಿ ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷದ ಸಲುವಾಗಿ ಏತಕ್ಕೆ ಪ್ರಯತ್ನವನ್ನೆಸಗುವುದಿಲ್ಲ? (ಎಂದರೆ ಅಧಿಕಾರಿಗಳು ಅವಶ್ಯವಾಗಿ ಶ್ರೀ ಪರಮಾತ್ಮನಲ್ಲಿ ಭಕ್ತಿಯನ್ನು ಮಾಡತಕ್ಕದು.)

೨೦. ಎಲೈ ರಾಜಶ್ರೇಷ್ಠನಾದ ಶತಾನೀಕ ರಾಯನೇ ! ಇಂತು ನಿನಗೆ ಪೂರ್ಣಸುಖನಾದ ಶ್ರೀ ಮಹಾವಿಷ್ಣುವಿನ ಪೂಜೆಯ ಕಟ್ಟಳೆಯನ್ನು ಈಗ ಹೇಳಿದೆನು. ನಿನಗೆ ಶ್ರೀ ಮಹಾವಿಷ್ಣುವಿನ ಲೋಕವನ್ನು ಹೊಂದಬೇಕೆಂಬ ಅಪೇಕ್ಷೆಯಿದ್ದಲ್ಲಿ ಈ ಅರ್ಚಾವಿಧಿಯಿಂದ ನಿರಂತರದಲ್ಲಿಯೂ ಶ್ರೀಮಹಾವಿಷ್ಣುವಿನ ಪೂಜೆಯನ್ನು ಮಾಡು.' ಎಂದು ಶ್ರೀಮಾರ್ಕಂಡೇಯ ಮುನಿಯು ಸಹಸ್ರಾನೀಕರಾಯನಿಗೆ ಹೇಳಿದುದನ್ನು ಸೂತರು ಭಾರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶ್ರೀ ವಿಷ್ಣುವಿನ
ಅರ್ಚಾವಿಧಿಯೆಂಬ ಅರುವತ್ತೆರಡನೆಯ ಅಧ್ಯಾಯವು ಮುಗಿದುದು.

ಅರುವತ್ತೆರಡನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ, 'ಮಾರ್ಕಂಡೇಯಮುನಿಯು ಸಹಸ್ರಾನೀಕರಾಯನಿಗೆ ಅವನ ಇಚ್ಛೆಯಂತೆ ಶ್ರೀಹರಿಯ ಪೂಜಾಕ್ರಮವನ್ನು ನಿರೂಪಿಸತೊಡಗಿ ಅಜ್ಞರು ಶ್ರೀಹರಿಯನ್ನು ಅಗ್ನಿ, ಪ್ರತಿಮಾ ಮೊದಲಾದ ಅಧಿಷ್ಠಾನದಲ್ಲಿಯೂ, ಯೋಗಿಗಳು ಬಿಂಬರೂಪನಾಗಿರುವ ಶ್ರೀಹರಿಗೆ ಅಧಿಷ್ಠಾನವಾದ ತಮ್ಮ ಹೃದಯದಲ್ಲಿಯೂ, ಜ್ಞಾನಿಗಳು ಶ್ರೀಹರಿಯು ಎಲ್ಲೆಡೆಗಳಲ್ಲಿಯೂ ಇರುವನೆಂದು ಸರ್ವವಸ್ತ್ವಧಿಷ್ಠಾನಗಳಲ್ಲಿಯೂ ಪೂಜಿಸುವರು.

ಅಜ್ಞರು ಅಗ್ನ್ಯಾದಿ ಪ್ರತಿಮಾಗಳಲ್ಲಿ ಪೂಜಿಸುವ ಕ್ರಮವನ್ನು ಆವಾಹನಾದ್ಯುದ್ವಾಸನಾಂತವಾಗಿ ಪುರುಷಸೂಕ್ತ ಮಂತ್ರಾದಿ ಕ್ರಮದಿಂದ ನಿರೂಪಿಸಿ, ಅಧಿಕಾರಿಯು ಭಕ್ತಿಯಿಂದ ಭಗವಂತನನ್ನು ಸೇವಿಸಿ, ಮುಕ್ತಿಯನ್ನೈಯ್ದುವನೆಂದು ಅರ್ಚಾವಿಧಿಯನ್ನು ಸಂಗ್ರಹವಾಗಿ ನಿರೂಪಿಸಿದುದನ್ನು ಶ್ರಿ ಸೂತರು ಭಾರದ್ವಾಜಾದಿ ಮುನಿಗಳಿಗೆ ನಿರೂಪಿಸಿರುತ್ತಾರೆ

ಇಂತು ಅರುವತ್ತೆರಡನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಮಂತ್ರತೀರ್ಥ ಮಹಿಮಾದಿ ವರ್ಣನಮ್.

ತ್ರಿಷಷ್ಟಿತಮೋಽಧ್ಯಾಯಃ

ಅಥ ಅಷ್ಟಾಕ್ಷರಮಂತ್ರ ಮಹಿಮಾ ನಿರೂಪಣಮ್.

॥ ಸಹಸ್ರಾನೀಕ ಉವಾಚ ॥

ಸತ್ಯಮುಕ್ತಂ ತ್ವಯಾ ಬ್ರಹ್ಮನ್ ವೈದಿಕಃ ಪರಮೋ ವಿಧಿಃ ।
ವಿಷ್ಣೋರ್ದೇವಾಧಿದೇವಸ್ಯ ಪೂಜನಂ ಪ್ರತಿ ಮೇಽಧುನಾ ॥ ೧ ॥

ಮಂತ್ರ ತೀರ್ಥ ಮಹಿಮಾದಿ ವರ್ಣನೆಯು

ಅರುವತ್ತುಮೂರನೆಯ ಅಧ್ಯಾಯವು.

ಇನ್ನು ಅಷ್ಟಾಕ್ಷರ ಮಂತ್ರ ಮಹಿಮಾನಿರೂಪಣವು.

ಸಹಸ್ರಾನೀಕರಾಜನು ಶ್ರೀಮಾರ್ಕಂಡೇಯಮುನಿಗೆ ಇಂತು ಹೇಳುತ್ತಾನೆ:-

೧. ' ಎಲೈ ಬ್ರಹ್ಮಜ್ಞಾನಿಯಾದ ಮಾರ್ಕಂಡೇಯಮುನಿಯೇ ! ಈಗ ನೀನು ಸಮಸ್ತ ದೇವತೆಗಳಿಗೂ ಸ್ವಾಮಿಯಾದ, ಕ್ರೀಡಾದಿಗುಣವಿಶಿಷ್ಟನಾದ, ಶ್ರೀಮಹಾವಿಷ್ಣುವಿನ ಪೂಜೆಯ ವಿಷಯವನ್ನು ಕುರಿತು ಶ್ರೇಷ್ಠವಾದ, ವೇದೋಕ್ತವಾದ ನಿಯಮವನ್ನು ಸತ್ಯವಾಗಿ ಹೇಳಿದೆ.

ಅನೇನ ವಿಧಿನಾ ಬ್ರಹ್ಮನ್ ಪೂಜ್ಯತೇ ಮಧುಸೂದನಃ ।
ವೇದಜ್ಞೈರೇವ ನಾನ್ಯೈಸ್ತು ತಸ್ಮಾತ್ಸರ್ವಹಿತಂ ವದ ॥ ೨ ॥

॥ ಶ್ರೀ ಮಾರ್ಕಂಡೇಯ ಉವಾಚ ॥

ಅಷ್ಟಾಕ್ಷರೇಣ ದೇವೇಶಂ ನರಸಿಂಹಮನಾಮಯಮ್ ।
ಗಂಧಪುಷ್ಪಾದಿಭಿರ್ನಿತ್ಯಮರ್ಚಯೇದಚ್ಯುತಂ ನರಃ ॥ ೩ ॥

ರಾಜನ್ನಷ್ಟಾಕ್ಷರೋ ಮಂತ್ರಃ ಸರ್ವಪಾಪಹರಃ ಪರಃ ।
ಸಮಸ್ತಯಜ್ಞಫಲದಃ ಸರ್ವಶಾಂತಿಕರಃ ಶುಭಃ ॥ ೪ ॥

॥ ಓಂ ನಮೋ ನಾರಾಯಣಾಯ ॥

---

೨. ವೇದವನ್ನರಿತವರು ಮಾತ್ರ ಈ ನಿಯಮದಿಂದ ಮಧುವೆಂಬ ಅಸುರನನ್ನು ಸಂಹರಿಸಿದ, ಶ್ರೀ ವಿಷ್ಣುವನ್ನು ಪೂಜಿಸುತ್ತಾರೆಯೇ ಹೊರತು, ಇತರರಲ್ಲವು. ಆದುದರಿಂದ ಸರ್ವರಿಗೂ ಇಷ್ಟವಾದ ಪೂಜಾವಿಧಿಯನ್ನು ಹೇಳು;' ಎಂದು ಸಹಸ್ರಾನೀಕರಾಜನು ಕೇಳಲು,

ಮಾರ್ಕಂಡೇಯ ಮುನಿಯು ಇಂತು ಹೇಳುತ್ತಾನೆ.

೩. 'ಅಧಿಕಾರಿಯಾದ ಮಾನವನು ರೋಗಾದಿದೋಷರಹಿತನಾದ, ದೇವೋತ್ತಮನಾದ, ಶ್ರೀ ನರಹರಿಯನ್ನು ('ಓಂ ನಮೋ ನಾರಾಯಣಾಯ' ಎಂಬ) ಅಷ್ಟಾಕ್ಷರ ಮಂತ್ರದಿಂದ ಗಂಧಪುಷ್ಪಾದಿ ಪೂಜಾಸಾಧನಗಳಿಂದ ನಿತ್ಯದಲ್ಲಿಯೂ ಪೂಜೆಮಾಡುವುದು.

೪. ಎಲೈ ಶತಾನೀಕರಾಯನೇ! ಕೇಳು; 'ಓಂ ನಮೋ ನಾರಾಣಾಯ' ಎಂಬ ಈ ಅಷ್ಟಾಕ್ಷರ ಮಂತ್ರವು ಸಕಲದುರಿತ ನಾಶಕವೂ, ಉತ್ತಮವೂ, ಸಕಲ ಯಜ್ಞಫಲವನ್ನೀವುದೂ, ಸಕಲಶಾಂತಿಯನ್ನೆಸಗುವುದೂ, ಮಂಗಳಕರವೂ ಆದ ಮಂತ್ರವು.

ಗಂಧಪುಷ್ಪಾದಿಸಕಲಮನೇನೈವ ನಿವೇದಯೇತ್ ।
ಅನೇನಾಭ್ಯರ್ಚಿತೋ ದೇವಃ ಪ್ರೀತೋ ಭವತಿ ತತ್ಕ್ಷಣಾತ್ ॥ ೫ ॥

ಕಿಂ ತಸ್ಯ ಬಹುಭಿರ್ಮಂತ್ರೈಃ ಕಿಂ ತಸ್ಯ ಬಹುಭಿರ್ವ್ರತೈಃ ।
ಓಂ ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೬ ॥

ಇದಂ ಮಂತ್ರಂ ಜಪೇದ್ಯಸ್ತು ಶುಚಿರ್ಭೂತ್ವಾ ಸಮಾಹಿತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೭ ॥

" ಸರ್ವತೀರ್ಥಫಲಂ ಹ್ಯೇತತ್ಸರ್ವತೀರ್ಥವರಂ ನೃಪ ।
ಹರೇರರ್ಚನಮವ್ಯಗ್ರಂ ಸರ್ವಯಜ್ಞಫಲಂ ನೃಪ । "

---

೫. ಶ್ರೀ ಮಹಾವಿಷ್ಣುವಿಗೆ ಶ್ರೀ ಗಂಧ, ಹೂ ಇವೇ ಮೊದಲಾದ ಎಲ್ಲ ಪದಾರ್ಥಗಳನ್ನೂ ಈ ಮಂತ್ರದಿಂದಲೇ ಅರ್ಪಿಸುವುದು. ಈ ಮಂತ್ರದಿಂದ ಸೇವಿಸಿದ, ಕ್ರೀಡಾದಿಗುಣ ಸಂಪನ್ನನಾದ ಶ್ರೀ ಮಹಾವಿಷ್ಣುವು ಆ ಕೂಡಲೇ ಭಕ್ತರ ವಿಷಯದಲ್ಲಿ ಪ್ರಸನ್ನನಾಗುತ್ತಾನೆ.

೬. ಆ ಪರಮಾತ್ಮನ ಪ್ರಸಾದಕ್ಕೆ ಅನೇಕ ಮಂತ್ರಗಳಿಂದೇನು? ಅನೇಕ ವ್ರತಗಳಿಂದ ತಾನೇ ಏನು? (ಯಾವುದನ್ನೂ ಅನುಷ್ಠಿಸಬೇಕಾಗಿಲ್ಲವು.) 'ಓಂ ನಮೋ ನಾರಾಯಣಾಯ' ಎಂಬೀ ಅಷ್ಟಾಕ್ಷರ ಮಂತ್ರವೇ ಸಕಲ ಪುರುಷಾರ್ಥಗಳಿಗೂ ಸಾಧಕವಾಗಿರುವುದು.

೭. ಯಾವ ಮಾನವನು ಶುಚಿರ್ಭೂತನೂ, ಶಾಂತಚಿತ್ತನೂ ಆದವನಾಗಿ, ಈ ಅಷ್ಟಾಕ್ಷರ ಮಂತ್ರವನ್ನು ಜಪಿಸುತ್ತಾನೆಯೋ, ಅವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ, ಶ್ರೀ ಮಹಾವಿಷ್ಣುವಿನ ಸಾಯುಜ್ಯವನ್ನೈದುವನು.

೮. "ಎಲೈ ಸಹಸ್ರಾನೀಕ ರಾಜನೇ! ಕೇಳು; ಮನಃಪೂರ್ವಕವೂ, ನಿಶ್ಚಲವೂ ಆದ ಶ್ರೀಮಹಾವಿಷ್ಣುವಿನ ಪೂಜೆಯು ತೀರ್ಥಗಳಲ್ಲೆಲ್ಲಾ ಮಿಂದ ಫಲವನ್ನೂ, ಸಕಲತೀರ್ಥಗಳ ಹಿರಿಮೆಯನ್ನೂ, ಸಕಲಯಜ್ಞಗಳ ಫಲವನ್ನೂ

ತಸ್ಮಾತ್ಕುರು ನೃಪಶ್ರೇಷ್ಠ ಪ್ರತಿಮಾದಿಷು ಚಾರ್ಚನಮ್ ।
ದಾನಾನಿ ವಿಪ್ರಮುಖ್ಯೇಭ್ಯಃ ಪ್ರಯಚ್ಛ ವಿಧಿನಾ ನೃಪ ॥ ೮ ॥

ಏವಂ ಕೃತೇ ನೃಪಶ್ರೇಷ್ಠ ನರಸಿಂಹಪ್ರಸಾದತಃ ।
ಪ್ರಾಪ್ನೋತಿ ವೈಷ್ಣವಂ ತೇಜೋ ಯತ್ಕಾಂಕ್ಷಂತಿ ಮುಮುಕ್ಷವಃ ॥ ೯ ॥

ಪುರಾ ಪುರಂದರೋ ರಾಜನ್ ಸ್ತ್ರೀತ್ವಂ ಪ್ರಾಪ್ತೋಽಪಧರ್ಮತಃ ।
ತೃಣಬಿಂದುಮುನೇಃ ಶಾಪಾನ್ಮುಕ್ತೋಽಹ್ಯಷ್ಟಾಕ್ಷರಾಜ್ಜಪಾತ್ ॥ ೧೦ ॥

॥ ಸಹಸ್ರಾನೀಕ ಉವಾಚ ॥

ಏತತ್ಕಥಯ ಭೂದೇವ ದೇವೇಂದ್ರಸ್ಯಾಘಮೋಚನಮ್ ।
ಕೋಽಪಧರ್ಮಃ ಕಥಂ ಸ್ತ್ರೀತ್ವಂ ಪ್ರಾಪ್ತೋ ಮೇ ವದ ಕಾರಣಮ್ ॥ ೧೧ ॥

ಉಂಟುಮಾಡುವುದು. ಎಲೈ ರಾಜನೇ! ಆದುದರಿಂದ ಶ್ರೀ ಮಹಾವಿಷ್ಣುವಿನ ಪ್ರತಿಮಾದಿಗಳಲ್ಲಿ ಪೂಜೆಯನ್ನುಮಾಡು; ಶ್ರೇಷ್ಠರಾದ ಬ್ರಾಹ್ಮಣರಿಗೆ ನಿಯಮದಿಂದ ದಾನಗಳನ್ನು ಕೊಡು.

೯. ಎಲೈ ನೃಪಶ್ರೇಷ್ಠನೇ! ಅಧಿಕಾರಿಯು ಇಂತೆಸಗಿದರೆ, ಶ್ರೀ ನರಸಿಂಹನ (ಪ್ರಸಾದ) ಅನುಗ್ರಹದಿಂದ ಮೋಕ್ಷಾರ್ಥಿಗಳು ಬಯಸುವ ವೈಷ್ಣವ ತೇಜವನ್ನು ಹೊಂದುತ್ತಾನೆ.

೧೦. ಎಲೈ ರಾಜನೇ! ಕೇಳು; ಪೂರ್ವದಲ್ಲಿ ದೇವೇಂದ್ರನೂ ಧರ್ಮಭ್ರಷ್ಟನಾದುದರಿಂದ, ತೃಣಬಿಂದುವೆಂಬ ಮುನಿಯ ಶಾಪದಿಂದ ಸ್ತ್ರೀತ್ವವನ್ನು ಹೊಂದಿದವನು ಈ ಅಷ್ಟಾಕ್ಷರಮಂತ್ರದ ಜಪದಿಂದ ಆ ಶಾಪದಿಂದ ಬಿಡುಗಡೆ ಹೊಂದಿದನು;'

ಎಂದು ಮಾರ್ಕಂಡೇಯನು ಹೇಳಲು,

ಸಹಸ್ರಾನೀಕರಾಜನು ಪ್ರಶ್ನಿಸುತ್ತಾನೆ:-

೧೧. 'ಎಲೈ ಮಾರ್ಕಂಡೇಯ ಮುನಿಯೇ! ದೇವೇಂದ್ರನು ಧರ್ಮಭ್ರಷ್ಟನಾದುದು ಹೇಗೆ? ಸ್ತ್ರೀತ್ವವನ್ನು ಹೇಗೆ ಹೊಂದಿದನು? ಅದಕ್ಕೆ ಕಾರಣವೇನು? ಈ ಪಾಪದಿಂದ ದೇವೇಂದ್ರನು ಹೇಗೆ ಮುಕ್ತನಾದನು? ಇದನ್ನರುಹುವುದು.'

॥ ಶ್ರೀ ಮಾರ್ಕಂಡೇಯ ಉವಾಚ ॥

ರಾಜೇಂದ್ರ ಮಹದಾಖ್ಯಾನಂ ಶೃಣು ಕೌತೂಹಲಾನ್ವಿತಮ್ ।
ವಿಷ್ಣುಭಕ್ತಿಪ್ರಜನನಂ ಶೃಣ್ವತಾಂ ಪಠತಾಮಿದಮ್ ॥ ೧೨ ॥

ಪುರಾ ಪುರಂದರಸ್ಯೈವ ದೇವರಾಜ್ಯಂ ಪ್ರಕುರ್ವತಃ ।
ವೈರಾಗ್ಯಮ್ಯಾಪಿ ಜನನಂ ಸಂಭೂತಂ ಬಾಹ್ಯವಸ್ತುಷು ॥ ೧೩ ॥

ಇಂದ್ರಸ್ತದಾಭೂದ್ವಿಷಮಸ್ವಭಾವೋ
ರಾಜ್ಯೇಷು ಭೋಗೇಷ್ವಪಿ ಸೋಽಪ್ಯಚಿಂತಯತ್ ।
ಧ್ರುವಂ ವಿರಾಗೀಕೃತಮಾನಸಾನಾಂ
ಸ್ವರ್ಗಸ್ಯ ರಾಜ್ಯಂ ನ ಚ ಕಿಂಚಿದೇವ ॥ ೧೪ ॥

ಎಂದು ಕೇಳಲು, ಮಾರ್ಕಂಡೇಯ ಮುನಿಯು ಇಂತು ಹೇಳುತ್ತಾನೆ

೧೨. 'ಎಲೈ ರಾಜೇಂದ್ರನೇ! ಕೇಳು; ಈ ಕಥೆಯು ಬಹು ದೊಡ್ಡದು; ಕುತೂಹಲದಿಂದ ಕೂಡಿದವನಾಗಿ ಕೇಳು; ಈ ಕಥೆಯು ಕೇಳುವವರಿಗೂ, ಓದುವವರಿಗೂ ಶ್ರೀ ಮಹಾವಿಷ್ಣುವಿನಲ್ಲಿ ನಿರತಿಶಯ ಭಕ್ತಿಯನ್ನುಂಟುಮಾಡುವುದು.

೧೩. ಪೂರ್ವದಲ್ಲಿ ದೇವರಾಜ್ಯಾಧಿಪತ್ಯವನ್ನು ಮಾಡುತ್ತಲಿದ್ದ ದೇವೇಂದ್ರನಿಗೆ ಹೊರಗಣ ವಸ್ತುಗಳಲ್ಲಿ ವೈರಾಗ್ಯವುಂಟಾಯಿತು.

೧೪. ಆಗ ದೇವೇಂದ್ರನು ರಾಜ್ಯಾಧಿಪತ್ಯದಲ್ಲಿಯೂ, ಸುಖಸಾಧನಗಳಲ್ಲಿಯೂ ವ್ಯತ್ಯಾಸಗೊಂಡ ಸ್ವಭಾವದವನಾದನು. ಅವನೂ, ವೈರಾಗ್ಯವನ್ನು ಹೊಂದಿದ ಮನವುಳ್ಳವರಿಗೆ ಸ್ವರ್ಗರಾಜ್ಯಾಧಿಪತ್ಯವೂ ಅಲ್ಪವಾದುದೂ ಅಲ್ಲವು. ಎಂದು' (ಏನೂ ಅಲ್ಲವು) ಚಿಂತಿಸಿದನು.

ರಾಜ್ಯಸ್ಯ ಸಾರಂ ವಿಷಯೇಷು ಭೋಗೋ
ಭೋಗಸ್ಯ ಚಾಂತೇ ನ ಚ ಕಿಂಚಿದಸ್ತಿ ।
ವಿಮೃಶ್ಯ ಚೈತನ್ಮುನಯೋಽಪ್ಯಜಸ್ರಂ
ಮೋಕ್ಷಾಧಿಕಾರಂ ಪರಿಚಿಂತಯಂತಿ ॥ ೧೫ ॥

ಸದೈವ ಭೋಗಾಯ ತಪಃ ಪ್ರವೃತ್ತಿ-
ರ್ಭೋಗಾವಸಾನೇ ಹಿ ತಪೋ ವಿನಷ್ಟಮ್ ।
ಮೈತ್ರ್ಯಾದಿಸಂಯೋಗಪರಾಙ್ಮುಖಾನಾಂ
ವಿಮುಕ್ತಿಭಾಜಾಂ ನ ತಪೋ ನ ಭೋಗಃ ॥ ೧೬ ॥

ವಿಮೃಶ್ಯ ಚೈತತ್ಸ ಸುರಾಧಿನಾಥೋ
ವಿಮಾನಮಾರುಹ್ಯ ಸಕಿಂಙ್ಕಿಣೀಕಮ್ ।
ನೂನಂ ಹರಾರಾಧನಕಾರಣೇನ
ಕೈಲಾಸಮಭ್ಯೇತಿ ವಿಮುಕ್ತಿಕಾಮಃ ॥ ೧೭ ॥

---

೧೫. ರಾಜ್ಯದ ತಿರುಳೂ, ವಿಷಯಗಳಲ್ಲಿ ಸುಖವೂ—ವಿಷಯಾನುಭವದ ಕೊನೆಯಲ್ಲಿ ಯಾವುದೂ ಇಲ್ಲವು. ಮುನಿಗಳು ಇದನ್ನು ವಿಮರ್ಶಿಸಿ, ಯಾವಾಗಲೂ ಮುಕ್ತಿಸ್ಥಾನವನ್ನು ಚಿಂತಿಸುತ್ತಾರೆ.

೧೬. ಮಾನವನು ಯಾವಾಗಲೂ ಸುಖದ ಸಲುವಾಗಿ ತಪಸ್ಸಿಗೆ ತೊಡಗುತ್ತಾನೆ. ಸುಖಾನುಭವವು ಕೊನೆಯಾಗಲು, ತಪಸ್ಸಿನಿಂದುಂಟಾದ ಸುಕೃತವು ನಾಶವನ್ನೈದುವುದು. ಪ್ರಾಪಂಚಿಕವಾದ ಮೈತ್ರಿ, ಕರುಣಾ—ಇವೇ ಮೊದಲಾದುವುಗಳ ಸಂಬಂಧದಿಂದ ಹಿಮ್ಮೆಟ್ಟಿದ್ದು, ಮುಕ್ತಿಯನ್ನು ಹೊಂದಿದವರಿಗೆ ತಪಸ್ಸೂ, ತಜ್ಜನ್ಯವಾದ ಸುಖವೂ ಇಲ್ಲವು. (ಎಂದರೆ ತಪಸ್ಸಿನಿಂದ ಪಡೆದ ಪುಣ್ಯವುತ್ತು, ಪುಣ್ಯದಿಂದನುಭವಿಸಿದ ಸುಖ—ಇವೆರಡೂ ಮುಕ್ತಿಪರ್ಯಂತವಾಗಿ ಇರುವುವು. ಲಿಂಗದೇಹ ಭಂಗವಾದಮೇಲೆ ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಪಡೆದವರಿಗೆ ತಪಸ್ಸೂ, ತಜ್ಜನ್ಯ ಸುಖವೂ-ಇವುಗಳ ಸಂಬಂಧವೂ ಇಲ್ಲವು.)

೧೭. ದೇವತೆಗಳ ಒಡೆಯನಾದ ಇಂದ್ರನು ಇದನ್ನು ವಿಮರ್ಶೆಮಾಡಿ, ಅರಿತು, ಕಿರುಘಂಟೆಗಳಿಂದ ಕೂಡಿದ ವಿಮಾನವನ್ನೇರಿ, ಮೋಕ್ಷಾಪೇಕ್ಷೆಯುಳ್ಳವನಾಗಿ, ಮಹಾರುದ್ರದೇವರ ಪೂಜಾನಿಮಿತ್ತದಿಂದ ಕೈಲಾಸಪರ್ವತಕ್ಕೆ ಹೋದನು.

ಸ ಏಕದಾ ಮಾನಸಮಾಗತಃ ಸನ್
ಸಂವೀಕ್ಷ್ಯ ತಾಂ ಯಕ್ಷಪತೇಃ ಕಾಂತಾಮ್ ।
ಸಮರ್ಚಯಂತೀಂ ಗಿರಿಜಾಂಘ್ರಿಯುಗ್ಮಂ
ಧ್ವಜಾಮಿವಾನಂಗಮಹಾರಥಸ್ಯ ॥ ೧೮ ॥

ಪ್ರಧಾನಜಾಂಬೂನದಶುದ್ಧವರ್ಣಾಂ
ಕರ್ಣಾಂತಸಂಲಗ್ನಮನೋಜ್ಞನೇತ್ರಾಮ್ ।
ಸುಸೂಕ್ಷ್ಮವಸ್ತ್ರಾಂತರದೃಶ್ಯಗಾತ್ರಾಂ
ನೀಹಾರಮಧ್ಯಾದಿವ ಚಂದ್ರಲೇಖಾಮ್ ॥ ೧೯ ॥

ತಾಂ ವೀಕ್ಷ್ಯ ವೀಕ್ಷಣಸಹಸ್ರಭರೇಣ ಕಾಮಂ
ಕಾಮಾಂಗಮೋಹಿತಮತಿರ್ನ ಯಯೌ ತದಾನೀಮ್ ।
ದೂರಾಧ್ವಗಂ ಸ್ವಗೃಹಮೇತ್ಯ ಸುಸಂಚಿತಾರ್ಥ-
ಸ್ತಸ್ಥೌ ತದಾ ಸುರಪತಿರ್ವಿಷಯಾಭಿಲಾಷೀ ॥ ೨೦ ॥

೧೮–೧೯. ಒಮ್ಮೆ ಅವನು ಮಾನಸಸರೋವರಕ್ಕೆ ಬಂದವನು ಪಾರ್ವತೀ ದೇವಿಯ ಪಾದಯುಗ್ಮಗಳನ್ನು ಪೂಜಿಸುತ್ತಲಿದ್ದ, ಮನ್ಮಥನ ಮಹಾರಥದ ಧ್ವಜದಂತಿದ್ದ, ಅತ್ಯುತ್ತಮವಾದ ಮಿಸುನಿಯಂತೆ ಪರಿಶುದ್ಧವಾದ ಬಣ್ಣವುಳ್ಳ, ಕಿವಿಗಳವರೆಗೆ ವಿಸ್ತಾರವಾದ, ಮನೋಹರವಾದ ಕಣ್ಣುಗಳುಳ್ಳ, ಬಹು ತೆಳ್ಳಗಿರುವ ಬಟ್ಟೆಯೊಳಗೆ ಕಾಣುತ್ತಲಿದ್ದ ಒಡಲುಳ್ಳ, ಹಿಮದ ನಡುವೆ ಮನೋಹರವಾಗಿ ಕಂಗೊಳಿಸುವ ಚಂದ್ರಲೇಖೆಯಂತಿರುವ, ಯಕ್ಷರಿಗೊಡೆಯನಾದ ಕುಬೇರನ ಮಡದಿಯನ್ನು ಕಂಡನು.

೨೦. ಆಗ ಇಂದ್ರನು ತನ್ನ ಸಾಸಿರಕಣ್ಣುಳಿಂದ ನೋಡಿಯೂ, ಅವಳ ಸೊಬಗಿನ ಒಡಲಿಂದ ಮೋಹಗೊಂಡ ಬುದ್ಧಿಯುಳ್ಳವನಾಗಲಿಲ್ಲ. ಆದರೆ, ಬಹುದೂರದ ಹಾದಿಯುಳ್ಳ ತನ್ನ ಮನೆಗೆ ಬಂದು, ಎಲ್ಲ ವಸ್ತುಗಳನ್ನು ಶೇಖರಿಸಿದವನಾಗಿ, ಆಗ ವಿಷಯಾಭಿಲಾಷೆಯುಳ್ಳವನಾದನು.

ಪೂರ್ವಂ ವರಂ ಸ್ಯಾತ್ಸುಕುಲೇಽಪಿ ಜನ್ಮ
ತತೋ ಹಿ ಸರ್ವಾಂಗಶರೀರರೂಪವತ್ ।
ತತೋ ಧನಂ ದುರ್ಲಭಮೇವ ಪಶ್ಚಾ
ದ್ಧನಾಧಿಪತ್ಯಂ ಸುಕೃತೇನ ಲಭ್ಯವತ್ ॥ ೨೦ ॥

ಸ್ವರ್ಗಾಧಿಪತ್ಯಂ ಚ ಮಯಾ ಪ್ರಲಬ್ಧಂ
ತಥಾಪಿ ಭೋಗಾಯ ನ ಚಾಸ್ತಿ ಭಾಗ್ಯವತ್ ।
ಯಸ್ತ್ವಂ ಪರಿತ್ಯಜ್ಯ ವಿಮುಕ್ತಿಕಾಮ-
ಸ್ತಿಷ್ಠಾಮಿ ತೇ ದುರ್ಮತಿರಸ್ತಿ ಚಿತ್ತೇ ॥ ೨೨ ॥

ಮೋಕ್ಷೋಽಮುನಾ ಯದ್ಯಪಿ ಮೋಹನೀಯೋ
ಮೋಕ್ಷಸ್ಯ ಕಿಂ ಕಾರಣಮಸ್ತಿ ರಾಜ್ಯೇ ।
ಕ್ಷೇತ್ರಂ ಸುಪಕ್ವಂ ಪರಿಹೃತ್ಯ ದ್ವಾರೇ
ಕಿಂ ನಾಮ ಚಾರಣ್ಯಕೃಷಿಂ ಕರೋಷಿ ॥ ೨೩ ॥

---

೨೧. ಎಲ್ಲದಕ್ಕೂ ಮೊದಲು ಒಳ್ಳೆಯ ಕುಲದಲ್ಲಿ ಹುಟ್ಟುವುದು ಶ್ರೇಷ್ಠವಾದುದು ; ಅನಂತರದಲ್ಲಿ ಎಲ್ಲ ಅವಯವವುಳ್ಳ ಒಡಲರೂಪವೂ ಶ್ರೇಷ್ಠವಾದುದು ; ಅನಂತರವಲ್ಲಿ ಐಶ್ವರ್ಯವು ದುರ್ಲಭವಾದುದೇ ಸರಿ; ತರುವಾಯದಲ್ಲಿ ಧನಾಧಿಪತ್ಯವು ಪುಣ್ಯದಿಂದ ಹೊಂದತಕ್ಕುದು.

೨೨. ನನಗಾದರೋ ಈ ಮೇಲಿನವೆಲ್ಲವೂ ಉಂಟಾಗಿರುವುದಲ್ಲದೆ, ಅದರ ಜತೆಗೆ ಸಗ್ಗದ ಒಡೆತನವೂ ಉಂಟಾಗಿದೆ; ಆದರೂ ಈಭಾಗ್ಯವು ಸುಖಕ್ಕಾಗಿಲ್ಲವು ; ಅಯ್ಯಾ! ಅಧಿಕಾರಿಯೇ ! ಯಾವ ನೀನು ಎಲ್ಲವನ್ನೂ ಬಿಟ್ಟು ಮೋಕ್ಷಾಪೇಕ್ಷೆಯುಳ್ಳವನಾಗಿದ್ದೀಯೆ ; ನಿನ್ನ ಹೃದಯದಲ್ಲಿ ದುರ್ಬುದ್ಧಿಯುಂಟಾಗಿದೆ.

೨೩. ಈ ಅಧಿಕಾರಿಯಿಂದ ಮೋಕ್ಷವೇನೋ ಬಯಸತಕ್ಕದ್ದೇ ಆಗಿದೆ; ಆದರೆ ರಾಜ್ಯದಲ್ಲಿ ಒಡೆತನ ಮಾಡುವವನಿಗೆ ಮೋಕ್ಷವನ್ನು ಬಯಸಲು ಕಾರಣವೇನಿದೆ? ನಿನ್ನ ಮನೆಯ ಬಾಗಿಲಲ್ಲಿರುವ ಹದವಾದ ಭೂಮಿಯನ್ನುಳಿದು, ಕಾಡಿನಲ್ಲಿ ಬೇಸಾಯುವನ್ನು ಮಾಡಲು ಏಕೆ ಎಳಸುವೆ? (ಇಲ್ಲಿ ಆತ್ಮನನ್ನು ಸಂಭೋಧಿಸಿ ಹೇಳಿರುತ್ತದೆ.)

ಸಂಸಾರದುಃಖೋಪಹಿತಾ ನರಾ ಯೇ
ಕರ್ತುಂ ಸಮರ್ಥಾ ನ ಚ ಕಿಂಚಿದೇವ ।
ಅಕರ್ಮಿಣೋ ಭಾಗ್ಯವಿವರ್ಜಿತಾಶ್ಚ
ವಾಞ್ಛಂತಿ ತೇ ಮೋಕ್ಷಪಥಂ ವಿಮೂಢಾಃ ॥ ೨೪ ॥

ಏತದ್ವಿಮೃಶ್ಯ ಬಹುಧಾ ಮತಿಮಾನ್ ಪ್ರವೀರೋ
ರೂಪೇಣ ಮೋಹಿತಮನಾ ಧನವಾಙ್ಛನಾಯಾಃ ।
ಸರ್ವಾಭಿರಾಚಾರಕುಲಂ ಪರಿಮುಕ್ತಧೈರ್ಯಃ
ಸಸ್ಮಾರ ಮಾರಮಮರಾಧಿಪಚಕ್ರವರ್ತೀ ॥ ೨೫ ॥

ಸಮಾಗತೋಽಸೌ ಪರಿಮಂದಮಂದಂ
ಕಾಮೋಽತಿಕಾಮಾಕುಲಚಿತ್ತವೃತ್ತಿಃ ।
ಪುರಾ ಮಹೇಶೇನ ಕೃತಾಂಗನಾಶೋ
ಧೈರ್ಯಾಲಯಂ ಗಚ್ಛತಿ ಕೋ ವಿಶಂಕಃ ॥ ೨೬ ॥

೨೪. ಯಾವ ಮಾನವರು ಸಂಸಾರ ದುಃಖದಿಂದ ಹಿಂಸೆಗೊಂಡಿರುವರೋ, ಅವರು ಏನನ್ನೂ ಮಾಡಲು ಸಮರ್ಥರಾಗಿಲ್ಲವು. ಕರ್ಮಶೀಲರಲ್ಲದ, ಭಾಗ್ಯಹೀನರಾದವರು ಯಾರೋ, ಆ ಅವಿವೇಕಿಗಳು ಮೋಕ್ಷವನ್ನು ಅಪೇಕ್ಷಿಸುತ್ತಾರೆ.

೨೫. ಮತಿವಂತನೂ, ಮಹಾಪರಾಕ್ರಮಿಯೂ ಆದ, ಅಮರರೊಡೆಯನಾದ ದೇವೇಂದ್ರನು ಇದನ್ನು ಅನೇಕ ತೆರನಾಗಿ ವಿಮರ್ಶಿಸಿ, ಕುಬೇರನ ಮಡದಿಯ ರೂಪದಿಂದ ಮೋಹಗೊಂಡ ಮನವುಳ್ಳವನಾಗಿ, ಆಚಾರಗಳ ಸಮುದಾಯವನ್ನೆಲ್ಲಾ ತ್ಯಜಿಸಿ, ಧೈರ್ಯರಹಿತನಾಗಿ ಮನ್ಮಥನನ್ನು ಸ್ಮರಿಸಿದನು.

೨೬. ಅತಿಕಾಮದಿಂದ ಕಲಕಿದ ಮನೋವ್ಯಾಪಾರವುಳ್ಳ ಈ ಕಾಮನು ಮೆಲ್ಲಮೆಲ್ಲನೆ ಬಂದನು. ಪೂರ್ವದಲ್ಲಿ ಈಶ್ವರನಿಂದ ಹೊಂದಿದ ಅಂಗನಾಶವುಳ್ಳ ಈ ಮನ್ಮಥನು ಹೇಗೆ ತಾನೆ ಶಂಕೆಯಿಲ್ಲದವನಾಗಿ ಧೈರ್ಯಕ್ಕೆ ಬೀಡಾಗುವನು ?

ಆದಿಶ್ಯತಾಂ ನಾಥ ಯದಸ್ತಿ ಕಾರ್ಯಂ
ಕೋ ನಾಮ ತೇ ಸಂಪ್ರತಿ ಶತ್ರುಭೂತಃ ।
ಶೀಘ್ರಂ ಸಮಾದೇಶಯ ಮಾ ವಿಲಂಬಂ
ತಸ್ಯಾಪದಂ ಸಂಪ್ರತಿ ಭೋ ದಿಶಾಮಿ ॥ ೨೭ ॥

ಶ್ರುತ್ವಾ ತದಾ ತಸ್ಯ ವಚೋಽಭಿರಾಮಂ
ಮನೋಗತಂ ತತ್ಪರಮಂ ತುತೋಷ ।
ನಿಷ್ಪನ್ನಮರ್ಥಂ ಸಹಸೈವ ಮತ್ವಾ
ಜಗಾದ ವಾಕ್ಯಂ ಸ ವಿಹಸ್ಯ ವೀರಃ ॥ ೨೮ ॥

ರುದ್ರೋಽಪಿ ಯೇನಾರ್ಧಶರೀರಮಾತ್ರ-
ಶ್ಚಕ್ರೇಽಸ್ಯನಂಗತ್ವಮುಪಾಗತೇನ ।
ಸೋಢುಂ ಸಮರ್ಥೋಽಥ ಪರೋಽಪಿ ಲೋಕೇ
ಕೋ ನಾಮ ತೇ ಮಾರಶರಾಭಿಘಾತಮ್ ॥ ೨೯ ॥

---

೨೭. 'ಎಲೈ ಒಡೆಯನೇ ! ಈಗ ನಾನು ಎಸಗಬೇಕಾದ ಕಜ್ಜವಾವುದೋ, ಅದನ್ನು ಅಪ್ಪಣೆಮಾಡು ; ಈಗ ನಿನಗೆ ಹಗೆಯಾಗಿರುವವನಾರು ? ಎಲೈ ಸ್ವಾಮಿಯೇ ! ತಡಮಾಡದೆ ಬೇಗನೆ ಆಣತಿಗೊಡು ; ಕೂಡಲೇ ಅವನಿಗೆ ಕೇಡನೆಸಗುತ್ತೇನೆ ;' ಎಂದು ಅನಂಗನು ಹೇಳಿದನು.

೨೮. ಆಗ ಇಂದ್ರನು ತನ್ನ ಮನಸ್ಸಿನಲ್ಲಿದ್ದ ಸಂಗತಿಯನ್ನು ಕುರಿತು ಹೇಳಿದ ಆ ಕಾಮನ ಉತ್ತಮವೂ, ಮನೋಹರವೂ ಆದ ಆ ನುಡಿಯನ್ನು ಕೇಳಿ, ಬಹ ಸಂತಸಗೊಂಡನು. ಆ ವೀರನಾದ ಮಹೇಂದ್ರನು ತನ್ನ ಕಾರ್ಯವು ಪಠಾತ್ತಾಗಿ ಕೈಗೂಡಿತೆಂದೇ ಬಗೆದು ನಗುತ್ತಾ, ಈ ವಾಕ್ಯವನ್ನು ಹೇಳಿದನು.

೨೯. ಅನಂಗತ್ವವನ್ನು ಹೊಂದಿದ ಯಾವನಿಂದ ಮಹಾರುದ್ರನೂ ಅರ್ಧ ಶರೀರಮಾತ್ರವುಳ್ಳವನು ಮಾಡಲ್ಪಟ್ಟನೋ, ಎಲೈ ಮನ್ಮಥನೇ ! ಆ ನಿನ್ನ ಬಾಣಗಳ ಹೊಡೆತವನ್ನು ಲೋಕದಲ್ಲಿ ಬಳಿಕ ಇನ್ನಾವನು ತಾನೇ ಸಹಿಸಲು ಸಮರ್ಥನಾಗಿರುತ್ತಾನೆ ?

ಏಕಾಗ್ರಚಿತ್ತಾ ಗಿರಿಜಾರ್ಚನೇಽಪಿ
ಯಾ ಮೋಹಯತ್ಯೇವ ಮಮಾತ್ರ ಚಿತ್ತಮ್ ।
ಏನಾಮನಂಗಾಯತಲೋಚನಾಖ್ಯಾಂ
ಮಮಾಂಗಸಂಗೈಕರಸಾಂ ವಿಧೇಹಿ ॥ ೩೦ ॥

ಸ ಏವಮುಕ್ತಃ ಸುರವಲ್ಲಭೇನ
ಸ್ವಕಾರ್ಯಭಾವಾಧಿಕಗೌರವೇಣ ।
ಸಂಧಾಯ ಬಾಣಂ ಕುಸುಮಾಯುಧೋಽಪಿ
ಸಸ್ಮಾರ ಮಾರಃ ಪರಿಮೋಹನಂ ಸುಧೀಃ ॥ ೩೧ ॥

ಸಂಮೋಹಿತಾ ಪುಷ್ಪಶರೇಣ ಬಾಲಾ
ಕಾಮೇನ ಕಾಮಂ ಮದವಿಹ್ವಲಾಂಗೀ ।
ವಿಹಾಯ ಪೂಜಾಂ ಹಸತೇ ಸುರೇಶಂ
ಕಃ ಕಾಮುಕೋದಂಡರವಂ ಸಹೇತ ॥ ೩೨ ॥

---

೩೦. ಯಾವಳು ಗೌರಿಯನ್ನು ಪೂಜಿಸುವುದರಲ್ಲಿಯೇ ನಟ್ಟಮನಸ್ಸುಳ್ಳವಳಾದರೂ, ಈ ಪ್ರದೇಶದಲ್ಲಿ ನನ್ನ ಚಿತ್ತವನ್ನು ಮೋಹಯುಕ್ತವನ್ನಾಗಿಯೇ ಮಾಡಿದಳೋ, ಅನಂಗಾಯತಲೋಚನೆಯೆಂಬ (ಮನ್ಮಥವಿಕಾರದಿಂದ ಹಿರಿದಾದ ಕಣ್ಣುಳ್ಳವಳೆಂಬ) ಹೆಸರಿನ ಇವಳನ್ನು ನನ್ನ ಶರೀರಸಂಬಂಧದಲ್ಲಿ ಪ್ರೀತಿಯುಳ್ಳವಳನ್ನಾಗಿ ಮಾಡು.

೩೧. ತನ್ನ ಕೆಲಸವಾಗುವುದರಲ್ಲಿ ಹೆಚ್ಚು ಆಸಕ್ತಿಯುಳ್ಳ, ದೇವರಾಜನಿಂದ ಇಂತು ಹೇಳಿಸಿಕೊಂಡ, ಆ ಬುದ್ಧಿವಂತನಾದ ಮಾರನು ಪುಷ್ಪಬಾಣನಾದರೂ (ಅಸಾರಾಯುಧನಾದರೂ) ತನ್ನ ಇಕ್ಷುಕೋದಂಡದಲ್ಲಿ ಬಾಣವನ್ನು ಹೂಡಿ, ಅವಳಿಗೆ ಸಂಪೂರ್ಣವಾಗಿ ಇಂದ್ರನಲ್ಲಿ ಮೋಹವುಂಟಾಗುವುದನ್ನು ನೆನೆದನು.

೩೨. ಪೂಗೋಲನಾದ ಮನ್ಮಥನಿಂದ ಬಹುವಾಗಿ ಸಂಮೋಹನಗೊಳಿಸಿದುದರಿಂದಲೇ,(ಮದ) ಸೊಕ್ಕಿನಿಂದ ಸ್ವಾಧೀನತಪ್ಪಿದ ಒಡಲುಳ್ಳವಳಾಗಿ, ಆ ಅವಳು ಗಿರಿಜೆಯ ಸೇವೆಯನ್ನುಳಿದು, ದೇವೇಂದ್ರನನ್ನು ಕಂಡು ನಗುತ್ತಾಳೆ. ಲೋಕದಲ್ಲಿ ಕಾಮನ ಬಿಲ್ಲ ದನಿಯನ್ನು ಸಹಿಸುವನಾವನು? (ಯಾರೂ ಸಹಿಸಿ ಧೀರರಾಗಿರಲಾರರು)

ವಿಲೋಲನೇತ್ರೇ ಅಯಿ ಕಾಸಿ ಬಾಲೇ
ಸಂಮೋಹಯಂತೀವ ಮನಾಂಸಿ ಪುಂಸಾಮ್ ।
ಸುರಾಧಿಪೋ ವಾಕ್ಯಮಿದಂ ಜಗಾದ
ಕಸ್ಯೇಹ ಕಾಂತಾ ವದ ಪುಣ್ಯಭಾಜಃ ॥ ೩೩ ॥

ಉಕ್ತಾಪಿ ಬಾಲಾ ಮದವಿಹ್ವಲಾಂಗೀ
ರೋಮಾಂಚಸಂಸ್ವೇದಸಕಂಪಗಾತ್ರಾ ।
ಕೃತಾಕುಲಾ ಕಾಮಶಿಲೀಮುಖೇನ ।
ಸಗದ್ಗದಂ ವಾಕ್ಯಮುವಾಚ ಮಂದಮ್ ॥ ೩೪ ॥

ಕಾಂತಾ ಧನೇಶಸ್ಯ ಚ ಯಕ್ಷಕನ್ಯಾ
ಪ್ರಾಪ್ತಾ ಚ ಗೌರೀಚರಣಾರ್ಚನಾಯ ।
ಪ್ರಬ್ರೂಹಿ ಕಾರ್ಯಂ ಚ ತವಾಸ್ತಿ ನಾಥ
ಕಸ್ತ್ವಂ ವದ ತಿಷ್ಠಸಿ ಕಾಮರೂಪಃ ॥ ೩೫ ॥

---

೩೩. 'ಚಂಚಲಾಕ್ಷಿಯಾದ ಎಲೌ ಬಾಲೇ! ಪುರುಷರ ಮನಗಳನ್ನು ಸಂಮೋಹನಗೊಳಿಸುವಂತಿರುವ ನೀನು ಯಾರು? ಇಲ್ಲಿ ಯಾವ ಪುಣ್ಯವಂತನ ಮನವನ್ನಾಳು ಆಗಿರುವೆ? ಹೇಳು;' ಈ ವಾಕ್ಯವನ್ನು ದೇವರಾಜನು ನುಡಿದನು.

೩೪. ಬಾಲೆಯು ಇಂತು ನುಡಿಸಿದವಳಾದರೂ, ಸೊಕ್ಕಿನಿಂದ ಸ್ವಾಧೀನ ತಪ್ಪಿದ ಒಡಲಿನವಳಾಗಿ, ರೋಮಾಂಚ, ಬೆವರು ಮತ್ತು ನಡುಕ–ಇವನ್ನು ಹೊಂದಿದ ದೇಹವುಳ್ಳವಳಾಗಿ, ಮನ್ಮಥನ ಬಾಣದಿಂದ ನೊಂದವಳಾಗಿ, ಮೆಲ್ಲನೆ ಗದ್ಗದಕಂಠವುಳ್ಳವಳಾಗಿರುವಂತೆ, ಈ ಮುಂದಿನ ವಾಕ್ಯವನ್ನು ಹೇಳಿದಳು.

೩೫. 'ನಾನು ಯಕ್ಷನ ಮಗಳು; ಕುಬೇರನ ಮಡದಿ; ಇಲ್ಲಿ ಗೌರೀ ದೇವಿಯ ಅಡಿಗಳನ್ನು ಪೂಜಿಸಲು, ಬಂದಿರುವೆನು. ಎಲೈ ಸ್ವಾಮಿಯೇ! ನಿನ್ನ ಕಾರ್ಯವೇನಿರುವುದು? ಹೇಳು; ನೀನಾರು? ತಿಳಿಸು; ಕಾಮರೂಪನಾಗಿರುವೆ;' ಎಂದು ಆ ಯಕ್ಷವನಿತೆಯು ನುಡಿದಳು.

॥ ಇಂದ್ರ ಉವಾಚ ॥

ಸಾ ತ್ವಂ ಸಮಾಗಚ್ಛ ಭಜಸ್ವ ಮಾಂ ಚಿರಾ-
ನ್ಮದಂಗಸಂಗೋತ್ಸುಕತಾಂ ವ್ರಜಾಶು ।
ತ್ವಯಾ ವಿನಾ ಜೀವಿತಮಪ್ಯನಲ್ಪಂ
ಸ್ವರ್ಗಸ್ಯ ರಾಜ್ಯಂ ಮಮ ನಿಷ್ಫಲಂ ಸ್ಯಾತ್ ॥ ೩೬ ॥

ಉಕ್ತಾ ಚ ಸೈವಂ ಮಧುರಂ ಚ ತೇನ
ಕಂದರ್ಪಸಂತಾಪಿತಚಾರುದೇಹಾ ।
ವಿಮಾನಮಾರುಹ್ಯ ಚಲತ್ಪತಾಕಂ
ಸುರೇಶಕಂಠಗ್ರಹಣಂ ಚಕಾರ ॥ ೩೭ ॥

ಜಗಾಮ ಶೀಘ್ರಂ ಸ ಹಿ ನಾಕನಾಥಃ
ಸಾಕಂ ತಯಾ ಮಂದರಕಂದರಾಸು ।
ಅದೃಷ್ಟದೇವಾಸುರಸಂಚರತ್ಸು
ವಿಚಿತ್ರರತ್ನಾಂಕುರಭಾಸುರಾಸು ॥ ೩೮ ॥

ಆಗ ಇಂದ್ರನು ಹೇಳುತ್ತಾನೆ:—

೩೬. 'ಎಲೌ ಬಾಲೇ! ಆ ನೀನು ಬಾ; ನನ್ನನ್ನು ಬಹುಕಾಲದಿಂದ ಸೇವಿಸು; ಬೇಗನೆ ನನ್ನ ಅಂಗಸಂಗವನ್ನು ಹೊಂದುವುದರಲ್ಲಿ ಔತ್ಸುಕ್ಯವನ್ನು ತಾಳು; ನಿನ್ನಿಂದುಳಿದ ಬಾಳೂ, ಹಿರಿದಾದ ಸಗ್ಗದ ರಾಜ್ಯವೂ, ನನಗೆ ನಿಷ್ಫಲವಾದುವು.'

೩೭. ಆ ದೇವೇಂದ್ರನಿಂದ ಇಂತು ಹಿತವಾಗಿ ನುಡಿಯಲ್ಪಟ್ಟ ಆ ಯಕ್ಷಿಣಿಯು ಮನ್ಮಥನಿಂದ ಬೆಂದ, ಮನೋಹರವಾದ ದೇಹವುಳ್ಳವಳಾಗಿ, ಅಲುಗುತ್ತಲಿರುವ ಪಳವಿಗೆಯ ವಿಮಾನವನ್ನು ಹತ್ತಿ, ದೇವೇಂದ್ರನ ಕಂಠವನ್ನು ಬಾಚಿ ತಬ್ಬಿದಳು.

೩೮. ಆ ನಾಕದೊಡೆಯನು ದೇವಾಸುರ ಸಂಚಾರವೇ ಕಾಣದ, ನಾನಾ ತೆರನಾದ ರನ್ನಗಳ ಕಿರಣಗಳಿಂದ ಬೆಳಗುತ್ತಲಿದ್ದ, ಮಂದರಪರ್ವತಕಂದರಗಳೊಳಗೆ ಅವಳೊಡನೆ ಬೇಗನೆ ಹೋದನು.

ರೇಮೇ ತಯಾ ಸಾಕಮುದಾರವೀರ್ಯಃ
ಚಿತ್ರಂ ಸುರೈಶ್ವರ್ಯಗತಾದರೋಽಪಿ ।
ಸ್ವಯಂ ಚ ಯಸ್ಯಾ ಲಘುಪುಷ್ಪಶಯ್ಯಾಂ
ಚಕಾರ ಚಾತುರ್ಯನಿಧಿಃ ಸಕಾಮಃ ॥ ೩೯ ॥

ಜಾತಃ ಕೃತಾರ್ಥೋಽಮರವೃಂದನಾಥಃ
ಸ ಕಾಮಭೋಗೇಷು ಸದಾ ವಿದಗ್ಧಃ ।
ಮೋಕ್ಷಾಧಿಕಂ ಸ್ನೇಹರಸಾತಿವೃಷ್ಟಂ
ಪರಾಂಗನಾಲಿಂಗನಸಂಗಸೌಖ್ಯಮ್ ॥ ೪೦ ॥

ಅಥಾಗತಾ ಯಕ್ಷಪತೇಃ ಸಮೀಪಂ
ನಾರ್ಯೋಽನುವರ್ಜ್ಯೈವ ಚ ಚಿತ್ರಸೇನಾಮ್ ।
ಸಸಂಭ್ರಮಾಃ ಸಂಭ್ರಮಖಿನ್ನಗಾತ್ರಾಃ
ಸಗದ್ಗದಂ ಪ್ರೋಚುರಸಾಹಸಜ್ಞಾಃ ॥ ೪೧ ॥

---

೩೯. ಬಲ್ಗಲಿಯಾದ ಇಂದ್ರನು ದೇವತೆಗಳೊಡೆತನದಲ್ಲಿ ನಷ್ಟವಾದ ಆಸಕ್ತಿಯುಳ್ಳವನಾದರೂ, ಅವಳೊಡನೆ ಚಿತ್ರವಾಗಿ ವಿಹರಿಸಿದನು. ಚದುರತೆಗೆ ಗಣಿಯಾದ ಇಂದ್ರನು ಕಾಮದೊಡಗೂಡಿ, ಯಾವ ಈ ಯಕ್ಷಿಣಿಗೆ ಮೆತ್ತಗಿರುವ ಹೂವಿನ ಹಾಸಿಗೆಯನ್ನು ತಾನೇ ಮಾಡಿದನು.

೪೦. ತನಗೆ ಬೇಕಾದುದನ್ನು ಅನುಭವಿಸುವುದರಲ್ಲಿ ಯಾವಾಗಲೂ ಚತುರನಾದ ಆ ಬರ್ದಿಲತಂಡದೊಡೆಯನು ಸ್ನೇಹರಸದಿಂದ ಬಳಿದಿರುವ, ಹೆರರ ಮಡದಿಯನ್ನಪ್ಪುವ ಸೊಗವನ್ನು ಸಂಸಾರದ ಬಿಡುಗಡೆಯ ಮುಕುತಿಗಿಂತ ಮಿಗಲಾದುದನ್ನಾಗಿ ಅರಿತು, ಕೃತಾರ್ಥನಾದನು.

೪೧. ಅನಂತರದಲ್ಲಿ ಇತರ ಸ್ತ್ರೀಯರು ಚಿತ್ರಸೇನೆಯನ್ನು ಬಿಟ್ಟು ಬಿಟ್ಟೇ, ತ್ವರೆಯೊಡನೆ ಭಯ ಖೇದಗೊಂಡವರಾಗಿ, ಸಾಹಸಕಾರ್ಯವನ್ನರಿಯದೆ, ಯಕ್ಷರೊಡೆಯನಾದ ಕುಬೇರನ ಹತ್ತಿರಕ್ಕೆ ಓಡಿ ಬಂದು, ಗದ್ಗದಕಂಠದಿಂದ ನಡೆದುದನ್ನು ನುಡಿದರು.

ನೂನಂ ಸಮಾಕರ್ಣ್ಯ ಚ ಯಕ್ಷನಾಥೋ
ವಿಮಾನಮಾರೋಪ್ಯ ಜಗಾಮ ಕಾಶ್ಚಿತ್ ।
ಸಂವೀಕ್ಷ್ಯಮಾಣಃ ಕುಕುಭೋಽಪಿ ಕಾಂತಾಂ
ವಿಗೃಹ್ಯ ವೇಗಾದಿಹ ಸೋಽಪಿ ತಸ್ಕರಃ ॥ ೪೨ ॥

ವಚೋ ನಿಶಮ್ಯಾಥ ಧನಾಧಿನಾಥೋ
ವಿಷೋಪಮಂ ಜಾತಮಷೀನಿಭಾನನಃ ।
ಜಗಾದ ಭೂಯೋ ನ ಚ ಕಿಂಚಿದೇವ
ಬಭೂವ ನೈ ವೃಕ್ಷ ಇವೋಗ್ನಿದಗ್ಧಃ ॥ ೪೩ ॥

ವಿಜ್ಞಾಪಿತಾರ್ಥೋ ವರಕನ್ಯಕಾಭಿಃ
ಯಾಶ್ಚಿತ್ರಸೇನಾಸಹಚಾರಿಣೀಭಿಃ ।
ಮೋಹಾಪನೋದಾಯ ಮತಿಂ ದಧಾನಃ
ಸ ಕಂಠಕುಬ್ಜೋಽಪಿ ಸಮಾಜಗಾಮ ॥ ೪೪ ॥

ಶುಚಾಗತಂ ವೀಕ್ಷ್ಯ ಸ ರಾಜರಾಜಃ
ಉನ್ಮೀಲಿತಾಕ್ಷೋ ವಚನಂ ಜಗಾದ ।
ವಿನಿಶ್ವಸನ್ ಗಾಢಸಕಂಪಗಾತ್ರಃ
ಸ್ವಸ್ಥಂ ಮನೋಽಸ್ಯಾಶು ವಿಧಾಯ ದೀನಃ ॥ ೪೫ ॥

---

೪೨. ಯಕ್ಷರೊಡೆಯನು ಆ ನಾರಿಯರ ನುಡಿಯನ್ನು ಕೇಳಿ, ‘ ಆ ಕಳ್ಳನೂ ತನ್ನ ಕಾಂತೆಯನ್ನು ಹಿಡಿದು, ವಿಮಾನವನ್ನಡರಿಸಿ, ಇವರೆಲ್ಲ ನೋಡುತ್ತಿರುವಾಗಲೇ ಯಾವುದೋ ದಿಕ್ಕಿಗೆ ಈಗ ವೇಗದಿಂದ ಹೋಗಿರಬೇಕು.

೪೩. ಬಳಿಕ ಧನಪತಿಯು ಆ ನಾರಿಯರ ವಿಷಕ್ಕೆಣೆಯಾದ ನುಡಿಯನ್ನು ಕೇಳಿ, ಮಸಿಯಂತೆ ಕಪ್ಪಾದ ಮೊಗವುಳ್ಳವನಾಗಿ ಮತ್ತೆ ಯಾವುದನ್ನೂ ಹೇಳಲಿಲ್ಲ. ಅಲ್ಲದೆ ಬೆಂಕಿಯಿಂದ ಸುಟ್ಟ ಮರದಂತಾದನು.

೪೪. ಚಿತ್ರಸೇನೆಯ ಒಡನಾಡಿಗಳಾದ, ಉತ್ತಮರಾದ ಕನ್ನೆಯರು ಈ ವಿಷಯವನ್ನು ಕಂಠಕುಬ್ಜನೆಂಬ ಮಂತ್ರಿಗೆ ಬಿನ್ನವಿಸಿದರು. ಅವನೂ ಧನಾಧಿಪತಿಗೆ ಉಂಟಾಗಿರುವ ಶೋಕದಿಂದುಂಟಾದ ಮೋಹವನ್ನು ಕಳೆಯಲು ಯೋಚಿಸಿ, ಒಡೆಯನ ಸಮೀಪಕ್ಕೆ ಬಂದನು.

೪೫. ಆ ದೀನನಾದ ಯಕ್ಷರಾಜನು ಆ ಕಂಠಕುಬ್ಜನು ಬಂದುದನ್ನು ಕೇಳಿ, ಕಣ್ದೆರೆದು ನೋಡಿ, ನಿಟ್ಟುಸಿರು ಬಿಟ್ಟು, ಕಡುನಡುಕದೊಡಲಿನವನಾಗಿ, ಬೇಗನೆ ಮನವನ್ನು ಸ್ವಸ್ಥವನ್ನಾಗಿಸಿ, ಇಂತು ನುಡಿಯನ್ನು ನುಡಿದನು.

ತದ್ಯೌವನಂ ಯದ್ಯುವತೀವಿನೋದೋ
ಧನಂ ತು ಚೈತತ್ಸ್ವಜನೋಪಯೋಗಿ ।
ತಜ್ಜೀವಿತಂ ಯತ್ಕ್ರಿಯತೇ ಸುಧರ್ಮಃ
ತದಾಧಿಪತ್ಯಂ ಯದಿ ದುಷ್ಟನಿಗ್ರಹಃ ॥ ೪೬ ॥

ಧಿಙ್ಮೇ ಧನಂ ಜೀವಿತಮಪ್ಯನಲ್ಪಂ
ರಾಜ್ಯಂ ಬೃಹತ್ಸಂಪ್ರತಿ ಗುಹ್ಯಕಾನಾಮ್ ।
ವಿಶಾಮಿ ಚಾಗ್ನಿಂ ನ ಚ ವೇದ ಕಶ್ಚಿತ್
ಪರಾಭವೋಽಸ್ತೀತಿ ಚ ಕೋ ನೃಪಾಣಾಮ್ ॥ ೪೭ ॥

ಪಾರ್ಶ್ವೇ ಸ್ಥಿತಸ್ಯಾಪಿ ಚ ಜೀವತೋ ಮೇ
ಗತಾ ತಟಾಕಂ ಗಿರಿಜಾರ್ಚನಾಯ ।
ನೀತಾ ಚ ಕೇನಾಪಿ ವಯಂ ನ ವಿದ್ಮೋ
ಧ್ರುವಂ ನ ತಸ್ಯಾಸ್ತಿ ಭಯಂ ಚ ಮೃತ್ಯೋಃ ॥ ೪೮ ॥

---

೪೬. ‘ಯಾವ ಹರಯವು ತರುಣಿಯರೊಡನೆ ವಿನೋದಕರವೋ, ಅದೇ ಸಾರ್ಥಕವಾದ ಹರಯವು; ಯಾವ ಧನವು ನಂಟರ ಉಪಯೋಗಕ್ಕೆ ಸಾಧಕವೋ, ಅದೇ ಸಾರ್ಥಕವಾದ ದ್ರವ್ಯವು; ಯಾವ ಬಾಳು ವಿಶೇಷ ಧರ್ಮಾನುಷ್ಠಾನ ಸಾಧಕವೋ, ಅದೇ ಶ್ಲಾಘ್ಯಜೀವನವು; ಯಾವ ಒಡೆತನವು ದುಷ್ಟಶಿಕ್ಷಣ ಸಾಧಕವೋ, ಅದೇ ಸ್ತುತ್ಯವಾದ ಒಡೆತನವು.

೪೭. ಈಗ ನನ್ನ ಈ ಅಪಾರವಾದ ಐಸಿರಿಯೂ, ಈ ಪೆರ್ಮೆಯ ಬಾಳೂ, ಧನವನ್ನು ಕಾಯುವ ಈ ಗುಹ್ಯಕರ ವಿಸ್ತಾರವಾದ ರಾಜ್ಯವೂ ನಿಂದ್ಯವಾದುವು: ನಾನು ಈಗ ಅಗ್ನಿಪ್ರವೇಶ ಮಾಡುವೆನು; ಸತ್ತ್ರನರಿಗೆ ಅವಮಾನವಿರುವುದೆಂದು ಯಾವನೂ ತಿಳಿಯುವುದಿಲ್ಲವು.

೪೮. ಹತ್ತಿರದಲ್ಲಿದ್ದು, ಬದುಕಿರುವ ನನ್ನನ್ನು ತಿರಸ್ಕರಿಸಿ, ಚಿತ್ರಸೇನೆಯು ಪಾರ್ವತಿಯ ಪೂಜೆಗಾಗಿ ಕೆರೆಗೆ ಹೋದವಳು ಯಾವನಿಂದಲೋ ಅಪಹರಿಸಲ್ಪಟ್ಟಳು; ಇದನ್ನು ನಾವರಿಯೆವು; ಆ ಕಳ್ಳನಿಗಾದರೋ ಮೃತ್ಯುಭಯವೂ ಇಲ್ಲದಂತಾಗಿದೆ.’ ಎಂದು ಕುಬೇರನು ಕಂಠಕುಬ್ಜನಿಗೆ ಹೇಳಿದನು.

ಜಗಾದ ವಾಕ್ಯಂ ಸ ಚ ಕಂಠಕುಬ್ಜೋ
ಮೋಹಾಪನೋದಾಯ ವಿಭೋಃ ಸ ಮಂತ್ರೀ ।
ಆಕರ್ಣ್ಯತಾಂ ನಾಥ ನ ಚಾಸ್ತಿ ಯೋಗ್ಯಃ
ಕಾಂತಾವಿಯೋಗೇ ನಿಜದೇಹಘಾತಃ ॥ ೪೯ ॥

ಏಕಾ ಪುರಾ ರಾಮವಧೂ ಹೃತಾ ಚ
ನಿಶಾಚರೇಣಾಪಿ ಮೃತೋ ನ ಸೋಽಪಿ ।
ಅನೇಕಶಃ ಸಂತಿ ತವಾತ್ರ ನಾರ್ಯಃ
ಕೋ ನಾಮ ಚಿತ್ತೇ ಕ್ರಿಯತೇ ವಿಷಾದಃ ॥ ೫೦ ॥

ವಿಮುಚ್ಯ ಶೋಕಂ ಕುರು ವಿಕ್ರಮೇ ಮತಿಂ
ಧೈರ್ಯಂ ಸಮಾಲಂಬಯ ಯಕ್ಷರಾಜ ।
ಭೃಶಂ ನ ಜಲ್ಪಂತಿ ರುಷಂತಿ ಸಾಧವಃ
ಪರಾಭವಂ ಬಾಹ್ಯಕೃತಂ ಸಹಂತೇ ॥ ೫೧ ॥

---

೪೯. ಆಗ ಮಂತ್ರಿಯಾದ ಕಂಠಕುಬ್ಜನು ಒಡೆಯನಾದ ಕುಬೇರನ ಮೋಹ ಗಳೆಯಲು ಈ ಮಾತನ್ನು ಹೇಳಿದನು. 'ಅಯ್ಯಾ ಪ್ರಭುವೇ! ಕೇಳು; ಕಾಂತೆಯ ವಿಯೋಗವುಂಟಾದಲ್ಲಿ ನಿನ್ನ ದೇಹವನ್ನು ಕಳೆದುಕೊಳ್ಳುವುದು ಉಚಿತವಲ್ಲವು.

೫೦. ಪೂರ್ವದಲ್ಲಿ ರಕ್ಕಸನೊಬ್ಬನು ಅಸಹಾಯಳಾದ ಶ್ರೀ ರಾಮನ ಮಡದಿಯನ್ನು ಕದ್ದೊಯ್ದನು. ಆ ರಾಮನೂ ಮಡಿಯಲಿಲ್ಲವು. ನಿನಗೆ ಇಲ್ಲಿ ಅನೇಕರಾದ ಮಡದಿಯರಿರುವರು. ಮನದೊಳು ದುಮ್ಮಾನವೆಸಗುವುದೇತಕ್ಕೆ?

೫೧. ಎಲೈ ಯಕ್ಷಪತಿಯೇ! ದುಮ್ಮಾನವನ್ನುಳಿದು ಪನ್ನತಿಕೆಯೊಳ್ಮತಿಯನಿಡು; ಧೈರ್ಯಗೊಳ್ಳುವನಾಗು. ಸಾಧುಗಳು ಮೇಲಿಂದ ಮೇಲೆ ಹಂಬಲಿಸುವುದಿಲ್ಲ; ಮುನಿಸುಗೊಳ್ಳುವುದಿಲ್ಲ; ಹೊರಗಿನ ತಿರಸ್ಕಾರವನ್ನು ಸೈಸುತ್ತಾರೆ.

ಕೃತಂ ಹಿ ಕಾರ್ಯಂ ಗುರು ದರ್ಶಯಂತಿ
ಸಹಾಯವಾನ್ ವಿತ್ತಪ ಕಾತರೋಽಸಿ ಕಿಮ್ ।
ಸಹಾಯಕಾರ್ಯಂ ಕುರುತೇ ಹಿ ಸಂಪ್ರತಿ
ಸ್ವಯಂ ಹಿ ಯಸ್ಯಾವರಜೋ ವಿಭೀಷಣಃ ॥ ೫೨ ॥

॥ ಧನದ ಉವಾಚ ॥

ವಿಭೀಷಣೋ ಮೇ ಪ್ರತಿಪಕ್ಷಭೂತೋ
ದಾಯಾದಭಾವಂ ನ ವಿಮುಂಚತೀತಿ ।
ಧ್ರುವಂ ಪ್ರಸನ್ನಾ ನ ಭವಂತಿ ದುರ್ಜನಾಃ
ಕೃತೋಪಕಾರಾ ಹರಿವಜ್ರನಿಷ್ಠುರಾಃ ॥ ೫೩ ॥

ನ ಚೋಪಕಾರೈರ್ನಗುಣೈರ್ನ ಸೌಹೃದೈಃ
ಪ್ರಸಾದಮಾಯಾಂತಿ ಮನೋ ಹಿ ಗೋತ್ರಿಣಃ ।
ಉವಾಚ ವಾಕ್ಯಂ ಸ ಚ ಕಂಠಕುಬ್ಜೋ
ಯುಕ್ತಂ ತ್ವಯೋಕ್ತಂ ಚ ಧನಾಧಿನಾಥ ॥ ೫೪ ॥

---

೫೨. ಮಾಡಿದ ಕಾರ್ಯವನ್ನು ಸಾಧುಗಳು ಹಿರಿದಾಗಿ ಕಾಣಿಸುತ್ತಾರೆ. ಎಲೈ ಧನಾಧಿಪತಿಯೇ ! ಕೇಳು; ವಿಶೇಷವಾಗಿ ನೆರವುಳ್ಳ ನೀನು ಏತಕ್ಕೆ (ಸಿಡಿಮಿಡಿ) ತಳ್ಳಂಕಗೊಳ್ಳುವೆ? ಯಾವ ನಿನಗೆ ತಮ್ಮನಾದ ವಿಭೀಷಣನು ಈಗ ತಾನೇ ನೆರವಿನ ಹರಿಬವನ್ನು ಮಾಡಲು ಸಿದ್ಧನಿರುತ್ತಾನೆ;' ಎಂದು ಕಂಠಕುಬ್ಜನು ಹೇಳಿದನು.

೫೩. ಧನಾಧಿಪತಿಯಾದ ಕುಬೇರನು ಇಂತು ಹೇಳುತ್ತಾನೆ:— 'ಎಲೈ ಕಂಠಕುಬ್ಜನೇ ! ಕೇಳು ; ವಿಭೀಷಣನು ನನಗೆ ಹಗೆಯು ; ದಾಯಾದಭಾವವನ್ನು ಬಿಡುವುದಿಲ್ಲವು ; ದುರ್ಜನರು ಪ್ರಸನ್ನರಾಗುವುದಿಲ್ಲವು ; ಉಪಕಾರವನ್ನು ಹೊಂದಿದವರಾದರೂ, ಇಂದ್ರನ ವಜ್ರದಂತೆ ಕಠಿನರು.

೫೪-೫೫. ಒಂದೇ ಗೋತ್ರದವರಾದ ದಾಯಾದಿಗಳ ಮನವು ಉಪಕಾರಗಳಿಂದಲಾಗಲೀ, ಗುಣಗಳಿಂದಲಾಗಲೀ, ನೇಹಗಳಿಂದಲಾಗಲೀ ಪ್ರಸನ್ನವಾಗುವುದಿಲ್ಲವು ;' ಎಂದು ಕುಬೇರನು ಹೇಳಲು, ಕಂಠಕುಬ್ಜನು ಈ ಮಾತನ್ನು ಹೇಳಿದನು :— 'ಎಲೈ ಧನಪತಿಯೇ ! ನೀನು ಹೇಳಿದುದು ಉಚಿತವಾದುದು. ಆ

ಪರಸ್ಪರಂ ಘ್ನಂತಿ ಚ ತೇ ವಿರುದ್ಧಾಃ
ತಥಾಪಿ ಲೋಕೇ ನ ಪರಾಭವೋಽಸ್ತಿ ।
ಪರಾಭವಂ ನಾನ್ಯಕೃತಂ ಸಹಂತೇ
ನೋಷ್ಣಂ ಜಲಂ ಜ್ವಾಲಯತೇ ತೃಣಾನಿ ॥ ೫೫ ॥

ತಸ್ಮಾತ್ತ್ವಮಾಗಚ್ಛ ಧನಾಧಿನಾಥ
ಪಾರ್ಶ್ವಂ ಚ ವೇಗೇನ ವಿಭೀಷಣಸ್ಯ ।
ಸ್ವಬಾಹುವೀರ್ಯಾರ್ಜಿತವಿತ್ತಭೋಗಿನಾಂ
ಸ್ವಬಂಧುವರ್ಗೇಷು ಹಿ ಕೋ ವಿರೋಧಃ ॥ ೫೬ ॥

ಇತ್ಯುಕ್ತಸ್ಸ ತದಾ ತೇನ ಕಂಠಕುಬ್ಜೇನ ಮಂತ್ರಿಣಾ ।
ವಿಭೀಷಣಸ್ಯ ಸಾಮೀಪ್ಯಂ ಜಗಾಮಾಶು ವಿಚಾರಯನ್ ॥ ೫೭ ॥

ತತೋ ಲಂಕಾಧಿಪಃ ಶ್ರುತ್ವಾ ಬಾಂಧವಂ ಪೂರ್ವಜಂ ತದಾ ।
ಪ್ರಾಪ್ತಂ ಪ್ರತ್ಯಾಜಗಮಾಶು ವಿನಯೇನ ಸಮನ್ವಿತಃ ॥ ೫೮ ॥

ದಾಯಾದಿಗಳು ವಿರೋಧಗೊಂಡು ಒಬ್ಬರನ್ನೊಬ್ಬರು ಕೊಲ್ಲುತ್ತಾರೆ. ಆದರೂ, ಲೋಕದಲ್ಲಿ ತಿರಸ್ಕರಿಸುವುದಿಲ್ಲವು. ದಾಯಾದಿಗಳೂ ಹೆರರೆಸಗಿದ ನಿರಾಕರಣವನ್ನು ಸಹಿಸುವುದಿಲ್ಲವು. ಬೆನ್ನೀರು ಹುಲ್ಲನ್ನು ಉರಿಸುವುದಿಲ್ಲವಷ್ಟೆ !

೫೬. ಎಲೈ ಧನಪತಿಯೇ ! ಆದುದರಿಂದ ಬೇಗನೆ ವಿಭೀಷಣನ ಪತ್ತಿರಕ್ಕೆ ಹೋಗು ; ತಮ್ಮ ತೋಳ್ಬಲದಿಂದ ಸಂಪಾದಿಸಿದ ಸಿರಿಯನ್ನನುಭವಿಸುವವರಿಗೆ ತಮ್ಮ ನೆಂಟರ ತಂಡದಲ್ಲಿ ಹಗೆತನವೆಂತಹುದು ? '

೫೭. ಇಂತು ಮಂತ್ರಿಯಾದ ಕಂಠಕುಬ್ಜನು ಹೇಳಲು, ಆಗ ಆ ಕುಬೇರನು ವಿಚಾರಮಾಡುತ್ತಾ, ಬೇಗನೆ ವಿಭೀಷಣನ ಬಳಿಗೆ ಹೋದನು.

೫೮. ಆಗ ಲಂಕಾಧಿಪತಿಯಾದ ವಿಭೀಷಣನು ಹಿಂದಿನ ನಂಟನ್ನು ಕೇಳಿ, ತನ್ನ ಬಳಿಗೆ ಬಂದ ಕುಬೇರನ ಸವಿಾಪಕ್ಕೆ ವಿನಯದೊಡನೆ ಬೇಗನೆ ಬಂದನು.

ತತೋ ವಿಭೀಷಣೋ ದೃಷ್ಟ್ವಾ ತದಾ ದೀನಂ ಚ ಬಾಂಧವಮ್ ।
ಸಂತಪ್ತಮಾನಸೋ ಭೂಪ ಜಗಾದೇವಂ ವಚೋ ಮಹತ್ ॥ ೫೯ ॥

॥ ವಿಭೀಷಣ ಉವಾಚ ॥

ಕಥಂ ದೀನೋಽಸಿ ಯಕ್ಷೇಶ ಕಿಂ ಕಷ್ಟಂ ತವ ಚೇತಸಿ ।
ನಿವೇದಯಾಧುನಾಸ್ಮಾಕಂ ನಿಶ್ಚಯಾನ್ಮಾರ್ಜಯಾಮಿ ತತ್ ॥ ೬೦ ॥

ತದ್ಯೈಕಾಂತಂ ಸಮಾಸಾದ್ಯ ಕಥಯಾಮಾಸ ವೇದನಾಮ್ ।

॥ ಧನದ ಉವಾಚ ॥

ಗೃಹೀತಾ ಕಿಂ ಸ್ವಯಂ ಯಾತಾ ನಿಹತಾ ಕೇನಚಿದ್ದ್ವಿಷಾ ॥ ೬೧ ॥
ಭ್ರಾತಃ ಕಾಂತಾಂ ನ ಪಶ್ಯಾಮಿ ಚಿತ್ರಸೇನಾಂ ಮನೋರಮಾಮ್ ।
ಏತದ್ಬಂಧೋ ಮಹತ್ಕಷ್ಟಂ ಮಮ ನಾರೀಸಮುದ್ಭವಮ್ ॥ ೬೨ ॥

---

೫೯. ಎಲೈ ಸಹಸ್ರಾನೀಕರಾಯನೇ ! ಕೇಳು ; ಬಳಿಕ ಆಗ ವಿಭೀಷಣನು ದೀನನಾದ ಬಂಧುವನ್ನು ನೋಡಿ, ಅತ್ಯಂತ ಸಂತಾಪಗೊಂಡ ಮನವುಳ್ಳವನಾಗಿ, ಈ ಮಾತನ್ನು ಹೇಳಿದನು.

ವಿಭೀಷಣನು ಕುಬೇರನಿಗೆ ಇಂತು ಹೇಳುತ್ತಾನೆ.

೬೦. 'ಎಲೈ ಯಕ್ಷಪತಿಯೇ ! ನೀನು ಎಂತು ದೀನನಾದೆ? ನಿನ್ನ ಮನೋವ್ಯಥೆಯೇನು? ಎಲ್ಲವನ್ನೂ ನಿಶ್ಚಯವಾಗಿ ನಮಗೆ ತಿಳಿಸು ; ಅದನ್ನು ಕಳೆಯುತ್ತೇನೆ ;' ಎಂದು ಹೇಳಿದನು.

೬೧-೬೨. ಆಗ ಕುಬೇರನು ವಿಭೀಷಣನನ್ನು ಏಕಾಂತಪ್ರದೇಶಕ್ಕೊಯ್ದು ತನ್ನ ದುಃಖವನ್ನು ಹೇಳಿಕೊಂಡನು. ಕುಬೇರನು ಹೇಳುತ್ತಾನೆ.

'ಎಲೈ ಸಹೋದರನೇ ! ಅವಳು ಯಾರಿಗಾದರೂ ಸೆರೆ ಸಿಕ್ಕಿದಳೋ? ತಾನೇ ಹೊರಟುಹೋದಳೋ? ಯಾವನಾದರೂ ಹಗೆಯು ಕೊಂದನೋ? ಎಂತೂ ನನ್ನ ಮನವನ್ನಳಾದ ಕಾಂತೆಯಾದ ಚಿತ್ರಸೇನೆಯನ್ನು ನೋಡುತ್ತಿಲ್ಲವು. ಎಲೈ ಬಂಧುವೇ ನನಗೆ ಈ ಕಡುಸಂಕಟವು ಇನಿಯಳಗಲುವಿಕೆಯಿಂದುಂಟಾದುದು.

ಪ್ರಾಣಾನ್ ವೈ ಘಾತಯಿಷ್ಯಾಮಿ ಅನಾಸಾದ್ಯ ಚ ವಲ್ಲಭಾಮ್ ।

॥ ವಿಭೀಷಣ ಉವಾಚ ॥

ಆನಯಿಷ್ಯಾಮಿ ತೇ ಕಾಂತಾಂ ಯತ್ರ ತತ್ರ ಸ್ಥಿತಾಂ ವಿಭೋ ॥ ೬೩ ॥

ಕಃ ಸಮರ್ಥೋಽಧುನಾಸ್ಮಾಕಂ ಹರ್ತುಂ ನಾಥ ತೃಣಸ್ಯ ಚ ।
ತತೋ ವಿಭೀಷಣಸ್ತತ್ರ ನಾಡೀಜಂಘಾಂ ನಿಶಾಚರೀಮ್ ॥ ೬೪ ॥

ಭೃಶಂ ಸಂಕಲ್ಪಯಾಮಾಸ ನಾನಾಮಾಯಾಗರೀಯಸೀಮ್ ।
ಧನದಸ್ಯ ಚ ಯಾ ಕಾಂತಾ ಚಿತ್ರಸೇನಾಭಿಧಾನತಃ ॥ ೬೫ ॥

ಸಾ ಚ ಕೇನ ಹೃತಾ ಲೋಕೇ ಮಾನಸೇ ಸರಸಿ ಸ್ಥಿತಾ ।
ತಾಂ ಚ ಜಾನೀಹಿ ಸಂವೀಕ್ಷ್ಯ ದೇವರಾಜಾದಿವೇಶ್ಮಸು ॥ ೬೬ ॥

---

೬೩. ಈ ವಲ್ಲಭೆಯು ಸಿಕ್ಕದಿದ್ದರೆ, ಹರಣಗಳನ್ನಾದರೂ ಕಳೆದುಕೊಳ್ಳುವೆನು;' ಎಂದು ಕುಬೇರನು ಹೇಳಿದನು. ವಿಭೀಷಣನು ಹೇಳುತ್ತಾನೆ.

'ಎಲೈ ಸ್ವಾಮಿಯೇ! ನಿನ್ನ ಮಡದಿಯು ಎಲ್ಲಿಯಾದರೂ ಇರಲಿ; ಆಕೆಯನ್ನು ಬರಮಾಡಿಸುವೆನು.

೬೪-೬೬. ಎಲೈ ನಾಥನೇ! ಈಗ ನಮ್ಮದಾದ ಒಂದು ಹುಲ್ಲನ್ನು ಅಪಹರಿಸಲು ಯಾರು ಸಮರ್ಥರು?' ಎಂದು ಹೇಳಿ ವಿಭೀಷಣನು ಬಳಿಕ ಅಲ್ಲಿ ನಾಡೀಜಂಘೆಯೆಂಬ ಅನೇಕ ಮಾಯಾವಿದ್ಯೆಗಳಿಂದ ಹಿರಿಯಳಾದ ರಕ್ಕಸಿಯನ್ನು ಬಹುವಾಗಿ ಹೊಗಳಿದನು. 'ಎಲೌ ನಾಡೀಜಂಘೆಯೇ! ಕುಬೇರನ ಚಿತ್ರಸೇನೆಯೆಂಬ -ಹೆಸರಿನ ಮಡದಿಯಾವಳೋ, ಅವಳು ಮಾನಸಸರೋವರದಲ್ಲಿದ್ದವಳು ಲೋಕದಲ್ಲಿ ಯಾವನಿಂದ ಅಪಹರಿಸಲ್ಪಟ್ಟಳು? ಅವಳನ್ನು ದೇವೇಂದ್ರನೇ ಮೊದಲಾದವರ ಸೌಧಗಳಲ್ಲರಸಿ, ತಿಳಿಯುವವಳಾಗು;' ಎಂದು ಹೇಳಿದನು.

ತತೋ ನಿಶಾಚರೀ ಭೂಪ ಕೃತ್ವಾ ಮಾಯಾಮಯಂ ವಪುಃ ।
ಜಗಾಮ ತ್ರಿದಿವಂ ಶೀಘ್ರಂ ದೇವರಾಜಾದಿವೇಶ್ಮಸು ॥ ೬೭ ॥

ಯಯಾ ದೃಷ್ಟ್ಯಾ ಕ್ಷಣಂ ದೃಷ್ಟೋ ಮೋಹಂ ಯಾಸ್ಯತಿ ಚೋಪಲಃ ।
ಯಸ್ಯಾಃ ಸಮಂ ಧ್ರುವಂ ರೂಪಂ ವಿದ್ಯತೇ ನ ಚರಾಚರೇ ॥ ೬೮ ॥

ಏತಸ್ಮಿನ್ನೇವ ಕಾಲೇ ಚ ದೇವರಾಜೋಽಪಿ ಪುತ್ರಕ ।
ಸಂಪ್ರಾಪ್ತೋ ಮಂದರಾಚ್ಛೀಘ್ರಂ ಪ್ರೇರಿತಶ್ಚಿತ್ರಸೇನಯಾ ॥ ೬೯ ॥

ಗೃಹೀತುಂ ದಿವ್ಯಪುಷ್ಪಾಣಿ ನಂದನಪ್ರಭವಾಣಿ ಚ ।
ತತ್ರ ಪಶ್ಯತ ತಾಂ ತನ್ವೀಂ ನಿಜಸ್ಥಾನೇ ಸಮಾಗತಃ ॥ ೭೦ ॥

---

೬೭. ಎಲೈ ಸಹಸ್ರಾನೀಕರಾಯನೇ ! ಕೇಳು ಬಳಿಕ ಆ ರಾಕ್ಷಸಿಯು ಮಾಯಾವಿದ್ಯೆಯಿಂದಾದ ಒಡಲನ್ನು ತಾಳಿ, ದೇವೇಂದ್ರನೇ ಮೊದಲಾದವರ ಮನೆಗಳಲ್ಲಿ ಅರಸಲು, ಬೇಗನೆ ಸಗ್ಗಕ್ಕೆ ತೆರಳಿದನು.

೬೮. ಯಾವ ಮಾಯಾಶರೀರವನ್ನು ತಾಳಿದ ಈ ನಾಡೀಜಂಘೆಯು ಕಣ್ಣಿಂದ ನೋಡಲ್ಪಟ್ಟ ಕಲ್ಲೂ ಅವಳಲ್ಲಿ ಮೋಹವನ್ನು ಹೊಂದುವುದು. ಈ ಚರಾಚರಾತ್ಮಕವಾದ ಪ್ರಪಂಚದಲ್ಲಿ ಯಾರಿಗೂ ಈ ವ್ಯಕ್ತಿಗೆ ಸಮವಾದ ರೂಪವು ಇರಲಿಲ್ಲವು.

೬೯-೭೦. ಎಲೈ ಪುತ್ರಕನೇ ! ಕೇಳು ; ಇಷ್ಟು ಹೊತ್ತಿನಲ್ಲಿ ಚಿತ್ರಸೇನೆ ಯಿಂದ ಪ್ರೇರಿತನಾಗಿ, ಮಂದರಪರ್ವತದಿಂದ ಬೇಗನೆ ಅಲ್ಲಿಗೆ ನಂದನವನದಲ್ಲಿ ಬಿಟ್ಟಿರುವ ಶ್ರೇಷ್ಠವಾದ ಹೂಗಳನ್ನು ಅಪಚಯಮಾಡಲು ಬಂದವನು ಅಲ್ಲಿ ಆ ಅಸಿಯಳನ್ನು ಕಂಡನು.

ಅತೀವ ರೂಪಸಂಪನ್ನಾಂ ಗೀತಗಾನಪರಾಯಣಾಮ್ ।
ತಾಂ ವೀಕ್ಷ್ಯ ದೇವರಾಜೋಽಪಿ ಸ ಕಾಮವಶಗೋಽಭವತ್ ॥ ೭೧ ॥
ತತಃ ಸಂಪ್ರೇರಯಾಮಾಸ ದೇವವೈದ್ಯೌ ಸುರಾಧಿಪಃ ।
ತಸ್ಯಾಃ ಪಾರ್ಶ್ವೇ ಸಮಾನೇತುಂ ಧ್ರುವಂ ಚಾಂತಃಪುರೇ ತದಾ ॥ ೭೨ ॥
ದೇವವೈದ್ಯೌ ತದಾಗತ್ಯ ಜಲ್ಪತೌ ಚಾಗ್ರತಃ ಸ್ಥಿತೌ ।
ಆಗಚ್ಛ ಭವ ತನ್ವಂಗಿ ದೇವರಾಜಸಮೀಪಗಾ ॥ ೭೩ ॥
ಇತ್ಯುಕ್ತಾ ಸಾ ತದಾ ತಾಭ್ಯಾಂ ಜಗಾದ ಮಧುರಾಕ್ಷರಮ್ ।

॥ ನಾಡೀಜಂಘೋವಾಚ ॥

ದೇವರಾಜಃ ಸ್ವಯಂ ಯನ್ಮೇ ಪಾರ್ಶ್ವಂ ಚಾತ್ರಾಗಮಿಷ್ಯತಿ ॥ ೭೪ ॥
ತಸ್ಯ ವಾಚ್ಯಂ ಚ ಕರ್ತವ್ಯಂ ನಾನ್ಯಥಾ ಸರ್ವಥಾ ಮಯಾ ।
ತೌ ತದಾ ವಾಸವಂ ಗತ್ವಾ ಊಚುಸ್ತದ್ವಚನಂ ಶುಭಮ್ ॥ ೭೫ ॥

---

೭೧. ಕಡುಚೆಲುವಿನಿಂದ ಕೂಡಿದ, ಕೃತಿಗಳನ್ನು ಹಾಡಲು ತೊಡಗಿದ, ಅವಳನ್ನು ಕಂಡು, ಆ ದೇವೇಂದ್ರನೂ ಕಾಮಂಗೆ ಅಧೀನನಾದವನಾದನು.

೭೨. ಸುರಾಧಿಪನು ಬಳಿಕ ಅವಳನ್ನು ಅಂತಃಪುರಕ್ಕೆ ಹೇಗಾದರೂ ಕರೆ ತರಲು, ಅವಳ ಹತ್ತಿರಕ್ಕೆ ದೇವವೈದ್ಯರಾದ ಅಶ್ವಿನೀದೇವತೆಗಳನ್ನು ಕಳುಹಿಸಿ ಕೊಟ್ಟನು.

೭೩–೭೫. ಆ ದೇವವೈದ್ಯರೂ ಆಗ ಅಲ್ಲಿಗೆ ಬಂದು, ಇದಿರಿನಲ್ಲಿ ಇಂತು ಮಾತ ನಾಡುತ್ತಾ ಇದ್ದರು. 'ಎಲೌ ಅಸಿಯಳೇ! ನೀನು ದೇವತೆಗಳೊಡೆಯನ ಸನಿಪ ದಲ್ಲಿ ಇರುವಳಾಗು; ಬಾ;' ಎಂದು ಅವರಿಂದ ಹೇಳಲ್ಪಟ್ಟ ಅವಳು ಇಂತು ಇನಿಮಾತನ್ನು ನುಡಿದಳು. ನಾಡೀಜಂಘೆಯು ಹೇಳುತ್ತಾಳೆ :—

'ಎಲೈ ಅಶ್ವಿನಿಗಳೇ! ಕೇಳಿರಿ; ದೇವರಾಜನು ತಾನೇ ಇಲ್ಲಿಗೆ ನನ್ನ ಸನಿ ಹಕ್ಕೆ ಬಂದರೆ, ಅವನು ಹೇಳಿದುವನ್ನೆಸಗುವೆನು. ಹಾಗಿಲ್ಲದಿದ್ದಲ್ಲಿ ನಾನೇನೂ ಅವನ ಮಾತನ್ನು ನಡೆಸುವುದಿಲ್ಲವು;' ಎಂದಳು. ಅವರೂ ಆಗ ದೇವೇಂದ್ರನ ಬಳಿಗೆ ಹೋಗಿ, ಆ ಹಿತದ ನುಡಿಯನ್ನುರುಹಿದರು.

॥ ವಾಸವ ಉವಾಚ ॥

ಸಮಾದೇಶಯ ತನ್ವಂಗಿ ಕಿಂ ಕರ್ತವ್ಯಂ ಮಯಾಧುನಾ ।
ಸರ್ವದಾ ದಾಸಭೂತಸ್ತೇ ಯಾಚಸೇ ತದ್ದದಾಮ್ಯಹಮ್ ॥ ೭೬ ॥

॥ ತನ್ವಂಗ್ಯುವಾಚ ॥

ಯಾಚಿತಂ ಯದಿ ಮೇ ನಾಥ ದಾಸ್ಯಸೀತಿ ನ ಸಂಶಯಃ ।
ತತೋಽಹಂ ವಶಗಾ ದೇವ ಭವಿಷ್ಯಾಮಿ ನ ಸಂಶಯಃ ॥ ೭೭ ॥

ಅದ್ಯ ತ್ವಂ ದರ್ಶಯಾಸ್ಮಾಕಂ ಸರ್ವಃ ಕಾಂತಾಪರಿಗ್ರಹಃ ।
ಮಮ ರೂಪಸಮಾ ರಾಮಾ ಕಾಂತಾ ತೇ ಚಾಸ್ತಿ ವಾ ನ ವಾ ॥ ೭೮ ॥

ತಯಾ ಚೋಕ್ತೇ ಚ ವಚನೇ ಸ ಭೂಯೋ ವಾಸವೋಽವದತ್ ।
ದರ್ಶಯಿಷ್ಯಾಮಿ ಸರ್ವಂ ತೇ ದೇವಿ ಕಾಂತಾಪರಿಗ್ರಹಮ್ ॥ ೭೯ ॥

ಇಂದ್ರನು ಅವಳ ಬಳಿಗೆ ಬಂದು ಹೇಳುತ್ತಾನೆ :-

೭೬. 'ಎಲೌ ಅಸಿಯಳೇ ! ಈಗ ನಾನೆಸಗಬೇಕಾದುದೇನು ? ಅಪ್ಪಣೆ ಮಾಡು; ನಾನು ಯಾವಾಗಲೂ ನಿನಗೆ ಆಳಾಗಿರುವೆನು. ನೀನು ಯಾವುದನ್ನು ಬೇಡಿದರೂ, ಅದನ್ನು ನಾನು ಕೊಡುವೆನು;' ಎಂದನು.

೭೭. 'ಎಲೈ ದೇವರಾಜನೇ ! ನೀನು ನಾನು ಬೇಡಿದುದನ್ನು ಕೊಡುವ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವಷ್ಟೆ ! ಹಾಗಾದರೆ, ನಾನೂ ಎಲೈ ಸ್ವಾಮಿಯೇ ! ನಿನ್ನ ವಶಳಾಗಿರುವೆನು. ಈ ವಿಷಯದಲ್ಲೇನೂ ಸಂಶಯವಿಲ್ಲವು.

೭೮. ಇಂದು ನನಗೆ ನೀನು ಪರಿಗ್ರಹಿಸಿರುವ ಕಾಂತೆಯರನ್ನೆಲ್ಲಾ ತೋರಿಸು; ನಿನಗೆ ನನ್ನ ಬೆಡಗಿಗೆಣೆಯಾದ ಮಡದಿಯಿರುವಳೋ, ಇಲ್ಲವೋ; ನೋಡುವೆನು;' ಎಂದಳು.

೭೯. ಅವಳು ಇಂತು ನುಡಿಯಲು ಇಂದ್ರನು ಮತ್ತೂ ಹೇಳಿದನು–'ಎಲೌ ದೇವಿಯೇ ! ನಿನಗೆ ನಾನು ಪರಿಗ್ರಹಿಸಿರುವ ಕಾಂತೆಯರನ್ನೆಲ್ಲಾ ಕಾಣಿಸುವೆನು ;' ಎಂದನು.

ಸ ಸರ್ವಂ ದರ್ಶಯಾಮಾಸ ವಾಸವೋಽಂತಃಪುರಂ ತದಾ ।
ತತೋ ಜಗಾದ ಭೂಯಃ ಸಃ ಕಿಂಚಿದ್ಗೂಢಂ ಮಮ ಸ್ಥಿತಮ್ ॥ ೮೦ ॥

ವಿಮುಚ್ಯೈತಾಂ ಚ ಯುವತೀಂ ಸರ್ವಂ ತೇ ದರ್ಶಿತಂ ಮಯಾ ।
ಸಾ ರಾಮಾ ಮಂದರೇ ಚಾಸ್ತಿ ಅವಿಜ್ಞಾತಾ ಸುರಾಸುರೈಃ ॥ ೮೧ ॥

ತಾಂ ಚ ತೇ ದರ್ಶಯಿಷ್ಯಾಮಿ ನಾಖ್ಯೇಯಂ ಕಸ್ಯಚಿತ್ತ್ವಯಾ ।
ತತಃ ಸ ದೇವರಾಜೋಽಪಿ ತಯಾ ಸಾರ್ಧಂ ಚ ಪುತ್ರಕ ॥ ೮೨ ॥

ಗಚ್ಛತ್ಯೇವಾಂಬರೇ ಭೂಪ ಮಂದರಂ ಪ್ರತಿ ಭೂಧರಮ್ ।
ತಸ್ಯ ವೈ ಗಚ್ಛಮಾನಸ್ಯ ವಿಮಾನೇನಾರ್ಕವರ್ಚಸಾ ।
ದರ್ಶನಂ ನಾರದಸ್ಯಾಪಿ ತಸ್ಯ ಜಾತಂ ತದಾಽಂಬರೇ ॥ ೮೩ ॥

---

೮೦. ಆ ವಾಸವನು ಆಗ ತನ್ನ ಅಂತಃಪುರವನ್ನೆಲ್ಲಾ ಆ ನಾಡೀಜಂಘಳಿಗೆ ತೋರಿಸಿದನು. ಬಳಿಕ ಅವಳಿಗೆ ಮತ್ತು ಹೇಳಿದನು! 'ಎಲೌ ತನ್ವಂಗಿ, ಇನ್ನೂ ಸ್ವಲ್ಪ ಗುಟ್ಟಿರುವುದು.

೮೧. ಓರ್ವ ಯುವತಿಯನ್ನುಳಿದು, ಎಲ್ಲವೂ ನಿನಗೆ ತೋರಿಸಲ್ಪಟ್ಟಿತು. ಆ ಬೆಡಗಿಯು ಸುರಾಸುರರಿಗೆ ತಿಳಿಯದಂತೆ ಮಂದರಪರ್ವತದಲ್ಲಿರುತ್ತಾಳೆ.

೮೨-೮೩. ಅವಳನ್ನೂ ನಿನಗೆ ತೋರಿಸುವೆನು. ಈ ಸಂಗತಿಯನ್ನು ನೀನು ಯಾರಿಗೂ ಹೇಳಕೂಡದು;' ಎಂದು ಹೇಳಿ, ಬಳಿಕ ಆ ದೇವೇಂದ್ರನು ಅವಳೊಡನೆ ಮಂದರಪರ್ವತಕ್ಕೆ ಆಕಾಶದಲ್ಲಿ ವಿಮಾನದಿಂದ ಹೋಗುತ್ತಿದ್ದನು. ಸೂರ್ಯನಂತೆ ಪ್ರಕಾಶಿಸುತ್ತಿರುವ ವಿಮಾನದಿಂದ ಇಂದ್ರನು ಹೋಗುತ್ತಿರುವಾಗ, ಅವನಿಗೆ ಆಕಾಶದಲ್ಲಿ ದೇವಮುನಿಗಳಾದ ನಾರದರ ದರ್ಶನವಾಯಿತು.

ತಂ ವೀಕ್ಷ್ಯ ನಾರದಂ ವೀರೋ ಲಜ್ಜಮಾನೋಽಪಿ ವಾಸವಃ ॥ ೬೪ ॥

ನಮಸ್ಕೃತ್ಯ ಜಗಾದೋಚ್ಚೈಃ ಕ್ವ ಯಾಸ್ಯಸಿ ಮಹಾಮುನೇ ।
ತತಃ ಕೃತಾಶೀಃ ಸ ಮುನಿರವದತ್ತ್ರಿದಿವೇಶ್ವರಮ್ ॥ ೬೫ ॥

ಗಚ್ಛಾಮಿ ಮಾನಸೇ ಸ್ನಾತುಂ ದೇವರಾಜ ಸುಖೀ ಭವ ।
ನಾಡೀಜಂಘೇಽಸ್ತಿ ಕುಶಲಂ ರಾಕ್ಷಸಾನಾಂ ಮಹಾತ್ಮನಾಮ್ ॥ ೬೬ ॥

ವಿಭೀಷಣೋಽಪಿ ತೇ ಭ್ರಾತಾ ಸುಖೀ ತಿಷ್ಠತಿ ಸರ್ವದಾ ।
ಏವಮುಕ್ತಾ ಚ ಮುನಿನಾ ಸಾ ಕೃಷ್ಣವದನಾಽಭವತ್ ॥ ೬೭ ॥

ವಿಸ್ಮಿತೋ ದೇವರಾಜೋಽಪಿ ಛದ್ಮಿತೋ ದುಷ್ಟಯಾನಯಾ ।
ನಾರದೋಽಪಿ ಗತಃ ಸ್ನಾತುಂ ಕೈಲಾಸೇ ಮಾನಸಂ ಸರಃ ॥ ೬೮ ॥

೬೪–೬೫. ಕಲಿಯಾದ ಮಹೇಂದ್ರನು ಆ ನಾರದನನ್ನು ಕಂಡು, ನಾಚಿಕೆಗೊಳ್ಳುತ್ತಿರುವವನಾದರೂ, ಪೊಡಮಟ್ಟು 'ಎಲೈ ಮಹಾಮುನಿಯೇ! ಎಲ್ಲಿಗೆ ಹೋಗುವೆ?' ಎಂದು ಗಟ್ಟಿಯಾಗಿ ಕೇಳಿದನು. ಸಮನಂತರದಲ್ಲಿ ಆ ಮುನಿಯು ತ್ರಿದಿವಕ್ಕೆ ಒಡೆಯನಾದ ಮಹೇಂದ್ರನಿಗೆ ಹರಸಿ ಇತೆಂದನು.

೬೬–೬೭. 'ಎಲೈ ದೇವರಾಜನೇ! ಮಾನಸಸರೋವರದಲ್ಲಿ ಮಿಾಯಲು ಹೋಗುತ್ತಿರುವೆನು. ಸೊಗದಿಂದಿರು.' 'ಎಲೌ ನಾಡಿಜಂಘೆಯೇ! ಹಿರಿಯ ರಕ್ಕಸರಿಗೆ ಕುಶಲವೇ? ನಿನ್ನ ಅಣ್ಣನಾದ ವಿಭೀಷಣನೂ ಯಾವಾಗಲೂ ಸೊಗದಿಂದಿರುವನೇ?' ಇಂತು ಮುನಿಯು ಕೇಳಲು, ಆ ನಾಡೀಜಂಘೆಯು ಕಂದಿದ ಮುಖದವಳಾದಳು.

೬೮. ದುಷ್ಟೆಯಾದ ಇವಳಿಂದ ಮೋಸಗೊಂಡ ದೇವರಾಜನೂ ಅಚ್ಚರಿಗೊಂಡನು. ನಾರದನೂ ಸ್ನಾನಮಾಡಲು ಕೈಲಾಸಪರ್ವತದಲ್ಲಿ ಮಾನಸಸರೋವರಕ್ಕೆ ಹೋದನು.

ಇಂದ್ರಸ್ತಾಂ ಹಂತುಕಾಮೋಽಪಿ ಅಗಚ್ಛನ್ಮಂದರಾಚಲಮ್ ।
ತತ್ರಾಶ್ರಮೋಽಸ್ತಿ ವೈ ನೂನಂ ತೃಣಬಿಂದೋರ್ಮಹಾತ್ಮನಃ ॥ ೮೯ ॥

ಕ್ಷಣಂ ವಿಶ್ರಮ್ಯ ತತ್ರೈವ ಧೃತ್ವಾ ಕೇಶೇಷು ರಾಕ್ಷಸೀಮ್ ।
ಹಂತು ಮಿಚ್ಛತಿ ದೇವೇಶೋ ನಾಡೀಜಂಘಾಂ ನಿಶಾಚರೀಮ್ ॥ ೯೦ ॥

ತಾವತ್ತತ್ರ ಸಮಾಯಾತಸ್ತೃಣಬಿಂದುರ್ನಿಜಾಶ್ರಮೇ ।
ಧೃತಾ ಕ್ರಂದತಿ ಸಾ ರಾಜನ್ನಿಂದ್ರೇಣಾಪಿ ನಿಶಾಚರೀ ॥ ೯೧ ॥

ಮಾ ಮಾಂ ರಕ್ಷತಿ ಪುಣ್ಯಾತ್ಮಾ ಹನ್ಯಮಾನಾಂ ಚ ಸಾಂಪ್ರತಮ್ ।
ತದಾಗತ್ಯ ಮುನಿಶ್ರೇಷ್ಠಸ್ತೃಣಬಿಂದುರ್ಮಹಾತಪಾಃ ॥ ೯೨ ॥

೮೯–೯೦. ಇಂದ್ರನು ಅವಳನ್ನು ಕೊಲ್ಲಲೆಳಸಿದವನಾದರೂ, ಮಂದರಾಚಲಕ್ಕೆ ಬಂದನು. ಅಲ್ಲಿ ಮಹಾತ್ಮನಾದ ತೃಣಬಿಂದುಮುನಿಯ ಆಶ್ರಮವಿದ್ದಿತು. ಅಲ್ಲಿ ಚಣಕಾಲ ವಿಶ್ರಮಿಸಿಕೊಂಡು, ದೇವೇಂದ್ರನು ನಿಶಾಚರಿಯಾದ ನಾಡೀಜಂಘೆಯೆಂಬ ರಕ್ಕಸಿಯನ್ನು ಮುಡಿಗಳಲ್ಲಿ ಹಿಡಿದು, ಕೊಲ್ಲಲು ಎಳಸಿದನು.

೯೧. ಎಲೈ ಸಹಸ್ರಾನೀಕನೇ ! ಕೇಳು ; ಅನಿತರೊಳ್ ಅಲ್ಲಿ ತೃಣಬಿಂದುವು ಬಂದನು. ತನ್ನ ಆಶ್ರಮದಲ್ಲಿ ಇಂದ್ರನಿಂದ ಮುಡಿಯಲ್ಲಿ ಹಿಡಿದಿರುವ ರಕ್ಕಸಿಯು ಇಂತು ದುಃಖದಿಂದ ಕೂಗಿದಳು.

೯೨–೯೪. ' ಈಗ ಕೊಲ್ಲಲ್ಪಡುತ್ತಿರುವ ನನ್ನನ್ನು ಪುಣ್ಯಾತ್ಮನು ಸಲಹುವದಿಲ್ಲವೇ ?' ಆಗ ಮಹಾತಪಸಿಯಾದ, ಕಿತ್ತಡಿಗಳಗ್ಗಳೆಯನೂ ಆದ ಆ ತೃಣಬಿಂದುವು ಬಂದು, ಇವರಿರ್ವರೆಡೆಯಲ್ಲಿ ನಿಂತು, ' ಅಯ್ಯಾ ! ಈ ಸ್ತ್ರೀಯನ್ನು ಕಾಡಿನಲ್ಲಿ ಬಿಡು ;'

ಜಗಾದ ಪುರತಃ ಸ್ಥಿತ್ವಾ ಮುಂಚೇಮಾಂ ಮಹಿಲಾಂ ವನೇ ।
ಜಲ್ಪತ್ಯೇವಂ ಮುನೌ ತಸ್ಮಿನ್ ಮಹೇಂದ್ರೇಣ ನಿಶಾಚರೀ ॥ ೯೩ ॥

ವಜ್ರೇಣ ನಿಹತಾ ವತ್ಸ ಕೋಪಯುಕ್ತೇನ ಚೇತಸಾ ।
ಸ ಚುಕೋಪ ಮುನಿಶ್ರೇಷ್ಠಃ ಪ್ರೇಕ್ಷಮಾಣೋ ಮುಹುರ್ಮುಹುಃ ॥ ೯೪ ॥

ಯದೇಷಾ ಯುವತೀ ದುಷ್ಟಾ ನಿಹತಾ ಮೇ ತಪೋವನೇ ।
ತತಸ್ತ್ವಂ ಮಮ ಶಾಪೇನ ನಿಶ್ಚಯಾತ್ ಸ್ತ್ರೀ ಭವಿಷ್ಯಸಿ ॥ ೯೫ ॥

॥ ಇಂದ್ರ ಉವಾಚ ॥

ಏಷಾ ನಾಥ ಮಹಾದುಷ್ಟಾ ರಾಕ್ಷಸೀ ನಿಹತಾ ಮಯಾ ।
ಅಹಂ ಸ್ವಾಮಿನ್ ಸುರಾಣಾಂ ಚ ಶಾಪಂ ಮಾ ದೇಹಿ ಮೇಽಧುನಾ ॥ ೯೬ ॥

ಎಂದು ಹೇಳಿದನು. ಅಯ್ಯಾ ರಾಯನೇ! ಕೇಳು; ಮುನಿಯು ಇಂತು ನುಡಿಯುತ್ತಿರಲು, ಕನಲ್ದ ಚಿತ್ತದ ಮಹೇಂದ್ರನು ತನ್ನ ಬಜ್ಜರದಿಂದ ರಕ್ಕಸಿಯನ್ನು ಕೊಂದನು. ಅಡಿಗಡಿಗೆ ಇದನ್ನು ನೋಡುತ್ತಿದ್ದ ಆ ಮಾಂಸಿಯು ಕಿಸುಗಣ್ಣಿದನು.

೯೫. 'ಎಲೈ ದುಷ್ಟನೇ! ನನ್ನ ತಪೋವನದಲ್ಲಿ ಈ ಯುವತಿಯನ್ನು ಯಾವ ಕಾರಣದಿಂದ ಕೊಂದೆಯೋ, ಅದರಿಂದ ನನ್ನ ಶಾಪದಿಂದ ನೀನು ಖಂಡಿತವಾಗಿಯೂ ಸ್ತ್ರೀಯಾಗುವೆ;' ಎಂದು ಮುನಿಯು ಶಪಿಸಿದನು. ಆಗ ಇಂದ್ರನು ಹೇಳುತ್ತಾನೆ :—

೯೬. 'ಎಲೈ ಸ್ವಾಮಿಯೇ! ನಾನು ಕಡುದುಷ್ಟೆಯಾದ ಈ ರಕ್ಕಸಿಯನ್ನು ಕೊಂದೆನು. ನಾನು ದೇವರಾಜನು; ನನಗೆ ಈ ಶಾಪವನ್ನು ಕೊಡಬೇಡ;' ಎಂದು ಬೇಡಿದನು. ಮುನಿಯು ಹೇಳುತ್ತಾನೆ :—

॥ ಮುನಿರುವಾಚ ॥

ನೂನಂ ತಪೋವನೇsಸ್ಮಾಕಂ ದುಷ್ಟಾಸ್ತಿಷ್ಠಂತಿ ಸಾಧವಃ ।
ಮಮಾತ್ರ ತಪಸೋ ಭಾವಾನ್ನ ನಿಘ್ನಂತಿ ಪರಸ್ಪರಮ್ ॥ ೯೭ ॥

ಇತ್ಯುಕ್ತೋ ಹಿ ತದಾ ಚೇಂದ್ರೋ ಪ್ರಾಪ್ತಃ ಸ್ತ್ರೀತ್ವಂ ನ ಸಂಶಯಃ ।
ಜಗಾಮ ತ್ರಿದಿವಂ ಭೂಪ ಹತಶಕ್ತಿಪರಾಕ್ರಮಃ ॥ ೯೮ ॥

ನಾಸೀನೋ ಹಿ ಭವತ್ಯೇವ ಸರ್ವದಾ ದೇವಸಂಸದಿ ।
ದೇವಾ ದುಃಖಂಸಮಾಪನ್ನಾ ದೃಷ್ಟ್ವಾ ಸ್ತ್ರೀತ್ವಂ ಗತಂ ಹರಿಮ್ ॥ ೯೯ ॥

ತತೋ ದೇವಗಣಾಃ ಸರ್ವೇ ವಾಸವೇನ ಸಮನ್ವಿತಾಃ ।
ಜಗ್ಮುಶ್ಚ ಬ್ರಹ್ಮಸದನಂ ತಥಾ ದೀನಾ ಶಚೀ ತದಾ ॥ ೧೦೦ ॥

---

೯೭. 'ಅಯ್ಯಾ ದೇವೇಂದ್ರನೇ ! ಕೇಳು ; ನಮ್ಮ ತಪೋವನದಲ್ಲಿ ದುಷ್ಟ ರಾದವರೂ ಸಾಧುಗಳಾಗಿ ಇರುತ್ತಾರೆ. ಇಲ್ಲಿ ಅವರು ನನ್ನ ತಪದ ಮೈಮೆಯಿಂದ ಒಬ್ಬರನ್ನೊಬ್ಬರು ಹಿಂಸಿಸುವುದಿಲ್ಲವು;' ಎಂದು ನುಡಿದನು.

೯೮. ಇಂತು ಮುನಿಯು ಶಪಿಸಲು, ಆಗ ಇಂದ್ರನೂ ಸ್ತ್ರೀತ್ವವನ್ನು ಹೊಂದಿದನು; ಇದರಲ್ಲಿ ಸಂಶಯವಿಲ್ಲವು. ಎಲೈ ಸಹಸ್ರಾನೀಕರಾಯನೇ ! ಕೇಳು ; ಇಂದ್ರನು ತನ್ನ ಪನ್ನತಿಕೆಯನ್ನು ಕಳೆದುಕೊಂಡು, ಸ್ವರ್ಗಕ್ಕೆ ಹೋದನು.

೯೯. ಇಂತು ದುಃಸ್ಥಿತಿಯನ್ನು ಹೊಂದಿದ ಇಂದ್ರನು ದೇವತೆಗಳ ಒಡ್ಡೋಲಗದಲ್ಲಿ ಯಾವಾಗಲೂ ಕುಳಿತುಕೊಳ್ಳುವುದೇ ಇಲ್ಲವು. ದೇವತೆಗಳು ಹೆಣ್ಣಾದ ಇಂದ್ರನನ್ನು ಕಂಡು, ದುಃಖಗೊಂಡರು.

೧೦೦. ಬಳಿಕ ದೇವಗಡಣವೆಲ್ಲವೂ ವಾಸವನೊಡಗೂಡಿ, ಬ್ರಹ್ಮನ ಬೀಡಾದ ಸತ್ಯಲೋಕಕ್ಕೆ ಹೋದರು. ಆಗ ಇಂದ್ರನ ಮಡದಿಯಾದ ಶಚೀದೇವಿಯು ಹಾಗೆಯೇ ದೀನೆಯಾದಳು.

ಬ್ರಹ್ಮಾ ಭಗ್ನಸಮಾಧಿಶ್ಚ ತಾವತ್ತತ್ರೈವ ಸಂಸ್ಥಿತಃ ।
ದೇವಾ ಊಚುಶ್ಚ ತೇ ಸರ್ವೇ ವಾಸವೇನ ಸಮನ್ವಿತಾಃ ॥ ೧೦೧ ॥

ತೃಣಬಿಂದೋರ್ಮುನೇಃ ಶಾಪಾದ್ಯಾತಃ ಸ್ತ್ರೀತ್ವಂ ಸುರಾಧಿಪಃ ।
ಸ ಮುನಿಃ ಕೋಪವಾನ್ ಬ್ರಹ್ಮನ್ ನೈವ ಗಚ್ಛತ್ಯನುಗ್ರಹಮ್ ॥ ೧೦೨ ॥

॥ ಪಿತಾಮಹ ಉವಾಚ ॥

ನ ಮುನೇರಪರಾಧಃ ಸ್ಯಾತ್ತೃಣಬಿಂದೋರ್ಮಹಾತ್ಮನಃ ।
ಸ್ವಕರ್ಮಣೋಪಯಾತೋಽಸೌ ಸ್ತ್ರೀತ್ವಂ ಸ್ತ್ರೀವಧಕಾರಣಾತ್ ॥ ೧೦೩ ॥

ಚಕಾರ ದುರ್ನಯಂ ದೇವಾ ದೇವರಾಜೋಽಪಿ ದುರ್ಮದಃ ।
ಜಹಾರ ಚಿತ್ರಸೇನಾಂ ಚ ಸುಗುಪ್ತಾಂ ಧನದಾಂಗನಾಮ್ ॥ ೧೦೪ ॥

---

೧೦೧. ಅಲ್ಲಿ ಅಷ್ಟರಲ್ಲಿಯೇ ನಾಲ್ಮೊಗನೂ ಸಮಾಧಿಗೆ ಭಂಗವುಂಟಾದವನಾಗಿದ್ದನು. ಇಂದ್ರನೊಡಗೂಡಿದ ಆ ದೇವತೆಗಳೆಲ್ಲರೂ ಇಂತು ಹೇಳಿದರು.

೧೦೨. 'ಎಲೈ ಬ್ರಹ್ಮದೇವನೇ! ತೃಣಬಿಂದುಮುನಿಯ ಶಾಪದಿಂದ ದೇವೇಂದ್ರನು ಹೆಣ್ತನವನ್ನೆಯ್ದಿದನು. ಮುಳಿದ ಆ ಮುನಿಯು ಪ್ರಸನ್ನನಾಗುವುದಿಲ್ಲವು. ಎಂದು ಬಿನ್ನವಿಸಿದರು.

ಆಗ ಪಿತಾಮಹನು ಹೇಳಿದನು.

೧೦೩. ಎಲೈ ದೇವತೆಗಳಿರಾ! ಮಹಾತ್ಮನಾದ ಆ ತೃಣಬಿಂದುಮುನಿಯ ಅಪರಾಧವೇನೂ ಇಲ್ಲವು. ಇವನು ಹೆಣ್ಗೊಲೆಗೆಯ್ದುದರಿಂದ ತನ್ನ ಕರ್ಮದಿಂದಲೇ ಹೆಣ್ತನವನ್ನೆಯ್ದಿದನು.

೧೦೪. ಎಲೈ ದೇವತೆಗಳೇ! ಕೇಳಿರಿ; ದುರ್ಮದನಾದ ದೇವರಾಜನೂ ದುರ್ನಡತೆಯನ್ನು ಮಾಡಿದನು. ಚೆನ್ನಾಗಿ ಸುರಕ್ಷಿತಳಾಗಿದ್ದ ಕುಬೇರನ ಮಡದಿಯಾದ ಚಿತ್ರಸೇನೆಯನ್ನಪಹರಿಸಿದನು.

ತತೋ ಜಘಾನ ಯುವತೀಂ ತೃಣಬಿಂದೋಸ್ತಪೋವನೇ ।
ತೇನ ಕರ್ಮವಿಪಾಕೇನ ಸ್ತ್ರೀಭಾವಂ ವಾಸವೋ ಗತಃ ॥ ೧೦೫ ॥

॥ ದೇವಾ ಊಚುಃ ॥

ಯದಯಂ ಕೃತವಾನ್ ಶಂಭೋ ದುರ್ನಯಂ ನಾಥ ದುರ್ಮತಿಃ ।
ತತ್ಸರ್ವಂ ಸಾಧಯಿಷ್ಯಾಮೋ ವಯಂ ಶಚ್ಯಾ ಸಮನ್ವಿತಾಃ ॥ ೧೦೬ ॥

ಕಾಂತಾ ಧನಾಧಿನಾಥಸ್ಯ ಗೂಢಾ ತಿಷ್ಠತಿ ಯಾ ವಿಭೋ ।
ತಾಂ ಚ ತಸ್ಯ ಚ ದಾಸ್ಯಾಮಃ ಸರ್ವೇ ಕೃತ್ವಾ ಪರಾಂ ಮತಿಮ್ ॥ ೧೦೭ ॥

ತ್ರಯೋದಶ್ಯಾಂ ಚತುರ್ದಶ್ಯಾಂ ದೇವರಾಜಃ ಶಚೀಯುತಃ ।
ನಂದನೇ ಚಾರ್ಚನಂ ಕರ್ತಾ ಸರ್ವದಾ ಯಕ್ಷರಕ್ಷಸಾಮ್ ॥ ೧೦೮ ॥

---

೧೦೫. ಅನಂತರದಲ್ಲಿ ತೃಣಬಿಂದುಮುನಿಯ ಆಶ್ರಮದಲ್ಲಿ ಯುವತಿಯಾದ ನಾಡೀಜಂಘೆಯನ್ನು ಕೊಂದನು. ಆ ದುಷ್ಕರ್ಮ ಪರಿಣಾಮದಿಂದ ಇಂದ್ರನು ಪೆಣ್ತನವನ್ನು ಹೊಂದಿದನು ;' ಎಂದು ಚತುರ್ಮುಖನು ಹೇಳಿದನು.

ದೇವತೆಗಳು ಹೇಳಿದರು :—

೧೦೬. 'ಎಲೈ ಲೋಕಕಲ್ಯಾಣಕರನಾದ ಸ್ವಾಮಿಯೇ ! ಈ ತಿಳಿಗೇಡಿಯು ಯಾವ ಕೆಟ್ಟ ಕೆಲಸವನ್ನು ಮಾಡಿದನೋ, ಅವೆಲ್ಲವನ್ನೂ ನಾವು ಶಚೀದೇವಿಯೊಡಗೂಡಿದವರಾಗಿ ಸರಿಪಡಿಸುವೆವು.

೧೦೭. ಎಲೈ ವಿಭುವೇ ! ಧನಪತಿಯ ಯಾವ ಪ್ರಿಯೆಯು ಗುಟ್ಟಾಗಿರುವಳೋ, ಅವಳಿಗೆ ನಾವೆಲ್ಲರೂ ವಿವೇಕವನ್ನುಂಟುಮಾಡಿ, ಅವನಿಗೆ ಅವಳನ್ನು ಹಿಂಪಕ್ಕೆ ಕೊಡುವೆವು.

೧೦೮. ದೇವೇಂದ್ರನು ತನ್ನ ಮಡದಿಯಾದ ಶಚೀದೇವಿಯೊಡಗೂಡಿ, ಇನ್ನು ಮುಂದೆ ಯಾವಾಗಲೂ ತ್ರಯೋದಶೀ ಮತ್ತು ಚತುರ್ದಶೀ—ಈ ತಿಥಿಗಳಲ್ಲಿ ನಂದನ ವನದಲ್ಲಿ ಯಕ್ಷ ರಾಕ್ಷಸರನ್ನು ಪೂಜಿಸುವನು ;' ಎಂದು ಅರಿಕೆ ಮಾಡಿದರು.

ತತಃ ಶಚೀ ತದಾ ಗೂಢಂ ಚಿತ್ರಸೇನಾಂ ನಿಗೃಹ್ಯ ಚ ।
ಮುಮೋಚ ಯಕ್ಷಭವನೇ ಪ್ರಿಯಕಷ್ಟಾನುವರ್ತಿನೀಮ್ ॥ ೧೦೯ ॥

ಏತಸ್ಮಿನ್ನಂತರೇ ದೂತೋಽಕಾಲೇ ಲಂಕಾಂ ಸಮಾಗತಃ ।
ಧನೇಶಂ ಕಥಯಾಮಾಸ ಚಿತ್ರಸೇನಾಸಮಾಗಮ ಮ್ ॥ ೧೧೦ ॥

ಶಚ್ಯಾ ಸಾಕಂ ಸಮಾಯಾತಾ ತವ ಕಾಂತಾ ಧನಾಧಿಪ ।
ಸಖೀಂ ಸ್ವಮತುಲಾಂ ಪ್ರಾಪ್ಯಾ ಚರಿತಾರ್ಥಾ ಬಭೂವ ಸಾ ॥ ೧೧೧ ॥

ಧನೇಶೋಽಪಿ ಕೃತಾರ್ಥೋಽಭೂಜ್ಜಗಾಮ ನಿಜವೇಶ್ಮನಿ ।

॥ ದೇವಾ ಊಚುಃ ॥

ಸರ್ವಮೇತತ್ಕೃತಂ ಬ್ರಹ್ಮನ್ ಪ್ರಸಾದಾತ್ತೇ ನ ಸಂಶಯಃ ॥ ೧೧೨ ॥

---

೧೦೯. ಬಳಿಕ ಶಚಿಯು ಆಗ ಚಿತ್ರಸೇನೆಯನ್ನು ಕರೆದುಕೊಂಡು ಗುಟ್ಟಾಗಿ ಬಂದು, ಇನಿಯನ ಕಷ್ಟದಲ್ಲಿಯೂ ಅನುವೃತ್ತಳಾದ ಆ ಚಿತ್ರಸೇನೆಯನ್ನು ಯಕ್ಷನ ಮನೆಯಲ್ಲಿ ಬಿಟ್ಟಳು.

೧೧೦. ಈ ಮಧ್ಯದಲ್ಲಿ ದೂತನು ಆ ಸಮಯದಲ್ಲಿ ಲಂಕೆಗೆ ಬಂದವನು ಕುಬೇರನಿಗೆ ಚಿತ್ರಸೇನಾದೇವಿಯು ಬಂದುದನ್ನರುಹಿದನು.

೧೧೧. 'ಎಲೈ ಐಸಿರಿಯ ಒಡೆಯನೇ! ನಿನ್ನ ಮಡದಿಯು ಶಚಿಯೊಡಗೂಡಿ ಬಂದಳು; ಅವಳು ಎಣೆಯಿಲ್ಲದ ತನ್ನ ಕೆಳದಿಯನ್ನು ಹೊಂದಿ, ಕೃತಾರ್ಥಳಾದಳು.

೧೧೨. ಧನಪತಿಯಾದ ಕುಬೇರನೂ ಕೃತಾರ್ಥನಾಗಿ ತನ್ನ ಮನೆಗೆ ಹೋದನು. ದೇವತೆಗಳು ಪಿತಾಮಹನಿಗೆ ಇಂತು ಬಿನ್ನವಿಸಿದರು.

'ಎಲೈ ಪಿತಾಮಹನೇ! ಇವೆಲ್ಲವೂ ನಿನ್ನನುಗ್ರಹದಿಂದುಂಟಾಯಿತು; ಇದರಲ್ಲಿ ಸಂಶಯವಿಲ್ಲವು.

ಪತಿಹೀನಾ ಯಥಾ ನಾರೀ ನಾಥಹೀನಂ ಯಥಾ ಬಲಮ್ ।
ಗೋಕುಲಂ ಕೃಷ್ಣಹೀನಂ ತು ತಥೇಂದ್ರೇಣಾಮರಾವತೀ ॥ ೧೧೩ ॥

ಜಪಕ್ರಿಯಾ ತಪೋ ದಾನಂ ಜ್ಞಾನಂ ತೀರ್ಥಂ ಚ ವೈ ಪ್ರಭೋ ।
ವಾಸವಸ್ಯ ಸಮಾಖ್ಯಾಹಿ ಯತಃ ಸ್ತ್ರೀತ್ವಾದ್ವಿಮುಚ್ಯತೇ ॥ ೧೧೪ ॥

॥ ಬ್ರಹ್ಮೋವಾಚ ॥

ನಿಹಂತುಂ ಚ ಮುನೇಃ ಶಾಪಂ ನ ಸಮರ್ಥೋಽಹಂ ನ ಶಂಕರಃ ।
ತೀರ್ಥಂ ಚಾನ್ಯನ್ನ ಪಶ್ಯಾಮಿ ಮುಕ್ತ್ಯೈಕಂ ವಿಷ್ಣುಪೂಜನಮ್ ॥ ೧೧೫ ॥

ಅಷ್ಟಾಕ್ಷರೇಣ ಮಂತ್ರೇಣ ಪೂಜನಂ ಚ ಯಥಾ ಜಪಃ ।
ಕರೋತು ವಿಧಿವಚ್ಛಕ್ರಃ ಸ್ತ್ರೀತ್ವಾದ್ಯೇನ ಚ ಮುಚ್ಯತೇ ॥ ೧೧೬ ॥

---

೧೧೩. ಇಂದ್ರನಿಲ್ಲದ ಅಮರಾವತಿಯು ಗಂಡನಿಲ್ಲದ ಹೆಂಗುಸಿನಂತೆ, ಒಡೆಯನಿಲ್ಲದ ಸೇನೆಯಂತೆ, ಕೃಷ್ಣನಿಲ್ಲದ ಗೋಕುಲದಂತೆ ಇರುವುದು.

೧೧೪. ಎಲೈ ಒಡೆಯನೇ! ಇಂದ್ರನು ಈ ಹೆಣ್ತನದಿಂದ ಬಿಡುಗಡೆಯನ್ನೈಯ್ದುವ ಜಪ, ಕರ್ಮ, ತಪಸ್ಸು, ದಾನ, ಜ್ಞಾನ, ತೀರ್ಥ—ಇವನ್ನು ದಯಮಾಡಿ ಹೇಳು;' ಎಂದು ಬೇಡಿದರು. ಬ್ರಹ್ಮನು ಹೇಳುತ್ತಾನೆ.

೧೧೫. 'ಎಲೈ ದೇವತೆಗಳೇ! ಕೇಳಿರಿ; ಮುನಿಯ ಶಾಪವನ್ನು (ನಾಶ ಮಾಡಲು) ಕಳೆಯಲು, ನಾನಾಗಲೀ, ಶಂಕರನಾಗಲೀ ಸಮರ್ಥರಲ್ಲವು; ಇದಕ್ಕೆ ಶ್ರೀ ಮಹಾವಿಷ್ಣುವಿನ ಪೂಜೆಯನ್ನುಳಿದು, ಪೆರತಾವ ತೀರ್ಥವನ್ನೂ ಕಂಡಿಲ್ಲವು.

೧೧೬. ಇಂದ್ರನು ವಿಧ್ಯನುಸಾರವಾಗಿ, ಅಷ್ಟಾಕ್ಷರಮಂತ್ರದಿಂದ ಶ್ರೀಮಹಾವಿಷ್ಣುವಿನ ಪೂಜೆಯನ್ನೂ, ಜಪವನ್ನೂ ಆಚರಿಸಲಿ; ಇದರಿಂದ ಹೆಣ್ತನದಿಂದ ಬಿಡುಗಡೆಯನ್ನೈಯ್ದುವನು.

ಏಕಾಗ್ರಮನಸಾ ಶಕ್ರ ಸ್ನಾತ್ವಾ ಶ್ರದ್ಧಾಸಮನ್ವಿತಃ ।
ಓಂ ನಮೋ ನಾರಾಣಾಯೇತಿ ಜಪ ತ್ವಮಾತ್ಮಶುದ್ಧಯೇ ॥ ೧೧೭ ॥

ಲಕ್ಷದ್ವಯೇ ಕೃತೇ ಜಾಪ್ಯೇ ಸ್ತ್ರೀಭಾವಾನ್ಮೋಕ್ಷ್ಯಸೇ ಹರೇ ।
ಇತಿ ಶ್ರುತ್ವಾ ತಥಾऽಕಾರ್ಷೀದ್ಬ್ರಹ್ಮೋಕ್ತಂ ವಚನಂ ಹರಿಃ ॥ ೧೧೮ ॥

ಸ್ತ್ರೀಭಾವಾಚ್ಚ ವಿನಿರ್ಮುಕ್ತಸ್ತದಾ ವಿಷ್ಣೋಃ ಪ್ರಸಾದತಃ ।

॥ ಮಾರ್ಕಂಡೇಯ ಉವಾಚ ॥

ಇತಿ ತೇ ಕಥಿತಂ ಸರ್ವಂ ವಿಷ್ಣುಮಾಹಾತ್ಮ್ಯಮುತ್ತಮಮ್ ॥ ೧೧೯ ॥

ಮಯಾ ಭೃಗುನಿಯುಕ್ತೇನ ಕುರು ಸರ್ವಮತಂದ್ರಿತಃ ।
ಶೃಣ್ವಂತಿ ಯೇ ವಿಷ್ಣುಕಥಾಮ ಕಲ್ಮಷಾಃ
ವೀರ್ಯಂ ಹಿ ವಿಷ್ಣೋರಖಿಲಕಾರಣಸ್ಯ ।

---

೧೧೭. 'ಎಲೈ ಶಕ್ರನೇ ಕೇಳು; ಸ್ನಾನಮಾಡಿ ಸಶ್ರದ್ಧೆಯೊಡಗೂಡಿ, ಏಕಾಗ್ರಮನದಿಂದ ಆತ್ಮಶುದ್ಧಿಗಾಗಿ 'ಓಂ ನಮೋ ನಾರಾಯಣಾಯ,' ಎಂಬೀ ಮಂತ್ರವನ್ನು ಜಪಿಸು.

೧೧೮. ಎಲೈ ಹರಿಯೇ! ಇದರ ಎರಡುಲಕ್ಷ ಜಪವನೆಸಗಲು ಪೆಣ್ತನದಿಂದ ಮುಕ್ತನಾಗುವೆ;' ಎಂದು ಪಿತಾಮಹನು ಹೇಳಲು, ಅದನ್ನು ಇಂದ್ರನು ಕೇಳಿ, ಆ ಪಿತಾಮಹನ ಮಾತನ್ನು ಹಾಗೆಯೇ ಎಸಗಿದನು.

೧೧೯. ಆಗ ಅವನು ಪೆಣ್ತನದಿಂದ ಶ್ರೀ ಮಹಾವಿಷ್ಣುವಿನ ಅನುಗ್ರಹದಿಂದ ಬಿಡುಗಡೆಯನ್ನು ಹೊಂದಿದನು.' ಮಾರ್ಕಂಡೇಯನು ಹೇಳುತ್ತಾನೆ.

೨೦. ಎಲೈ ರಾಜನೇ! ಕೇಳು; ಇಂತು ನಿನಗೆ ಶ್ರೀ ಮಹಾವಿಷ್ಣುವಿನ ಉತ್ತಮವಾದ ಮಾಹಾತ್ಮ್ಯವೆಲ್ಲವನ್ನೂ ಭೃಗುಮುನಿಗಳ ಅಪ್ಪಣೆಯಂತೆ ಹೇಳಿದೆನು. ಅವೆಲ್ಲವನ್ನೂ ಅಲಸನಾಗದೆ ಆಚರಿಸು. ಚರಾಚರಾತ್ಮಕವಾದ ಸಕಲ ಪ್ರಪಂಚಕ್ಕೆ ಉತ್ಪತ್ತಿ

ತೇ ಮುಕ್ತಪಾಪಾಃ ಪರದಾರಗಾಮಿನೋ
ವಿಶಂತಿ ವಿಷ್ಣೋಃ ಪರಮಂ ಪದಂ ಧ್ರುವಮ್ ॥ ೧೨೦ ॥

॥ ಸೂತ ಉವಾಚ ॥

ಇತಿ ಸಂಬೋಧಿತಸ್ತೇನ ಮಾರ್ಕಂಡೇಯೇನ ಪಾರ್ಥಿವಃ ।
ನರಸಿಂಹಂ ಸಮಾರಾಧ್ಯ ಪ್ರಾಪ್ನುಯಾದ್ವೈಷ್ಣವಂ ಪದಮ್ ।
ಏತತ್ತೇ ಕಥಿತಂ ಸರ್ವಂ ಭರದ್ವಾಜ ಮುನೇ ಮಯಾ ॥ ೧೨೧ ॥

ಸಹಸ್ರಾನೀಕಚರಿತಂ ಕಿಮನ್ಯತ್ಕಥಯಾಮಿ ತೇ ।
ಕಥಾಮಿಮಾಂ ಯಸ್ತು ಶೃಣೋತಿ ಮಾನವಃ
ಪುರಾತನೀಂ ಸರ್ವವಿಮುಕ್ತಿದಾಂ ಚ ।

ಸ್ಥಿತಿಸಂಹಾರ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷಗಳಿಗೆ ಕಾರಣನಾದ ಶ್ರೀ ಮಹಾವಿಷ್ಣುವಿನ ಕಥೆಯನ್ನೂ, ಮಹಿಮೆಯನ್ನೂ ಯಾರು ಕೇಳುತ್ತಾರೋ, ಅವರು ಪರರ ಹೆಂಡಿರನ್ನು ಹೊಂದಿದ ಪಾಪವುಳ್ಳವರಾದರೂ, ಆ ಪಾಪವನ್ನು ಕಳೆದುಕೊಂಡು, ಶುದ್ಧರಾಗಿ, ಶಾಶ್ವತನಾದ ಶ್ರೀ ಮಹಾವಿಷ್ಣುವಿನ ಉತ್ತಮವಾದ ಲೋಕವನ್ನೈಯ್ದುವರು;' (ಮುಕ್ತರಾಗುವರು.) ಎಂದು ಮಾರ್ಕಂಡೇಯನು ಹೇಳಿದನು.

ಸೂತರು ಹೇಳುತ್ತಾರೆ.

೧೨೧. 'ಎಲೈ ಭರದ್ವಾಜನೇ? ಕೇಳು; ಇಂತು ಆ ಮಾರ್ಕಂಡೇಯ ಮುನಿಯಿಂದ ಉಪದೇಶಗೊಂಡ ಸಹಸ್ರಾನೀಕರಾಯನು ಶ್ರೀ ನರಸಿಂಹಸ್ವಾಮಿಯನ್ನು ಪೂಜಿಸಿ, ಶ್ರೀ ವಿಷ್ಣುಲೋಕವನ್ನು ಹೊಂದಿದನು. ಎಲೈ ಭರದ್ವಾಜ ಮುನಿಯೇ! ಸಹಸ್ರಾನೀಕರಾಜನ ಚರಿತ್ರೆಯೆಲ್ಲವನ್ನೂ ಈಗ ನಿನಗೆ ಹೇಳಿದುದಾಯಿತು.

೧೨೨. ಇನ್ನು ಯಾವುದನ್ನು ಹೇಳಲಿ? ಯಾವ ಮಾನವನು ಪುರಾತನವೂ, ಸರ್ವರಿಗೂ ಮೋಕ್ಷವನ್ನು ದೊರಕಿಸುವುದೂ ಆದ ಈ ಕಥೆಯನ್ನು ಕೇಳುತ್ತಾನೆಯೋ, ಆವನು ಅತ್ಯಂತ ಪವಿತ್ರವಾದ ಅಪರೋಕ್ಷಜ್ಞಾನವನ್ನು ಹೊಂದಿ, ಅದರಿಂದಲೇ

ಸಂಪ್ರಾಪ್ಯ ಸಜ್ಞಾನಮತೀವ ನಿರ್ಮಲಂ
ತೇನೈವ ವಿಷ್ಣುಂ ಪ್ರತಿಪದ್ಯತೇ ಜನಃ ॥ ೧೨೨ ॥

ಇತಿ ಶ್ರೀ ನರಸಿಂಹಪುರಾಣೇ ಸಹಸ್ರಾನೀಕಚರಿತೇಷ್ಟಾಕ್ಷರ
ಮಂತ್ರಕಥನಂ ನಾಮ ತ್ರಿಷಷ್ಟಿತಮೋಽಧ್ಯಾಯಃ

ಶ್ರೀ ಪರಮಾತ್ಮನ ಅತ್ಯರ್ಥ ಪ್ರಸಾದದ ಮೂಲಕ, ಭಗವಂತನಾದ ಶ್ರೀ ಮಹಾ ವಿಷ್ಣುವಿನ ಸಾಮಿಪ್ಯವೆಂಬ ಮುಕ್ತಿಯನ್ನೈಯ್ದುವನು;' ಎಂದು ಸೂತರು ಭರದ್ವಾಜಾದಿಮುನಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಸಹಸ್ರಾನೀಕ ಚರಿತ್ರೆಯಲ್ಲಿ ಅಷ್ಟಾಕ್ಷರ
ಮಂತ್ರದ ಮಹಿಮೆಯನ್ನು ಹೇಳಿದುದೆಂಬ ಅರುವತ್ತುಮೂರನೆಯ
ಅಧ್ಯಾಯವು ಮುಗಿದುದು.

ಅರುವತ್ತುಮೂರನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ, ಸಹಸ್ರಾನೀಕರಾಯನು ಶ್ರೀ ಮಾರ್ಕಂಡೇಯ ಮುನಿಯನ್ನು 'ಇದುವರೆಗೆ ನೀವು ವೇದಜ್ಞರಾದವರು ಆಚರಿಸತಕ್ಕ ಶ್ರೀ ಭಗವತ್ಪೂಜಾಕ್ರಮವನ್ನು ನಿರೂಪಿಸಿದಿರಿ. ಇನ್ನು ಸರ್ವರಿಂದಲೂ ಸುಲಭವಾಗಿ ಆಚರಿಸಲು ಶಕ್ಯವಾದ ಪೂಜಾಕ್ರಮವನ್ನು ನಿರೂಪಿಸಿರೆಂದು ಬೇಡಲು, ಮಾರ್ಕಂಡೇಯ ಮುನಿಯು ಆ ರಾಯನಿಗೆ 'ಓಂ ನಮೋ ನಾರಾಯಣಾಯ' ಎಂಬೀ ಅಷ್ಟಾಕ್ಷರ ಮಂತ್ರವೇ ಪರಮಶ್ರೇಯಸ್ಸಾಧನವಾದುದು ; ಇದೇ ಸರ್ವವಿಧವಾದ ಜಪ, ತಪ, ತೀರ್ಥಾಟನ ಸ್ನಾನಾದಿಗಳ ಫಲವನ್ನು ಈವುದು, ಅಲ್ಲದೆ ಮುಕ್ತಿಗೆ ಸಾಧನವು;' ಎಂದು ಹೇಳಿ, ಹಿಂದೆ ಸ್ತ್ರೀತ್ವವನ್ನೈದ್ದಿದ ದೇವೇಂದ್ರನು ಈ ಮಂತ್ರವನ್ನು ಎರಡು ಲಕ್ಷ ಜಪಮಾಡಿ, ಆ ಸ್ತ್ರೀತ್ವವನ್ನು ಕಳೆದುಕೊಂಡನೆಂದು ಹೇಳಲು, ಆ ತೆರನಾಗಿ ಇಂದ್ರನಿಗೆ ಸ್ತ್ರೀತ್ವವುಂಟಾಗಲು ಕಾರಣವನ್ನೂ, ಅದನ್ನು, ಹೋಗಲಾಡಿಸಿಕೊಂಡ ಬಗೆಯನ್ನೂ ಹೇಳಲು ತೊಡಗಿ, ಒಮ್ಮೆ ದೇವೇಂದ್ರನು ಕೈಲಾಸದ ಮಾನಸದ ತಡಿಯಲ್ಲಿ ಗೌರಿಯನ್ನು ಪೂಜಿಸುತ್ತಿದ್ದ ಕುಬೇರನ ಮಡದಿಯನ್ನು ನೋಡಿ, ಅವಳಲ್ಲಿ ಮೋಹಗೊಂಡು, ಕಾಮನ ನೆರವಿನಿಂದ ಅಳವನ್ನು ಹೊಂದಿ, ಮಂದರ ಪರ್ವತದ ಕಂದರಗಳಲ್ಲಿ ಅಳವನ್ನು ಇಟ್ಟು, ಅವಳೊಡನೆ ವಿಹರಿಸುತ್ತಿದ್ದನು.

ಹೀಗಿರಲು ಈ ವೃತ್ತಾಂತವನ್ನರಿಯದ ಆ ಚಿತ್ರಸೇನೆಯ ಕೆಳದಿಯರು ಕುಬೇರನಿಗೆ ತಮ್ಮ ದೇವಿಯನ್ನಾರೋ ಒಯ್ದಿರುವರೆಂದು ಹೇಳಲು, ಅವಳ ವಿರಹದಿಂದ ದುಃಖಿಯಾದ ಕುಬೇರನು ತನ್ನ ಮಂತ್ರಿಯಾದ ಕಂಠಕುಬ್ಜನ ಆಲೋಚನೆಯಂತೆ, ವಿಭೀಷಣನನ್ನು ನೆರವು ಬೇಡಲು, ಅವನು ತನ್ನ ಸೋದರಿಯಾದ ನಾಡೀಜಂಘೆಗೆ ಅವಳನ್ನು ಕಂಡು ಹಿಡಿದು ತರುವಂತೆ ನಿರೂಪಿಸಲು, ಅವಳು ಅತಿಸುಂದರವಾದ ಒಡಲನ್ನು ತನ್ನ ಮಾಯಾಶಕ್ತಿಯಿಂದ ತಾಳಿ ಅಮರಾವತಿಗೆ ಹೋಗಲು, ಅವಳನ್ನು ನೋಡಿದ ಶಚೀಪತಿಯು ಮೋಹಗೊಂಡು, ಅವಳನ್ನು ತನಗೆ ಸಾಧಿಸಿಕೊಡುವಂತೆ ಅಶ್ವಿನೀ ದೇವತೆಗಳಿಗೆ ಹೇಳಲು, ಅವರೂ ಅವಳ ಬಳಿಗೆ ಹೋಗಿ ತಿಳಿಸಲು, ಅವಳು

ಇಂದ್ರನೀ ತನ್ನ ಸಮೀಪಕ್ಕೆ ಬಂದು, ಒಂದು ಮಾತನ್ನೊಪ್ಪಿದರೆ, ಅವನನ್ನು ಸೇರುವುದಾಗಿ ಹೇಳಲು, ಅಂತೆಯೇ ಇಂದ್ರನು ಬರಲು, ತನಗೆ ಅವನು ಪರಿಗ್ರಹಿಸಿರುವ ನಾರೀ ವೃಂದವನ್ನೆಲ್ಲಾ ಕಾಣಿಸಬೇಕು; ತನ್ನಂತೆ ಚಲುವೆಯಾಗಿರುವರಾರಿರುವರೆಂದು ನೋಡಬೇಕೆಂಬ ಬಯಕೆ ತನಗಿರುವುದು. ಇದಕ್ಕೊಪ್ಪಿದರೆ, ತಾನು ಅವನಿಗನುಕೂಲೆಯಾಗುವೆನೆನಲು, ಅದಕ್ಕಿಂದ್ರನೊಪ್ಪಿ, ತನ್ನ ಪೆಣ್ಡವಾಸದವರನ್ನೆಲ್ಲಾ ತೋರಿಸಿ, ಕೊನೆಯಲ್ಲಿ ಅವಳನ್ನೂ ವಿಮಾನದಲ್ಲಿ ಕೂಡಿಸಿಕೊಂಡು, ಮಂದರ ಪರ್ವತಕ್ಕೆ ಬರುತ್ತಾ, ತಾನು ತೋರಿಸುವ ಇನ್ನೋರ್ವಳನ್ನು ಯಾರಿಗೂ ಹೇಳದಂತೆ ಗುಟ್ಟನ್ನು ರಕ್ಷಿಸಬೇಕೆಂದು ಹೇಳುತ್ತಿರಲು, ಮಧ್ಯಮಾರ್ಗದಲ್ಲಿ ದೇವಮುನಿಗಳಾದ ನಾರದರ ದರ್ಶನವನ್ನು ಮಾಡಿ, ನಾಣ್ಚಿಕೆಯುಂಟಾದರೂ ಪೊಡಮಟ್ಟು, ಅವರೆಲ್ಲಿಗೆ ಹೋಗುವರೆಂದರಿತು, ಅವರು ನಾಡೀಜಂಘೆಯನ್ನೂ ರಕ್ಕಸ ಕುಲದ ಕ್ಷೇಮವನ್ನು ಕೇಳಿದುದನ್ನು ತಿಳಿದು, ಆ ಯುವತಿಯು ಮಾಯೆಗಾತಿಯಾದ ರಕ್ಕಸಿಯೆಂದು ಅವಳ ಕೊಲೆಗೆಳಸಿ, ಅವಳ ಮುಡಿವಿಡಿದು, ಮಂದರಕ್ಕೆ ಬಂದು ತೃಣಬಿಂದು ಮುನಿಯ ಆಶ್ರಮಪ್ರಾಂತದಲ್ಲಿ ಅವಳನ್ನು ತನ್ನ ವಜ್ರದಿಂದ ಕಡಿವಡೆದನು. ಮುನಿಗಳ ಮರೆಯನ್ನು ಅವಳು ಬೇಡಲು, ಅವರ ಮಾತನ್ನೂ ಅತಿಕ್ರಮ ಮಾಡಿ ಇಂದ್ರನು ಅವಳನ್ನು ಸಂಹರಿಸಿದುದರಿಂದ, ಆ ಮುನಿಯು ಅವನಿಗೆ ಪೆಣ್ತನವನ್ನೈಯ್ದುವನಾಗೆಂದು ಶಪಿಸಿದನು

ಹಾಗೆಯೇ ಇಂದ್ರನು ಶಾಪಗ್ರಸ್ತನಾಗಲು, ದೇವತೆಗಳು ತಮ್ಮ ಒಡೆಯನಿಗಿಂತಾದುದನ್ನರಿತು, ಶಚೀಪುರಂದರರೊಡನೆ ಚತುರ್ಮುಖನಲ್ಲಿಗೆ ಬಂದು ಮೊರೆಯಿಡಲು, ಚತುರ್ಮುಖನು ಅವನ ದುರ್ವೃತ್ತವನ್ನು ಹೇಳಿ, ಶಚಿಯು ಕುಬೇರನ ಮಡದಿಯನ್ನು ಹಿಂದಕ್ಕೆ ಒಪ್ಪಿಸಬೇಕೆಂದು ಆಣತಿಯಿತ್ತು, ಶಕ್ರನು ‘ಓಂ ನಮೋ ನಾರಾಯಣಾಯ,’ ಎಂಬೀ ಅಷ್ಟಾಕ್ಷರ ಮಂತ್ರವನ್ನು ಎರಡು ಲಕ್ಷ ಜಪಮಾಡಿದರೆ, ಸ್ತ್ರೀತ್ವವು ಪರಿಹಾರವಾಗುವುದೆಂದು ಹೇಳಲು, ಅಂತು ಪಿತಾಮಹನುಪದೇಶದಿಂದ ಶಕ್ರನು ಜಪಿಸಿ, ಶುದ್ಧನಾಗಿ, ಪೆಣ್ತನವನ್ನು ಕಳೆದು, ಸ್ವರ್ಗದ ಆಧಿಪತ್ಯವನ್ನು ಅನುಭವಿಸಿದನೆಂದು ಹೇಳಳಿದನು.

ಅಂತು ಮಾರ್ಕಂಡೇಯರುಪದೇಶದಿಂದ ಆ ಶತಾನೀಕನೂ ಶ್ರೀ ನರಹರಿಯನ್ನರ್ಚಿಸಿ ಮೋಕ್ಷಪಡೆದನು. ಅಷ್ಟೇಕೆ; ಯಾವ ಮಾನವನು ಈ ಜಗತ್ತಿನಲ್ಲಿ

ಈ ಅಷ್ಟಾಕ್ಷರ ಮಂತ್ರವನ್ನು ಜಪಿಸಿ, ಶ್ರೀ ಹರಿಯನ್ನು ಅರ್ಚಿಸುವನೋ, ಅವನು ಸಕಲ ದುರಿತಗಳನ್ನೀಡಾಡಿ, ಶ್ರೀ ಪರಬ್ರಹ್ಮನ ಅಪರೋಕ್ಷಜ್ಞಾನ ಪಡೆದು, ಆ ಪರಮಾತ್ಮನ ಅತ್ಯರ್ಥಪ್ರಸಾದದಿಂದ ಮುಕ್ತನಾಗುವನು,' ಎಂದು ಅಷ್ಟಾಕ್ಷರ ಮಂತ್ರದ ಪ್ರಭಾವವನ್ನು ಶ್ರೀ ಸೂತರು ಭರದ್ವಾಜಾದಿಮುನಿಗಳಿಗೆ ನಿರೂಪಿಸಿದುದು' ವರ್ಣಿತವಾಗಿದೆ.

ಇಂತು ಅರುವತ್ತುಮೂರನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಮಂತ್ರತೀರ್ಥ ಮಹಿಮಾದಿ ವರ್ಣನಮ್.

ಚತುಃಷಷ್ಟಿತಮೋಽಧ್ಯಾಯಃ

ಪುಣ್ಡರೀಕನಾರದಸಂವಾದೇ ಮೋಕ್ಷಸಾಧನ ನಿರೂಪಣಮ್.

॥ ಶ್ರೀ ಭರದ್ವಾಜ ಉವಾಚ ॥

ಸತ್ಯಂ ಕೇಚಿತ್ಪ್ರಶಂಸಂತಿ ತಪಃ ಶೌಚಂ ತಥಾಽಪರೇ ।
ಸಾಙ್ಖ್ಯಂ ಕೇಚಿತ್ಪ್ರಶಂಸಂತಿ ಯೋಗಮನ್ಯೇ ಪ್ರಚಕ್ಷತೇ ॥ ೧ ॥

ಅರುವತ್ತುನಾಲ್ಕನೆಯ ಅಧ್ಯಾಯವು.

ಪುಣ್ಡರೀಕನಾರದಸಂವಾದದಲ್ಲಿ ಮೋಕ್ಷಸಾಧನ ನಿರೂಪಣವು

ಶ್ರೀ ಭರದ್ವಾಜಮುನಿಯು ಸೂತರಲ್ಲಿ ಇಂತು ಬಿನ್ನವಿಸುತ್ತಾನೆ.

೧. 'ಎಲೈ ಆಚಾರ್ಯರೇ ! ಕೆಲವರು ಸತ್ಯವನ್ನು ಧರ್ಮಾರ್ಥಕಾಮಮೋಕ್ಷ ಗಳಿಗೆ ಸಾಧನವನ್ನಾಗಿ ಹೇಳುತ್ತಾರೆ. ಇನ್ನು ಕೆಲವರು ತಪಸ್ಸನ್ನೂ, ಅಪರರು ಶೌಚವನ್ನೂ, ಕೆಲವರು ಜ್ಞಾನವನ್ನೂ, ಇನ್ನು ಕೆಲವರು ನಿಷ್ಕಾಮವಾಗಿ ಆಚರಿಸುವ ಕರ್ಮವನ್ನೂ ಪುರುಷಾರ್ಥಗಳಿಗೆ ಸಾಧನವನ್ನಾಗಿ ಹೇಳುತ್ತಾರೆ.

ಜ್ಞಾನಂ ಕೇಚಿತ್ಪ್ರಶಂಸಂತಿ ಸಮಲೋಷ್ಟಾಶ್ಮಕಾಂಚನಾಃ ।
ಕ್ಷಮಾಂ ಕೇಚಿತ್ಪ್ರಶಂಸಂತಿ ತಥೈವ ಚ ದಯಾರ್ಜವಮ್ ॥ ೨ ॥

ಕೇಚಿದ್ದಾನಂ ಪ್ರಶಂಸಂತಿ ಕೇಚಿದಾಹುಃ ಪರಂ ಶುಭಮ್ ।
ಸಮ್ಯಗ್ಜ್ಞಾನಂ ಪರಂ ಕೇಚಿತ್ಸಾಂಖ್ಯತತ್ತ್ವಾರ್ಥವೇದಿನಃ ॥ ೩ ॥

ಅಗ್ನಿಷ್ಟೋಮಾದಿಕರ್ಮಾಣಿ ತಥಾ ಕೇಚಿತ್ಪರಂ ವಿದುಃ ।
ಆತ್ಮಧ್ಯಾನಂ ಪರಂ ಕೇಚಿತ್ಸಾಂಖ್ಯತತ್ತ್ವಾರ್ಥವೇದಿನಃ ॥ ೪ ॥

ಧರ್ಮಾರ್ಥಕಾಮಮೋಕ್ಷಾಣಾಂ ಚತುರ್ಣಾಮಿಹ ಕೇವಲಮ್ ।
ಉಪಾಯೋ ವಾದಭೇದೇನ ಬಹುಧೈವ ಪ್ರಚಕ್ಷ್ಯತೇ ॥ ೫ ॥

---

೨. ಮಣ್ಣು, ಕಲ್ಲು, ಹೆಂಟೆ, ಸುವರ್ಣವೆಲ್ಲವನ್ನೂ ಒಂದೇ ತೆರನಾಗಿ ಭಾವಿಸುವ ಸಂನ್ಯಾಸಿಗಳು ಯೋಗಯುಕ್ತವಾದ ಜ್ಞಾನಮಾರ್ಗವನ್ನೂ, ಹಾಗೆಯೇ ಕೆಲವರು ಕ್ಷಮಾಗುಣವನ್ನೂ, ಮತ್ತೆ ಕೆಲವರು ಇತರರ ದುಃಖವನ್ನು ಹೋಗಲಾಡಿಸುವ ಇಚ್ಛೆಯೆಂಬ ದಯೆಯನ್ನೂ, ಸರಳಸ್ವಭಾವವನ್ನೂ ಪುರುಷಾರ್ಥಗಳಿಗೆ ಸಾಧನವೆನ್ನುತ್ತಾರೆ.

೩. ಕೆಲವರು ಸ್ವಸ್ವತ್ವನಿವೃತ್ತಿಪೂರ್ವಕ ಪರಸ್ವತ್ವಾಪಾದನರೂಪ ದಾನವನ್ನೂ, ಮತ್ತೆ ಕೆಲವರು ಉತ್ತಮವಾದ ಕಲ್ಯಾಣವನ್ನೂ, ಕೆಲವರು ಜೈನರು ಸಮ್ಯಗ್ಜ್ಞಾನವನ್ನೂ, ಇನ್ನು ಕೆಲವರು ಉತ್ತಮವಾದ ವೈರಾಗ್ಯವನ್ನೂ ಪುರುಷಾರ್ಥಗಳಿಗೆ ಸಾಧನವೆಂದು ಹೇಳುತ್ತಾರೆ.

೪. ಮೀಮಾಂಸಕರು ಅಗ್ನಿಷ್ಟೋಮವೇ ಮೊದಲಾದ ಕರ್ಮಗಳು ಪುರುಷಾರ್ಥಗಳಿಗೆ ಉತ್ತಮಸಾಧನಗಳೆಂದೂ, ಸಾಂಖ್ಯತತ್ತ್ವವನ್ನರಿತವರು (ವೇದಾಂತಿಗಳು) ಭಗವಂತನ ಧ್ಯಾನವೇ ಉತ್ತಮವಾದ ಸಾಧನವೆಂದೂ ಹೇಳುತ್ತಾರೆ.

೫. ಈ ಪ್ರಪಂಚದಲ್ಲಿ ನಾಲ್ಕು ತೆರನಾದ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಿಗೆ ವಾದಭೇದದಿಂದ ಇಂತು (ಉಪಾಯವು) ಸಾಧನಗಳು ಅನೇಕ ತೆರನಾಗಿ ಹೇಳಲ್ಪಟ್ಟಿರುತ್ತವೆ.

ಏವಂ ಚಾವಸ್ಥಿತೇ ಲೋಕೇ ಕೃತ್ಯಾಕೃತ್ಯವಿಧೌ ನರಾಃ ।
ವ್ಯಾಮೋಹಮೇವ ಗಚ್ಛಂತಿ ವಿಮುಕ್ತಾಃ ಪಾಪಕರ್ಮಭಿಃ ॥ ೬ ॥

ಯದೇತೇಷು ಪರಂ ಕೃತ್ಯಂ ಅನುಷ್ಠೇಯಂ ಮಹಾತ್ಮಭಿಃ ।
ವಕ್ತುಮರ್ಹಸಿ ಸರ್ವಜ್ಞ ಮಮ ಸರ್ವಾರ್ಥಸಾಧಕಮ್ ॥ ೭ ॥

॥ ಸೂತ ಉವಾಚ ॥

ಶ್ರೂಯತಾಮಿದಮತ್ಯಂತಂ ಗೂಢಂ ಸಂಸಾರಮೋಚನಮ್ ।
ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ॥ ೮ ॥

ಪುಂಡರೀಕಸ್ಯ ಸಂವಾದಂ ದೇವರ್ಷೇರ್ನಾರದಸ್ಯ ಚ ।
ಬ್ರಾಹ್ಮಣಃ ಶ್ರುತಸಂಪನ್ನಃ ಪುಂಡರೀಕೋ ಮಹಾಮತಿಃ ॥ ೯ ॥

---

೬. ಇಂತು ಜಗತ್ತಿನಲ್ಲಿ ಪುರುಷಾರ್ಥಸಾಧನಗಳ ವಿಷಯಗಳಲ್ಲಿ ವೈವಿಧ್ಯ ವಿರುತ್ತಿರಲು, ಪಾಪಕರ್ಮಗಳಿಂದ ಬಿಡಲ್ಪಟ್ಟ ಧಾರ್ಮಿಕರಾದವರು ಕರ್ತವ್ಯಾಕರ್ತವ್ಯಗಳ ವಿಷಯಗಳಲ್ಲಿ ಸಂದೇಹಗೊಳ್ಳುತ್ತಾರೆ.

೭. ಎಲೈ ಸರ್ವಜ್ಞರಾದ ಸೂತಾಚಾರ್ಯರೇ! ಇವುಗಳಲ್ಲಿ ಮಹಾತ್ಮರಿಂದ ಆಚರಿಸಲು ಯೋಗ್ಯವಾದ, ಉತ್ತಮವಾದ ಕರ್ಮವಾವುದೋ, ಆ ಪುರುಷಾರ್ಥ ಸಾಧಕವಾದ ಸಾಧನವನ್ನು ದಯಮಾಡಿ ನನಗೆ ಹೇಳಲು ನೀವು ಅರ್ಹರಾಗಿರುತ್ತೀರಿ;' ಎಂದು ಭರದ್ವಾಜಮುನಿಯು ಬೇಡಿದನು.

ಭರದ್ವಾಜಮುನಿಗೆ ಶ್ರೀ ಸೂತರು ಇಂತು ಹೇಳುತ್ತಾರೆ:—

೮. 'ಕೇಳು; ಭರದ್ವಾಜ! ಬಹುಗುಟ್ಟಾದುದೂ, ಸಂಸಾರದಿಂದ ಬಿಡುಗಡೆಯನ್ನುಂಟುಮಾಡುವುದೂ, ಹಳತೂ ಆದ ಈ ಇತಿಹಾಸವನ್ನು ಜ್ಞಾನಿಗಳು ಈ ವಿಷಯದಲ್ಲಿ ಉದಾಹರಿಸಿರುತ್ತಾರೆ.

೯. ಅದು ಯಾವುದೆಂದರೆ, ದೇವರ್ಷಿಯಾದ ನಾರದ ಮತ್ತು ಪುಂಡರೀಕನೆಂಬ ಬ್ರಾಹ್ಮಣ–ಇವರೀರ್ವರ ಸಂವಾದವು. 'ಹಿಂದೆ ಶಾಸ್ತ್ರಜ್ಞಾನಪಡೆದ ಅತ್ಯಂತ ವಿವೇಕಿಯಾದ ಪುಂಡರೀಕನೆಂಬ ಬ್ರಾಹ್ಮಣನಿದ್ದನು.

ಆಶ್ರಮೇ ಪ್ರಥಮೇ ತಿಷ್ಠನ್ ಗುರೂಣಾಂ ವಶಗಃ ಸದಾ ।
ಜಿತೇಂದ್ರಿಯೋ ಜಿತಕ್ರೋಧಃ ಸಂಧ್ಯೋಪಾಸನನಿಷ್ಠಿತಃ ॥ ೧೦ ॥

ವೇದವೇದಾಂಗನಿಪುಣಃ ಶಾಸ್ತ್ರೇಷು ಚ ವಿಚಕ್ಷಣಃ ।
ಸಮಿದ್ಭಿಃ ಸಾಧುಯತ್ನೇನ ಸೂರ್ಯಂ ಪ್ರಾತರ್ಹುತಾಶನಮ್ ॥ ೧೧ ॥

ಧ್ಯಾತ್ವಾ ಯಜ್ಞಪತಿಂ ವಿಷ್ಣುಂ ಸಮ್ಯಗಾರಾಧಯನ್ ವಿಭುಮ್ ।
ತತಃ ಸ್ವಾಧ್ಯಾಯನಿರತಃ ಸಾಕ್ಷಾದ್ಬ್ರಹ್ಮಸ್ತುತೋ ಯಥಾ ॥ ೧೨ ॥

ಉದಕೇಂಧನ ಪುಷ್ಪಾದ್ಯೈಃ ಅಸಕೃತ್ತರ್ಪಯನ್ ಗುರೂನ್ ।
ಮಾತಾಪಿತೃಭ್ಯಾಂ ಶುಶ್ರೂಷುರ್ಭಿಕ್ಷಾಹಾರೀ ಜನಪ್ರಿಯಃ ॥ ೧೩ ॥

---

೧೦. ಆ ಪುಂಡರೀಕನು ಮೊದಲನೆಯ ಬ್ರಹ್ಮಚರ್ಯಾಶ್ರಮದಲ್ಲಿದ್ದು, ಯಾವಾಗಲೂ ಗುರುಗಳ ಅಧೀನನಾಗಿ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು, ಕ್ರೋಧಾದ್ಯರಿಷಡ್ವರ್ಗವನ್ನು ಗೆದ್ದು, ಸಂಧ್ಯೆಯನ್ನು ಸೇವಿಸುವುದರಲ್ಲಿ ಅತ್ಯಂತಾಸಕ್ತನಾಗಿದ್ದನು.

೧೧-೧೨. ಈತನು ಋಗಾದಿವೇದಗಳು, ಶಿಕ್ಷಾದಿವೇದಾಂಗಗಳು-ಇವುಗಳಲ್ಲಿ ಪಾರಂಗತನಾಗಿಯೂ, ಮೀಮಾಂಸಾದಿ ಶಾಸ್ತ್ರಗಳಲ್ಲಿ ನಿಪುಣನಾಗಿಯೂ ಇದ್ದನು. ನಿತ್ಯದಲ್ಲಿಯೂ ಉಚಿತವಾದ ಪ್ರಯತ್ನದಿಂದ ಅರಳಿಯಮರದ ಕಾಷ್ಠದಿಂದ ಬೆಳಿಗ್ಗೆ ಯಜ್ಞೇಶ್ವರನನ್ನೂ, ಸೂರ್ಯದೇವನನ್ನೂ, ಪೂಜಿಸಿ, ಅವರ ಅಂತರ್ಯಾಮಿಯಾದ ಸಕಲ ಯಜ್ಞಪತಿಯಾದ ಶ್ರೀ ಮಹಾವಿಷ್ಣುವನ್ನು ಧ್ಯಾನಮಾಡಿ, ಸರ್ವಸ್ವಾಮಿಯನ್ನು ಸರಿಯಾಗಿ ವಿಧ್ಯನುಸಾರವಾಗಿ ಪೂಜಿಸುತ್ತಾ, ದೇವತೆಗಳಿಂದ ಸ್ತುತನಾದ, ಸಾಕ್ಷಾತ್ತಾದ ಪಿತಾಮಹನಂತೆ ತಪಸ್ಸು ಮತ್ತು ವೇದಾಧ್ಯಯನ—ಇವುಗಳಲ್ಲಿ ಯಾವಾಗಲೂ ತೊಡಗಿದವನಾಗಿದ್ದನು.

೧೩. ಆ ಬ್ರಾಹ್ಮಣಬಾಲಕನು ನೀರು, ಸಮಿತ್ತು, ಹೂ- ಇವೇ ಮೊದಲಾದವುಗಳಿಂದ ಬಹುವಾಗಿ ಗುರುಗಳನ್ನು ಸಂತಸಗೊಳಿಸುತ್ತಲೂ, ತಾಯಿತಂದೆಗಳನ್ನು ಸೇವಿಸುವವನಾಗಿಯೂ ಇದ್ದನು.

ಬ್ರಹ್ಮವಿದ್ಯಾಮಧೀಯಾನಃ ಪ್ರಾಣಾಯಾಮಪರಾಯಣಃ ।
ತಸ್ಯ ಸರ್ವಾರ್ಥಭೂತಸ್ಯ ಸಂಸಾರೇಽತ್ಯಂತ ನಿಸ್ಪೃಹಮ್ ॥ ೧೪ ॥

ಬುದ್ಧಿರಾಸೀನ್ಮಹಾಭಾಗ ಸಂಸಾರಾರ್ಣವತಾರಿಣೀ ।
ಪಿತರಂ ಮಾತರಂ ಚೈವ ಭ್ರಾತೄನಥ ಪಿತಾಮಹಾನ್ ॥ ೧೫ ॥

ಪಿತೃವ್ಯಾನ್ಮಾತುಲಾಂಶ್ಚೈವ ಸಖೀನ್ ಸಂಬಂಧಿಬಾಂಧವಾನ್ ।
ಪರಿತ್ಯಜ್ಯ ಮಹೋದಾರಸ್ತೃಣಾನೀವ ಯಥಾಸುಖಮ್ ॥ ೧೬ ॥

ವಿಚಚಾರ ಮಹೀಮೇತಾಂ ಶಾಕಮೂಲಫಲಾಶನಃ ।
ಅನಿತ್ಯಂ ಯೌವನಂ ರೂಪಮಾಯುಷ್ಯಂ ದ್ರವ್ಯಸಞ್ಚಯಮ್ ॥ ೧೭ ॥

೧೪-೨೨. ಇಷ್ಟೇ ಅಲ್ಲದೆ ಪರವಿದ್ಯೆಯಾದ ಬ್ರಹ್ಮವಿದ್ಯೆಯನ್ನು ಕಲಿಯುತ್ತಾ, ರೇಚಕ ಪೂರಕ ಕುಂಭಕಗಳೆಂಬ ಮೂರೆರನಾದ ಪ್ರಾಣಾಯಾಮದಲ್ಲಿ ಆಸಕ್ತಿಯುಳ್ಳವನಾಗಿದ್ದನು. ಅವನಿಗೆ ಸರ್ವಪುರುಷಾರ್ಥಸಾಧನವಾದ ಸಂಸಾರದಲ್ಲಿ ಅತ್ಯಂತ ವೈರಾಗ್ಯಯುಕ್ತನಾಗಿರುವಂತೆ, ಎಲೈ ಪುಣ್ಯವಂತನಾದ ಭರದ್ವಾಜನೇ ! ಕೇಳು ; ಅನಂತರದಲ್ಲಿ ತಂದೆಯನ್ನೂ, ತಾಯಿಯನ್ನೂ, ಅಣ್ಣತಮ್ಮಂದಿರನ್ನೂ, ಅಜ್ಜಂದಿರನ್ನೂ, ಚಿಕ್ಕಪ್ಪದೊಡ್ಡಪ್ಪಂದಿರನ್ನೂ, ಸೋದರದ ಮಾವಂದಿರನ್ನೂ, ಕೆಳೆಯರನ್ನೂ ನಂಟರನ್ನೂ, ಆ ಉದಾರಸ್ವಭಾವದವನು ವೈರಾಗ್ಯದಿಂದ ಹುಲ್ಲುಗಳನ್ನೋಪಾದಿಯಲ್ಲಿ ತ್ಯಜಿಸಿ, ಸೊಪ್ಪು, ಗೆಣಸು, ಹಣ್ಣು—ಇವುಗಳನ್ನು ತಿನ್ನುತ್ತಾ ಈ ಬುವಿಯಲ್ಲಿ ತೊಳಲಿದನು. ಹರಯ, ರೂಪು, ಆಯುಸ್ಸು, ಐಸಿರಿ—ಇವೆಲ್ಲವೂ ಕಿಡಲಿರ್ಪುವು.' ಎಂದು ಭಾವಿಸುವವನಾಗಿ ಮೂಲೋಕವನ್ನು ಮಣ್ಣುಹೆಂಟೆಗೆ ಸಮನಾಗಿ ಭಾವಿಸಿದನು. ಪುರಾಣಗಳಲ್ಲಿ ಹೇಳಿರುವ ಹಾದಿಯಿಂದ ಎಲ್ಲ ತೀರ್ಥಗಳನ್ನೂ

ಇತಿ ಸಂಚಿಂತ್ಯಮಾನೇನ ತ್ರೈಲೋಕ್ಯಂ ಲೋಷ್ಟವತ್ಸ್ಮೃತಮ್ ।
ಪುರಾಣೋದಿತಮಾರ್ಗೇಣ ಸರ್ವತೀರ್ಥಾನಿ ವೈ ಮುನೇ ॥ ೧೮ ॥

ಗಮಿಷ್ಯಾಮಿ ಯಥಾಕಾಲಮಿತಿ ನಿಶ್ಚಿತಮಾನಸಃ ।
ಗಂಗಾಂ ಚ ಯಮುನಾಂ ಚೈವ ಗೋಮತೀಮಥ ಗಂಡಕೀಮ್ ॥ ೧೯ ॥

ಶತದ್ರೂಂ ಚ ಪಯೋಷ್ಣೀಂ ಚ ಸರಯೂಂ ಚ ಸರಸ್ವತೀಮ್ ।
ಪ್ರಯಾಗಂ ನರ್ಮದಾಂ ಚೈವ ಮಹಾನದ್ಯೋ ನದಾ ಅಪಿ ॥ ೨೦ ॥

ಗಯಾಂ ಚ ವಿಂಧ್ಯತೀರ್ಥಾನಿ ಹಿಮವತ್ಪ್ರಭವಾಣಿ ಚ ।
ಅನ್ಯಾನಿ ಚ ಮಹಾತೇಜಾಃ ತೀರ್ಥಾನಿ ಸ ಮಹಾವ್ರತಃ ॥ ೨೧ ॥

ಸಂಚಚಾರ ಮಹಾಬಾಹುರ್ಯಥಾಕಾಲಂ ಯಥಾವಿಧಿ ।
ಕದಾಚಿತ್ಪ್ರಸ್ತವಾನ್ ವೀರಃ ಶಾಲಿಗ್ರಾಮಂ ತಪೋಧನಃ ॥ ೨೨ ॥

ಆಯಾ ಸಮಯವರಿತು, ಸಂಚರಿಸುವುದಾಗಿ ಮನದಲ್ಲಿ ನಿಶ್ಚಯಿಸಿ, ಗಂಗೆಯನ್ನೂ, ಜಮುನೆಯನ್ನೂ, ಗೋಮತಿಯನ್ನೂ, ಗಂಡಕಿಯನ್ನೂ, ಶತದ್ರುವನ್ನೂ, ಪಯೋಷ್ಣಿಯನ್ನೂ, ಸರಯುವನ್ನೂ, ಸರಸ್ವತಿಯನ್ನೂ, ಪ್ರಯಾಗ ಕ್ಷೇತ್ರವನ್ನೂ, ನರ್ಮದೆಯನ್ನೂ, ಮಹಾನದೀ ನದಗಳನ್ನೂ, ಗಯಾಕ್ಷೇತ್ರವನ್ನೂ, ವಿಂಧ್ಯ ಪರ್ವತದೆಡೆಯ ತೀರ್ಥಗಳನ್ನೂ, ಹಿಮಾಲಯದಲ್ಲಿ ಹುಟ್ಟಿರುವ ಇತರ ತೀರ್ಥಗಳನ್ನೂ, ಆ ಮಹಾ ತೇಜಸ್ವಿಯೂ, ಮಹಾನಿಯಮಗಳುಳ್ಳವನೂ, ಮಹಾಬಾಹುವೂ ಆದ ಪುಂಡರೀಕನು ಆಯಾ ಪುಣ್ಯಕಾಲವನ್ನತಿಕ್ರಮಿಸದೆ, ನಿಯಮ ಪುರಸ್ಸರವಾಗಿ ಸಂಚರಿಸಿದನು. ಒಮ್ಮೆ ಉತ್ಸಾಹಶಾಲಿಯಾದ ಈ ತಪೋಧನನು ಶಾಲಿಗ್ರಾಮ ಕ್ಷೇತ್ರಕ್ಕೆ ಬಂದನು.

ಪುಂಡರೀಕೋ ಮಹಾಭಾಗಃ ಪುಣ್ಯಕರ್ಮವಶಾನುಗಃ ।
ಆಸೇವ್ಯಮಾನಮೃಷಿಭಿಸ್ತತ್ತ್ವವಿದ್ಭಿಸ್ತಪೋಧನೈಃ ॥ ೨೩ ॥

ಮುನೀನಾಮಾಶ್ರಮಂ ರಮ್ಯಂ ಪುರಾಣೇಷು ಚ ವಿಶ್ರುತಮ್ ।
ಭೂಷಿತಂ ಚಕ್ರನದ್ಯಾ ಚ ಚಕ್ರಾಂಕಿತಶಿಲಾತಲಮ್ ॥ ೨೪ ॥

ರಮ್ಯಂ ವಿಭಕ್ತಂ ವಿಸ್ತೀರ್ಣಂ ಸದಾ ಚಿತ್ತಪ್ರಸಾದಕಮ್ ।
ಕೇಚಿಚ್ಚಕ್ರಾಂಕಿತಾಸ್ತಸ್ಮಿನ್ ಪ್ರಾಣಿನಃ ಪುಣ್ಯದರ್ಶನಃ ॥ ೨೫ ॥

ವಿಚರಂತಿ ಯಥಾಕಾಮಂ ಪುಣ್ಯತೀರ್ಥಪ್ರಸಂಗಿನಃ ।
ತಸ್ಮಿನ್ ಕ್ಷೇತ್ರೇ ಮಹಾಪುಣ್ಯೇ ಶಾಲಿಗ್ರಾಮೇ ಮಹಾಮತಿಃ ॥ ೨೬ ॥

೨೩–೨೪. ಪುಣ್ಯಶಾಲಿಯಾದ ಪುಂಡರೀಕನು ತನ್ನ ಪುಣ್ಯಕರ್ಮಗಳಿಗೆ ಅಧೀನನಾಗಿ ಸಂಚರಿಸುತ್ತಾ, ತತ್ವಜ್ಞರೂ, ತಪೋಧನರೂ ಆದ ಮಂತ್ರದ್ರಷ್ಟೃಗಳಾದ ಋಷಿಗಳಿಂದ ಸೇವಿಸಲ್ಪಡುತ್ತಲಿದ್ದ, ಪುರಾಣಗಳಲ್ಲಿ ಹೆಸರುವಾಸಿಯಾದ ಚಕ್ರನದಿಯಿಂದಲಂಕೃತವಾದ, ಚಕ್ರದಿಂದ ಗುರುತಾದ ಕಲ್ಲುಗಳುಳ್ಳ, ಮುನಿಗಳ ಆಶ್ರಮವನ್ನು ಹೊಂದಿದನು.

೨೫. ಆ ಆಶ್ರಮವು ಮನೋಹರವೂ, ಜನವಿರಳವೂ, ವಿಸ್ತೀರ್ಣವಾದುದೂ, ಯಾವಾಗಲೂ ಅಲ್ಲಿ ವಾಸಿಸುವರ ಮನಸ್ಸನ್ನು ಪ್ರಸನ್ನಗೊಳಿಸುವುದೂ ಆಗಿದ್ದಿತು. ಅಲ್ಲಿ ಕೆಲವು ಮಂದಿ ಸುದರ್ಶನ ಮುದ್ರೆಯನ್ನು ಧಾರಣಮಾಡಿದವರೂ, ಪುಣ್ಯದರ್ಶಿಗಳೂ ಆಗಿದ್ದರು.

೨೬–೨೭. ಅಲ್ಲಿ ಪುಣ್ಯತೀರ್ಥಯಾತ್ರಿಕರು ಸ್ವೇಚ್ಛೆಯಾಗಿ ಸಂಚರಿಸುತ್ತಾರೆ. ಅತ್ಯಂತ ಪುಣ್ಯಶಾಲಿಯೂ, ಮಹಾಮತಿಯೂ, ಪರಿಶುದ್ಧಾತ್ಮನೂ ಆದ ಪುಂಡರೀಕನು

ಪುಂಡರೀಕಃ ಪ್ರಸನ್ನಾತ್ಮಾ ತೀರ್ಥಾನಿ ಸಮಸೇವತ ।
ಸ್ನಾತ್ವಾ ದೇವಹ್ರದೇ ತೀರ್ಥೇ ಸರಸ್ವತ್ಯಾಂ ಚ ಸುವ್ರತಃ ॥ ೨೭ ॥

ಜಾತಿಸ್ಮರ್ಯಾಂ ಚಕ್ರಕುಂಡೇ ಚಕ್ರನದ್ಯಾಃ ಸ್ಪತೇಷ್ವಪಿ ।
ತಥಾನ್ಯಾನಪಿ ತೀರ್ಥಾನಿ ತಸ್ಮಿನ್ನೇವ ಚಚಾರ ಸಃ ॥ ೨೮ ॥

ತತಃ ಕ್ಷೇತ್ರಪ್ರಭಾವೇನ ತೀರ್ಥಾನಾಂ ಚೈವ ತೇಜಸಾ ।
ಮನಃ ಪ್ರಸಾದಮಗಮತ್ತಸ್ಯ ತಸ್ಮಿನ್ಮಹಾತ್ಮನಃ ॥ ೨೯ ॥

ಸೋಽಪಿ ತೀರ್ಥೇ ವಿಶುದ್ಧಾತ್ಮಾ ಧ್ಯಾನಯೋಗಪರಾಯಣಃ ।
ತತ್ರೈವ ಸಿದ್ಧಿಮಾಕಾಂಕ್ಷನ್ ಸಮಾರಾಧ್ಯ ಜಗತ್ಪತಿಮ್ ॥ ೩೦ ॥

ಶಾಸ್ತ್ರೋಕ್ತೇನ ವಿಧಾನೇನ ಭಕ್ತ್ಯಾ ಪರಮಯಾ ಯುತಃ ।
ಉವಾಸ ಚಿರಮೇಕಾಕೀ ನಿರ್ದ್ವಂದ್ವಃ ಸಂಯತೇಂದ್ರಿಯಃ ॥ ೩೧ ॥

ಶಾಲಿಗ್ರಾಮಕ್ಷೇತ್ರ ತೀರ್ಥಗಳನ್ನು ಸೇವಿಸಿದನು. ಆ ಸುವ್ರತನು ದೇವಹ್ರದ ತೀರ್ಥದಲ್ಲಿಯೂ, ಸರಸ್ವತೀನದಿಯಲ್ಲಿಯೂ ಸ್ನಾನ ಮಾಡಿದನು.

೨೮. ಇನ್ನೂ ಆ ಪುಂಡರೀಕನು ಜನ್ಮಾಂತರಗಳನ್ನು ನೆನಪಿಗೆ ತರತಕ್ಕ ಪ್ರದೇಶಗಳಲ್ಲಿಯೂ, ಚಕ್ರಕುಂಡದಲ್ಲಿಯೂ, ಚಕ್ರನದಿಯ ಜಿನಗುಪ್ರವೇಶದಲ್ಲಿಯೂ ಮಿಂದು, ಆ ಕ್ಷೇತ್ರದಲ್ಲಿಯೇ ಇನ್ನೂ ಇತರ ತೀರ್ಥಗಳನ್ನೂ ಸೇವಿಸಿದನು.

೨೯. ಬಳಿಕ ಆ ಮಹಾತ್ಮನಾದ ಪುಂಡರೀಕನ ಮನಸ್ಸು ಆ ಶಾಲಿಗ್ರಾಮ ಕ್ಷೇತ್ರದಲ್ಲಿ ಕ್ಷೇತ್ರದ ಮಹಿಮೆಯಿಂದಲೂ, ತೀರ್ಥಗಳ ತೇಜಸ್ಸಿನಿಂದಲೂ ನಿರ್ಮಲವಾಯಿತು.

೩೦-೩೧. ಆ ತೀರ್ಥದಲ್ಲಿ ಆ ಶುದ್ಧವಾದ ಸ್ವಭಾವವುಳ್ಳ ಪುಂಡರೀಕನು ಧ್ಯಾನಯೋಗಾಸಕ್ತನಾಗಿ, ಅಲ್ಲಿಯೇ ತಪಸ್ಸಿದ್ಧಿಯನ್ನು ಬಯಸುತ್ತಾ, ಸರ್ವಲೋಕಗಳಿಗೂ ಒಬ್ಬನೇ ಒಡೆಯನಾದ ಶ್ರೀ ಹರಿಯನ್ನು ಶಾಸ್ತ್ರೋಕ್ತನಿಯಮದಿಂದ ಸೇವಿಸಿ, ನಿರತಿಶಯ ಭಕ್ತಿಯೊಡಗೂಡಿ ದ್ವಂದ್ವಾತೀತನೂ, ಜಿತೇಂದ್ರಿಯನೂ ಆಗಿ, ಏಕಾಕಿಯಾಗಿ ವಾಸಮಾಡಿದನು.

ಶಾಕಮೂಲಫಲಾಹಾರಃ ಸಂತುಷ್ಟಃ ಸಮದರ್ಶನಃ ।
ಯಮೈಶ್ಚ ನಿಯಮೈಶ್ಚೈವ ತಥಾ ಚಾಸನಬಂಧನೈಃ ॥ ೬೨ ॥

ಪ್ರಾಣಾಯಾಮೈಃ ಸುತೀಕ್ಷ್ಣೈಶ್ಚ ಪ್ರತ್ಯಾಹಾರೈಶ್ಚ ಸಂತತೈಃ ।
ಧಾರಣಾಭಿಸ್ತಥಾ ಧ್ಯಾನೈಃ ಸಮಾಧಿಭಿರತಂದ್ರಿತಃ ॥ ೬೩ ॥

ಯೋಗಾಭ್ಯಾಸಂ ತದಾ ಸಮ್ಯಕ್ಚಕ್ರೇ ವಿಗತಕಲ್ಮಷಃ ।
ಆರಾಧ್ಯ ದೇವದೇವೇಶಂ ತದ್ಗತೇನಾಂತರಾತ್ಮನಾ ॥ ೬೪ ॥

ಪುಂಡರೀಕೋ ಮಹಾಭಾಗಃ ಪುರುಷಾರ್ಥವಿಶಾರದಃ ।
ಪ್ರಸಾದಂ ಪರಮಾಕಾಂಕ್ಷನ್ ವಿಷ್ಣೋಸ್ತದ್ಗತಮಾನಸಃ ॥ ೬೫ ॥

೬೨-೬೫. ಮಹಾಭಾಗ್ಯಶಾಲಿಯಾದ, ಪುರುಷಾರ್ಥಸಾಧನಾನುಷ್ಠಾನ ಕುಶಲನಾದ ಪುಂಡರೀಕನು ಸೊಪ್ಪು, ಗೆಣಸು, ಹಣ್ಣುಗಳನ್ನು ತಿನ್ನುತ್ತಾ, ಸಂತಸದೊಡಗೂಡಿ, ದ್ವಂದ್ವಸಹಿಷ್ಣುವಾಗಿ, ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮ ಚರ್ಯ, ಅಪರಿಗ್ರಹಗಳೆಂಬ ಯಮಗಳಿಂದಲೂ, ಶೌಚ, ತಪಸ್ಸು, ತುಷ್ಟಿ, ಸ್ವಾಧ್ಯಾಯ, ಹರಿಪೂಜನಗಳೆಂಬ ನಿಯಮಗಳಿಂದಲೂ, ವೀರ, ಪದ್ಮ ಸ್ವಸ್ತಿಕಾ ದ್ಯಾಸನಗಳಿಂದಲೂ, ರೇಚಕ ಪೂರಕ ಕುಂಭಕಗಳೆಂಬ ಪ್ರಾಣಾಯಾಮದಿಂದಲೂ, ಅತಿಕಠಿನವಾದ ವಿಷಯಗಳಿಂದ ಇಂದ್ರಿಯಗಳನ್ನು ಹಿಂದಕ್ಕೆ ತೆಗೆದು ಕೊಳ್ಳುವುದು ಎಂಬ ಪ್ರತ್ಯಾಹಾರಗಳಿಂದಲೂ, ಸಂತತವಾದ ಶ್ರೀಹರಿಯ ಖಂಡಸ್ಮೃತಿರೂಪವಾದ ಧಾರಣಗಳಿಂದಲೂ, ಭಗವಂತನ ಸ್ಮೃತಿರೂಪವಾದ ಧ್ಯಾನಗಳಿಂದಲೂ, ಧ್ಯೇಯ ನಾದ ಶ್ರೀ ಹರಿಯಲ್ಲಿಯೇ ಮನಸ್ಸನ್ನು ಸಂಪೂರ್ಣವಾಗಿ ನಿಲ್ಲಿಸುವುದೆಂಬ ಸಮಾಧಿ ಗಳಿಂದಲೂ, ಸೋಮಾರಿಯಾಗದೆ, ಪಾಪಶೂನ್ಯನಾದ, ಶ್ರೀ ಪರಮಾತ್ಮನಲ್ಲಿಯೇ ಅಂತಃಕರಣವನ್ನಿಟ್ಟು, ಸರ್ವೋತ್ತಮನಾದ ಶ್ರೀ ಮಹಾವಿಷ್ಣುವನ್ನಾರಾಧಿಸಿ, ಆಗ ಇಂತು ಯೋಗಾಭ್ಯಾಸವನ್ನು ವಿಧ್ಯುಕ್ತರೀತಿಯಿಂದ ಶ್ರೀಮಹಾವಿಷ್ಣುಗತಮಾನಸ ನಾಗಿ ಚೆನ್ನಾಗಿ ಅನುಷ್ಠಿಸಿದನು.

ತಸ್ಯ ತಸ್ಮಿನ್ನಿವಸತಃ ಶಾಲಿಗ್ರಾಮೇ ಮಹಾತ್ಮನಃ ।
ಪುಂಡರೀಕಸ್ಯ ರಾಜೇಂದ್ರ ಕಾಲೋಽಗಚ್ಛನ್ಮಹಾಂಸ್ತತಃ ॥ ೩೬ ॥

ಮುನೇ ಕದಾಚಿತ್ತಂ ದೇಶಂ ನಾರದಃ ಪರಮಾರ್ಥವಿತ್ ।
ಜಗಾಮ ಸುಮಹಾತೇಜಾಃ ಸಾಕ್ಷಾದಾದಿತ್ಯಸನ್ನಿಭಃ ॥ ೩೭ ॥

ತಂ ದೃಷ್ಟ್ವಾಽಽಗತಂ ದೇವರ್ಷಿಃ ಪುಂಡರೀಕಂ ತಪೋನಿಧಿಮ್ ।
ಮಹಾಮತಿಂ ಮಹಾಪ್ರಾಜ್ಞಂ ಸರ್ವಾಗಮವಿಶಾರದಮ್ ॥ ೩೮ ॥

ಪ್ರಾಂಜಲಿಃ ಪ್ರಣತೋ ಭೂತ್ವಾ ಪ್ರಹೃಷ್ಟೇನಾಂತರಾತ್ಮನಾ ।
ಅರ್ಘ್ಯಂ ದತ್ವಾ ಯಥಾಯೋಗ್ಯಂ ಪ್ರಣಾಮಮಕರೋತ್ತತಃ ॥ ೪೦ ॥

---

೩೬. ಎಲೈ ರಾಜೇಂದ್ರನೇ! ಕೇಳು ; ಬಳಿಕ ಆ ಶಾಲಿಗ್ರಾಮ ಕ್ಷೇತ್ರದಲ್ಲಿ ವಾಸ ಮಾಡುತ್ತಲಿದ್ದ, ಮಹಾತ್ಮನಾದ ಆ ಪುಂಡರೀಕನಿಗೆ ಅನೇಕವರ್ಷಗಳು ಕಳೆದುವು.

೩೭. ಎಲೈ ಮುನಿಯೆ ! ಕೇಳು ; ಒಮ್ಮೆ ಆ ಪ್ರದೇಶಕ್ಕೆ ಪರಬ್ರಹ್ಮಸ್ವರೂಪವನ್ನರಿತವನೂ, ಮಹಾತೇಜಸ್ವಿಯೂ ಸಾಕ್ಷಾದಾದಿತ್ಯಸದೃಶನೂ ಆದ ನಾರದಮುನಿಯು ಹೋದನು.

೩೮. ವಿಷ್ಣುಭಕ್ತಿಯಿಂದ ಪೂರ್ಣನೂ, ವೈಷ್ಣವರ ಹಿತದಲ್ಲಿ ಅತ್ಯಂತಾಸಕ್ತನೂ ಆದ ಆ ದೇವರ್ಷಿನಾರದನು ತಪೋನಿಧಿಯಾದ ಪುಂಡರೀಕನನ್ನು ನೋಡಲೆಳಸಿದನು.

೩೯–೪೦. ಬಳಿಕ ಆ ಪುಂಡರೀಕನು ಅತಿಶಯವಾದ ತೇಜಃಪ್ರಭೆಗಳಿಂದ ಕೂಡಿರುವವನೂ, ಮಹಾಮತಿಯೂ, ಮಹಾಪ್ರಾಜ್ಞನೂ, ಸಕಲ ಶಾಸ್ತ್ರಪಾರಂಗತನೂ ಆದ ನಾರದಮುನಿಯು ಬಂದುದನ್ನು ಕಂಡು, ಅಂಜಲಿಬದ್ಧನಾಗಿ, ತಲೆಬಾಗಿದವನಾಗಿ, ಮನಸ್ಸಂತೋಷಗೊಂಡು, ಯಥಾಯೋಗ್ಯವಾಗಿ ಅರ್ಘ್ಯವನ್ನಿತ್ತು ನಮಸ್ಕರಿಸಿದನು.

ಕೋಽಯಮತ್ಯದ್ಭುತಾಕಾರಸ್ತೇಜಸ್ವೀ ಹೃದ್ಯವೇಷಧೃಕ್ ।
ಆತೋದ್ಯಹಸ್ತಃ ಸುಮುಖೋ ಜಟಾಮಂಡಲಭೂಷಣಃ ॥ ೪೧ ॥

ವಿವಸ್ವಾನಥ ವಾ ವಹ್ನಿರಿಂದ್ರೋ ವರುಣ ಏವ ವಾ ।
ಇತಿ ಸಞ್ಚಿಂತಯನ್ವಿಪ್ರಃ ಪಪ್ರಚ್ಛ ಪರಮದ್ಯುತಿಃ ॥ ೪೨ ॥

॥ ಪುಂಡರೀಕ ಉವಾಚ ॥

ಕೋ ಭವಾನಿಹ ಸಂಪ್ರಾಪ್ತಃ ಕುತೋ ವಾ ಪರಮದ್ಯುತೇ ।
ತ್ವದ್ದರ್ಶನಂ ಹ್ಯಪುಣ್ಯಾನಾಂ ಪ್ರಾಯೇಣ ಭುವಿ ದುರ್ಲಭಮ್ ॥ ೪೩ ॥

॥ ನಾರದ ಉವಾಚ ॥

ನಾರದೋಽಹಮನುಪ್ರಾಪ್ತಸ್ತ್ವದ್ದರ್ಶನಕುತೂಹಲಾತ್ ।
ಪುಂಡರೀಕ ಹರೇರ್ಭಕ್ತಾಸ್ತ್ವಾದೃಶಃ ಸತತಂ ದ್ವಿಜ ॥ ೪೪ ॥

೪೧–೪೨. ಮಹಾತೇಜಸ್ವಿಯಾದ, ಬ್ರಾಹ್ಮಣನಾದ ಪುಂಡರೀಕನು ಅಚ್ಚರಿಯ ಆಕಾರನೂ, ಅತ್ಯಂತ ತೇಜಸ್ಸುಳ್ಳವನೂ, (ಸಂತಸವನ್ನುಂಟು ಮಾಡುವ) ಮನೋಹರವಾದ ವೇಷವನ್ನು ತಾಳಿರುವವನೂ, ವೀಣಾಪಾಣಿಯೂ, ಸುಮುಖನೂ, ದುಂಡಗಿರುವ ಜಡೆಯು ಅಲಂಕಾರವಾಗಿರುವವನೂ ಆದ ಇವನಾರು? ಸೂರ್ಯನೋ? ಅಥವಾ ಅಗ್ನಿಯೋ? ಇಂದ್ರನೋ? ವರುಣನೇಯೋ? ಎಂದು ಆಲೋಚಿಸುತ್ತಾ ಇಂತು ಕೇಳಿದನು.

ಪುಂಡರೀಕನು ಕೇಳುತ್ತಾನೆ.

೪೩. 'ಎಲೈ ಪರಮದ್ಯುತಿಯೇ! ನೀನಾರು? ಇಲ್ಲಿಗೆ ಎಲ್ಲಿಂದ ಬಂದೆ? ಭೂಮಿಯಲ್ಲಿ ನಿನ್ನ ದರ್ಶನವು ಅಪುಣ್ಯವಂತರಿಗೆ ದುರ್ಲಭವು;' ಎಂದು ಪುಂಡರೀಕನು ಹೇಳಿದನು.

೪೪–೪೫. ಅದಕ್ಕೆ ನಾರದ ಮುನಿಯು ಇಂತು ಹೇಳುತ್ತಾನೆ :—

'ಎಲೈ ಪುಂಡರೀಕನೇ! ನಿನ್ನನ್ನು ನೋಡಬೇಕೆಂಬ ಆಸೆಯಿಂದ ಬಂದಿದ್ದೇನೆ. ನಾನು ನಾರದನೆಂಬವನು. ಎಲೈ ಬ್ರಾಹ್ಮಣನೇ! ನಿನ್ನಂತಹ ಹರಿ

ಸ್ಮೃತಃ ಸಂಭಾಷಿತೋ ವಾಪಿ ಪೂಜಿತೋ ವಾ ದ್ವಿಜೋತ್ತಮಃ ।
ಪುನಾತಿ ಭಗವದ್ಭಕ್ತಶ್ಚಂಡಾಲೋಽಪಿ ಯದೃಚ್ಛಯಾ ॥ ೪೫ ॥

ದಾಸೋಽಹಂ ವಾಸುದೇವಸ್ಯ ದೇವದೇವಸ್ಯ ಶಾರ್ಙ್ಗಿಣಃ ।
ಇತ್ಯುಕ್ತೋ ನಾರದೇನಾಸೌ ಭಕ್ತಿಪರ್ಯಾಕುಲಾತ್ಮನಾ ॥ ೪೬ ॥

ಪ್ರೋವಾಚ ಮಧುರಂ ವಿಪ್ರಸ್ತದ್ದರ್ಶನಸುವಿಸ್ಮಿತಃ ।

॥ ಪುಂಡರೀಕ ಉವಾಚ ॥

ಧನ್ಯೋಽಹಂ ದೇಹಿನಾಮದ್ಯ ಸುಪೂಜ್ಯೋಽಹಂ ಸುರೈರಪಿ ॥ ೪೭ ॥

ಕೃತಾರ್ಥಾಃ ಪಿತರೋ ಮೇಽದ್ಯ ಸಂಪ್ರಾಪ್ತಂ ಜನ್ಮನಃ ಫಲಂ ।
ಅನುಗೃಹೀಷ್ವ ದೇವರ್ಷೇ ತ್ವದ್ಭಕ್ತಸ್ಯ ವಿಶೇಷತಃ ॥ ೪೮ ॥

ಭಕ್ತನನ್ನು ಸ್ಮರಿಸಿದರೂ, ಮಾತನಾಡಿಸಿದರೂ, ಸೇವಿಸಿದರೂ, ದ್ವಿಜಶ್ರೇಷ್ಠನಾದ ಭಗವದ್ಭಕ್ತನಾಗಲೀ, ಚಂಡಾಲನಾಗಲೀ ಪರಿಶುದ್ಧನಾಗುತ್ತಾನೆ.

೪೬–೪೭. ನಾನು ದೇವೋತ್ತಮನೂ, ಶಾರ್ಙ್ಗವೆಂಬ ಬಿಲ್ಗಾರನೂ, ಸರ್ವ ವಸ್ತುಗಳಲ್ಲಿ ವಾಸಮಾಡುವವನಾದುದರಿಂದ ವಾಸುದೇವನೆನಿಸುವವನೂ ಆದ ಶ್ರೀ ಮಹಾವಿಷ್ಣುವಿನ ದಾಸನು;' ಎಂದು ಭಕ್ತಿಯಿಂದ ತುಂಬಿದ ಅಂತಃಕರಣವುಳ್ಳ ನಾರದಮುನಿಯು ಹೇಳಲು, ಈ ಪುಂಡರೀಕನು ಹೇಳುತ್ತಾನೆ:—

'ಎಲೈ ದೇವರ್ಷಿಯೇ! ಇಂದು ನಾನು ದೇಹಿಗಳಲ್ಲಿ ಸುಖಿಯು; ನಾನು ದೇವತೆಗಳಿಂದಲೂ ಮಾನಿತನಾದೆನು; ನನ್ನ ಪಿತೃಗಳು ಇಂದು ಕೃತಾರ್ಥರಾದರು; ಇಂದು ನನ್ನ ಹುಟ್ಟಿನ ಫಲವು ಹೊಂದಲ್ಪಟ್ಟಿತು; ನಿನ್ನ ಭಕ್ತನಾದ ನನಗೆ ವಿಶೇಷವಾಗಿ ಅನುಗ್ರಹನನ್ನು ತೋರು.

ಕಿಂ ಕಿಂ ಕರೋಮ್ಯಹಂ ವಿದ್ವನ್ ಭ್ರಾಮ್ಯಮಾಣಃ ಸ್ವಕರ್ಮಭಿಃ ।
ಕರ್ತವ್ಯಂ ಪರಮಂ ಗುಹ್ಯಮುಪದೇಷ್ಟುಂ ತ್ವಮರ್ಹಸಿ ॥ ೪೯ ॥

ತ್ವಂ ಗತಿಃ ಸರ್ವಲೋಕೇಷು ವೈಷ್ಣವಾನಾಂ ವಿಶೇಷತಃ ।

॥ ನಾರದ ಉವಾಚ ॥

ಅನೇಕಾನೀಹ ಶಾಸ್ತ್ರಾಣಿ ಕರ್ಮಾಣಿ ಚ ತಥಾ ದ್ವಿಜ ॥ ೫೦ ॥

ಧರ್ಮಮಾರ್ಗಾಶ್ಚ ಬಹವಸ್ತಥೈವ ಪ್ರಾಣಿನಃ ಸ್ಮೃತಾಃ ।
ವೈಲಕ್ಷಣ್ಯಂ ಚ ಜಗತಸ್ತಸ್ಮಾದೇವ ದ್ವಿಜೋತ್ತಮ ॥ ೫೧ ॥

---

೪೯. ಎಲೈ ಜ್ಞಾನಿಯೇ! ನನ್ನ ಪ್ರಾಚೀನಕರ್ಮಗಳಿಂದ ಜನನಮರಣ ರೂಪಪ್ರವಾಹದಲ್ಲಿ ತೊಳಲುತ್ತಿರುವ ನಾನು ಏನನ್ನು ಮಾಡಲಿ? ನಾನು ಮುಂದೆ ಮಾಡತಕ್ಕದ್ದೇನಿದೆ? ಉತ್ತಮವೂ, ಗೂಢವೂ ಆದ ತತ್ತ್ವವನ್ನು ನನಗೆ ಉಪದೇಶಿಸಲು ನೀನು ಅರ್ಹನಾಗಿರುತ್ತೀಯೆ.

೫೦-೫೧. ಎಲ್ಲಾ ಲೋಕಗಳಲ್ಲಿ ವೈಷ್ಣವರಿಗೆ ವಿಶೇಷವಾಗಿ ನೀನೇ ದಿಕ್ಕು, (ತೋರುವವನು)' ಎಂದು ಪುಂಡರೀಕನು ಹೇಳಿದನು.

ಅದಕ್ಕೆ ನಾರದಮುನಿಯು ಇಂತು ಹೇಳಿದನು.

'ಎಲೈ ಬ್ರಾಹ್ಮಣನೇ! ಕೇಳು; ಈ ವಿಷಯದಲ್ಲಿ ಶಾಸ್ತ್ರಗಳು ಅನೇಕವಾಗಿವೆ; ಕರ್ಮಗಳೂ ಹಾಗೆಯೇ; ಧರ್ಮ ಮಾರ್ಗಗಳು ಬಹುವಾಗಿವೆ; ಹಾಗೆಯೇ ಪ್ರಾಣಿಗಳೂ ಅಸಂಖ್ಯಾತಗಳಾಗಿವೆ. ಎಲೈ ದ್ವಿಜಶ್ರೇಷ್ಠನೇ! ಕೇಳು; ಆದುದರಿಂದಲೇ ಜಗತ್ತಿನಲ್ಲಿ ವೈಲಕ್ಷಣ್ಯವಿರುತ್ತದೆ.

ಅವ್ಯಕ್ತಾಜ್ಜಾಯತೇ ಸರ್ವಂ ಸರ್ವಾತ್ಮಕಮಿದಂ ಜಗತ್ ।
ಇತ್ಯೇವಂ ಪ್ರಾಹುರಪರೇ ತತ್ರೈವ ಲಯಮೇವ ಚ ॥ ೫೨ ॥

ಆತ್ಮಾನೋ ಬಹವಃ ಪ್ರೋಕ್ತಾ ನಿತ್ಯಾಃ ಸರ್ವಗತಾಸ್ತಥಾ ।
ಏವಮಾದ್ಯನುಸಂಚಿಂತ್ಯ ಯಥಾಮತಿ ಯಥಾಶ್ರುತಮ್ ॥ ೫೩ ॥

ವದಂತಿ ಋಷಯಃ ಸರ್ವೇ ನಾನಾಮತವಿಶಾರದಾಃ ॥ ೫೪ ॥

ಶೃಣುಷ್ವಾವಹಿತೋ ಬ್ರಹ್ಮನ್ ಕಥಯಾಮಿ ತವಾನಘ ।
ಪರಮಾರ್ಥಮಿದಂ ಗುಹ್ಯಂ ಘೋರಸಂಸಾರಮೋಚನಮ್ ॥ ೫೫ ॥

---

೫೨. ಸರ್ವವಸ್ತುಗಳಲ್ಲಿಯೂ, ಅಂತರ್ಯಾಮಿಯಾಗಿರುವುದರಿಂದ ಸರ್ವಶಬ್ದವಾಚ್ಯನಾದ ಭಗವಂತನೇ ನಿಯಾಮಕನಾಗಿಯುಳ್ಳ, ಸರ್ವವಸ್ತುಗಳನ್ನೂ ಒಳಗೊಂಡ ಈ ಪ್ರಪಂಚವೆಲ್ಲವೂ ಅವ್ಯಕ್ತದಿಂದ (ಪ್ರಕೃತಿಯಿಂದ) ಯಾರಿಗೂ ಸ್ಪಷ್ಟವಾಗಿ ತೋರದ ಭಗವಂತನಿಂದ ಸ್ಥೂಲವಾಗಿ ಹುಟ್ಟುತ್ತದೆ; ಮತ್ತು ಅಲ್ಲಿಯೇ ಅಡಗುತ್ತದೆ;' ಎಂದು ಕೆಲವರು ಹೇಳುತ್ತಾರೆ.

೫೩. ಎಲೈ ಉತ್ತಮನಾದ ಪುಂಡರೀಕನೇ! ಕೇಳು; ತತ್ತ್ವವನ್ನು ತಿಳಿಯುವುದರಲ್ಲಿ ತೊಡಗಿದ ಜ್ಞಾನಿಗಳಾದ ಇತರರು 'ಆತ್ಮರು ಅನೇಕ ಸಂಖ್ಯಾತರು; ನಿತ್ಯರು; ಮತ್ತು ಎಲ್ಲೆಡೆಗಳಲ್ಲಿಯೂ ಇರುತ್ತಾರೆ;' ಎಂದು ಹೇಳುತ್ತಾರೆ.

೫೪. ಅನೇಕ ಮತಗಳಲ್ಲಿ ನಿಪುಣರಾದ ಋಷಿಗಳೆಲ್ಲರೂ ತಮಗೆ ಬುದ್ಧಿಯಿರುವಷ್ಟು, ತಮಗುಂಟಾದ ಶಾಸ್ತ್ರೋಪದೇಶವನ್ನು ಮೀರದೆ, ಇವೇ ಮುಂತಾದುವನ್ನು ಚಿಂತಿಸಿ ಹೇಳುತ್ತಾರೆ.

೫೫. ಎಲೈ ಬ್ರಾಹ್ಮಣನೇ! ಅನಘನೇ! ಹೇಳುತ್ತೇನೆ. ಗಮನವಿಟ್ಟು ಕೇಳು; ಗೂಢವೂ, ಭಯಂಕರವಾದ ಸಂಸಾರಬಂಧನವನ್ನು ಬಿಡಿಸುವುದೂ ಆದ ಪರಮಾರ್ಥವನ್ನು ಹೇಳುತ್ತೇನೆ.

ಅನಾಗತಮತೀತಂ ಚ ವಿಪ್ರಕೃಷ್ಟಮತೀವ ಯತ್ ।
ನ ಗೃಹ್ಣಾತಿ ನೃಣಾಂ ದೃಷ್ಟಿರ್ವರ್ತಮಾನಾರ್ಥನಿಶ್ಚಿತಾ ॥ ೫೬ ॥

ಶೃಣುಷ್ವಾವಹಿತಂ ತಾತ ಕಥಯಾಮಿ ತವಾನಘ ।
ಯತ್ಪ್ರೋಕ್ತಂ ಬ್ರಹ್ಮಣಾ ಪೂರ್ವಂ ಪೃಚ್ಛತೋ ಮಮ ಸುವ್ರತ ॥ ೫೭ ॥

ಕದಾಚಿದ್ಬ್ರಹ್ಮಲೋಕಸ್ಥಂ ಪದ್ಮಯೋನಿಂ ಪಿತಾಮಹಮ್ ।
ಪ್ರಣಿಪತ್ಯ ಯಥಾನ್ಯಾಯಂ ಪೃಷ್ಟವಾನಹಮವ್ಯಯಮ್ ॥ ೫೮ ॥

॥ ನಾರದ ಉವಾಚ ॥

ಕಿಂ ತಜ್ಜ್ಞಾನಂ ಪರಂ ದೇವ ಕಶ್ಚ ಯೋಗಃ ಪರಸ್ತಥಾ ।
ಏತನ್ಮೇ ತತ್ತ್ವತಃ ಸರ್ವಂ ಸಮಾಚಕ್ಷ್ವ ಪಿತಾಮಹ ॥ ೫೯ ॥

---

೫೬. ಮಾನವರ ದೃಷ್ಟಿಯು (ಜ್ಞಾನವು) ನಡೆಯುತ್ತಿರುವ ಕಾಲದ ಹತ್ತಿರದ ವಿಷಯವನ್ನು ಮಾತ್ರ ಯಥಾಯೋಗ್ಯವಾಗಿ ನಿಶ್ಚಯವಾಗಿ ಗ್ರಹಿಸುವುದಾಗಿ, ಮುಂದಿನ, ಕಳೆದ ಮತ್ತು ಅತ್ಯಂತ ದೂರದ ಯಾವ ವಸ್ತುಗಳುಂಟೋ, ಅವನ್ನು ಗ್ರಹಿಸಲಾರದು.

೫೭–೫೮. ಅಪ್ಪಾ (ಅನಘನಾದ) ಪಾಪರಹಿತನಾದ, ಸುವ್ರತನಾದ ಪುಂಡರೀಕನೇ ! ಪೂರ್ವದಲ್ಲಿ, ನಾನು ಒಮ್ಮೆ ಬ್ರಹ್ಮನ ವಾಸಸ್ಥಾನವಾದ ಸತ್ಯಲೋಕದಲ್ಲಿದ್ದ, ತಾವರೆಯಲ್ಲಿ ಜನಿಸಿದ, ಅವ್ಯಯನಾದ, ಪಿತಾಮಹನಾದ, ಚತುರ್ಮುಖನನ್ನು ನಮಸ್ಕರಿಸಿ, ನೀತಿಯನ್ನು ಮೀರದೆ, ಯಾವುದನ್ನು ಪ್ರಶ್ನಿಸಿದೆನೋ, ಅದಕ್ಕೆ ಅವನು ನನಗೆ ಯಾವುದನ್ನು ಅರುಹಿದನೋ, ಅದನ್ನು (ಆ ಪ್ರಶ್ನೋತ್ತರವನ್ನು) ಈಗ ನಿನಗೆ ಹೇಳುತ್ತೇನೆ; ಎಚ್ಚರದಿಂದ ಕೇಳು;'

ಎಂದು ನಾರದನು ಹೇಳಿ, ತಾನು ಚತುರ್ಮುಖನನ್ನು ಕೇಳಿದುದನ್ನೇ ಹೇಳುತ್ತಾನೆ :—

೫೯. ನಾರದನು ಚತುರ್ಮುಖನಿಗೆ ಇಂತು ಹೇಳುತ್ತಾನೆ.

‘ಎಲೈ ಸ್ವಾಮಿಯಾದ ಪಿತಾಮಹನೇ ! ಆ ಉತ್ತಮ ಜ್ಞಾನವಾವುದು ? ಹಾಗೆಯೇ ಶ್ರೇಷ್ಠವಾದ ಉಪಾಯವಾವುದು ? ಇದೆಲ್ಲವನ್ನೂ ನೀನು ನನಗೆ ಇದ್ದದ್ದು ಇದ್ದ ಹಾಗೆಯೇ ತಿಳಿಸು,’ ಎಂದು ನಾರದನು ಕೇಳಿದನು. ಬ್ರಹ್ಮನು ಹೇಳುತ್ತಾನೆ.

॥ ಬ್ರಹ್ಮೋವಾಚ ॥

ಯಃ ಪರಃ ಪ್ರಕೃತೇಃ ಪ್ರೋಕ್ತಃ ಪುರುಷಃ ಪಂಚವಿಂಶಕಃ ।
ಸ ಏವ ಸರ್ವಭೂತಾನಾಂ ನರ ಇತ್ಯಭಿಧೀಯತೇ ॥ ೬೦ ॥

ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ತತೋ ವಿದುಃ ।
ತಾನ್ಯೇವ ಚಾಯನಂ ತಸ್ಯ ತೇನ ನಾರಾಯಣಃ ಸ್ಮೃತಃ ॥ ೬೧ ॥

ನಾರಾಯಣೋ ಜಗತ್ಸರ್ವಂ ಸರ್ಗಕಾಲೇ ಪ್ರಜಾಯತೇ ।
ತಸ್ಮಿನ್ನೇವ ಪುನಸ್ತಚ್ಚ ಪ್ರಲಯೇ ಸಂಪ್ರಲೀಯತೇ ॥ ೬೨ ॥

---

೬೦. '(ಜಡ) ಪ್ರಕೃತಿಗಿಂತಲೂ ಭಿನ್ನವೂ, ಚಿತ್ಪ್ರಕೃತಿಗಿಂತ ಉತ್ತಮವೂ ಆದವನೆಂದು ಶಾಸ್ತ್ರಗಳಲ್ಲಿಯೂ, ಜ್ಞಾನಿಗಳಿಂದಲೂ, ೧೦ ಇಂದ್ರಿಯಗಳು, ಶಬ್ದಾದಿ ೫ ತನ್ಮಾತ್ರಗಳು, ಪೃಥಿವ್ಯಾದಿ ೫ ಭೂತಗಳು, ಮನಸ್ಸು, ಬುದ್ಧಿ, ಅಹಂಕಾರ ಮತ್ತು ಮಹತ್ತತ್ತ್ವ ಈ ಚತುರ್ವಿಂಶತಿತತ್ತ್ವಾತ್ಮಕ ವಾದ ಪ್ರಕೃತಿಯಿಂದ ವಿಲಕ್ಷಣನಾಗಿ, ಇಪ್ಪತ್ತೈದನೆಯ ತತ್ತ್ವವಾದ, ಸಕಲ ದೇಹದಲ್ಲಿಯೂ ವಾಸವಾಗಿರುವುದರಿಂದ ಪುರುಷನೆನಿಸುವ ಅಥವಾ ಪ್ರಾಣಾಖ್ಯ ನಿವಾಸಸ್ಥಾನದಲ್ಲಿರುವ ಅಥವಾ ಉತ್ತಮಾಧಿಷ್ಠಾನನಾದ ಮುಖ್ಯ ಪ್ರಾಣದೇವರ ದೇಹದಲ್ಲಿ ವಾಸವಾಗಿರತಕ್ಕವನು, ಅಥವಾ ಷಡ್ಗುಣೈಶ್ವರ್ಯಸಂಪನ್ನನಾದವನು ಅಥವಾ ಜೀವರಿಗೆ ಕರ್ಮಫಲವನ್ನು ಕೊಡತಕ್ಕವನು, ಪುರುಷನು ಎಂದು ಹೇಳಿಸಿ ಕೊಂಡಿರುವನು. ಅವನೇ ಸರ್ವಚೇತನರಿಗೂ ಜ್ಞಾನಪ್ರದನಾದುದರಿಂದ ನರನೆನಿಸಿ ಕೊಳ್ಳುತ್ತಾನೆ.

೬೧. ಈ ನರರೂಪನಾದ ಪುರುಷನಿಂದ ಸೃಷ್ಟವಾದ ಚತುರ್ವಿಂಶತಿ ತತ್ತ್ವ ಗಳು ನಾರಗಳೆನಿಸಿಕೊಳ್ಳುತ್ತವೆಯೆಂದು ತಿಳಿಯುತ್ತಾರೆ. ಆ ತತ್ತ್ವಗಳೇ ವಾಸ ಸ್ಥಾನವಾಗಿರುವವನಾದುದರಿಂದ ನಾರಾಯಣನೆನ್ನುತ್ತಾರೆ.

೬೨. ಶ್ರೀ ಮನ್ನಾರಾಯಣನು ಸೃಷ್ಟಿಕಾಲದಲ್ಲಿ ಸಕಲ ಜಗತ್ತನ್ನೂ ಸೃಷ್ಟಿ ಸುತ್ತಾನೆ. ಆ ಸೃಷ್ಟವಾದ ಜಗತ್ತೆಲ್ಲವೂ ಮತ್ತು ಆ ನಾರಾಯಣನಲ್ಲಿಯೇ ಅಡಗುತ್ತದೆ.

ನಾರಾಯಣಃ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಮ್ ।
ನಾರಾಯಣಃ ಪರಂ ಜ್ಯೋತಿರಾತ್ಮಾ ನಾರಾಯಣಃ ಪರಃ ॥ ೬೩ ॥

ಪರಾದಪಿ ಪರಶ್ಚಾಸೌ ತಸ್ಮಾನ್ನಾತಿಪರಂ ಮುನೇ ।
ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ ॥ ೬೪ ॥

ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ।
ಏವಂ ವಿದಿತ್ವಾ ತಂ ದೇವಾಃ ಸಾಕಾರಂ ವ್ಯಾಹರನ್ಮುಹುಃ ॥ ೬೫ ॥

---

೬೩. ನಾರಾಯಣನೇ ಸರ್ವೋತ್ತಮನಾದ, ಅಪ್ರಾಕೃತಾನಂತಕಲ್ಯಾಣ ಗುಣಪೂರ್ಣನಾದ ಬ್ರಹ್ಮನು ; ನಾರಾಯಣನೇ ಪ್ರಕೃತಿಗಿಂತ ಉತ್ತಮನಾದ, ಇಪ್ಪತ್ತೈದನೆಯ ತತ್ತ್ವವು, ನಾರಾಯಣನೇ ಸರ್ವತ್ರ ವ್ಯಾಪ್ತನಾಗಿಯೂ, ಸ್ವಾಮಿಯಾಗಿಯೂ, ಸರ್ವೋತ್ತಮನಾಗಿಯೂ ಇರುವವನು.

೬೪. ಎಲೈ ಮುನಿಯೇ ! ಕೇಳು ; ಈ ಶ್ರೀಮನ್ನಾರಾಯಣನು ಉತ್ತಮರಾದ ರಮಾ ಬ್ರಹ್ಮಾದಿಗಳಿಂದಲೂ ಉತ್ತಮನು. ಈ ನಾರಾಯಣನಿಂದ ಅತ್ಯುತ್ತಮರಾದವರು ಇಲ್ಲ ; ಈ ಪ್ರಪಂಚದಲ್ಲಿ ಯಾವ ಯಾವ ಕಿಂಚಿದ್ವಸ್ತುವು ಕಾಣಿಸುತ್ತದೆಯೋ, ಕೇಳಿಸುತ್ತದೆಯೋ, ಅವೆಲ್ಲವೂ ಶ್ರೀಮನ್ನಾರಾಯಣನಿಂದ ಬಿಟ್ಟು ಬೇರೆ ಇಲ್ಲವು. ಸ್ವಾತಂತ್ರ್ಯದಿಂದಿರಲಾರವು.

೬೫. ಆ ಪ್ರಪಂಚವೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿ, ಶ್ರೀಮನ್ನಾರಾಯಣನು ಇರುತ್ತಾನೆ. ಇಂತು ಅವನನ್ನು ದೇವತೆಗಳು ತಿಳಿದು ಅಡಿಗಡಿಗೆ ಜಗದಾಕಾರಸಹಿತನನ್ನಾಗಿ (ಜಗನ್ಮಯನನ್ನಾಗಿ) ಹೇಳಿದರು.

ನಮೋ ನಾರಾಯಣಾಯೇತಿ ಧ್ಯಾತ್ವಾ ಚಾನನ್ಯಮಾನಸಃ ।
ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ॥ ೬೬ ॥

ಯೋ ನಿತ್ಯಂ ಧ್ಯಾಯತೇ ದೇವಂ ನಾರಾಯಣಮನನ್ಯಧೀಃ ।
ಏತಜ್‌ಜ್ಞಾನಂ ಪರಂ ನಾತೋ ಯೋಗಶ್ಚೈವ ಪರಸ್ತಥಾ ॥ ೬೭ ॥

ಪರಸ್ಪರವಿರುದ್ಧಾರ್ಥೈಃ ಕಿಮನ್ಯೈಃ ಶಾಸ್ತ್ರವಿಸ್ತರೈಃ ।
ಬಹವೋಽಪಿ ಯಥಾಮಾರ್ಗಾ ವಿಶನ್ತ್ಯೇಕಂ ಮಹತ್ಪುರಮ್ ॥ ೬೮ ॥

---

೬೬. ಯಾವನು ಬೇರೆ ಯಾವುದರಲ್ಲಿಯೂ ಮನವಿಡದೆ, 'ನಮೋ ನಾರಾಯಣಾಯ' (ನಾರಾಯಣನಿಗೆ ನಮಸ್ಕಾರ) ಎಂದು ಸ್ಮರಿಸಿದವನಾಗಿರುತ್ತಾನೆಯೋ, ಅವನಿಗೆ ದಾನಗಳಿಂದಲಾಗಲೀ, ಗಂಗಾದಿತೀರ್ಥಗಳಿಂದಲಾಗಲೀ, ತಪದಿಂದಲಾಗಲೀ, ಜನ್ನಗಳಿಂದಲಾಗಲೀ ಏನು? (ಯಾವ ವಿಶೇಷ ಫಲವೂ ಇಲ್ಲವು.)

೬೭. ಯಾವನು ಬೇರೆ ಯಾವುದನ್ನೂ ಚಿಂತಿಸದೆ, ಕ್ರೀಡಾದಿಗುಣವಿಶಿಷ್ಟನಾದ ಶ್ರೀಮನ್ನಾರಾಯಣನನ್ನು ನಿತ್ಯದಲ್ಲಿಯೂ ಧ್ಯಾನಿಸುತ್ತಾನೆಯೋ, ಈ ಜ್ಞಾನವೇ ಅತ್ಯುತ್ತಮವಾದುದು. ಹಾಗೆ ಇದಕ್ಕಿಂತ ಉತ್ತಮವಾದ ಸಾಧನವು (ಉಪಾಯವು) ಯಾವುದೂ ಇಲ್ಲವು.

೬೮–೬೯. ಒಂದಕ್ಕೊಂದು ಪುರುಳುಳ್ಳ (ಅರ್ಥವುಳ್ಳ) ಬೇರೆ ಬೇರೆ ಬಿತ್ತರದ ಶಾಸ್ತ್ರಗಳಿಂದೇನು ಪ್ರಯೋಜನವು? ಎಂತು ಬೇರೆ ಬೇರೆಯಾದ ಅನೇಕ ಹಾದಿಗಳು ಒಂದು ಪಟ್ಟಣವನ್ನು ಕುರಿತು ಹೋಗುತ್ತವೆಯೋ, ಅಂತು ಸಕಲ ಜ್ಞಾನಗಳೂ ಆ ಸರ್ವನಿಯಾಮಕನಾದ ಭಗವಂತನನ್ನೇ ಕುರಿತು ಹೋಗುತ್ತವೆ. ಆ ಶ್ರೀಮನ್ನಾರಾಯಣನಾದರೋ ಎಲ್ಲ ವಸ್ತುಗಳಲ್ಲಿಯೂ ಇರುವವನು; ಕ್ರೀಡಾದಿ ಗುಣವಿಶಿಷ್ಟನು; ಜೀವಾದಿ ಸೂಕ್ಷ್ಮಪದಾರ್ಥಗಳಲ್ಲಿಯೂ ಇರತಕ್ಕ ಸೂಕ್ಷ್ಮರೂಪನು; ಸ್ವತಃ ಅವ್ಯಕ್ತ ಸ್ವರೂಪನು; ಸಕಲ ವೇದಪ್ರಮಾಣಗಳಿಂದ

ಯಥಾ ಜ್ಞಾನಾನಿ ಸರ್ವಾಣಿ ಪ್ರವಿಶಂತಿ ತಮೀಶ್ವರಮ್ ।
ಸ ಹಿ ಸರ್ವಗತೋ ದೇವಃ ಸೂಕ್ಷ್ಮೋಽವ್ಯಕ್ತಃ ಸನಾತನಃ ॥ ೧೯ ॥

ಜಗದಾದಿರನಾದ್ಯಂತಃ ಸ್ವಯಂಭೂರ್ಭೂತ ಭಾವನಃ ।
ವಿಷ್ಣುರ್ವಿಭುರಚಿಂತ್ಯಾತ್ಮಾ ನಿತ್ಯಃ ಸದಸದಾತ್ಮಕಃ ॥ ೨೦ ॥

ವಾಸುದೇವೋ ಜಗದ್ವಾಸಃ ಪುರಾಣಃ ಕವಿರವ್ಯಯಃ ।
ಯಸ್ಮಾತ್ಪ್ರಾಪ್ತಂ ಸ್ಥಿತಿಂ ಕೃತ್ಸ್ನಂ ತ್ರೈಲೋಕ್ಯಂ ಸಚರಾಚರಮ್ ॥ ೨೧ ॥

ತಸ್ಮಾತ್ಸ ಭಗವಾನ್ ದೇವೋ ವಿಷ್ಣುರಿತ್ಯಭಿಧೀಯತೇ ।
ಯಸ್ಮಾದ್ವಾ ಸರ್ವಭೂತಾನಾಂ ತತ್ತ್ವಾದ್ಯಾನಾಂ ಯುಗಕ್ಷಯೇ ॥ ೨೨ ॥

ಜ್ಞೇಯನು; ವಾಚ್ಯನು; ಏಕರೂಪದಿಂದಿರುವವನೂ, ಸಕಲ ಜಗತ್ತುಗಳಿಗೂ ಕಾರಣನೂ, ಉತ್ಪತ್ತಿ-ನಾಶರಹಿತನೂ, ಇತರರ ಅಪೇಕ್ಷೆಯಿಲ್ಲದೆ ಇರತಕ್ಕವನೂ, ಸಕಲ ಪ್ರಾಣಿಗಳಿಗೂ ಜ್ಞಾನಪ್ರದನೂ, ಸಕಲ ಪ್ರಾಣಿಗಳಿಂದ ಜ್ಞೇಯನೂ, ವ್ಯಾಪ್ತನೂ, ನಿಯಾಮಕನೂ, ಸಂಪೂರ್ಣವಾಗಿ ರಸಾದಿಗಳಿಂದಲೂ ತಿಳಿಯಲಾಗದ ಸ್ವರೂಪವುಳ್ಳವನೂ, ಸದಾ ಇರತಕ್ಕವನೂ, ಜ್ಞಾನಿಗಳಿಂದ ಹೊಂದತಕ್ಕವನೂ, ತಮೋಯೋಗ್ಯರಿಂದ ಹೊಂದಲಾಗದವನೂ, ಎಲ್ಲೆಡೆಗಳಲ್ಲಿಯೂ ವಾಸಮಾಡುವವನೂ, ಕ್ರೀಡಾದಿಗುಣವಿಶಿಷ್ಟನೂ, ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಅಧಿಷ್ಠಾನವಾಗಿರುವವನೂ, ಸರ್ವ ಶರೀರಗಳಲ್ಲಿಯೂ ಇರುವವನೂ, ಆಲೋಚನೆಯಿಲ್ಲದೆ ಸದಾ ಸರ್ವವಿಷಯಕಜ್ಞಾನವುಳ್ಳವನೂ, ಅಪಕ್ಷಯಾದಿ ದೋಷರಹಿತನೂ, ಸ್ಥಾವರಜಂಗಮಗಳಿಂದ ಕೂಡಿದ ಸ್ವರ್ಗಮರ್ತ್ಯಪಾತಾಳಗಳೆಂಬ ಈ ಮೂರುಲೋಕವೆಲ್ಲವೂ ಯಾವನಿಂದ ಇರುವಿಕೆಯನ್ನು ಹೊಂದಿತೋ, ಆ ಕಾರಣದಿಂದ ಆ ಅವ್ಯಾಹತ ಷಡ್ಗುಣೈಶ್ವರ್ಯ ಪೂರ್ಣನಾದ ದೇವನೂ ವಿಷ್ಣುವೆಂದು ಹೇಳಿಸಿಕೊಳ್ಳುತ್ತಾನೆ. ಯಾವ ಕಾರಣದಿಂದ ಅವಾಂತರಪ್ರಳಯದಲ್ಲಿ ಸಕಲ ಜೀತನರಿಗೂ, ಇಂದ್ರಿಯಾದಿ ತತ್ತ್ವಗಳೇ ಮೊದಲಾದುವುಗಳಿಗೂ ಅವನಲ್ಲಿಯೇ ಅಡಗಿರುವಿಕೆಯೋ ಆ ಕಾರಣದಿಂದ ಆ ಭಗವಂತನು ಸೃಷ್ಟಿಯಲ್ಲಿ ವಾಸುದೇವನೆನಿಸಿಕೊಳ್ಳುತ್ತಾನೆ. ಕೆಲವರು ಪುರುಷನೆಂದೂ, ಕೆಲವರು ಈಶ್ವರನೆಂದೂ, ಅವ್ಯಯನೆಂದೂ, ಕೆಲವರು

ತಸ್ಮಿನ್ನಿವಾಸಃ ಸಂಸರ್ಗೇ ವಾಸುದೇವಸ್ತತಸ್ತು ಸಃ ।
ತಮಾಹುಃ ಪುರುಷಂ ಕೇಚಿತ್ ಕೇಚಿದೀಶ್ವರಮವ್ಯಯಮ್ ॥ ೭೩ ॥

ವಿಜ್ಞಾನಮಾತ್ರಂ ಕಿಂಚಿಚ್ಚ ಕೇಚಿದ್ಬ್ರಹ್ಮ ಪರಂ ತಥಾ ।
ಕೇಚಿತ್ಕಾಲಮನಾದ್ಯಂತಂ ಕೇಚಿಜ್ಜೀವಂ ಸನಾತನಮ್ ।
ಕೇಚಿತ್ ಕ್ಷೇತ್ರಜ್ಞಮಿತ್ಯಾಹುಃ ಕೇಚಿತ್ ಷಡ್ವಿಂಶಕಂ ತಥಾ ।
ಕೇಚಿಚ್ಚ ಪರಮಾತ್ಮಾನಂ ಕೇಚಿಚ್ಚೈವಮನಾಮಯಮ್ ॥ ೭೪ ॥

ಅಂಗುಷ್ಠಮಾತ್ರಂ ಕೇಚಿಚ್ಚ ಕೇಚಿತ್ಪದ್ಮರಜೋಪಮಮ್ ।
ಏತೇ ಚಾನ್ಯೇ ಚ ಮುನಿಭಿಃ ಸಂಜ್ಞಾಭೇದಾಃ ಪೃಥಗ್ವಿಧಾಃ ॥ ೭೫ ॥

ಶಾಸ್ತ್ರೇಷು ಕಥಿತಾ ವಿಷ್ಣೋರ್ಲೋಕವ್ಯಾಮೋಹ ಕಾರಕಾಃ ।
ಏಕಂ ಯದಿ ಭವೇಚ್ಛಾಸ್ತ್ರಂ ಜ್ಞಾನಂ ನಿಸ್ಸಂಶಯಂ ಭವೇತ್ ॥ ೭೬ ॥

ವಿಜ್ಞಾನಸ್ವರೂಪನೆಂದೂ, ಕಿಂಚಿನ್ಮಸ್ತುವೆಂದೂ, ಮತ್ತೆ ಕೆಲವರು ಪರಬ್ರಹ್ಮ ನೆಂದೂ, ಕೆಲವರು ಆದ್ಯಂತರಹಿತನಾದ ಕಾಲನೆಂದೂ, ಕೆಲವರು ಸನಾತನನಾದ ಸರ್ವಜೀವಸ್ವಕನಾದುದರಿಂದ ಜೀವನೆಂದೂ, ಕೆಲವರು ರಮಾದೇವಿಗಿಂತ ಉತ್ತಮ ನಾದ ಸ್ವಾಮಿಯಾದವನಾದುದರಿಂದ ಪರಮಾತ್ಮನೆಂದೂ, ಮತ್ತೆ ಕೆಲವರು ಅನಾ ಮಯನೆಂದೂ, ಕೆಲವರು ಅವ್ಯಕ್ತಾದಿ ಸಕಲ ಕ್ಷೇತ್ರಗಳನ್ನೂ ಅರಿತವನಾದುದರಿಂದ ಕ್ಷೇತ್ರಜ್ಞನೆಂದೂ, ಇನ್ನು ಕೆಲವರು ಇಪ್ಪತ್ತಾರನೆಯ ತತ್ತ್ವವನ್ನಾಗಿಯೂ ಹೇಳುತ್ತಾರೆ.

೭೫-೭೬. ಕೆಲವರು ಆ ಪರಮಾತ್ಮನನ್ನು ಹೆಬ್ಬೆರಳುಗಾತ್ರವುಳ್ಳವನೆಂದೂ, ಇನ್ನು ಕೆಲವರು ತಾವರೆಯ ಧೂಳಿಗೆ ಸಮನಾಗಿರುವನೆಂದೂ ಹೇಳುತ್ತಾರೆ. ಮುನಿ ಗಳು ಶಾಸ್ತ್ರಗಳಲ್ಲಿ ಜನರಿಗೆ ಚಿತ್ತಭ್ರಮನನ್ನುಂಟುಮಾಡತಕ್ಕ ಇವೂ, ಇತರವೂ ಆದ ಬೇರೆ ಬೇರೆ ಹೆಸರುಗಳನ್ನು ಶ್ರೀ ಮಹಾವಿಷ್ಣುವಿಗೆ ಹೇಳಿರುತ್ತಾರೆ. ಜಗತ್ತಿ ನಲ್ಲಿ ಶಾಸ್ತ್ರವಾದುದು ಒಂದೇ ಆಗಿದ್ದಲ್ಲಿ, ಜ್ಞಾನ ನಿಸ್ಸಂಶಯವಾಗಿರುತ್ತಿತ್ತು.

ಬಹುತ್ವಾದಿಹ ಶಾಸ್ತ್ರಾ*ಣಾಂ ಜ್ಞಾನತತ್ತ್ವಂ ಸುದುರ್ಲಭಮ್ ।
ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ॥ ೭೭ ॥

ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ।
ತ್ಯಕ್ತ್ವಾ ವ್ಯಾಮೋಹಕಾನ್ ಸರ್ವಾನ್ ತಸ್ಮಾಚ್ಛಾಸ್ತ್ರಾರ್ಥವಿಸ್ತರಾತ್ ॥೭೮ ॥

ಅನನ್ಯಚೇತಾ ಧ್ಯಾಯಸ್ವ ನಾರಾಯಣಮತಂದ್ರಿತಃ ।
ಏವಂ ಜ್ಞಾತ್ವಾ ತು ಸತತಂ ದೇವದೇವಂ ತಮವ್ಯಯಮ್ ॥ ೭೯ ॥

ಕ್ಷಿಪ್ರಂ ಯಾಸ್ಯಸಿ ತತ್ರೈವ ಸಾಯುಜ್ಯಂ ನಾತ್ರ ಸಂಶಯಃ ।
ಶ್ರುತ್ವೇದಂ ಬ್ರಹ್ಮಣಾ ಪ್ರೋಕ್ತಂ ಜ್ಞಾನಯೋಗಂ ಸುದುರ್ಲಭಮ್

೭೭–೭೮. ಆದರೆ, ಈ ಪ್ರಪಂಚದಲ್ಲಿ ಶಾಸ್ತ್ರಗಳು ಅನೇಕವಾಗಿರುವುದರಿಂದ ತತ್ತ್ವಜ್ಞಾನವು ಇದೆಂದು ಅರಿವುದಶಕ್ಯವಾಗಿರುತ್ತದೆ. ಶಾಸ್ತ್ರಗಳನ್ನೆಲ್ಲಾ ಶೋಧಿಸಿ (ಕಲಕಿ), ಮೇಲಿಂದ ಮೇಲೆ ವಿಚಾರಮಾಡಿ, ಆ ಬಿತ್ತರದ ಶಾಸ್ತ್ರಾರ್ಥದ್ದೆಸೆಯಿಂದ ವ್ಯಾಮೋಹಕವಾದುವುಗಳನ್ನೆಲ್ಲಾ ಬಿಟ್ಟು, ಯಾವಾಗಲೂ ಶ್ರೀಮನ್ನಾರಾಯಣನನ್ನು ಚಿಂತಿಸುವುದು – ಎಂಬುದಿದು ವ್ಯವಸ್ಥಿತವಾಯಿತು.

೭೯. ಎಲೈ ನಾರದನೇ ! ಇಂತು ಭಗವತ್ಸ್ವರೂಪವನ್ನರಿತು, ಅಲಸನಾಗದೆ ಬೇರೆಯಾವುದರಲ್ಲಿಯೂ ಮನವಿಡದೆ, ದೇವಶ್ರೇಷ್ಠನೂ, ಅವ್ಯಯನೂ, ಆದ ಆ ಶ್ರೀ ಮನ್ನಾರಾಯಣನನ್ನು ಯಾವಾಗಲೂ ಧ್ಯಾನಮಾಡು.

೮೦-೮೨. ಅಲ್ಲಿಯೇ ಬೇಗನೆ ಬ್ರಹ್ಮಸಾಯುಜ್ಯರೂಪವಾದ ಮುಕ್ತಿಯನ್ನೆಯ್ದುವೆ. ಈ ವಿಷಯದಲ್ಲಿ ಸಂಶಯವಿಲ್ಲವು ; 'ಎಂದು ಪಿತಾಮಹನು ಹೇಳಿದ, ಈ ಸುದುರ್ಲಭವಾದ ಜ್ಞಾನಯೋಗವನ್ನು ಕೇಳಿ, ಎಲೈ ಪುಂಡರೀಕನೆಂಬ ಬ್ರಾಹ್ಮಣ

---

* ಫುಟ್‌ನೋಟ್. ಶಾಸ್ತ್ರಂ :—" ಋಗಾದ್ಯಾ ಭಾರತಂ ಚೈವ ಪಂಚರಾತ್ರಮಥಾಖಿಲಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥
ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ ॥
ಅತೋಽನ್ಯೋ ಗ್ರಂಥವಿಸ್ತಾರೋ ನೈವ ಶಾಸ್ತ್ರಂ ಕುವರ್ತ್ಮ ತತ್ ॥ "

ತತೋಽಹಮಭವಂ ವಿಪ್ರೇಂದ್ರ ನಾರಾಯಣ ಪರಾಯಣಃ ।
ನಮೋ ನಾರಾಯಣಾಯೇತಿ ಯೇ ವಿದುರ್ಬ್ರಹ್ಮ ಶಾಶ್ವತಮ್ ॥ ೮ ॥
ಅಂತಕಾಲೇ ಜಪನ್ನೇತಿ ತದ್ವಿಷ್ಣೋಃ ಪರಮಂ ಪದಮ್ ।
ತಸ್ಮಾನ್ನಾರಾಯಣಸ್ತಾತ ಪರಮಾತ್ಮಾ ಸನಾತನಃ ॥ ೮೧ ॥
ಅನನ್ಯಮನಸಾ ನಿತ್ಯಂ ಧ್ಯಾಯೇತ್ತತ್ತ್ವವಿಚಿಂತಕಃ ।
ನಾರಾಯಣೋ ಜಗದ್ವ್ಯಾಪೀ ಪರಮಾತ್ಮಾ ಸನಾತನಃ ॥ ೮೨ ॥
ಜಗತಾಂ ಸೃಷ್ಟಿಸಂಹಾರಪರಿಪಾಲನತತ್ಪರಃ ।
ಶ್ರವಣಾತ್ಪಠನಾಚ್ಚೈವ ನಿದಿಧ್ಯಾಸನತತ್ಪರಃ ॥ ೮೩ ॥

ಶ್ರೇಷ್ಠನೇ ! ಬಳಿಕ ನಾನು ಶ್ರೀಮನ್ನಾರಾಯಣನಲ್ಲಿಯೇ ಆಸಕ್ತನಾದವನಾದೆನು. ಯಾರು ಯಾವಾಗಲೂ ಏಕರೂಪನಾಗಿರುವ, ಅಪ್ರಾಕೃತಾನಂತಗುಣಪೂರ್ಣನಾದ ಬ್ರಹ್ಮನನ್ನು ' ನಮೋ ನಾರಾಯಣಾಯ ' (ನಾರಾಯಣನಿಗೆ ನಮಸ್ಕಾರವು), ಎಂದು ಧ್ಯಾನಿಸಿ ತಿಳಿಯುತ್ತಾರೆಯೋ, ಅವರು ದೇಹಾವಸಾನ ಕಾಲದಲ್ಲಿ ಶ್ರೀಮನ್ನಾರಾಯಣನನ್ನು ಜಪಿಸುತ್ತಾ, ಶ್ರೀ ಮಹಾವಿಷ್ಣುವಿನ ಶ್ರೇಷ್ಠನಾದ ಲೋಕವನ್ನು ಹೊಂದುತ್ತಾರೆ ; ಅಯ್ಯಾ ! ಆದುದರಿಂದ ಶ್ರೀ ಮನ್ನಾರಾಯಣನು ವೇದಪ್ರತಿಪಾದ್ಯನೂ, ನಿತ್ಯನೂ, ರಮಾದೇವಿಗಿಂತಲೂ ಶ್ರೇಷ್ಠನಾದ ಲೋಕೇಶನೂ ಆಗಿರುವನು.

೮೨. ತತ್ತ್ವಚಿಂತಕನಾದವನು ಬೇರೆ ಯಾವುದನ್ನೂ ಚಿಂತಿಸದೆ, ನಿತ್ಯದಲ್ಲಿಯೂ ' ಶ್ರೀ ಮನ್ನಾರಾಯಣನು ರಮಾದೇವಿಗಿಂತ ಶ್ರೇಷ್ಠನಾದ ಸ್ವಾಮಿಯು ; ಯಾವಾಗಲೂ ಏಕರೂಪನಾಗಿ ನಿತ್ಯನಾಗಿರುವನು ; ಸಕಲ ಜಗತ್ತಿನಲ್ಲಿಯೂ ವ್ಯಾಪಿಸಿರುವನು ; 'ಎಂದು ಧ್ಯಾನಮಾಡುವುದು.

೮೩. ಇನ್ನೂ ' ಆ ಶ್ರೀಮನ್ನಾರಾಯಣನು ಲೋಕಗಳ ಉತ್ಪತ್ತಿ ಸ್ಥಿತಿ ಸಂಹಾರಗಳ ಕರ್ತೃವು ; ' ಎಂದು ಚಿಂತಿಸುವುದು. ಅಲ್ಲದೆ ಪರಮಾತ್ಮವಿಷಯವನ್ನು ಗುರೂಪದೇಶದಿಂದ ಶ್ರವಣಮಾಡುವುದು, ಓದುವುದು, ಮತ್ತು ಧ್ಯಾನಮಾಡುವುದು.

ಆರಾಧ್ಯಂ ಸರ್ವಥಾ ಬ್ರಹ್ಮ ಪುರುಷೇಣ ಹಿತೈಷಿಣಾ ।
ನಿಃಸ್ಪೃಹಾ ನಿತ್ಯಸಂತುಷ್ಟಾ ಜ್ಞಾನಿನಃ ಸಂಯತೇಂದ್ರಿಯಾಃ ॥ ೮೫ ॥

ನಿರ್ಮಮಾ ನಿರಹಂಕಾರಾ ರಾಗದ್ವೇಷವಿವರ್ಜಿತಾಃ ।
ತತ್ಪಕ್ಷಪಾತಿನಃ ಶಾಂತಾಃ ಸರ್ವಸಂಕಲ್ಪವರ್ಜಿತಾಃ ॥ ೮೬ ॥

ಧ್ಯಾನಯೋಗಪರಾ ಬ್ರಹ್ಮನ್ ತೇ ಪಶ್ಯಂತಿ ಜಗತ್ಪತಿಮ್ ।
ತ್ಯಕ್ತತ್ರಯಾ ಮಹಾತ್ಮಾನೋ ವಾಸುದೇವಂ ಹರಿಂ ಗುರುಮ್ ॥ ೮೭ ॥

ಕೀರ್ತಯಂತಿ ಜಗನ್ನಾಥಂ ತೇ ಪಶ್ಯಂತಿ ಜಗತ್ಪತಿಮ್ ।
ತಸ್ಮಾತ್ತ್ವಮಪಿ ವಿಪ್ರೇಂದ್ರ ನಾರಾಯಣಪರೋ ಭವ ॥ ೮೮ ॥

೮೫-೮೮. ಎಲೈ ಬ್ರಾಹ್ಮಣನೇ ! ಶಾಶ್ವತವಾದ ಆನಂದವನ್ನು (ಮುಕ್ತಿಯನ್ನು) ಅಪೇಕ್ಷಿಸುವ ಮಾನವನು ಎಲ್ಲ ರೀತಿಯಿಂದಲೂ ಪರಬ್ರಹ್ಮನನ್ನು ಪೂಜಿಸುವುದು. ಎಲೈ ಬ್ರಾಹ್ಮಣನೇ ! ಆಶಾರಹಿತರೂ, ಯಾವಾಗಲೂ ಸಂತುಷ್ಟರೂ, ಜ್ಞಾನಿಗಳೂ, ಜಿತೇಂದ್ರಿಯರೂ, ಮಮತಾರಹಿತರೂ, ಅಹಂಕಾರವಿಲ್ಲದವರೂ ರಾಗದ್ವೇಷವಿಲ್ಲದವರೂ, ಪಕ್ಷಪಾತವಿಲ್ಲದವರೂ, ಶಾಂತರೂ, ಎಲ್ಲ ತೆರನಾದ ಉದ್ದೇಶವಿಲ್ಲದವರೂ, ಧ್ಯಾನಯೋಗಾಸಕ್ತರೂ ಆದವರು ಯಾರೋ, ಅವರು ಜಗನ್ನಾಯಕನಾದ ಶ್ರೀಮನ್ನಾರಾಯಣನನ್ನು ಅಪರೋಕ್ಷೀಕರಿಸುತ್ತಾರೆ. ದಾರೈಷಣಾ, ಪುತ್ರೈಷಣಾ ವಿತ್ತೈಷಣಾ ಈ ಈಷಣಾತ್ರಯಗಳನ್ನು ಬಿಟ್ಟು ಯಾವ ಮಹಾತ್ಮರು ಲೋಕಗುರುವೂ, ಶ್ರೀ ಹರಿಯೂ ಆದ, ಶ್ರೀವಾಸುದೇವನನ್ನು ಅವನ ಗುಣಗಳನ್ನು ಹೇಳಿ, ಕೊಂಡಾಡುತ್ತಾರೆಯೋ, ಅವರು ಜಗತ್ತಿಗೆ ದಿಕ್ಕೂ, ಒಡೆಯನೂ ಆದ ಶ್ರೀಮನ್ನಾರಾಯಣನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ; ಆದುದರಿಂದ ಎಲೈ ಬ್ರಾಹ್ಮಣಶ್ರೇಷ್ಠನೇ! ನೀನೂ ಶ್ರೀಮನ್ನಾರಾಯಣನಲ್ಲಿ ನಿರತಿಶಯವಾದ ಭಕ್ತಿಯನ್ನು ಮಾಡುವವನಾಗು.

ತದನ್ಯಃ ಕೋ ಮಹೋದಾರಃ ಪ್ರಾರ್ಥಿತಂ ದಾತುಮೀಶ್ವರಃ ।
ಹೇಲಯಾ ಕೀರ್ತಿತೋ ಯೋ ವೈ ಸ್ವಂ ಪದಂ ವಿಶತಿ ದ್ವಿಜ ॥ ೮೯ ॥

ಅಪಿ ಕಾರ್ಯಂ ತ್ವಯಾ ಚೈವ ಜಪಃ ಸ್ವಾಧ್ಯಾಯಮೇವ ಚ ।
ತಮೇವೋದ್ದಿಶ್ಯ ದೇವೇಶಂ ಕುರು ನಿತ್ಯಮತಂದ್ರಿತಃ ॥ ೯೦ ॥

ಕಿಂ ತತ್ರ ಬಹುಭಿರ್ಮಂತ್ರೈಃ ಕಿಂ ತತ್ರ ಬಹುಭಿರ್ವ್ರತೈಃ ।
ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೯೧ ॥

ಚೀರವಾಸಾ ಜಟಾಧಾರೀ ತ್ರಿದಂಡೀ ಮುಂಡ ಏವ ವಾ ।
ಭೂಷಿತೋ ವಾ ದ್ವಿಜಶ್ರೇಷ್ಠ ನ ಲಿಂಗಂ ಧರ್ಮಕಾರಣಮ್ ॥ ೯೨ ॥

---

೮೯. ಎಲೈ ಬ್ರಾಹ್ಮಣನೇ! ಆ ನಾರಾಯಣನನ್ನುಳಿದು ಮತ್ತಾವ ಮಹೋದಾರನು ಬೇಡಿದುದನ್ನು ಕೊಡಲು ಪ್ರಭುವು? (ಯಾವನೂ ಇಲ್ಲವು.) ವಿಲಾಸದಿಂದ ನಾಮವನ್ನು ಕೀರ್ತಿಸಿಕೊಂಡ ಯಾವ ಶ್ರೀಹರಿಯು ತನ್ನ ಪದವನ್ನೇ (ಲೋಕವನ್ನೇ) ಪ್ರವೇಶಿಸುವಂತೆ ಅನುಗ್ರಹಿಸುತ್ತಾನೆ.

೯೦. ನೀನೂ ನಿತ್ಯದಲ್ಲಿಯೂ ಸೋಮಾರಿಯಾಗದೆ, ಆ ದೇವೋತ್ತಮನಾದ ನಾರಾಯಣನನ್ನೇ ಉದ್ದೇಶಿಸಿ, ಜಪವನ್ನೂ, ವೇದಾಧ್ಯಯನವೇ ಮೊದಲಾದ ಸತ್ಕಾರ್ಯಗಳನ್ನೂ ಎಸಗುವನಾಗು.

೯೧. ಆ ನಾರಾಯಣನನ್ನು ಪೂಜಿಸುವ ವಿಷಯದಲ್ಲಿ ಅನೇಕ ಮಂತ್ರಗಳಿಂದೇನು? ಮತ್ತು ಅನೇಕ ವ್ರತಗಳಿಂದೇನು? 'ನಮೋ ನಾರಾಯಣಾಯ' (ನಾರಾಯಣನಿಗೆ ನಮಸ್ಕಾರ.) ಎಂಬೀ ಮಂತ್ರವೊಂದೇ ಎಲ್ಲ ಪ್ರಯೋಜನಗಳಿಗೂ ಸಾಧಕವಾಗಿರುತ್ತದೆ.

೯೨. ಎಲೈ ಬ್ರಾಹ್ಮಣಶ್ರೇಷ್ಠನೇ! ಕೇಳು; ಭಕ್ತನಾದವನು ನಾರುಬಟ್ಟೆಯನ್ನುಟ್ಟುಕೊಂಡಿರಲಿ; ಜಟೆಯನ್ನು ಧರಿಸಿರಲಿ; ತ್ರಿದಂಡಸಂನ್ಯಾಸಿಯಾಗಿರಲಿ; ಏಕದಂಡಸಂನ್ಯಾಸಿಯಾಗಿರಲಿ; ಅಲಂಕೃತನಾಗಿರಲಿ; ಹೇಗಾದರೂ ಇರಲಿ. ಅವನ ಹೊರಗಿನ ಚಿಹ್ನೆಗಳು ಧರ್ಮಕಾರಣವಲ್ಲವು. (ಭಕ್ತಿಯೇ ಧರ್ಮಕಾರಣವು.)

ಯೇ ನೃಶಂಸಾ ದುರಾತ್ಮಾನಃ ಪಾಪಾಚಾರರತಾಃ ಸದಾ ।
ತೇಽಪಿ ಯಾಂತಿ ಪರಂ ಸ್ಥಾನಂ ನರಾ ನಾರಾಯಣಾಶ್ರಯಾಃ ॥ ೯೩ ॥

ಜನ್ಮಾಂತರಸಹಸ್ರೇಷು ಯಸ್ಯ ಸ್ಯಾದ್ಬುದ್ಧಿರೀದೃಶೀ ।
ದಾಸೋಽಹಂ ವಾಸುದೇವಸ್ಯ ದೇವದೇವಸ್ಯ ಶಾರ್ಙ್ಗಿಣಃ ॥ ೯೪ ॥

ಪ್ರಯಾತಿ ವಿಷ್ಣುಸಾಲೋಕ್ಯಂ ಪುರುಷೋ ನಾತ್ರ ಸಂಶಯಃ ।
ಕಿಂ ಪುನಸ್ತದ್ಗತಪ್ರಾಣಃ ಪುರುಷಃ ಸಂಯತೇಂದ್ರಿಯಃ ॥ ೯೫ ॥

॥ ಸೂತ ಉವಾಚ ॥

ಇತ್ಯುಕ್ತ್ವಾ ದೇವದೇವರ್ಷಿಸ್ತತ್ರೈವಾಂತರಧೀಯತ ।
ಪರೋಪಕಾರನಿರತಸ್ತ್ರೈಲೋಕ್ಯಸ್ಯೈಕಭೂಷಣಃ ॥ ೯೬ ॥

---

೯೩. ಯಾರು ಯಾವಾಗಲೂ, ಘಾತುಕರೋ, ದುಃಸ್ವಭಾವದವರೋ, ದುಷ್ಕೃತ್ಯದಲ್ಲಿ ತೊಡಗಿದವರೋ, ಶ್ರೀ ನಾರಾಯಣನನ್ನಾಶ್ರಯಿಸಿದ ಆ ಮಾನವರೂ ಉತ್ತಮಲೋಕವನ್ನು ಹೊಂದುವರು.

೯೪-೯೫. 'ಯಾವನಿಗೆ ಸಾವಿರಾರು ಜನ್ಮಗಳಲ್ಲಿ ಈ ತೆರನಾದ ಬುದ್ಧಿಯು (ಭಗವದ್ಭಕ್ತಿಯು) ಉಂಟಾಗಿರುತ್ತದೆಯೋ, ಅವನಿಗೆ ನಾನು ಸೇವಕನು; ' ಎಂದರಿತವನು ದೇವಶ್ರೇಷ್ಠನಾದ, ಶಾರ್ಙ್ಗಧಾರಿಯಾದ, ವಾಸುದೇವನಾದ ಶ್ರೀ ಮಹಾವಿಷ್ಣುವಿನ ಸಾಲೋಕ್ಯವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲವು. ಹೀಗಿರಲು ಜಿತೇಂದ್ರಿಯನಾಗಿ, ಶ್ರೀ ಮನ್ನಾರಾಯಣನಲ್ಲಿಯೇ ಪ್ರಾಣಗಳನ್ನೆಲ್ಲಾ ಸಮರ್ಪಿಸಿದವನು ಸಾಲೋಕ್ಯವನ್ನು ಹೊಂದುವನೆಂದು ಹೇಳುವುದೇನಿದೆ ? (ಹೇಳಬೇಕಾದುದೇ ಇಲ್ಲವು.)'

೯೬. ಎಂದು ನಾರದಮುನಿಯು ಪುಂಡರೀಕನಿಗೆ ಹೇಳಿದನು. ಸೂತರು ಹೇಳುತ್ತಾರೆ.

'ಕೇಳು; ಭರದ್ವಾಜ ! ಯಾವಾಗಲೂ ಹೆರರಿಗೆ ಉಪಕಾರವನ್ನೆಸಗುವುದರಲ್ಲಿಯೇ ತೊಡಗಿದ, ಮೂಲೋಕಕ್ಕೂ ಮುಖ್ಯಾಲಂಕಾರನಾದ, ದೇವರ್ಷಿಯಾದ ನಾರದನು ಇಂತು ನುಡಿದು, ಅಲ್ಲಿಯೇ ಕಣ್ಮರೆಯಾದನು.

ಪುಂಡರೀಕೋऽಪಿ ಧರ್ಮಾತ್ಮಾ ನಾರಾಯಣಪರಾಯಣಃ ।
ನಮೋऽಸ್ತು ಕೇಶವಾಯೇತಿ ಪುನಃ ಪುನರುದೀರಯನ್ ॥ ೯೭ ॥

ಪ್ರಸೀದಸ್ವ ಮಹಾಯೋಗಿನ್ನಿದಮುಚ್ಚಾರ್ಯ ಸರ್ವದಾ ।
ಹೃತ್ಪುಂಡರೀಕೇ ಗೋವಿಂದಂ ಪ್ರತಿಷ್ಠಾಪ್ಯ ಜನಾರ್ದನಮ್ ॥ ೯೮ ॥

ತಪಸ್ಸಿದ್ಧಿಕರೇऽರಣ್ಯೇ ಶಾಲಿಗ್ರಾಮೇ ತಪೋಧನಃ ।
ಉವಾಸ ಚಿರಮೇಕಾಕೀ ಪುರುಷಾರ್ಥ ವಿಚಕ್ಷಣಃ ॥ ೯೯ ॥

ಸ್ವಪ್ನೇऽಪಿ ಕೇಶವಾದನ್ಯನ್ನ ಪಶ್ಯತಿ ಮಹಾತಪಾಃ ।
ನಿದ್ರಾಪಿ ತಸ್ಯ ನೈವಾಸೀತ್ಪುರುಷಾರ್ಥವಿರೋಧಿನೀ ॥ ೧೦೦ ॥

೯೭-೯೮. ಧರ್ಮಾತ್ಮನಾದ ಪುಂಡರೀಕನೂ, ಶ್ರೀಮನ್ನಾರಾಯಣನಲ್ಲಿಯೇ ಆಸಕ್ತನಾದವನಾಗಿ, ಪದೇ ಪದೇ 'ನಮೋऽಸ್ತು ಕೇಶವಾಯ;' (ಶ್ರೀ ಬ್ರಹರುಗ್ರ ಪ್ರವರ್ತಕನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರವು;)' ಎಂದು ಘಟ್ಟಿಯಾಗಿ ಹೇಳುತ್ತಾ, ಯಾವಾಗಲೂ 'ಮಹಾಯೋಗಿಯೇ ಪ್ರಸನ್ನನಾಗು.' ಎಂದು ಉಚ್ಚರಿಸಿ, ಹೃದಯಕಮಲದಲ್ಲಿ ವೇದಪ್ರತಿಪಾದ್ಯನಾದ ಗೋವಿಂದನನ್ನು ನೆಲೆಯಾಗಿ ನಿಲ್ಲಿಸಿದನು.

೯೯. ಧರ್ಮಾರ್ಥಕಾಮಮೋಕ್ಷಗಳ ಸಾಧನಗಳಲ್ಲಿ ಕುಶಲನಾದ, ತಪೋಧನನಾದ ಪುಂಡರೀಕನು ತಪಸ್ಸಿದ್ಧಿಯನ್ನುಂಟುಮಾಡತಕ್ಕ ಆ ಶಾಲಿಗ್ರಾಮ ಕ್ಷೇತ್ರದ ಕಾಡಿನಲ್ಲಿ ಇಂತು ಬಹುಕಾಲ ಒಂಟಿಗನಾಗಿ ವಾಸಮಾಡಿದನು.

೧೦೦. ಮಹಾತಪಸ್ವಿಗಳು ಕನಸಿನಲ್ಲಿಯೂ ಕೇಶವನಿಂದ ಬೇರೆ ಯಾವುದನ್ನೂ ಕಾಣುವುದಿಲ್ಲವಷ್ಟೆ! ಆ ಪುಂಡರೀಕನಿಗೆ ಪುರುಷಾರ್ಥಗಳಿಗೆ ಅಡ್ಡಿಯಾದ ನಿದ್ರೆಯೂ ಉಂಟಾಗಲಿಲ್ಲ.

ತಪಸಾ ಬ್ರಹ್ಮಚರ್ಯೇಣ ಶೌಚೇನ ಚ ವಿಶೇಷತಃ ।
ಜನ್ಮಜನ್ಮಾಂತರಾರೂಢಸಂಸ್ಕಾರೇಣ ಚ ದ್ವಿಜಃ ॥ ೧೦೧ ॥

ಪ್ರಸಾದಾದ್ದೇವದೇವಸ್ಯ ಸರ್ವಲೋಕೈಕಸಾಕ್ಷಿಣಃ ।
ಅವಾಪ ಪರಮಾಂ ಸಿದ್ಧಿಂ ವೈಷ್ಣವೀಂ ವೀತಕಲ್ಮಷಃ ॥ ೧೦೨ ॥

ಸಿಂಹವ್ಯಾಘ್ರಾಸ್ತಥಾನ್ಯೇಽಪಿ ಮೃಗಾಃ ಪ್ರಾಣಿವಿಹಿಂಸಕಾಃ ।
ವಿರೋಧಂ ಸಹಜಂ ಹಿತ್ವಾ ಸಮೇತಾಸ್ತಸ್ಯ ಸನ್ನಿಧೌ ॥ ೧೦೩ ॥

ನಿವಸಂತಿ ದ್ವಿಜಶ್ರೇಷ್ಠ ಪ್ರಶಾಂತೇಂದ್ರಿಯವೃತ್ತಯಃ ।
ತತಃ ಕದಾಚಿದ್ಭಗವಾನ್ ಪುಂಡರೀಕಸ್ಯ ಧೀಮತಃ ॥ ೧೦೪ ॥

೧೦೧-೧೦೨. ಆ ಬ್ರಾಹ್ಮಣನು ತಪಸ್ಸಿನಿಂದಲೂ, ಬ್ರಹ್ಮಚರ್ಯದಿಂದಲೂ, ವಿಶೇಷವಾಗಿ ಶೌಚದಿಂದಲೂ, ಅನೇಕ ಜನ್ಮಗಳಲ್ಲುಂಟಾದ ಸಂಸ್ಕಾರಗಳಿಂದಲೂ, ಎಲ್ಲ ಲೋಕಗಳಿಗೂ ಮುಖ್ಯಸಾಕ್ಷಿಯಾದ, ದೇವೋತ್ತಮನಾದ ಶ್ರೀಮನ್ನಾರಾಯಣನ ಅನುಗ್ರಹದಿಂದ ಸಕಲಪಾಪಗಳನ್ನೂ, ಬಂಧಕಕರ್ಮಗಳನ್ನೂ ಕಳೆದು ಕೊಂಡವನಾಗಿ, ಶ್ರೇಷ್ಠವಾದ ವೈಷ್ಣವೀಸಿದ್ಧಿಯನ್ನು ಪಡೆದನು.

೧೦೩-೧೦೪. ಎಲೈ ಬ್ರಾಹ್ಮಣಶ್ರೇಷ್ಠನೇ! ಕೇಳು; ಪ್ರಾಣಿಗಳಿಗೆ ಹಿಂಸೆಯನ್ನುಂಟುಮಾಡುವ ಸಿಂಹಗಳೂ, ಹುಲಿಗಳೂ, ಹಾಗೂ ಇತರ ಮೃಗಗಳೂ ಅವನ ಸಮಕ್ಷದಲ್ಲಿ ಸ್ವಭಾವ ಸಿದ್ಧವಾದ ವಿರೋಧಗಳನ್ನು ಬಿಟ್ಟು, ಒಟ್ಟಾಗಿ ಸೇರಿ, ಪ್ರಶಾಂತವಾದ ಇಂದ್ರಿಯ ವ್ಯಾಪಾರಗಳುಳ್ಳವಾಗಿ ವಾಸಮಾಡುತ್ತವೆ. ಬಳಿಕ ಒಮ್ಮೆ ಜ್ಞಾನಿಯಾದ ಪುಂಡರೀಕನ ಎದುರಿನಲ್ಲಿ ಅವ್ಯಾಹತ ಷಡ್ಗುಣೈಶ್ವರ್ಯಪೂರ್ಣನೂ, ತಾವರೆಗಣ್ಣನೂ, ಶಂಖಚಕ್ರಗದಾಪದ್ಮಪಾಣಿಯೂ, ಪೀತಾಂಬರ

ಪ್ರಾದುರಾಸೀಜ್ಜಗನ್ನಾಥಃ ಪುಂಡರೀಕಾಯತೇಕ್ಷಣಃ ।
ಶಂಖಚಕ್ರಗದಾಪಾಣಿಃ ಪೀತವಾಸಾಃ ಸ್ರಗುಜ್ವಲಃ ॥ ೧೦೫ ॥

ಶ್ರೀವತ್ಸವಕ್ಷಾಃ ಶ್ರೀವಾಸಃ ಕೌಸ್ತುಭೇನ ವಿಭೂಷಿತಃ ।
ಆರುಹ್ಯ ಗರುಡಂ ಶ್ರೀಮಾನಂಜನಾಚಲಸನ್ನಿಭಃ ॥ ೧೦೬ ॥

ಮೇರುಶೃಂಗನಿವಾರೂಢಃ ಕಾಲಮೇಘಸ್ತಟಿದ್ದ್ಯುತಿಃ ।
ರಾಜತೇನಾತಪತ್ರೇಣ ಮುಕ್ತಾದಾಮವಿಲಂಬಿನಾ ॥ ೧೦೭ ॥

ವಿರಾಜಮಾನೋ ದೇವೇಶಶ್ಚಾಮರವ್ಯಜನಾದಿಭಿಃ ।
ತಂ ದೃಷ್ಟ್ವಾ ದೇವದೇವೇಶಂ ಪುಂಡರೀಕಃ ಕೃತಾಂಜಲಿಃ ॥ ೧೦೮ ॥

ಪಪಾತ ಶಿರಸಾ ಭೂಮೌ ಸಾಧ್ವಸಾವನತೋ ದ್ವಿಜಃ ।
ಪಿಬನ್ನಿವ ಹೃಷೀಕೇಶೋ ನಯನಾಭ್ಯಾಂ ಸಮಾಕುಲಃ ॥ ೧೦೯ ॥

ಧಾರಿಯೂ, ವನಮಾಲಾಲಂಕೃತನೂ, ಶ್ರೀವತ್ಸವೆಂಬ ಮಚ್ಚೆಯ ಎದೆಯುಳ್ಳವನೂ, ಲಕ್ಷ್ಮೀನಿವಾಸನೂ, ಕೌಸ್ತುಭಾಲಂಕೃತನೂ, ಸಕಲ ಲೋಕ ಸ್ವಾಮಿಯೂ, ಬ್ರಹ್ಮಾದಿದೇವತೆಗಳಿಗೆ ನಿಯಾಮಕನೂ ಆದ ಶ್ರೀ ಹರಿಯು ಗರುಡನೆಂಬ ಪಕ್ಷೀಂದ್ರನೇರಿ, ಕಾಂತಿಯುಕ್ತವಾದ ಅಂಜನಾಚಲಕ್ಕೆ ಸದೃಶನಾಗಿ, ಮೇರು ಪರ್ವತದ ಕೊನಡನ್ನ ಡರಿದ, ವರ್ಷಾಕಾಲದ ಮೇಘದ ಮಿಂಚಿನ ಕಾಂತಿಯುಳ್ಳವನಾಗಿ, ಜೋತಾಡುವ ಮುತ್ತಿನ ಸರಗಳುಳ್ಳ ಬೆಳ್ಗೊಡೆಗಳಿಂದಲೂ ಬೆಳಗುತ್ತಾ, ಪ್ರಾದುರ್ಭವಿಸಿದನು. ಆ ಪುಂಡರೀಕನೆಂಬ ಬ್ರಾಹ್ಮಣನು ಬ್ರಹ್ಮಾದಿದೇವೋತ್ತಮರಿಗೂ ನಿಯಾಮಕನಾದ ಆ ಶ್ರೀಮನ್ನಾರಾಯಣನನ್ನು ನೋಡಿ, ಬೊಗಸೆಯುಳ್ಳವನಾಗಿ, ಭಯದಿಂದ ಬಾಗಿದ ತಲೆಯುಳ್ಳವನಾಗಿ, ತಿರೆಯಲ್ಲಿ ದಿಂಡುಗೆಡೆದನು ಸರ್ವೇಂದ್ರಿಯಗಳಿಗೆ ನಿಯಾಮಕನಾದ ಶ್ರೀ ಹರಿಯು ತನ್ನೆರಡು ಕಣ್ಣುಗಳಿಂದ ಕೂಡಿ ಅವನನ್ನು ಕುಡಿಯುವನಂತಿದ್ದನು. (ಭಕ್ತನನ್ನು ಅಷ್ಟು ಅನುಗ್ರಹ ಬುದ್ಧಿಯಿಂದ ನೋಡಿದನು.)

ಜಗಾಮ ಮಹತೀಂ ತೃಪ್ತಿಂ ಪುಂಡರೀಕಸ್ತದಾನಘ ।
ತಮೇವಾಲೋಕಯನ್ ವೀರಶ್ಚಿರಪ್ರಾರ್ಥಿತದರ್ಶನಃ ॥ ೧೧೮ ॥

ತತಸ್ತಮಾಹ ಭಗವಾನ್ ಪದ್ಮನಾಭಸ್ತ್ರಿವಿಕ್ರಮಃ ।
ಪ್ರೀತೋಽಸ್ಮಿ ವತ್ಸ ಭದ್ರಂ ತೇ ಪುಂಡರೀಕ ಮಹಾಮತೇ ॥ ೧೨೧ ॥

ವರಂ ವೃಣೀಷ್ವ ದಾಸ್ಯಾಮಿ ಯತ್ತೇ ಮನಸಿ ವರ್ತತೇ ॥ ೧೧೨ ॥

॥ ಸೂತ ಉವಾಚ ॥

ಏತಚ್ಛ್ರುತ್ವಾ ತು ವಚನಂ ದೇವದೇವೇನ ಭಾಷಿತಮ್ ॥ ೧೧೩ ॥

---

೧೨೦. ಎಲೈ ಅನಘನಾದ ಭರದ್ವಾಜನೇ! ಕೇಳು; ಉತ್ಸಾಹಶಾಲಿಯಾದ, ಬಹುಕಾಲದಿಂದ ಶ್ರೀ ಹರಿಯ ದರ್ಶನವನ್ನೇ ಹಂಬಲಿಸುತ್ತಿದ್ದ ಪುಂಡರೀಕನು ಆಗ ಗರುಡಾರೂಢನಾಗಿ ದರ್ಶನ ಕೊಟ್ಟ ಶ್ರೀ ಮನ್ನಾರಾಯಣನನ್ನೇ ನೋಡುತ್ತಾ, ಕಡುಸಂತಸಗೊಂಡನು.

೧೧೧-೧೧೨. ಅನಂತರದಲ್ಲಿ ಪದ್ಮನಾಭನೂ, ತ್ರಿವಿಕ್ರಮನೂ, ಅವ್ಯಾಹತ ಷಡ್ಗುಣೈಶ್ವರ್ಯಪೂರ್ಣನೂ ಆದ ಶ್ರೀ ಹರಿಯು ಅವನಿಗೆ ಇಂತು ಹೇಳಿದನು:—

"ಎಲೈ ಮಹಾಜ್ಞಾನಿಯಾದ ಪುಂಡರೀಕನೇ! ಅಯ್ಯಾ! ನಾನು ಪ್ರಸನ್ನನಾಗಿರುತ್ತೇನೆ; ನಿನಗೆ ಮಂಗಳವಾಗಲಿ; ನಿನ್ನ ಮನದಲ್ಲಿ ಯಾವುದಿದೆಯೋ, ಅದನ್ನು ಕೇಳು; ಕೊಡುವೆನು." ಎಂದು ಭಗವಂತನು ಹೇಳಿದನು.

ಸೂತರು ಹೇಳುತ್ತಾರೆ:—

೧೧೩-೧೧೮ "ಮಹಾಜ್ಞಾನಿಯಾದ ಪುಂಡರೀಕನು ದೇವೋತ್ತಮನಾದ ಶ್ರೀ ಹರಿಯು ನುಡಿದ ಈ ಮಾತನ್ನು ಕೇಳಿ ಇಂತು ಬಿನ್ನವಿಸಿದನು."

ಇದಂ ವಿಜ್ಞಾಪಯಾಮಾಸ ಪುಂಡರೀಕೋ ಮಹಾಮತಿಃ ।

॥ ಪುಂಡರೀಕ ಉವಾಚ ॥

ಕ್ವಾಹಮತ್ಯಂತದುರ್ಬುದ್ಧಿಃ ಕ್ವ ಚಾತ್ಮಹಿತವೀಕ್ಷಣಮ್ ॥ ೧೧೪ ॥

ಯದ್ಧಿತಂ ಮಮ ದೇವೇಶ ತದಾಜ್ಞಾಪಯ ಮಾಧವ ।
ಏವಮುಕ್ತೋಽಥ ಭಗವಾನ್ ಸುಪ್ರೀತಃ ಪುನರಬ್ರವೀತ್ ॥ ೧೧೫ ॥

ಪುಂಡರೀಕಂ ಮಹಾಭಾಗಂ ಕೃತಾಂಜಲಿಮುಪಸ್ಥಿತಮ್ ।

॥ ಶ್ರೀ ಭಗವಾನುವಾಚ ॥

ಆಗಚ್ಛ ಕುಶಲಂ ತೇಽಸ್ತು ಮಯ್ಯೈವ ಸಹ ಸುವ್ರತಃ ॥ ೧೧೬ ॥

ಮದ್ರೂಪಧಾರೀ ನಿತ್ಯಾತ್ಮಾ ಮನ್ಯೈವ ಪಾರ್ಷದೋ ಭವ ।

ಪುಂಡರೀಕನು ಇಂತು ಹೇಳುತ್ತಾನೆ.

"ಎಲೈ ಮಾಧವನೇ ! ಅತ್ಯಂತ ದುರ್ಬುದ್ಧಿಯುಳ್ಳನಾನೆಲ್ಲಿ ? ನನ್ನ ಸುಖವನ್ನು ಅರಿಯುವುದೆಲ್ಲಿ ? (ಇವೆರಡೂ ಅತ್ಯಂತ ಅಂತರವುಳ್ಳವು) ಆದುದರಿಂದ ಎಲೈ ಸರ್ವ ದೇವನಿಯಾಮಕನೇ ! ನನಗೆ ಹಿತವಾದುದಾವುದೋ, ಅದನ್ನುಸರ್ವಜ್ಞನಾದ ನೀನೇ ಅಪ್ಪಣೆಮಾಡು. (ಅನುಗ್ರಹಿಸು)'

ಇಂತು ಪುಂಡರೀಕನು ಹೇಳಲು, ಭಗವಂತನು ಸುಪ್ರಸನ್ನನಾಗಿ ಪುಣ್ಯವಂತನೂ, ಬೊಗಸೆಯನ್ನು ಹಿಡಿದುನಿಂತವನೂ ಆದ ಪುಂಡರೀಕನಿಗೆ ಮತ್ತೂ ಹೇಳಿದನು.

ಶ್ರೀ ಭಗವಂತನು ಹೇಳುತ್ತಾನೆ. –

"ಎಲೈ ಪುಂಡರೀಕನೇ ! ನಿನಗೆ ಮಂಗಳವಾಗಲಿ; ಒಳ್ಳೆಯ ನೇಮವುಳ್ಳ ನೀನು ನನ್ನೊಡನೆಯೇ ಬಾ; ನಿತ್ಯಸ್ವರೂಪನಾದ ನೀನು ನನ್ನ ರೂಪವನ್ನು ಧರಿಸಿ, ನನ್ನ ಸಭೆಯಲ್ಲಿ ಸಭ್ಯನಾಗಿರು;" ಎಂದು ಭಗವಂತನು ಹೇಳಿದನು.

॥ ಸೂತ ಉವಾಚ ॥

ಏವ ಮುಕ್ತವತಿ ಪ್ರೀತ್ಯಾ ಶ್ರೀಧರೇ ಭಕ್ತವತ್ಸಲೇ ॥ ೧೧೭ ॥

ದೇವ ದುಂದುಭಯೋ ನೇದುಃ ಪುಷ್ಪವೃಷ್ಟಿಃ ಪಪಾತ ಚ ।
ದೇವಾಸ್ಸೇಂದ್ರಾಸ್ತಥಾ ಸಿದ್ಧಾಃ ಸಾಧುಸಾಧ್ವಿತ್ಯಥಾಬ್ರುವನ್ ॥ ೧೧೮ ॥

ಜಗುಶ್ಚ ಸಿದ್ಧಗಂಧರ್ವಾಃ ಕಿನ್ನರಾಶ್ಚ ವಿಶೇಷತಃ ।
ಅಥೈನಂ ಸಮುಪಾದಾಯ ವಾಸುದೇವೋ ಜಗತ್ಪತಿಃ ॥ ೧೧೯ ॥

ಜಗಾಮ ಗರುಡಾರೂಢಃ ಸರ್ವದೇವನಮಸ್ಕೃತಃ ।
ತಸ್ಮಾತ್ತ್ವಮಪಿ ವಿಪ್ರೇಂದ್ರ ವಿಷ್ಣುಭಕ್ತಿಸಮನ್ವಿತಃ ॥ ೧೨೦ ॥

ತಚ್ಚಿತ್ತಸ್ತದ್ಗತಪ್ರಾಣಸ್ತದ್ಭಕ್ತಾನಾಂ ಹಿತೇ ರತಃ ।
ಅರ್ಚಯಿತ್ವಾ ಯಥಾಯೋಗಂ ಭಜಸ್ವ ಪುರುಷೋತ್ತಮಮ್ ॥ ೧೨೧ ॥

ಸೂತರು ಹೇಳುತ್ತಾರೆ :-

'ಭಕ್ತರಲ್ಲಿ ಪ್ರೀತಿಯುಳ್ಳ ಶ್ರೀಧರನು ಪ್ರೀತಿಯಿಂದ ಇಂತು ನುಡಿಯುತ್ತಿರಲು, ದೇವ ದುಂದುಭಿಗಳು ಮೊಳಗಿದುವು; ಮುಗಿಲಿಂದ ಹೂ ಮಳೆಯು ಬಿದ್ದಿತು. ಬಳಿಕ ಇಂದ್ರನೊಡಗೂಡಿದ ದೇವತೆಗಳು ಹಾಗೆಯೇ ಸಿದ್ಧರು 'ಒಳ್ಳೆತೊಳ್ಳೆತು,' ಎಂದರು.

೧೧೯–೧೨೧. ಸಿದ್ಧಗಂಧರ್ವರೂ, ಕಿನ್ನರರೂ ವಿಶೇಷವಾಗಿ ಕೊಂಡಾಡಿದರು. ತರುವಾಯದಲ್ಲಿ ಜಗತ್ಪತಿಯಾದ ವಾಸುದೇವನು ಈ ಪುಂಡರೀಕನನ್ನು ಕರೆದುಕೊಂಡು, ಗರುಡನ ಮೇಲೆ ಕುಳಿತು, ಎಲ್ಲ ದೇವತೆಗಳಿಂದಲೂ ಪೊಡಮಟ್ಟವನಾಗಿ, ತನ್ನ ಲೋಕಕ್ಕೆ ಹೋದನು. ಎಲೈ ಬ್ರಾಹ್ಮಣಶ್ರೇಷ್ಠನೇ ! ಕೇಳು; ಆದುದರಿಂದ ನೀನೂ ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಯಿಂದೊಡಗೂಡಿದವನಾಗಿ, ನಿನ್ನ ಮನವನ್ನೂ, ಪ್ರಾಣಗಳನ್ನೂ ಅವನಲ್ಲಿಯೇ ಅರ್ಪಿಸಿದವನಾಗಿ, ಆ ವಿಷ್ಣುವಿನ ಭಕ್ತರಿಗೆ ಹಿತವನ್ನೆಸಗುವುದರಲ್ಲಿ ತೊಡಗಿದವನಾಗಿ, ನಿನಗೆ ಶಕ್ಯವಿದ್ದಷ್ಟು ಕ್ಷರಾಕ್ಷರ ಪುರುಷರಿಂದ ವಿಲಕ್ಷಣನಾದುದರಿಂದ ಪುರುಷೋತ್ತಮನಾದ ಶ್ರೀಮನ್ನಾರಾಯಣನನ್ನು ಸೇವಿಸು.

ಶೃಣುಷ್ವ ತತ್ಕಥಾಃ ಪುಣ್ಯಾಃ ಸರ್ವಪಾಪಪ್ರಣಾಶಿನೀಃ ।
ಯೇನೋಪಾಯೇನ ರಾಜೇಂದ್ರೋ ವಿಷ್ಣುಃ ಸರ್ವೇಶ್ವರೇಶ್ವರಃ ॥ ೧೨೨ ॥

ಪ್ರೀತೋ ಭವತಿ ವಿಶ್ವಾತ್ಮಾ ತತ್ಕುರುಷ್ವ ಸುವಿಸ್ತರಮ್ ।
ಅಶ್ವಮೇಧಸಹಸ್ರೇಣ ವಾಜಪೇಯಶತೈರಪಿ ।
ನಾಪ್ನುವಂತಿ ಗತಿಂ ಪುಣ್ಯಾಂ ನಾರಾಯಣಪರಾಙ್ಮುಖಾಃ ॥ ೧೨೩ ॥

ಅಜರಮಮರಮೇಕಂ ಧ್ಯೇಯಮಾದ್ಯಂತಶೂನ್ಯಂ
ಸಗುಣವಿಗುಣಮಾದ್ಯಂ ಸ್ಥೂಲಮತ್ಯಂತಸೂಕ್ಷ್ಮಮ್ ।

೧೨೨–೧೨೩. ಸಕಲ ಪಾಪಗಳನ್ನೂ ಅಳಿಯಿಸುವ ಆ ಮಹಾವಿಷ್ಣುವಿನ ಪುಣ್ಯಪ್ರದಗಳಾದ ಚರಿತ್ರೆಗಳನ್ನು ಕೇಳು; ಸಕಲ ರಾಜರಿಗೂ ಒಡೆಯನಾದ, ಎಲ್ಲಾ ಬ್ರಹ್ಮಾದಿ ದೇವೋತ್ತಮರಿಗೂ ನಿಯಾಮಕನಾದ, ವಿಶ್ವಾತ್ಮಕನಾದ ಶ್ರೀ ಮಹಾವಿಷ್ಣುವು ಯಾವ ಕರ್ಮ, ಜ್ಞಾನ, ಭಕ್ತಿರೂಪಗಳಾದ ಉಪಾಯಗಳಿಂದ ಸಂತುಷ್ಟನಾಗುತ್ತಾನೆಯೋ, ಅವನ್ನು ಅತ್ಯಂತ ವಿಸ್ತಾರವಾಗಿ ಆಚರಿಸು; ನಾರಾಯಣನಲ್ಲಿ ಹಿಮ್ಮೊಗರಾದವರು ಸಾವಿರಾರು ಅಶ್ವಮೇಧಗಳನ್ನು ಆಚರಿಸುವುದರಿಂದಲೂ, ನೂರಾರು ವಾಜಪೇಯಾನುಷ್ಠಾನಗಳಿಂದಲೂ ಉತ್ತಮಗಳಾದ ಪುಣ್ಯಲೋಕಗಳನ್ನು ಹೊಂದಲಾರರು.

೧೨೪. 'ಎಲೈ ಮಹಾವಿಷ್ಣುವೇ! ಜರಾಮರಣವರ್ಜಿತನೂ, ತನಗೆ ಸಮನಾದ ಎರಡನೆಯವನಿಲ್ಲದವನೂ, ಸರ್ವ ಮುಮುಕ್ಷುಗಳಿಂದಲೂ ಚಿಂತ್ಯನೂ, ಉತ್ಪತ್ತಿನಾಶರಹಿತನೂ, ಅಪ್ರಾಕೃತಾನಂತ ಕಲ್ಯಾಣಗುಣ ಪರಿಪೂರ್ಣನೂ, ಚಿಂತಾಸಂತಾಪಾದಿ ದೋಷ ರಹಿತನೂ, ಜಗತ್ಕಾರಣನೂ, ಸ್ಥೂಲವಾದ ವಿರಾಡ್ರೂಪನೂ, ಸೂಕ್ಷ್ಮರಾದ ಜೀವರ ಸ್ವರೂಪದಲ್ಲಿಯೂ ಅತ್ಯಂತ ಸೂಕ್ಷ್ಮರೂಪನಾಗಿ

ನಿರುಪಮಮುಪಮೇಯಂ ಯೋಗಿನಾಂ ಜ್ಞಾನಗಮ್ಯಂ
ತ್ರಿಭುವನಗುರುಮೀಶಂ ತ್ವಾಂ ಪ್ರಪನ್ನೋಽಸ್ಮಿ ವಿಷ್ಣೋ॥೧೨೪॥

ಇತಿ ಶ್ರೀ ನರಸಿಂಹಪುರಾಣೇ ಪುಂಡರೀಕ ನಾರದ ಸಂವಾದೇ
ಚತುಃ ಷಷ್ಟಿತಮೋಽಧ್ಯಾಯಃ

ರುವವನೂ, ಹೋಲಿಕೆಯಿಲ್ಲದವನೂ, ಹೋಲಿಸಲು ತನಗೆ ತಾನೇ ಯೋಗ್ಯನೂ, ಯೋಗಿಗಳಿಂದ ತಿಳಿಯಲ್ಪಡತಕ್ಕವನೂ, ಪ್ರಾಪ್ಯನೂ, ಸ್ವರ್ಗಮರ್ತ್ಯಪಾತಾಳ ಗಳೆಂಬ ಮೂರುಲೋಕ ನಿವಾಸಿಗಳಿಗೂ ಜ್ಞಾನಪ್ರದನಾದ ಗುರುವೂ, ಸರ್ವನಿಯಾ ಮಕನೂ ಆದ ನಿನ್ನನ್ನು ಶರಣು ಹೊಕ್ಕಿರುವನಾಗಿರುತ್ತೇನೆ.' ಎಂದು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಪುಂಡರೀಕನಾರದ ಸಂವಾದದಲ್ಲಿ
ಅರುವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

ಅರುವತ್ತುನಾಲ್ಕನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ, 'ಭರದ್ವಾಜನು ಸೂತರನ್ನು ಪುರುಷಾರ್ಥಸಾಧನಗಳ ವಿಷಯದಲ್ಲಿ ಕೆಲವರು ಯಮಾದಿಗಳೇ ಸಾಧನಗಳೆಂತಲೂ, ಕೆಲವರು ಯೋಗವನ್ನು ಸಾಧನವೆಂತಲೂ, ಕೆಲವರು ಜ್ಞಾನವೇ ಸಾಧನವೆಂತಲೂ, ಇವೇ ಮೊದಲಾಗಿ ಹೇಳುವುದರಿಂದ ನನಗೆ ಸಂಶಯವುಂಟಾಗಿದೆ. ಆ ಸಾಧನವಾವುದೋ, ಅದನ್ನು ತಿಳಿಸಬೇಕೆಂದು ಕೇಳಲು, ಸೂತಾಚಾರ್ಯರು ಭರದ್ವಾಜಾದಿಮುನಿಗಳಿಗೆ ಪುರಾತನವಾದ ನಾರದಪುಂಡರೀಕ ಸಂವಾದವನ್ನು ನಿರೂಪಿಸುತ್ತಾರೆ.

'ಪೂರ್ವದಲ್ಲಿ ವೇದಾದಿಶಾಸ್ತ್ರಪಾರಂಗತನಾದ ಜಿತೇಂದ್ರಿಯನಾದ ಪುಂಡರೀಕನೆಂಬ ಬ್ರಾಹ್ಮಣನು ಗುರುಸೇವಾದಿಗಳನ್ನು ಮಾಡಿ, ಗುರ್ವನುಗ್ರಹಕ್ಕೆ ಪಾತ್ರನಾದವನು ವಿರಕ್ತನಾಗಿ, ಮಾತಾಪಿತೃಗಳೇ ಮುಂತಾದವರನ್ನು ತೊರೆದು, ತೀರ್ಥಾಟನಮಾಡುತ್ತಾ, ಶಾಲಗ್ರಾಮಕ್ಷೇತ್ರಕ್ಕೆ ಬಂದು, ಆ ಅರಣ್ಯದಲ್ಲಿ ತಪೋನಿಷ್ಠನಾಗಿರಲು, ನಾರದರು ಅಲ್ಲಿಗೆ ಬಂದು, ಆ ಬ್ರಾಹ್ಮಣನಿಗೆ ಕಾಣಿಸಿಕೊಂಡರು. ಆಗ ಆ ಬ್ರಾಹ್ಮಣನು ಅವರ ತೇಜಸ್ಸಿಗೆ ಆಶ್ಚರ್ಯಪಟ್ಟು ಎರಗಿ, ಅವರನ್ನು ಯಾರೆಂದು ಕೇಳಿ ತಿಳಿದು, ದೇವದಾಸನಾದ ಮುನಿಯನ್ನು ತನಗೆ ಮುಂದೆ ಶ್ರೇಯಸ್ಸುಂಟಾಗಲು ಆಚರಿಸಬೇಕಾದುದೇನು? ದಯವಿಟ್ಟು ತಿಳಿಸಬೇಕೆಂದು ಕೇಳಿದನು. ಆಗ ನಾರದರು ಅವನಿಗೆ ಶಾಸ್ತ್ರಗಳು ಅನೇಕವಾಗಿ, ಬೇರೆ ಬೇರೆ ವಿಷಯಗಳನ್ನು ಪುರುಷಾರ್ಥಸಾಧನವನ್ನಾಗಿ ತಿಳಿಸುತ್ತವೆ. ಆದರೆ, ಎಲ್ಲ ಶಾಸ್ತ್ರಗಳನ್ನು ಶೋಧಿಸಿ ವಿಚಾರಮಾಡಲು, 'ಶ್ರೀಮನ್ನಾರಾಯಣನನ್ನು ಸೇವಿಸುವುದೊಂದೇ ಸಾಧನವು;' ಎಂದು ತಿಳಿದು ಬರುವುದು. 'ಓಂ ನಮೋ ನಾರಾಯಣಾಯ' ಎಂಬೀ ಅಷ್ಟಾಕ್ಷರಮಂತ್ರವೊಂದೇ ಸಾಕು; ಇನ್ನಾವ ಮಂತ್ರತಂತ್ರಗಳೂ ಬೇಕಾದುದಿಲ್ಲವೆಂದು ತಿಳಿಸಿ, ಅವನೂ ಹಾಗೆಯೇ ಭಗವಂತನನ್ನು ಸೇವಿಸಬೇಕೆಂದು ಹೇಳಿ, ಅಂತರ್ಹಿತರಾದರು.

ಆ ಬ್ರಾಹ್ಮಣನು ಆ ನಾರದಮುನಿಯ ಉಪದೇಶದಂತೆ ಶ್ರೀಮನ್ನಾರಾಯಣನನ್ನು ಸೇವಿಸುತ್ತಿರಲು, ಒಮ್ಮೆ ಅಪ್ರಾಕೃತಾನವದ್ಯಾನಂತ ಕಲ್ಯಾಣಗುಣಪೂರ್ಣನಾದ ಶ್ರೀಮನ್ನಾರಾಯಣನು ಗರುಡಾರೂಢನಾಗಿ ಬಂದು, ಅವನಿಗೆ ಕಾಣಿಸಿಕೊಂಡು, ತಾನು ಅವನ ತಪಸ್ಸಿಗೆ ಪ್ರಸನ್ನನಾಗಿ ಬಂದಿರುವುದಾಗಿ ಹೇಳಿ, ವರವನ್ನು ಬೇಡೆನಲು, ಆ ಬ್ರಾಹ್ಮಣನು ತನಗೆ ಬೇಡಲು ಏನೂ ತಿಳಿಯದು ; ಆ ಪರಮಾತ್ಮನಿಗೆ ಒಪ್ಪಿಕೆಯಾದುದನ್ನು ಅನುಗ್ರಹಿಸುವುದೆನಲು, ಭಗವಂತನು ಅವನನ್ನು ಕರೆದುಕೊಂಡು ಹೋಗಿ, ತನ್ನ ಆಕಾರವನ್ನು ಅವನಿಗೆ ದಯೆಗೆಯ್ದು ತನ್ನ ಪಾರ್ಷದನನ್ನಾಗಿ ಮಾಡಿಕೊಂಡನು. ಆದುದರಿಂದ ಭರದ್ವಾಜಾದಿಗಳಿಗೂ ಆ ಭಗವಂತನಾದ ಶ್ರೀಮನ್ನಾರಾಯಣನನ್ನೇ ಸೇವಿಸುವುದು ; ಅದೊಂದೇ ಪುರುಷಾರ್ಥಸಾಧನವು ;' ಎಂದು ಸೂತರು ನಿರೂಪಿಸಿರುತ್ತಾರೆ.

ಇಂತು ಅರುವತ್ತುನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಮಂತ್ರತೀರ್ಥ ಮಹಿಮಾದಿ ವರ್ಣನಮ್.

ಪಂಚಷಷ್ಟಿತಮೋಽಧ್ಯಾಯಃ

ವೈಷ್ಣವ ಕ್ಷೇತ್ರ ನಿರೂಪಣಮ್.

॥ ಭಾರದ್ವಾಜ ಉವಾಚ ॥

ತ್ವತ್ತೋ ಹಿ ಶ್ರೋತುಮಿಚ್ಛಾಮಿ ಗುಹ್ಯಕ್ಷೇತ್ರಾಣಿ ವೈ ಹರೇಃ ।
ನಾಮಾನಿ ಚ ಸುಗುಹ್ಯಾನಿ ವದ ಪಾಪಹರಾಣಿ ಚ ॥ ೧ ॥

ಅರುವತ್ತೈದನೆಯ ಅಧ್ಯಾಯವು

ವೈಷ್ಣವಕ್ಷೇತ್ರನಿರೂಪಣೆಯು

ಭಾರದ್ವಾಜಮುನಿಯು ಸೂತರಿಗೆ ಇಂತು ಹೇಳುತ್ತಾನೆ.

೧. 'ಎಲೈ ಸೂತಾಚಾರ್ಯರೇ! ನಿಮ್ಮಿಂದ ಶ್ರೀಮನ್ನಾರಾಣನ ಗೂಢ ಕ್ಷೇತ್ರಗಳನ್ನು ಕೇಳಬಯಸುತ್ತೇನೆ; ಪಾಪನಾಶಕವಾದ, ಆ ಅತ್ಯಂತ ಗೂಢವಾದ ಹೆಸರುಗಳನ್ನು ದಯಮಾಡಿ, ನನಗೆ ಹೇಳಿರಿ;' ಎಂದು ಭರದ್ವಾಜಮುನಿಯು ಸೂತರನ್ನು ಕೇಳಿದನು. ಆಗ ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ.

॥ ಸೂತ ಉವಾಚ ॥

ಮಂದರಸ್ಥಂ ಹರಿಂ ದೇವಂ ಬ್ರಹ್ಮಾ ಪೃಚ್ಛತಿ ಕೇಶವಮ್ ।
ಭಗವಂತಂ ದೇವದೇವಂ ಶಂಖಚಕ್ರಗದಾಧರಮ್ ॥ ೨ ॥

॥ ಬ್ರಹ್ಮೋವಾಚ ॥

ಕೇಷು ಕೇಷು ಚ ಕ್ಷೇತ್ರೇಷು ದ್ರಷ್ಟವ್ಯೋಽಸಿ ಮಯಾ ಹರೇ ।
ಭಕ್ತೈರನ್ಯೈಃ ಸುರಶ್ರೇಷ್ಠ ಮುಕ್ತಿಕಾಮೈರ್ವಿಶೇಷತಃ ॥ ೩ ॥

ಯಾನಿ ತೇ ಗುಹ್ಯನಾಮಾನಿ ಕ್ಷೇತ್ರಾಣಾಂ ಚ ಜಗತ್ಪತೇ ।
ತಾನ್ಯಹಂ ಶ್ರೋತುಮಿಚ್ಛಾಮಿ ತ್ವತ್ತಃ ಪದ್ಮಾಯತೇಕ್ಷಣ ॥ ೪ ॥

ಕಿಂ ಜಪನ್ಸುಗತಿಂ ಯಾತಿ ನರೋ ನಿತ್ಯಮತಂದ್ರಿತಃ ।
ತ್ವದ್ಭಕ್ತಾನಾಂ ಹಿತಾರ್ಥಾಯ ತನ್ಮೇ ವದ ಸುರೇಶ್ವರ ॥ ೫ ॥

---

೨. 'ಕೇಳು ಭರದ್ವಾಜ! ಚತುರ್ಮುಖಬ್ರಹ್ಮನು, ಮಂದರಪರ್ವತದಲ್ಲಿದ್ದ, ಬ್ರಹ್ಮರುದ್ರಪ್ರವರ್ತಕನಾದ, ಅವ್ಯಾಹತಷಡ್ಗುಣೈಶ್ವರ್ಯ ಪೂರ್ಣನಾದ, ದೇವೋತ್ತಮನಾದ, ಶಂಖಚಕ್ರಗದಾಧರನಾದ, ಸ್ವಾಮಿಯಾದ ಶ್ರೀ ಹರಿಯನ್ನು ಕುರಿತು ಇಂತು ಕೇಳುತ್ತಾನೆ;' ಬ್ರಹ್ಮನು ಹೇಳುತ್ತಾನೆ:—

೩. 'ಎಲೈ ಹರಿಯೇ! ಸುರಶ್ರೇಷ್ಠನೇ! ನನ್ನಿಂದಲೂ, ಮುಕುತಿಯನ್ನೆಳಸುವ ಇತರ ಬಕುತರಿಂದಲೂ ಯಾವ ಯಾವ ಕ್ಷೇತ್ರಗಳಲ್ಲಿ ವಿಶೇಷವಾಗಿ, ನೋಡಲ್ಪಡತಕ್ಕವನಾಗಿರುತ್ತೀಯೆ?'

೪. ಎಲೈ ಪುಂಡರೀಕದಂತೆ ಅಗಲವಾದ ಕಣ್ಗಳುಳ್ಳ, ಜಗತ್ಪತಿಯೇ! ಗೂಢವಾದ ಹೆಸರುಗಳುಳ್ಳ ನಿನ್ನ ಕ್ಷೇತ್ರಗಳಾವುವು? ಅವನ್ನು ನಾನು ನಿನ್ನಿಂದ ಕೇಳಲು ಅಪೇಕ್ಷಿಸುತ್ತೇನೆ.

೫. ಎಲೈ ಸುರರೊಡೆಯನೇ! ಮಾನವನು ಅಲಸವೇ ನಿತ್ಯದಲ್ಲಿ ಯಾವುದನ್ನು ಜಪಿಸುತ್ತಾ, ಒಳ್ಳೆಯ ಲೋಕವನ್ನು ಹೊಂದುವನು? ಇವನ್ನು ನಿನ್ನ ಬಕುತರ ಸೊಗಕ್ಕಾಗಿ ನನಗೆ ಹೇಳು.

॥ ಶ್ರೀ ಭಗವಾನುವಾಚ ॥

ಶೃಣುಷ್ವಾವಹಿತೋ ಬ್ರಹ್ಮನ್ಗುಹ್ಯನಾಮಾನಿ ಸೋಽಧುನಾ ।
ಕ್ಷೇತ್ರಾಣಿ ಚೈವ ಗುಹ್ಯಾನಿ ತವ ವಕ್ಷ್ಯಾಮಿ ತತ್ತ್ವತಃ ॥ ೧ ॥

ಕೋಕಾಮುಖೇ ತು ವಾರಾಹಂ ಮಂದರೇ ಮಧುಸೂದನಮ್ ।
ಅನಂತಂ ಕಪಿಲದ್ವೀಪೇ ಪ್ರಭಾಸೇ ರವಿನಂದನಮ್ ॥ ೨ ॥

ಮಾಲ್ಯೋದಪಾನೇ ವೈಕುಂಠೇ ಮಹೇಂದ್ರೇ ತು ನೃಪಾತ್ಮಜಮ್ ।
ಋಷಭೇ ತು ಮಹಾವಿಷ್ಣುಂ ದ್ವಾರಕಾಯಾಂ ತು ಭೂಪತಿಮ್ ॥ ೩ ॥

ಪಾಂಡುಸಹ್ಯೇ ತು ದೇವೇಶಂ ವಸುರೂಢೇ ಜಗತ್ಪತಿಮ್ ।
ವಲ್ಲೀವಟೇ ಮಹಾಯೋಗಂ ಚಿತ್ರಕೂಟೇ ನರಾಧಿಪಮ್ ॥ ೪ ॥

ಶ್ರೀ ಭಗವಂತನು ಹೇಳುತ್ತಾನೆ :—

೧. 'ಪಿತಾಮಹನೇ ! ಈಗ ಯಥಾರ್ಥವಾಗಿ ನಿನಗೆ ನನ್ನ ಗುಪ್ತನಾಮುಗಳನ್ನೂ, ಗುಹ್ಯಕ್ಷೇತ್ರಗಳನ್ನೂ ಹೇಳುವೆನು; ಅವಧಾನವುಳ್ಳವನಾಗಿ ಕೇಳು;

೨-೧೫. ನಾನವನು ಕೋಕಾಮುಖಕ್ಷೇತ್ರದಲ್ಲಿ ವಾರಾಹಮೂರ್ತಿಯನ್ನೂ, ಮಂದರ ಪರ್ವತದಲ್ಲಿ ಮಧುಸೂದನನ್ನೂ, ಕಪಿಲದ್ವೀಪಕ್ಷೇತ್ರದಲ್ಲಿ ಅನಂತನನ್ನೂ, ಪ್ರಭಾಸಕ್ಷೇತ್ರದಲ್ಲಿ ರವಿನಂದನನ್ನೂ, ವೈಕುಂಠದಲ್ಲಿ ಮಾಲ್ಯೋದಪಾನರೂಪಗಳನ್ನೂ ಮಹೇಂದ್ರ ಪರ್ವತದಲ್ಲಿ ನೃಪಾತ್ಮಜರೂಪನನ್ನೂ, ಋಷಭಕ್ಷೇತ್ರದಲ್ಲಿ ಮಹಾವಿಷ್ಣುವನ್ನೂ, ದ್ವಾರಕೆಯಲ್ಲಿ ಭೂಪತಿರೂಪನನ್ನೂ, ಪಾಂಡುಸಹ್ಯಕ್ಷೇತ್ರದಲ್ಲಿ ದೇವೇಶರೂಪನನ್ನೂ , ವಸುರೂಢಕ್ಷೇತ್ರದಲ್ಲಿ ಜಗತ್ಪತಿಯೆಂಬ ಹೆಸರಿನವನನ್ನೂ, ವಲ್ಲೀವಟಕ್ಷೇತ್ರದಲ್ಲಿ ಮಹಾಯೋಗಾಭಿಧಾನನನ್ನೂ, ಚಿತ್ರಕೂಟದಲ್ಲಿ ನರಾಧಿಪನೆಂಬ ಹೆಸರಿನವನನ್ನೂ, ಅನಿಮಿಷಕ್ಷೇತ್ರದಲ್ಲಿ ಪೀತವಾಸನಾಮಕನನ್ನೂ, ಗೋವುಗಳ

ಅನಿಮಿಷೇ ಪೀತವಾಸಂ ಗವಾಂ ನಿಃಕ್ರಮಣೇ ಹರಿಮ್ ।
ಶಾಲಿಗ್ರಾಮೇ ತಪೋವಾಸಮಚಿಂತ್ಯಂ ಗಂಧಮಾದನೇ ॥ ೧೦ ॥

ಕುಬ್ಜಾಗಾರೇ ಹೃಷೀಕೇಶಂ ಗಂಧದ್ವಾರೇ ಪಯೋಧರಮ್ ।
ಗರುಡಧ್ವಜಂ ತು ಸಕಲೇ ಗೋವಿಂದಂ ನಾಮ ಸಾಯಕೇ ॥ ೧೧ ॥

ವೃಂದಾವನೇ ತು ಗೋಪಾಲಂ ಮಥುರಾಯಾಂ ಸ್ವಯಂಭುವಮ್ ।
ಕೇದಾರೇ ಮಾಧವಂ ವಿಂದ್ಯಾದ್ವಾರಾಣಸ್ಯಾಂ ತು ಕೇಶವಮ್ ॥ ೧೨ ॥

ಪುಷ್ಕರೇ ಪುಷ್ಕರಾಕ್ಷಂ ತು ಧೃಷ್ಟದ್ಯುಮ್ನೇ ಜಯಧ್ವಜಮ್ ।
ತೃಣಬಿಂದುವನೇ ವೀರಮಶೋಕಂ ಸಿಂಧುಸಾಗರೇ ॥ ೧೩ ॥

ಕಸೇರಟೇ ಮಹಾಬಾಹುಮಮೃತಂ ತೈಜಸೇ ವನೇ ।
ವಿಶ್ವಾಸಯೂಪೇ ವಿಶ್ವೇಶಂ ನರಸಿಂಹಂ ಮಹಾವನೇ ॥ ೧೪ ॥

ಮುಂದೆಗೆ ಹೋಗುವೆಡೆಯಲ್ಲಿ ಶ್ರೀ ಹರಿಯನ್ನೂ, ಶಾಲಿಗ್ರಾಮಕ್ಷೇತ್ರದಲ್ಲಿ ತಪೋವಾಸಾಭಿಧಾನನನ್ನೂ, ಗಂಧಮಾದನಪರ್ವತದಲ್ಲಿ ಅಚಿಂತ್ಯನನ್ನೂ, ಕುಬ್ಜೆಯ ಮನೆಯಲ್ಲಿ ಹೃಷೀಕೇಶನಾಮಕನನ್ನೂ, ಗಂಧದ್ವಾರದಲ್ಲಿ ಪಯೋಧರ ರೂಪನನ್ನೂ, ಸಕಲ ಕ್ಷೇತ್ರದಲ್ಲಿ ಗರುಡಧ್ವಜ ರೂಪನನ್ನೂ, ಸಾಯಕಕ್ಷೇತ್ರದಲ್ಲಿ ಗೋವಿಂದನಾಮಕನನ್ನೂ, ವೃಂದಾವನಕ್ಷೇತ್ರದಲ್ಲಿ ಗೋಪಾಲ ರೂಪನನ್ನೂ, ಮಥುರೆಯಲ್ಲಿ ಸ್ವಯಂಭುವನ್ನೂ, ಕೇದಾರಕ್ಷೇತ್ರದಲ್ಲಿ ಮಾಧವರೂಪನನ್ನೂ ವಾರಾಣಸೀಕ್ಷೇತ್ರದಲ್ಲಿ ಕೇಶವರೂಪನನ್ನೂ, ಪುಷ್ಕರಕ್ಷೇತ್ರದಲ್ಲಿ ಪುಷ್ಕರಾಕ್ಷನಾಮಕನನ್ನೂ, ಧೃಷ್ಟದ್ಯುಮ್ನಕ್ಷೇತ್ರದಲ್ಲಿ ಜಯಧ್ವಜನಾಮಕನನ್ನೂ, ತೃಣಬಿಂದುವನದಲ್ಲಿ ವೀರನಾಮಕನನ್ನೂ, ಸಿಂಧುಸಾಗರದಲ್ಲಿ ಅಶೋಕನಾಮಕನನ್ನೂ, ಕಸೇರಟಕ್ಷೇತ್ರದಲ್ಲಿ ಮಹಾಬಾಹುನಾಮಕನನ್ನೂ, ತೈಜಸವನದಲ್ಲಿ ಅಮೃತ ರೂಪನನ್ನೂ, ವಿಶ್ವಾಸಯೂಪಕ್ಷೇತ್ರದಲ್ಲಿ ವಿಶ್ವೇಶನಾಮಕನನ್ನೂ, ಮಹಾವನದಲ್ಲಿ ನರಸಿಂಹನಾಮಕನನ್ನೂ, ಹಲಾಂಗರಕ್ಷೇತ್ರದಲ್ಲಿ ರಿಪುಹರನಾಮಕನನ್ನೂ,

ಹಲಾಂಗರೇ ರಿಪುಹರಂ ದೇವಶಾಲಾಂ ತ್ರಿವಿಕ್ರಮಮ್ ।
ಪುರುಷೋತ್ತಮಂ ದಶಪುರೇ ಕುಬ್ಜಕೇ ವಾಮನಂ ವಿದುಃ ॥ ೧೫ ॥

ವಿದ್ಯಾಧರಂ ವಿತಸ್ತಾಯಾಂ ವಾರಾಹೇ ಧರಣೀಧರಮ್ ।
ದೇವದಾರುವನೇ ಗುಹ್ಯಂ ಕಾವೇರ್ಯಾಂ ನಾಗಶಾಯಿನಮ್ ॥ ೧೬ ॥

ಪ್ರಯಾಗೇ ಯೋಗಮೂರ್ತಿಂ ಚ ಪಯೋಷ್ಣ್ಯಾಂ ಚ ಸುದರ್ಶನಮ್ ।
ಕುಮಾರತೀರ್ಥೇ ಕೌಮಾರಂ ಲೋಹಿತೇ ಹಯಶೀರ್ಷಕಮ್ ॥ ೧೭ ॥

ತ್ರಿವಿಕ್ರಮಮುಜ್ಜಯಿನ್ಯಾಂ ಲಿಂಗಕೂಟೇ ಚತುರ್ಭುಜಮ್ ।
ಹರಿಹರಂ ತು ಭದ್ರಾಯಾಂ ದೃಷ್ಟ್ವಾ ಪಾಪಾತ್ಪ್ರಮುಚ್ಯತೇ ॥ ೧೮ ॥

ದೇವಶಾಲಾಕ್ಷೇತ್ರದಲ್ಲಿ ತ್ರಿವಿಕ್ರಮನಾಮಕನನ್ನೂ, ದಶಪುರಕ್ಷೇತ್ರದಲ್ಲಿ ಪುರುಷೋತ್ತಮನೆಂಬ ಹೆಸರಿನವನನ್ನೂ, ಕುಬ್ಜಕಕ್ಷೇತ್ರದಲ್ಲಿ ವಾಮನರೂಪನನ್ನೂ ತಿಳಿಯುತ್ತಾರೆ.

೧೬–೧೮. ವಿತಸ್ತಾಕ್ಷೇತ್ರದಲ್ಲಿ ವಿದ್ಯಾಧರ ನಾಮಕನನ್ನೂ, ವಾರಾಹಕ್ಷೇತ್ರದಲ್ಲಿ ಧರಣೀಧರನಾಮಕನನ್ನೂ, ದೇವದಾರುವನದಲ್ಲಿ ಗುಹ್ಯನೆಂಬವನನ್ನೂ, ಕಾವೇರೀ ತೀರದಲ್ಲಿ ನಾಗಶಾಯಿಯನ್ನೂ (ರಂಗನಾಥನನ್ನೂ), ಪ್ರಯಾಗಕ್ಷೇತ್ರದಲ್ಲಿ ಯೋಗಮೂರ್ತ್ಯಭಿಧಾನನನ್ನೂ, ಪಯೋಷ್ಣೀತೀರದಲ್ಲಿ ಸುದರ್ಶನನನ್ನೂ, ಕುಮಾರ ತೀರ್ಥದಲ್ಲಿ ಕೌಮಾರನನ್ನೂ, ಲೋಹಿತಕ್ಷೇತ್ರದಲ್ಲಿ ಹಯಶೀರ್ಷಕರೂಪನನ್ನೂ, ಉಜ್ಜಯಿನಿಯಲ್ಲಿ ತ್ರಿವಿಕ್ರಮನಾಮಕನನ್ನೂ, ಲಿಂಗಕೂಟಕ್ಷೇತ್ರದಲ್ಲಿ ಚತುರ್ಭುಜನೆಂಬವನನ್ನೂ, ತುಂಗಭದ್ರಾತೀರದಲ್ಲಿ ಶ್ರೀ ಹರಿಹರನಾಮಕನನ್ನೂ ಮಾನವನು ದರ್ಶನಮಾಡಿ ಪಾಪದಿಂದ ಮುಕ್ತನಾಗುತ್ತಾನೆ.

ವಿಶ್ವರೂಪಂ ಕುರುಕ್ಷೇತ್ರೇ ಮಣಿಕುಂಡೇ ಹಲಾಯುಧಮ್ ।
ಲೋಕನಾಥಮಯೋಧ್ಯಾಯಾಂ ಕುಂಡಿನೇ ಕುಂಡಿನೇಶ್ವರಮ್ ॥ ೧೯ ॥

ಬಾಂಡಾರೇ ವಾಸುದೇವಂ ತು ಚಕ್ರತೀರ್ಥೇ ಸುದರ್ಶನಮ್ ।
ಆಢ್ಯೇ ವಿಷ್ಣುಪದಂ ವಿದ್ಯಾಚ್ಛೂಕರೇ ಶೂಕರಂ ವಿದುಃ ॥ ೨೦ ॥

ಬ್ರಹ್ಮೇಶಂ ಮಾನಸೇ ತೀರ್ಥೇ ದಂಡಕೇ ಶ್ಯಾಮಲಂ ವಿದುಃ ।
ತ್ರಿಕೂಟೇ ನಾಗಮೋಕ್ಷಂ ಚ ಮೇರುಪೃಷ್ಠೇ ಚ ಭಾಸ್ಕರಮ್ ॥ ೨೧ ॥

ವಿರಜಂ ಪುಷ್ಪಭದ್ರಾಯಾಂ ಬಾಲಂ ಕೇರಲಕೇ ವಿದುಃ ।
ಯಶಸ್ಕರಂ ವಿಪಾಶಾಯಾಂ ಮಾಹಿಷ್ಮತ್ಯಾಂ ಹುತಾಶನಮ್ ॥ ೨೨ ॥

೧೯-೨೦. ಕುರುಕ್ಷೇತ್ರದಲ್ಲಿ ವಿಶ್ವರೂಪನಾಮಕನನ್ನೂ, ಮಣಿ ಕುಂಡಕ್ಷೇತ್ರದಲ್ಲಿ, ಹಲಾಯುಧವೆಂಬ ಹೆಸರಿನವನನ್ನೂ, ಅಯೋಧ್ಯೆಯಲ್ಲಿ ಲೋಕನಾಥ ನಾಮಕನನ್ನೂ, ಕುಂಡಿನಕ್ಷೇತ್ರದಲ್ಲಿ ಕುಂಡಿನೇಶ್ವರನನ್ನೂ, ಬಾಂಡಾರಕ್ಷೇತ್ರದಲ್ಲಿ ವಾಸುದೇವ ನಾಮಕನನ್ನೂ, ಚಕ್ರತೀರ್ಥದಲ್ಲಿ ಸುದರ್ಶನನಾಮಕನನ್ನೂ, ಆಢ್ಯಕ್ಷೇತ್ರದಲ್ಲಿ ವಿಷ್ಣುಪದನಾಮಕನನ್ನೂ ತಿಳಿಯುವುದು; ಶೂಕರಕ್ಷೇತ್ರದಲ್ಲಿ ಶೂಕರನಾಮಕನನ್ನೂ ತಿಳಿಯುತ್ತಾರೆ.

೨೧. ಮಾನಸತೀರ್ಥದಲ್ಲಿ ಬ್ರಹ್ಮೇಶನಾಮಕನನ್ನೂ, ದಂಡಕತೀರ್ಥದಲ್ಲಿ ಶ್ಯಾಮಲನನ್ನೂ ಅರಿಯುತ್ತಾರೆ; ತ್ರಿಕೂಟಕ್ಷೇತ್ರದಲ್ಲಿ ನಾಗಮೋಕ್ಷನಾಮಕನನ್ನೂ ಮೇರುಪೃಷ್ಠದಲ್ಲಿ ಭಾಸ್ಕರನಾಮಕನನ್ನೂ ತಿಳಿಯುತ್ತಾರೆ.

೨೨. ಪುಷ್ಪಭದ್ರಾಕ್ಷೇತ್ರದಲ್ಲಿ ವಿರಜನಾಮಕನನ್ನೂ, ಕೇರಲಕ್ಷೇತ್ರದಲ್ಲಿ ಬಾಲನಾಮಕನನ್ನೂ, ವಿಪಾಶಾಕ್ಷೇತ್ರದಲ್ಲಿ ಯಶಸ್ಕರನನ್ನೂ, ಮಾಹಿಷ್ಮತಿಯಲ್ಲಿ ಹುತಾಶನೆಂಬ ಅಭಿಧಾನವುಳ್ಳವನನ್ನೂ ತಿಳಿಯುತ್ತಾರೆ.

ಕ್ಷೀರಾಬ್ಧೌ ಪದ್ಮನಾಭಂ ತು ವಿಮಲೇ ತು ಸನಾತನಮ್ ।
ಶಿವನದ್ಯಾಂ ಶಿವಕರಂ ಗಯಾಯಾಂ ಚ ಗದಾಧರಮ್ ॥ ೨೩ ॥

ಸರ್ವತ್ರ ಪರಮಾತ್ಮಾನಂ ಯಃ ಪಶ್ಯತಿ ಸ ಮುಚ್ಯತೇ ।
ಅಷ್ಟಷಷ್ಟಿಶ್ಚ ನಾಮಾನಿ ಕಥಿತಾನಿ ಮಯಾ ತವ ॥ ೨೪ ॥

ಕ್ಷೇತ್ರಾಣಿ ಚೈವ ಗುಹ್ಯಾನಿ ಕಥಿತಾನಿ ವಿಶೇಷತಃ ।
ಏತಾನಿ ಮಮ ನಾಮಾನಿ ರಹಸ್ಯಾನಿ ಪ್ರಜಾಪತೇ ॥ ೨೫ ॥

ಯಃ ಪಠೇತ್ಪ್ರಾತರುತ್ಥಾಯ ಶೃಣುಯಾದ್ವಾಪಿ ನಿತ್ಯಶಃ ।
ಗವಾಂ ಶತಸಹಸ್ರಸ್ಯ ದತ್ತಸ್ಯ ಫಲಮಾಪ್ನುಯಾತ್ ॥ ೨೬ ॥

೨೩-೨೪. ಕ್ಷೀರಸಮುದ್ರದಲ್ಲಿ ಪದ್ಮನಾಭಮೂರ್ತಿಯನ್ನೂ, ವಿಮಲ ಕ್ಷೇತ್ರದಲ್ಲಿ ಸನಾತನಮೂರ್ತಿಯನ್ನೂ, ಶಿವನದಿಯಲ್ಲಿ ಶಿವಕರನಾಮಕನನ್ನೂ, ಗಯಾಕ್ಷೇತ್ರದಲ್ಲಿ ಗದಾಧರ ಮೂರ್ತಿಯನ್ನೂ, ಎಲ್ಲೆಡೆಗಳಲ್ಲಿಯೂ ಸರ್ವೋತ್ತಮ ಸ್ವಾಮಿಯಾದ ಶ್ರೀಮನ್ನಾರಾಯಣನನ್ನೂ, ಯಾವ ಅಧಿಕಾರಿಯು ಕಾಣುತ್ತಾನೋ (ಇರುವನೆಂದು ತಿಳಿಯುತ್ತಾನೆಯೋ), ಅವನು ಸಂಸಾರದಿಂದ ಮುಕ್ತನಾಗುತ್ತಾನೆ. ಎಲೈ ಪಿತಾಮಹನೇ! ನಿನಗೆ ಅರುವತ್ತೆಂಟು ಹೆಸರುಗಳನ್ನು ಹೇಳಿದೆನು.

೨೫. ಎಲೈ ಪ್ರಜಾಪತಿಯೇ! ನಿನಗೆ ರಹಸ್ಯಗಳಾದ ನನ್ನ ಕ್ಷೇತ್ರಗಳನ್ನೂ, ನಾಮಗಳನ್ನೂ ವಿಶೇಷವಾಗಿ ತಿಳಿಸಿದೆನು.

೨೬. ಯಾವ ಮಾನವನು ಬೆಳಗ್ಗೆದ್ದು, ನಿತ್ಯದಲ್ಲಿಯೂ, ಈ ಕ್ಷೇತ್ರನಾಮಗಳನ್ನು ಪಠಿಸುತ್ತಾನೆಯೋ, ಅವನು ಒಂದು ಲಕ್ಷಗೋವುಗಳನ್ನು ದಾನಮಾಡಿದವರ ಫಲವನ್ನು ಹೊಂದುವನು.

ದಿನೇ ದಿನೇ ಶುಚಿರ್ಭೂತ್ವಾ ನಾಮಾನ್ಯೇತಾನಿ ಯಃ ಪಠೇತ್ ।
ದುಃಸ್ವಪ್ನಂ ನ ಭವೇತ್ತಸ್ಯ ಮತ್ಪ್ರಸಾದಾನ್ನ ಸಂಶಯಃ ॥ ೩೨ ॥

ಅಷ್ಟಷಷ್ಟಿಂ ತು ನಾಮಾನಿ ತ್ರಿಕಾಲಂ ಯಃ ಪಠೇನ್ನರಃ ।
ವಿಮುಕ್ತಃ ಸರ್ವಪಾಪೇಭ್ಯೋ ಮಮ ಲೋಕೇ ಸ ಮೋದತೇ ॥ ೩೩ ॥

ದ್ರಷ್ಟವ್ಯಾನಿ ಯಥಾ ಶಕ್ತ್ಯಾ ಕ್ಷೇತ್ರಾಣ್ಯೇತಾನಿ ಮಾನವೈಃ ।
ವೈಷ್ಣವೈಸ್ತು ವಿಶೇಷೇಣ ತೇಷಾಂ ಮುಕ್ತಿಂ ದದಾಮ್ಯಹಮ್ ॥ ೩೪ ॥

॥ ಸೂತ ಉವಾಚ ॥

ಇಮಂ ಸ್ತವಂ ಯಃ ಪಠತೇ ಸ ಮಾನವಃ
ಹರಿಂ ಸ್ಮರನ್ವಿಷ್ಣುದಿನೇ ವಿಶೇಷತಃ ।

---

೩೨. ಯಾವಾತನು ಪ್ರತಿನಿತ್ಯದಲ್ಲಿಯೂ, ಶುಚಿರ್ಭೂತನಾಗಿ, ಈ ನಾಮಗಳನ್ನು ಪಠಿಸುವನೋ, ಅವನಿಗೆ ನನ್ನ ಅನುಗ್ರಹದಿಂದ ದುಃಸ್ವಪ್ನಗಳುಂಟಾಗುವುದಿಲ್ಲ; ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವು.

೩೩. ಯಾವ ನರನು ನಿತ್ಯದಲ್ಲಿಯೂ ಬೆಳಗ್ಗೆ, ನಡುಹಗಲು, ಬೈಗು-ಈ ಮೂರುಕಾಲಗಳಲ್ಲಿಯೂ ಈ ಅರುವತ್ತೆಂಟುನಾಮುಗಳನ್ನು ಪಠಿಸುವನೊ, ಅವನು ಸಕಲ ಪಾಪಗಳಿಂದಲೂ ಮುಕ್ತನಾಗಿ, ನನ್ನ ಲೋಕದಲ್ಲಿ ಆನಂದ ಪಡುತ್ತಾನೆ.

೩೪. ಮಾನವರಿಂದ ಈ ಕ್ಷೇತ್ರಗಳು ಶಕ್ತಿಯಿದ್ದಷ್ಟು ನೋಡತಕ್ಕವು; ವೈಷ್ಣವರಿಂದ ವಿಶೇಷವಾಗಿ ದರ್ಶನಮಾಡಲ್ಪಡತಕ್ಕವು. ಇಂತು ಈ ಕ್ಷೇತ್ರದರ್ಶನ. ಮಾಡಿದವರಿಗೆ ನಾನು ಮುಕ್ತಿಯನ್ನು ಕೊಡುವೆನು;' ಎಂದು ಭಗವಂತನು ಪಿತಾಮಹನಿಗೆ ಹೇಳಿದನು.

ಸೂತರು ಹೇಳುತ್ತಾರೆ: —

೩೫. 'ಯಾವ ಮಾನವನು ಶ್ರೀ ಹರಿಯನ್ನು ಪೂಜಿಸಿ, ಏಕಾದಶೀ ತಿಥಿಯಲ್ಲಿ ಶ್ರೀ ಹರಿಯ ಇದಿರಿನಲ್ಲಿದ್ದು, ವಿಶೇಷವಾಗಿ ಶ್ರೀ ಹರಿಯನ್ನೇ ಸ್ಮರಿಸುತ್ತಾ,

ಇಮಂ ಸ್ತವಂ ಯಃ ಪಠತೇ ಸ ಮಾನವಃ ।
ಪ್ರಾಪ್ನೋತಿ ವಿಷ್ಣೋರಮೃತಾತ್ಮಕಂ ಪದಮ್ ॥ ೩೦ ॥

ಇತಿ ಶ್ರೀ ನರಸಿಂಹಪುರಾಣೇ ಆದ್ಯೇ ಧರ್ಮಾರ್ಥಮೋಕ್ಷದಾಯಿನಿ
ವಿಷ್ಣುವಲ್ಲಭೇ ವೈಷ್ಣವಕ್ಷೇತ್ರ ನಿರೂಪಣಂ ನಾಮ
ಪಂಚಷಷ್ಟಿತಮೋಽಧ್ಯಾಯಃ

ಈ ಸ್ತೋತ್ರವನ್ನು ಪಠಿಸುತ್ತಾನೆಯೋ, ಅವನು ಶ್ರೀಮಹಾವಿಷ್ಣುವಿನ ನಿತ್ಯ ಸುಖಾತ್ಮಕವಾದ ಸ್ಥಾನವನನ್ನು (ಲೋಕವನ್ನು) ಹೊಂದುತ್ತಾನೆ;' ಎಂದು ಭರದ್ವಾಜನಿಗೆ ಸೂತರು ಹೇಳಿದರು.

ಇಂತು ಆದ್ಯವೂ, ಧರ್ಮಾರ್ಥಮೋಕ್ಷ ದಾಯಕವೂ,
ಶ್ರೀ ಮಹಾವಿಷ್ಣುವಿಗೆ ಪ್ರಿಯವೂ ಆದ ಶ್ರೀ ನರಸಿಂಹಪುರಾಣದಲ್ಲಿ ವೈಷ್ಣವ
ಕ್ಷೇತ್ರನಿರೂಪಣವೆಂಬ ಅರುವತ್ತೈದನೆಯ ಅಧ್ಯಾಯವು ಮುಗಿದುದು.

ಅರುವತ್ತೈದನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ ಭರದ್ವಾಜಮುನಿಯು ಶ್ರೀ ಸೂತರನ್ನು ಶ್ರೀಮಹಾವಿಷ್ಣುವಿನ ಗೂಢಗಳಾದ ಕ್ಷೇತ್ರನಾಮಗಳನ್ನು ಹೇಳಬೇಕೆಂದು ಪ್ರಾರ್ಥಿಸಲು, 'ಪೂರ್ವದಲ್ಲಿ ಮಂದರಪರ್ವತದಲ್ಲಿದ್ದು, ಚತುರ್ಮುಖನು ಶ್ರೀ ಹರಿಯನ್ನು ಸಾಕ್ಷಾತ್ತಾಗಿ ಈ ಸಂಗತಿಯನ್ನು ಕೇಳಲು, ಶ್ರೀ ಪರಮಾತ್ಮನು ತನ್ನ ಗೂಢವಾದ ಅರುವತ್ತೆಂಟು ಕ್ಷೇತ್ರಗಳನ್ನೂ, ಅಲ್ಲಿರುವ ತನ್ನ ಮೂರ್ತಿಗಳ ನಾಮಗಳನ್ನೂ ಹೇಳಿ, ಆ ಕ್ಷೇತ್ರಗಳು ಮತ್ತು ಭಗವದ್ರೂಪಗಳು, ಅವಶ್ಯವಾಗಿ ದ್ರಷ್ಟವ್ಯಗಳು ; ಅವುಗಳನ್ನು ದರ್ಶನ ಮಾಡಿದವರು ಪಾಪದಿಂದ ಮುಕ್ತರಾಗಿ, ವಿಷ್ಣುಲೋಕವನ್ನು ಹೊಂದುವರು ;' ಎಂದು ಹೇಳಿದುದನ್ನೇ ಸೂತರು ಭರದ್ವಾಜಾದಿಗಳಿಗೆ ಹೇಳಿ, ಶ್ರೀ ಹರಿಯ ಈ ಕ್ಷೇತ್ರನಾಮಗಳನ್ನು ಹರಿದಿನದಲ್ಲಿ ಶ್ರೀ ಹರಿಯನ್ನರ್ಚಿಸಿ, ಪಠಿಸಿದವರು ಶ್ರೀ ವಿಷ್ಣುಲೋಕವನ್ನೈಯ್ದುವರೆಂದು ಫಲವನ್ನೂ ' ನಿರೂಪಿಸಿರುತ್ತಾರೆ.

ಇಂತು ಅರುವತ್ತೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಮಂತ್ರತೀರ್ಥ ಮಹಿಮಾದಿ ವರ್ಣನಮ್.

ಷಟ್‌ಷಷ್ಟಿತಮೋಽಧ್ಯಾಯಃ

ತೀರ್ಥ ಪ್ರಶಂಸಾ.

॥ ಸೂತ ಉವಾಚ ॥

ಉತ್ಪನ್ನಸ್ಯ ಸ್ತವಂ ಬ್ರಹ್ಮನ್ನ್ಹರೇರೇಭಿಶ್ಚ ನಾಮಭಿಃ ।
ಪುನರನ್ಯಾನಿ ನಾಮಾನಿ ಯಾನಿ ತಾನಿ ನಿಬೋಧ ಮೇ ॥ ೧ ॥

ಅರುವತ್ತಾರನೆಯ ಅಧ್ಯಾಯವು.

ಸೂತರು ಭರದ್ವಾಜಾದಿಗಳಿಗೆ ಇಂತು ಹೇಳುತ್ತಾರೆ:—

೧. 'ಎಲೈ ಭರದ್ವಾಜಾದಿಮುನಿಗಳೇ! ಕೇಳಿರಿ; ಶ್ರೀ ಭಗವಂತನು ಪಿತಾಮಹನಿಗೆ ಇಂತು ಹೇಳಿದನು:—' ಎಲೈ ಪಿತಾಮಹನೇ! ನಿತ್ಯವಾದ ಅವತಾರ ರೂಪಗಳನ್ನೇ ಅಭಿವ್ಯಕ್ತಮಾಡಿದ ಶ್ರೀಹರಿಯು ಈ ನಾಮಗಳಿಂದ ಅವನನ್ನು ಸ್ತೋತ್ರಮಾಡುವುದು; ಮತ್ತು ಇನ್ನೂ ಇತರ ಯಾವ ಹೆಸರುಗಳಿವೆಯೋ, ಅವನ್ನು ಹೇಳುವೆನು; ತಿಳಿಯುವವನಾಗು.

ಗಂಗಾ ತು ಪ್ರಥಮಂ ಪುಣ್ಯಾ ಯಮುನಾ ಗೋಮತೀ ಪುನಃ ।
ಸರಸ್ವತೀ ಚ ಸರಯೂಃ ಚಂದ್ರಭಾಗಾ ಚರ್ಮಣ್ವತೀ ॥ ೨ ॥

ಕುರುಕ್ಷೇತ್ರಂ ಗಯಾ ಚೈವ ಪುಷ್ಕರಾಣಿ ತಥಾರ್ಬುದಮ್ ।
ನರ್ಮದಾ ಚ ಮಹಾಪುಣ್ಯಾ ತೀರ್ಥಾನ್ಯೇತಾನಿ ಚೋತ್ತರೇ ॥ ೩ ॥

ವಾಪೀ ಪಯೋಷ್ಣೀ ಪುಣ್ಯೇ ದ್ವೇ ತತ್ಸಂಗಾತ್ತೀರ್ಥಮುತ್ತಮಮ್ ।
ತಥಾ ಬ್ರಹ್ಮಮತೀನಾಂ ಚ ಮೇಖಲಾಭಿಃ ಸಮನ್ವಿತಾಃ ॥ ೪ ॥

ವಿರಜಂ ಚ ತಥಾ ತೀರ್ಥಂ ಸರ್ವಪಾಪಕ್ಷಯಂಕರಮ್ ।
ಗೋದಾವರೀ ಮಹಾಪುಣ್ಯಾ ಸರ್ವತ್ರ ದ್ವಿಜಸತ್ತಮಾಃ ॥ ೫ ॥

---

೨. ಮೊದಲನೆಯದು ಪುಣ್ಯಪ್ರದವಾದ ಗಂಗಾನದಿಯು, ಯಮುನೆ, ಗೋಮತಿ, ಸರಯೂನದಿ, ಸರಸ್ವತಿ, ಚಂದ್ರಭಾಗ, (ಭೀಮರಥೀ) ಚರ್ಮಣ್ವತಿ- ಈ ನದಿಗಳೂ ಇವೆ.

೩. ಕುರುಕ್ಷೇತ್ರ, ಗಯಾ, ಅರ್ಬುದಸಂಖ್ಯಾಕಗಳಾದ ಹೊಕ್ಕರಣಿಗಳು, ಮತ್ತು ನರ್ಮದಾನದಿ-ಇವು ಅತ್ಯಂತ ಪುಣ್ಯಪ್ರದವಾದುವು; ಇವು ಉತ್ತರಭಾರತದಲ್ಲಿರುವ ತೀರ್ಥಗಳು.

೪. ವಾಪಿಯೂ, ಪಯೋಷ್ಣೀನದಿಯೂ-ಇವೆರಡೂ ಪುಣ್ಯಪ್ರದವಾದುವು ; ಇವೆರಡರ ಸಂಗಮವು ಶ್ರೇಷ್ಠವಾದ ತೀರ್ಥವು; ಹಾಗೆಯೇ ಬ್ರಹ್ಮಮತಿಗಳ ಮೇಖಲೆಗಳಿಂದ ಕೂಡಿರುವುವು. (ಬ್ರಹ್ಮಜ್ಞಾನಿಗಳ ಕಟಿಸೂತ್ರಗಳಿಂದ ಪವಿತ್ರಗಳಾಗಿರುವುವು.)

೫. ಹಾಗೆಯೇ ವಿಜಯತೀರ್ಥವು ಸಕಲ ಪಾಪಗಳನ್ನೂ ಅಳಿಯಿಸತಕ್ಕುದು. ಎಲೈ ಬ್ರಾಹ್ಮಣಶ್ರೇಷ್ಠರೇ ! ಗೋದಾವರೀನದಿಯು ತಾನು ಹರಿವೆಡೆಗಳಲ್ಲೆಲ್ಲಾ ಮಹಾಪುಣ್ಯಪ್ರದವಾದುದು.

ತುಂಗಭದ್ರಾ ಮಹಾಪುಣ್ಯಾ ಯತ್ರಾಹಂ ಕಮಲೋದ್ಭವ ।
ಹರೇಣ ಸಾರ್ಧಂ ಪ್ರೀತ್ಯಾ ತು ವಸಾಮಿ ಮುನಿಪೂಜಿತಃ ॥ ೬ ॥

ದಕ್ಷಿಣಾ ಗಂಗಾಂತರಂಗಾ ಕಾವೇರೀ ಚ ವಿಶೇಷತಃ ।
ಸಹ್ಯೇ ತ್ವಾಮಲಕಗ್ರಾಮೇ ಸ್ಥಿತೋಽಹಂ ಕಮಲೋದ್ಭವ ॥ ೭ ॥

ದೇವದೇವಸ್ಯ ನಾಮ್ನಾ ತು ತ್ವಯಾ ಬ್ರಹ್ಮನ್ಸದಾರ್ಚಿತಃ ।
ತತ್ರ ತೀರ್ಥಾನ್ಯನೇಕಾನಿ ಸರ್ವಪಾಪಹರಾಣಿ ವೈ ।
ಯೇಷು ಸ್ನಾತ್ವಾ ಚ ಪೀತ್ವಾ ಚ ಪಾಪಾನ್ಮುಚ್ಯೇತ ಮಾನವಃ ॥ ೮ ॥

ಇತ್ಯೇವಂ ಕಥಯಿತ್ವಾ ತು ತೀರ್ಥಾನಿ ಮಧುಸೂದನಃ ।
ಬ್ರಹ್ಮಣೇ ಗತವಾನ್ಸ್ಪ್ರರ್ಹ್ಮ ಬ್ರಹ್ಮಾಽಪಿ ಸ್ವಪುರಂ ಗತಃ ॥ ೯ ॥

---

೬. ಎಲೈ ಪದ್ಮಸಂಭವನೇ! ತುಂಗಭದ್ರೆಯದು ಮಹಾಪುಣ್ಯಪ್ರದವಾದ ನದಿಯು; ಯಾವ ಈ ನದಿಯ ತೀರದಲ್ಲಿ ನಾನು ಹರನೊಡನೆ (ಹರಿಹರನಾಗಿ) ಮುನಿಗಳಿಂದ ಸೇವಿತನಾಗಿ ಸಂತಸದಿಂದ ಯಾವಾಗಲೂ ವಾಸಮಾಡುತ್ತೇನೆ.

೭. ಎಲೈ ಪದ್ಮಜನೇ! ಕಾವೇರೀನದಿಯು ವಿಶೇಷವಾಗಿ, ಶ್ರೀ ರಂಗನನ್ನೊಳಗೊಂಡ ದಕ್ಷಿಣಗಂಗೆಯೆಂದು ಹೇಳಿಸಿಕೊಳ್ಳುತ್ತದೆ. ಸಹ್ಯಪರ್ವತದಲ್ಲಿ ಆಮಲಕವೆಂಬ ಗ್ರಾಮದಲ್ಲಿ ನಾನು ಇರುತ್ತೇನೆ.

೮. ಎಲೈ ಬ್ರಹ್ಮನೇ! ನಿನ್ನಿಂದ ದೇವೋತ್ತಮನಾದ ನನ್ನ ಹಿಂದೆ ಹೇಳಿದ ನಾಮಗಳಿಂದ ನಾನು ಯಾವಾಗಲೂ ಪೂಜಿತನಾಗಿರುತ್ತೇನೆ. ಯಾವ ತೀರ್ಥದಲ್ಲಿ ಮಾನವನು ಮಿಂದೂ, ಕುಡಿದೂ ಪಾಪಗಳಿಂದ ಮುಕ್ತನಾಗುತ್ತಾನೆಯೋ, ಅಂತಹ ಪಾಪಗಳನ್ನೆಲ್ಲಾ ಕಳೆಯತಕ್ಕ ಅನೇಕ ತೀರ್ಥಗಳು ಅಲ್ಲಿ ಇರುತ್ತವೆ,

೯. 'ಎಲೈ ಭಾರದ್ವಾಜನೇ! ಕೇಳು; ಮಧುಸೂದನನು ಇಂತು ಈ ತೀರ್ಥಗಳನ್ನು ಪಿತಾಮಹನಾದ ಬ್ರಹ್ಮನಿಗೆ ಅರುಹಿ ಹೊರಟುಹೋದನು; ಬ್ರಹ್ಮನೂ ತನ್ನ ವಾಸಸ್ಥಳಕ್ಕೆ ತೆರಳಿದನು.' ಎಂದು ಸೂತರು ಹೇಳಿದರು.

॥ ಭಾರದ್ವಾಜ ಉವಾಚ ॥

ತಸ್ಮಿನ್ನಾಮಲಕಗ್ರಾಮೇ ಪುಣ್ಯತೀರ್ಥಾನಿ ಯಾನಿ ವೈ ।
ತಾನಿ ಮೇ ವದ ಧರ್ಮಜ್ಞ ವಿಸ್ತರೇಣ ಯಥಾರ್ಥತಃ ॥ ೧೦ ॥

ಕ್ಷೇತ್ರೋತ್ಪತ್ತಿಂ ಚ ಮಾಹಾತ್ಮ್ಯಂ ಯಾತ್ರಾ ಪರ್ವ ಚ ಯತ್ರ ತತ್ ।
ತತ್ರಾಸೌ ದೇವದೇವೇಶಃ ಪೂಜ್ಯತೇ ಬ್ರಹ್ಮಣಾ ಸ್ವಯಮ್ ॥ ೧೧ ॥

॥ ಸೂತ ಉವಾಚ ॥

ಶೃಣು ವಿಪ್ರ ಪ್ರವಕ್ಷ್ಯಾಮಿ ಪುಣ್ಯಂ ಪಾಪ ಪ್ರಣಾಶನಮ್ ।
ಸಹ್ಯಾಮಲಕತೀರ್ಥಸ್ಯ ಉತ್ಪತ್ತ್ಯಾದಿ ಮಹಾಮುನೇ ॥ ೧೨ ॥

ಪುರಾ ಸಹ್ಯವನೋದ್ದೇಶೇ ತರುರಾಮಲಕೋ ಮಹಾನ್ ।
ಆಸೀದ್ಬ್ರಹ್ಮನ್ಮಹೋಗ್ರೋsಯಂ ನಾಮ್ನಾsಯಂ ಚೋಚ್ಯತೇ ಬುಧೈಃ

ಭಾರದ್ವಾಜನು ಹೇಳುತ್ತಾನೆ :—

೧೦-೧೧. 'ಎಲೈ ಧರ್ಮಜ್ಞರಾದ ಸೂತಾಚಾರ್ಯರೇ! ಆ ಆಮಲಕಗ್ರಾಮದಲ್ಲಿ ಯಾವ ಪುಣ್ಯತೀರ್ಥಗಳಿವೆಯೋ; ಅವನ್ನು ಬಿತ್ತರದಿಂದ ನನಗೆ ಯಥಾರ್ಥವಾಗಿ ಹೇಳಿರಿ; ಇನ್ನೂ ಆ ಆಮಲಕಕ್ಷೇತ್ರವು ಸಂಭವಿಸಿದುದನ್ನೂ, ಅದರ ಮಹಿಮೆಯನ್ನೂ, ಯಾವ ಆ ಸ್ಥಳದ ಯಾತ್ರೆಯ ಪುಣ್ಯಕಾಲವನ್ನೂ, ಆ ಪುಣ್ಯಕ್ಷೇತ್ರದಲ್ಲಿ ಬ್ರಹ್ಮಾದಿ ದೇವತೆಗಳಿಗೂ, ನಿಯಾಮಕನಾದ ಶ್ರೀಹರಿಯು ಲೋಕಪಿತಾಮಹನಾದ ಚತುರ್ಮುಖನಿಂದ ತಾನೇ ಹೇಗೆ ಪೂಜಿಸಲ್ಪಡುತ್ತಾನೆಂಬುದನ್ನೂ ಹೇಳಿರಿ;' ಎಂದು ಭರದ್ವಾಜನು ಕೇಳಿದನು.

ಆಗ ಸೂತರು ಹೇಳುತ್ತಾರೆ :—

೧೨. 'ಎಲೈ ಬ್ರಾಹ್ಮಣನಾದ, ಮಹಾಜ್ಞಾನಿಯಾದ ಭರದ್ವಾಜನೇ! ಕೇಳು; ಪುಣ್ಯಪ್ರದವೂ, ಪಾಪನಾಶಕವೂ ಆದ ಸಹ್ಯಾಮಲಕ ತೀರ್ಥದ ಉತ್ಪತ್ತಿಯೇ ಮೊದಲಾದುವನ್ನು ಹೇಳುವೆನು.

೧೩. ಎಲೈ ಬ್ರಾಹ್ಮಣನೇ! ಪೂರ್ವದಲ್ಲಿ ಸಹ್ಯಾರಣ್ಯಪ್ರದೇಶದಲ್ಲಿ ದೊಡ್ಡ ಒಂದು ನೆಲ್ಲಿಯಮರವಿದ್ದಿತು. ಜ್ಞಾನಿಗಳು ಇದನ್ನು ಮಹೋಗ್ರವೆಂಬ ಹೆಸರಿನಿಂದ ಕರೆಯುತ್ತಾರೆ.

ಫಲಾನಿ ತಸ್ಯ ವೃಕ್ಷಸ್ಯ ಮಹಾಂತಿ ಸುರಸಾನಿ ಚ ।
ದರ್ಶನೀಯಾನಿ ದಿವ್ಯಾನಿ ದುರ್ಲಭಾನಿ ಮಹಾಮುನೇ ॥ ೧೪ ॥

ಪರೇಷಾಂ ಬ್ರಾಹ್ಮಣಾನಾಂ ತು ಪರೇಣ ಬ್ರಹ್ಮಣಾ ಪುರಾ ।
ಸ ದೃಷ್ಟಸ್ತು ಮಹಾವೃಕ್ಷೋ ಮಹಾಫಲಸಮನ್ವಿತಃ ॥ ೧೫ ॥

ಕಿಮೇತದಿತಿ ವಿಪ್ರೇಂದ್ರ ಧ್ಯಾನದೃಷ್ಟಿಪರೋಽಭವತ್ ।
ಧ್ಯಾನೇನ ದೃಷ್ಟವಾಂಸ್ತತ್ರ ಪುನರಾಮಲಕಂ ತರುಮ್ ॥ ೧೬ ॥

ತಸ್ಯೋಪರಿ ನೃದೇವೇಶಂ ಶಂಖಚಕ್ರಗದಾಧರಮ್ ।
ಉತ್ಥಾಯ ಪುನರಪಶ್ಯತ್ಪ್ರತಿಮಾಮೇವ ಕೇವಲಾಮ್ ॥ ೧೭ ॥

---

೧೪. ಎಲೈ ಮಹಾಮುನಿಯೆ ! ಆ ಮರದ ಹಣ್ಣುಗಳು ದೊಡ್ಡವಾಗಿಯೂ, ರಸವುಳ್ಳವೂ, ನೋಡುವುದಕ್ಕೆ ಅಂದವಾಗಿಯೂ, ದಿವ್ಯಗಳಾಗಿಯೂ, ಹೊಂದಲು ಸಾಧ್ಯವಾಗಿಯೂ ಇದ್ದುವು.

೧೫-೧೬. ಪೂರ್ವದಲ್ಲಿ ಉತ್ತಮರಾದ, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಚತುರ್ಮುಖನಿಂದ ಪಿರಿದಾದ ಹಣ್ಣುಗಳು ಬೆರಸಿದ ಆ ಪೆರ್ಮರವು ನೋಡಲ್ಪಟ್ಟು, ಆ ಪಿತಾಮಹನು ಎಲೈ ಬ್ರಾಹ್ಮಣಶ್ರೇಷ್ಠನೇ ! ‘ಇದಾವುದು ?’ ಎಂದು ಜಾನಿಸುವವನಾದನು. ಅಲ್ಲಿ ಧ್ಯಾನದಿಂದ ಮತ್ತು ನೆಲ್ಲಿಯ ಮರವನ್ನೇ ಕಂಡನು.

೧೭. ಆ ಮರದ ಮೇಲೆ, ಮಾನವರ ಮತ್ತು ದೇವತೆಗಳ ನಿಯಾಮಕನಾದ ಶಂಖಚಕ್ರಗದಾಧರನಾದ ಹರಿಯನ್ನು ಕಂಡನು. ಎದ್ದು, ಮತ್ತೂ ನೋಡಲಾಗಿ, ದೇವನ ಕೇವಲ ಪ್ರತಿಮೆಯನ್ನೇ ನೋಡಿದನು.

ತಶ್ಪಾದಂ ಭೂತಲೇ ದೇವಃ ಪ್ರವಿವೇಶ ಮಹಾತರುಮ್ ।
ತತಸ್ತ್ವಾರಾಧಯಾಮಾಸ ದೇವದೇವೇಶಮವ್ಯಯಮ್ ॥ ೧೮ ॥

ಗಂಧಪುಷ್ಪಾದಿಭಿರ್ನಿತ್ಯಂ ಬ್ರಹ್ಮಾ ಲೋಕಪಿತಾಮಹಃ ।
ದ್ವಾದಶಭಿಃ ಸಪ್ತಭಿಸ್ತು ಸಂಖ್ಯಾಭಿಃ ಪೂಜಿತೋ ಹರಿಃ ॥ ೧೯ ॥

ತಸ್ಮಿನ್ ಕ್ಷೇತ್ರೇ ಮುನಿಶ್ರೇಷ್ಠ ಮಾಹಾತ್ಮ್ಯಂ ತಸ್ಯ ಕೋ ವದೇತ್ ।
ಶ್ರೀಸಹ್ಯಾಮಲಕಗ್ರಾಮೇ ದೇವದೇವೇಶಮವ್ಯಯಮ್ ॥ ೨೦ ॥

ಆರಾಧ್ಯ ತೀರ್ಥೇ ಸಂಪ್ರಾಪ್ತಾ ದ್ವಾದಶ ಪ್ರತಿಚತುರ್ಮುಖಮ್ ।
ತಸ್ಯ ಪಾದತಲೇ ತೀರ್ಥಂ ನಿಃಸೃತಂ ಪಶ್ಚಿಮಾಮುಖಮ್ ॥ ೨೧ ॥

೧೮-೧೯. ಶ್ರೀ ಹರಿಯು ಭೂಮಿಯಲ್ಲಿ ಆ ಮರದ ಬೇರನ್ನು ಹೊಕ್ಕನು. ಬಳಿಕ ಆ ಮಹಾತರುವಿನಲ್ಲಿ ಸರ್ವದೇವನಿಯಾಮಕನಾದ, ನಾಶರಹಿತನಾದ ಬ್ರಹ್ಮನು ನಿತ್ಯದಲ್ಲಿಯೂ ಗಂಧ, ಪುಷ್ಪ, ಮತ್ತು ಅಕ್ಷತೆ ಇವುಗಳನ್ನೂ ಪೂಜಿಸಿದನು. ಅಲ್ಲಿ ದ್ವಾದಶಾಕ್ಷರಮಂತ್ರದಿಂದಲೂ, ಸಪ್ತಾಕ್ಷರಮಂತ್ರಗಳಿಂದಲೂ ಶ್ರೀ ಹರಿಯು ಪೂಜಿತನಾದನು.

೨೦.-೨೧. ಎಲೈ ಮುನಿಶ್ರೇಷ್ಠನೇ! ಆ ಕ್ಷೇತ್ರದಲ್ಲಿ ಆ ವೃಕ್ಷದಲ್ಲಿ ವಾಸವಾಗಿದ್ದ ಹರಿಯ ಮಹಿಮೆಯನ್ನು ಯಾವನು ತಾನೆ ಹೇಳಬಲ್ಲನು? ಶ್ರೀ ಸಹ್ಯಾಮಲಕಗ್ರಾಮವೆಂಬ ತೀರ್ಥದಲ್ಲಿ ಬ್ರಹ್ಮಾದಿ ದೇವಶ್ರೇಷ್ಠರಿಗೂ ನಿಯಾಮಕನಾದ, ನಾಶರಹಿತನಾದ ಶ್ರೀ ಹರಿಯನ್ನು ಪೂಜಿಸಲು, ಪ್ರತಿಚತುರ್ಮುಖ ಕಲ್ಪದಲ್ಲಿ ಹನ್ನೆರಡು ತೀರ್ಥಗಳುಂಟಾದುವು. ಅದರ ಪಾದತಲದಲ್ಲಿ ಪಶ್ಚಿಮದಿಗಭಿಮುಖವಾಗಿ ಒಂದು ತೀರ್ಥವು ಹೊರಟಿತು.

ತಚ್ಚ ಕ್ರತೀರ್ಥಮಭವತ್ಪುಣ್ಯಂ ಪಾಪಪ್ರಣಾಶನಮ್ ।
ಚಕ್ರತೀರ್ಥೇ ನರಃ ಸ್ನಾತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೨೨ ॥

ಬಹುವರ್ಷಸಹಸ್ರಾಣಿ ಬ್ರಹ್ಮಲೋಕೇ ಮಹೀಯತೇ ।
ಶಂಖತೀರ್ಥೇ ನರಃ ಸ್ನಾತ್ವಾ ವಾಜಪೇಯಫಲಂ ಲಭೇತ್ ॥ ೨೩ ॥

ಪೌಷೇ ಮಾಸೇ ತು ಪುಷ್ಯಾರ್ಕೇ ತದ್ಯಾತ್ರಾದಿವಸಂ ಮುನೇ ।
ಬ್ರಹ್ಮಣಃ ಕುಂಡಿಕಾ ಪೂರ್ವಂ ಗಂಗಾತೋಯಪ್ರಪೂರಿತಾ ॥ ೨೪ ॥

ತಸ್ಯಾದ್ರೌ ಪತಿತಾ ಬ್ರಹ್ಮಂಸ್ತತ್ರ ತೀರ್ಥೇಽಶುಭಂ ಹರೇತ್ ।
ನಾಮ್ನಾ ತತ್ಕುಂಡಿಕಾ ತೀರ್ಥಂ ಶಿಲಾಗೃಹಸಮನ್ವಿತಮ್ ॥ ೨೫ ॥

---

೨೨. ಅದು ಪುಣ್ಯಪ್ರದವೂ, ಪಾಪಪರಿಹಾರಕವೂ ಆದ ಚಕ್ರತೀರ್ಥವೆನಿಸಿತು. ಆ ಚಕ್ರತೀರ್ಥದಲ್ಲಿ ಮಾನವನು ಮಿಂದು ಪಾಪಗಳೆಲ್ಲವನ್ನೂ ಕಳೆದುಕೊಳ್ಳುತ್ತಾನೆ.

೨೩. ಆ ಮಾನವನು ಅನೇಕ ಸಹಸ್ರವರ್ಷಗಳವರೆಗೂ ಬ್ರಹ್ಮಲೋಕದಲ್ಲಿ (ಸತ್ಯಲೋಕದಲ್ಲಿ) ಮಾನಿತನಾಗುತ್ತಾನೆ. ಮಾನವರು ಶಂಖತೀರ್ಥದಲ್ಲಿ ಮಿಂದು ವಾಜಪೇಯಯಾಗದ ಫಲವನ್ನು ಹೊಂದುವನು.

೨೪–೨೫. ಎಲೈ ಮುನಿಯೇ ! ಪುಷ್ಯ ಮಾಸದಲ್ಲಿ ಸೂರ್ಯನು ಪುಷ್ಯ ನಕ್ಷತ್ರಗತನಾಗಿರುವಾಗ ಸಹ್ಯಾಮಲಕತೀರ್ಥದ ಯಾತ್ರಾಪರ್ವಕಾಲವು. ಪೂರ್ವದಲ್ಲಿ ಬ್ರಹ್ಮನ ಕಮಂಡಲುವು ಗಂಗೆಯ ನೀರಿನಿಂದ ತುಂಬಿ, ಆ ಬೆಟ್ಟದಲ್ಲಿ ಬಿದ್ದಿತು. ಎಲೈ ಬ್ರಾಹ್ಮಣನೇ ! ಆ ತೀರ್ಥದಲ್ಲಿ ಸ್ನಾನವು ಮಾಡಿದವನ ಅಮಂಗಳವನ್ನೆಲ್ಲಾ ನಾಶಮಾಡುವುದು. ಶಿಲಾಗೃಹದಿಂದ ಕೂಡಿರುವ ಆ ತೀರ್ಥವು ಹೆಸರಿನಿಂದ ಕುಂಡಿಕಾತೀರ್ಥವೆನಿಸುತ್ತದೆ.

ತತ್ತೀರ್ಥೇ ಮನುಜಸ್ತತ್ರ ತದಾನೀಂ ಸಿದ್ಧಿಮಾಪ್ನುಯಾತ್ ।
ತ್ರಿರಾತ್ರೋಪೋಷಿತೋ ಭೂತ್ವಾ ಯಸ್ತತ್ರ ಸ್ನಾತಿ ಮಾನವಃ ॥ ೨೬ ॥

ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ।
ಕುಂಡಿಕಾತೀರ್ಥಾದುತ್ತರಂ ಪಿಂಡಾಖ್ಯಾನಾಚ್ಚ ದಕ್ಷಿಣಮ್ ॥ ೨೭ ॥

ಋಣಮೋಚನತೀರ್ಥಂ ಹಿ ತೀರ್ಥಾನಾಂ ಗುಹ್ಯಮುತ್ತಮಮ್ ।
ತ್ರಿರಾತ್ರಮುಷಿತೋ ಯಸ್ತು ತತ್ರ ಸ್ನಾನಂ ಸಮಾಚರೇತ್ ॥ ೨೮ ॥

ಋಣೈಸ್ತ್ರಿಭಿರಸೌ ಬ್ರಹ್ಮನ್ಮುಚ್ಯತೇ ನಾತ್ರ ಸಂಶಯಃ ।
ಶ್ರಾದ್ಧಂ ಕೃತ್ವಾ ಪಿತೃಭ್ಯಶ್ಚ ಪಿಂಡಸ್ಥಾನೇಷು ಯೋ ನರಃ ॥ ೨೯ ॥

---

೨೬. ಯಾವ ಮಾನವನು ಮೂರು ರಾತ್ರಿಗಳಲ್ಲಿ ನಿರಶನನಾಗದ್ದು, ಆ ಕುಂಡಿಕಾತೀರ್ಥದಲ್ಲಿ ಸ್ನಾನಮಾಡುತ್ತಾನೆಯೋ, ಆ ಮನುಜನು ಆ ತೀರ್ಥದಲ್ಲಿ ಮಿಂದಾಗಲೇ ಸಿದ್ಧಿಯನ್ನು ಹೊಂದುತ್ತಾನೆ.

೨೭–೩೦. ಆ ಮಾನವನು ಸಕಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ, ಬ್ರಹ್ಮಲೋಕದಲ್ಲಿ (ಸತ್ಯಲೋಕದಲ್ಲಿ) ಮಾನಿತನಾಗುತ್ತಾನೆ. ಈ ಕುಂಡಿಕಾತೀರ್ಥದಿಂದ ಉತ್ತರಕ್ಕೂ, ಪಿಂಡಾಖ್ಯಾನದಿಂದ ದಕ್ಷಿಣಕ್ಕೂ ನಡುವೆ ಋಣಮೋಚನವೆಂಬ ತೀರ್ಥವಿರುವುದು. ಇದು ತೀರ್ಥಗಳಲ್ಲಿ ಉತ್ತಮವೂ, ರಹಸ್ಯವೂ, ಆದ ತೀರ್ಥವು ಅಗಿರುವುದು. ಯಾವ ಮಾನವನು ಮೂರು ರಾತ್ರಿ ಅಲ್ಲಿ ವಾಸ ಮಾಡಿ, ಸ್ನಾನವನ್ನಾಚರಿಸುವನೋ, ಅವನು ಪಿತೃಋಣ, ದೇವಋಣ, ಋಷಿಋಣಗಳೆಂಬ ಮೂರು ಋಣಗಳಿಂದ ಬಿಡುಗಡೆಯನ್ನು ಹೊಂದುವನು. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವು. ಯಾವ ಮಾನವನು ಪಿಂಡಸ್ಥಾನಗಳಲ್ಲಿ ಪಿತೃಗಳನ್ನುದ್ದೇಶಿಸಿ, ಶ್ರಾದ್ಧಕರ್ಮಗಳನ್ನನುಷ್ಠಿಸಿ, ಶಾಸ್ತ್ರನಿಯಮ

ಪಿತೄನುದ್ದಿಶ್ಯ ವಿಧಿವತ್ಪಿಂಡಾನ್ನಿರ್ವಾಪಯಿಷ್ಯತಿ ।
ಸುತೃಪ್ತಾಃ ಪಿತರೋ ಯಾಂತಿ ಪಿತೃಲೋಕಂ ನ ಸಂಶಯಃ ॥ ೩೦ ॥

ಪಂಚರಾತ್ರೋಷಿತಃ ಸ್ನಾಯೀ ತೀರ್ಥೇ ವೈ ಪಾಪಮೋಚನೇ ।
ಸರ್ವಪಾಪಕ್ಷಯಂ ಪ್ರಾಪ್ಯ ವಿಷ್ಣುಲೋಕೇ ಸ ಮೋದತೇ ॥ ೩೧ ॥

ತತ್ರೈವ ಮಹತೀಂ ಧಾರಾಂ ಶಿರಸಾ ಯಸ್ತು ಧಾರಯೇತ್ ।
ಸರ್ವಕ್ರತುಫಲಂ ಪ್ರಾಪ್ಯ ನಾಕಪೃಷ್ಠೇ ಮಹೀಯತೇ ॥ ೩೨ ॥

ಧನುಃ ಪಾತೇ ಮಹಾತೀರ್ಥೇ ಭಕ್ತ್ಯಾ ಯಃ ಸ್ನಾನಮಾಚರೇತ್ ।
ಆಯುರಾರೋಗ್ಯಫಲಂ ಪ್ರಾಪ್ಯ ಸ್ವರ್ಗಲೋಕೇ ಮಹೀಯತೇ ॥ ೩೩ ॥

ವನ್ನನುಸರಿಸಿ, ಪಿತೃಗಳಿಗಾಗಿ ಪಿಂಡವನ್ನು ಇಡುವನೋ, ಅವನ ಪಿತೃಗಳು ಕಡು ಸಂತಸಗೊಂಡವರಾಗಿ, ಪಿತೃಲೋಕಕ್ಕೆ ಹೋಗುವರು. ಈ ವಿಷಯದಲ್ಲಿ ಸಂದೇಹವಿಲ್ಲವು.

೩೧. ಪಾಪಮೋಚನವೆಂಬ ತೀರ್ಥದಲ್ಲಿ ಐದುರಾತ್ರಿಗಳಿದ್ದು, ಸ್ನಾನ ಮಾಡುವವನು ಸಕಲ ಪಾಪಗಳನ್ನೂ ಕಳೆದುಕೊಂಡು ಶ್ರೀ ಮಹಾವಿಷ್ಣುಲೋಕದಲ್ಲಿ ಮಾನ್ಯನಾಗುತ್ತಾನೆ.

೩೨. ಅಲ್ಲಿಯೇ ಯಾವನು ಹಿರಿದಾದ ಧಾರೆಯನ್ನು ತಲೆಯಿಂದ ಧರಿಸುತ್ತಾನೆಯೋ (ಎಂದರೆ ಧಾರೆಯ ಕೆಳಗೆ ಕುಳಿತು ಸ್ನಾನಮಾಡುತ್ತಾನೆಯೋ), ಅವನು ಸಕಲ ಯಜ್ಞಾನುಷ್ಠಾನದ ಫಲವನ್ನು ಹೊಂದಿ ಸುರಾಲಯದಲ್ಲಿ ಮಾನಿತನಾಗುತ್ತಾನೆ.

೩೩. ಯಾವಾತನು ಧನುಃಪಾತವೆಂಬ ಶ್ರೇಷ್ಠವಾದ ತೀರ್ಥದಲ್ಲಿ ಭಕ್ತಿಯಿಂದ ಕೂಡಿ ಮಿಂದುತ್ತಾನೆಯೋ, ಅವನು ಆಯುಸ್ಸಂಟಾಗುವರ ಫಲವನ್ನು (ಐಹಿಕಸುಖಗಳನ್ನು) ಹೊಂದಿ, ಸ್ವರ್ಗಲೋಕದಲ್ಲಿ ಮಾನ್ಯನಾಗುತ್ತಾನೆ.

ಶರಬಿಂದೌ ನರಃ ಸ್ನಾತ್ವಾ ಶತಕ್ರತುಪುರಂ ವ್ರಜೇತ್ ।
ವಾರಾಹ ತೀರ್ಥೇ ವಿಪ್ರೇಂದ್ರ ಸಹ್ಯೇ ಯಃ ಸ್ನಾನಮಾಚರೇತ್ ॥ ೩೪ ॥

ಅಹೋರಾತ್ರೋಷಿತೋ ಭೂತ್ವಾ ವಿಷ್ಣುಲೋಕೇ ಮಹೀಯತೇ ।
ಆಕಾಶಗಂಗಾನಾಮ್ನಾ ಚ ಸಹ್ಯಾಗ್ರೇ ತೀರ್ಥಮುತ್ತಮಮ್ ॥ ೩೫ ॥

ಶಿಲಾತಲಾತ್ತತೋ ಬ್ರಹ್ಮನ್ನಿರ್ಗತಾ ಶ್ವೇತಮೃತ್ತಿಕಾ ।
ತಸ್ಯಾಂ ಭಕ್ತ್ಯಾ ತು ಯಃ ಸ್ನಾತಿ ನರೋ ದ್ವಿಜವರೋತ್ತಮಃ ॥ ೩೬ ॥

ಸರ್ವಕ್ರತುಫಲಂ ಪ್ರಾಪ್ಯ ವಿಷ್ಣುಲೋಕೇ ಮಹೀಯತೇ ।
ಬ್ರಹ್ಮನ್ನಮಲಸಹ್ಯಾದ್ರೇರ್ಯದ್ಯತ್ತ್ರೋಯವಿನಿರ್ಗಮಮ್ ॥ ೩೭ ॥

೩೪-೩೫. ಮಾನವನು ಶರಬಿಂದು ತೀರ್ಥದಲ್ಲಿ ಸ್ನಾನಮಾಡಿ, ನೂರು ಅಶ್ವಮೇಧಯಾಗವನ್ನೆಸಗಿದ ದೇವೇಂದ್ರನ ಅಮರಾವತಿಯನ್ನು ಹೊಂದುವನು. ಎಲೈ ಬ್ರಾಹ್ಮಣಶ್ರೇಷ್ಠನಾದ ಭರದ್ವಾಜನೇ ! ಸಹ್ಯಪರ್ವತದ ವಾರಾಹತೀರ್ಥ ದಲ್ಲಿ ಯಾವನು ಹಗಲಿರುಳಿದ್ದು ಸ್ನಾನವನ್ನು ಮಾಡುತ್ತಾನೆಯೋ, ಅವನು ಶ್ರೀ ಮಹಾವಿಷ್ಣುವಿನ ಲೋಕದಲ್ಲಿ ಮಾನ್ಯನಾಗುತ್ತಾನೆ. ಸಹ್ಯಪರ್ವತದ ತುದಿಯಲ್ಲಿ ಆಕಾಶಗಂಗೆಯೆಂಬ ಹೆಸರಿನಿಂದ ಶ್ರೇಷ್ಠವಾದ ತೀರ್ಥವಿರುವುದು.

೩೬-೩೭. ಎಲೈ ಬ್ರಾಹ್ಮಣರಲ್ಲಿ ಅತ್ಯಂತ ಶ್ರೇಷ್ಠನಾದ ಬ್ರಹ್ಮಜ್ಞಾನಿಯಾದ ಭರದ್ವಾಜನೇ ! ಕೇಳು ; ಆ ಬಂಡೆಯೆಡೆಯಿಂದ ಬಿಳಿಯಮಣ್ಣು ಹೊರಟಿದೆ. ಆ ಆಕಾಶಗಂಗಾತೀರ್ಥದಲ್ಲಿ ಯಾವ ನರನು ಭಕ್ತಿಯಿಂದ ಸ್ನಾನವನ್ನು ಮಾಡುತ್ತಾನೆಯೋ, ಅವನು ಸಕಲ ಯಾಗಾನುಷ್ಠಾನದ ಪುಣ್ಯವನ್ನು ಹೊಂದಿ,

ತತ್ರ ತೀರ್ಥಂ ವಿಜಾನೀಹಿ ಸ್ನಾತ್ವಾ ಪಾಪಾತ್ಪ್ರಮುಚ್ಯತೇ ।
ಸಹ್ಯಾದ್ರಿಂ ಗತವಾನ್ನಿತ್ಯಂ ಸ್ನಾತ್ವಾ ಪಾಪಾತ್ಪ್ರಮುಚ್ಯತೇ ॥ ೩೮ ॥

ಏತೇಷು ತೀರ್ಥೇಷು ನರೋ ನರೇಂದ್ರಂ
ಪುಣ್ಯೇಷು ಸಹ್ಯಾದ್ರಿಸಮುದ್ಭವೇಷು ।
ದತ್ವಾ ಸುಪುಷ್ಪಾಣಿ ಹರಿಂ ಸುಭಕ್ತ್ಯಾ
ವಿಹಾಯ ಪಾಪಂ ಪ್ರವಿಶೇತ್ಸ ವಿಷ್ಣುಮ್ ॥ ೩೯ ॥

ಸಕೃತ್ತೀರ್ಥಾದಿತೋಯೇಷು ಗಂಗಾಯಾಂ ತು ಪುನಃ ಪುನಃ ।
ಸರ್ವತೀರ್ಥಮಯೀ ಗಂಗಾ ಸರ್ವದೇವಮಯೋ ಹರಿಃ ॥ ೪೦ ॥

ಮಹಾವಿಷ್ಣುವಿನ ಲೋಕದಲ್ಲಿ ಮಾನ್ಯನಾಗುತ್ತಾನೆ. ಇಷ್ಟೇಕೆ ? ಎಲೈ ಬ್ರಾಹ್ಮಣನೇ ! ಪವಿತ್ರವಾದ ಸಹ್ಯಪರ್ವತದಿಂದ ಯಾವ ಯಾವ ಪ್ರವಾಹವು ಹೊರಡುವುದೋ, ಅಲ್ಲೆಲ್ಲಾ ತೀರ್ಥವಿರುವುದೆಂದು ತಿಳಿಯುವವನಾಗು ; ಆ ತೀರ್ಥಗಳಲ್ಲಿ ಸ್ನಾನ ಮಾಡಿ, ಮಾನವನು ಎಲ್ಲಾ ಪಾಪಗಳಿಂದ ಮುಕ್ತನಾಗಿ ಶುದ್ಧನಾಗುತ್ತಾನೆ.

೩೯. ಸಹ್ಯಾದ್ರಿಯಲ್ಲಿ ಹುಟ್ಟಿದ, ಪುಣ್ಯಪ್ರದವಾದ ಈ ತೀರ್ಥಗಳಲ್ಲಿ ಯಾವ ಮಾನವನು ನಿರತಿಶಯವಾದ ಭಕ್ತಿಯಿಂದ ಪುರುಷೋತ್ತಮನಾದ ಶ್ರೀಹರಿಗೆ ಉತ್ತಮಗಳಾದ ಹೂಗಳನ್ನು ಸಮರ್ಪಿಸು (ಪೂಜಿಸು) ವನೊ, ಅವನು ತನ್ನ ಅನಿಷ್ಟಗಳನ್ನೆಲ್ಲಾ ಕಳೆದುಕೊಂಡು, ಶುದ್ಧನಾಗಿ ಶ್ರೀಮಹಾವಿಷ್ಣುವನ್ನು ಪ್ರವೇಶಿಸುವನು. (ಸಾಯುಜ್ಯರೂಪವಾದ ಮುಕ್ತಿಯನ್ನು ಪಡೆಯುವನು.)

೪೦–೪೧. ತೀರ್ಥೋದಕಗಳಲ್ಲಿ ಒಮ್ಮೆಯೂ, ಗಂಗೆಯಲ್ಲಿ ಪದೇ ಪದೇ ಮಾನವನು ಸ್ನಾನಮಾಡುವುದು. ಗಂಗೆಯು ಎಲ್ಲಾ ತೀರ್ಥಗಳ ಸನ್ನಿಧಾನವುಳ್ಳುದು. ಶ್ರೀ ಹರಿಯು ಸಕಲ ದೇವತೆಗಳ ಸನ್ನಿಧಾನವುಳ್ಳವನು. ಗೀತೆಯು (ಭಾರತದ ಭೀಷ್ಮಪರ್ವದ ಶ್ರೀಕೃಷ್ಣಾರ್ಜುನ ಸಂವಾದರೂಪಗ್ರಂಥಸಂದರ್ಭವು)

ಸರ್ವಶಾಸ್ತ್ರಮಯೀ ಗೀತಾ ಸರ್ವಧರ್ಮೋ ದಯಾಪರಃ ।
ಏವಂ ತೇ ಕಥಿತಂ ವಿಪ್ರ ಕ್ಷೇತ್ರಮಾಹಾತ್ಮ್ಯಮುತ್ತಮಮ್ ॥ ೪೧ ॥

ಶ್ರೀ ಸಹ್ಯಾಮಲಕಗ್ರಾಮೇ ತೀರ್ಥೇ ಸ್ನಾತ್ವಾ ಫಲಾನಿ ಚ ।
ತೀರ್ಥಾನಾಮಪಿ ಯತ್ತೀರ್ಥಂ ತತ್ತೀರ್ಥಂ ದ್ವಿಜಸತ್ತಮ ॥ ೪೨ ॥

ದೇವದೇವಸ್ಯ ಪಾದಸ್ಯ ತಲಾದ್ಭುವಿ ವಿನಿಃಸೃತಮ್ ॥ ೪೩ ॥

ಅಂಭೋಯುಗಂ ತುರಗಮೇಧಸಹಸ್ರತುಲ್ಯಂ
ತಚ್ಚಕ್ರತೀರ್ಥಮಿತಿ ವೇದವಿದೋ ವದಂತಿ ।

ಸಕಲಶಾಸ್ತ್ರಗಳ ಪ್ರಮೇಯಗಳನ್ನೊಳಗೊಂಡುದು. ಕರುಣೆಯುಳ್ಳವನು (ಇತರರ ದುಃಖವನ್ನು ಹೋಗಲಾಡಿಸುವ ಇಚ್ಛೆಯುಳ್ಳವನು) ಸರ್ವಧರ್ಮಾನುಷ್ಠಾನಪರನಾದಂತೆಯೇ ಸರಿ; ಎಲೈ ಬ್ರಾಹ್ಮಣನಾದ ಭರದ್ವಾಜನೇ ! ಇಂತು ನಿನಗೆ ಶ್ರೇಷ್ಠವಾದ ಸಹ್ಯಾಮಲಕ ಕ್ಷೇತ್ರದ ಮಹಿಮೆಯನ್ನು ನಿರೂಪಿಸಿದೆನು.

೪೨–೪೩. ಎಲೈ ಬ್ರಾಹ್ಮಣಶ್ರೇಷ್ಠನೇ ! ಶ್ರೀ ಸಹ್ಯಾಮಲಕಗ್ರಾಮದಲ್ಲಿ ತೀರ್ಥಗಳಲ್ಲಿ ಸ್ನಾನಮಾಡುವುದರಿಂದ ಲಭಿಸುವ ಫಲಗಳನ್ನೂ, ತೀರ್ಥಗಳಲ್ಲಿ ಉತ್ತಮವಾದ ಯಾವ ತೀರ್ಥವಿರುವುದೋ, ಅದೇ ಸಕಲ ಪಾಪಗಳನ್ನೂ ಕಳೆದು, ತನ್ನಲ್ಲಿ ಮಿಂದವನನ್ನು ಪರಿಶುದ್ಧನನ್ನಾಗಿ ಮಾಡುವ ತೀರ್ಥವೆಂಬುದನ್ನೂ ನಿನಗೆ ತಿಳಿಸಿದೆನು. ಆ ತೀರ್ಥವು ದೇವಶ್ರೇಷ್ಠನಾದ ಶ್ರೀ ಹರಿಯ ಪಾದಪ್ರದೇಶದಿಂದ ಭೂಮಿಯಲ್ಲಿ ಹರಿದುದು ಆಗಿರುವುದು.

೪೪. ಶಂಖಚಕ್ರತೀರ್ಥಗಳೆರಡರ ಉದಕವು ಸಾಸಿರ ಅಶ್ವಮೇಧಯಾಗದ ಅನುಷ್ಠಾನದ ಪುಣ್ಯಕ್ಕೆಣೆಯಾದ ಪುಣ್ಯವನ್ನು ಕೊಡುವುದು. ವೇದಜ್ಞರು

ಸ್ನಾನಾಚ್ಚ ತತ್ರ ಮನುಜಾ ನ ಪುನರ್ಭವಂತಿ
ಪಾದೌ ಪ್ರಣಮ್ಯ ಶಿರಸಾ ಮಧುಸೂದನಸ್ಯ ॥ ೪೪ ॥

ಗಂಗಾಪ್ರಯಾಗಗಮನೈಮಿಷಪುಷ್ಕರಾಣಿ
ಪುಣ್ಯಾಯನಾನಿ ಕುರುಜಾಂಗಲಯಾಮುನಾನಿ ।
ಕಾಲೇನ ತೀರ್ಥ ಸಲಿಲಾನಿ ಪುನಂತಿ ಪಾಪಾನ್
ಪಾದೋದಕಂ ಭಗವತಸ್ತು ಪುನಾತಿ ಸದ್ಯಃ ॥ ೪೫ ॥

ಇತಿ ಶ್ರೀ ನರಸಿಂಹಪುರಾಣೇ ತೀರ್ಥಪ್ರಶಂಸಾ ನಿರೂಪಣಂ
ನಾಮ ಷಟ್‌ಷಷ್ಟಿತಮೋಽಧ್ಯಾಯಃ

ಅದನ್ನು ಚಕ್ರತೀರ್ಥವೆಂದು ಹೇಳುತ್ತಾರೆ. ಶ್ರೀ ಮಧುಸೂದನನ ಪಾದಗಳಿಗೆ ತಲೆಮುಟ್ಟಿ ನಮಸ್ಕರಿಸಿ, ಆ ಚಕ್ರತೀರ್ಥದಲ್ಲಿ ಸ್ನಾನಮಾಡುವುದರಿಂದ ಮಾನವರು ಪುನರ್ಜನ್ಮರಹಿತರಾಗುತ್ತಾರೆ. (ಎಂದರೆ ಮುಕ್ತರಾಗುತ್ತಾರೆ)

೪೫. ಗಂಗೆ, ಪ್ರಯಾಗಕ್ಷೇತ್ರ, ನೈಮಿಷಕ್ಷೇತ್ರ, ಪುಷ್ಕರ ಕ್ಷೇತ್ರ, ಕುರುಜಾಂಗಲದೇಶ, ಯಮುನಾನದಿ-ಇವು ಅನೇಕವರ್ಷಗಳಿಂದ ಪುಣ್ಯಗಳನ್ನುಂಟು ಮಾಡತಕ್ಕುವು. ತೀರ್ಥೋದಕಗಳೂ ಅಂತೆಯೇ ಅನೇಕ ವರ್ಷಗಳ ಸೇವೆಯಿಂದ ಪಾಪಗಳನ್ನು ಕಳೆದು, ಶುದ್ಧಿಯನ್ನೀಯುತ್ತವೆ. ಶ್ರೀ ಭಗವಂತನಾದ ಹರಿಯ ಪಾದೋದಕವಾದರೋ, ತತ್ಕ್ಷಣವಲ್ಲಿಯೇ (ಸೇವಿಸಿದ ಕೂಡಲೇ) ಪಾಪಗಳನ್ನು ನಾಶಮಾಡಿ, ಪರಿಶುದ್ಧಿಯನ್ನುಂಟುಮಾಡುತ್ತದೆ ; ' ಎಂದು ಸೂತರು ಭರದ್ವಾಜಾದಿಗಳಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ತೀರ್ಥಪ್ರಶಂಸಾ ನಿರೂಪಣವೆಂಬ
ಅರುವತ್ತಾರನೆಯ ಅಧ್ಯಾಯವು ಮುಗಿದುದು.

ಅರುವತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ' ಭರದ್ವಾಜನ ಅಪೇಕ್ಷೆಯಂತೆ ಸೂತರು ಸಹ್ಯಾಮಲಕ ಕ್ಷೇತ್ರದಲ್ಲಿ ಶ್ರೀಮನ್ನಾರಾಯಣನು ಚತುರ್ಮುಖನಿಂದ ಸೇವೆಗೊಂಡುದನ್ನು ಹೇಳಲುಪಕ್ರಮಿಸಿ, ಸಹ್ಯಪರ್ವತದಲ್ಲಿರುವ ಆಮಲಕ ವೃಕ್ಷದಲ್ಲಿ ಭಗವಂತನು ಪ್ರವೇಶಿಸಿ, ಹನ್ನೆರಡು ತೀರ್ಥಗಳು ಜನಿಸುವಂತೆ ಮಾಡಿರುವನು. ಅವುಗಳಲ್ಲಿ ಮುಖ್ಯವಾದುವು ಶಂಖಚಕ್ರತೀರ್ಥಗಳು; ಇವುಗಳಲ್ಲಿ ಸ್ನಾನಮಾಡಿದವನು ಸಕಲ ಪಾಪಗಳನ್ನೂ ಕಳೆದುಕೊಂಡು, ಶುದ್ಧನಾಗಿ ಮುಕ್ತಿಪಡೆಯುತ್ತಾನೆ.

ಲೋಕದಲ್ಲಿ ಗಂಗಾದಿತೀರ್ಥಗಳು ಅನೇಕ ಸಂವತ್ಸರಗಳು ತಮ್ಮನ್ನು ಸೇವಿಸಿದ ಮೇಲೆ ಪರಿಶುದ್ಧಿಯನ್ನುಂಟುಮಾಡುವುವು. ಶ್ರೀ ವಿಷ್ಣುಪಾದೋದಕವಾದರೋ, ಸದ್ಯಃ ಪುನೀತರನ್ನಾಗಿ ಮಾಡಿ, ಪುನರ್ಜನ್ಮವಿಲ್ಲದಂತೆಸಗುವುದು;' ಎಂದು ಸಹ್ಯಾಮಲಕ ತೀರ್ಥದ ಪ್ರಭಾವವನ್ನು ನಿರೂಪಿಸಿರುತ್ತಾರೆ.

ಇಂತು ಅರುವತ್ತಾರನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀ ನೃಸಿಂಹಾಯ್ನಮಃ

ಶ್ರೀ ನರಸಿಂಹ ಪುರಾಣಮ್

ಮಂತ್ರತೀರ್ಥ ಮಹಿಮಾದಿ ವರ್ಣನಮ್.

ಅಥ ಸಪ್ತಷಷ್ಟಿತಮೋಽಧ್ಯಾಯಃ

ಅಥ ಮಾನಸತೀರ್ಥವ್ರತ ನಿರೂಪಣಮ್.

॥ ಸೂತ ಉವಾಚ ॥

ತೀರ್ಥಾನಿ ಕಥಿತಾನ್ಯೇವಂ ಭೌಮಾನಿ ದ್ವಿಜಸತ್ತಮ ।
ಮಾನಸಾನಿ ಹಿ ತೀರ್ಥಾನಿ ಫಲದಾನಿ ವಿಶೇಷತಃ ॥ ೧ ॥

ಅರುವತ್ತೇಳನೆಯ ಅಧ್ಯಾಯವು

ಮಾನಸತೀರ್ಥವ್ರತನಿರೂಪಣವು

ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ :—

೧. 'ಕೇಳು ಭರದ್ವಾಜ! ಇಂತು ಭೂಲೋಕದಲ್ಲಿರುವ, ಪಾಪಗಳನ್ನು ಕಳೆಯುವ ತೀರ್ಥಗಳನ್ನು ಅರುಹಿದೆನು. ಆದರೆ ಮಾನಸವಾದ (ಮನಸ್ಸಂಬಂಧಿಯಾದ) ತೀರ್ಥಗಳೇ ಹೆಚ್ಚಿನ ಫಲಗಳನ್ನುಂಟುಮಾಡುವುವು.

ಮನೋನಿರ್ಮಲತಾ ತೀರ್ಥಂ ರಾಗಾದಿಭಿರನಾಕುಲಮ್ ।
ಸತ್ಯಂ ತೀರ್ಥಂ ದಯಾ ತೀರ್ಥಂ ತೀರ್ಥಮಿಂದ್ರಿಯನಿಗ್ರಹಃ ॥ ೨ ॥

ಗುರುಶುಶ್ರೂಷಣಂ ತೀರ್ಥಂ ಮಾತೃಶುಶ್ರೂಷಣಂ ತಥಾ ।
ಸ್ವಧರ್ಮಾಚರಣಂ ತೀರ್ಥಂ ತೀರ್ಥಮಗ್ನೇರುಪಾಸನಮ್ ॥ ೩ ॥

ಏತಾನಿ ಪುಣ್ಯತೀರ್ಥಾನಿ ವ್ರತಾನಿ ಶೃಣು ಮೇಽಧುನಾ ।
ಏಕಭುಕ್ತಂ ತಥಾ ನಕ್ತಮುಪವಾಸಂ ಚ ವೈ ಮುನೇ ॥ ೪ ॥

ಪೌರ್ಣಮಾಸ್ಯಾಮಮಾವಾಸ್ಯಾಮೇಕಭುಕ್ತಂ ಸಮಾಚರೇತ್ ।
ತತ್ರೈಕಭುಕ್ತಂ ಕುರ್ವಾಣಃ ಪುಣ್ಯಾಂ ಗತಿಮವಾಪ್ನುಯಾತ್ ॥ ೫ ॥

---

೨. ವಿಷಯಾಭಿಲಾಷೆಯೇ ಮೊದಲಾದುವುಗಳಿಂದ ಬಾಧೆಗೊಳ್ಳದ ಮನೋನೈರ್ಮಲ್ಯವು ತೀರ್ಥವು; ಸತ್ಯವು (ದಿಟವನ್ನಾಡುವುದು, ಸಜ್ಜನರಿಗೆ ಹಿತವನ್ನೆಸಗುವುದು,) ತೀರ್ಥವು; ದಯೆಯು (ಇತರರ ದುಃಖವನ್ನು ಹೋಗಲಾಡಿಸುವ ಇಚ್ಛೆ) ತೀರ್ಥವು; ಕಣ್ಣೇ ಮೊದಲಾದ ಇಂದ್ರಿಯಗಳನ್ನು ಜಯಿಸುವುದು (ವಶದಲ್ಲಿಟ್ಟುಕೊಳ್ಳುವುದು) ತೀರ್ಥವು;

೩. ಗುರು (ತತ್ತ್ವೋಪದೇಶಕರು) ಗಳನ್ನು ಸೇವಿಸುವುದು ತೀರ್ಥವು; ಹಾಗೆಯೇ ತಾಯಿಯ ಸೇವೆಯು ತೀರ್ಥವು; ತನ್ನ ವರ್ಣಾಶ್ರಮೋಚಿತವಾದ ಧರ್ಮವನ್ನು ಆಚರಿಸುವುದು ತೀರ್ಥವು; ಅಗ್ನಿಯ ಉಪಾಸನೆಯು (ಸೇವನೆಯು) ತೀರ್ಥವು.

೪. ಇದುವರೆಗೆ ಹೇಳಿದುವು ಮಾನಸವಾದ ಪುಣ್ಯತೀರ್ಥಗಳು. ಈಗ ನಿಯಮಗಳನ್ನು ಹೇಳುವೆನು ಕೇಳು; ಭರದ್ವಾಜ! ಒಪ್ಪೊತ್ತು ಊಟಮಾಡುವುದು; ರಾತ್ರಿಯಲ್ಲಿ ಉಪವಾಸ (ಊಟಮಾಡದೆ ದೇವರ ಸಮೀಪದಲ್ಲಿ ವಾಸ) ಮಾಡುವುದು.

೫. ಹುಣ್ಣಿಮೆಯ ದಿನದಲ್ಲಿಯೂ, ಅಮಾವಾಸ್ಯೆಯಲ್ಲಿಯೂ ಒಂದೇ ಹೊತ್ತು ಊಟಮಾಡುವುದು; ಇಂತು ಆ ದಿನಗಳಲ್ಲಿ ಒಂದೂಟವನ್ನೆಸಗುವವನು ಸದ್ಗತಿಯನ್ನೆಯ್ದುವನು.

ಚತುರ್ಥ್ಯಾಂ ತು ಚತುರ್ದಶ್ಯಾಂ ಸಪ್ತಮ್ಯಾಂ ನಕ್ತಮಾಚರೇತ್ ।
ಅಷ್ಟಮ್ಯಾಂ ತು ತ್ರಯೋದಶ್ಯಾಂ ಸ ಪ್ರಾಪ್ನೋತ್ಯಭಿವಾಂಛಿತಮ್ ॥ ೬ ॥

ಉಪವಾಸೋ ಮುನಿಶ್ರೇಷ್ಠ ಏಕಾದಶ್ಯಾಂ ವಿಧೀಯತೇ ।
ನರಸಿಂಹಂ ಸಮಭ್ಯರ್ಚ್ಯ ಸರ್ವಪಾಪೈಃ ಪ್ರಮುಚ್ಯತೇ ॥ ೭ ॥

ಹಸ್ತಯುಕ್ತೇಽರ್ಕದಿವಸೇ ಸೌರನಕ್ತಂ ಸಮಾಚರೇತ್ ।
ಸ್ನಾತ್ವಾರ್ಕಮಧ್ಯೇ ವಿಷ್ಣುಂ ಚ ಧ್ಯಾತ್ವಾ ರೋಗಾತ್ಪ್ರಮುಚ್ಯತೇ ॥ ೮ ॥

ಆತ್ಮನೋ ದ್ವಿಗುಣಾಂ ಛಾಯಾಂ ಯದಾ ಸಂತಿಷ್ಠತೇ ರವಿಃ ।
ಸೌರನಕ್ತಂ ವಿಜಾನೀಯಾನ್ನ ನಕ್ತಂ ನಿಶಿ ಭೋಜನಮ್ ॥ ೯ ॥

---

೬. ಚತುರ್ಥೀ ತಿಥಿಯಲ್ಲಿಯೂ, ಚತುರ್ದಶೀ ತಿಥಿಯಲ್ಲಿಯೂ, ಅಷ್ಟಮೀ ತಿಥಿಯಲ್ಲಿಯೂ ರಾತ್ರಿಭೋಜನವನ್ನು ಮಾತ್ರ ಮಾಡುವುದು. ಇಂತು ಆಚರಿಸುವವನು ತನ್ನ ಇಷ್ಟಾರ್ಥವನ್ನು ಪಡೆಯುವನು.

೭. ಎಲೈ ಮುನಿಶ್ರೇಷ್ಠನೇ! ಕೇಳು; ಏಕಾದಶೀತಿಥಿಯಲ್ಲಿ ಅನಶನರೂಪವಾದ ಉಪವಾಸವು ಶಾಸ್ತ್ರಗಳಲ್ಲಿ ಹೇಳಿರುತ್ತದೆ ಶ್ರೀ ನರಸಿಂಹಸ್ವಾಮಿಯನ್ನು ಆ ದಿವಸ ಅನಶನವ್ರತದಿಂದ ಪೂಜಿಸಿ, ಅಧಿಕಾರಿಯು ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. (ಶುದ್ಧನಾಗುತ್ತಾನೆ.)

೮. ಹಸ್ತನಕ್ಷತ್ರದಿಂದ ಕೂಡಿದ ಭಾನುವಾಸರದಲ್ಲಿ ಸೌರನಕ್ತವೆಂಬ ವ್ರತವನ್ನಾಚರಿಸುವುದು. ಆ ದಿವಸ ವ್ರತಿಯು ಸ್ನಾನಮಾಡಿ, ಸೂರ್ಯಬಿಂಬದ ಮಧ್ಯದಲ್ಲಿರುವ ಶ್ರೀ ಮಹಾವಿಷ್ಣುವನ್ನು ಧ್ಯಾನಮಾಡಿ, ರೋಗದಿಂದ ಮುಕ್ತನಾಗುತ್ತಾನೆ.

೯. ಸೂರ್ಯನು ಯಾವಾಗ ನಮಗೆರಡರಷ್ಟು ನೆಳಲನ್ನೀಸಗುತ್ತಾ ನಿಲ್ಲುತ್ತಾನೆಯೋ, ಆಗ ಆ ಹೊತ್ತನ್ನು ಸೌರನಕ್ತವೆನ್ನುತ್ತಾರೆ; ರಾತ್ರಿಯಲ್ಲವು; ಈ ವ್ರತವನ್ನಾಚರಿಸುವವರು ಹಗಲು ಊಟಮಾಡದೆ, ರಾತ್ರಿಯಲ್ಲಿ ಭೋಜನವನ್ನು ಮಾಡುವುದು.

ಗುರುವಾರೇ ತ್ರಯೋದಶ್ಯಾಮಪರಾಹ್ಣೇ ಜಲೇ ತತಃ ।
ತರ್ಪಯಿತ್ವಾ ಋಷೀಂಶ್ಚಾಥ ಪಿತೄನ್ದೇವಾಂಸ್ತಿಲ ತಂಡುಲೈಃ ॥ ೧೦ ॥

ನರಸಿಂಹಂ ಸಮಭ್ಯರ್ಚ್ಯ ಯಃ ಕರೋತ್ಯುಪವಾಸಕಮ್ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೧೧ ॥

ಯದಾಗಸ್ತ್ಯೋದಯೋ ಪ್ರಾಪ್ತೇ ತದಾ ಸಪ್ತಸು ರಾತ್ರಿಷು ।
ಅರ್ಘ್ಯಂ ದದ್ಯಾತ್ಸಮಭ್ಯರ್ಚ್ಯ ಅಗಸ್ತ್ಯಾಯ ಮಹಾಮುನೇ ॥ ೧೨ ॥

ಶಂಖೇ ತೋಯಂ ವಿನಿಕ್ಷಿಪ್ಯ ಶಿತಪುಷ್ಪಾಕ್ಷತೈರ್ಯುತಮ್ ।
ಮಂತ್ರೇಣಾನೇನ ವೈ ದದ್ಯಾಚ್ಛಿತಪುಷ್ಪಾದಿನಾರ್ಚಿತಮ್ ॥ ೧೩ ॥

೧೦-೧೧. ತ್ರಯೋದಶೀ ತಿಥಿ ಗುರುವಾರವಾಗಿರುವಲ್ಲಿ ಅಪರಾಹ್ಣಕಾಲದಲ್ಲಿ ಎಳ್ಳು, ಅಕ್ಕಿ-ಇವುಗಳಿಂದ ಋಷಿಗಳು, ಪಿತೃಗಳು, ಮತ್ತು ದೇವತೆಗಳು ಇವರುಗಳಿಗೆ ತರ್ಪಣವನ್ನು ಕೊಟ್ಟು, ಶ್ರೀನರಸಿಂಹದೇವನನ್ನು ಪೂಜಿಸಿ, ಯಾವನು ಉಪವಾಸವನ್ನು ಮಾಡುತ್ತಾನೆಯೋ, ಅವನು ಎಲ್ಲ ಪಾಪಗಳಿಂದ ಮುಕ್ತನಾಗಿ, ಶ್ರೀ ಮಹಾವಿಷ್ಣುವಿನ ವೈಕುಂಠಾದಿ ಲೋಕಗಳಲ್ಲಿ ಮಾನ್ಯನಾಗುತ್ತಾನೆ.

೧೨. ಯಾವಾಗ ಅಗಸ್ತ್ಯನಕ್ಷತ್ರೋದಯವಾಗುತ್ತದೆಯೋ, ಆಗ ಎಲೈ ಮುನಿಯೇ ! ಏಳು ರಾತ್ರಿಗಳಲ್ಲಿ ಅಗಸ್ತ್ಯಮಹಾಮುನಿಯನ್ನು ಪೂಜಿಸಿ, ಅರ್ಘ್ಯವನ್ನು ಕೊಡುವುದು.

೧೩. ಶಂಖದಲ್ಲಿ ಬಿಳಿಯ ಹೂ, ಸೇಸೆಗಳಿಂದ ಕೂಡಿದ ನೀರನ್ನು ತುಂಬಿ, ಬಿಳಿಯ ಹೂ ಮುಂತಾದುವುಗಳಿಂದ ಸೇವಿತನಾದ ಅಗಸ್ತ್ಯನಿಗೆ ಈ ಮುಂದಿನ ಮಂತ್ರದಿಂದ ಅರ್ಘ್ಯವನ್ನು ಕೊಡುವುದು.

ಕಾಶಪುಷ್ಪಪ್ರತೀಕಾಶ ಅಗ್ನಿಮಾರುತಸಂಭವ ।
ಮಿತ್ರಾವರುಣಯೋಃ ಪುತ್ರ ಕುಂಭಯೋನೇ ನಮೋಽಸ್ತು ತೇ ॥ ೧೪ ॥

ಆತಾಪೀ ಭಕ್ಷಿತೋ ಯೇನ ವಾತಾಪೀ ಚ ಮಹಾಸುರಃ ।
ಸಮುದ್ರಃ ಶೋಷಿತೋ ಯೇನ ಸೋಽಗಸ್ತ್ಯಃ ಪ್ರೀಯತಾಂ ಮಮ ॥೧೫॥

ಏವಂ ತು ದದ್ಯಾದ್ಯೋ ಽರ್ಘ್ಯಮಗಸ್ತ್ಯೇ ವೈ ದಿಶಂ ಪ್ರತಿ ।
ಸರ್ವಪಾಪವಿನಿರ್ಮುಕ್ತಸ್ತಮಸ್ತರತಿ ದುಸ್ತರಮ್ ॥ ೧೬ ॥

ಏವಂ ತೇ ಕಥಿತಂ ಸರ್ವಂ ಭಾರದ್ವಾಜ ಮಹಾಮುನೇ ।
ಪುರಾಣಂ ನಾರಸಿಂಹಂ ಚ ಮುನೀನಾಂ ಸನ್ನಿಧೌ ಮಯಾ ॥ ೧೭ ॥

---

೧೪. ಕಾಶವೆಂಬ (ವಿಶ್ವಾಮಿತ್ರದರ್ಭೆ) ಹೂವಿಗೆ ಸಮನಾದವನೇ ! ಅಗ್ನಿ ಮತ್ತು ವಾಯು-ಇವುಗಳಿಂದ ಜನಿಸಿದವನೇ ! ಮಿತ್ರ ಮತ್ತು ವರುಣ-ಇವರ ಮಗನೇ ! ಕುಂಭವೇ ಉತ್ಪತ್ತಿಸ್ಥಾನವಾಗಿರುವವನೇ ! ನಿನಗೆ ನಮಸ್ಕಾರವುಂಟಾಗಲಿ;

೧೫. ಯಾವನಿಂದ ಲೋಕಕ್ಕೆ ವಿಶೇಷವಾಗಿ ಸಂತಾಪಗೊಳಿಸುತ್ತಲಿದ್ದ ವಾತಾಪಿಯೆಂಬ ಮಹಾರಾಕ್ಷಸನು ತಿನ್ನಲ್ಪಟ್ಟನೋ, ಸಮುದ್ರವು ಶೋಷಿಸಲ್ಪಟ್ಟಿತೋ, ಆ ಅಗಸ್ತ್ಯಮುನಿಯು ನನಗೆ ಪ್ರಸನ್ನನಾಗಲಿ.

೧೬. ಯಾವನು ಈ ಮಂತ್ರವನ್ನುಚ್ಚರಿಸಿ, ದಕ್ಷಿಣದಿಙ್ಮುಖನಾಗಿ ಅರ್ಘ್ಯಾದಿಗಳೆಲ್ಲವನ್ನೂ ಅಗಸ್ತ್ಯನಲ್ಲಿ ಸಮರ್ಪಿಸುವನೋ, ಅವನು ಸಕಲ ಪಾಪಗಳಿಂದ ರಹಿತನಾಗಿ, ದಾಟಲಾಗದ ತಮವನ್ನು ದಾಟುತ್ತಾನೆ.

೧೭. ಎಲೈ ಭರದ್ವಾಜಮುನಿಯೇ ! ನಾನು ಮುನಿಗಳ ಸಮಕ್ಷದಲ್ಲಿ ನರಸಿಂಹಪುರಾಣವೆಲ್ಲವನ್ನೂ ನಿನಗೆ ಇಂತು ಹೇಳಿದೆನು.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಸರ್ವಮೇವ ಪ್ರಕೀರ್ತಿತಮ್ ॥ ೧೮ ॥

ಬ್ರಹ್ಮಣೈವ ಪುರಾ ಪ್ರೋಕ್ತಂ ಮರೀಚ್ಯಾದಿಷು ವೈ ಮುನೇ ।
ತೇಭ್ಯಶ್ಚ ಭೃಗುಣಾ ಪ್ರೋಕ್ತಂ ಮಾರ್ಕಂಡೇಯೇನ ವೈ ತತಃ ॥ ೧೯ ॥

ಮಾರ್ಕಂಡೇಯೇನ ವೈ ಪ್ರೋಕ್ತಂ ರಾಜ್ಞೋ ನಾಗಕುಲಸ್ಯ ಹ ।
ಪ್ರಸಾದಾನ್ನಾರಸಿಂಹಸ್ಯ ಪ್ರಾಪ್ತಂ ವ್ಯಾಸೇನ ಧೀಮತಾ ॥ ೨೦ ॥

ತತ್ಪ್ರಸಾದಾನ್ಮಯಾ ಪ್ರಾಪ್ತಂ ಸರ್ವಪಾಪಪ್ರಣಾಶನಮ್ ।
ಪುರಾಣಂ ನರಸಿಂಹಸ್ಯ ಮಯಾ ಚ ಕಥಿತಂ ತವ ॥ ೨೧ ॥

---

೧೮. ಜಗತ್ಸೃಷ್ಟಿ, ಪ್ರತಿಸೃಷ್ಟಿ, ರಾಜರವಂಶ, ಮನ್ವಂತರಗಳು, ವಂಶಾನುಚರಿತೆ, ಇವೆಲ್ಲವನ್ನೂ ಹೇಳಿದುದಾಯಿತು.

೧೯. ಎಲೈ ಮುನಿಯೇ! ಕೇಳು; ಪೂರ್ವದಲ್ಲಿ ಚತುರ್ಮುಖನಿಂದಲೇ ಮರೀಚಿಯೇ ಮೊದಲಾದವರಲ್ಲಿ ಈ ಪು ರಾ ಣ ಸ ಂ ಹಿ ತೆ ಯು ಹೇಳಲ್ಪಟ್ಟಿತು. ಆ ಮರೀಚ್ಯಾದಿಗಳಿಂದಲೂ, ಭೃಗುವಿನಿಂದಲೂ, ಬಳಿಕ ಮಾರ್ಕಂಡೇಯನಿಂದಲೂ ಈ ಸಂಹಿತೆಯು ಪ್ರೋಕ್ತವಾಯಿತು.

೨೦. ಮಾರ್ಕಂಡೇಯಮುನಿಯಿಂದ ಸರ್ಪರಾಜನಾದ ವಾಸುಕಿಗೆ ಹೇಳಲ್ಪಟ್ಟಿತು. ಮತ್ತು ಶ್ರೀ ನರಸಿಂಹದೇವರ ಅನುಗ್ರಹದಿಂದ ಜ್ಞಾನಿಯಾದ ವೇದವ್ಯಾಸನಿಂದ ಹೊಂದಲ್ಪಟ್ಟಿತು.

೨೧-೨೨. ಅವರ (ವೇದವ್ಯಾಸರ) ಅನುಗ್ರಹದಿಂದ ನನ್ನಿಂದ ಹೊಂದಲ್ಪಟ್ಟಿತು. ನಾನು ಸಕಲಪಾಪಗಳನ್ನೂ ಅಳಿಯಿಸುವ, ಪುಣ್ಯಪ್ರದವಾದ ಈ ಶ್ರೀ ನರಸಿಂಹಪುರಾಣವನ್ನು ನಿನಗೆ ಈ ಮುನಿಗಳ ಸಮಕ್ಷದಲ್ಲಿ ಅರುಹಿದೆನು. ನಿನಗೆ

ಮುನೀನಾಂ ಸನ್ನಿಧೌ ಪುಣ್ಯಂ ಸ್ವಸ್ತಿ ತೇಽಸ್ತು ವ್ರಜಾಮ್ಯಹಮ್ ।
ಯಃ ಶೃಣೋತಿ ಶುಚಿರ್ಭೂತ್ವಾ ಪುರಾಣಂ ಹ್ಯೇತದುತ್ತಮಮ್ ॥ ೨೨ ॥

ಮಾಘೇ ಮಾಸಿ ಪ್ರಯಾಗೇ ತು ಸ ಸ್ನಾನಫಲಮಾಪ್ನುಯಾತ್ ।
ಯೋ ಭಕ್ತ್ಯಾ ಶ್ರಾವಯೇದ್ಭಕ್ತಾನ್ನಿತ್ಯಂ ನರಹರೇರಿದಮ್ ॥ ೨೩ ॥

ಸರ್ವತೀರ್ಥಫಲಂ ಪ್ರಾಪ್ಯ ವಿಷ್ಣುಲೋಕೇ ಮಹೀಯತೇ ।
ಶ್ರುತ್ವೈವಂ ಸ್ನಾತಕೈಃ ಸಾರ್ಧಂ ಭಾರದ್ವಾಜೋ ಮಹಾಮತಿಃ ॥ ೨೪ ॥

ಸೂತಮಭ್ಯರ್ಚ್ಯ ತತ್ರೈವ ಸ್ಥಿತವಾನ್ಮುನಯೋ ಗತಾಃ ।
ಸರ್ವಪಾಪಹರಂ ಪುಣ್ಯಂ ಪುರಾಣಂ ನೃಸಿಂಹಾತ್ಮಕಮ್ ॥ ೨೫ ॥

ಮಂಗಳವಾಗಲಿ ; ನಾನು ಇನ್ನು ಹೋಗಿ ಬರುವೆನು. ಯಾವನು ಶುಚಿರ್ಭೂತನಾಗಿ ಈ ಶ್ರೇಷ್ಠವಾದ ಪುರಾಣವನ್ನು ಕೇಳುತ್ತಾನೆಯೋ, ಅವನು ಪ್ರಯಾಗ ಕ್ಷೇತ್ರದಲ್ಲಿ ಮಾಘಮಾಸದಲ್ಲಿ ಸ್ನಾನಮಾಡಿದ ಫಲವನ್ನು (ಪುಣ್ಯವನ್ನು) ಹೊಂದುವನು. ಯಾವನು ಭಕ್ತಿಯಿಂದ ನಿತ್ಯದಲ್ಲಿಯೂ ಶ್ರೀ ನರಸಿಂಹಪುರಾಣವನ್ನು ಭಗವದ್ಭಕ್ತರಿಗೆ ಶ್ರವಣಮಾಡಿಸುತ್ತಾನೆಯೋ, ಅವನು ಸಕಲ ತೀರ್ಥಸ್ನಾನಾದಿಗಳಿಂದ ಲಭಿಸುವ ಪುಣ್ಯವನ್ನು ಹೊಂದಿ, ಶ್ರೀ ಮಹಾವಿಷ್ಣುವಿನ ಲೋಕದಲ್ಲಿ ಮಾನಿತನಾಗುತ್ತಾನೆ. ಮಹಾಜ್ಞಾನಿಯಾದ ಭರದ್ವಾಜನು ಸ್ನಾತಕರೊಡಗೂಡಿ, ಇಂತು ಪುರಾಣಶ್ರವಣ ಮಾಡಿ, ಸೂತಾಚಾರ್ಯರನ್ನು ಪೂಜಿಸಿ, ಅಲ್ಲಿಯೇ ನಿಂತನು. ಅಲ್ಲಿಗೆ ಬಂದಿದ್ದ ಮುನಿಗಳು ತಂತಮ್ಮ ಆಶ್ರಮಗಳಿಗೆ ತೆರಳಿದರು. ಶ್ರೀ ನರಸಿಂಹ ದೇವರ ಮಾಹಾತ್ಮ್ಯವನ್ನು ಪ್ರತಿಪಾದಿಸುವ ಪುರಾಣವು ಕೇಳುವವರ ಮತ್ತು ಪಠಿಸುವವರ ಪಾಪಗಳನ್ನೆಲ್ಲಾ ಅಳಿಯಿಸಿ, ಪುಣ್ಯವನ್ನುಂಟುಮಾಡತಕ್ಕದು. ಇದನ್ನು ಓದುವವರಿಗೆ

ಪಠತಾಂ ಶೃಣ್ವತಾಂ ನೃಣಾಂ ನರಸಿಂಹಃ ಪ್ರಸೀದತಿ ।
ಪ್ರಸನ್ನೇ ದೇವದೇವೇಶೇ ಸರ್ವಪಾಪಕ್ಷಯೋ ಭವೇತ್ ॥ ೨೬ ॥

ಪ್ರಕ್ಷೀಣಪಾಪ ಬಂಧಾಸ್ತೇ ಮುಕ್ತಿಂ ಯಾಂತಿ ನರಾ ಇತಿ ॥ ೨೭ ॥

ಇತಿ ಶ್ರೀ ನರಸಿಂಹಪುರಾಣೇ ಮಾನಸತೀರ್ಥವ್ರತ ನಿರೂಪಣಂ
ನಾಮ ಸಪ್ತಷಷ್ಟಿತಮೋಽಧ್ಯಾಯಃ

ಮತ್ತು ಕೇಳುವವರಿಗೆ ಶ್ರೀ ನೃಸಿಂಹನು ಪ್ರಸನ್ನನಾಗುತ್ತಾನೆ. ದೇವೋತ್ತಮರಾದ ಬ್ರಹ್ಮಾದಿಗಳಿಗೂ ಒಡೆಯನಾದ ಶ್ರೀ ನರಹರಿಯು ಪ್ರಸನ್ನನಾಗಲು, ಸಕಲ ಪಾಪಗಳೂ ನಾಶವಾಗುತ್ತವೆ. ಇಂತು ಸಕಲಪಾಪಬಂಧವನ್ನು ಕಳೆದುಕೊಂಡ ಚೇತನರು ಸ್ವಸ್ವರೂಪಾವಿರ್ಭಾವರೂಪವಾದ ಮೋಕ್ಷವನ್ನು ಭಗವತ್ಪ್ರಸಾದದಿಂದ ಹೊಂದುತ್ತಾರೆ.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಮಾನಸತೀರ್ಥವ್ರತ
ನಿರೂಪಣವೆಂಬ ಅರುವತ್ತೇಳನೆಯ ಅಧ್ಯಾಯವು ಮುಗಿದುದು.

ಅರುವತ್ತೇಳನೆಯ ಅಧ್ಯಾಯದ ವಿಷಯಸಂಗ್ರಹವು.

ಈ ಅಧ್ಯಾಯದಲ್ಲಿ, ' ಸೂತರು ಭರದ್ವಾಜಾದಿಗಳಿಗೆ ಭೂಲೋಕದ ತೀರ್ಥಗಳು ಮತ್ತು ಅವುಗಳ ಹಿರಿಮೆ ಇವನ್ನು ನಿರೂಪಿಸಿದವರು ಸತ್ಯ, ದಯೆ, ಇಂದ್ರಿಯ ನಿಗ್ರಹ—ಮುಂತಾದುವೇ ಮಾನಸ ತೀರ್ಥಗಳು, ಎಂದು ಶುದ್ಧವಾದ ಅಂತಃ ಕರಣದ ಹಿರಿಮೆಯನ್ನು ನಿರೂಪಿಸಿ, ಗುರು ಮಾತಾಪಿತೃಸೇವಾದಿಗಳು, ಇತರ ಏಕಾದಶ್ಯಾದಿ ವ್ರತಗಳು, ಇವುಗಳನ್ನು ಮಾನವನು, ಆಚರಿಸತಕ್ಕದು. ಇಂತು ಮಾನಸ ತೀರ್ಥ ವ್ರತಗಳ ಆಚರಣೆಯಿಂದ ಸಕಲಪಾಪಗಳೂ ನಷ್ಟವಾಗಿ ಮಾನವನು ಸದ್ಗತಿಯನ್ನೈಯ್ದುವನು ; ' ಎಂದು ಹೇಳಿ ; ' ಶ್ರೀ ನರಸಿಂಹಪುರಾಣವನ್ನು ತಾವು ಭರದ್ವಾಜಾದಿಗಳಿಗೆ ಇಂತು ನಿರೂಪಿಸಿದುದಾಯಿತು. ತಮಗೆ ಈ ಪುರಾಣವು ಉಪದಿಷ್ಟವಾದ ಬ್ರಹ್ಮಾದಿ ಮುನಿ ಪರಂಪರೆಯನ್ನು ಹೇಳಿ, ಆ ಮುನಿಗಳ ತಂಡಕ್ಕೆ ಮಂಗಳವಾಗಲೆಂದು ಹರಸಿ, ಶ್ರೀ ನರಸಿಂಹಪುರಾಣದ ಶ್ರವಣ, ಪಠನಮಾಡುವವರಿಗೆ ಮುಕ್ತಿಯು ದೊರೆಯುವುದಾಗಿ ಫಲವನ್ನು ನಿರೂಪಿಸಿದರು. ಭರದ್ವಾಜಮುನಿಯು ಇತರ ಸ್ನಾತಕ ಬೃಂದದೊಡನೆ ಶ್ರೀ ಸೂತರನ್ನು ಪೂಜಿಸಿ, ತಾನು ಅಲ್ಲಿಯೆ ನಿಂತನು. ಇತರ ಮುನಿಗಳು ತಂತಮ್ಮ ಆಶ್ರಮಗಳಿಗೆ ತೆರಳಿದರು ; ' ಎಂದು ನಿರೂಪಿಸಿದೆ.

ಇಂತು ಅರುವತ್ತೇಳನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಉಪಸಂಹಾರಃ

ಅಷ್ಟಷಷ್ಟಿತಮೋಽಧ್ಯಾಯಃ

ಫಲನಿರೂಪಣಮ್.

॥ ಸೂತ ಉವಾಚ ॥

ಇತ್ಯೇತತ್ಸರ್ವಮಾಖ್ಯಾತಂ ಪುರಾಣಂ ನಾರಸಿಂಹಕಮ್ ।
ಸರ್ವಪಾಪಹರಂ ಪುಣ್ಯಂ ಸರ್ವದುಃಖನಿವಾರಣಮ್ ॥ ೧ ॥

ಸಮಸ್ತಪುಣ್ಯಫಲದಂ ಸರ್ವಯಜ್ಞಫಲಪ್ರದಮ್ ।
ಯೇ ಪಠಂತ್ಯಪಿ ಶೃಣ್ವಂತಿ ಶ್ಲೋಕಂ ಶ್ಲೋಕಾರ್ಧಮೇವ ವಾ ॥ ೨ ॥

ಉಪಸಂಹಾರವು.

ಅರುವತ್ತೆಂಟನೆಯ ಅಧ್ಯಾಯವು.

ಫಲನಿರೂಪಣವು.

ಸೂತರು ಭರದ್ವಾಜಾದಿಮುನಿಗಳಿಗೆ ಇಂತು ಹೇಳುತ್ತಾರೆ :—

೧–೩. 'ಎಲೈ ಮುನಿಗಳೇ ! ಇಂತೀ ನಾರಸಿಂಹವೆಂಬ ಪುರಾಣವೆಲ್ಲವನ್ನೂ ಹೇಳಿದೆನು. ಈ ಪುರಾಣವು ಪಾಪಗಳನ್ನೆಲ್ಲಾ ಕಳೆಯುವುದು ; ಪುಣ್ಯವನ್ನುಂಟು ಮಾಡುವುದು ; ದುಃಖವೆಲ್ಲವನ್ನೂ ನಾಶಮಾಡುವುದು ; ಸಕಲ ಪುಣ್ಯಗಳ ಫಲವನ್ನೂ ಕೊಡುವುದು ; ಮತ್ತು ಸಕಲಯಜ್ಞಗಳ ಫಲವನ್ನುಂಟುಮಾಡುವುದು ; ಯಾರು ಈ ಪುರಾಣದ ಒಂದು ಶ್ಲೋಕವನ್ನಾಗಲೀ, ಶ್ಲೋಕಾರ್ಧವನ್ನಾಗಲೀ,

ನ ತೇಷಾಂ ಪಾಪಬಂಧಸ್ತು ಕದಾಚಿದಪಿ ಜಾಯತೇ ।
ವಿಷ್ಣ್ವರ್ಪಿತಮಿದಂ ಪುಣ್ಯಂ ಪುರಾಣಂ ಸರ್ವಕಾಮದಮ್ ॥ ೩ ॥

ಭಕ್ತ್ಯಾ ಚ ವದತಾಮೇತಚ್ಛೃಣ್ವತಾಂ ಚ ಫಲಂ ಶೃಣು ।
ಶತಜನ್ಮಾರ್ಜಿತೈಃ ಪಾಪೈಃ ಸದ್ಯ ಏವ ವಿಮೋಚಿತಾಃ ॥ ೪ ॥

ಸಹಸ್ರಕುಲಸಂಯುಕ್ತಾಃ ಪ್ರಯಾಂತಿ ಪರಮಂ ಪದಮ್ ।
ಕಿಂ ತೀರ್ಥೈರ್ಗೋಪ್ರದಾನೈರ್ವಾ ತಪೋಭಿರ್ವಾ ಕಿಮಧ್ವರೈಃ ॥ ೫ ॥

ಅಹನ್ಯಹನಿ ಗೋವಿಂದಂ ತತ್ಪರತ್ವೇನ ಶೃಣ್ವತಾಮ್ ।
' ಯಃ ಪಠೇತ್ಪ್ರಾತರುತ್ಥಾಯ ಯದಸ್ಯ ಶ್ಲೋಕವಿಂಶತಿಮ್ ॥ ೬ ॥

ಪಠಿಸುವರೋ ಅಥವಾ ಕೇಳುವರೋ, ಅವರಿಗೆ ಪಾಪಸಂಬಂಧವು ಒಮ್ಮೆಯೂ ಉಂಟಾಗುವುದಿಲ್ಲ. ಬಯಸಿದುದನ್ನೆಲ್ಲಾ ಈವ, ಈ ಪುಣ್ಯಮಯವಾದ ಪುರಾಣವು ಶ್ರೀ ಮಹಾವಿಷ್ಣುವಿಗೆ ಅರ್ಪಿತವಾಗಲಿ.

೪–೫. ಈ ಪುರಾಣವನ್ನು ಹೇಳುವವರೂ, ಕೇಳುವವರೂ ನೂರು ಹುಟ್ಟುಗಳಿಂದ ಗಳಿಸಿದ ಪಾಪಗಳಿಂದ ತತ್ಕ್ಷಣದಲ್ಲಿ ಬಿಡಲ್ಪಟ್ಟವರಾಗಿ, ಸಾಸಿರ ಕುಲಗಳೊಡಗೂಡಿ, ಸರ್ವೋತ್ತಮನಾದ ಶ್ರೀ ಹರಿಯ ಸ್ಥಾನವನ್ನೆಯ್ದುವರು. ಪ್ರತಿನಿತ್ಯವೂ ಗೋವಿಂದನನ್ನು ಅವನೇ ಸರ್ವಕ್ಕಿಂತಲೂ ಅಧಿಕನಾದವನೆಂದು ತಿಳಿದು, ಅವನ ಮಹಿಮೆಯನ್ನು ಕೇಳುವವರಿಗೆ ತೀರ್ಥಸ್ನಾನಗಳಿಂದಲಾಗಲೀ, ಯಜ್ಞಗಳಿಂದಲಾಗಲೀ, ಯಾವ ಫಲವುಂಟಾಗುವುದು ? (ಇಂತಹ ಉತ್ತಮ ಫಲವು ದೊರಕಲಾರದು.)

೬–೭. ' ಯಾವನು ಬೆಳಿಗ್ಗೆ ಎದ್ದು, ಈ ನರಸಿಂಹಪುರಾಣದ ಇಪ್ಪತ್ತು ಶ್ಲೋಕಗಳನ್ನಾದರೂ ಪಠಿಸುವನೋ, ಅವನು ಜ್ಯೋತಿಷ್ಟೋಮಯಾಗಾನುಷ್ಠಾನದಿಂದುಂಟಾಗುವ ಫಲವನ್ನು ಹೊಂದಿ, ಶ್ರೀ ಮಹಾವಿಷ್ಣುವಿನ ವೈಕುಂಠಾದಿಲೋಕ

ಜ್ಯೋತಿಷ್ಟೋಮಫಲಂ ಪ್ರಾಪ್ಯ ವಿಷ್ಣುಲೋಕೇ ಮಹೀಯತೇ ।'
ಏತತ್ಪವಿತ್ರಂ ಪೂಜ್ಯಂ ಚ ನ ವಾಚ್ಯಮಕೃತಾತ್ಮನಾಮ್ ॥ ೭

ದ್ವಿಜಾನಾಂ ವಿಷ್ಣುಭಕ್ತಾನಾಂ ಶ್ರಾವ್ಯಮೇತನ್ನ ಸಂಶಯಃ ।
ಏತತ್ಪುರಾಣಶ್ರವಣಮಿಹಾಮುತ್ರ ಸುಖಪ್ರದಮ್ ॥ ೮

ವದತಾಂ ಶೃಣ್ವತಾಂ ಸದ್ಯಃ ಸರ್ವಪಾಪಪ್ರಣಾಶನಮ್ ।
ಬಹುನಾತ್ರ ಕಿಮುಕ್ತೇನ ಭೂಯೋ ಭೂಯೋ ಮುನೀಶ್ವರಾಃ ॥ ೯

ಶ್ರದ್ಧಯಾಽಶ್ರದ್ಧಯಾ ವಾಪಿ ಶ್ರೋತವ್ಯಮಿದಮುತ್ತಮಮ್ ।
ಭಾರದ್ವಾಜಮುಖಾಃ ಸರ್ವೇ ಕೃತಕೃತ್ಯಾ ದ್ವಿಜೋತ್ತಮಾಃ ॥ ೧೦

ಗಳಲ್ಲಿ ಪೂಜ್ಯನಾಗುತ್ತಾನೆ.' ಈ ಪವಿತ್ರವೂ ಪೂಜ್ಯವೂ ಆದ ಶ್ರೀ ನರಸಿಂ ಪುರಾಣವನ್ನು ಪಾಪಸ್ವಭಾವದವರಿಗೆ ಹೇಳಬಾರದು.

೮. ವಿಷ್ಣುಭಕ್ತರಾದ ಬ್ರಾಹ್ಮಣರಿಗೆ ಇದು ಅವಶ್ಯವಾಗಿ ಕೇಳತಕ್ಕದ್ದು ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವು. ಈ ಪುರಾಣವನ್ನು ಕೇಳುವುದ ಈ ಲೋಕದಲ್ಲಿಯೂ, ಲೋಕಾಂತರದಲ್ಲಿಯೂ (ಈ ಜನ್ಮದಲ್ಲಿಯೂ, ಜನ್ಮಾಂತ ದಲ್ಲಿಯೂ) ಸುಖವನ್ನುಂಟುಮಾಡುವುದು.

೯-೧೧. ಈ ಪುರಾಣವನ್ನು ಹೇಳುವವರಿಗೂ, ಕೇಳುವವರಿಗೂ ತತ್ಕ್ಷ ದಲ್ಲಿಯೇ ಪಾಪಗಳೆಲ್ಲವೂ ನಾಶವಾಗುವುವು. ಎಲೈ ಮುನೀಶ್ವರರೇ! ಕೇಳಿರಿ; ಈ ವಿಷಯದಲ್ಲಿ ಬಹುವಾಗಿ ಹೇಳುವುದರಿಂದೇನು ಪ್ರಯೋಜನ? ಮತ್ತೆ ಮತೆ ಸಡ್ಡೆಯಿಂದಲಾಗಲೀ, ಅಸಡ್ಡೆಯಿಂದಲಾಗಲೀ ಈ ಉತ್ತಮವಾದ ನರಸಿಂ ಪುರಾಣವನ್ನು ಕೇಳುವುದು;' ಇಂತು ಸೂತಾಚಾರ್ಯರು ಹೇಳಿದುದನ್ನು ಕೇಳಿ,

ಸೂತಂ ಹೃಷ್ಟಾಃ ಪ್ರಪೂಜ್ಯಾಥ ಸರ್ವೇಽಪಿ ಸ್ವಾಶ್ರಮಂ ಯಯುಃ ॥ ೧೧ ॥

ಇತಿ ಶ್ರೀ ನರಸಿಂಹಪುರಾಣೇ ಸೂತ ಭಾರದ್ವಾಜಾದಿ ಸಂವಾದೇ

ಸರ್ವದುಃಖೋಪಹರ ರೂಪ ಫಲನಿರೂಪಣಂ ನಾಮ

ಅಷ್ಟಷಷ್ಟಿತಮೋಽಧ್ಯಾಯಃ

ಶ್ರೀ ನರಸಿಂಹಪುರಾಣಂ ಸಮಾಪ್ತಮ್

ಮಂಗಳಂ ಭವತು

ಕೃತಕೃತ್ಯರಾದ ಭಾರದ್ವಾಜನೇ ಮೊದಲಾದ ಬ್ರಾಹ್ಮಣಶ್ರೇಷ್ಠರೆಲ್ಲರೂ ಕಡುಸಂತಸಗೊಂಡು ಸೂತಾಚಾರ್ಯರನ್ನು ವಿಶೇಷವಾಗಿ ಪೂಜಿಸಿ, ಅನಂತರದಲ್ಲಿ ಎಲ್ಲರೂ ತಂತಮ್ಮ ಆಶ್ರಮುಗಳಿಗೆ ಹೊರಟು ಹೋದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಸೂತಭರದ್ವಾಜ ಸಂವಾದದಲ್ಲಿ,
ಸರ್ವದುಃಖೋಪಹರ ರೂಪವಾದ ಫಲನಿರೂಪಣವೆಂಬ ಅರುವತ್ತೆಂಟನೆಯ
ಅಧ್ಯಾಯುವು ಮುಗಿದುದು.

ಇಂತು ನರಸಿಂಹಪುರಾಣವು ಮುಗಿದುದು

ಮಂಗಳವಾಗಲಿ